ಮಹಿಳಾ ಜಾನಪದ ಹಾಡುಗಳು : ಒಂದು ಅಧ್ಯಯನ

(ಬೀದರ ಜಿಲ್ಲೆ ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಸಿರ್ಸೆ ಕಮಲಾ ಮಲ್ಲಿಕಾರ್ಜುನಪ್ಪಾ

ಮಾರ್ಗದರ್ಶಕರು

ಡಾ. ಜಗನ್ನಾಥ ಹೆಬ್ಬಾಳೆ

ಪ್ರಾಧ್ಯಾಪಕರು ಹಾಗೂ ಸಂಯೋಜನಾಧಿಕಾರಿಗಳು

ಕ.ರಾ.ಶಿ. ಸಂಸ್ಥೆಯ,

ಹೈದ್ರಾಬಾದ ಕರ್ನಾಟಕ ಸಂಶೋಧನಾ ಕೇಂದ್ರ

ಕರ್ನಾಟಕ ಕಾಲೇಜು, ಬೀದರ

ಕ.ರಾ.ಶಿ. ಸಂಸ್ಥೆಯ,

ಹೈದ್ರಾಬಾದ ಕರ್ನಾಟಕ ಸಂಶೋಧನಾ ಕೇಂದ್ರ,

ಕರ್ನಾಟಕ ಕಾಲೇಜು, ಬೀದರ

(ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದೆ)

2017

ಮಹಿಳಾ ಜಾನಪದ ಹಾಡುಗಳು : ಒಂದು ಅಧ್ಯಯನ

(ಬೀದರ ಜಿಲ್ಲೆ ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಸಿರ್ಸೆ ಕಮಲಾ ಮಲ್ಲಿಕಾರ್ಜುನಪ್ಪಾ

ಮಾರ್ಗದರ್ಶಕರು

ಡಾ. ಜಗನ್ನಾಥ ಹೆಬ್ಬಾಳೆ

ಪ್ರಾಧ್ಯಾಪಕರು ಹಾಗೂ ಸಂಯೋಜನಾಧಿಕಾರಿಗಳು
ಕ.ರಾ.ಶಿ. ಸಂಸ್ಥೆಯ,
ಹೈದ್ರಾಬಾದ ಕರ್ನಾಟಕ ಸಂಶೋಧನಾ ಕೇಂದ್ರ
ಕರ್ನಾಟಕ ಕಾಲೇಜು, ಬೀದರ

ಕ.ರಾ.ಶಿ. ಸಂಸ್ಥೆಯ,

ಹೈದ್ರಾಬಾದ ಕರ್ನಾಟಕ ಸಂಶೋಧನಾ ಕೇಂದ್ರ

ಕರ್ನಾಟಕ ಕಾಲೇಜು, ಬೀದರ

(ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದೆ)

2017

ಪ್ರಮಾಣ ಪತ್ರ

ಮಹಿಳಾ ಜಾನಪದ ಹಾಡುಗಳು : ಒಂದು ಅಧ್ಯಯನ (ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ: ಜಗನ್ನಾಥ ಹೆಬ್ಬಾಳೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜ ವಿಜ್ಞಾನಗಳ ನಿಕಾಯದ ಜಾನಪದ ಅಧ್ಯಯನ ವಿಭಾಗಕ್ಕೆ ಪಿಎಚ್‌ಡಿ. ಪದವಿಗಾಗಿ ಪ್ರಸ್ತುತ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ. ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 30/01/2017.

ಸ್ಥಳ: ವಿದ್ಯಾರಣ್ಯ

(ಸಿರ್ಸೆ ಕಮಲಾ ಮಲ್ಲಿಕಾರ್ಜುನ)

ಸಂಶೋಧನ ವಿದ್ಯಾರ್ಥಿನಿ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರನ್ಯ ೫೮೩ ೨೭೬.

ಮಾರ್ಗದರ್ಶಕರ ಪ್ರಮಾಣ ಪತ್ರ

ಮಹಿಳಾ ಜಾನಪದ ಹಾಡುಗಳು : ಒಂದು ಅಧ್ಯಯನ (ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಸಿರ್ಸೆ ಕಮಲಾ ಮಲ್ಲಿಕಾರ್ಜುನ ಅವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 31/1/17

ಸ್ಥಳ: ವಿದ್ಯಾರಣ್ಯ

(ಡಾ: ಜಗನ್ನಾಥ ಹೆಬ್ಬಾಳೆ)
ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ಅಧ್ಯಯನ
ಹಾಗೂ ಕನ್ನಡ ಸಂಶೋಧನಾ ಕೇಂದ್ರ
ಕರ್ನಾಟಕ ಕಾಲೇಜು, ಬೀದರ.

<u>ಪರಿವಿಡಿ</u>

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಹಾಗೂ ವೈಧಾನಿಕತೆ

ಪ್ರಸ್ತಾವನೆ :

ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ನಾಡು. ಇಲ್ಲಿ ಹಲವಾರು ಕಲೆ, ಸಂಸ್ಕೃತಿ, ಭಾಷೆ, ಧರ್ಮಗಳು ತನ್ನದೆ ಆದ ಮಹತ್ವವನ್ನು ಪಡೆದುಕೊಂಡಿವೆ. ಇಂತಹ ನಾಡಿನಲ್ಲಿ ಜನಪದವು ತನ್ನದೆ ಆದ ಶ್ರೀಮಂತಿಕೆಯನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಪ್ರಪಂಚದ ನಾಗರಿಕತೆಯ ಉಗಮ, ವಿಕಾಸ ಹಾಗೂ ಬೆಳವಣಿಗೆಯನ್ನು ಅರಿಯುವುದಕ್ಕೆ ಆದಿಮಾನವನಿಂದ ಪ್ರಸ್ತುತದ ಆಧುನಿಕ ಮಾನವನವರೆಗಿನ ಜನಜೀವನವನದ ಒಂದು ಭಾಗವಾಗಿ ಬೆಳೆದುಬಂದಿರುವ ಜನಪದ ಪ್ರಕಾರವು ಪ್ರಮುಖ ಸಾಧನವಾಗಿದೆ. ಈ ಜನಪದ ಪ್ರಕಾರವು ವಿವಿಧ ಮಜಲುಗಳಲ್ಲಿ ತನ್ನ ಅನನ್ಯತೆಯನ್ನು ತೆರೆದುಕೊಂಡಿದ್ದು, ಜನಸಾಮಾನ್ಯರ ಬದುಕಿನ ಭಾಗವಾಗಿಯೇ ಬೆಳೆದುಬಂದಿದೆ. ಇಂತಹ ಜನಪದ ಪ್ರಕಾರವನ್ನು ಗಂಭೀರವಾದ ಅಧ್ಯಯನಕ್ಕೆ ಒಳಪಡಿಸುವ ಮೂಲಕ ಭಾರತದ ಚರಿತ್ರೆಯನ್ನು ಹಾಗೂ ಇಲ್ಲಿನ ಜನಜೀವನದಲ್ಲಿ ಬೆರೆತು ಹೋಗಿರುವ ವಿವಿಧ ಬಗೆಯ ಸಾಂಸ್ಕೃತಿಕ ಆಯಾಮಗಳನ್ನು ಹೊಸ ನೆಲೆಯಲ್ಲಿ ಕಟ್ಟುವುದಕ್ಕೆ ಸಹಕಾರಿಯಾಗುತ್ತದೆ.

ಜನಪದರು ತಾವು ಕಂಡುಂಡ ನೋವು ನಲಿವುಗಳನ್ನು ಪದಕಟ್ಟಿ ಹಾಡುವ ಮೂಲಕವಾಗಿ ಒಂದು ವಿಶಿಷ್ಟ ಬಗೆಯ ಸಾಹಿತ್ಯ ಪ್ರಕಾರವೊಂದನ್ನು ಸೃಷ್ಟಿಸಿಕೊಂಡು ಬಂದಿದ್ದಾರೆ. ಆದರೆ ಚಾರಿತ್ರಿಕ ಒತ್ತಡಗಳು ಹಾಗೂ ಇಲ್ಲಿನ ಪ್ರಭಾವಿ ವರ್ಗವಾಗಿರುವ ಪುರೋಹಿತಶಾಹಿಯ ಆಕ್ರಮಣ ನೀತಿಯಿಂದಾಗಿ ಭಾರತದ ಮೂಲನಿವಾಸಿಗಳಾದ ತಳ ಸಮುದಾಯಗಳ ಬದುಕು ಹಾಗೂ ಅವರ ಸಾಹಿತ್ಯ ನಿರ್ಲಕ್ಷ್ಯಕ್ಕೆ ಗುರಿಯಾಯಿತು. ಇದರಿಂದಾಗಿ ಇಲ್ಲಿನ ಜನಪದ ಪ್ರಕಾರವು ಸಮಾಜದ ಮುಂಚೂಣಿಗೆ ಬರುವುದಕ್ಕೆ ಹಲವಾರು ಎಡರು ತೊಡರುಗಳು ಎದುರಾದವು. ಆದರೆ ಭಾರತಕ್ಕೆ ಬಂದ ವಸಾಹತುಶಾಹಿಯ ಶೋಧದ ಫಲವಾಗಿ ಇಲ್ಲಿ ಸ್ಥಳಿಯ ಜನಜೀವನದ ಭಾಗವಾಗಿರುವ ಜನಪದ ಸಾಹಿತ್ಯ ಹಾಗೂ ಇಲ್ಲಿನ ವಿಶಿಷ್ಟ ಪ್ರಕಾರಗಳು ಸಂಗ್ರಹ ಹಾಗೂ ಅಧ್ಯಯನಕ್ಕೆ ಒಳಪಟ್ಟವು. ಇದರ ಫಲವಾಗಿ ಇಂದು ಜಾನಪದವನ್ನು ಒಂದು ಪ್ರತ್ಯೇಕವಾದ ಅಧ್ಯಯನ ಶಿಸ್ತಿಗೆ ಒಳಪಡಿಸಿಕೊಂಡು ಸಾಕಷ್ಟು ಅಧ್ಯಯನಗಳು ನಡೆಯುತ್ತ ಬಂದಿವೆ.

ಮಾನವ ಜೀವನದ ಸುಖ-ದುಃಖಗಳು ಅಭಿವ್ಯಕ್ತಿಯ ನೆಲೆಯಲ್ಲಿ ಪದಗಳಾಗಿ ಹೊರಬಂದವು. ಇವುಗಳು ಮಾನವನ ವಿಕಾಸದಂತೆ ಬಾಯಿಂದ ಬಾಯಿಗೆ ಹರಿದುಬಂದ ಈ ಪ್ರಕಾರವು ಮೌಖಿಕ ನೆಲೆಯಲ್ಲಿಯೇ ತನ್ನ ಸ್ವರೂಪವನ್ನು ಕಾಪಾಡಿಕೊಂಡಿತು. ಗ್ರಂಥಸ್ಥವಾಗದ ಈ ಕಾವ್ಯವೇ ಜನಪದ ಸಾಹಿತ್ಯವಾಯಿತು. ಈ ಅನುಭವ ಕಾವ್ಯವು ಅನೇಕ ಶತಮಾನಗಳವರೆಗೆ ಬಾಯಿಂದ ಬಾಯಿಗೆ ಪರಂಪರೆಯಾಗಿ ಬೆಳೆದು ಬಂದ ಇದು ಮಾನವನಿಗೆ ಅಕ್ಷರ ಜ್ಞಾನವಾಗಿ ಗ್ರಂಥಸ್ಥವಾಯಿತು. ಈ ದಿಶೆಯಲ್ಲಿ ಗ್ರಂಥಸ್ಥವಾಗದ ಮುನ್ನ ಇಂದು ಪಂಡಿತ ಪಾಮರರು ಕೊಂಡಾಡುವ ವೇದವೂ ಇಂದಿನ ಸಾಹಿತ್ಯಾರ್ಥದಲ್ಲಿ, ಅಂದಿನ ಜನತೆಯ ಜನಪದ ಸಾಹಿತ್ಯವೆಂದೆ ಹೇಳಬಹುದು.

ಕನ್ನಡದ ಮೊಟ್ಟಮೊದಲ ಉಪಲಬ್ಧ ಗ್ರಂಥವಾದ ಒಂಭತ್ತನೆಯ ಶತಮಾನದ 'ಕವಿರಾಜಮಾರ್ಗ' ಕೃತಿಯಲ್ಲಿ ತನ್ನ ಕಾಲದಲ್ಲಿಯೂ ಹೇರಳವಾದ ಜನಪದ ಸಾಹಿತ್ಯವಿತ್ತೆಂದು ಉಲ್ಲೇಖಿಸಲಾಗಿದೆ. ಈ ಕೃತಿಯಲ್ಲಿ "ಚದುರರ್ ನಿಜದಿಂ ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಿ ಮತಿಗಳ್" ಎಂದು ಕನ್ನಡದ ಜನಪದ ಕವಿಗಳನ್ನು ಕವಿರಾಜಮಾರ್ಗಕಾರ ಕೊಂಡಾಡಿದ್ದಾನೆ. ಈ ಕೃತಿಕಾರನ ಮಾತು ಅಕ್ಷರಶಃ ಸತ್ಯವೇನೋ ಎಂಬಂತೆ ನಮ್ಮ ಭಾಷೆಯಲ್ಲಿ ನಿರಕ್ಷರಿಗಳೆಂದು ಹೇಳುವ ಹಳ್ಳಿಯ ಹೆಂಗಸರು, ಗಂಡಸರು ರಚಿಸಿದ ಸಾಹಿತ್ಯವು ಅಪಾರವಾಗಿದೆ. ಎಷ್ಟೋ ಸಾಹಿತ್ಯವು ಕಣ್ಮರೆಯಾಗುತ್ತ ಬಂದಿದೆ. ಇನ್ನು ಈ ಸಾಹಿತ್ಯ ಬೆಳೆಯುತ್ತಲೂ ನಡೆದಿದೆ. ಇದಕ್ಕೆ ಆಯಾ ಕಾಲಘಟ್ಟದ ಚಾರಿತ್ರಿಕ ಒತ್ತಡವೂ ಒಂದಾಗಿದೆ.

ಆದರೆ ಕನ್ನಡ ಪಂಡಿತರು ಮೊದಲಿನಿಂದಲೂ ಜನಪದ ಸಾಹಿತ್ಯಕ್ಕೆ ಪ್ರಾಶಸ್ತ್ಯವನ್ನು ಕೊಡಲಿಲ್ಲ. ಅವರು ಅದನ್ನು ಸಾಹಿತ್ಯವೆಂದು ಭಾವಿಸಲೇ ಇಲ್ಲ. ಚಂಪೂ ಶೈಲಿಗೆ ಮನಸೋತ ಎಲ್ಲ ಕವಿಗಳೂ ಜನಪದ ಕವಿಗಳನ್ನು ಕುಕವಿಗಳೆಂದು ತಮ್ಮ ಕಾವ್ಯಗಳಲ್ಲಿ ಅಣಕವಾಡಿ ನಕ್ಕಿದ್ದಾರೆ. ಅಂದಿನ ಕಾಲದ ಜನಪದ ಸಾಹಿತ್ಯವು ಪಂಡಿತರಿಗೆ ಹಾಸ್ಯಾಸ್ಪದವಾಗಿರಬೇಕು. ನಮ್ಮ ಜನಪದ ಸಾಹಿತ್ಯವು ಅರಸನೊಡ್ಡೋಲಗವನ್ನಂತೂ ಅದು ಕಾಣಲೇ ಇಲ್ಲ ಎಂದು ಕಾಣುತ್ತದೆ. ಗುಡಿಸಲಲ್ಲಿ ಉಗಮವಾದ ಈ ಪ್ರಕಾರವು, ಗುಡಿಸಲಿನಲ್ಲಿಯೇ ತನ್ನ ದಾರ್ಶನಿಕತೆಯನ್ನು ಮೆರೆಯುತ್ತ ಬಂದಿದೆ. ಇದು ಇಂದಿಗೂ ಬಹುತೇಕ ಗುಡಿಸಲುಗಳಲ್ಲಿಯೇ ತನ್ನ ಅನನ್ಯತೆಯನ್ನು ಕಾಯ್ದುಕೊಂಡಿದೆ.

ಈ ಜನಪದ ಪ್ರಕಾರವು ಅನೇಕ ಪ್ರಸಂಗಗಳಲ್ಲಿ ಆಡಿ ತೋರಿಸಲು ರಂಗಭೂಮಿಯಾಯಿತು. ಜನಸಾಮಾನ್ಯರೇ ಕಿವಿಗೊಟ್ಟು ಕೇಳುವ ಮತ್ತು ಪ್ರೋತ್ಸಾಹಿಸುವ ಪ್ರಕಾರವಾಯಿತು. ಅಂದಮೇಲೆ ಅದು ಗ್ರಂಥಸ್ಥವಾಗುವ ಬಗೆಯೆಂತು? ಜನಪದ ಸಾಹಿತ್ಯ ಕರ್ತೃಗಳಂತೂ ಎಲ್ಲರೂ ನಿರಕ್ಷರಿಗಳೇ! ಬಲ್ಲವರಿಂದ ಬರೆಯಿಸಿ ಸಂಗ್ರಹಿಸಬೇಕೆಂಬ ವಿಚಾರ ಅವರನ್ನು ಸೋಂಕಿದಂತೆ ಕಾಣುವುದಿಲ್ಲ. ಇದಕ್ಕೆ ಕಾರಣ ನಮ್ಮ ಜನಪದರಿಗೆ ತಮ್ಮ ಸಾಹಿತ್ಯ ನಶಿಸಿ ಹೋಗುತ್ತದೆ ಎಂಬ ಯಾವುದೇ ಆತಂಕವಿರುವುದು ಕಂಡುಬರುವುದಿಲ್ಲ. ಇದಕ್ಕೆ ಕಾರಣವಿಷ್ಟೆ, ತಮ್ಮ ಮುಂದಿನ ಪೀಳಿಗೆಯು ಇದನ್ನು ತಮ್ಮ ಪಿತ್ರಾರ್ಜಿತ ಆಸ್ತಿಯೆಂಬಂತೆ ಭಕ್ತಿ ಭಾವದ ನೆಲೆಯಲ್ಲಿ ಇದನ್ನು ಪೋಷಿಸಿಕೊಂಡು ತಮ್ಮ ಬಾಯಲ್ಲಿ ಕಂಠಸ್ಥಗೊಳಿಸಿಕೊಂಡು ಮುನ್ನಡೆಯುತ್ತಿದ್ದರು. ಆದರೆ ಇಂದಿನ ಜಾಗತಿಕ ಭರಾಟೆಯ ಮಧ್ಯದಲ್ಲಿರುವ ನಮಗೆ ಈ ಆತಂಕ ಎದುರಾಗಿದೆ. ಈ ಕಾರಣದಿಂದಾಗಿ ಇಂದು ಈ ಜನಪದ ಪ್ರಕಾರವನ್ನು ಬರೆದಿಡುವ, ಸಂಗ್ರಹಿಸುವ, ಸಂಶೋಧನೆಗೆ ಒಳಪಡಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದೇವೆ. ಇದಕ್ಕೆ ಸರ್ಕಾರ ಹಾಗೂ ವಿಶ್ವವಿದ್ಯಾಲಯಗಳು ಪ್ರೋತ್ಸಾಹ ನೀಡುತ್ತಿರುವುದನ್ನು ಇಂದು ಕಾಣಬಹುದಾಗಿದೆ.

ಕನ್ನಡಿಗರು ತೀರ ಇತ್ತೀಚಿಗೆ ಜನಪದ ಸಾಹಿತ್ಯ ಸಂಕಲನಕ್ಕೆ ಕೈಹಾಕಿದ್ದಾರೆ. ಅದರ ಪ್ರಥಮ ಶ್ರೇಯಸ್ಸು ಹಲಸಂಗಿ ಗೆಳೆಯರ ಗುಂಪಿಗೆ ಸಲ್ಲುವುದು. ವಿಜಯಪುರದಲ್ಲಿ ಒಂಬತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನವು ನಡೆದಾಗ ಶ್ರೀಯುತ ಮಧುರಚೆನ್ನರು ಮೊಟ್ಟ ಮೊದಲು ಜನಪದ ಸಾಹಿತ್ಯವನ್ನು ಎತ್ತಿ ಮಾತನಾಡಿದರು. ಮುಂದೆ ಇದರ ಪ್ರಚಾರ ಕರ್ನಾಟಕದ ತುಂಬೆಲ್ಲಾ ಹಬ್ಬಿ ನಾಲ್ಕಾರು ವಿಮರ್ಶಾತ್ಮಕ ಲೇಖನಗಳು ಪ್ರಕಟವಾದವು. ಅಪಾರವಾದ ಕನ್ನಡ ಜನಪದ ಸಾಹಿತ್ಯವನ್ನು ನೋಡಿದರೆ ಇವು ತೀರ ಕಡಿಮೆ ಎಂದೇ ಹೇಳಬಹುದು. ಹಲಸಂಗಿ ಗೆಳೆಯರು ಹಾಗೂ ಪಾಶ್ಚಿಮಾತ್ಯ ವಿಚಾರಧಾರೆಗಳ ಅಡಿಯಲ್ಲಿ ಇಂದು ಸಾಕಷ್ಟು ಅಧ್ಯಯನಗಳು ನಡೆಯುತ್ತಿರುವುದು ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಬೀದರ್ ಜಿಲ್ಲೆಯ ಮಹಿಳಾ ಜಾನಪದ ಹಾಡುಗಳನ್ನು ಸಂಶೋಧನೆಗೆ ಆಯ್ದುಕೊಳ್ಳಲಾಗಿದೆ.

೧.೧ ಅಧ್ಯಯನದ ಉದ್ದೇಶ:

ಮಹಿಳಾ ಜಾನಪದ ಹಾಡುಗಳು : ಒಂದು ಅಧ್ಯಯನ (ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಂಡಿದ್ದು, ಪ್ರಸ್ತುತ ಅಧ್ಯಯನದ ಉದ್ದೇಶವನ್ನು ಈ ಮುಂದಿನಂತೆ ಗುರುತಿಸಿಕೊಳ್ಳಲಾಗಿದೆ.

೧. ಜಾನಪದ ಎಂಬ ಪ್ರಕಾರವು ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಶಾಖೆಯಾಗಿ ಬೆಳೆದು ಬಂದಿದೆ. ಇಂದು ಪಾಶ್ಚಿಮಾತ್ಯ ಚಿಂತಕರ ಪ್ರೇರಣೆ ಮತ್ತು ಪ್ರಭಾವದ ಫಲವಾಗಿ ಭಾರತದಲ್ಲಿ, ಅದರಲ್ಲೂ ಕರ್ನಾಟಕದಲ್ಲಿ ಈ ಕುರಿತು ಗಂಭೀರವಾದ ಅಧ್ಯಯನಗಳು ನಡೆಯುತ್ತಿವೆ. ಇಂತಹ ಸನ್ನಿವೇಶದಲ್ಲಿ ಜಾನಪದ ಕ್ಷೇತ್ರವನ್ನು ಆಯ್ದುಕೊಂಡು ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ಜನಪದವನ್ನು ಒಂದು ನಿರ್ಧಿಷ್ಟ ಕ್ಷೇತ್ರದ ಅಡಿಯಲ್ಲಿ ಅಧ್ಯಯನ ಮಾಡುವ ಉದ್ದೇಶದಿಂದಾಗಿ ಬೀದರ್ ಜಿಲ್ಲೆಯ ಭಾಗದಲ್ಲಿ ನೆಲೆಯೂರಿರುವ ಜನಪದ ಹಾಡುಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಇಲ್ಲಿ ಕೈಗೊಳ್ಳಲಾಗಿದೆ.

೨. ಕರ್ನಾಟಕದ ಗಡಿಭಾಗದ ಜಿಲ್ಲೆಯಾಗಿರುವ ಬೀದರ್ ಪ್ರಾಂತ್ಯವು ತನ್ನದೇ ಆದ ಸಾಂಸ್ಕೃತಿಕ ವಿಶಿಷ್ಟತೆಯನ್ನು ಒಳಗೊಂಡಿದೆ. ಇಂತಹ ಸಾಂಸ್ಕೃತಿಕ ವಿಶಿಷ್ಟತೆಯನ್ನು ಗುರುತಿಸುವ ಒತ್ತಾಸೆಯಿಂದಾಗಿ ಜನಪದ ಹಾಡುಗಳನ್ನು ಆಯ್ದುಕೊಳ್ಳಲಾಗಿದೆ. ಜನಪದರ ಬದುಕಿನ ಭಾಗವಾಗಿ ಬೆಳೆದುಬಂದಿರುವ ಹಾಡುಗಳ ಮುಖಾಂತರವಾಗಿಯೇ ಈ ಪ್ರಾಂತ್ಯದ ಸಾಂಸ್ಕೃತಿಕ ಅನನ್ನ್ಯಯತೆಯನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶಗಳಲ್ಲೊಂದಾಗಿದೆ.

೩. ಜಾನಪದ ಸಾಹಿತ್ಯವು ಬಹುತೇಕ ಮಹಿಳೆಯರು ಸೃಷ್ಟಿಸಿಕೊಂಡ ಪ್ರಕಾರವಾಗಿದ್ದು, ಇದನ್ನು ಪಾಲಿಸಿಕೊಂಡು ಹಾಗೂ ಬೆಳೆಸಿಕೊಂಡು ಬಂದಿರುವ ಕೀರ್ತಿ ಮಹಿಳೆಯರಿಗೆ ಸಲ್ಲುತ್ತದೆ. ಹೀಗಾಗಿ ಮಹಿಳೆಯರು ಕಟ್ಟಿಕೊಂಡು ಬಂದಿರುವ ಜಾನಪದ ಸಾಹಿತ್ಯದಲ್ಲಿ ಕಂಡುಬರುವ ಮಹಿಳಾ ಸಂವೇದನೆಯ ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಇಂದಿಗೆ ಸೂಕ್ತವೆಂದು ಭಾವಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಸಂವೇದನೆ ಹಾಗೂ ಮಹಿಳಾ ಸಂಘರ್ಷದ ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ.

೪. ಭಾರತದ ಸಂದರ್ಭದಲ್ಲಿ ವೈದಿಕತೆಯು ತಂದೊಡ್ಡಿದ ಆಕ್ರಮಣ ನೀತಿಯಿಂದಾಗಿ ತಳಸಮುದಾಯದ ಜನತೆಯ ಬದುಕನ್ನು ಮಾತ್ರವಲ್ಲದೆ, ಮಹಿಳೆಯರನ್ನು ದುರ್ಬಲಳೆಂದು ಪರಿಗಣಿಸುವ ಮೂಲಕ ಇಲ್ಲಿನ ಮೂಲ ಮಾತೃ ಸಂಸ್ಕೃತಿಯನ್ನು ಹತ್ತಿಕ್ಕುವ ಮೂಲಕವಾಗಿ ಪಿತೃ ನೆಲೆಯ ವೈದಿಕತೆಯು ಮಹಿಳೆಯನ್ನು ಕಡೆಗಣಿಸುತ್ತ ಬಂದಿದೆ. ಈ ಕಾರಣದಿಂದಾಗಿ ಬೀದರ್ ಪ್ರಾಂತ್ಯವನ್ನು ಪ್ರಾತಿನಿಧಿಕವಾಗಿ ಗುರುತಿಸಿಕೊಂಡು, ಮಹಿಳಾ ಜಾನಪದದಲ್ಲಿ ಅಡಗಿರುವ ಮೌಲ್ಯಗಳನ್ನು ಎತ್ತಿಹಿಡಿಯುವ ಉದ್ದೇಶದಿಂದಾಗಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೫. ಜಾನಪದವು ಮೌಖಿಕ ಪ್ರಕಾರವಾಗಿದ್ದು ಅದು ಕಾಲದಿಂದ ಕಾಲಕ್ಕೆ ಹಾಗೂ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಈ ಅಂಶವನ್ನು ಆಧಾರವಾಗಿಟ್ಟುಕೊಂಡು ಬೀದರ್ ಪ್ರಾಂತ್ಯದ ಮಹಿಳಾ ಜಾನಪದವು ಕರ್ನಾಟಕದ ಉಳಿದ ಪ್ರಾಂತ್ಯಕ್ಕಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಸಂಶೋಧನ ನೆಲೆಯಲ್ಲಿ ಗುರುತಿಸುವ ಉದ್ದೇಶವನ್ನು ಪ್ರಸ್ತುತ ಸಂಶೋಧನ ಮಹಾಪ್ರಬಂಧವು ಒಳಗೊಂಡಿರುತ್ತದೆ.

೬. ಬೀದರ್ ಜಿಲ್ಲೆಯು ಕರ್ನಾಟಕದ ಗಡಿನಾಡ ಭಾಗವಾಗಿರುವ ಕಾರಣ ಇಲ್ಲಿನ ಪ್ರಾದೇಶಿಕತೆಯ ಮೇಲೆ ಹೊರರಾಜ್ಯ ಹಾಗೂ ಅನ್ಯ ಭಾಷೆಯ ಪ್ರಭಾವವು ಹೆಚ್ಚಾಗಿ ಕಂಡುಬರುತ್ತದೆ. ಹೀಗಾಗಿ ಈ ಭಾಗದ ಜನಪದ ಸಾಹಿತ್ಯವು ತನ್ನ ಪ್ರಾದೇಶಿಕತೆಯನ್ನು ಉಳಿಸಿಕೊಂಡಂತೆ, ಇತರೆ ರಾಜ್ಯಗಳ ಭಾಷೆ ಹಾಗೂ ಅಲ್ಲಿನ ಸಂಸ್ಕೃತಿಯನ್ನು ಹೇಗೆ ಕಾಪಾಡಿಕೊಂಡು ಬಂದಿದೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸುವ ಉದ್ದೇಶವನ್ನು ಕೈಗೊಳ್ಳಲಾಗಿದೆ.

೭. ಬೀದರ್ ಜಿಲ್ಲೆಯ ಮಹಿಳಾ ಜಾನಪದ ಸಾಹಿತ್ಯದಲ್ಲಿ ಕಂಡುಬರುವ ವಿವಿಧ ಪ್ರಕಾರಗಳನ್ನು ಗುರುತಿಸಿಕೊಂಡು, ಅವುಗಳ ಮೌಲ್ಯವನ್ನು ಶಿಷ್ಟ ಸಾಹಿತ್ಯಕ್ಕೆ ಪರ್ಯಾಯದ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸುವುದು ಹಾಗೂ ಮಹಿಳಾ ಜಾನಪದದಲ್ಲಿನ ಸತ್ವಯುತವಾದ ಅಂಶಗಳನ್ನು ಸಂಶೋಧನಾ ನೆಲೆಯಲ್ಲಿ ಗುರುತಿಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ.

೮. ಜಾಗತೀಕರಣದ ಭರಾಟೆಯಲ್ಲಿ ನಮ್ಮ ಗ್ರಾಮೀಣ ಭಾಗದಲ್ಲಿ ಅನಾದಿ ಕಾಲದಿಂದಲೂ ಬೆಳೆದು ಬಂದಿರುವ ಜಾನಪದ ಸಾಹಿತ್ಯವು ತನ್ನ ಅನನ್ಯತೆಯನ್ನು ಕಳೆದುಕೊಳ್ಳವ ತುರ್ತಿನ ಸಂದರ್ಭದಲ್ಲಿದೆ. ಇಂತಹ ಸಂದರ್ಭದಲ್ಲಿ ಮೌಖಿಕ ಜಾನಪದವನ್ನು ಅಧ್ಯಯನ ಮಾಡುವ ಮೂಲಕವಾಗಿ ಈ ಜಾನಪದದ ಮೌಲ್ಯವನ್ನು ಆಧುನಿಕ ಬದುಕಿನೊಂದಿಗೆ ಮುಖಾಮುಖಿಯಾಗಿಸುವ ಉದ್ದೇಶದಿಂದಾಗಿ ಪ್ರಸ್ತುತ ವಿಷಯವನ್ನು ಆಯ್ದುಕೊಳ್ಳಲಾಗಿದೆ.

೯. ಬೀದರ ಜಿಲ್ಲೆ ಕರ್ನಾಟಕದ ಬಹುಮುಖ್ಯ ಕೇಂದ್ರ ಭಾಗವಾಗಿದ್ದು, ಇಲ್ಲಿನ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಅವಿಸ್ಮರಣೀಯವಾದ ನೆನಪಿನ ಬುತ್ತಿಯನ್ನು ನೀಡಿದೆ. ಉತ್ತರ ಕರ್ನಾಟಕದ ಭಾಗದಲ್ಲಿ ಈ ಬೀದರ್ ಜಿಲ್ಲೆಯೂ ಒಳಗೊಂಡಿದ್ದು, ಜನಪದ ನೆಲೆಯಲ್ಲಿ ವಚನ ಸಾಹಿತ್ಯವನ್ನು ಮೊದಲು ನಾಂದಿ ಹಾಡಿದ ಬಸವಣ್ಣನವರ ತವರು ಜಿಲ್ಲೆ ಇದಾಗಿದೆ. ಪಕ್ಕದ ಮಹಾರಾಷ್ಟ್ರ, ಆಂಧ್ರ ಪ್ರದೇಶಗಳ ಪ್ರಭಾವವೂ ಈ ಜಿಲ್ಲೆಯ ಮೇಲೆ ಇದೆ. ಭಾಷಾ ಮತ್ತು ಸಂಸ್ಕೃತಿ ದೃಷ್ಟಿಯಿಂದ ಜನಪದರಲ್ಲಿ ರೂಪಾಂತರಗಳೂ ಗೋಚರಿಸುತ್ತವೆ. ಇಲ್ಲಿನ ಭಾಷಾ ವೈವಿಧ್ಯತೆ ಉತ್ತರ ಕರ್ನಾಟಕವನ್ನು ಪ್ರತಿಬಿಂಬಿಸುತ್ತದೆ. ಸಾಂಕೇತಿಕವಾಗಿ ಈ ಜಿಲ್ಲೆ ಉತ್ತಮ ಅಂಕಿ- ಅಂಶಗಳನ್ನು ಹೊಂದಿದ್ದು, ಇಲ್ಲಿನ ಜನಜೀವನ ಕುರಿತಾಗಿ ಸಾಹಿತ್ಯಕ ಅಧ್ಯಯನಗಳು ನಡೆಯಬೇಕಿದೆ. ಈಗಾಗಲೇ ಬೀದರ ಪ್ರದೇಶದ ಕುರಿತು ಸಾಹಿತ್ಯಕವಾಗಿ ಹಲವಾರು ಕೆಲಸಗಳು ಆಗಿದ್ದರೂ ಇನ್ನೂ ಅಲ್ಲಿನ ಶೋಧನೆ ಕಾರ್ಯದಲ್ಲಿ ಅಷ್ಟೊಂದು ಬೆಳವಣಿಗೆ ಕಾಣದಿರುವುದು ಗಮನಿಸಲೇಬೇಕಾದ ವಿಷಯ. ಹೀಗಾಗಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಇನ್ನು ಸಾಕಷ್ಟು ಕೆಲಸಗಳು ನಡೆಯಲೇಬೇಕಿದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನ ಸೂಕ್ತವಾಗಿ, ಕ್ರಮಬದ್ಧವಾಗಿ ಸಾಗಬೇಕಾಗಿದೆ. ಈ ಉದ್ದೇಶವನ್ನಿಟ್ಟುಕೊಂಡು ಪ್ರಸ್ತುತ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಈ ಮೇಲೆ ಚರ್ಚಿಸಿರುವ ಅಂಶಗಳನ್ನು ಪ್ರಧಾನ ನೆಲೆಯಾಗಿಟ್ಟುಕೊಂಡು ಪ್ರಸ್ತುತ ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಈ ಅಂಶವನ್ನು ಒಳಗೊಂಡಂತೆ ಸಂಶೋಧನೆಯ ಹಂತದಲ್ಲಿ ಇದಕ್ಕೆ ಪೂರಕವಾದ ಇತರೆ ನೆಲೆಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗುವುದು.

೧.೨ ಅಧ್ಯಯನದ ಮಹತ್ವ :

ಜಾನಪದ ಮನುಕುಲದ ಮೂಲ ಜೀವನ ವಿಧಾನವನ್ನು ಅರಿಯಲು ಅವಕಾಶ ನೀಡುತ್ತದೆ. ಮೌಖಿಕ ಪರಂಪರೆಯ ಸಮಸ್ತ ವಿಷಯಗಳನ್ನು ಪರಿಚಯಿಸುತ್ತದೆ. ಇಂತಹ ಜಾನಪದ ಸೊಗಡನ್ನು ಅಧ್ಯಯನಕ್ಕೆ ಒಳಪಡಿಸುವುದು ಇಂದಿಗೆ ಮಹತ್ವವೆಂದು ಪರಿಗಣಿಸಲಾಗಿದೆ. ಈ ಕಾರಣದಿಂದಾಗಿ ಪ್ರಸ್ತುತ ಸಂಶೋಧನೆಯು ತನ್ನದೆ ಆದ ಮಹತ್ವವನ್ನು ಒಳಗೊಂಡಿದೆ. ಅವುಗಳನ್ನು ಈ ಮುಂದಿನಂತೆ ಗುರುತಿಸಿಕೊಳ್ಳಲಾಗಿದೆ.

೧. ಜಾನಪದ ವಿಶ್ವ ಸ್ವರೂಪದ್ದಾಗಿರುವುದರಿಂದ ಇದರ ಅಧ್ಯಯನದಿಂದ ವಿವಿಧ ಜನಾಂಗಗಳ ನಡುವೆ ಸಾಮರಸ್ಯ ಮೂಡಲು, ಸೌಹಾರ್ದತೆ ಹುಟ್ಟಲು ಸಹಾಯಕವಾಗುತ್ತದೆ. ಸಾಹಿತ್ಯದ ಅಭ್ಯಾಸದಲ್ಲಿ ಜಾನಪದದ ಅಗತ್ಯ ಮಹತ್ವಪೂರ್ಣವಾಗಿದೆ. ನಮ್ಮ ಮಹಾಕಾವ್ಯಗಳಲ್ಲಿ ಜಾನಪದ ಅಂಶವಿರುವುದು ತಿಳಿದ ವಿಷಯವೇ ಆಗಿದೆ. ಶಿಷ್ಟ ಸಾಹಿತ್ಯ ಸತ್ವಹೀನವಾದಾಗ ಜಾನಪದದಿಂದ ಸ್ಫೂರ್ತಿ ಪಡೆದಿರುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಚರಿತ್ರೆಯ ಪುನರ್ ಸೃಷ್ಟಿಯಲ್ಲಿ ಜಾನಪದ ಕೊಡುಗೆಯೂ ನೆರವಾಗುತ್ತದೆ. ಆದ್ದರಿಂದ ಇಂದಿಗೆ ಇದರ ಅಧ್ಯಯನವು ಮಹತ್ವದ್ದಾಗಿದೆ.

೨. ಜಾನಪದವು ಸಂಸ್ಕೃತಿಯ ಪ್ರತಿಬಿಂಬವಾಗಿದ್ದು, ಸಾಮಾಜಿಕ ಜೀವನಕ್ರಮ ಹಾಗೂ ಸಂಸ್ಕೃತಿಯನ್ನು ಅರಿಯುವುದಕ್ಕೆ ಇದು ಪ್ರಬಲವಾದ ಸಾಧನವಾಗಿ ಅಥವಾ ಸೂಕ್ತ ಮಾಧ್ಯಮವಾಗಿ ಕಂಡುಬರುತ್ತದೆ. ಆದ್ದರಿಂದ ಬೀದರ್ ಜಿಲ್ಲೆಯ ಸಾಂಸ್ಕೃತಿಕ ಪರಿಸರವನ್ನು ಅರಿಯುವುದಕ್ಕೆ ಈ ಅಧ್ಯಯನವು ಮಹತ್ವಪೂರ್ಣವಾಗಿ ಕಂಡುಬರುತ್ತದೆ.

೩. ಜಾನಪದ ಆಕರ್ಷಕವಾದ ಅಧ್ಯಯನದ ವಿಷಯವಾಗಿದೆ. ಇದರ ವೈಶಿಷ್ಟ್ಯ, ವಿನೂತನತೆ, ವ್ಯಾಪಕತೆ ಎಲ್ಲವರ್ಗದ ಜನರನ್ನೂ ಸೆಳೆಯುತ್ತದೆ. ಮಾನವೀಯ ಮೌಲ್ಯಗಳನ್ನು ಅರಿಯಲು, ಸಮಾಜದ ಬಗೆಗೆ ತಿಳಿಯಲು, ನಿರ್ಲಕ್ಷ್ಯಕ್ಕೆ ಒಳಗಾದ ಜನಾಂಗದ ಬದುಕನ್ನು ಅರ್ಥಮಾಡಿಕೊಳ್ಳಲು ಹಾಗೂ ಸಂಸ್ಕೃತಿಯ ಪರಿಪೂರ್ಣ ಮಾಹಿತಿ ಪಡೆಯಲು ಇದು ನೆರವಾಗುತ್ತದೆ. ಜಾನಪದವನ್ನು ಬಳಸಿಕೊಳ್ಳುವುದರ ಮನೋಧರ್ಮದ ಉದಾತ್ತತೆಯ ಮೇಲೆ ಜಾನಪದದ ಮಹತ್ವ ಅಡಗಿರುತ್ತದೆ.

೪. ಜಾನಪದ ಮಾನವ ನಾಗರಿಕತೆಯೆಂಬ ಸರಪಳಿಯ ಕೊಂಡಿಯಾಗಿ ಕಾರ್ಯನಿರ್ವಹಿಸಬಲ್ಲುದು. ನಾಗರೀಕ ಜೀವನ ಸತ್ವಹೀನವಾದಾಗ ಜಾನಪದ ಅದನ್ನು ಸತ್ವಯುತವಾಗಿ ಪರಿವರ್ತಿಸಿ, ಹೊಸ ಹುರುಪು ತುಂಬಲು ನೆರವಾಗುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಜಾನಪದದ ಅಧ್ಯಯನದ ಉದ್ದೇಶ ವ್ಯಾಪಕವಾದುದೂ ಪ್ರಸ್ತುತವೂ ಆಗುತ್ತದೆ. ಹಾಗೆಯೇ ಮಹತ್ವದಿಂದ ಕೂಡಿರುತ್ತದೆ.

೫. ಜನಪದ ಸಾಹಿತ್ಯ ಮೌಖಿಕವಾಗಿಯೇ ಉಳಿದುಕೊಂಡು ಬಂದಿದೆ. ಈ ಸಾಹಿತ್ಯ ಎಂದೆಂದಿಗೂ ಮುಗಿಯದ ತುಂಬು ಕಣಜ. ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳಾದ ಗೀತೆ, ಕಥೆ, ಗಾದೆ, ಒಗಟು ಮುಂತಾದ ವಿಶಿಷ್ಟ ಸಾಹಿತ್ಯ ರೂಪಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗುತ್ತವೆ.

ಸಂಪದ್ಭರಿತವಾದ ಹಾಗೂ ವೈವಿಧ್ಯಮಯವಾದ ಈ ಸಾಹಿತ್ಯದ ಕುರಿತು ಅಮೂಲಾಗ್ರವಾದ ಅಧ್ಯಯನ ನಡೆದಿರುವುದಿಲ್ಲ. ಅನಕ್ಷರಸ್ಥರ ಈ ಸಾಹಿತ್ಯ ಹಾಗೆಯೇ ಅಳಿದು ಹೋಗದಂತೆ ಅವುಗಳ ಸಂಗ್ರಹ ಹಾಗೂ ಅಧ್ಯಯನದ ಅವಶ್ಯಕತೆಯಿದೆ. ಇದರಿಂದ ಜನಪದ ಸಾಹಿತ್ಯದ ವೈಶಿಷ್ಟ್ಯಗಳನ್ನು ಕಂಡುಕೊಳ್ಳಲು ಸಾಧ್ಯವಿದೆ. ಅದನ್ನು ಮನಗಂಡು ಪ್ರಸ್ತುತ ಅಧ್ಯಯನಕ್ಕೆ ತೊಡಗಿಸಿಕೊಳ್ಳಲಾಗಿದೆ.

೬. ಬೀದರ್ ಜಿಲ್ಲೆಯ ಜನಪದ ಮಹಿಳಾ ಹಾಡುಗಳನ್ನು ಸಾಹಿತ್ಯಕ ಹಾಗೂ ಸಾಮಾಜಿಕ ಸಂಶೋಧನೆಯ ಕ್ರಮವನ್ನು ಅನುಸರಿಸಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದರೊಂದಿಗೆ ಬೀದರ ಜಿಲ್ಲೆಯ ಜನಪದ ಸಂಸ್ಕೃತಿಯನ್ನು ಮರುಶೋಧಕ್ಕೆ ಒಳಪಡಿಸುವ ಈ ಕ್ರಮವು ಮಹತ್ವವೆಂದು ಭಾವಿಸಲಾಗಿದೆ.

೭. ಒಟ್ಟಾರೆ ಜನಪದ ಸಾಹಿತ್ಯವು ಧಾರ್ಮಿಕ ಮೂಲವಾದವುಗಳಾಗಿದ್ದರೂ ಸಾಮಾಜಿಕ ಬದುಕನ್ನು ಹಸನುಗೊಳಿಸಿಕೊಳ್ಳುವ ನೀತಿಯನ್ನು, ಬಾಳಲು ಬೇಕಾದ ಧೈರ್ಯ, ಸ್ಥೈರ್ಯಗಳನ್ನು ಹೆಚ್ಚಿಸಲು ಮಾನವನಿಗೆ ನಿರಂತರವಾಗಿ ನೆರವಾಗಿವೆ. ಕಂಠಸ್ಥವಾಗಿ ಬೆಳೆದು ಬಂದ ಜನಪದ ಸಾಹಿತ್ಯವು ಜನಪರವಾದ ಧೋರಣೆಗಳನ್ನು ಒಳಗೊಂಡಿದ್ದು, ಪರಂಪರೆಗಳನ್ನು ಜೀವಂತವಾಗಿ ಹಿಡಿದಿಡುವ ಮತ್ತು ವಿದ್ವಾಂಸರ ಅಧ್ಯಯನಕ್ಕೆ ಬೇಡಿದ್ದನ್ನು ಕೊಡುವ ಅಕ್ಷಯ ಪಾತ್ರೆಯಂತಿದೆ. ಆದ್ದರಿಂದ ಇಂದಿನ ವಿಭಿನ್ನ ನೆಲೆಯ ಹಾಗೂ ಅಲಕ್ಷಿತ ಸಮುದಾಯಗಳ ಅಧ್ಯಯನದ ಸಂದರ್ಭದಲ್ಲಿ ಈ ನೆಲೆಯ ಜಾನಪದ ಅಧ್ಯಯನ ಕ್ರಮವು ಮಹತ್ವಪೂರ್ಣವಾಗಿದೆ.

೮. ಕರ್ನಾಟಕದಲ್ಲಿ, (ಬೀದರ ಜಿಲ್ಲೆಯಲ್ಲೂ) ಇತ್ತೀಚಿಗೆ ಜನಪದ ಸಾಹಿತ್ಯ (ವಿಶೇಷವಾಗಿ ಹೆಣ್ಣು ಮಕ್ಕಳ) ಜಾನಪದ ಪರಂಪರೆಗಳನ್ನು ತೌಲನಿಕವಾಗಿ ನೋಡುವ ಜಿಜ್ಞಾಸೆ ಬೆಳೆಯುತ್ತಿರುವುದು ನಿಜಕ್ಕೂ ಜಾನಪದ ಅಧ್ಯಯನ ಕುರಿತು ಬೆಳವಣಿಗೆಗೆ ಸಹಾಯಕಾರಿಯಾಗಿದೆ. ಇದು ಕೂಡ ಪ್ರಸ್ತುತ ಸಂದರ್ಭದಲ್ಲಿ ಮಹತ್ವದಿಂದ ಕೂಡಿದೆ.

ಒಟ್ಟಿನಲ್ಲಿ ಬೀದರ ಜಿಲ್ಲೆಯ ಜನಪದ ಮಹಿಳಾ ಹಾಡುಗಳಲ್ಲಿ ಅಂದಿನ ಕಾಲದ ಸಂಸ್ಕೃತಿಯನ್ನು ಕಾಣುತ್ತೇವೆ. ನಮ್ಮ ಸಂಸ್ಕೃತಿ ಕಾಪಾಡಿಕೊಂಡು ಮುನ್ನೆಡೆಯುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಆದ್ದರಿಂದ ಈ ಮಹಿಳಾ ಹಾಡುಗಳ ಮೂಲಕವಾಗಿ ನಮ್ಮ ಸಂಸ್ಕೃತಿಯ ವೈವಿಧ್ಯತೆಯನ್ನು ತಿಳಿಯಲು ಪ್ರಸ್ತುತ ಅಧ್ಯಯನವು ಮಹತ್ವಪೂರ್ಣವಾದದ್ದೆಂದು ಭಾವಿಸಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ:

ಕರ್ನಾಟಕವು ಅನಾದಿ ಕಾಲದಿಂದಲೂ ಜನಪದ ಸಂಸ್ಕೃತಿಯ ನೆಲೆವೀಡಾಗಿದೆ. ಆದರೆ ಸಮಗ್ರ ಕರ್ನಾಟಕದ ಜಾನಪದವನ್ನು ಕುರಿತು ವೈಜ್ಞಾನಿಕ ಕ್ಷೇತ್ರಕಾರ್ಯದ ವ್ಯಾಪ್ತಿಗೆ ಅಳವಡಿಸಿಕೊಳ್ಳುವುದು ತುಂಬಾ ಕಷ್ಟದ ಕೆಲಸ. ಆದ್ದರಿಂದ ಪ್ರಾದೇಶಿಕ ವೈಶಿಷ್ಟ್ಯವನ್ನು ಹೊಂದಿರುವ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಜನಪದರ ನೆಲೆವೀಡಾದ ಬೀದರ ಜಿಲ್ಲೆಯ ಜನಪದ ಮಹಿಳಾ ಹಾಡುಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಇಲ್ಲಿ ಕಂಡುಬರುವ ಮಹಿಳಾ ಜಾನಪದ ಹಾಡುಗಳ ವಿವಿಧ ಪ್ರಕಾರಗಳನ್ನು ಗುರುತಿಸಿಕೊಂಡು ಅವುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು. ಹೀಗಾಗಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ಮಹಿಳಾ ಜಾನಪದ ಹಾಡುಗಳಿಗೆ ಮಾತ್ರ ಸೀಮಿತಗೊಂಡಿದೆ. ಪ್ರಸ್ತುತ ಅಧ್ಯಯನದಲ್ಲಿ ಬೀದರ ಜಿಲ್ಲೆಯ ಮಹಿಳಾ ಜಾನಪದ ಹಾಡುಗಳ ಕುರಿತಾಗಿ ಪ್ರಸ್ತುತ ಅಧ್ಯಯನದ ಕಾರ್ಯಕ್ಷೇತ್ರವನ್ನು ಗುರುತಿಸಿಕೊಂಡಿದ್ದರೂ ಪ್ರಾಸಂಗಿಕವಾಗಿ ಕರ್ನಾಟಕದ ವಿವಿಧ ಪ್ರದೇಶದಲ್ಲಿ ಕಂಡುಬರುವ ಮಹಿಳಾ ಜಾನಪದ ಹಾಡುಗಳನ್ನು ಪ್ರಸ್ತುತ

ಅಧ್ಯಯನಕ್ಕೆ ಬಳಸಿಕೊಳ್ಳಲಾಗುವುದು. ಅಧ್ಯಯನದ ವ್ಯಾಪ್ತಿಯ ದೃಷ್ಟಿಯಿಂದಾಗಿ ಉತ್ತರ ಕರ್ನಾಟಕದ ಬೀದರ ಜಿಲ್ಲೆಯನ್ನು ಕ್ಷೇತ್ರಕಾರ್ಯಕ್ಕೆ ಗುರುತಿಸಿಕೊಳ್ಳಲಾಗಿದೆ.

ಅಭ್ಯಾಸದ ದೃಷ್ಟಿಯಿಂದ ನೋಡಿದಾಗ ಜನಪದ ಮಹಿಳಾ ಹಾಡುಗಳ ಸಂಗ್ರಹದಲ್ಲಿ ಕೇವಲ ಜನಪದ ಗೀತೆ, ಕಥನಗೀತೆ ಹಾಗೂ ಒಗಟು ಇವುಗಳಲ್ಲಿ ಯಾವುದೇ ಒಂದೊಂದು ವಿಷಯಗಳು ಕೂಡ ಪ್ರೌಢಪ್ರಬಂಧಕ್ಕೆ ವಸ್ತುವಾಗಬಲ್ಲವು. ಆದರೆ ಇಲ್ಲಿ ಸಮಗ್ರವಾಗಿ ಈ ವಿಷಯದ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಗಡಿನಾಡ ಭಾಷೆಯಾದ ಕೆಲವು ಮರಾಠಿ ಜನಪದ ಗೀತೆ, ಕಥನಗೀತೆಗಳ ಸಂಗ್ರಹ ಮಾಡಿ, ಅವುಗಳ ಮೂಲ ಸಾಮಗ್ರಿಗಳ ಕನ್ನಡ ರೂಪಾಂತರಗಳನ್ನು ಕೊಡಲಾಗಿದೆ. ಗಡಿಯಾಚೆ ಮಹಾರಾಷ್ಟ್ರದಲ್ಲಿರುವ ಕನ್ನಡ ಭಾಷಿಕರು ಅಲ್ಲಿಯ ರಾಜ್ಯಭಾಷೆ ಮರಾಠಿಯನ್ನು ಕಲಿತು, ಮುಖ್ಯವಾಹಿನಿಯಲ್ಲಿ ಬೆರೆತ್ತಿದ್ದಾರೆ. ಅದೇ ರೀತಿ ನಮ್ಮ ಕರ್ನಾಟಕದ ಗಡಿಯಲ್ಲಿರುವ ಮರಾಠಿಗರು ಕನ್ನಡವನ್ನು ಕಲಿತು ಒಬ್ಬರನ್ನೊಬ್ಬರು ಸಹಯೋಗದಿಂದ, ಭಾಷಾ ಭೇದವನ್ನು ಮರೆತು ಭಾವೈಕ್ಯತೆಯಿಂದ ಬಾಳುತ್ತಿದ್ದಾರೆ. ಬೀದರ ಜಿಲ್ಲೆಗೆ ಮರಾಠಿಗರ ಕೊಡುಗೆ ಅಪಾರವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಕನ್ನಡ ನಾಡು ಹಾಗೂ ಮರಾಠಿಯ ಸಮನ್ವಯತೆಯನ್ನು ಗುರುತಿಸುವ ದೃಷ್ಟಿಯಿಂದಾಗಿ ಗಡಿಭಾಗದ ಮಹರಾಷ್ಟ್ರ ಪ್ರಾಂತ್ಯವನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಇಂದು ಎಲ್ಲರ ಆಸಕ್ತಿಯನ್ನು ಸೆಳೆಯುತ್ತಿರುವ ಕುತೂಹಲಕರ ವಿಷಯ ಜಾನಪದ. ಇತ್ತೀಚಿನವರೆಗೂ ಕೇವಲ ಪಾಮರರ ವಿಷಯವೆಂದು ಕರೆಸಿಕೊಳ್ಳುತ್ತಾ ಪಂಡಿತರ ದಿವ್ಯ ನಿರ್ಲಕ್ಷಕ್ಕೆ ಒಳಗಾಗಿದ್ದ ಜಾನಪದ ಈಗ ಅದೇ ಪಂಡಿತರ ಅಧ್ಯಯನ ಕೃಷಿಗೆ ಹುಲುಸಾದ ಕ್ಷೇತ್ರವಾಗಿದೆ. ಸಮಾಜವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕೆಂದು ಬಯಸುವವರಿಗೆ ದೊರೆಯುವ ದೊಡ್ಡ ಆಕಾರ ಸಾಂಸ್ಕೃತಿಕ ಆಚರಣೆಗಳು. ಗ್ರಾಮೀಣ ಜನರ ಆಚರಣೆ, ನಂಬಿಕೆಗಳನ್ನು ಕೆಲವರು ಮೌಢ್ಯವೆಂದು, ಕಂದಾಚಾರವೆಂದು ಕರೆದು ನಿರ್ಲಕ್ಷಿಸುವ ಧೋರಣೆ ಬಹಳ ಕಾಲದವರೆಗೆ ಇತ್ತು. ಪ್ರತಿಯೊಂದು ಸಾಂಸ್ಕೃತಿಕ ಆಚರಣೆ ರೂಪುಗೊಳ್ಳಲು ಅದಕ್ಕೆ ತಳಹದಿಯಾಗಿದೆ. ಅದರ ಉಗಮದಲ್ಲಿ ಒಂದು ಭೌತಿಕಾವಶ್ಯಕತೆಯಿತ್ತು ಎಂಬ ನಿಲುವು ಹೆಚ್ಚು ಪ್ರಚಲಿತಗೊಂಡಂತೆಲ್ಲಾ ಜಾನಪದ ಅಧ್ಯಯನಕ್ಕೆ ತುಂಬ ಮಹತ್ವವುಳ್ಳದಾಗಿದೆ. ಈ ಹಿನ್ನೆಲೆಯಲ್ಲಿ ಶಿಷ್ಟ ಸಾಹಿತ್ಯ ಹಾಗೂ ಪಂಡಿತ ಪಾಮರರಿಂದ ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ಜಾನಪದದಲ್ಲಿ ಅಡಗಿರಬಹುದಾದ ಮಾನವೀಯ ನೆಲೆಗಳನ್ನು ಗುರುತಿಸುವ ನೆಲೆಯಲ್ಲಿ ಗಡಿನಾಡು ಪ್ರಾಂತ್ಯವಾಗಿರುವ ಬೀದರ್ ಜಿಲ್ಲೆಯ ಮಹಿಳಾ ಜಾನಪದದ ಅಡಿಯಲ್ಲಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಗುರುತಿಸಿಕೊಳ್ಳಲಾಗಿದೆ.

ಹೈದ್ರಾಬಾದ ಕರ್ನಾಟಕ ವಿಭಾಗದ ಬೀದರ್ ಜಿಲ್ಲೆಯ ಮೇಲೆ ಎಲ್ಲಾ ಭಾಷೆಗಳ ಪ್ರಭಾವ ಬೇರೆ ಜಿಲ್ಲೆಗಳಿಗಿಂತಲೂ ಈ ಜಿಲ್ಲೆಯ ಮೇಲೆ ಹೆಚ್ಚಾಗಿ ಕಂಡುಬರುತ್ತದೆ. ಐದನೇ ಶತಮಾನದಿಂದೀಚೆಗೆ ಅನೇಕ ಅರಸು ಮನೆತನಗಳು ವಿಶೇಷವಾಗಿ ದೆಹಲಿಯ ಸುಲ್ತಾನರು, ಬಹಮನಿ ಸುಲ್ತಾನರು, ಬರೀದಶಾಹಿ ಸುಲ್ತಾನರು, ಮೋಗಲರು, ನಿಜಾಮರು ಈ ಭಾಗದ ಮೇಲೆ ಆಳಿ ಹೋಗಿದ್ದಾರೆ. ಕೆಲ ಕಾಲ ಶಿವಾಜಿ, ಯಾದವರಂಥವರ ವಶದಲ್ಲಿ ಈ ಭಾಗ ಇತ್ತೆಂದು ತಿಳಿದುಬರುತ್ತದೆ. ಅಲ್ಲದೆ ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಈ ಜಿಲ್ಲೆಗಳ ಜನರ ಭಾಷೆಯಲ್ಲಿ ಅನ್ಯ ರಾಜ್ಯಗಳ ಭಾಷೆಗಳು ಕೂಡಿಕೊಂಡಿವೆ. ಹೀಗೆ ಈ ಭಾಗದ ಮೇಲೆ ವಿಶೇಷವಾಗಿ ಮರಾಠಿ, ಹಿಂದಿ, ತೆಲುಗು

ಭಾಷೆಗಳು ತೀವ್ರವಾದ ಪ್ರಭಾವ ಬೀರಿರುವುದನ್ನು ನಾವು ನೋಡಬಹುದು. ಈ ಕಾರಣದಿಂದಾಗಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಈ ಭಾಷಾ ಪ್ರಭಾವವು ಒಂದಾಗಿರುತ್ತದೆ.

ಬೀದರ್ ಜಿಲ್ಲೆಯ ಗಡಿಭಾಗದ ಕೆಲವು ಹಳ್ಳಿಗಳಲ್ಲಿ ಕನ್ನಡ ಭಾಷೆಯ ಪರಿಚಯವೇ ಇಲ್ಲವೆನಿಸುವುದು. ಉದಾ: ಭಾಲ್ಕಿ ತಾಲೂಕಿನ ಮೆಹಕರ, ಅಳವಾಯಿ, ಅಟ್ಟರ್ಗಾ, ಗುಂಜರ್ಗಾ, ಶ್ರೀಮಾಳಿ, ಲಖನಗಾಂವ್, ಎಲ್ಲಮ್‌ವಾಡಿ, ತೂಗಾವ್ ಎಚ್, ಕೊಂಗಳಿ, ವಾಂಜರ್‌ಖೇಡ್, ಭಾಟಸಾಂಗವಿ, ತಳವಾಡ (ಕೆ), ಶಿವಣಿ, ಬೋಳೆಗಾಂವ, ಮಾಣಿಕೇಶ್ವರ್, ಮುಂತಾದೆಡೆ ಇಲ್ಲಿಯವರೆಗೆ ಕನ್ನಡ ಶಾಲೆಗಳೇ ಇರಲಿಲ್ಲ. ಅಲ್ಲಿ ಎಲ್ಲರೂ ಮರಾಠಿ ಭಾಷೆಯೇ ಆಡುತ್ತಿದ್ದಾರೆ. ಇಲ್ಲಿ ಕಂಡುಬರುವ ಜಾನಪದಿಯ ಅಂಶಗಳನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗುವುದು.

ಗಡಿಯಾಚೆಗಿನ ಮಹಾರಾಷ್ಟ್ರದಲ್ಲಿರುವ ಕನ್ನಡ ಭಾಷಿಕರು ಅಲ್ಲಿಯ ರಾಜ್ಯಭಾಷೆ ಮರಾಠಿಯನ್ನು ಕಲಿತು ಮುಖ್ಯವಾಹಿನಿಯಲ್ಲಿ ಬೆರೆತಿದ್ದಾರೆ. ಅದರಂತೆಯೇ ನಮ್ಮ ಕರ್ನಾಟಕದ ಗಡಿಯಲ್ಲಿರುವ ಮರಾಠಿಗರು ಕನ್ನಡವನ್ನು ಕಲಿತು ಪರಸ್ಪರ ಸಹಯೋಗದಿಂದ ಬಾಳುತ್ತಿದ್ದಾರೆ. ಇಲ್ಲಿಯ ಜನಪದರು ಭಾಷಾ ಭೇದವನ್ನು ಮರೆತು ಭಾವೈಕ್ಯತೆಯಿಂದ ಬಾಳು ನಡೆಸುತ್ತಿದ್ದಾರೆ. ಇಂತಹ ವಿಶಿಷ್ಟವಾದ ಕೊಡುಕೊಳ್ಳುವಿಕೆಯನ್ನು ಹೊಂದಿರುವ ಪ್ರಾಂತ್ಯದ ಜಾನಪದವನ್ನು ಪ್ರಸ್ತುತ ಸಂಶೋಧನೆಯ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ.

ಬೀದರ್ ಜಿಲ್ಲೆ ಒಂದು ಕಾಲದಲ್ಲಿ ಕನ್ನಡದ ಮಹಾಕವಿಗಳು ವಾಸಿಸಿ ಮೆರೆದನಾಡು. ರನ್ನ, ಪಂಪ, ನಾಗವರ್ಮ, ವಿಜ್ಞಾನೇಶ್ವರ, ಸೋಮೇಶ್ವರ, ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ ಮುಂತಾದ ಕನ್ನಡದ ಮಹಾಕವಿಗಳು, ಮೇಧಾವಿ ವಚನಕಾರರು ಈ ಜಿಲ್ಲೆಯಲ್ಲಿ ಕನ್ನಡ ಭಾಷೆ ಮತ್ತು ಕನ್ನಡ ಸಾಹಿತ್ಯಕ್ಕೆ ನೀಡಿದಂತ ಕೊಡುಗೆ ಅಪಾರವಾಗಿದ್ದಿತು. ಇದರಿಂದಾಗಿ ಇಲ್ಲಿಯ ಭಾಷೆಯು ಬಹು ಸೊಗಸಾಗಿಯೂ, ಶುದ್ಧವಾಗಿಯು ಇದ್ದಿತು. ಆದರೆ ಈ ಜಿಲ್ಲೆಯ ಮೇಲೆ ಹಲವಾರು ರಾಜಕೀಯ, ಧಾರ್ಮಿಕ ಪ್ರಭಾವ ಉಂಟಾಗಿ, ದಂಗೆಗಳಿಗೆ ತುತ್ತಾಗಿ ಸುಂದರ ಸೊಬಗುಳ್ಳ ಕನ್ನಡದ ಅಸ್ತಿತ್ವವನ್ನು ಕಳೆದುಕೊಂಡಿತು. ಶುದ್ಧವಾದ ಭಾಷೆ ಅಶುದ್ಧವಾಯಿತು. ಆದರೆ ಪ್ರಸ್ತುತ ಅಧ್ಯಯನದ ಭಾಗವಾಗಿಯೂ ನಮ್ಮ ಶಿಷ್ಟ ಸಾಹಿತ್ಯದ ಅಸ್ಮಿತೆಯ ನೆಲೆಗಳನ್ನು ಗುರುತಿಸುವುದು ಕಂಡುಬರುತ್ತದೆ. ಹೀಗಾಗಿ ಇದರ ವ್ಯಾಪ್ತಿಯು ಕೇವಲ ಜಾನಪದಕ್ಕಷ್ಟೇ ಸೀಮಿತವಾಗದೆ, ಇಲ್ಲಿನ ಶಿಷ್ಟ ಸಾಹಿತ್ಯದ ನೆಲೆಗಳನ್ನು ಪ್ರಾಸಂಗಿಕವಾಗಿ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗುವುದು.

ಹೀಗೆ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳಿಂದಾಗಿ ಉತ್ತರ ಕರ್ನಾಟಕದಲ್ಲಿ ಮರಾಠಿ ಹಾಗೂ ಕನ್ನಡ ಎರಡೂ ಒಂದಕ್ಕೊಂದು ತಳಕುಹಾಕಿಕೊಂಡಿವೆ. ಒಬ್ಬರನ್ನೊಬ್ಬರು ಸಹಯೋಗದಿಂದ ಪ್ರತಿಯೊಂದು ಕಾರ್ಯದಲ್ಲಿ ಭೇದವೆಣಿಸದೆ ಮೈತ್ರಿ ಭಾವದಿಂದಿರುವರು. ಅದಕ್ಕೆ ಸಾಕ್ಷಿಯಾಗಿ ಈಗಲೂ ನಾವು ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಗಡಿ ಭಾಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಮರಾಠಿಗರೇ ಆಗಿರುವುದನ್ನು ಕಾಣಬಹುದು. ಮರಾಠಿ ಭಾಷಿಕರಾದ ಅಂಕುಶ ಢೋಲೆ, ಅಶೋಕ ರಾಜೋಳೆ, ಸುಭಾಸ್ ಹುಲಸೂರೆ, ಸಯ್ಯಾಜಿರಾವ ಪಾಟೀಲ ಮುಂತಾದವರು ಕನ್ನಡ ನಾಡು ನುಡಿಗಾಗಿ ದುಡಿಯುತ್ತಿದ್ದಾರೆ. ಬೀದರ ಜಿಲ್ಲೆಯ ಗಡಿಭಾಗಗಳಲ್ಲಿ ಜನಪದ ಸಾಹಿತ್ಯದಲ್ಲಿ ಮರಾಠಿಗರ ಕೊಡುಗೆ ಅಪಾರವಾಗಿದೆ. ಪ್ರತಿಯೊಂದು ಕಾರ್ಯಗಳಲ್ಲಿ ಭಾಗವಹಿಸಿ, ತಮ್ಮ ಮರಾಠಿ ಭಾಷೆಯ ಹಾಡು, ಕಥೆ, ಒಗಟು, ಒಡಪು, ನಾಟಕ ಪ್ರದರ್ಶಿಸುವರು. ಈ ಹಾಡುಗಳು ಸಂಸ್ಕೃತಿ, ಜನಪದ, ಹಬ್ಬ, ಜಾತ್ರೆಗಳ ಸೊಗಡನ್ನು ಬಳಸಿಕೊಂಡು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹೊಸ ಇತಿಹಾಸ

ಸೃಷ್ಟಿಸಿದ್ದಾರೆ. ಹೀಗಾಗಿ ಜನಪದವನ್ನು ಒಳಗೊಂಡಂತೆ, ಬೀದರ್ ಪ್ರಾಂತ್ಯದ ಇತರೆ ಸಾಂಸ್ಕೃತಿಕ ಆಯಾಮಗಳನ್ನು ಪ್ರಸ್ತುತ ಸಂಶೋಧನಾ ವ್ಯಾಪ್ತಿಗೆ ಒಳಪಡಿಸಲಾಗುವುದು.

೧.೪ ಅಧ್ಯಯನದ ಸ್ವರೂಪ:

ಮಹಿಳಾ ಜಾನಪದ ಹಾಡುಗಳು: ಒಂದು ಅಧ್ಯಯನ, ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಳ್ಳಲಾಗಿದೆ. ಪ್ರಸ್ತುತ ವಿಷಯಕ್ಕೆ ಪೂರಕವಾದ ನೆಲೆಯಲ್ಲಿ ಇದರ ಸ್ವರೂಪವನ್ನು ಪ್ರಮುಖವಾಗಿ ಎಂಟು ಅಧ್ಯಾಯಗಳಲ್ಲಿ ನಿಗಧಿಪಡಿಸಿಕೊಳ್ಳಲಾಗಿದೆ. ಹೀಗಾಗಿ ಈ ಅಧ್ಯಯನದ ಸ್ವರೂಪ ಈ ಮುಂದಿನಂತಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ, ಸ್ವರೂಪ ಹಾಗೂ ವೈಧಾನಿಕತೆಯ ಕುರಿತು ವಿವರಿಸಲಾಗಿದೆ. ಇಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ವಿವರಣೆಯಿದ್ದು, ಪ್ರಸ್ತುತ ಅಧ್ಯಯನದ ಹಿಂದಿನ ಒತ್ತಡಗಳನ್ನು ಸಮಕಾಲೀನ ನೆಲೆಯಲ್ಲಿ ಪರಿಚಯಿಸಲಾಗಿದೆ. ಹಾಗೆಯೇ ಇದರ ವ್ಯಾಪ್ತಿಯನ್ನು ನಿರ್ಧಿಷ್ಟವಾಗಿ ಗುರುತಿಸಿಕೊಳ್ಳಲಾಗಿದೆ.

ಎರಡನೆಯ ಅಧ್ಯಾಯವಾದ 'ಬೀದರ್ ಜಿಲ್ಲಾ ಮಹಿಳಾ ಜಾನಪದ ಹಾಡುಗಳ ತಾತ್ವಿಕ ವ್ಯಾಖ್ಯಾನ' ಎಂಬ ಅಧ್ಯಾಯದಲ್ಲಿ, ಬೀದರ್ ಜಿಲ್ಲೆ ಪ್ರಾದೇಶಿಕತೆಯನ್ನು ಪರಿಚಯಿಸಲಾಗಿದ್ದು, ನಂತರ ಜಾನಪದ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆಗಳನ್ನು ಪರಿಚಯಿಸಲಾಗಿದೆ. ಹಾಗೆಯೇ ಬೀದರ್ ಜಿಲ್ಲಾ ಮಹಿಳಾ ಜಾನಪದ ಹಾಡುಗಳ ತಾತ್ವಿಕ ಚರ್ಚೆ ಎಂಬ ಉಪ ಶಿರ್ಷಿಕೆಯ ಅಡಿಯಲ್ಲಿ ಮಹಿಳಾ ಜಾನಪದ ಹಾಡುಗಳನ್ನು ತಾತ್ವಿಕ ನೆಲೆಯಲ್ಲಿ ಚರ್ಚೆಗೊಳಪಡಿಸಲಾಗಿದೆ.

ಮೂರನೆಯ ಅಧ್ಯಾಯವಾದ 'ಜೀವನಾವರ್ತನದ ಆಚರಣಾ ಹಾಡುಗಳ ವಿಶ್ಲೇಷಣೆ' ಎಂಬ ಅಧ್ಯಾಯದ ಅಡಿಯಲ್ಲಿ, ೧. ಜೋಗುಳದ ಹಾಡುಗಳು, ೨. ಮೈನೆರೆದ ಹಾಡುಗಳು, ೩. ಮದುವೆ ಹಾಡುಗಳು, ೪. ಸೋಬಾನ ಹಾಡುಗಳು, ೫. ಕುಪ್ಪುಸದ ಹಾಡುಗಳು, ೬. ಮರಣದ ಹಾಡುಗಳು– ಎಂಬುದಾಗಿ ಮಹಿಳಾ ಹಾಡುಗಳನ್ನು ವಿಂಗಡಿಸಿಕೊಂಡು ಈ ಹಾಡುಗಳನ್ನು ಸಾಂಸ್ಕೃತಿಕ ಆಯಾಮಗಳ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ನಾಲ್ಕನೆಯ ಅಧ್ಯಾಯವಾದ 'ವಾರ್ಷಿಕಾವರ್ತನದ ಆಚರಣಾ ಹಾಡುಗಳ ವಿಶ್ಲೇಷಣೆ' ಎಂಬ ಅಧ್ಯಾಯದಲ್ಲಿ ಮಹಿಳಾ ಜಾನಪದ ಹಾಡುಗಳ ವಿವಿಧ ಪ್ರಕಾರಗಳಾದ ೧. ಬುಲಾಯಿ ಹಾಡುಗಳು, ೨. ಸೀಗಿ ಹಾಡುಗಳು, ೩. ಗೌರಿ ಹಾಡುಗಳು, ೪. ಎಳ್ಳಾಮಾವಾಸ್ಯೆಯ ಹಾಡುಗಳು, ೫. ಆರತಿ ಹಾಡುಗಳನ್ನು ವಿಂಗಡಿಸಿಕೊಂಡು ವಿಶ್ಲೆಷಣೆಗೆ ಒಳಪಡಿಸಲಾಗಿದೆ.

ಐದನೆಯ ಅಧ್ಯಾಯವಾದ 'ಕ್ರೀಯಾವರ್ತನ ಮತ್ತು ಇತರೆ ಮಹಿಳಾ ಜಾನಪದ ಹಾಡುಗಳ ವಿಶ್ಲೇಷಣೆ' ಎಂಬ ಅಧ್ಯಾಯದಲ್ಲಿ, ವಿವಿಧ ಮಹಿಳಾ ಜಾನಪದ ಹಾಡುಗಳಾದ ೧. ಬೀಸುವ ಹಾಡುಗಳು, ೨. ಕುಟ್ಟುವ ಹಾಡುಗಳು, ೩. ಕಳೆ ಕೀಳುವ ಹಾಡುಗಳು, ೪. ಒಗಟಿನ ಹಾಡುಗಳು, ೫. ಭಜನೆ, ತತ್ವಪದ ಹಾಡುಗಳು, ೬. ಸಾಮಾಜಿಕ ಹಾಡುಗಳು, ೭. ಪೌರಾಣಿಕ ಹಾಡುಗಳು ಎಂಬುದಾಗಿ ವರ್ಗಿಕರಿಸಿಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಆರನೆಯ ಅಧ್ಯಾಯವಾದ 'ಮಹಿಳಾ ಹಾಡುಗಳಲ್ಲಿ ಮೌಲ್ಯಗಳು' ಎಂಬುದರಲ್ಲಿ ಪ್ರಮುಖವಾಗಿ ಏಳು ಉಪ ಶಿರ್ಷಿಕೆಗಳ ಅಡಿಯಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಅವುಗಳು, ೧. ಮಹಿಳೆ ಮತ್ತು ಸಾಮಾಜಿಕ ಅಸಮಾನತೆ ೨.ಜಾನಪದ ಸಾಹಿತ್ಯ ಮತ್ತು ಸ್ತ್ರೀ ಸಂಘರ್ಷ ೩.ನೀತಿ

ಮತ್ತು ಪಾತಿವ್ರತ್ಯದ ನೆಲೆಗಳು ೪.ಮಹಿಳಾ ಜಾನಪದ ಸಾಹಿತ್ಯ ಮತ್ತು ಪ್ರತಿರೋಧ ೫.ಜಾನಪದ ಮಹಿಳೆ ಮತ್ತು ಸಂಸ್ಕೃತಿ. ೬.ಪಶುಪಕ್ಷಿ ಪ್ರಾಣಿಗಳ ಜೀವ ಪ್ರೀತಿ ೭.ಜಾನಪದ ಸಾಹಿತ್ಯ ಮತ್ತು ದೈವತ್ವದ ನೆಲೆಗಳು, ಎಂಬುದಾಗಿದ್ದು ಇವುಗಳ ನೆಲೆಗಳನ್ನು ಮಹಿಳಾ ಜಾನಪದ ಹಾಡುಗಳ ಅಡಿಯಲ್ಲಿ ಗುರುತಿಸಲಾಗಿದೆ.

ಏಳನೆಯ ಅಧ್ಯಾಯವಾದ 'ಮಹಿಳಾ ಹಾಡುಗಳಲ್ಲಿ ಅಭಿವ್ಯಕ್ತಿ ಸಾಹಿತ್ಯ' ಎಂಬುದರಲ್ಲಿ ೧.ಭಾಷೆ ಮತ್ತು ಶೈಲಿ, ೨. ಛಂಧಸ್ಸು ಮತ್ತು ಅಲಂಕಾರ, ೩. ಇತರೆ ಭಾಷೆಗಳ ಪ್ರಭಾವ ಎಂಬ ಅಂಶಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

ಎಂಟನೆಯ ಅಧ್ಯಾಯವಾದ 'ಸಮಾರೋಪ'ದಲ್ಲಿ ಅಧ್ಯಯನದ ಫಲಿತಗಳು, ಬೀದರ್ ಜಿಲ್ಲಾ ನಕ್ಷೆ, ಗ್ರಂಥಋಣ, ವಕ್ತೃ ವಿವರ, ಆಯ್ದ ಮಹಿಳಾ ಜಾನಪದ ಹಾಡುಗಳು, ಪ್ರಾದೇಶಿಕ ಪದಗಳ ಅರ್ಥ, ಮರಾಠಿ ಪದಗಳ ಅರ್ಥ ಹಾಗೂ ಛಾಯಚಿತ್ರಗಳನ್ನು ನೀಡಲಾಗಿದೆ. ಇದಿಷ್ಟು ಪ್ರಸ್ತುತ ಅಧ್ಯಯನದ ಸ್ವರೂಪವಾಗಿದೆ. ಇದರ ಅಡಿಯಲ್ಲಿ ಪ್ರಸ್ತುತ ಸಂಶೋಧನ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೧.೫ ಅಧ್ಯಯನದ ವೈಧಾನಿಕತೆ:

ಮಹಿಳಾ ಜಾನಪದ ಹಾಡುಗಳು : ಒಂದು ಅಧ್ಯಯನ, ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಂಡಿದ್ದು, ಪ್ರಸ್ತುತ ಸಂಶೋಧನಾ ಮಹಾಪ್ರಬಂಧದ ವೈಧಾನಿಕತೆಯು ಈ ಮುಂದಿನಂತೆ ಕಂಡುಬರುತ್ತದೆ.

ಪ್ರಸ್ತುತ ಅಧ್ಯಯನ ವಿಷಯವು ಜಾನಪದ ಮೌಖಿಕ ನೆಲೆಯದಾಗಿದೆ. ಹೀಗಾಗಿ ಈ ಮಹಿಳಾ ಜಾನಪದ ಸಾಹಿತ್ಯವನ್ನು ಅಧ್ಯಯನ ಮಾಡುವ ಪೂರ್ವದಲ್ಲಿ ಮಹಿಳಾ ಜಾನಪದವನ್ನು ಸಂಗ್ರಹಿಸುವುದು ಮುಖ್ಯವಾಗುತ್ತದೆ. ಹೀಗಾಗಿ ಇಲ್ಲಿ ಕ್ಷೇತ್ರಕಾರ್ಯ ವಿಧಾನದ ಮೂಲಕವಾಗಿ ಬೀದರ್ ಪ್ರಾಂತ್ಯದ ಮಹಿಳಾ ಜಾನಪದ ಹಾಡುಗಳನ್ನು ಸಂಗ್ರಹಿಸಲಾಗಿದೆ. ಆದ್ದರಿಂದಾಗಿ ಇಲ್ಲಿ ಕ್ಷೇತ್ರಕಾರ್ಯ ವಿಧಾನದ ನೆಲೆಯಲ್ಲಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಮೂಲಕವಾಗಿ ಸಂಶೋಧನೆಯನ್ನು ಮುಂದುವರೆಸಲಾಗಿದೆ.

ಪ್ರಸ್ತುತ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಲು ವಿಶೇಷವಾದ ಸಾಂಸ್ಕೃತಿಕ ಸನ್ನಿವೇಶಗಳಾದ ಹಬ್ಬ, ಆಚರಣೆ, ಉತ್ಸವದಂತಹ ವಿಶೇಷ ದಿನಗಳನ್ನು ನಿಗದಿಪಡಿಸಿಕೊಂಡು ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇದಕ್ಕೆ ಕಾರಣ ಈ ವಿಶೇಷ ದಿನಗಳಲ್ಲಿ ಈ ಹಾಡುಗಳನ್ನು ಮಹಿಳೆಯರು ಭಕ್ತಿ–ಭಾವದಿಂದ ಹಾಡುವುದು ಕಂಡುಬರುತ್ತದೆ. ಇದು ಸಂಶೋಧನೆಗೆ ಪೂರಕವಾದ ಮಾಹಿತಿಯನ್ನು ಕಟ್ಟಿಕೊಡಲು ಸಹಕಾರಿಯಾಗುತ್ತದೆ. ಆದ್ದರಿಂದ ಈ ವಿಶೇಷ ದಿನಗಳ ಗುರುತಿಸುವಿಕೆಯು ಸಂಶೋಧನೆಯ ಒಂದು ವಿಧಾನವಾಗಿ ಕಂಡುಬರುತ್ತದೆ.

ಪ್ರಸ್ತುತ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸುವ ಉದ್ದೇಶದಿಂದಾಗಿ ಸಂದರ್ಶನ ಹಾಗೂ ಸಂವಾದವನ್ನು ಜಾನಪದ ಕಲಾವಿದರು ಹಾಗೂ ವಕ್ತೃಗಳೊಂದಿಗೆ ನಡೆಸಲಾಗಿದೆ.

ಇದರಿಂದ ಸಂಶೋಧನೆಗೆ ಪೂರಕವಾದ ಅಂಶಗಳನ್ನು ಪಡೆದುಕೊಳ್ಳಲಾಗಿದೆ. ಇದು ಕೂಡ ಪ್ರಸ್ತುತ ಅಧ್ಯಯನದ ಸಂಶೋಧನ ವೈಧಾನಿಕತೆಯ ನೆಲೆಯಾಗಿದೆ.

ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ವಿಶ್ಲೇಷಣೆ ಮತ್ತು ವ್ಯಾಖ್ಯಾನಾತ್ಮಕ ನೆಲೆಯಲ್ಲಿ ಪ್ರಸ್ತುತ ಸಂಶೋಧನೆಯನ್ನು ಮುಂದುವರೆಸಲಾಗಿದೆ. ಇಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಅಧ್ಯಾಯಗಳಿಗೆ ಪೂರಕವಾಗಿ ವಿಂಗಡಣೆಯನ್ನು ಮಾಡಿಕೊಳ್ಳಲಾಗಿದೆ. ಇದು ಕೂಡ ಪ್ರಸ್ತುತ ಅಧ್ಯಯನದ ವಿಧಾನಗಳಲ್ಲೊಂದಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಪ್ರಶ್ನಾವಳಿಯ ಮಾದರಿಯನ್ನು ಅಳವಡಿಸಿಕೊಳ್ಳಲಾಗಿದೆ. ಇದರ ಅಡಿಯಲ್ಲಿ ಸಂಶೋಧನೆಗೆ ಪೂರಕವಾದ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಹಾಗೆಯೇ ಜಾನಪದ ಹಾಡುಗಳನ್ನು ಆಧುನಿಕ ವಿದ್ಯುನ್ಮಾನಗಳ ಮೂಲಕ ಸಂಗ್ರಹಿಸಿಕೊಳ್ಳಲಾಗಿದೆ. ಇವುಗಳ ಆಧಾರದಿಂದ ಸಂಶೋಧನೆಯನ್ನು ಮುಂದುವರೆಸಿರುತ್ತೇನೆ.

ಜಾನಪದ ಸಾಹಿತ್ಯಕ್ಕೆ ಸಮಬಂಧಿಸಿದಂತೆ ಇದುವರೆಗೂ ಪ್ರಕಟವಾಗಿರುವ ಕೃತಿಗಳು, ಲೇಖನಗಳು ಹಾಗೂ ಸಂಶೋಧನ ಮಹಾಪ್ರಬಂಧಗಳನ್ನು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡಿರುತ್ತೇನೆ. ಜಾನಪದ ವಿದ್ವಾಂಸರು, ತಜ್ಞರುಗಳೊಂದಿಗೆ ಚರ್ಚೆ ಮತ್ತು ಸಂವಾದವನ್ನು ನಡೆಸುವ ಮೂಲಕ ಈ ಸಂಶೋಧನ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತೇನೆ. ಇದು ಕೂಡ ಪ್ರಸ್ತುತ ಅಧ್ಯಯನದ ವೈಧಾನಿಕತೆಯಾಗಿದೆ.

ಜಾನಪದವು ಮೌಖಿಕ ಸಾಹಿತ್ಯ ಪ್ರಧಾನವಾದ ಕ್ಷೇತ್ರವಾಗಿದ್ದು, ವಿಶಾಲವಾದ ನೆಲೆಯನ್ನು ತನ್ನಲ್ಲಿ ಗರ್ಭಿಕರಿಸಿಕೊಂಡಿದೆ. ಆದ್ದರಿಂದ ಇಲ್ಲಿ ಯಾವುದೇ ಒಂದು ವಿಧಾನದ ಮೂಲಕವಾಗಿ ಸಂಶೋಧನೆಗೆ ತೊಡಗಲು ಸಾಧ್ಯವಿಲ್ಲ. ಆದ್ದರಿಂದಾಗಿ ಸಂಶೋಧನೆಗೆ ಸೂಕ್ತವಾದ ನೆಲೆಯಲ್ಲಿ ಹಲವಾರು ವಿಭಿನ್ನ ವಿಧಾನಗಳ ಮೂಲಕವಾಗಿ ಪ್ರಸ್ತುತ ಅಧ್ಯಯನದ ವೈಧಾನಿಕತೆಯನ್ನು ಗುರುತಿಸಿಕೊಳ್ಳಲಾಗಿದೆ.

೧.೬ ಇದುವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ:

ಕನ್ನಡದಲ್ಲಿ ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಲವಾರು ಅಧ್ಯಯನಗಳು ನಡೆದಿವೆ. ಕನ್ನಡ ಜನಪದ ಸಾಹಿತ್ಯದಲ್ಲಿ ಅನೇಕ ವಿದ್ವಾಂಸರು ಕೃಷಿ ನಡೆಸಿದ್ದು ಇದರ ಪ್ರತಿಫಲವಾಗಿ ಇಂದು ನಮ್ಮ ಮುಂದೆ ಅನೇಕ ಸಾಹಿತ್ಯಕ ಆಕರಗಳು ಇವೆ. ಕೇವಲ ಜಾನಪದ ಸಾಹಿತ್ಯವಷ್ಟೇ ಅಲ್ಲ, ಶಿಷ್ಟ ಸಾಹಿತ್ಯಕ್ಕೂ ವಿದ್ವಾಂಸರ ಕೊಡುಗೆ ಅಪಾರವಾಗಿದೆ. ಸಾಹಿತ್ಯವನ್ನು ವಿವಿಧ ಮಜಲುಗಳಲ್ಲಿ, ವಿವಿಧ ಶಾಸ್ತ್ರಗಳ ಅಧ್ಯಯನದ ಮೂಲಕ ವಿಶ್ಲೇಷಿಸುವುದು ನಿಜವಾದ ಸಾಹಿತಿಯ ಮೊದಲ ಲಕ್ಷಣವಾಗಿದೆ. ಸಾಹಿತಿಯಾದವನು ಸಾಹಿತ್ಯವನ್ನು ವೈಚಾರಿಕ ನೆಲೆಗಟ್ಟಿನ ಮೇಲೆ ಅವಲೋಕನ ಮಾಡಬೇಕಿದೆ. ಹಾಗಾದಾಗ ಮಾತ್ರ ಸಾಹಿತ್ಯದ ನಿಜವಾದ ಆಳ ಅಗಲಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಉತ್ತರ ಕರ್ನಾಟಕದ ಮಟ್ಟಿಗೆ ಜನಪದ ಸಾಹಿತ್ಯವನ್ನು ವಿವರಿಸುವುದಾದರೆ ಈ ಸಾಹಿತ್ಯಕ್ಕೆ ಅಡಿಪಾಯ ಹಾಕಿದವರಲ್ಲಿ ಹಲಸಂಗಿ ಗೆಳೆಯರೆ ಮೊದಲು. ಆ ನಂತರ ಇಡೀ ಕರ್ನಾಟಕದಾದ್ಯಂತ ಬೇರೆ ಬೇರೆ ರೀತಿಯಲ್ಲಿ ಹಲವಾರು ಸಂಶೋಧಕರು, ವಿದ್ವಾಂಸರು, ಪಾಶ್ಚಿಮಾತ್ಯ ವಿದ್ವಾಂಸರು ಹೀಗೆ ಹಲವಾರು ವ್ಯಕ್ತಿಗಳು ಜನಪದವನ್ನು ತಮ್ಮ ಸಾಧ್ಯತೆಗೆ ತಕ್ಕಂತೆ ಅಧ್ಯಯನ ಮಾಡಿರುವುದು ನಮಗೆಲ್ಲ ತಿಳಿದಿರುವ

ಸಂಗತಿಯೇ ಆಗಿದೆ. ಈ ವಿಚಾರವಾಗಿ ಬೀದರ ಜಿಲ್ಲೆಯ ಸಾಹಿತ್ಯಿಕ ಪರಿಧಿಯನ್ನು ಈ ಮುಂದಿನಂತೆ ಅವಲೋಕಿಸಬಹುದಾಗಿದೆ.

- **ಪಿ.ಎಚ್.ಡಿ ಸಂಶೋಧನಾ ಪ್ರಬಂಧಗಳು:**

ಜಗನ್ನಾಥ ಹೆಬ್ಬಾಳೆಯವರ "ಹೈದ್ರಾಬಾದ ಕರ್ನಾಟಕ ಜನಪದ ಜಾತ್ರೆಗಳು" ಎಂಬ ಸಂಶೋಧನಾ ಪ್ರಬಂಧದಲ್ಲಿ ಜಾತ್ರೆಗಳ ಉಗಮ-ವಿಕಾಸ, ಜಿಲ್ಲೆಯಲ್ಲಿ ನಡೆಯುವ ಹಲವು ಜಾತ್ರೆಗಳ ಕುರಿತಾದ ಸಂಪ್ರದಾಯ, ಪರಂಪರೆಗಳ ವಿವರಣೆಯನ್ನು ಇಲ್ಲಿ ವಿವೇಚಿಸಲಾಗಿದೆ. ಇದು ಜಾತ್ರೆಗಳನ್ನು ಕೇಂದ್ರವಾಗಿಟ್ಟುಕೊಂಡು ನಡೆದಿರುವ ಅಧ್ಯಯನಗಳಲ್ಲೊಂದಾಗಿದೆ. ಜಾನಪದ ಕ್ಷೇತ್ರದಲ್ಲಿ ಇದು ಜಾತ್ರೆಗಳ ಕುರಿತಾಗಿ ತನ್ನದೆ ಆದ ಮಹತ್ವವನ್ನು ಒಳಗೊಂಡಿರುವ ಕೃತಿಯಾಗಿ ಕಂಡುಬರುತ್ತದೆ.

ಸೋಮಾನಾಥ ನುಚ್ಚಾ ಅವರ ಸಂಶೋಧನಾ ಪ್ರಬಂಧ "ಬೀದರ ಜಿಲ್ಲೆಯ ಕೋಲಾಟಗಳು" ಈ ಕೃತಿಯಲ್ಲಿ ಕೋಲಾಟದ ಪ್ರಾಚೀನತೆ, ಕೋಲಾಟದ ಹರವು, ೪೮ ಕೋಲಾಟದ ಪ್ರಕಾರಗಳನ್ನು ಗುರುತಿಸಲಾಗಿದೆ. ಕೋಲಾಟದ ಪದಗಳಲ್ಲಿ ಪೌರಾಣಿಕ ಪದಗಳು, ಪ್ರಣಯ ಪದಗಳು, ಹಾಸ್ಯ ಪದಗಳು, ಸಂಕೀರ್ಣ ಪದಗಳು, ವಿವಿಧ ರೀತಿಯ ಕೋಲಾಟದ ಪ್ರಸಂಗಗಳ ವಿವರವಿದೆ. ಸಾಮಾನ್ಯ ಕೋಲಾಟಕ್ಕೂ ಕೋಲಾಟದ ಪ್ರಸಂಗಗಳಿಗೂ ಇರುವ ವ್ಯತ್ಯಾಸಗಳನ್ನು ಈ ಪ್ರಬಂಧದಲ್ಲಿ ಹೇಳಲಾಗಿದೆ. ಅಲ್ಲದೆ ಕೋಲಾಟವಾಡುವ ಸಂದರ್ಭಗಳು, ರಂಗ ಪರಿಕರಗಳನ್ನು ಸಹ ಸೂಚಿಸಿದ್ದಾರೆ.

ಅರುಣಾ ಸುಲ್ತಾನ್‌ಪೂರೆ ಅವರ ಸಂಶೋಧನಾ ಪ್ರಬಂಧ "ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನ" ಎಂಬುದರಲ್ಲಿ ಬುಲಾಯಿ ಹಾಡುಗಳ ಸಂಸ್ಕೃತಿ, ಇತಿಹಾಸ ಮತ್ತು ಪರಂಪರೆ, ಬುಲಾಯಿ ಹಾಡುಗಳ ಪ್ರೇರಣೆ, ಧೋರಣೆ, ಬುಲಾಯಿ ಹಾಡುಗಳ ಸಾಂಸ್ಕೃತಿಕ ನೆಲೆಗಳು, ಬುಲಾಯಿ ಹಾಡು ಹಾಗೂ ಜನಪದ ಹಾಡುಗಳ ತೌಲನಿಕ ಅಧ್ಯಯನ, ಜನಪದ ಹಾಡುಗಳಲ್ಲಿ ಬುಲಾಯಿ ಹಾಡುಗಳ ಸ್ಥಾನಮಾನ, ಇನ್ನಿತರ ಅಧ್ಯಾಯಗಳಲ್ಲಿ ಬುಲಾಯಿ ಹಾಡುಗಳೊಂದಿಗೆ ಸಮಗ್ರ ವಿಶ್ಲೇಷಣೆಯನ್ನು ಮಾಡಿ ವೈಶಿಷ್ಟ್ಯವನ್ನು ಗುರ್ತಿಸಿದ್ದಾರೆ.

ಪೃಥ್ವಿರಾಜ ಲಕ್ಕಾ ಅವರ ಸಂಶೋಧನಾ ಪ್ರಬಂಧ "ಪಾರದಿ ಜನಾಂಗ ಒಂದು ಅಧ್ಯಯನ" ಇದರಲ್ಲಿ ಪಾರದಿ ಜನಾಂಗದ ಅಧ್ಯಯನವನ್ನು ಕೈಕೊಳ್ಳಲಾಗಿದೆ. ಈ ಮಹಾಪ್ರಬಂದದ ಅಡಿಯಲ್ಲಿ ಪಾರದಿ ಜನಾಂಗದ ಕುರಿತಾದ ಸಾಂಸ್ಕೃತಿಕ ಅಧ್ಯಯನವನ್ನು ಇಲ್ಲಿ ನಡೆಸಿರುವುದು ಕಂಡುಬರುತ್ತದೆ.

ಸಂತೋಷ ಪವಾರ ಅವರ "ಲಂಬಾಣಿ ಜನಪದ ಭಾಷೆ" ಎಂಬ ಸಂಶೋಧನಾ ಪ್ರಬಂಧದಲ್ಲಿ ಲಂಬಾಣಿ ಜನಪದ ಭಾಷೆಯ ಸಮಗ್ರ ವಿವೇಚನೆಯನ್ನು ಮಾಡಲಾಗಿದೆ. ಇದು ಭಾಷೆಯ ವಿಶಿಷ್ಟ ನೆಲೆಗಳನ್ನು ಪರಿಚಯಿಸುವ ಅಧ್ಯಯನವಾಗಿದೆ

ಗುರುಲಿಂಗಪ್ಪಾ ಧಬಾಲೆಯವರ ಸಂಶೋಧನಾ ಪ್ರಬಂಧ "ಬೀದರ ಜಿಲ್ಲೆಯ ಅನುಭಾವಿ ಕವಿಗಳು" ಇದರಲ್ಲಿ ಬೀದರ ಜಿಲ್ಲೆಯ ತತ್ವಪದಕಾರರ ಸಮಗ್ರ ಮಾಹಿತಿಯೊಂದಿಗೆ ಅವರ ತತ್ವಪದಗಳ ವಿಶ್ಲೇಷಣೆಯನ್ನೂ ಮಾಡಿದ್ದಾರೆ. ಜಾನಪದ ಪರಂಪರೆಯ ಒಂದು ಭಾಗವಾಗಿ ಬೆಳೆದುಬಂದಿರುವ ತತ್ವಪದ ಕವಿಗಳನ್ನು ಕುರಿತ ಅಧ್ಯಯನ ಇದಾಗಿದ್ದು, ಜಾನಪದ ಕ್ಷೇತ್ರವನ್ನು ಪ್ರಮುಖವಾಗಿ ಪ್ರತಿನಿಧಿಸುತ್ತದೆ.

ಐಶ್ವರಿ, ಎಸ್ ಅವರ ಸಂಶೋಧನಾ ಪ್ರಬಂಧ "ಬೀದರ ಜಿಲ್ಲೆಯ ದಲಿತ ತತ್ವಪದಕಾರರು" ಇದರಲ್ಲಿ ದಲಿತ ವರ್ಗಕ್ಕೆ ಸೇರಿದ ತತ್ವಪದಕಾರರ ಸಂಪೂರ್ಣ ಮಾಹಿತಿ ಹಾಗೂ ತತ್ವಪದಗಳ

ವಿವರಣೆಯನ್ನು ನೀಡಲಾಗಿದೆ. ವಿವಿಧ ಹಾಡುಗಳೊಂದಿಗೆ ವಿಶ್ಲೇಷಣೆ ಹಾಗೂ ಎಲ್ಲಾ ಧರ್ಮಗಳಲ್ಲಿ ನಡೆಯುವ ಮದುವೆ ಪದ್ಧತಿಯ ವಿವೇಚನೆ, ವಿವರಣೆ ಒಳಗೊಂಡಿದೆ.

ವನಿತಾ ಬಿಜಾಪೂರೆ ರಾವ್ ಅವರ ಸಂಶೋಧನಾ ಕಿರು ಪ್ರಬಂಧ "ಜನಪದ ಹಾಡುಗಳಲ್ಲಿ ಅಂಬೇಡ್ಕರ್" ಎಂಬುದರಲ್ಲಿಜನಪದ ಹಾಡುಗಳಲ್ಲಿ ಅಂಬೇಡ್ಕರರ ಕುರಿತಾದ ವಿಷಯಗಳ ವಿಶ್ಲೇಷಣೆಯನ್ನು ಮಾಡಲಾಗಿದೆ. ವರ್ತಮಾನದ ಬದುಕಿನ ಜಾನಪದದಲ್ಲಿನ ಬಾಬಾಸಾಹೇಬರು ಬೆರೆತಿರುವ ಅಂಶಗಳನ್ನು ಈ ಕೃತಿಯು ಪ್ರತಿನಿಧಿಸುತ್ತದೆ.

ಪಂಕಜಾ ಶಿವರಾಜ ಅವರ ಸಂಶೋಧನಾ ಕಿರುಪ್ರಬಂಧ "ಬೀದರ ಜಿಲ್ಲೆಯ ಜನಪದ ಕಲೆಗಳು" ಇದರಲ್ಲಿ ಜನಪದ ಕಲೆಗಳ ಪ್ರಕಾರಗಳಲ್ಲಿ ಗೀತ, ನೃತ್ಯ, ಆರಾಧನಾ ಮುಂತಾದವುಗಳನ್ನು ತಿಳಿಸಿ, ಬೀದರಿನ ಬಿದ್ರಿ ಎಂಬ ಜಾನಪದ ಕಲೆಯ ವಿಶಿಷ್ಟತೆಯನ್ನು ತಿಳಿಸಲಾಗಿದೆ.

ಮಹಾದೇವಿ ಅವರ ಸಂಶೋಧನಾ ಕಿರುಪ್ರಬಂಧ "ಬೀದರ ಜಿಲ್ಲೆಯ ಜನಪದ ಆಟಗಳು" (೨೦೦೮) ಈ ಕೃತಿಯಲ್ಲಿ ಜನಪದ ಆಟಗಳ ಪ್ರಕಾರಗಳಲ್ಲಿ ಹೊರಾಂಗಣ ಮತ್ತು ಒಳಾಂಗಣವೆಂದು ಸೂಚಿಸಿ, ಜನಪದ ಆಟಗಳ ಸ್ವರೂಪ. ಮಹತ್ವ, ಲಕ್ಷಣಗಳು, ಇತಿಹಾಸ ಮುಂತಾದ ವಿಷಯದ ಉಲ್ಲೇಖವಿದೆ.

ಸುರೇಖಾ ಅಂಬಾದಾಸ ಅವರ ಸಂಶೋಧನಾ ಕಿರುಪ್ರಬಂಧ "ಬೀದರ ಜಿಲ್ಲೆಯ ಕೃಷಿ ಆಚರಣೆಗಳು ಇದರಲ್ಲಿ ಬೀದರ ಜಿಲ್ಲೆಯ ಕೃಷಿ ಆಚರಣೆಗಳ ವಿವರಣೆಯಿದೆ.

ಶ್ರೀಮತಿ ಜಯದೇವಿ ತಾಯಿ ತೇಲಿ ಅವರ ಸಂಶೋಧನಾ ಕಿರುಪ್ರಬಂಧ "ಬೀದರ ಜಿಲ್ಲೆಯ ಮದುವೆ ಪದ್ಧತಿಗಳ ಒಂದು ಅಧ್ಯಯನ" ಎಂಬ ವಿಷಯದ ಮೇಲೆ ಕಿರು ಸಂಶೋಧನಾ ಗ್ರಂಥ ರಚಿಸಿ ಎಂ.ಫಿಲ್
ಪದವಿ ಪಡೆದಿದ್ದಾರೆ. ಇದರಲ್ಲಿ ಮದುವೆ ಸಂದರ್ಭದಲ್ಲಿನ ವಿವಿಧ ಹಾಡುಗಳ ವಿಶ್ಲೇಷಣೆ ಹಾಗೂ ಎಲ್ಲ ಧರ್ಮಗಳಲ್ಲಿ ನಡೆಯುವ ಮದುವೆ ಪದ್ಧತಿಯ ಸಮಗ್ರ ವಿವೇಚನೆಯನ್ನು ಕಾಣಬಹುದು.

ಧನಲಕ್ಷ್ಮಿ ವಿಶ್ವನಾಥ ಅವರ ಸಂಶೋಧನಾ ಪ್ರಬಂಧ "ಬೀದರ ಜಿಲ್ಲೆಯ ಜನಪದ ಸಾಹಿತ್ಯದಲ್ಲಿ ಕೃಷಿ" ಎಂಬ ಗ್ರಂಥದಲ್ಲಿ ಬೀದರ್ ಜಿಲ್ಲೆಯ ಕೃಷಿ ಆಚರಣೆಗಳ ವಿವರಣೆ ಇದರಲ್ಲಿದೆ. ಬೀದರ ಜಿಲ್ಲೆಯ ಕೃಷಿ ಸಾಹಿತ್ಯಿಕ ಹರವುಗಳ ವಿವಿಧ ಹಾಡುಗಳ ವಿಶ್ಲೇಷಣೆ ಕಾಣಬಹುದು.

ಶಿವಾಜಿ ಕಾಂಬಳೆ ಅವರ ಸಂಶೋಧನಾ ಗ್ರಂಥ "ಬೀದರ ಜಿಲ್ಲೆಯ ಭೂತೇರು ಒಂದು ಅಧ್ಯಯನ" ಇದರಲ್ಲಿ ಭೂತೇರ ಜೀವನ ಪರಂಪರೆ ಹಾಗೂ ಹಾಡುಗಳ ಸಮಗ್ರ ವಿವೇಚನೆಯಿದೆ.

ಹೀಗೆ ಬೀದರ್ ಜಿಲ್ಲೆಯ ಜನಪದ ಸಾಹಿತ್ಯ ಕ್ಷೇತ್ರಕ್ಕೆ ಹಲವಾರು ವಿದ್ವಾಂಸರು, ಲೇಖಕರು, ಸಂಶೋಧಕರು ಅವಿರತವಾಗಿ ಶ್ರಮಿಸಿದ್ದಾರೆ. ಅನೇಕ ಕೃತಿಗಳು, ಲೇಖನಗಳು ಸಂಶೋಧನಾ ಗ್ರಂಥಗಳು ಇಡೀ ಬೀದರ ಜಿಲ್ಲೆಯ ಪ್ರಾದೇಶಿಕ ವೈವಿಧ್ಯತೆ ಸಾಹಿತ್ಯಕ ವೈಶಿಷ್ಟ್ಯಗಳನ್ನು ಕರ್ನಾಟಕದ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡುವಲ್ಲಿ ಮಹತ್ವಪೂರ್ಣ ಸ್ಥಾನ ಪಡೆದುಕೊಂಡಿವೆ. ಇಷ್ಟೆ ಅಲ್ಲದೆ ಬೀದರ ಜಿಲ್ಲೆಯಲ್ಲಿ ಹಲವಾರು ಸಂದರ್ಭಗಳಲ್ಲಿ ಜನಪದಕ್ಕೆ ಸಂಬಂಧಿಸಿದಂತೆ ಸಭೆ ಸಮಾರಂಭಗಳು, ಸಮಾವೇಶಗಳು ಸಹ ನಡೆದಿವೆ. ಈ ಹಿನ್ನೆಲೆಯಲ್ಲಿ ಬೀದರ್ ತನ್ನದೇ ಆದ ಸ್ಥಾನಮಾನವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ.

- **ಮೌಖಿಕ ಹಾಗೂ ಲಿಖಿತ ಸಾಹಿತ್ಯ:**

ಮಾನವನ ಸಂಸ್ಕೃತಿ ಅಧ್ಯಯನಕ್ಕೆ ಹಲವಾರು ಮೌಖಿಕ ಪರಂಪರೆಯ ಸಾಮಗ್ರಿಗಳನ್ನು ಒದಗಿಸುವಲ್ಲಿ ಹಾಗೂ ಸಂಗ್ರಹಿಸುವಲ್ಲಿ ಹಲವಾರು ವಿದ್ವಾಂಸರು ಶ್ರಮಿಸಿದ್ದಾರೆ. ಈ ಭಾಗದ ಸಾಹಿತ್ಯದ ಉಳಿವಿಗಾಗಿ ವ್ಯಾಪಕ ಅಧ್ಯಯನಕ್ಕಾಗಿ ದುಡಿದವರಲ್ಲಿ ಎಂ.ಎಸ್. ಲಠ್ಠೆ, ಎಂ. ಜಿ. ಬಿರಾದಾರ, ಎಂ.ಎಂ. ಕಲಬುರ್ಗಿ, ಸೋಮಶೇಖರ್ ಇಮ್ರಾಪೂರ, ಚನ್ನಣ್ಣ ವಾಲೀಕಾರ, ದೇವೇಂದ್ರಕುಮಾರ ಹಕಾರಿ, ಎಂ.ಎಸ್. ಸುಂಕಾಪುರ, ಮುಂತಾದ ವಿದ್ವಾಂಸರು ಪ್ರಮುಖರಾಗಿದ್ದಾರೆ. ಆರಂಭದ ಸಂದರ್ಭದಲ್ಲಿ ಜನಪದ ಗೀತ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದವರಲ್ಲಿ ಬಿ.ಎಸ್. ಗದ್ದಗಿಮಠ ರವರು ಅತ್ಯಂತ ಮಹತ್ವದ ವ್ಯಕ್ತಿಯಾಗಿದ್ದಾರೆ. ಇವರು ಉತ್ತರ ಕರ್ನಾಟಕದ ಅನೇಕ ಕಡೆ ಕ್ಷೇತ್ರಕಾರ್ಯ ಮಾಡುವುದರ ಮೂಲಕ ಸಂಪದ್ಭರಿತ ಜನಪದ ಗೀತೆಗಳನ್ನು ಸಂಗ್ರಹಿಸಿ, ಪರಿಚಯಿಸುವಲ್ಲಿ ಅವರ ಪಾತ್ರ ಗಣನೀಯವಾದುದು. ನಾಲ್ಕುನಾಡ ಪದಗಳು, ಕಂಬಿಯ ಹಾಡುಗಳು, ಜನತಾ ಗೀತೆಗಳು, ಕುಮಾರರಾಮನ ದುಂದುಮೆ, ಮೆಲ್ಲ ಮೆಲ್ಲನೆ, ಲೋಕಗೀತೆಗಳು ಹೀಗೆ ಹಲವಾರು ಸಾಹಿತ್ಯ ಕೃತಿಗಳನ್ನು ಸಂಪಾದಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಚಂದ್ರಶೇಖರ ಕಂಬಾರರು 'ಉತ್ತರ ಕರ್ನಾಟಕದ ಜಾನಪದ ರಂಗಭೂಮಿ' ಎಂಬ ಗ್ರಂಥವನ್ನು ರಚನೆ ಮಾಡಿದ್ದು, ಉತ್ತರ ಕರ್ನಾಟಕದ ಕಲೆಗಳಲ್ಲಿ ಬಹುಮುಖ್ಯವಾದ ಬಯಲಾಟದ ಪ್ರಕಾರಗಳನ್ನು ಮತ್ತು ಅವುಗಳ ತಂತ್ರಗಾರಿಕೆಯ ಶೈಲಿಯ ಬಗ್ಗೆ ವಿವೇಚಿಸಿದ್ದರೆ. ಈ ಕೃತಿಯು ಉತ್ತರ ಕರ್ನಾಟಕದ ರಂಗಭೂಮಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತದೆ.

ಶ್ರೀ ಕಾಶಿನಾಥ ರೆಡ್ಡಿಯವರು, ಎಂ.ಎಸ್. ಲಠ್ಠೆಯವರು, ಹಾಗೂ ಶ್ರೀಮಾಣಿಕ್‌ರಾವ್ ಧನಶ್ರೀಯವರು ಜನಪದ ಸಾಹಿತ್ಯದಲ್ಲಿರುವ ತತ್ವಪದಗಳನ್ನು ಸಂಗ್ರಹಿಸಿದ್ದಾರೆ.

ಕ್ಯಾತನ ಹಳ್ಳಿ ರಾಮಣ್ಣ: "ಬೀದರ ಜಿಲ್ಲೆಯ ಜನಪದ ಗೀತೆಗಳು" ಎಂಬ ಕೃತಿಯನ್ನು ೧೯೭೬ ರಲ್ಲಿ ಪ್ರಕಟಿಸಿದ್ದು, ಇದರಲ್ಲಿ ಬೀದರ ಜಿಲ್ಲೆಯ ಹಲವು ಜನಪದ ಹಾಡುಗಳು ಸಂಗ್ರಹ ಮಾಡಲಾಗಿದೆ. "ಭೂತೇರ ಹಾಡು" ಇದರಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಅಲ್ಲದೆ ಬುಲಾಯಿ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ ಪ್ರಥಮ ಸಂಗ್ರಹವಾಗಿದೆ. "ಬೀದರ ಜಿಲ್ಲೆಯ ಜನಪದ ಕತೆಗಳು" ಎಂಬ ಕೃತಿಯಲ್ಲಿ ಜಿಲ್ಲೆಯ ಎಲ್ಲಾ ಪ್ರಕಾರದ ಕತೆಗಳನ್ನು ಸಂಗ್ರಹಿಸಿದ್ದಾರೆ.

ಜಗನ್ನಾಥ ಹೆಬ್ಬಾಳೆ:- "ಬೀದರ ಜಿಲ್ಲೆಯ ಬುಲಾಯಿ ಹಾಡುಗಳು" ಇದರಲ್ಲಿ ಜಿಲ್ಲೆಯಲ್ಲಿನ ಬುಲಾಯಿ ಹಾಡುಗಳನ್ನು ಸಂಗ್ರಹಿಸಿ ಅವುಗಳಲ್ಲಿ ಮೂವತ್ತು ಹಾಡುಗಳನ್ನು ವರ್ಗೀಕರಿಸಿದ್ದಾರೆ. ಇದಕ್ಕೆ ಪ್ರಸ್ತಾವನೆ ಬರೆದು ಹೊಸ ಆಲೋಚನೆ ಮೂಡಿಸಿದ್ದಾರೆ.

"ಸತ್ತವರ ಹಾಡುಗಳು" ಪ್ರಕೃತಿಯಲ್ಲಿನ ಪ್ರತಿ ಜೀವಿಗೂ ಹುಟ್ಟು ಸಾವು ಇದ್ದೇ ಇರುತ್ತದೆ. ಮಾನವ ಅವರ ಸಂಬಂಧಿಗಳು ಸತ್ತಾಗ ಹೇಗೆ ಅವರ ನೆನಪನ್ನು ಹೊಗಳಿಕೆಯನ್ನು ಹಾಡಾಡಿಕೊಂಡು ಅಳುತ್ತಾರೆ ಎಂಬುದನ್ನು ಈ ಸತ್ತವರ ಹಾಡುಗಳಲ್ಲಿ ನಿರೂಪಿಸಲಾಗಿದೆ.

"ಬೀದರ ಜಿಲ್ಲೆಯ ಜನಪದ ಗೀತೆಗಳು" ಇದರಲ್ಲಿ ಬೀದರ ಜಿಲ್ಲೆಯಲ್ಲಿನ ಹಾಡುಗಳು ಈ ಕೃತಿಯಲ್ಲಿ ಸಂಗ್ರಹಿಸಿದ್ದಲ್ಲದೆ, "ಶಿಖರಗನ್ನಡಿ" ಹಾಗೂ "ಲೋಕಸಿರಿ" ಹಾಡುಗಳು ಈ ಕೃತಿಯಲ್ಲಿ ಸಂಗ್ರಹಿಸಿದ್ದಾರೆ. ಈ "ಶಿಖರಗನ್ನಡಿ" ಹಾಗೂ "ಲೋಕಸಿರಿ" ಎನ್ನುವ ಗ್ರಂಥಗಳು ನೆನಪಿನಲ್ಲಿಟ್ಟುಕೊಳ್ಳಬಹುದಾದ ಕೃತಿಗಳಾಗಿವೆ. "ಹೈದ್ರಾಬಾದ ಕರ್ನಾಟಕದ ಜಾತ್ರೆಗಳು" ಎಂಬ

ಮತ್ತೊಂದು ಕೃತಿಯನ್ನು ರಚಿಸಿದ್ದಾರೆ. ಕಾಶಿನಾಥ ರೆಡ್ಡಿಯವರ " ಭೂಕೈಲಾಸ" ಮತ್ತು ಚಂದ್ರಶಿರೋಮಣಿ" ಇದೊಂದು ಬಯಲಾಟದ ಪ್ರಕಾರವಾದ ಸಣ್ಣಾಟಕ್ಕೆ ಸಂಬಂಧಿಸಿದ ಪುಸ್ತಕವಾಗಿದೆ.

ಹೀಗೆ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತಹ ಹಲವಾರು ಕೃತಿಗಳು ಉತ್ತರ ಕರ್ನಾಟಕ ಭಾಗವನ್ನು ಪ್ರತಿನಿಧಿಸುವ ನೆಲೆಯಲ್ಲಿ ಪ್ರಕಟವಾಗಿವೆ. ಆದರೆ ಜಾನಪದ ಸಾಹಿತ್ಯವನ್ನು ಬೆಳೆಸಿಕೊಂಡು ಬಂದಂತಹ ಮಹಿಳೆಯರನ್ನು ಕೇಂದ್ರವಾಗಿಟ್ಟುಕೊಂಡು ನಡೆಸಿದಂತಹ ಅಧ್ಯಯನಗಳು ಈ ಭಾಗದಲ್ಲಿ ಪ್ರತ್ಯೇಕವಾದ ನೆಲೆಯಲ್ಲಿ ನಡೆದಿಲ್ಲವೆಂದು ತೋರುತ್ತದೆ. ಆದ್ದರಿಂದಾಗಿ ನಾನು ಇಲ್ಲಿ ಆಯ್ದುಕೊಂಡಿರುವ ಸಂಶೋಧನ ವಿಷಯವು ಈ ಹಿಂದೆ ನಡೆದಿರುವ ಎಲ್ಲಾ ವಿಷಯಗಳಿಗಿಂಥ ಭಿನ್ನ ನೆಲೆಯದಾಗಿ ಕಂಡುಬರುತ್ತದೆ. ಈ ಹಿಂದೆ ನಡೆದಿರುವ ಎಲ್ಲಾ ಸಂಶೊಧನಾ ವಿಧಾನಗಲನ್ನು ಆಧಾರವಾಗಿಟ್ಟುಕೊಂಡು ಅವುಗಳಿಗಿಂತ ಭಿನ್ನವಾದ ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಾಯ: ಎರಡು

ಬೀದರ್ ಜಿಲ್ಲಾ ಮಹಿಳಾ ಜಾನಪದ ಹಾಡುಗಳ ತಾತ್ವಿಕ ವ್ಯಾಖ್ಯಾನ

೨.೧ ಬೀದರ್ ಜಿಲ್ಲೆಯ ಸಂಕ್ಷಿಪ್ತ ಪರಿಚಯ.

೨.೨ ಜಾನಪದ ಸಾಹಿತ್ಯ ಹಾಗೂ ಹಾಡುಗಳ ತಾತ್ವಿಕ ವ್ಯಾಖ್ಯಾನ.

೨.೨ ಜಾನಪದ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ.

೨.೪ ಬೀದರ್ ಜಿಲ್ಲಾ ಮಹಿಳಾ ಜಾನಪದ ಹಾಡುಗಳ ತಾತ್ವಿಕ ಚರ್ಚೆ.

ಅಧ್ಯಾಯ: ಎರಡು

ಬೀದರ್ ಜಿಲ್ಲಾ ಮಹಿಳಾ ಜಾನಪದ ಹಾಡುಗಳ ತಾತ್ವಿಕ ವ್ಯಾಖ್ಯಾನ

೨.೧ ಬೀದರ ಜಿಲ್ಲೆಯ ಸಂಕ್ಷಿಪ್ತ ಪರಿಚಯ:

ಪೌರಾಣಿಕ ಹಾಗೂ ಚಾರಿತ್ರಿಕವಾಗಿ ಮಹತ್ವದ ಸ್ಥಾನ ಪಡೆದುಕೊಂಡಿರುವ ಬೀದರ ಜಿಲ್ಲೆ ಕರ್ನಾಟಕ ರಾಜ್ಯದ ಉತ್ತರ ತುದಿಯಲ್ಲಿದೆ. ಮಹಾಭಾರತ ಕಾಲದಲ್ಲಿಯೂ ಬೀದರ್ ಪ್ರಾಮುಖ್ಯತೆಯನ್ನು ಪಡೆದ ಸ್ಥಳವಾಗಿತ್ತು. ಹನ್ನೆರಡನೆಯ ಶತಮಾನದ ಬಸವಣ್ಣನವರ ಸಾಮಾಜಿಕ ಕ್ರಾಂತಿ ನಡೆದ ತಾಣವೂ ಹೌದು. ಇಸ್ಲಾಂ ಆಡಳಿತದ ಅಂಗಳವೂ ಆಗಿದ್ದ ಬೀದರ್ ಸಿಖ್ಖರ ಪವಿತ್ರ ಸ್ಥಳವಾಗಿಯೂ ಪ್ರಸಿದ್ಧಿ ಪಡೆದಿದೆ. ಬೀದರ್ ಪ್ರಾಂತ್ಯವು ಕರ್ನಾಟಕದಲ್ಲಿ ತನ್ನದೆ ಆದ ಪ್ರಾದೇಶಿಕ ವಿಶೇಷತೆಗಳನ್ನು ಒಳಗೊಂಡ ನಾಡಾಗಿದೆ. ಬೀದರ್, ಭಾಲ್ಕಿ, ಔರಾದ, ಹುಮನಾಬಾದ ಹಾಗೂ ಬಸವಕಲ್ಯಾಣ ತಾಲ್ಲೂಕುಗಳನ್ನು ಒಳಗೊಂಡಿರುವ ಈ ಜಿಲ್ಲೆಯಲ್ಲಿ ನವಶಿಲಾಯುಗದ ಅವಧಿಯಿಂದಲೂ ಜನ ವಾಸವಾಗಿದ್ದಾರೆ. ಬಾದಾಮಿಯ ಚಾಲುಕ್ಯರು, ಕಲ್ಯಾಣದ ಚಾಲುಕ್ಯರು, ರಾಷ್ಟ್ರಕೂಟರು, ಯಾದವರು, ಬಹಮನಿ ಸುಲ್ತಾನರು, ಆದಿಲ್‌ಶಾಹಿ ದೊರೆಗಳು, ದೆಹಲಿ ಸುಲ್ತಾನರು, ಮೊಘಲರು, ಹೈದ್ರಾಬಾದಿನ ನಿಜಾಮರು ಆಳಿರುವ ಬೀದರ್ ಪ್ರದೇಶ ಪ್ರಸ್ತುತ ಕರ್ನಾಟಕ ರಾಜ್ಯದ ಉತ್ತರ ಭಾಗವಾಗಿದೆ.

ಆಯಕಟ್ಟಿನ ಸ್ಥಳದಲ್ಲಿರುವ ಬೀದರ್‌ನ ಭಾಗಗಳು ಬೇರೆ ಬೇರೆ ಆಡಳಿತಗಳ ಆಳ್ವಿಕೆಗೆ ಒಳಪಟ್ಟಿದ್ದವು. ಇವೆಲ್ಲವೂ ಕರ್ನಾಟಕಕ್ಕೆ ಸಂಪೂರ್ಣವಾಗಿ ಸೇರ್ಪಡೆಗೊಂಡಿದ್ದು ೧೯೫೬ರಲ್ಲಿ. ಮಹಾರಾಷ್ಟ್ರ, ಆಂಧ್ರ ಪ್ರದೇಶಗಳಿಂದ, ಸುತ್ತುವರೆದಿರುವ ಬೀದರ್ ಹೈದ್ರಾಬಾದ್ ನಿಜಾಮರ ವಶದಲ್ಲಿ ಬಹುಕಾಲವಿದ್ದ ಪ್ರಾಂತ್ಯ. ಜಾಗತಿಕ ಮಟ್ಟದಲ್ಲಿಯೂ ಗಮನ ಸೆಳೆದ ಬಸವಣ್ಣನವರ ಸಾಮಾಜಿಕ ಕ್ರಾಂತಿ ಹನ್ನೆರಡನೇ ಶತಮಾನದಲ್ಲಿ ನಡೆದದ್ದು ಬೀದರ್‌ನಲ್ಲಿರುವ ಬಸವಕಲ್ಯಾಣದಲ್ಲಿ. ಹೊಸ ಸಮಾಜದ ನಿರ್ಮಾಣಕ್ಕೆ ತಳಹದಿಯಾಗಿದ್ದ ಈ ಸ್ಥಳದಲ್ಲಿಯೇ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದ ಶರಣ ಶರಣೆಯರು ವಾಸಿಸಿದ್ದರು. ಈ ಅನುಭವ ಮಂಟಪ ಕೈಗೊಂಡ ಹಲವಾರು ಸಾಮಾಜಿಕ ಪರಿವರ್ತನೆಯ ಕಾರ್ಯಕ್ರಮಗಳು ಇಂದಿಗೂ ಪ್ರಸ್ತುತ.

ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಗಮನ ಸೆಳೆದ ಬೀದರ್ ಅನೇಕ ಹುತಾತ್ಮರನ್ನು ಕಂಡ ಪ್ರದೇಶ. ಮಾಂಜರಾ, ಹಳ್ಳಿಖೇಡ, ಚುಳುಕಿ, ಗಂಡೋರಿ ಮೊದಲಾದ ಮಳೆಗಾಲದಲ್ಲಿ ಮಾತ್ರ ಹರಿಯುವ ನದಿಗಳಿರುವ ಬೀದರ್ ಜಿಲ್ಲೆಯ ಬಹುಮುಖ್ಯವಾದ ಕಸುಬು ಬೇಸಾಯ. ಜೋಳ, ಭತ್ತ, ತೊಗರಿ, ಮುಸುಕಿನ ಜೋಳ, ಕಡಲೇಕಾಯಿ, ಸಜ್ಜೆ, ಹತ್ತಿ, ಹುರುಳಿ ಮುಂತಾದವನ್ನು ಬೆಳೆಯುವ ಇಲ್ಲಿಯ ಕೃಷಿ ಪ್ರದೇಶದಲ್ಲಿ ತರಕಾರಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಸಕ್ಕರೆ ಕಾರ್ಖಾನೆ, ಎಣ್ಣೆ ಕಾರ್ಖಾನೆಗಳು, ಹತ್ತಿ ಗಿರಣಿಗಳು, ಖಂಡಸಾರಿ ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುವ ಬೀದರ್‌ನಲ್ಲಿ 'ಬಿದರಿಕಲೆ' ಅತ್ಯಂತ ಪ್ರಸಿದ್ಧವಾದ ಕಲಾತ್ಮಕ ಕಲೆ. ಬಿದರಿಕಲೆ ದೇಶ ವಿದೇಶಗಳಲ್ಲಿಯೂ ಪ್ರಸಿದ್ಧವಾದುದು. ಅತ್ಯಂತ ನಯ ನಾಜೂಕಿನಿಂದ ತಯಾರಿಸಲ್ಪಡುವ ಬಿದರಿ ಕಲೆಯನ್ನು

ಪ್ರತಿಬಿಂಬಿಸುವ ಸ್ತಬ್ಧಚಿತ್ರ ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪಥ ಸಂಚಲನದಲ್ಲಿಯೂ ಪಾಲ್ಗೊಂಡಿತ್ತು.

ಎಲ್ಲಾ ಮತಧರ್ಮಗಳಿಗೆ ಸೇರಿದ ಜನರು ವಾಸಿಸಿರುವ ಬೀದರ್ ಜಿಲ್ಲೆ ಭಾವೈಕ್ಯತೆಗೊಂದು ನಿದರ್ಶನ. ಇಲ್ಲಿ ದೇವಾಲಯಗಳಿವೆ, ಮಸೀದಿಗಳಿವೆ, ಕ್ರೈಸ್ತ ಪ್ರಾರ್ಥನಾ ಮಂದಿರಗಳಿವೆ, ಗುರುದ್ವಾರವಿದೆ, ಅನುಭವ ಮಂಟಪವೂ ಇದೆ. ಉತ್ಸವಗಳು, ಉರುಸ್‌ಗಳು ಹಾಗೂ ಗುರುದ್ವಾರ ವಿಶೇಷ ಕಾರ್ಯಕ್ರಮಗಳು ಬೀದರ್ ಪ್ರಾಂತ್ಯದಲ್ಲಿ ಸದಾ ಜರುಗುತ್ತಿರುತ್ತವೆ. ಬಸವಣ್ಣ ಧ್ಯಾನ ಮಾಡುತ್ತಿರುವ ಗವಿ, ಸಿಖ್ ಗುರುನಾನಕರು ಬಂದಾಗ ಉಂಟಾದ ನಾನಕ್‌ರವರ ಸದಾ ನೀರಿರುವ ಗುಹೆಯಲ್ಲಿ ನಿಂತಿರುವ ನರಸಿಂಹ ಝರಣಿ, ಮಹಮ್ಮದ್ ಗವಾನನ ಮದರಸಾ, ಹಸರತ್ ಮಖಾನ್ ಖಾದ್ರಿ ದರ್ಗಾ, ಶುಕ್ಲಾ ತೀರ್ಥ, ಪಾಪನಾಶಿನಿ, ಗುಹಾಂತರ್ ದೇಗುಲ ಹೀಗೆ ಹಲವಾರು ಧಾರ್ಮಿಕ ಸ್ಥಳಗಳನ್ನು ಇಟ್ಟುಕೊಂಡ ಬೀದರ್ ಶೈಕ್ಷಣಿಕವಾಗಿಯೂ ಹೆಸರು ಮಾಡಿದ ನಗರವಾಗಿದೆ.

ಬೀದರ್ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿಯೂ ಹಿಂದೂಮುಸ್ಲಿಂ ಐಕ್ಯತೆಯ ಹಲವಾರು ತಾಣಗಳಿವೆ. ಮಾಣಿಕ್ ಪ್ರಭುಗಳ ಮಠ, ಅನೇಕ ಶರಣರ ಮಂದಿರಗಳು ಪ್ರಸಿದ್ಧವಾಗಿವೆ. ಚಾಲುಕ್ಯರಿಂದ ನಿರ್ಮಾಣಗೊಂಡ ಕಲಾತ್ಮಕ ದೇವಾಲಯಗಳು ಹೆಸರುವಾಸಿಯಾದ ಯಾತ್ರಾಸ್ಥಳಗಳಾಗಿವೆ. ಇಡೀ ಜಿಲ್ಲೆಯ ಹಲವಾರು ಯಾತ್ರಾಸ್ಥಳಗಳ ಕೇಂದ್ರವಾಗಿದ್ದು, ಇಲ್ಲಿ ನಡೆಯುವ ಒಂಟೆಗಳ ಜಾತ್ರೆಯೂ ಜನರನ್ನು ಸೆಳೆಯುತ್ತದೆ. ಬೀದರ್ ಜಿಲ್ಲೆಯಲ್ಲಿ ನಡೆಯುವ ಜಾತ್ರೆ, ಉತ್ಸವಗಳು ಹತ್ತು ಹಲವು. ಎಲ್ಲಾ ತಾಲ್ಲೂಕುಗಳಲ್ಲಿಯೂ ಹತ್ತಾರು ಬಗೆಯ ಉತ್ಸವಗಳು ವರ್ಷದುದ್ದಕ್ಕೂ ಭಕ್ತಾದಿಗಳನ್ನು ಹಾಗೂ ಆಸಕ್ತರನ್ನು ದೂರ ದೂರದ ಊರುಗಳಿಂದ ಆಕರ್ಷಿಸುತ್ತವೆ. ಭಾರತೀಯ ವಿಮಾನ ಹಾರಾಟ ತರಬೇತಿ ಕೇಂದ್ರವನ್ನು ಹೊಂದಿರುವ ಬೀದರ್, ಹಲವಾರು ಐತಿಹಾಸಿಕ ಸ್ಮಾರಕಗಳಿಂದ ಯಾತ್ರಿಕರನ್ನು ದೇಶದ ವಿವಿಧ ಭಾಗಗಳಿಂದ ಸೆಳೆಯುತ್ತಿದೆ. ಇಲ್ಲಿರುವ ವಿವಿಧ ಶೈಕ್ಷಣಿಕ ಸಂಸ್ಥೆಗಳು ಸಹ ವಿವಿಧ ರಾಜ್ಯಗಳ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿವೆ. ಕರ್ನಾಟಕದ ಉತ್ತರ ಶಿಖರದಂತಿರುವ ಬೀದರ್ ಹಲವಾರು ಜಾನಪದ ಕಲೆಗಳ ತಾಣ, ಹಾಗೆಯೇ ಸಹಕಾರಿ ಕ್ಷೇತ್ರದಲ್ಲಿ ಹೆಸರು ಮಾಡಿರುವ ಜಿಲ್ಲೆ.

೨.೨ ಜಾನಪದ ಸಾಹಿತ್ಯ ಹಾಗೂ ಹಾಡುಗಳ ತಾತ್ವಿಕ ವ್ಯಾಖ್ಯಾನ :

ಪ್ರಸ್ತುತದಲ್ಲಿ ಸಂಶೋಧನೆಗೆ ಆಯ್ದುಕೊಂಡಿರುವ ವಿಷಯವು ಮುಖ್ಯವಾಗಿ ಮಹಿಳಾ ಜಾನಪದ ಹಾಡುಗಳಿಗೆ ಸಂಬಂಧಿಸಿದ ಕಾರಣದಿಂದಾಗಿ ಮೊದಲು ಜಾನಪದ ಹಾಡುಗಳ ಬಗೆಗೆ ಇರುವ ತಾತ್ವಿಕ ಅರ್ಥವನ್ನು ತಿಳಿದುಕೊಳ್ಳುವುದು ಹೆಚ್ಚು ಸೂಕ್ತವಾಗಿದೆ. ಆದ್ದರಿಂದ ಇಲ್ಲಿ ಜಾನಪದ ಹಾಡುಗಳ ಅರ್ಥವನ್ನು ತಿಳಿಯುವ ಮುಂಚಿತವಾಗಿ ಜಾನಪದ ಎಂಬ ಪರಿಕಲ್ಪನೆಯನ್ನು ತಿಳಿಯುವುದು ಸಮಂಜಸವಾದುದಾಗಿದೆ.

ಜನಪದ ಎಂದ ತಕ್ಷಣ ನೆನಪಾಗುವುದು ಹಳ್ಳಿಯ ಸನ್ನಿವೇಶ, ಕೃಷಿಯಲ್ಲಿ ನಿರತರಾದ ಮಹಿಳೆಯು, ಮೌಖಿಕ ಪ್ರಕಾರ ಎಂಬೆಲ್ಲಾ ಅಂಶಗಳು ನಮಗೆ ನೆನಪಾಗುತ್ತವೆ. ಆದ್ದರಿಂದ ಜಾನಪದವನ್ನು ಒಂದು ನೆಲೆಯಲ್ಲಿ ಸೀಮಿತಗೊಳಿಸಿ ನೋಡಲು ಸಾಧ್ಯವೇ ಇಲ್ಲ. ಜಾನಪದ ಸಾಹಿತ್ಯವನ್ನು ಕುರಿತು ಕಾಳೇಗೌಡ ನಾಗವಾರ ಅವರು “ಪ್ರತಿಯೊಂದು ನಾಡಿನ ಜನತೆಯೂ ನೆನಪು, ಮಾತುಕತೆ ಮತ್ತು ನಡವಳಿಕೆಗಳಲ್ಲಿ ಪರಂಪರೆಯಿಂದ ಅನೇಕ ಸಂಗತಿಗಳನ್ನು ಹೊತ್ತು ತರುತ್ತಿರುತ್ತವೆ. ಆಚಾರ, ವಿಚಾರ, ಪದ್ಧತಿ, ಸಾಹಿತ್ಯದ ಬಗೆಗಳು, ಮದ್ದು, ಕ್ರೀಡೆ ಕಲೆ, ನೃತ್ಯ, ನಾಟಕ, ಅಡುಗೆ,

ಉಡುಗೆ ತೊಡುಗೆ, ಮನರಂಜನ ಮಾಧ್ಯಮಗಳು, ಧಾರ್ಮಿಕ ಕ್ರಿಯೆಗಳು, ಜೀವನ ವಿಧಾನ-ಮುಂತಾದವುಗಳು ಸೇರಿರುತ್ತವೆ. ಇವುಗಳನ್ನು ಪೂರ್ಣವಾಗಿ ಒಳಗೊಳ್ಳುವ ಚೌಕಟ್ಟನ್ನು ಜಾನಪದ ಎನ್ನುವ ವಿಶಾಲವಾದ ಅರ್ಥದಲ್ಲಿ ಕರೆಯುತ್ತೇವೆ. ಜನಪದ ಸಾಹಿತ್ಯವು ಗೀತೆ, ಲಾವಣಿ, ಕಾವ್ಯ, ಕಥೆ, ಗಾದೆ, ಒಗಟು – ಇತ್ಯಾದಿಗಳನ್ನು ಒಳಗೊಂಡ ಜಾನಪದದ ಒಂದು ಸಣ್ಣ ಅಂಗ ಮಾತ್ರ." ಎಂಬುದಾಗಿ ಗುರುತಿಸಿದ್ದಾರೆ. ಇಂತಹ ಜಾನಪದದ ಕುರಿತಾಗಿ ಹಲವಾರು ವಿದ್ವಾಂಸರು ಹಾಗೂ ಚಿಂತಕರು ತಮ್ಮದೇ ಆದ ಧೋರಣೆ ತಾಳುವ ಮೂಲಕವಾಗಿ ವಿಭಿನ್ನ ನೆಲೆಯಲ್ಲಿ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅವುಗಳನ್ನು ಈ ಮುಂದಿನಂತೆ ತಿಳಿಯಬಹುದಾಗಿದೆ.

ಪಾಶ್ಚಿಮಾತ್ಯ ಜಾನಪದ ಚಿಂತಕರು ಜಾನಪದದ ಬಗ್ಗೆ ತಾಳಿರುವ ನಿಲುವುಗಳು ಈ ಮುಂದಿನಂತಿವೆ.

೧. **ಹ್ಯಾಂಡ್ರೋಲಾಗ್:** ಇವರು ಜಾನಪದವನ್ನು ಕುರಿತು ತಾಳಿರುವ ನಿಲುವುಗಳೆಂದರೆ, "ಜನಾಂಗಗಳ ಪಳೆಯುಳಿಕೆಗಳನ್ನು ಸಂಗ್ರಹಿಸಿ ಅಧ್ಯಯನ ಮಾಡುವ ವಿಜ್ಞಾನ ಜನಜೀವನದಲ್ಲಿ ಇಂದಿಗೂ ಕಂಡುಬರುವುದು. ಆದರೆ ಈ ಕಾಲದಲ್ಲಿ ಕತೆಗಳನ್ನು ನಂಬಿಕೆಗಳನ್ನು ವಿಚಾರಗಳನ್ನು ಕುರಿತು ವಿಜ್ಞಾನ ಅಧ್ಯಯನ ಮಾಡುತ್ತದೆ. ಸಮಾಜದ ಮುಂತಾದವುಗಳ ಮೊತ್ತವೇ ಜಾನಪದ" ಎಂಬುದಾಗಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ಇವರು ಜಾನಪದವನ್ನು ವೈಜ್ಞಾನಿಕ ನೆಲೆಯಲ್ಲಿ ಗುರುತಿಸುವ ಪ್ರಯತ್ನಕ್ಕೆ ಮುಂದಾಗಿರುವುದು ಕಂಡುಬರುತ್ತದೆ.

೨. **ಎಡ್ವಿನ್ ಸಿಡ್ನಿ ಹಾರ್ಟ್‌ಲ್ಯಾಂಡ್:** "ಜಾನಪದ ಎನ್ನುವುದು ಸಂಪ್ರದಾಯಗಳ ವಿಜ್ಞಾನ" ಎಂದು ಕರೆದಿದ್ದಾರೆ. ಇವರ ಪ್ರಕಾರ ಪರಂಪರಾಗತ ಜ್ಞಾನವು ನೆನಪಿನ ರೂಪದಲ್ಲಿ ಕ್ರಿಯಾರೂಪದಲ್ಲಿ ಸಾಗಿ ಮುನ್ನಡೆದು ಬಂದಿರುವ ಪ್ರಕ್ರಿಯೆಯನ್ನು ಸಂಪ್ರದಾಯ ಎಂದು ಗುರುತಿಸಿದ್ದಾರೆ.

೩. **ಅಲೆನ್ ಡಂಟನ್:** "ಪುರಾಣ, ಐತಿಹ್ಯ, ಕತೆ, ಒಗಟುಗಳು ಇತ್ಯಾದಿ ಕಲಾತ್ಮಕಗಳ ಅಭಿವ್ಯಕ್ತಿಯೇ ಜಾನಪದ" ಎಂದು ಕರೆದಿದ್ದಾರೆ. ಇವರ ಪ್ರಕಾರ ಜನಪದರ ಬದುಕಿನಲ್ಲಿ ಹಾಸು ಹೊಕ್ಕಿರುವ ಈ ವಿವಿಧ ಬಗೆಯ ಮೌಖಿಕ ಪ್ರಕಾರಗಳ ಒಟ್ಟು ಮೊತ್ತವೇ ಜಾನಪದ ಎಂಬುದಾಗಿ ತಿಳಿದುಬರುತ್ತದೆ.

೪. **ಸ್ಮಿತ್ ಥಾಮಸ್:** "ಜಾನಪದ ಲಿಖಿತ ದಾಖಲೆಗಳಿಗಿಂತ ಅಲಿಖಿತ ದಾಖಲೆಗೆ ಅಥವಾ ಮೌಖಿಕ ಪರಂಪರೆಗೆ ಹೆಚ್ಚಿನ ಪ್ರೋತ್ಸಹ ಕೊಡುತ್ತದೆ" ಎಂದು ತಿಳಿಸಿದ್ದಾರೆ. ಅಂದರೆ ಇವರ ಪ್ರಕಾರ ಮೌಖಿಕ ಪ್ರಕಾರವೇ ಜಾನಪದದ ಜೀವಾಳ ಎಂಬ ನಿಲುವನ್ನು ತಾಳುವುದು ಕಂಡುಬರುತ್ತದೆ.

ಜಾನಪದವನ್ನು ಕುರಿತು ಭಾರತೀಯ ಚಿಂತಕರು ಹಾಗೂ ವಿದ್ವಾಂಸರು ತಾಳಿರುವ ನಿಲುವುಗಳು ಈ ಮುಂದಿನಂತಿವೆ.

೧. **ಹಾ. ಮಾ. ನಾಯಕ:** " ಜಾನಪದ ಲಿಖಿತ ದಾಖಲೆಗಿಂತ ಜನತೆಯ ಗ್ರಂಥಸ್ಥವಲ್ಲದ ಸಾಂಪ್ರದಾಯಿಕ ಮೊತ್ತ. ಸಂಪ್ರದಾಯವನ್ನು ಕುರಿತಾದ ವಿಜ್ಞಾನ ಯಾವುದೇ ಸಮಾಜದ ವಾಚಿಕ ಪರಂಪರೆಗಳ ಕಲೆ ಮತ್ತು ನಂಬಿಕೆಗಳ ಮೊತ್ತ" ಎಂಬುದಾಗಿ ಕರೆದಿದ್ದಾರೆ. ಇವರು ಸಹ ಮೌಖಿಕ ಪ್ರಧಾನ ಧಾರೆಯಲ್ಲಿ ಜಾನಪದವನ್ನು ಗುರುತಿಸಿರುವುದಾಗಿ ಕಂಡುಬರುತ್ತದೆ.

೨. **ಜಿ. ಶಂ. ಪರಮಶಿವಯ್ಯ:** "ನಾಗರಿಕತೆಗೂ ಮೂಲವಾದ ಶಿಷ್ಟ ಸಂಸ್ಕೃತಿಯಿಂದ ದೂರವಾದ ಪರಂಪರಾನುಗತವಾದ ಬೆಳವಣಿಗೆ ಪಡೆದ ಜನಸಮುದಾಯದ ವಿಶಿಷ್ಟ ಸಂಸ್ಕೃತಿಯೇ ಜಾನಪದ" ಎಂಬುದಾಗಿ ತಿಳಿಸಿದ್ದಾರೆ. ಅಂದರೆ ಇವರ ಪ್ರಕಾರ ಜಾನಪದವು ಶಿಷ್ಟ ಸಂಸ್ಕೃತಿಯಿಂದ ದೂರ ಉಳಿದು ತನ್ನ ಅನನ್ಯತೆಯನ್ನು ಕಾಪಾಡಿಕೊಂಡಿದೆ ಎಂಬುದಾಗಿ ತಮ್ಮ ನಿಲುವುಗಳನ್ನು ಎತ್ತಿಹಿಡಿದಿದ್ದಾರೆ.

೩. **ದೇ. ಜವರೇಗೌಡ:** "ಬಾಲ ಬಾಯಿಯಲ್ಲಿ ಬ್ರಹ್ಮಾಂಡವು ಅಡಗಿರುವಂತೆ ಜಾನಪದದಲ್ಲಿ ಎಲ್ಲವೂ ಅಡಗಿದೆ" ಎಂಬುದಾಗಿ ತಿಳಿಸಿದ್ದಾರೆ. ಅಂದರೆ ಜಾನಪದವನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಅಕ್ಷರ ವಂಚಿತ ಜನಾಂಗವು ಮುಗ್ಧ ನೆಲೆಯಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೆ ಈ ಪ್ರಕಾರವನ್ನು,

ಬೆಳೆಸಿಕೊಂಡು ಬಂದಿದ್ದಾರೆ. ಹಾಗೆಯೇ ಈ ಸಾಹಿತ್ಯವು ಸಕಲವನ್ನು ಒಳಗೊಂಡಿದೆ ಎಂಬುದಾಗಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ.

೪. **ಬಸವರಾಜ ಪೋಲಿಸ್ ಪಾಟೀಲ:** "ಜಗತ್ತಿನಲ್ಲಿ ಇರುವುದೆಲ್ಲವೂ ಜನಪದದಲ್ಲಿದೆ. ಜನಪದವು ಎಲ್ಲ ವಿಜ್ಞಾನಗಳ ವಿಜ್ಞಾನವಾಗಿದೆ" ಎಂಬುದಾಗಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಎಂದರೆ ಜಗತ್ತಿನ ಎಲ್ಲಾ ಆವಿಷ್ಕಾರಗಳ ಮೂಲವು ಜನಪದದಲ್ಲಿ ಅಡಕವಾಗಿದೆ. ಇದರ ಮುಂದುವರಿದ ರೂಪವೇ ಆಧುನಿಕ ವಿಜ್ಞಾನ ಎಂಬುದು ಇವರ ನಿಲುವಾಗಿದೆ.

ಹೀಗೆ ಹಲವಾರು ವಿದ್ವಾಂಸರು ಜಾನಪದದ ಬಗೆಗೆ ತಮ್ಮದೇ ಆದ ನಿಲುವುಗಳನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ

ಜಾನಪದ ಹಾಡುಗಳ ಉಗಮವನ್ನು ನೋಡುವುದಾದರೆ ಇದು ಮೌಖಿಕ ಪ್ರಕಾರವಾಗಿದ್ದು ಬಾಯಿಯಿಂದ ಬಾಯಿಗೆ ಹರಿದುಬಂದ ಮಾಧ್ಯಮವಾಗಿದೆ. "ಜಾನಪದ ಸಾಹಿತ್ಯ ಸಮಷ್ಟಿ ಭಾವನೆಯ ಪ್ರತೀಕವೆನಿಸಿದರೂ ಮೂಲತಃ ಅದರ ಉಗಮವೂ ವ್ಯಕ್ತಿಗತವಾದದ್ದೇ. ಯಾವುದೋ ಸನ್ನಿವೇಶದಲ್ಲಿ ಯಾವನೊ ಒಬ್ಬ ತನ್ನ ಅನುಭವಕ್ಕೆ ಬಂದ ಭಾವನೆಯನ್ನು ಧ್ವನಿ ಮಾಧ್ಯಮದ ಮೂಲಕ ಪ್ರಕಟಿಸಿ, ಅದು ಕೇಳಿದವರ ಮೆಚ್ಚುಗೆಗೆ ಪಾತ್ರವಾದಾಗ ಹಲವರ ಸೊತ್ತಾಗಿ ಹಲವರು ಆಗಲೇ ಅದಕ್ಕೆ ದನಿ ಕೂಡಿಸಬಹುದು, ತಮ್ಮದಾಗಿ ಸೊಲ್ಲುಗಳನ್ನು ಸೇರಿಸಬಹುದು. ಇದು ಬಾಯಿಂದ ಬಾಯಿಗೆ ಹರಿದು ಹರಡಿ ಹೋಗುತ್ತಾ ಹೆಚ್ಚು ಪ್ರತಿಭಾವಂತರ ಬಾಯಿಂದ ಹೊರ ಬರುವಾಗ ಸಂಸ್ಕಾರ ಹೊಂದಿ, ಕಡೆಗೆ ಉತ್ತಮ ರೂಪ ಪಡೆದು ಮಾದರಿಯಾಗಿ ನಿಲ್ಲುತ್ತದೆ. ಜಾನಪದ ಸಾಹಿತ್ಯ ರೂಪಗೊಳ್ಳುವುದೇ ಹೀಗೆ. ಒಂದು ಸೊಲ್ಲೊ, ಒಂದು ನುಡಿಯೊ, ಒಂದು ಪದಗುಚ್ಚವೊ ಒಂದು ಕಥಾ ಬೀಜವೊ ನಾಲಗೆಯಿಂದ ನಾಲಗೆಗೆ ಹರಿದಾಡಿದಾಗ ಹಲವು ರೂಪಗಳನ್ನು ಪಡೆಯಬಹುದು." (ವಿ. ಸೀತಾರಾಮಯ್ಯ, ಜನಪದ ಸಾಹಿತ್ಯ, ಪು-೭೮) ಹೀಗೆ ಜನ್ಮತಳೆದ ಸಾಹಿತ್ಯ ಮೌಖಿಕವಾಗಿ ವಿವಿಧ ನೆಲೆಯಲ್ಲಿ ಬೆಳೆದುಬಂದಿದೆ. ಈ ಜಾನಪದ ಹಾಡುಗಳು ಸಮಷ್ಟಿಯ ನೆಲೆಯಲ್ಲಿ ಜನ ಜೀವನದ ಆಗು ಹೋಗುಗಳನ್ನು ಸೆರೆಹಿಡಿಯುವ ಪ್ರಮುಖ ನೆಲೆಯಾಗಿ ಬೆಳೆದುಬಂದಿವೆ. ಈ ಜಾನಪದ ಹಾಡುಗಳಲ್ಲಿ ಅಡಗಿರುವ ಸತ್ವವೇ ಇದರ ಬೆಳವಣಿಗೆಗೆ ಮೂಲ ಕಾರಣವಾಗಿದೆ.

ಜಾನಪದ ಸಾಹಿತ್ಯಕ್ಕೆ ತನ್ನದೇ ಆದ ಕೆಲವು ಧಾಟಿ, ರೀತಿ, ನೀತಿಗಳಿವೆ. ಇವುಗಳ ಅಡಿಯಲ್ಲಿಯೇ ಈ ಪ್ರಕಾರವು ಬೆಳೆದು ಬಂದಿದೆ. "ಜನಪದ ಸಾಹಿತ್ಯ ನೋಡಿ ಕಲಿಯುವಂಥದ್ದಲ್ಲ, ಕೇಳಿಯೇ ಕಲಿಯುವಂಥದ್ದು. ತೊಂಡಿತನ ಇದರ ಜೀವ. ಬರವಣಿಗೆಯ ಸ್ಪರ್ಶವಾದರೆ ಸಾಕು ಇದರ ಪರಂಪರೆ ಸತ್ತೇ ಹೋಗುವಂಥದ್ದು. ಒಬ್ಬ ಜಾನಪದ ಕಲಾವಿದ ಹಾಡುತ್ತಿದ್ದಾನೆಂದರೆ ಏಕಕಾಲಕ್ಕೆ ಆತ ಎರಡು ಕೆಲಸ ಮಾಡುತ್ತಿರುತ್ತಾನೆ. ಒಂದು: ಹಾಡುತ್ತ ಹಾಡಿನ ಪರಂಪರೆಯನ್ನು ಉಳಿಸುವ ಕೆಲಸ. ಎರಡು: ಅದೇ ಕಾಲಕ್ಕೆ ಹಿಂದಿರದ ಹೊಸ ಅಂಶಗಳನ್ನು ಸೃಷ್ಟಿಸುವ ಕೆಲಸ. ಈ ಮಾತನ್ನು ಖಾತ್ರಿ ಮಾಡಿಕೊಳ್ಳಬೇಕಾದರೆ ಆತ ಹಾಡುವುದನ್ನು ಪ್ರತ್ಯೇಕವಾಗಿಯೇ ಕೇಳಬೇಕು. ಜನಪದ ಹಾಡು ಹಾಡುವುದಕ್ಕಾಗಿ ರಚಿಸಿದ ಗೀತೆಗಳಲ್ಲ. ಹಾಡುವಾಗಲೇ ಸೃಷ್ಟಿಸಿಕೊಳ್ಳುವ ಹಾಡು." (ವಿ. ಸೀತಾರಾಮಯ್ಯ, ಜನಪದ ಸಾಹಿತ್ಯ, ಪು-೦೫) ಹೀಗಾಗಿ ಈ ಹಾಡುಗಳು ತನ್ನದೇ ಆದ ವಿಶಿಷ್ಟ ಗುಣಗಳನ್ನು ಒಳಗೊಂಡಿವೆ. ಅದೆ ಅನಿವಾರ್ಯ ಕಾರಣ ಹಾಗೂ ಇವುಗಳ ಪರಂಪರೆ ಅವನತಿಯತ್ತ ಸಾಗುತ್ತಿರುವ ಕಾರಣದಿಂದಾಗಿ ಇಂತಹ ಹಾಡು ಪರಂಪರೆಯನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೇವೆ.

ಮಹಿಳಾ ಜಾನಪದವನ್ನು ಕುರಿತು ನೋಡುವುದಾರೆ, ಜಾನಪದವನ್ನು ಪಾರಂಪರಿಕ ನೆಲೆಯಲ್ಲಿ ಬೆಳೆಸಿಕೊಂಡು ಬಂದಿರುವ ಕೀರ್ತಿ ನಮ್ಮ ಮಹಿಳೆಯರಿಗೆ ಸಲ್ಲುತ್ತದೆ. ಮಹಿಳೆಯರೇ ತಮ್ಮ ಬದುಕಿನ ನೋವು, ನಲಿವುಗಳು ಹಾಗೂ ತಾವು ಕಂಡುಂಡ ಸಾಮಾಜಿಕ ಸನ್ನಿವೇಶಗಳನ್ನು ತಮ್ಮ ಹಾಡುಗಳಲ್ಲಿ ಜೀವ ತುಂಬಿ ಸೆರೆಹಿಡಿದಿದ್ದಾರೆ. ಹೆಣ್ಣು ಶಕ್ತಿಯ ಸಂಕೇತವಾಗಿದ್ದು, ಸಮಾಜವನ್ನು ಹಾಗೂ ತನ್ನ ಕುಟುಂಬವನ್ನು ಸಮರ್ಥವಾಗಿ ನಿಭಾಯಿಸುವ ಶಕ್ತಿ ಹಾಗೂ ಜಾಣ್ಮೆಯನ್ನು ಹೊಂದಿದವಳಾಗಿದ್ದಾಳೆ.

"ಇತಿಹಾಸದ ಉದ್ದಕ್ಕೂ ಜನಸಂಖ್ಯೆಯ ಅರ್ಧದಷ್ಟು ಹೆಂಗಸರು ಇದ್ದಾರೆ. ಆದರೂ ತತ್ವಜ್ಞಾನ, ಸಾಹಿತ್ಯ, ಕಲೆ, ಸಾಮಾಜಿಕ ಹಾಗೂ ಸಾರ್ವಕಾಲಿಕ ಮೌಲ್ಯಗಳು- ಎಲ್ಲವೂ ಗಂಡಸಿನ ಮೇಲುಗೈತನಕ್ಕೆ ಸಾಕ್ಷಿಯಾಗಿವೆ. ಹೆಣ್ಣು ಈ ಬಗ್ಗೆ ಏನು ಹೇಳುತ್ತದೆ ಎಂಬುದನ್ನು ಕೇಳಿ ಪಡೆಯುವತನಕ ಈ ಭಾಗಗಳೆಲ್ಲ ಏಕಮುಖ ಹಾಗೂ ಅಪೂರ್ಣ. ಗಂಡಸಿನ ಸುಲಿಗೆಯ ಸಾಧನವಾಗಿ ಬಂದ ಹೆಣ್ಣು, ಗಂಡು ಹೇಳುವ ಮೌಲ್ಯಗಳನ್ನೇ, ವಿವೇಚನೆಯಿಲ್ಲದೆ ಗಿಳಿಪಾಠವನ್ನಾಗಿ ಒಪ್ಪಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ."[೧] ಇದಕ್ಕೆ ಆಯಾ ಕಾಲದಲ್ಲಿ ಮಹಿಳೆಯರ ಮೇಲೆ ಸಾಂಪ್ರದಾಯಿಕವಾಗಿ ಹೇರಿರುವ ನಿರ್ಬಂಧಗಳು ಪ್ರಮುಖವಾಗಿವೆ. ಹೀಗೆ ಭಾರತೀಯ ಚರಿತ್ರೆಯುದ್ದಕ್ಕೂ ಒಂದೇ ಸಮನೆ ಮೂಲೆಗುಂಪಾಗಿದ್ದ ಮಹಿಳೆಯರು ಜಾನಪದದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿರುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ.

ಜಾನಪದ ಸಾಹಿತ್ಯಕ್ಕೆ ಮಹಿಳೆಯರು ತನ್ನದೆ ಆದ ಕಾಣಿಕೆಯನ್ನು ನೀಡಿರುವುದು ನಮಗೆ ಕಂಡುಬರುತ್ತದೆ. ಜಾನಪದ ಹಾಡುಗಳನ್ನು ಕುರಿತಾದ ಸಾಮಾನ್ಯ ಅರ್ಥವನ್ನು ಗಮನಿಸುವುದಾದರೆ ಇದು ಜನರಾಡುವ ಲಯಬದ್ಧ ಮತ್ತು ಪ್ರಾಸ ಬದ್ಧವಾದ ಮಾತುಗಳೇ ಜನಪದ ನೆಲೆಯಲ್ಲಿ ಹಾಡುಗಳಾಗಿ, ಪದಗಳಾಗಿ ಬೆಳೆದುಬಂದಿವೆ. ಈ ಜಾನಪದ ಹಾಡು ಅಥವಾ ಪದಗಳ ಉಗಮಕ್ಕೆ ಮೂಲ ಕಾರಣ ಹೆಣ್ಣು ಎಂಬುದರಲ್ಲಿ ಯಾವುದೇ ಅತಿಶಯೋಕ್ತಿ ಇರಲಾರದು. ಮೂಲತಃ ಹೆಣ್ಣು ಮೃದು ಸ್ವಭಾವದವಳಾಗಿದ್ದು, ಸಹನೆ ಮತ್ತು ಸಂಯಮಕ್ಕೆ ಹೆಸರಾದವಳು. ಈ ಮೃದು ಧೋರಣೆಯಿಂದ ಒಡಮೂಡಿದ ಪ್ರಾಸಬದ್ಧವಾದ ಮಾತುಗಳೇ ಜಾನಪದ ಹಾಡುಗಳಾಗಿ ಬೆಳೆದುಬಂದಿರುವ ಸಾಧ್ಯತೆಗಳಿವೆ. ಹೀಗಾಗಿ ಜಾನಪದ ಹಾಡುಗಳಿಗೂ ಮತ್ತು ಹೆಣ್ಣಿಗೂ ನಿಕಟವಾದ ಬಾಂಧವ್ಯವು ಎದ್ದು ಕಾಣಿಸುತ್ತದೆ.

ಜಾನಪದ ಹಾಡುಗಳನ್ನು ಕುರಿತು ಹೇಳುವುದಾದರೆ, "ಸಾಮಾನ್ಯರಿಗೆ ಸಾಧ್ಯವಾಗುವ ಸರಳವಾದ ಭಾಷೆಯಲ್ಲಿ, ಯಾವುದೇ ವಿಶೇಷ ತಯಾರಿಯಿಲ್ಲದೆ ವಚನಗಳಂತಹ ಬಿಡಿ ರಚನೆಗಳನ್ನು, ಆಶುಕವಿತ್ವದ ರೀತಿಯಲ್ಲಿ ಮೌಖಿಕವಾಗಿ ರಚನೆಗೈಯಲು ಸಾಧ್ಯವೆಂಬ ತಿಳುವಳಿಕೆಯೇ ಇಂತಹ ಆಯ್ಕೆಗೆ ದಾರಿ ಮಾಡಿಕೊಟ್ಟಿರಬೇಕೆಂದೆನಿಸುತ್ತದೆ. ಕನಿಷ್ಟ ಶಿಕ್ಷಣ ಇಲ್ಲದವನೂ ಇಂತಹ ಬಿಡಿ ರಚನೆಗಳನ್ನು ಮೌಖಿಕವಾಗಿ ಸೃಷ್ಟಿಸಬಹುದು ಮತ್ತು ಅವುಗಳನ್ನು ಸ್ಮೃತಿಯಲ್ಲಿ ಸರಳವಾಗಿ ಉಳಿಸಿಕೊಳ್ಳಲೂಬಹುದು ಎಂಬ ಅರಿವೇ ವಚನದಂತಹ ಕಿರುರಚನೆಗಳ ಆಯ್ಕೆಯ ಹಿಂದಿನ ಉದ್ದೇಶವಾಗಿರಬೇಕೆನಿಸುತ್ತದೆ. ವಚನ ಮಾದರಿಗಳಾದ- ಒಗಟು, ಒಡಪು, ಶಿಶುಪ್ರಾಸ, ಆಣಿಪೀಣಿ, ತ್ರಿಪದಿ, ದ್ವಿಪದಿ, ಚೌಪದಿ, ಷಟ್ಪದಿ ಈ ಬಗೆಯ ಅನೇಕ ರೂಪಗಳು ಕನ್ನಡ ಪ್ರದೇಶ, ಭಾಷೆ, ಜನಗಳಲ್ಲಿ- ಮೌಖಿಕ ಪರಂಪರೆಯಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದ್ದು, ಅವು ಜನಸಾಮಾನ್ಯರ ಸಂಸ್ಕೃತಿಯನ್ನು ಪ್ರತಿನಿಧಿಸುವ ಉದಾಹರಣೆಗಳಾಗಿ ಶರಣರ ಮುಂದಿದ್ದವು."[೨] ಹೀಗೆ ಜನಪದ ಹಾಡುಗಳು ಮಾತಿನ ರೂಪಗಳ ಮುಂದುವರಿದ ನೆಲೆಯಲ್ಲಿ ತಾತ್ವಿಕ ಧೋರಣೆಗಳನ್ನು ಹಾಡಿನ ರೂಪದಲ್ಲಿ ರಾಗಬದ್ಧವಾಗಿ ವ್ಯಕ್ತವಾಗಿ, ವಿವಿಧ ನೆಲೆಯಲ್ಲಿ ಬೆಳೆದುಬಂದಿರುವುದು ಕಂಡುಬರುತ್ತದೆ.

ಜನಪದ ಸಾಹಿತ್ಯ ಸಂಶೋಧನೆಯ ಅಲೆದಾಟದಲ್ಲಿ ಹಲಕೆಲವು ಮಹಿಳೆಯರ ಹಾಡುಗಳು ನಿದರ್ಶನಕ್ಕೆ ಬರಲು ಅವುಗಳನ್ನು ಸಂಕಲಿಸಲು ಪ್ರಯತ್ನ ಮಾಡಲಾಗಿದೆ. ಇಂಥ ಸಂಕಲಿತ ಮಹಿಳಾ ಹಾಡುಗಳು ಅನೇಕ ರಾಗ ರಾಗಿಣಿಗಳನ್ನೊಳಗೊಂಡು ಹಾಡಲು ಸರಾಗವಾಗಿವೆ. ಕೇಳಲು ಇಂಪಿನೊಡನೆ ಬಲು ಮನರಂಜಕವಾಗಿವೆ. ಜಾನಪದ ಮಹಿಳೆಯರ (ಹಳ್ಳಿಗರ ಹಾಡು) ಹಾಡುಗಳು ವೈಶಿಷ್ಟ್ಯ ವೈವಿಧ್ಯ-ಔಚಿತ್ಯ ಪೂರಕವಾಗಿವೆ. ಅವುಗಳಲ್ಲಿಯ ವಿಷಯ ಒಂದಲ್ಲ, ಎರಡಲ್ಲ ಇಡೀ ಪ್ರಪಂಚ ದರ್ಶನದ ಕಥಾ ಸಾರವಾಗಿದೆ. ಅವುಗಳಲ್ಲಿಯ ಕಾವ್ಯ "ಕಿರಿದರೊಳ್ ಪಿರಿದರ್ಥಮಂ" ಪೇಳದ ಜಾಣ್ಮೆಯನ್ನು ಒಳಗೊಂಡಿವೆ. ನಿರರ್ಗಳವಾದ ಸರಳ ಶೈಲಿ, ಶಬ್ದದ ಹಿತಮಿತ ಬಳಕೆಯಿಂದಾಗಿ ಇವು ಅತ್ಯಂತ ಮಹತ್ವಪೂರ್ಣವಾಗಿವೆ.

ಶ್ರಾಸ್ತ್ರೀಯವಾದ ತಳಹದಿಯ ಮೇಲೆ ಜಾನಪದ ಸಂಗ್ರಹ, ಸಂಶೋಧನೆಗಳು ನೆಲೆಗೊಳ್ಳಬೇಕಾಗಿದೆ. ಸಂಸ್ಕೃತಿಯ ತಾಯಿ ಬೇರಾದ ಜಾನಪದದ ಬಗೆಗೆ ಭಾರತದಲ್ಲಿ ನಿರ್ಲಕ್ಷವೇ

ಹೆಚ್ಚಾಗಿದ್ದು, ಈವರೆಗೆ ನಡೆದಿರುವ ಸಂಗ್ರಹ ಕಾರ್ಯ ತುಂಬ ಅಸಮಗ್ರ ಎನಿಸಿದೆ. ಉತ್ತರ ಭಾರತದ ಅನೇಕ ರಾಜ್ಯಗಳಲ್ಲಿ ಕೆಲವು ಜಾನಪದ ಪ್ರಕಾರಗಳಿಗೆ ಸಂಬಂಧಿಸಿದಂತೆ ಸಂಶೋಧನೆಗಳು ನಡೆದಿದ್ದರೂ ಸಮಗ್ರ ಜಾನಪದದ ಬಗೆಗೆ ವ್ಯಾಪಕವಾದ ಕಾರ್ಯ ಇನ್ನೂ ಆಗಬೇಕಾಗಿದೆ. "ಭಾರತ ಜಾನಪದದ ತೌರು" ಎಂಬ ಅಂಶವನ್ನು ಪಾಶ್ಚಾತ್ಯರು ಮೊದಲು ಭಾರತೀಯರಿಗೆ ಮನವರಿಕೆ ಮಾಡಿದುದಲ್ಲದೇ, ಆ ಸತ್ಯವನ್ನು ಜನತೆಯ ಮುಂದೆ ಬಿಚ್ಚಿಟ್ಟಿದ್ದಾರೆ.[೩]

ಕನ್ನಡದಲ್ಲಿ ಜನಪದ ಗೀತೆ (folk song) ಯನ್ನು ಜನಪದಕಾವ್ಯ (folk poetry) ಹಳ್ಳಿಪದ, ಹಳ್ಳಿಹಾಡು, ನಾಡಗೀತೆ, ಲೋಕಗೀತೆ, ಪಾಮರರ ಪದ, ಪಾಮರರ ಹಾಡು ಮೊದಲಾದ ಹೆಸರುಗಳಿಂದ ಕರೆದಿರುವುದುಂಟು. ಹೆಸರೇ ಸೂಚಿಸುವಂತೆ ಇದು ಶಿಷ್ಟಗೀತೆಗಿಂತ ಭಿನ್ನವಾದದ್ದು, ಜನಪದ ಗೀತೆ, ಜನಪದ ಸಂಸ್ಕೃತಿ (folk culture) ಯ ಒಂದು ಅಂಗ. ಜಾನಪದದ ಇತರ ಪ್ರಕಾರಗಳಂತೆ ಇದೂ ಕೂಡ ವಾಕ್ ಪರಂಪರೆ ಅಥವಾ ಮೌಖಿಕ ಪರಂಪರೆಯಿಂದ ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದಿದೆ. ಕಂಠಸ್ಥ ಪರಂಪರೆಯೇ ಇದರ ಜೀವಾಳ.[೪]

"ಜನಪದ ಕವಿಗಳ ಕಾವ್ಯಪ್ರತಿಭೆಗೆ ಅವರ ಜೀವನಾನುಭವವೇ ಸ್ಫೂರ್ತಿ ಚಿಲುಮೆ. ಅವರು ನೋಡಿಲ್ಲದ, ಕೇಳಿಲ್ಲದ, ಅನುಭವಿಸಿಲ್ಲದ ಯಾವುದನ್ನೂ ಕುರಿತು ಹಾಡುವವರಲ್ಲ. ಕೃತಕತೆ ಅವರಿಗೆ ಹೊರಗು. ಅವರ ಪ್ರತಿಯೊಂದು ಮಾತು ಅವರದೇ ಹೃದಯದ ಜೀವಂತ ಮಿಡಿತವಾಗಿದೆ. ಜನಪದ ಕವಿಗಳು ಸ್ವಯಂಪ್ರಭೆ, ಪ್ರತಿಭೆಯುಳ್ಳವರು. ಜನಪದ ಕಾವ್ಯಗಳಲ್ಲಿ ಜನಪದ ಜೀವನವನ್ನು ಜೀವನದ ಉದಾತ್ತತೆಯನ್ನು ವಿಶಿಷ್ಟ ಜೀವನ ದರ್ಶನವನ್ನು ಸಾಂಸ್ಕೃತಿಕ ವೈಭವವನ್ನು ಕಾವ್ಯದ ಸಹಜ ಪ್ರತಿಭಾ ಪ್ರಖರತೆಯನ್ನು ಕಾಣಬಹುದು. ಜನಪದ ಕವಿಗಳು ಸಹಜ ಕವಿಗಳು: ಜನಪದ ಕಾವ್ಯ ಸಹಜಕಾವ್ಯ: ಜನಪದ ಕಾವ್ಯ ಪ್ರತಿಭೆ ಸಹಜ ಕಾವ್ಯ ಪ್ರತಿಭೆ: ಜನಪದ ಗೀತೆಗಳ ಸೊಗಸನ್ನು ಹಾಡಿ ಹರಸದ, ಹೊಗಳಿ ಧನ್ಯರಾಗದ ಸಹೃದಯರಿಲ್ಲ."[೫] ಜನಪದ ಗೀತೆಗಳು ಸರಳವಾದ ರಚನೆ, ಲಲಿತವಾದ ಶೈಲಿ, ಬಹುತೇಕ ತ್ರಿಪದಿ ಛಂದಸ್ಸಿನಲ್ಲಿ ಹುಟ್ಟಿರುತ್ತವೆ. ಕಾಯಕದ ಜೊತೆಯಲ್ಲಿ ಸೃಷ್ಟಿಯಾಗಿರುವ ಹಾಡುಗಳೇ ಹೆಚ್ಚು. ಈ ಗೀತೆಗಳು ಸರಳ ಹಾಗೂ ವಸ್ತುನಿಷ್ಠವಾದದ್ದು. ಇಲ್ಲಿ ನೇರವಾದ ಅನುಭವಗಳೇ ಇದರ ವೈಶಿಷ್ಟ್ಯ. ಮನೋರಂಜನೆಗಾಗಿ ಸೃಷ್ಟಿಯಾಗುವ ಜನಪದ ಗೀತೆಗಳಿಗೂ ಕೊರತೆಯಿಲ್ಲ. ಇವುಗಳು ವಸ್ತು ನಿಷ್ಠವೂ ಹೌದು, ಸಾರ್ವತ್ರಿಕವೂ ಹೌದು. ಬಹುತೇಕ ಜನಪದ ಗೀತೆಗಳು ಕ್ರಿಯಾತ್ಮಕ (functional) ವಾದುವು. ನಿರ್ದಿಷ್ಟ ಉದ್ದೇಶಗಳಿಗಾಗಿ ಹಾಡುವಂಥವುಗಳು.[೬]

ಬಾಯಿ ಮಾತಿನ ಬಳಕೆಯಲ್ಲಿದ್ದ ಜನಸಾಮಾನ್ಯರ ನುಡಿಗಳನ್ನು ಬಹುಕಾಲದ ಹಿಂದಿನಿಂದಲೂ ರಚನೆಯಾಗುತ್ತ ಬಂದ ಸಾಮಾನ್ಯರ ಈ ನುಡಿಮುತ್ತುಗಳನ್ನು ಅಂದಂದಿಗೇನೇ ಬರೆದಿಡುತ್ತ, ಸಂಗ್ರಹಿಸುತ್ತ ಬಂದಿದ್ದರೆ ಈ ಕನ್ನಡ ಸಾಹಿತ್ಯೇತಿಹಾಸದ ಚರಿತ್ರೆಯೇ ಬದಲಾಗುತ್ತಿತ್ತು ಎಂದು ನೃಪತುಂಗನು ಜನಪದ ಸಾಹಿತ್ಯದ ಕುರಿತು ಸಂತೋಷದಿಂದ ನುಡಿದಿದ್ದಾನೆ. ಇದು ಜಾನಪದದ ಸತ್ವವನ್ನು ಎತ್ತಿಹಿಡಿಯುತ್ತದೆ. ಆದರೆ ಪಾಮರ ಸಾಹಿತ್ಯ ರಾಜಕಾರಣದಿಂದಾಗಿ ನಮ್ಮ ಜನಪದ ಸಾಹಿತ್ಯವು ಮೂಲೆಗುಂಪಾಗಿದೆ. ಆದರೂ ಜನಮಾನಸದಲ್ಲಿ ಇದು ಅಚ್ಚಳಿಯದೆ ಉಳಿದುಕೊಂಡು ಬಂದಿದೆ.

ಪ್ರಾಚೀನ ಕಾಲದ ಹಲವಾರು ಜನಪದರ ನುಡಿಗಳನ್ನು, ಕಥೆಗಳನ್ನು ಕೆಲ ಮಾರ್ಪಾಡುಗಳೊಂದಿಗೆ, ತಮ್ಮ ತಮ್ಮ ಕಾವ್ಯಗಳಲ್ಲಿ ಉಪಯೋಗಿಸಿದ್ದಾರೆ. ಸಾಮಾನ್ಯರಿಗಿರುವ ಶ್ರದ್ಧೆ, ಪದ್ಧತಿ, ಮೂಢನಂಬಿಕೆ, ಗೀತೆ, ಗಾದೆ, ಒಗಟು, ಪುರಾಣ, ದಂತಕಥೆ, ಧಾರ್ಮಿಕ ವಿಧಿ, ಮಾಟಮಂತ್ರ ಮೊದಲಾದ ತೊಂಡಿ ವಿಷಯಗಳನ್ನು ಒಳಗೊಂಡದ್ದು ಜನಪದ ಎನಿಸಿದೆ. ವಾಸ್ತವಿಕ ಜಗತ್ತಿನ ಸಾರ್ವತ್ರಿಕ ಅನುಭವದ ಮುದ್ರೆ ಒದ್ದಿರುವ ಜಾನಪದ ವಿಜ್ಞಾನ ವಿಶ್ವವ್ಯಾಪಿಯಾದುದಾಗಿದೆ. ಇದರ

ಒಂದು ಅಂಗವೇ ಜನಪದ ಸಾಹಿತ್ಯ (folk literature) ಕಥೆ, ಹಾಡು, ಒಗಟು, ಇವು ಈ ಸಾಹಿತ್ಯದ ಪ್ರಮುಖ ಪ್ರಕಾರಗಳು. ನಾಗರಿಕತೆಯ ಗಾಳಿ ಸೋಂಕದೇ ಇದ್ದ ಹಳೆಯ ಸಂಪ್ರದಾಯಗಳ ಸುತ್ತ ಪರಂಪರಾಗತವಾಗಿ ಈ ಸಾಹಿತ್ಯ ಯಾರು ಯಾರಿಂದಲೋ ಹುಟ್ಟಿಕೊಂಡು ಬಂದಿರುತ್ತದೆ. ಹಬ್ಬ–ಹುಣ್ಣಿಮೆ, ತಿಥಿ–ಮತಿ, ಜಾತ್ರೆ, ಉತ್ಸವಗಳಲ್ಲಿ ಮಹಿಳೆಯರು ಹಾಡು ಹಾಡುತ್ತಾರೆ. ಸಮಯ ಸಿಕ್ಕಾಗಲೆಲ್ಲ ಒಗಟು, ಒಡಪುಗಳು ಹೇಳುತ್ತಾರೆ. ಹೀಗೆ ಜಾನಪದವು ವಿವಿಧ ಸನ್ನಿವೇಶದಲ್ಲಿ ರಾಜಕಿಯ ಹೊಡೆತಗಳನ್ನು ಸಹಿಸಿಕೊಂಡು ತನ್ನ ಸತ್ವ ಹಾಗೂ ಶಕ್ತಿಯಿಂದಾಗಿ ಇಂದಿಗೂ ಜೀವಂತಿಕೆಯನ್ನು ಪಡೆದುಕೊಂಡಿದೆ.

೨.೩ ಜನಪದ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ

ಜಾನಪದ ಮೂಲತಃವಾಗಿ ಮಹಿಳೆಯರಿಂದ ರೂಪಗೊಂಡ ಪ್ರಕಾರವೇ ಆಗಿದೆ. ಭಾರತಕ್ಕೆ ವೈದಿಕತೆಯು ಆಕ್ರಮಣ ಮಾಡುವ ಪೂರ್ವದಲ್ಲಿ ಇಲ್ಲಿ ಮಾತೃ ಸಂಸ್ಕೃತಿಯು ಪ್ರಧಾನ ನೆಲೆಯಿಂದ ಕೂಡಿತ್ತು. ಇಲ್ಲಿ ಮಹಿಳೆಯೂ ಕೂಡ ಪುರುಷನಂತೆ ತನ್ನ ಅಭಿವ್ಯಕ್ತಿ ಸ್ವತಂತ್ರವನ್ನು ಹೊಂದಿದ್ದಳು. ಇಂತಹ ಸಂದರ್ಭದಲ್ಲಿ ಜಾನಪದಕ್ಕೆ ಬುನಾದಿಯನ್ನು ರೂಪಿಸಿದವಳು ಮಹಿಳೆಯೇ ಆಗಿರುತ್ತಾಳೆ. "ಜಾನಪದದ ಅನೇಕಾನೇಕ ಪದರುಗಳು ಅತ್ಯಂತ ನೂತನ ಸಂಗತಿಗಳನ್ನು ಹೊರಗೆ ಹಾಕುತ್ತವೆ: ತಾಯಿಯ ಹೆಗ್ಗಳಿಕೆಯನ್ನು ಒಪ್ಪುವ ಪದ್ಧತಿ, ಫಲಸಮೃದ್ಧಿ, ದೇವತೆಯ ಆರಾಧನೆ, ಬೆತ್ತಲೆ ಹೆಣ್ಣು ಪೂಜಿಸುವಿಕೆ– ಮೊದಲಾದ ಪದ್ದತಿಗಳಿವೆ. ಗಂಡನನ್ನು ಕಳೆದುಕೊಂಡ ಹೆಣ್ಣು ಆತನ ಅಣ್ಣ ಅಥವಾ ತಮ್ಮಂದಿರ ಹೆಂಡತಿಯಾಗಿ ನಿರಾಳವಾಗಿ ಬಾಳುವ ಪದ್ಧತಿ ಇದೆ. ವಿಧವಾ ವಿವಾಹ ಹಾಗೂ ಒಲ್ಲದ ಗಂಡನನ್ನು ಬಿಟ್ಟು ಒಲಿದವನ ಕೂಡೆ ದಿಟ್ಟತನದಿಂದ ಬಾಳ್ವೆ ನಡೆಸುವ ಪ್ರಸಂಗಗಳಿವೆ. ಅಷ್ಟೇಕೆ ಜಾನಪದದ ಗರ್ಭದಲ್ಲಿ ಅನೇಕ ಸಂಸ್ಕೃತಿಗಳು ಅಡಗಿವೆ. ಮಾನವ ಜನಾಂಗಕ್ಕೆ ಸಂಬಂಧಿಸಿದ ಹಲವಾರು ಮೂಲ ಆಧಾರಗಳ ಗಣಿ ಇದು."[2]

ಪ್ರಪಂಚದ ಎಲ್ಲ ಸಾಹಿತ್ಯಕ್ಕೂ ಆಯಾ ಭಾಷೆಯ ಜನಪದ ಸಾಹಿತ್ಯವೇ ಮೂಲ ಎಂಬ ಅಭಿಪ್ರಾಯವಿದೆ. ಜನಪದ ಸಾಹಿತ್ಯ ಜನ ಜೀವನದಿಂದಲೇ ಹುಟ್ಟಿರುವುದರಿಂದ ಅದನ್ನು ಜೀವನ ಕಾವ್ಯವೆಂದೂ ಕರೆಯಬಹುದು. ಅದು ಜೀವನದಿಂದ ಮೂಡಿದ್ದು, ಜೀವನಕ್ಕೆ ಸೇರಿದ್ದು, ಜೀವನಕ್ಕಾಗಿಯೇ ಬದುಕಿರುವಂಥದ್ದು, ಅಲ್ಲಿಯ ಬದುಕು ಬೇರೆಯಲ್ಲ, ಕಾವ್ಯ ಬೇರೆಯಲ್ಲ. ಈ ಸಾಹಿತ್ಯವನ್ನು ಸೃಷ್ಟಿಸಿದವರು ಕಾವ್ಯಗ್ರಂಥಗಳನ್ನು ಓದಿದವರಲ್ಲ. ಜೀವನದ ಅನುಭವವನ್ನು ತೋಡಿಕೊಳ್ಳುವುದಕ್ಕೆ, ಅದರ ಒತ್ತಡವನ್ನು ಕಡಿಮೆ ಮಾಡುವುದಕ್ಕೆ ಹಾಡಿದವರು. ಈ ಹಾಡುಗಳು ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದವು. ವಾಸ್ತವವಾಗಿ ಜಾನಪದದ ಮುಖ್ಯ ಲಕ್ಷಣ ಅದರ "ತೋಂಡಿ ಪರಂಪರೆ" (oral tradition) ಜನಪದ ಸಾಹಿತ್ಯಕ್ಕೆ ಸ್ಫೂರ್ತಿ ಜನಜೀವನದಿಂದ ಬಂದದ್ದು. ಇಲ್ಲಿ ಬರುವುದು ಭಾವಗೀತೆ. ಈ ಜನ ಕಂಡದ್ದನ್ನು ಕಂಡಂತೆ ಹಾಡಿದರು. ಇಂತಹ ವಸ್ತುಯೋಗ್ಯ ಅಥವಾ ಯೋಗ್ಯವಲ್ಲದ ಎನ್ನುವುದನ್ನು ಅವರು ಲೆಕ್ಕಿಸಲಿಲ್ಲ. ಅವರು ಕಾವ್ಯವನ್ನು, ಹಾಡನ್ನು ಸೃಷ್ಟಿಸಬೆಕೆಂದು ಹೊರಟವರಲ್ಲವೆಂಬುದು ಇದಕ್ಕೆ ಮುಖ್ಯ ಕಾರಣ. ಆದ್ದರಿಂದ ಇಲ್ಲಿ ನಾವು ಕಾಣುವುದು ಅವರ ನಿತ್ಯ ಜೀವನದ ಅನುಭವ. ಇಲ್ಲಿ ಭಾವಾವೇಶ ಹೆಚ್ಚು. ಬುದ್ಧಿಯ ಅಂಶವನ್ನು ಹೆಚ್ಚಾಗಿ ಗುರುತಿಸುವುದಕ್ಕೆ ಹೋಗರು. ಜನಪದ ಸಾಹಿತ್ಯದ ಉಗಮವನ್ನು ಹುಡುಕುವುದೇ ಅಸಾಧ್ಯ. ಜನಸಾಮಾನ್ಯರ ಸಂಪ್ರದಾಯಗಳು, ಪದ್ಧತಿಗಳು, ಸಾಮಾಜಿಕ ನಿಯಮಗಳು, ಸಂಸ್ಕೃತಿ, ಸಂಸ್ಕಾರಗಳು ಜನಸಮುದಾಯದ ಪ್ರತಿಬಿಂಬವೆಂಬಂತೆ ಹಾಡಾಗಿ ಮೂಡಿ

ಬಂದಿರುವುದು. ಅವರಿಗೆ ಕಾಲಪ್ರಜ್ಞೆ ಮುಖ್ಯವಾಗಿರಲಿಲ್ಲ, ವಾಸ್ತವತೆ ಮುಖ್ಯವಾಗಿತ್ತು. ಜನಪದ ಸಾಹಿತ್ಯ ಪ್ರೌಢ ಸಾಹಿತ್ಯದಿಂದ ಭಿನ್ನವಾಗುವುದು ಇಲ್ಲಿಯೇ [೮]

ಈ ಸಂದರ್ಭದಲ್ಲಿ ಸಿ.ಪಿ.ಕೆ. ಅವರ ಮಾತನ್ನು ನೆನೆಯುವುದು ಉಚಿತ. "ಗ್ರಾಮ್ಯ ಭಾಷೆಯಲ್ಲಿ ಬರದದ್ದೆಲ್ಲ ಜನಪದ ಸಾಹಿತ್ಯದ ಲಕ್ಷಣ ಎಂಬುದು ತಪ್ಪು ತಿಳುವಳಿಕೆ. ಗ್ರಾಮ್ಯಭಾಷೆ ಜನಪದ ಸಾಹಿತ್ಯದ ಒಂದು ಲಕ್ಷಣ, ನಿಜ ಆದರೆ ಪ್ರೌಢ ಸಾಹಿತ್ಯಕ್ಕೂ ಜನಪದ ಸಾಹಿತ್ಯಕ್ಕೂ ಅದೊಂದರಿಂದಲೇ ಗೆರೆ ಎಳೆಯುವಂತಿಲ್ಲ. ಮನುಧರ್ಮದಲ್ಲಿ, ಸಂಸ್ಕೃತಿಯಲ್ಲಿ, ಪ್ರತಿಭಾ ಸ್ವರೂಪದಲ್ಲಿ ಜಾನಪದರಿಗೂ ನಾಗರಿಕರಿಗೂ ಮೂಲಭೂತವಾಗಿಯೇ ಭೇದವಿದೆ" ಎಂಬುದಾಗಿ ತಿಳಿಸಿದ್ದಾರೆ.

ಜನಪದಗೀತೆಗಳಲ್ಲಿ, ಕಾವ್ಯಗಳಲ್ಲಿ ಹೆಚ್ಚಾಗಿ ಮಿಡಿಯುತ್ತಿರುವ ನಾದ ಹೆಣ್ಣಿನದು. ಈಕೆಯೇ ಈ ಸಾಹಿತ್ಯಕ್ಕೆ ಜೀವನಾಡಿ. ಮದುವೆ, ಹಬ್ಬ, ಹುಣ್ಣಿಮೆಗಳಲ್ಲಿ, ದೈನಂದಿನ ಕೆಲಸ ಮಾಡುವಾಗ, ಬೀಸುವಾಗ, ಕುಟ್ಟುವಾಗ, ಹೊಲದಲ್ಲಿ ಉತ್ತುಬಿತ್ತು ಗೆಯ್ಮೆ ಮಾಡುವಾಗ ಹಾಡುಗಳು ಇದ್ದೇ ಇರಬೇಕು. ಇದರಲ್ಲಿ ಹೆಣ್ಣಿನದೇ ಹೆಚ್ಚುಪಾಲು. ಆಕೆಯೇ ಜನಪದ ಸಾಹಿತ್ಯದ ಉಗಮಸ್ಥಾನ ಎಂದರೂ ತಪ್ಪಾಗಲಾರದು. ಅವಳು ತಾಯಾಗಿ, ಮಗಳಾಗಿ, ಸೊಸೆಯಾಗಿ, ಅತ್ತೆಯಾಗಿ ಪಾತ್ರವಹಿಸುತ್ತಾಳೆ. ಇವು ಹೆಣ್ಣಿನ ನಾಲ್ಕು ಜನ್ಮಗಳು. ತ್ರಿಪದಿ ಛಂದಸ್ಸುಗಳಲ್ಲಿ ಹೊರಹೊಮ್ಮಿದ ಈ ಹೆಣ್ಣುಮಕ್ಕಳ ಹಾಡುಗಳಲ್ಲಿ ಕೌಟುಂಬಿಕ ಜೀವನದ ನೋವು, ನಲಿವು, ಮನಸ್ತಾಪ, ವಿರಸ, ವಿವಾಹ ಹಬ್ಬ ಹರಿದಿನಗಳು, ಲಾಲಿಹಾಡುಗಳು, ನೀತಿ, ತತ್ವಜ್ಞಾನ, ಪ್ರಾರ್ಥನೆ, ದೈವೀಶ್ರದ್ಧೆ ಮುಂತಾದ ವಾಸ್ತವಿಕ ಸನ್ನಿವೇಶಗಳನ್ನು, ಮಾನವೀಯ ಭಾವನೆಗಳನ್ನು ಸುಂದರವಾಗಿ ಸರಳವಾಗಿ ನಿರೂಪಿಸಲಾಗಿದೆ. ದು:ಖ ಸಹಿಷ್ಣುತೆ ಹೆಣ್ಣಿನ ವೈಶಿಷ್ಟ್ಯ. ಮುಂಜಾನೆ ಬೀಸುವ ಕಲ್ಲಿನ ಮುಂದೆ ಈಕೆ ತನ್ನ ಬೇಸರ, ಬಳಲಿಕೆ, ನೋವು ನಲಿವುಗಳನ್ನು ಹಾಡಿ ಹೃದಯ ಹಗುರ ಮಾಡಿಕೊಳ್ಳುತ್ತಾಳೆ. ಇಂತಹ ಹಾಡುಗಳಲ್ಲಿ ಸಂಸಾರದ ಅನುಭವಗಳೇ ಹೆಚ್ಚು. ಅವರ ತ್ರಿಪದಿಗಳಲ್ಲಿ ವಿವೇಕವೂ, ಸಂಸಾರ ಜ್ಞಾನವೂ ಕಾಣುತ್ತವೆ. ಇದು ಯಾವ ಪಂಡಿತರ ಮೆಚ್ಚುಗೆಯನ್ನು ಪಡೆಯದೇ, ಯಾವ ರಾಜರ ಆಶ್ರಯವನ್ನು ಬೇಡದೇ ತನ್ನ ಪಾಡಿಗೆ ತಾನು ಬೆಳೆದು ಬಂದ ಸಾಹಿತ್ಯ. ಇಂತಹ ಹಾಡುಗಳನ್ನು ಹಾಡುವಾಗಲೇ ತಿದ್ದುತ್ತಾರೆ, ಹೊಸದನ್ನು ಸೇರಿಸುತ್ತಾರೆ. ಇಲ್ಲಿ ಒಂದು ರೀತಿಯ ನೈಸರ್ಗಿಕವಾದ ಜಾಣ್ಮೆ ಕಂಡು ಬರುತ್ತದೆ. ಮಹಿಳೆ ತನ್ನ ಭಕ್ತಿಭಾವವನ್ನು ಮೆರೆಯುವ ಸಲುವಾಗಿ, ತನ್ನ ಕಾಯಕದ ನೆಲೆಗಳನ್ನು ಹಾಡುಕಟ್ಟಿ ಹಾಡಿದ ಬಗೆಯು ಹೀಗಿದೆ,

ಏಳುತಲೆ ಎದ್ದು ಯರ‍್ಯಾರ ನೆನೆದೇವು

ಎಳ್ಳು ಜೀರಿಗೆ ಬೆಳೆಯೋಳ। ಭೂಮಿತಾಯ

ನಾವೆಲ್ಲಾಕೆ ಮೊದಲು ನೆನೆದೇವೆ [೯]

ಬೇಂದ್ರೆಯವರು ಹೇಳುವಂತೆ "ಸ್ತ್ರೀ ಹೃದಯ ಇಲ್ಲಿ ಲಾಸ್ಯವಾಡುತ್ತದೆ" ಗರತಿಯ ಹಾಡು ಅಥವಾ ಹೆಣ್ಣು ಮಕ್ಕಳ ಹಾಡು ಸ್ತ್ರೀ ಜೀವನದ ತಿರುಳು. ಮಮತೆ, ಮಾಧುರ್ಯ, ಹೆಣ್ಣಿನ ತ್ಯಾಗಬುದ್ಧಿ ಇದರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.[೧೦] ಮನುಷ್ಯ ಸುಖಿಯಾಗಬೇಕಾದರೆ ಅವನ ಸಂಸಾರ ಜೀವನ ಚೆನ್ನಾಗಿರಬೇಕು: ಗರತಿ ತ್ಯಾಗಮಯಿ, ಪತಿಗೆ ತಕ್ಕ ಸತಿಯಾಗಿ, ಮಕ್ಕಳಿಗೆ ತಾಯಿಯಾಗಿ, ಹುಟ್ಟಿದ ಮನೆಗೆ ವರವಾಗಿ, ಕೊಟ್ಟ ಮನೆಗೆ ಹೆಸರಾಗುತ್ತಾಳೆ. ಆಕೆ ತಾವರೆಯ ಗಿಡಹುಟ್ಟಿ ದೇವರಿಗೆ ನೆರಳಾದ

ಹಾಗೆ, ಆಕೆ ಆಡಿ ಬಂದ ಮಗುವನ್ನು ಲಾಲಿಸುತ್ತಾಳೆ. ತೆಂಗಿನ ನೀರಿನಿಂದ ಅದರ ಅಂಗಾಲು ತೊಳೆಯುತ್ತಾಳೆ. ಭಾವಯ್ಯ ಕೋಪಿಸಿಕೊಂಡರೆ ಆತನ ಬಲಗಾಲು ಹಿಡಿಯುವುದಕ್ಕೆ, ಆತನ ಮಡದಿ ಮುನಿದರೆ 'ಬಾರಕ್ಕ' ಎಂದು ಕರೆಯುವುದಕ್ಕೆ, ಪತಿರಾಯ ಬೈದರೆ ಕಣ್ಣೀರು ಸುರಿಸುವುದಕ್ಕೆ, ಆತನ ತಮ್ಮ ಬೈದರೆ ಮಾಡಿಲ್ಲದ ಮಳೆಯಂತೆ ಅಳುವುದಕ್ಕೆ ಆಕೆ ಸಿದ್ಧ. ಉಳಿದವರ ಸಂತೋಷದಲ್ಲಿ ತನ್ನ ಶ್ರಮವನ್ನು ಮರೆಯುತ್ತಾಳೆ. ಅದರಲ್ಲಿಯೇ ಆಸರಿಕೆ, ಬೇಸರಿಕೆಯನ್ನು ಮರೆಯುತ್ತಾಳೆ. ಆಕೆಯ ತ್ಯಾಗಕ್ಕೆ ಇದಕ್ಕಿಂತ ಹೆಚ್ಚಿನ ಉದಾಹರಣೆ ಬೇಕಿಲ್ಲ. ಆಕೆ ಪ್ರೇಮದ ಖಣಿ, ಕೂಲಿ ಮಾಡಿ ಕೋರಿ ಕೊಟ್ಟರೂ ಆಕೆಗೆ ತನ್ನ ಪತಿ ಸರದಾರ. ಅವನು ಹೇಗಿದ್ದರೂ ಆಕೆಗೆ ಚಂದಿರನಿಗಿಂತ ಚೆಲುವ. ಅರಶಿನ ಕುಂಕುಮ, ಹೂವು ಮುತ್ತೈದೆತನ ಆಕೆಯ ಸಕಲೈಶ್ವರ್ಯ.

ಜನಪದ ಸಾಹಿತ್ಯಕ್ಕೆ ಹೆಣ್ಣಿನ ಕೊಡುಗೆ ಅಪಾರ. ಅವಳು ತ್ಯಾಗಿಯೂ ಹೌದು, ಊರ ಹಿತಕ್ಕಾಗಿ ಜನರ ಸುಖಕ್ಕಾಗಿ ಹೆಣ್ಣು ಪ್ರಾಣಾರ್ಪಣೆ ಮಾಡಿದ ಸಂದರ್ಭ ಎಷ್ಟೋ ಇವೆ. 'ಕೆರೆಗೆ ಹಾರ', 'ಗರತಿ ಗಂಗವ್ವ', ಇಂಥಹ ಎಷ್ಟೋ ಕಥನಗೀತೆಗಳನ್ನು ಕಾಣುತ್ತೇವೆ. ಹೀಗೆ ಜನಪದ ಸಾಹಿತ್ಯದಲ್ಲಿ ಹೆಣ್ಣು ಮಕ್ಕಳ ಹಾಡುಗಳು, ಒಡಪುಗಳು, ಕಥನಗೀತೆಗಳು ಹೆಚ್ಚಾಗಿ ಕಂಡುಬರುತ್ತವೆ. ಜನಪದ ಸಾಹಿತ್ಯಕ್ಕೆ ಹೆಣ್ಣಿನ ಕೊಡುಗೆಯೇ ಹೆಚ್ಚು.[೧೧]

ಹೆಣ್ಣು ಮಕ್ಕಳ ಸುಸಂಸ್ಕೃತ ಬದುಕಿನಿಂದ ಮಾನವ ಸಂಸ್ಕೃತಿ ಅರಳಿಬಂದಿದೆ. ಹೆಣ್ಣು ಮುದ್ದಿನ ಮಗಳಾಗಿ, ಆದರ್ಶಸತಿಯಾಗಿ, ವಾತ್ಸಲ್ಯದತಾಯಿಯಾಗಿ ಸಂಸ್ಕೃತಿಯ ನಿರ್ಮಾಪಕಳೆನಿಸಿದ್ದಾಳೆ. ಕುಟುಂಬದ ಸರ್ವತೋಮುಖದ ಏಳ್ಗೆಗಾಗಲಿ, ಸಮಾಜದ ಮುನ್ನಡೆಗಾಗಲಿ ಆಕೆ ಹೊಣೆಗಾರಳಾಗಿದ್ದಾಳೆ. ಕರ್ನಾಟಕದ ಉತ್ತರ ತುದಿಯಲ್ಲಿರುವ ಬೀದರ ಜಿಲ್ಲೆಯ ಜನಪದ ಸಾಹಿತ್ಯದ ಹುಲ್ಲುಗಾವಲು ಎಂಬ ಮಾತನ್ನು ಜನಪದ ಸಂಶೋಧಕರು, ವಿದ್ವಾಂಸರು ಈಗಾಗಲೇ ಒಪ್ಪಿಕೊಂಡಿದ್ದಾರೆ. ಈ ಭಾಗದಲ್ಲಿ ಜನಪದ ಸಾಹಿತ್ಯದ ಅನೇಕ ಪ್ರಕಾರಗಳನ್ನು ಈಗಾಗಲೇ ಗುರುತಿಸಲಾಗಿದೆ. "ಜಾಗತೀಕರಣದ ಬಲವಾದ ಗಾಳಿ ಬೀಸುತ್ತಿರುವ ಇಂದಿನ ಸಂದರ್ಭದಲ್ಲಿ ಇಡೀ ಜಗತ್ತು ಒಂದು ಹಳ್ಳಿಯಾಗಿ, ಜಗತ್ತಿಗೆ ಒಂದೇ ಭಾಷೆ, ಒಂದೇ ಸಂಸ್ಕೃತಿ ಎಂಬಂತೆ ಮಾರ್ಗ ಸಂಸ್ಕೃತಿಯೊಂದು ರೂಪುಗೊಳ್ಳುತ್ತದೆ. ಇದಕ್ಕೆ ಪರ್ಯಾಯವೆಂಬಂತೆ ದೇಸಿ ಸಂಸ್ಕೃತಿಯ ಉಳಿವಿಗಾಗಿ ಹಲವಾರು ಮಾರ್ಗೋಪಾಯಗಳನ್ನು ಹುಡುಕಿಕೊಳ್ಳಬೇಕಾಗುತ್ತಿದೆ." ಈ ದಿಸೆಯಲ್ಲಿ ಜನಪದ ಸಾಹಿತ್ಯ ಒಂದು ಪ್ರಮುಖ ಪರಿಹಾರ.[೧೨]

ಜನಪದ ಹಾಡುಗಳು ಒಂದು ನಾಡಿನ ಸಂಸ್ಕೃತಿಯ ವಾಹಕಗಳು. ಜನಪದರ ಬದುಕಿನ ರೀತಿ, ನೀತಿ, ನಂಬಿಕೆ, ಆದರ್ಶ, ಆಲೋಚನೆ, ಕಲ್ಪನೆ, ಶೌರ್ಯ, ಸಾಹಸ ಮುಂತಾದ ಅಂಶಗಳು ಹಾಡಾಗಿ ಹೊರಹೊಮ್ಮುತ್ತವೆ. ಜನಪದರು ತಮ್ಮ ಅನುಭವಗಳಿಗೆ ಹಾಡಿನ ರೂಪಕೊಟ್ಟು ಹಾಡಿ ತಣಿಯುತ್ತಾರೆ. ಈ ಮೂಲಕ ತಮ್ಮ ಸಂಸ್ಕೃತಿಯನ್ನು ಮೌಖಿಕವಾಗಿ ಮುಂದುವರೆಸಿಕೊಂಡು ಹೋಗುತ್ತಾರೆ ಮತ್ತು ಉಳಿಸುತ್ತಾರೆ. ಬುಲಾಯಿ ಹಾಡುಗಳಲ್ಲಿ ಈ ಅಂಶ ಸ್ಪಷ್ಟವಾಗಿ ಎದ್ದು ತೋರುತ್ತದೆ. ಇಸ್ಲಾಂ ಮತ್ತು ಮರಾಠಿ ಸಂಸ್ಕೃತಿಗಳ ಪ್ರಭಾವದಿಂದಾಗಿ, ಬೀದರ್ ಪ್ರದೇಶದ ಕನ್ನಡ ಸಂಸ್ಕೃತಿಯು ಹೇಗೆ ವಿಶಿಷ್ಟವಾದ ರೂಪವನ್ನು ಪಡೆದುಕೊಂಡು ಶ್ರೀಮಂತವಾಗಿದೆ ಎಂಬುದನ್ನು ಈ ಹಾಡುಗಳ ಮೂಲಕ ಗುರುತಿಸಿಕೊಳ್ಳಬಹುದಾಗಿದೆ.

ನಮ್ಮ ಬೀದರ್ ಜಿಲ್ಲೆಯ ಭಾಷೆ, ನೆಲ, ಜಲ, ಧರ್ಮ, ಸಾಮಾಜಿಕ ಪರಿಸರ, ಸಂಪ್ರದಾಯ ಹಾಗೂ ಸಂಸ್ಕೃತಿ ಎಲ್ಲವೂ ವೈವಿಧ್ಯಮಯ. ಇದೇ ಈ ಪ್ರದೇಶದ ಚೆಲುವು. ಇತಿಹಾಸ ಕಾಲದಿಂದ

ಈ ಮಣ್ಣಿನಲ್ಲಿ ವೈಶಿಷ್ಟ್ಯಮಯ ಸಾಂಸ್ಕೃತಿಕ ಬದುಕು ರೂಪುಗೊಂಡು ಬೆಳೆದು ಬಂದಿರುವುದು ಸ್ಪಷ್ಟ. ಸಂಸ್ಕೃತ, ಹಿಂದಿ, ಉರ್ದು, ಮರಾಠಿ, ತೆಲುಗು, ಇಂಗ್ಲೀಷ್ ಮೊದಲಾದ ಭಾಷೆಗಳ ಪ್ರಭಾವಕ್ಕೊಳಗಾಗಿರುವ ಕನ್ನಡವು ದಿನಬಳಕೆಯ ಭಾಷೆ, ಹಲವು ಮತ, ಧರ್ಮದ ಸಂಗಮದ ಸ್ಥಾನವಾಗಿ, ಪರಧರ್ಮ ಸಹಿಷ್ಣುತೆಗೆ ಹೆಸರುವಾಸಿ. ವೈವಿಧ್ಯಮಯ ಸಾಂಸ್ಕೃತಿಕ ಜನವಸತಿಯಿರುವ ಈ ಜಿಲ್ಲೆಯಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಬಿಟ್ಟರೆ ಶಾಂತಿ, ಸಹನೆಯ ಜೀವನವನ್ನು ಕಾಣಬಹುದು.

ಒಟ್ಟಾರೆ ಬೀದರ್ ಪ್ರದೇಶದ ಜನಪದ ಸಂಸ್ಕೃತಿಯ, ಸಾಮಾಜಿಕ, ಧಾರ್ಮಿಕ ಹಾಗೂ ಪೌರಾಣಿಕ ಪ್ರಜ್ಞೆಯ ಚಿತ್ರಣವನ್ನು ಇವು ನೀಡುವುದರ ಜೊತೆಗೆ ಇತಿಹಾಸದ ಪುನರ್ ರಚನೆಗೆ ಮಹತ್ವದ ಆಕರ ಸಾಮಗ್ರಿಗಳಾಗಿ ನಿಂತಿವೆ. ಭಾಷಾ ಪರಂಪರೆಯನ್ನು ಶ್ರೀಮಂತಗೊಳಿಸಿ ಅದರ ಅಧ್ಯಯನಕ್ಕೆ ಜೀವಂತವಾದ ಮೌಖಿಕ ಸಾಮಗ್ರಿಗಳಾಗಿವೆ.

ಹೆಂಗಸರು ಮಾತ್ರವೇ ಹಾಡುವ ಹಾಡುಗಳನ್ನು ವಸ್ತು ಮತ್ತು ಹಾಡಿಕೆಯ ಸಂದರ್ಭಕ್ಕನುಗುಣವಾಗಿ, ಭಾವತೀವ್ರತೆಯಿಂದ ಕೂಡಿದವುಗಳು, ಕ್ರಿಯಾತ್ಮಕವಾದವುಗಳು, ದುಡಿಮೆಯ ಜತೆಯಲ್ಲಿಯೇ ಹುಟ್ಟಿದಂಥವುಗಳು. ಸಾಮಾನ್ಯವಾಗಿ ಹೆಣ್ಣಿಗೆ ಗಂಡಿಗಿಂತ ಹೆಚ್ಚಿನ ಜವಾಬ್ದಾರಿ ಮತ್ತು ಒತ್ತಡಗಳಿರುತ್ತವೆ, ನೋವು, ಸಂಕಟಗಳಿರುತ್ತವೆ, ದು:ಖ ದುಮ್ಮಾನಗಳಿರುತ್ತವೆ. ಇವುಗಳೆಲ್ಲವನ್ನು ಹೊರಹಾಕಲು ಹೆಣ್ಣು ಸಹಜವಾಗಿ ಕಂಡುಕೊಂಡ ಮಾಧ್ಯಮ ಹಾಡುಗಾರಿಕೆ. ಸಾಮಾನ್ಯವಾಗಿ ಹೆಂಗಸರ ಹಾಡುಗಳನ್ನು ಒಬ್ಬರೇ ಹಾಡಬಹುದು ಅಥವಾ ಗುಂಪಿನಲ್ಲಿಯೂ ಹಾಡಬಹುದು. ಹೆಂಗಸರ ಬದುಕಿನ ನೋವು, ನಲಿವುಗಳ ಆಶೋತ್ತರಗಳ ಮಹಾಪೂರವೇ ಇಲ್ಲಿ ಹರಿದಿದೆ.[೧೩] ಅತ್ತೆಯ ಮನೆಯಲ್ಲಿ ಹೆಣ್ಣು ಅನುಭವಿಸಬೇಕಾದ ಕಷ್ಟಕೋಟಲೆಗಳು, ಪ್ರೀತಿ, ಒಲುಮೆಗಳ ಕೊರತೆ, ಕೈಹಿಡಿದ ಗಂಡನ ಅನಾದರ, ಕೌಟುಂಬಿಕ ಕಿರುಕುಳ, ಅನುಮಾನ, ವೈಧವ್ಯ, ಬಂಜೆತನ ಮೊದಲಾದ ದು:ಖಗಳು ಹೆಂಗಸರು ಹಾಡುವ ಬೀಸುವ ಪದಗಳು ಸಮರ್ಥವಾಗಿ ಅಭಿವ್ಯಕ್ತಿಸಿವೆ.

ಯಾರಿದ್ದರು ನನ್ನ ತಾಯವ್ನ ಹೋಲರು
ಸಾವಿರದ ಕೊಳ್ಳಿ ಒಲಿಯಾಗ ಉರಿದರು
ಜ್ಯೋತಿ ನೀನ್ಯಾರು ಹೋಲಾರು ॥[೧೪]

ಹಾಲುಂಡ ತವರಿಗಿ ಏನೆಂದು ಹಾಡಲಿ
ಹೊಳೆದಂಡೀಲಿರುವ ಕರಕೀಯ । ಕುಡಿಯಂಗ
ಹಬ್ಬಲಿ ಅವರ ರಸಬಳ್ಳಿ ।[೧೫]

ಬೀಸುವ ಪದಗಳು ಕಾವ್ಯಸೌಂದರ್ಯ ಮತ್ತು ವಿಪುಲತೆಯ ದೃಷ್ಟಿಯಿಂದ ಗಮನ ಸೆಳೆಯುತ್ತವೆ. ಕೆಲಸದ ಶ್ರಮ ಮತ್ತು ಏಕತಾನತೆಯನ್ನು ನೀಗಿಸಿಕೊಳ್ಳುವುದಕ್ಕಾಗಿ ಹೆಂಗಸರು ತಮ್ಮಷ್ಟಕ್ಕೆ ತಾವೇ ಹಾಡುಗಳನ್ನು ಹೇಳಿಕೊಳ್ಳುತ್ತಿದ್ದರು. ಬೀಸುವ ಪದಗಳಲ್ಲಿ ಕೌಟುಂಬಿಕ ಬಾಂಧವ್ಯವನ್ನು ಕುರಿತಾದವು ಮತ್ತು ದೈವ ಭಕ್ತಿ, ನೀತಿ, ಆದರ್ಶ ಜೀವನಮೌಲ್ಯಗಳನ್ನು ಕುರಿತಾದವುಗಳೇ ಹೆಚ್ಚು. ತಾಯಿ–ತವರು, ಅಣ್ಣ–ತಮ್ಮ, ಬಂಧು–ಬಳಗ, ಸಂಬಂಧಗಳಲ್ಲಿರುವ ಸೊಗಸನ್ನು, ಸಂಕೀರ್ಣತೆಯನ್ನು ಪ್ರತಿಬಿಂಬಿಸುತ್ತವೆ. ಜನಪದ ಹೆಣ್ಣಿನ ಬದುಕಿನಲ್ಲಿ ತಾಯ್ತನಕ್ಕಿರುವ ಮಹತ್ವವನ್ನು ಮತ್ತು ಬಂಜೆಯ ಬದುಕಿನ ದಾರುಣತೆಯನ್ನು ವಿಶದಪಡಿಸುತ್ತವೆ.

ಕಂದನ ಕೊಡು ಶಿವನೆ ಬಂಧನ ಪಡಲಾರೆ
ಹಂಗೀನ ಬಾಣ ಉಣಲಾರೆ – ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ ॥ [೧೬]

ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡಿಗಿ ಎತ್ತು ದುಡಿದ್ಹಂಗ–ಬಾಳೆಲಿಯ
ಹಾಸುಂಡು ಬೀಸಿ ಒಗೆಧಾಂಗ । [೧೭]

ಜನಪದ ಸಮಾಜದಲ್ಲಿ ಬದುಕಿನ ಉತ್ತಮ ನಡವಳಿಕೆಗಳ ಬಗ್ಗೆ ಅವರದೇ ಆದ ಪರಿಕಲ್ಪನೆಗಳಿವೆ. ಪರರ ಸುಖಕ್ಕಾಗಿ ತ್ಯಾಗ, ನಿರಹಂಕಾರ, ನಿಸ್ವಾರ್ಥ, ಸಚ್ಚಾರಿತ್ರ್ಯ ವಿಧೇಯತೆ, ಸರಳವಾದ ದೈವ ಭಕ್ತಿ ಎಲ್ಲವೂ ಸೇರಿವೆ.

ಬಂಗಾರ ಬಳೆಯಿಟ್ಟು ಬೈಬ್ಯಾಡ ಬಡವರನ
ಬಂಗಾರ ನಿನಗೆ ಸ್ಥಿರವಲ್ಲ–ಮಧ್ಯಾಹ್ನದ
ಬಿಸಿಲು ಹೊಳ್ಳೋದು ತಡವಲ್ಲ. [೧೮]

ಮದುವೆ ಮುಂತಾದ ಶುಭ ಕಾರ್ಯಗಳಲ್ಲಿ ಹೆಂಗಸರು ಹಾಡುವ ಸೋಬಾನೆ ಪದಗಳಲ್ಲಿ ಪ್ರತಿಯೊಂದು ಶಾಸ್ತ್ರಕ್ಕೆ ಬೇರೆ ಬೇರೆ ಸೋಬಾನೆಗಳಿರುತ್ತವೆ. ಸಾಮಾನ್ಯವಾಗಿ ನಾಲ್ಕೈದು ಹೆಂಗಸರು ಗುಂಪಾಗಿ ಸೇರಿ ಸೋಬಾನೆ ಪದಗಳನ್ನು ಹಾಡುತ್ತಾರೆ.

ಗಂಧ ಹಚ್ಚಿರಿ ನಮ್ಮ ಚಂದ್ರನ ಚಲುವಿಗಿ ॥
ಗಂಧ ಹಚ್ಚಿರಿ ಶುಭಲಿಂದೆ ಗಂಧದಕ್ಕೆ ಸೊ ss [೧೯]

ಮದುವೆಯ ಸಂದರ್ಭದಲ್ಲಿ ಹೆಂಗಸರು ಹೇಳುವ ವಿಶಿಷ್ಟ ಹಾಡುಗಳೆಂದರೆ, ಹೆಣ್ಣಿನವರು ಗಂಡಿನವರನ್ನು ಜರೆದರೆ, ಗಂಡಿನವರು ಹೆಣ್ಣಿನವರನ್ನು ಜರಿಯುತ್ತಾರೆ. ಇಂಥ ಹಾಡುಗಳನ್ನು ಹೇಳಿದಾಗ ಎರಡೂ ಕಡೆಯವರಲ್ಲಿ ಯಾರೊಬ್ಬರೂ ಬೇಸರಗೊಳ್ಳುವುದಿಲ್ಲ. ಇವುಗಳನ್ನು ಹಾಸ್ಯದ ಹಾಡುಗಳೆಂದೇ ಪರಿಗಣಿಸುತ್ತಾರೆ.

ಒಂಟೆ ಬರುತಾವೆಂದು ಎಂಟು ಬಣವಿ ಕೊಂಡೆ
ಒಂಟೆಲ್ಲಿ ನಿಮ್ಮ ದಳವೆಲ್ಲಿ ಬೀಗರೀರಾ
ಕುಂಟ್ಯೋರಿ ಮ್ಯಾಲ ಬರುವುದಾ ॥ [೨೦]

ಜೋಗುಳದ ಹಾಡುಗಳನ್ನು ಮಕ್ಕಳನ್ನು ಮಲಗಿಸುವಾಗ, ತೊಟ್ಟಿಲು ತೂಗುವಾಗ. ತಾಯಿಂದಿರು ಹೇಳುವ ಇಂಪಾದ ಮೆಲುದನಿಯ ಹಾಡುಗಳು, ಜೋಜೋ ಅಥವಾ ಲಾಲೀ ಎಂಬ ಸೊಲ್ಲು.

ಜೋ ಎಂದು ತೂಗಿರಿ ನಂದಿ ಬಸವನಿಗೆ
ಜೋ ಎಂದು ತೂಗಿರಿ ನಂದಿ ಕೇಶವಗೆ
ಜೋ ಎಂದು ತೂಗಿರಿ ಬಸವರಾಜನಿಗೆ
ಅರಳ ಗುಂಡಗಿ ಪುರದೊಳು ಹುಟ್ಟಿದವನಿಗೆ।
ಜೋ ಜೋ ಜೋ ಜೋ [೨೧]

ಜನಪದ ಸ್ತ್ರೀಯರು ಜೀವಿತವಲಯದಲ್ಲಿ ತಮ್ಮ ಅನುಭವಕ್ಕೆ ಬಂದ ಸಂಗತಿಗಳಿಗೆ ಕಾವ್ಯಾತ್ಮಕ ಅಭಿವ್ಯಕ್ತಿಯನ್ನು ನೀಡಿದ್ದಾರೆ. ಹೆಣ್ಣಿನ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಆಕೆಯ ಒಲವು, ನಿಲುವುಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಬೀಸುವ ಪದಗಳು ಉತ್ತಮ ಸಾಮಗ್ರಿ. ಇವು ಆಕೆಯ

ಬದುಕನ್ನು ಮಾತ್ರವಲ್ಲದೆ, ಮಾನವನ ಬದುಕಿನ ಶ್ರಮ ಜೀವನದ ವಿವಿಧ ನೆಲೆಗಳನ್ನು ಪರಿಚಯಿಸುತ್ತವೆ. ಹೆಂಗಸರು ಸುದೀರ್ಘ ಕಥನ ಕಾವ್ಯಗಳು, ಖಂಡ ಕಾವ್ಯಗಳನ್ನು ಸಹ ಹಾಡುತ್ತಾರೆ. ಆದರೆ ಈ ಕಾವ್ಯಗಳನ್ನು ಹಾಡಲು ಎಲ್ಲಾ ಹೆಂಗಸರಿಂದಲೂ ಸಾಧ್ಯವಿಲ್ಲ. ಒಳ್ಳೆಯ ನೆನಪಿನ ಶಕ್ತಿ, ದನಿ ಹಾಗೂ ನಿರೂಪಣಾ ಸಾಮರ್ಥ್ಯ ಇರುವಂಥವರು ಮಾತ್ರ ಇವುಗಳನ್ನು ಕಲಿತು ಹಾಡಲು ಸಾಧ್ಯ. ಹೆಂಗಸರು ಹಾಡುವ ಕಥನ ಗೀತೆಗಳೆಲ್ಲವೂ ಸಚ್ಚಾರಿತ್ರ್ಯ ಮತ್ತು ಶೀಲಗಳೇ ಹೆಣ್ಣಿನ ಆದರ್ಶ ಎಂದು ನಿರೂಪಿಸಿದ ಕಥಾನಾಯಕಿಯರನ್ನು ಕುರಿತಾದವುಗಳು. ಕಥನ ಗೀತೆಗಳ ವಸ್ತು ಹೆಂಗಸರಿಗೆ ಬಹಳ ಪ್ರೀಯವಾದುವು. ಕಥಾ ನಾಯಕಿಯರ ಕಷ್ಟ ಸುಖಗಳೊಂದಿಗೆ ತಮ್ಮನ್ನು ಸಮೀಕರಿಸಿಕೊಂಡು ತಮ್ಮ ದು:ಖ ದುಮ್ಮಾನಗಳನ್ನು ಮರೆಯಬಯಸುವ ಗುಣ ಎದ್ದು ಕಾಣುತ್ತದೆ.

ಒಟ್ಟಾರೆ ಹೆಂಗಸರ ಹಾಡುಗಳಿಂದ ಭಾರತೀಯ ಸಂಸ್ಕೃತಿಯಲ್ಲಿನ ಹೆಣ್ಣಿನ ಸ್ಥಾನಮಾನಗಳ ಪರಿಚಯವಾಗುತ್ತದೆ. ಹೆಣ್ಣಿನ ಅನುಭವ ಪ್ರಪಂಚ ಸೀಮಿತವಾದುದಾದರೂ ದೃಷ್ಟಿ ವಿಶಾಲವಾಗಿದೆ. ಯಾವುದನ್ನು ಅತಿಯಾಗಿಸದ ಔಚಿತ್ಯಪೂರ್ಣ ದೃಷ್ಟಿ ಇಲ್ಲಿ ವ್ಯಕ್ತವಾಗಿದೆ. ಸಾಹಿತ್ಯಕ ದೃಷ್ಟಿಯಿಂದ ಈ ಹಾಡುಗಳು ಅಪೂರ್ವ ಸೊಗಸಿನಿಂದ ಕೂಡಿದ ರಸಘಟ್ಟಗಳೆನಿಸಿವೆ. ಜನಪದ ಸ್ತ್ರೀಯರ ಪ್ರತಿಭೆಗೆ ಇಲ್ಲಿನ ಹಾಡುಗಳು ಸಾಕ್ಷಿಯಾಗಿವೆ. ವಿವಿಧ ಧಾಟಿ ರಾಗಗಳಲ್ಲಿ ಜನಪದ ಸ್ತ್ರೀಯರು ಹಾಡುವ ನೂರಾರು ತ್ರಿಪದಿ, ಕಥನ ಗೀತೆಗಳಲ್ಲಿ ಅವರ ಪ್ರತಿಭೆ ಎದ್ದು ಕಾಣುತ್ತದೆ. ಕಾವ್ಯಪ್ರಕಾರಕ್ಕೆ ಹೆಂಗಸರ ಕೊಡುಗೆ ಅಪಾರ. ಹೆಂಗಸರ ಹಾಡುಗಳಲ್ಲಿ ಕಾಣುವಂಥಹ ಕಾವ್ಯಗುಣ, ಸೊಗಸು, ಸೂಕ್ಷ್ಮ ಸಂವೇದನೆಗಳು ಗಂಡಸರ ಹಾಡುಗಳಲ್ಲಿ ಕಂಡು ಬರುವುದಿಲ್ಲ. ಸ್ತ್ರೀಯರು ಅನಕ್ಷರಸ್ಥರಾಗಿರಬಹುದು, ಆದರೆ ಸಾಂಸ್ಕೃತಿಕವಾಗಿ ಅವರದು ಶ್ರೀಮಂತ ವ್ಯಕ್ತಿತ್ವ ಎಂಬುದನ್ನು ಹೆಂಗಸರ ಹಾಡುಗಳು ಮನಗಾಣಿಸುತ್ತವೆ. ಮುಖ್ಯವಾಗಿ ಪುರುಷ ಪ್ರಧಾನ ಸಮಾಜದ ಪ್ರಾಬಲ್ಯದಿಂದಾಗಿ ಬಹುತೇಕ ಹಿನ್ನೆಲೆಯಲ್ಲಿಯೇ ಉಳಿದ ಸ್ತ್ರೀ ಸಂವೇದನೆಗಳನ್ನು ತಿಳಿದುಕೊಳ್ಳಲು ಹೆಂಗಸರ ಹಾಡುಗಳು ಅತ್ಯಮೂಲ್ಯ ಆಕರಗಳಾಗಿವೆ.

೨.೪ ಬೀದರ್ ಜಿಲ್ಲಾ ಮಹಿಳಾ ಜಾನಪದ ಹಾಡುಗಳ ತಾತ್ವಿಕ ಚರ್ಚೆ:

ಕರ್ನಾಟಕದ ಗಡಿನಾಡ ಭಾಗವಾಗಿರುವ ಬಿದರ್ ಜಿಲ್ಲೆಯು ತನ್ನದೇ ಆದ ಐತಿಹಾಸಿಕ, ಧಾರ್ಮಿಕ, ಭಾಷಿಕ, ಸಾಮಾಜಿಕ, ರಾಜಕೀಯ, ಪ್ರಾದೇಶಿಕ ಭಿನ್ನತೆಗಳನ್ನು ಒಳಗೊಂಡಿದೆ. ಹೀಗಾಗಿ ಈ ಭಿನ್ನತೆಯ ನಡುವೆ ಚರಿತ್ರೆಯುದ್ದಕ್ಕೂ ತನ್ನ ಅನನ್ಯತೆಯನ್ನು ಕಾಪಾಡಿಕೊಂಡು ಬಂದಿರುವ ಜಾನಪದ ಸಾಹಿತ್ಯವನ್ನು ತಾತ್ವಿಕ ನೆಲೆಯಲ್ಲಿ ಅಧ್ಯಯನ ಮಾಡುವುದರಿಂದ ಈ ಎಲ್ಲ ಭಿನ್ನತೆಗಳ ನಡುವೆ ತನ್ನ ಅಸ್ಮಿತೆಯನ್ನು ಕಾಪಾಡಿಕೊಂಡಿರುವ ಕರ್ನಾಟಕದ ಬಿದರ್ ಜಿಲ್ಲೆಯ ಗುಣವನ್ನು ಅರಿಯುವುದಕ್ಕೆ ಸಹಕಾರಿಯಾಗುತ್ತದೆ. ಇಲ್ಲಿ ಮಹಿಳಾ ಸಾಹಿತ್ಯವನ್ನು ಕೇಂದ್ರ ನೆಲೆಯಲ್ಲಿ ಅಧ್ಯಯನ ಮಾಡುವುದಕ್ಕೆ ಕಾರಣವೂ ಇದೆ. ನಮ್ಮ ಜನಪದ ಮಹಿಳೆಯರೂ ಯಾವುದೇ ಪ್ರಭಾವಕ್ಕೆ ಒಳಗಾಗದೆ ತಮ್ಮ ಸಂಸ್ಕೃತಿಯನ್ನು ಯಥಾ ಪ್ರಕಾರವಾಗಿ ಕಾಪಾಡಿಕೊಂಡು ಬರುವಲ್ಲಿ ಅವಿರತ ಪಾತ್ರವನ್ನು ನಿರ್ವಹಿಸಿದ್ದಾರೆ. ಹೀಗಾಗಿ ಇಲ್ಲಿ ಮಹಿಳಾ ಸಾಹಿತ್ಯದ ಪ್ರಮುಖ ಪ್ರಕಾರವಾದ ಹಾಡುಗಳ ಅಡಿಯಲ್ಲಿ ಸಾಂಸ್ಕೃತಿಕ ಅಧ್ಯಯನಕ್ಕೆ ತೊಡಗಿಸಿಕೊಳ್ಳಲಾಗಿದೆ. ಈ ಮಹಿಳಾ ಹಾಡುಗಳಲ್ಲಿ ಅಡಗಿರುವ ತಾತ್ವಿಕ ಅಂಶಗಳನ್ನು ಹುಡುಕುವುದೇ ಇಲ್ಲಿಯ ಪ್ರಮುಖ ಉದ್ದೇಶವಾಗಿದೆ.

ಹೃದಯಾಂತರಾಳದ ಭಾವನೆಗಳನ್ನು ಸಹಜ ಸುಂದರವಾಗಿ ಒಡನುಡಿದ ಬೆಡಗು ಮಹಿಳಾ ಜಾನಪದ ಸಾಹಿತ್ಯದಲ್ಲಿದೆ. ನಿರ್ದಿಷ್ಟ ಭಾವನೆ, ಜೀವಂತ ಆಡುನುಡಿಯ ಮಾಧ್ಯಮ, ಮಾನವೀಯ ವಾತ್ಸಲ್ಯ, ನಿಸರ್ಗಸೌಂದರ್ಯ, ದೈವೀಶ್ರದ್ಧೆಗಳ ತ್ರಿವೇಣಿ ಸಂಗಮ. ಬಾಳಿನ ನಲಿವನ್ನು ಹೆಚ್ಚಿಸಿಕೊಳ್ಳಲು, ಸಂಸಾರದ ಭಾರವನ್ನು ಹಗುರಗೊಳಿಸಲು ಹೊರಹೊಮ್ಮುವ ಸಂಗೀತ ಇವೆಲ್ಲ ಮೊಳಗಿಸಿ ಬಂದ ಸೊಬಗನ್ನು ನಾವು ಬೀದರ್ ಜಿಲ್ಲೆಯ ಮಹಿಳಾ ಜನಪದ ಹಾಡುಗಳಲ್ಲಿ ಕಾಣುತ್ತೇವೆ.[೨೨] ಬಾಳಿನ ಬಗೆಬಗೆಯ ಅನುಭವಗಳನ್ನೆಲ್ಲ ರಮಣೀಯವಾಗಿ ಈ ಜಾನಪದ ಹಾಡುಗಳಲ್ಲಿ ಅಭಿವ್ಯಕ್ತಗೊಳಿಸಲಾಗಿದೆ. ಮಹಿಳೆಯರ ಜಾನಪದ ಹಾಡುಗಳಲ್ಲಿ ಕೌಟುಂಬಿಕ ಜೀವನದ ನಲಿವು–ಮನಸ್ತಾಪ, ಸರಸ–ವಿರಸ, ಹಾಸ್ಯ–ವಿಡಂಬನೆಗಳು ರಸಪೂರ್ಣವಾಗಿ ಮೂಡಿಬಂದಿವೆ. ಬಾಳಿನ ಬಗೆಗೆ ಗೌರವ, ನಲಿವು, ದೈವೀಶ್ರದ್ಧೆ– ಇವು ಇಲ್ಲಿ ಹೃದಯಸ್ಪರ್ಶಿಯಾದ ಚಿತ್ರಣ ಪಡೆದಿವೆ. ವಾತ್ಸಲ್ಯ ಚಿಲುಮೆ ಇಲ್ಲಿ ಸ್ವಚ್ಛಂದವಾಗಿ ಹೊರಹೊಮ್ಮಿದೆ. ಮದುವೆ ಹಬ್ಬ–ಹುಣ್ಣಿಮೆಗಳ ಸಂಭ್ರಮ ಸೂರೆಗೊಂಡಿದೆ. ಕೌಟುಂಬಿಕ ಜೀವನದ ವಾಸ್ತವಿಕ ಸಮಸ್ಯೆಗಳನ್ನು, ಮಾನವೀಯ ಮೂಲಭೂತ ಭಾವಗಳನ್ನು ವಾಸ್ತವಿಕವಾಗಿ, ಸುಂದರವಾಗಿ ನಿರೂಪಿಸಲಾಗಿದೆ. ಸಾಹಿತ್ಯದ ರಸದೃಷ್ಟಿ ಉತ್ಕಟವಾಗಿದೆ. ವರ್ಣನೆ, ಕಲ್ಪನೆ, ಪದವಿನ್ಯಾಸ, ಹಾಡಿನ ಗತಿ, ಗತ್ತು, ಲಯ, ಅವುಗಳ ಬೆಡಗು ಮನಸ್ಸನ್ನು ಪುಳಕಿತಗೊಳಿಸುತ್ತದೆ. ಹೃದಯವನ್ನು ಸೂರೆಗೊಳ್ಳುತ್ತದೆ.

ಮದುವೆಯ ಸಂಭ್ರಮ, ತವರು ಮನೆ ವಾತ್ಸಲ್ಯ, ಗಂಡನ ಮನೆಯಬಾಳು, ಕೌಟುಂಬಿಕ ಜೀವನ ಇವುಗಳ ಚಿತ್ರಣವು ಬೀದರ್ ಜಿಲ್ಲೆಯ ಮಹಿಳಾ ಜನಪದ ಹಾಡುಗಳಲ್ಲಿ ಮೂಡಿಬಂದ ಬಗೆಯನ್ನು ಪ್ರತ್ಯೇಕವಾಗಿಯೇ ವಿವೇಚಿಸಬೇಕಾಗುತ್ತದೆ.[೨೩] ಇವು ಆಯಾ ಪ್ರಾದೇಶಿಕ ಬದುಕಿನ ವಿಶಿಷ್ಟತೆಯನ್ನು ಅನಾವರಣಗೊಳಿಸುವುದರ ಜೊತೆಗೆ, ಕೋಮು ಸೌಹಾರ್ದದಂತಹ ಅಂಶಗಳನ್ನು ಎತ್ತಿಹಿಡಿಯುತ್ತವೆ. ಇಂದು ಜಾಗತಿಕರಣದ ಭರಾಟೆಯಲ್ಲಿ ದಿನದಿಂದ ದಿನಕ್ಕೆ ಮಾನವೀಯ ಸಂಬಂಧಗಳು ಕಳೆದುಹೋಗುತ್ತಿವೆ. ಇಂತಹ ತುರ್ತಿನ ಸಂದರ್ಭದಲ್ಲಿ ಈ ಅಧ್ಯಯನವು ಹೊಸ ನೆಲೆಗಳನ್ನು ತೆರೆದಿಡುತ್ತದೆ.

ಹೆಣ್ಣು ತ್ಯಾಗದ ಪುತ್ಥಳಿಯಾಗಿ, ಕುಟುಂಬದ ದೇವತೆಯಾಗಿ, ಸಂಸ್ಕೃತಿಯ ನಂದಾದೀಪವನ್ನು ಬೆಳಗಿಸಿದ್ದಾಳೆ. ಇಂತಹ ಗರತಿಯ ಅಂತರಂಗದಿಂದ ಮೂಡಿಬಂದ ಸಾಹಿತ್ಯವೇ ಬೀದರ ಜಿಲ್ಲೆಯ ಹೆಣ್ಣು ಮಕ್ಕಳ ಹಾಡುಗಳು. ಅವಳ ಬದುಕಿನ ನಾನಾ ಮಜಲುಗಳನ್ನು ತೋರಿಸುವ ದಿಕ್ಸೂಚಿಗಳಾಗಿ, ಸಂಸ್ಕೃತಿಯ ಕುರುಹುಗಳಾಗಿ ಇವು ಕಂಗೊಳಿಸುತ್ತವೆ. ಸ್ತ್ರೀ ಜೀವನದ ರನ್ನಗನ್ನಡಿಯಾದ ಈ ಹಾಡುಗಳು ಅವಳ ಇಡೀ ಜೀವನವನ್ನು ಪಡಿಮೂಡಿಸಿವೆ. ಹೆಣ್ಣು ತನ್ನ ಕುಲದ ಉದ್ಧಾರಕ್ಕಾಗಿಯೇ ರಚಿಸಿದ ಹಾಡುಗಳಾಗಿ ಬಳಕೆಯಲ್ಲಿವೆ. ಇವುಗಳನ್ನು ಸಂಸಾರದ ಸಂಹಿತೆಗಳೆಂದು, ಸಂಸ್ಕೃತಿ ಮಿಮಾಂಸೆಯ ಭಾಷ್ಯಗಳೆಂದು ಧಾರಾಳವಾಗಿ ಹೇಳಬಹುದು. ಮಾನವ ಸಂಸ್ಕೃತಿಯ ಮೂಲಭೂತ ತತ್ವಗಳಾದ ಮಮತೆಯ ಮಾಧುರ್ಯ, ಪ್ರೇಮದ ಸತ್ವ, ಕೌಟುಂಬಿಕ ರಸಪಾಕ, ತ್ಯಾಗ ಮನೋಭಾವ, ನೈತಿಕ ನೆಲೆಗಟ್ಟು, ಔದಾರ್ಯಗುಣ ಮುಂತಾದವುಗಳು ಬೀದರ್ ಜಿಲ್ಲೆಯ ಹೆಣ್ಣು ಮಕ್ಕಳ ಹಾಡುಗಳಲ್ಲಿ ನಿಚ್ಚಳವಾಗಿ ಕಂಡುಬರುತ್ತವೆ.

ಈ ಹಾಡುಗಳಲ್ಲಿ ಕಂಡು ಬರುವ ವಿಶಿಷ್ಟ ಅಂಶಗಳೆಂದರೆ ಹೃದಯ ಮನಸ್ಸು ಬಿಚ್ಚಿ ಭಾವನೆಗಳನ್ನು ತೋಡಿಕೊಂಡಿದ್ದು. ಉಳಿದ ಸಾಹಿತ್ಯ ಪ್ರಕಾರದಲ್ಲಿ ಈ ಹಾಡುಗಳಲ್ಲಿ ವರ್ಣನೆ, ಕಲ್ಪನೆ, ಶೃಂಗಾರ, ದಾಸ್ಯ ಮುಂತಾದವುಗಳು ಕಂಡು ಬರುವುದಿಲ್ಲ. ಇರುವುದನ್ನು ಇದ್ದಂತೆ ಆಡಿ ಬಿಟ್ಟಿದ್ದರಿಂದ ಸಂಸ್ಕೃತಿಯ ಅಧ್ಯಯನಕ್ಕೆ ತುಂಬಾ ಸಹಾಯಕಾರಿಯಾಗಿ ಪರಿಣಮಿಸಿವೆ. ಇಲ್ಲಿ ಅವಳು ಅಂತರಂಗವನ್ನೇ ತೆರೆದು ಹೃದಯ ಪರಿಪಾಕವನ್ನು ತುಂಬಿ ಇಟ್ಟಿದ್ದಾಳೆ.

ಈ ಹೆಣ್ಣುಮಕ್ಕಳ ಹಾಡುಗಳಲ್ಲಿ ಕೇವಲ ಒಂದು ಜನಾಂಗದ, ಧರ್ಮದ ಆಶೋತ್ತರಗಳನ್ನು ಬಿತ್ತರಿಸುವ ಸಂಕುಚಿತ ಭಾವನೆಯನ್ನು ಕಾಣಲಾರದೆ, ಇಡಿ ಮಾನವ ಕುಲದ ಸಂಸ್ಕೃತಿಯನ್ನೇ ಪ್ರತಿಬಿಂಬಿಸುವ ವ್ಯಾಪಕ ಭಾವನೆಯನ್ನು ಹೊಂದಿದ್ದನ್ನು ಇಲ್ಲಿ ಕಾಣುತ್ತೇವೆ. ಜನಪದ ಗರತಿಯ ಒಟ್ಟಾರೆ ಬದುಕಿನ ವಿಧಿವಿಧಾನಗಳನ್ನು ಈ ಹಾಡುಗಳಲ್ಲಿ ಅರಸಬಹುದಾಗಿದೆ. ಆಯಾ ಸಂದರ್ಭ, ಸಂಪ್ರದಾಯಗಳಿಗನುಸಾರವಾಗಿ ಅವುಗಳಿಗೆ ಮೀಸಲಾದ ಹಾಡುಗಳನ್ನು ರಚಿಸುವಲ್ಲಿ, ಹಾಡು ಹೇಳುವಲ್ಲಿ ಅವಳ ಪ್ರತಿಭೆಯ ದರ್ಶನವಾಗುವುದು. ಜನಪದ ಸಮಾಜದಲ್ಲಿ ಪುರುಷರಿಗಿರುವಷ್ಟು ಸರಿಸಮಾನವಾದ ಸ್ವಾತಂತ್ರ್ಯ ಸ್ತ್ರೀಯರಿಗೆ ಇಲ್ಲ. ಆದರೂ ಸಾಹಿತ್ಯ ರಚನೆಯಲ್ಲಿ ಅವಳು ಸರಿಸಮಾನ ಸ್ಥಾನ ಗಳಿಸಿಕೊಂಡು ತನ್ನದೇ ಆದ ಹೆಗ್ಗಳಿಕೆ ಮೆರೆದಿದ್ದಾಳೆ. ಯಾವ ಹಾಡುಗಳಲ್ಲಿಯೂ ತನ್ನ ಹೆಸರನ್ನು ಹೇಳಿಕೊಳ್ಳದೆ ನಿರಾಡಂಬರತೆಗೆ ಸಾಕ್ಷಿಯಾಗಿದ್ದಾಳೆ. ಈ ಹಲವು ಕಾರಣಗಳಿಂದಾಗಿ ಬೀದರ್ ಜಿಲ್ಲೆಯ ಹೆಣ್ಣುಮಕ್ಕಳ ಹಾಡುಗಳು ಸಂಸ್ಕೃತಿಯ ತಾಣವಾಗಿ ಕಂಡುಬರುತ್ತವೆ.

ಹೆಣ್ಣು ಮಕ್ಕಳ ಹಾಡುಗಳನ್ನು ಬೀಸುವ, ಕುಟ್ಟುವ, ಸೋಬಾನ, ಜೋಗುಳ, ಕೋಲು, ಬುಲಾಯಿ, ಶೀಗಿ, ಮೈನೆರೆದಾಗ ಹಾಡುವ ಹಾಡುಗಳು, ಮದುವೆ ಹಾಡುಗಳು, ಸಾವಿನ ಹಾಡುಗಳು, ಹಬ್ಬ ಹರಿದಿನಗಳಲ್ಲಿ ಹಾಡುವ ಹಾಡುಗಳು, ಆರತಿ ಹಾಡುಗಳು, ಕಳೆ ಕೀಳುವಾಗಿನ ಹಾಡುಗಳು, ಸಂಕೀರ್ಣದ ಹಾಡುಗಳಾದ ಒಗಟಿನ ಹಾಡುಗಳು, ಭಜನೆ ಹಾಡುಗಳು, ತತ್ವಪದಗಳು, ಕಥನಗೀತೆಗಳು, ಸರಸ ಸಲ್ಲಾಪದ ಹಾಡುಗಳು, ಸ್ತ್ರೀ ಸಂವೇದನೆಯ ಹಾಡುಗಳು, ನೀತಿ ಹಾಡುಗಳು, ಪಶು ಪಕ್ಷಿ, ಪ್ರಾಣಿ ಚಿತ್ರಣದ ಹಾಡುಗಳೆಂದು ಹಲವು ಪ್ರಕಾರಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಸಂಪ್ರದಾಯದ ಹಾಡುಗಳಲ್ಲಿ ಹೆಣ್ಣುಮಕ್ಕಳ ಹಾಡುಗಳೇ ಹೆಚ್ಚಾಗಿದ್ದು, ಅವುಗಳಲ್ಲಿ ಬೀಸುವ ಪದಗಳು, ಶೀಗಿ ಪದಗಳು, ಪಂಚಮಿ ಪದಗಳು, ಸೋಬಾನೆ ಪದಗಳು, ಭಾಸಣಕಿ ಪದ, ಹಾಲ್‌ಗುಗ್ಗುಳ ಪದ, ಎಣ್ಣೆ ಹಚ್ಚುವ ಪದ, ದೇವರ ಪದ, ಮದುಮಗಳನ್ನು ಮನೆತುಂಬಿಸುವ ಪದ, ಕುಬುಸದ ಪದ, ಜೋಗುಳ ಪದ, ಸಾಲಗೀರಾ ಪದ (ಹುಟ್ಟುಹಬ್ಬದ ಪದ) ಬುಟ್ಟಿ ಪದ, ಐರಣಿ ಪದ, – ಹೀಗೆ ಅನೇಕ ಸಂಪ್ರದಾಯಗಳನ್ನೆಲ್ಲ ಹೇಳುವ ಹಾಡುಗಳಿವೆ.

ಮಹಿಳೆಯ ಹಾಡುಗಳಲ್ಲಿ ಜನಪದರ ಬದುಕಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳ ಚಿತ್ರಣದೊಂದಿಗೆ ಅವರ ಕಲ್ಪನಾಶಕ್ತಿ, ಸೃಷ್ಟಿಸಾಮರ್ಥ್ಯಗಳಿಗೆ ಈ ಹಾಡುಗಳು ಪ್ರತೀಕಗಳಾಗಿ ನಿಂತು ಈ ಭಾಗದ ಜನಪದರ ಬದುಕನ್ನು ಕಟ್ಟಿಕೊಡುತ್ತವೆ. ಈ ಹಾಡುಗಳು ಐತಿಹಾಸಿಕ ಅಂಶಗಳು ಒಳಗೊಂಡಿವೆಯಲ್ಲದೆ ಇನ್ನೂ ಕೆಲವು ಹಾಡುಗಳಲ್ಲಿ ಸ್ಥಳ, ನಾಮ, ನಿರ್ದೇಶನಗಳ ಮಾಹಿತಿಯಿದೆ. ಇವುಗಳ ಆಳವಾದ ಅಧ್ಯಯನವು ಈ ಭಾಗದ ಇತಿಹಾಸದ ಪುನರ್ ಸೃಷ್ಟಿಗೆ ಮಹತ್ವದ, ನಿಖರವಾದ ದಾಖಲೆಗಳನ್ನು ಒದಗಿಸುತ್ತದೆ.[೨೪]

ಮಹಾಪ್ರಾಣಗಳ ಬಳಕೆ (ಖಿಲ್ಲಾ, ಖೊಲ್ಲ್ಯಾಗ ಇತ್ಯಾದಿ) ಉರ್ದು ಪದಗಳ ಬಳಕೆ, (ದೋನ, ಶಹರ, ಮಹಲ್ ಇತ್ಯಾದಿ) ಹಾಡುಗಳಲ್ಲಿ ಸಹಜವಾಗಿ ಉಂಟಾಗಿದೆ. ಹೊತ್ತರಳಿ, ಮರಿತೇಜ, ಮರುದಿನ, ಮಕಬಾಡಿ ಮುಂತಾದ ಶಿಷ್ಟಭಾಷಾ ಪದಗಳ ಭಾಷೆಗೆ ವಿಶಿಷ್ಟ ಮೆರಗನ್ನು ನೀಡಿರುತ್ತವೆ. ಈ ಭಾಗದ ಭಾಷಾ ಅಧ್ಯಯನಕ್ಕೆ ಶ್ರೀಮಂತವಾದ ವಸ್ತು ಸಾಮಗ್ರಿಗಳನ್ನು ಈ ಹಾಡುಗಳು ಒದಗಿಸುತ್ತವೆ. ಹೆಣ್ಣು ಮಕ್ಕಳ ಹಾಡುಗಳು ನಮ್ಮ ಸ್ತ್ರೀ ಜೀವನದ ಒಳಗನ್ನಡಿ, ಹೆಣ್ಣುಮಕ್ಕಳ ಹೃದಯದ ಪಡಿಗನ್ನಡಿ. ಅವುಗಳಲ್ಲಿ ಮಮತೆಯ ಮಾಧುರ್ಯವೂ ಮೈವೆತ್ತಿದೆ, ಪ್ರೇಮದ ಸತ್ವವೂ ಅಳವಟ್ಟಿದೆ. ಅದರಲ್ಲಿ ಹೆಚ್ಚಿನ ತ್ಯಾಗಬುದ್ಧಿಯೂ ತುಳುಕುತ್ತಿದೆ. ಈ ಹಾಡುಗಳು ಸ್ತ್ರೀ ಜೀವನದ ಜೀವಾಳವಾಗಿವೆ, ಸುಖದ ಸೆಲೆಗಳಾಗಿವೆ.

ಮಹಿಳೆಯರು ನಿತ್ಯಜೀವನದ ಅನೇಕ ಕೆಲಸಗಳನ್ನು ಮಾಡುವಾಗ ಅವುಗಳು ಬೇಸರ ಕಳೆಯಲು ಹಾಡುವ ಪದ್ಧತಿ ಎಲ್ಲ ಕಡೆಯಲ್ಲೂ ರೂಢಿಯಲ್ಲಿದೆ. ಜೋಳ ಬೀಸುವಾಗ, ತೊಟ್ಟಿಲು ತೂಗುವಾಗ, ಭತ್ತ ಕುಟ್ಟುವಾಗ, ನಾಟಿ ನೆಡುವಾಗ, ಮದುವೆ ಕಾರ್ಯದ ಸಂದರ್ಭಗಳಲ್ಲಿ ತೆರತೆರನ ಹಾಡುಗಳನ್ನು ಹೇಳುತ್ತಾರೆ. ಬೀಸುವ ಕೆಲಸವಾಗಲಿ ಬತ್ತ ಕುಟ್ಟುವ ಕೆಲಸವಾಗಲಿ ಶ್ರಮದಾಯಕವಾದದ್ದು. ಅವಕ್ಕೆ ತ್ರಿಪದಿಯನ್ನು ಬಳಸುವಂತೆಯೇ ಅದನ್ನೇ ಜೋಗುಳ ಹಾಡುವಾಗಲೂ ತ್ರಿಪದಿಯನ್ನೇ ಬಳಸಿ ಅದರ ರಾಗಾಲಾಪ ಬೇರೆಯೇ ತೆರನಾಗಿರುತ್ತದೆ. ಇಲ್ಲಿ ತೊಟ್ಟಿಲು ತೂಗುವ ಉದ್ದೇಶ ಮಗುವಿಗೆ ನಿದ್ದೆಬರಿಸುವುದಷ್ಟೇ, ನಿದ್ದೆ ಬರಲು–ಹಾಡಿನ ಸ್ವರಗಳು ನಿಡಿದಾಗಿ ಚಾಚಿದ್ದು, ತೂಕಡಿಕೆ ಹುಟ್ಟಿಸುವಂತಿರುತ್ತದೆ. ತಾಯಿಯ ಬದುಕನ್ನು ಬೆಳಗಿಸಬಲ್ಲ ನಿಷ್ಕಳಂಕ, ಸುಂದರ, ಕೋಮಲ ವಸ್ತು. ಹೀಗಿದ್ದುದರಿಂದಲೇ ಹೆಚ್ಚಿನ ತಾಯಂದಿರು ತಮ್ಮ ಮಕ್ಕಳನ್ನು ಕುರಿತಾಗಿಯೇ ಹಾಡಿದ್ದಾರೆ. ಆ ಹಾಡುಗಳ ಮೂಲಕ ತಮ್ಮ ಪ್ರೇಮವನ್ನು ತೋಡಿಕೊಂಡಿದ್ದಾರೆ.

ಹೆಣ್ಣಿನ ಸಾಂಸಾರಿಕ ಜೀವನದ ಸರಸ – ವಿರಸ ಸಾಂತ್ವನಗಳು ಸ್ಫುಟವಾಗಿ ಜಾನಪದ ಸಾಹಿತ್ಯದಲ್ಲಿ ಮೂಡಿ ಬಂದಿದೆ. ಎಲ್ಲ ಸಂದರ್ಭಗಳಲ್ಲಿಯೂ ಹಾಡು ಹೇಳುವ ವಾಡಿಕೆ ಜನಪದರಲ್ಲಿದೆ. "ಸುಮ್ಮನೆ ಬೀಸಿದರೆ ಬೀಸು ಕಲ್ಲಿನಿಂದ ಹಿಟ್ಟು ಬೀಳುವುದಿಲ್ಲವೆಂದೂ ನಾಗಸೂರದಂತೆ ದನಿಯೆತ್ತಿ ಹಾಡಿದರೆ ಗಮ್ಮನೆ ಹಿಟ್ಟು ಬೀಳುವುದು ಈ ಕಲ್ಲು" ಎಂದು ಗರತಿ ಭಾವಿಸುತ್ತಾಳೆ. ಅಣ್ಣನ ಮನೆಯ ಸಿರಿಗಲ್ಲಿನ ಇಂಚರ ತಂಗಿಗೆ ದೂರದಿಂದಲೂ ಕೇಳುತ್ತದೆ. ಗರತಿ ಭತ್ತವ ಕುಟ್ಟುತ್ತ, ಚಕ್ಕಂದವಾಡುತ್ತ ಮುಕ್ಕಣ್ಣೇಶ್ವರನ ನೆನೆಯುತ್ತಾಳೆ. ಆಗ ಆಕೆಗೆ ಬಾಳಿನ ವಿಷವೆಲ್ಲ ಮರೆತು ಹೋಗುತ್ತದೆ.[೨೫]

ತವರುಮನೆ, ತಾಯಿ, ತಂದೆ, ಅಕ್ಕ, ತಂಗಿ, ಅತ್ತಿಗೆ, ನಾದಿನಿ, ಗಂಡನಮನೆ – ಗಂಡ, ಭಾವ, ನೆಗೆಣ್ಣೆ, ಅತ್ತೆ, ಮಾವ, ಮಗ, ಮಗಳು, ಸೊಸೆ ಈ ಎಲ್ಲ ಬಳಗದವರನ್ನು ಕುರಿತು ಸುಂದರವಾದ ಜಾನಪದ ಹಾಡುಗಳಿವೆ. ವಿವಾಹ, ಹೆರಿಗೆ, ಹಬ್ಬ, ಹುಣ್ಣಿಮೆ, ವಾತ್ಸಲ್ಯ, ಮನಸ್ತಾಪ, ಹಾಸ್ಯ, ಅಣಕ, ಪ್ರಾರ್ಥನೆ, ನೀತಿ, ತತ್ವಜ್ಞಾನ ಇವುಗಳನ್ನು ಕುರಿತ ಪದಗಳೂ ಇವೆ. ಒಟ್ಟಿನಲ್ಲಿ ಬಾಳಿನ ಬಗೆ ಬಗೆಯ ಅನುಭವವನ್ನೆಲ್ಲ ರಮಣೀಯವಾಗಿ ಮಹಿಳೆಯರ ಜಾನಪದ ಸಾಹಿತ್ಯದಲ್ಲಿ ಅಭಿವ್ಯಕ್ತಗೊಳಿಸಲಾಗಿದೆ. ಈ ಎಲ್ಲಾ ಅಂಶಗಳು ಜನಪದ ಸಾಹಿತ್ಯದಲ್ಲಿ ಅಂತರ್ಗತವಾಗಿವೆ. ಇವುಗಳನ್ನು ಪ್ರಾದೇಶಿಕ ನೆಲೆಯಲ್ಲಿ ಅಧ್ಯಯನ ಮಾಡಿದಾಗ ಮಾತ್ರ ಇದರ ಹಿಂದಿನ ತಾತ್ವಿಕತೆಯನ್ನು ಅರಿಯಲು ಸಹಕಾರಿಯಾಗುತ್ತದೆ.

ಕೊನೆ ಟಿಪ್ಪಣಿ

೧) ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ–೭: ಕಾಳೇಗೌಡ ನಾಗವಾರ: ಪುಟ–೫೨

೨) ಜನಪದ ಕಾವ್ಯಮೀಮಾಂಸೆ ಹಾಗೂ ವಿಮರ್ಶಾ ಪ್ರಸ್ಥಾನಗಳು: ವೀರಣ್ಣ ದಂಡೆ: ಪುಟ–೫೯

೩) ಗದ್ದಗಿಮಠರ ಬರಹಗಳು – ಜನಪದ ಸಾಹಿತ್ಯಾವಲೋಕನ: ಪುಟ: ೯೭–೯೮

೪) ಜಾನಪದ ಸ್ವರೂಪ ಮತ್ತು ಸಾಹಿತ್ಯ: ಪ್ರೊ.ಡಿ. ಲಿಂಗಯ್ಯ: ಪುಟ: ೪೩

೫) ಜಾನಪದ ಸ್ವರೂಪ ಮತ್ತು ಸಾಹಿತ್ಯ: ಪ್ರೊ.ಡಿ. ಲಿಂಗಯ್ಯ : ಪುಟ: ೪೪

೬) ಜಾನಪದ ಸ್ವರೂಪ ಮತ್ತು ಸಾಹಿತ್ಯ: ಪ್ರೊ.ಡಿ. ಲಿಂಗಯ್ಯ : ಪುಟ: ೪೫

೭) ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ–೭, ಪುಟ– ೬೧

೮) ಪ್ರಗತಿ ಪಥದಲ್ಲಿ ಕರ್ನಾಟಕದ ಮಹಿಳೆಯರು: ವಿ. ಛಾಯಾದೇವಿ: ಪುಟ; ೧೭೫

೯) ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ–೭, ಪು– ೭೮

೧೦) ಪ್ರಗತಿ ಪಥದಲ್ಲಿ ಕರ್ನಾಟಕದ ಮಹಿಳೆಯರು: ವಿ. ಛಾಯಾದೇವಿ: ಪುಟ; ೧೮೦

೧೧) ಪ್ರಗತಿ ಪಥದಲ್ಲಿ ಕರ್ನಾಟಕದ ಮಹಿಳೆಯರು: ವಿ. ಛಾಯಾದೇವಿ: ಪುಟ; ೧೮೧

೧೨) ಬೀದರ ಜಿಲ್ಲಾ ದರ್ಶನ : ಪ್ರೊ: ಚಿತ್ಕಳಾ ಮಠಪತಿ ಲೇಖನದಿಂದ : ಪುಟ; ೧೭೪

೧೩) ಭಾಲ್ಕಿ ಸಾಹಿತ್ಯ ಸಂಭ್ರಮ ಪ್ರಥಮ ಸಾಹಿತ್ಯ ಸಮ್ಮೇಳನ ಸ್ಮರಣಸಂಚಿಕೆ ಬೀದರ ಜಿಲ್ಲೆಯ ಜನಪದ ಸಾಹಿತ್ಯ : ಡಾ.ಸೋಮನಾಥ ನುಚ್ಚಾ, ಅವರ ಲೇಖನ

೧೪) ಜನಪದ ಮುಕ್ತಕಗಳು: ಎಚ್.ಎಮ್. ನಾರಾಯಣರಾವ: ಪುಟ:೨೬

೧೫) ಕನ್ನಡ ಜನಪದ ಗೀತೆಗಳು: ಡಾ.ಬಿ.ಎಸ್.ಗದ್ದಗಿಮಠ: ಪುಟ: ೧೧೦

೧೬) ಜನಪದ ಮುಕ್ತಕಗಳು: ಎಚ್.ಎಮ್.ನಾರಾಯಣರಾವ: ಪುಟ; ೩೨

೧೭) ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ: ಡಾ.ಬಸವರಾಜ ಪೋಲಿಸ್ ಪಾಟೀಲ: ಪುಟ; ೨೪

೧೮) ಜನಪದ ಮುಕ್ತಕಗಳು: ಎಚ್.ಎಮ್. ನಾರಾಯಣರಾವ: ಪುಟ: ೪೬

೧೯) ಸರೋಜನಿ ಸಂಗಪ್ಪಾ ಭಾಲ್ಕಿ: ವಯಸ್ಸು: ೫೨

೨೦) ಬೀದರ ಜಿಲ್ಲೆಯ ಜನಪದ ಗೀತೆಗಳು; ಕ್ಯಾತನ ಹಳ್ಳಿ ರಾಮಣ್ಣ.

೨೧) ಗಂಗಮ್ಮಾ ಟೊಪಾರೆ ಭಾಲ್ಕಿ ವಯಸ್ಸು; ೭೨

೨೨) ಸಾಹಿತ್ಯ ಸಂಗಮ. ಸ.ಸ. ಮಾಳವಾಡ: ಪುಟ; ೧೦೯

೨೩) ಸಾಹಿತ್ಯ ಸಂಗಮ. ಸ.ಸ. ಮಾಳವಾಡ: ಪುಟ; ೧೨೫

೨೪) ಗುಲ್ಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು: ಡಾ. ಯಶೋಧರಾ ಶಾಸ್ತ್ರಿ : ಪುಟ: ೧೫೧

೨೫) ಸಾಹಿತ್ಯ ಸಂಗಮ : ಸ.ಸ. ಮಾಳವಾಡ: ಪುಟ: ೨೧೩

ಅಧ್ಯಾಯ: ಮೂರು

ಜೀವನಾವರ್ತನದ ಆಚರಣಾ ಹಾಡುಗಳ ವಿಶ್ಲೇಷಣೆ

೩.೧ ಜೋಗುಳ ಹಾಡುಗಳು.

೩.೨ ಮೈನೆರೆದ ಹಾಡುಗಳು.

೩.೩ ಮದುವೆ ಹಾಡುಗಳು.

೩.೪ ಸೋಬಾನೆ ಹಾಡುಗಳು.

೩.೫ ಸೀಮಂತದ ಹಾಡುಗಳು.

೩.೬ ಮರಣದ ಹಾಡುಗಳು.

ಅಧ್ಯಾಯ: ಮೂರು

ಜೀವನಾವರ್ತನದ ಆಚರಣಾ ಹಾಡುಗಳ ವಿಶ್ಲೇಷಣೆ

ಜಾನಪದ ಹಾಡುಗಳನ್ನು ಅಧ್ಯಯನದ ದೃಷ್ಟಿಯಿಂದ ವಿವಿಧ ಪ್ರಕಾರಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಅವುಗಳಲ್ಲಿ ಜೀವನಾವರ್ತನ ಹಾಡುಗಳು ಎಂಬ ಒಂದು ಪ್ರಕಾರವಾಗಿದೆ. ಈ ಪ್ರಕಾರವು ಮಾನವನ ಒಟ್ಟಾರೆ ಜೀವನದಲ್ಲಿ ಆಚರಿಸುವ ವಿವಿಧ ಬಗೆಯ ಪದ್ಧತಿಯನ್ನು ಪ್ರತಿನಿಧಿಸುವಂತಿದ್ದು, ಇವುಗಳು ಮಾನವನ ಬದುಕಿಗೆ ಪೂರಕವಾಗಿರುತ್ತವೆ. ಮಾನವನ ಜೀವನದ ವಿಶಿಷ್ಟ ಕ್ಷಣಗಳಾದ ಜನನ, ಮರಣ, ಮದುವೆ ಋತುಮತಿ, ನಾಮಕರಣ, ಸೀಮಂತದಂತಹ ಸನ್ನಿವೇಶಗಳು ಬದುಕಿನಲ್ಲಿ ಒಮ್ಮೆ ಮಾತ್ರ ಬರುವಂತಹವುಗಳಾಗಿವೆ. ಈ ಕಾರಣದಿಂದಾಗಿ ಇವುಗಳನ್ನು ಜೀವನಾವರ್ತನ ಆಚರಣಾ ಹಾಡುಗಳು ಎಂದು ಕರೆಯಲಾಗುತ್ತದೆ.

ಮಹಿಳಾ ಜಾನಪದ ಹಾಡುಗಳಲ್ಲಿ ಕೌಟುಂಬಿಕ ಜೀವನದ ನಲಿವು ಮನಸ್ತಾಪ, ಸರಸ–ವಿರಸ, ಹಾಸ್ಯ–ವಿಡಂಬನೆಗಳು ರಸಪೂರ್ಣವಾಗಿ ಮೂಡಿಬಂದಿವೆ. ಬಾಳಿನ ಬಗೆಗೆ ಗೌರವ, ನಲಿವು, ದೈವೀ ಶ್ರದ್ಧೆ ಇವುಗಳು ಇಲ್ಲಿ ಹೃದಯಸ್ಪರ್ಶಿಯಾದ ಚಿತ್ರಣ ಪಡೆದಿರುತ್ತವೆ. ಸಾಹಿತ್ಯದ ರಸದೃಷ್ಟಿ ಇಲ್ಲಿ ಉತ್ಕಟವಾಗಿದೆ. ವರ್ಣನೆ, ಕಲ್ಪನೆ, ಪದವಿನ್ಯಾಸ, ಹಾಡಿನ ಗತಿ, ಗತ್ತು, ಲಯ ಇವುಗಳ ಬೆಡಗು ಮನಸ್ಸನ್ನು ಪುಳಕಿತಗೊಳಿಸುತ್ತವೆ. ಒಟ್ಟಿನಲ್ಲಿ ನಮ್ಮ ಮನಸ್ಸು, ಹೃದಯಗಳನ್ನು ತುಂಬುವ ಸೊಬಗು ಬೀದರ ಜಿಲ್ಲೆಯ ಜಾನಪದ ಹಾಡುಗಳಲ್ಲಿ ತುಂಬಿಕೊಂಡಿದೆ.[೧]

ಈ ಹಾಡುಗಳಲ್ಲಿ ಅನೇಕ ಪುಟ್ಟ ಪುಟ್ಟ ಗೀತೆಗಳೂ, ಕೆಲವು ನೀಳ್‌ಗೀತೆಗಳೂ ಅವುಗಳಲ್ಲಿ ಮುಖ್ಯವಾಗಿ ಕಂಡುಬರುತ್ತದೆ. ಇವುಗಳಲ್ಲಿ ನಾವು ಗಮನಿಸಬೇಕಾದುದು ನಾದವೈಶಿಷ್ಟ್ಯ. ಅವುಗಳಲ್ಲಿ ತಾಯಿಯ ಹಿರಿಮೆ, ಸತ್ಯಹರಿಶ್ಚಂದ್ರನ ಆದರ್ಶ, ಗಂಗೆ– ಗೌರಿಯರ ಆದರ್ಶ ' ನೀತಿ ಪದಗಳಾಗಿರುತ್ತವೆ. ಹೆಣ್ಣಿಗೆ ಒಂದು ಸುರಕ್ಷಿತ ನೆಲೆ ಒದಗಿಸಲು, ಸಂತಾನ ರಕ್ಷಣೆಗೆ, ಪೋಷಣೆಗೆ, 'ಮದುವೆ' ರೂಢಿಯಲ್ಲಿ ಬಂದಿದೆ. ಹೆಣ್ಣು ಗಂಡು ಒಂದುಗೂಡಿ ವ್ಯವಸ್ಥಿತವಾಗಿ ಜೀವನ ಸಾಗಿಸಲು ಸಮಾಜದಲ್ಲಿ ಎಲ್ಲರೂ ಒಪ್ಪಿಗೆ ಸೂಚಿಸುವ ವ್ಯವಸ್ಥೆಯೇ ಮದುವೆ. ಮುಂದೆ ಬರುಬರುತ್ತಾ ಕಟ್ಟುಪಾಡು ನಿಷೇಧ, ನಿರ್ಬಂಧ, ಸಪ್ತಪದಿ, ಮಂತ್ರ, ಪುರೋಹಿತಶಾಹಿ ಸೇರಿಕೊಂಡು ಮದುವೆಗೆ ಒಂದು ಧಾರ್ಮಿಕ ಚೌಕಟ್ಟು ಹಾಕಿದರು.

ಬೀದರ ಜಿಲ್ಲೆಯಲ್ಲಿ ದೊರೆಯುವ ಮದುವೆಯ ಕುರಿತ ಹಾಡುಗಳ ಮೂಲಕ ಜನಪದರ ಮದುವೆಯ ವೈಶಿಷ್ಟ್ಯತೆಯನ್ನು ಕಂಡುಕೊಳ್ಳಬಹುದಾಗಿದೆ. ಈ ಸಂದರ್ಭದಲ್ಲಿ ಆಚರಿಸಲ್ಪಡುವ ವಿಧಿ ವಿಧಾನಗಳೇ ಹಾಡುಗಳಲ್ಲಿ ತುಂಬಿಕೊಂಡಿದೆ. ಮದುವೆಯ ಹಾಡುಗಳು ಹೆಂಗಸರು ಹಾಡಬಲ್ಲ ವಿಶೇಷ ಬಗೆಯ ಭಾವಗೀತೆಗಳಾಗಿವೆ. ಈ ಹಾಡುಗಳಿಗೆ ತಮ್ಮದೇ ಆದ ಲಯ, ಧಾಟಿ, ರಾಗಗಳಿವೆ. ವಿವಿಧ ಸಂದರ್ಭಗಳಲ್ಲಿ ಇವುಗಳ ಧಾಟಿಯೂ ಬದಲಾವಣೆಯಾಗುತ್ತ ಹೋಗುತ್ತದೆ. ಮದುವೆಗೆ ನೆರೆದ ಜನರನ್ನು ಮಂತ್ರ ಮುಗ್ಧರನ್ನಾಗಿ ಮೋಡಿಗೊಳಿಸುವ ಶಕ್ತಿ ಈ ಹಾಡುಗಳಿಗಿದೆ. ಇವುಗಳಿಗೆ ಹಿನ್ನೆಲೆಯಾಗಿ ಯಾವ ವಾದ್ಯವಸ್ತುಗಳು ಇರದಿದ್ದರೂ ಸ್ತ್ರೀಯರ ಕೋಮಲ ಕಂಠದಿಂದ ಸೂಸಿ ಬರುವ ಈ ನಾದ ಮಾಧುರ್ಯದಲ್ಲಿ ಮನವನ್ನು ತಣಿಸುವ ಮಹಿಮೆ ಅಡಗಿದೆ.[೨]

ಒಂದು ಹೆಣ್ಣಿನ ಜೀವನದಲ್ಲಿ ವಧುವನ್ನು ನೋಡಿ ನಿಶ್ಚಯಿಸಿ ಮದುವೆಯಾಗಿ ಸೋಬನವಾಗುವವರೆಗೆ ಒಂದು ಘಟ್ಟವಾದರೆ, ಚೊಚ್ಚಲ ಗರ್ಭಿಣಿಯಾಗಿ ಗಂಡನ ಮನೆಯ ವಂಶ ಬೆಳೆಯಿಸುವ ಘಟ್ಟ ಮುಂದಿನದು. ಚೊಚ್ಚಲ ಗರ್ಭಿಣಿಗೆ ಮಾಡುವ ಶುಭ ಸಮಾರಂಭವನ್ನು ಕುಪ್ಪಸ ಕಾರ್ಯ, ಸೀಮಂತ ಕಾರ್ಯ, ಹೂ ಮುಡಿಸುವ ಕಾರ್ಯವೆಂತಲೂ ಕರೆಯುತ್ತಾರೆ. ಹೆಣ್ಣು ಮಕ್ಕಳನ್ನು ಗಂಡನ ಮನೆಗೆ ಕಳಿಸಿಕೊಡುವ ದೃಶ್ಯ ಪ್ರತಿಯೊಂದು ಹಿಂದೂ ಕುಟುಂಬದಲ್ಲಿಯೂ ಅತ್ಯಂತ ಸಂಭ್ರಮಪೂರ್ಣವಾದುದು. ಮಗಳಿಗೆ ಮಾಡಿದ್ದನ್ನೆಲ್ಲ ನೆನೆದು ಅವಳ ಯೋಗಕ್ಷೇಮಕ್ಕಾಗಿ ಚಿಂತಿಸುತ್ತಾ, ಕಣ್ಣೀರಿಡುತ್ತಾ ಹಾಡುವ ಸನ್ನಿವೇಶಗಳು ಭಾವನಾತ್ಮವಾಗಿರುತ್ತವೆ.

ಸಾವು ಯಾರನ್ನೂ ಬಿಟ್ಟಿದ್ದಲ್ಲ, ಅಹಂಭಾವದಿಂದ ಕೊಬ್ಬಿದವರಿಗೆ ಅದರ ಅರಿವಿರಬೇಕು. ವ್ಯಕ್ತಿಯೊಬ್ಬ ತೀರಿಕೊಂಡಾಗ ಅವರ ರಕ್ತ ಸಂಬಂಧಿಗಳು ಶವದ ಮೇಲೆ ಬಿದ್ದು ಹೊರಳಾಡುತ್ತ, ಎದೆ ಗುದ್ದಿಕೊಳ್ಳುತ್ತಾ, ರಾಗಾಲಾಪ ಮಾಡುತ್ತ ಲಯಬದ್ಧವಾಗಿ ಹೇಳುವಂಥ ಹಾಡುಗಳು ಜಾನಪದ ಪರಂಪರೆಯಲ್ಲಿ ಕಂಡುಬರುತ್ತವೆ. ಸಾವಿನ ಸಂದರ್ಭದಲ್ಲಿ ಮಾತ್ರ ಕೇಳಿಬರುವ ಈ ರಚನೆಗಳನ್ನು ಹಾಡುವರಲ್ಲಿ ಹೆಂಗಸರದ್ದೇ ಮೇಲುಗೈ. ಮೃತರ ಸಿದ್ಧಿ, ಸಾಧನೆ, ಧೈರ್ಯ, ಸ್ಥೈರ್ಯಾದಿಗಳನ್ನು ನೆನೆದುಕೊಂಡು ರಾಗಾಲಾಪ ಮಾಡುತ್ತಾರೆ. ಸಾವು ಮಾನವ ಬದುಕಿನ ಕೊನೆಯ ಘಟ್ಟವಾದುದರಿಂದ ಈ ಸಂದರ್ಭದಲ್ಲಿ ಹೊಗಳುವ ಪದಗಳಿಗೆ ವಿಶೇಷ ಮಹತ್ವವಿದೆ. ಹೀಗೆ ಜಾನಪದ ಹಾಡು ಪರಂಪರೆಯಲ್ಲಿ ಹಲವಾರು ಬಗೆಯ ಹಾಡುಗಳನ್ನು ಸೃಷ್ಟಿಸಿಕೊಂಡು, ಅವುಗಳಿಗೆ ನಿರಂತರವಾಗಿ ಹೊಸ ರೂಪವನ್ನು ಕೊಡುತ್ತ ಬಂದಿದ್ದಾರೆ. ಈ ಹಾಡುಗಳಲ್ಲಿ ಹಲವಾರು ಪ್ರಕಾರಗಳಿವೆ. ಅವುಗಳನ್ನು ಈ ಮುಂದಿನಂತೆ ವಿಶ್ಲೇಷಣಾತ್ಮಕ ನೆಲೆಯಲ್ಲಿ ನೋಡಬಹುದಾಗಿದೆ.

೩.೧ ಜೋಗುಳ ಹಾಡುಗಳು:

ಜಾನಪದ ಹಾಡುಗಳಲ್ಲಿ ಜೋಗುಳದ ಹಾಡುಗಳಿಗೆ ತನ್ನದೇ ಆದ ಮಹತ್ವದ ಸ್ಥಾನವಿದೆ. ಇಲ್ಲಿ ಮಹಿಳೆಯ ಸೃಷ್ಟಿಯ ಹಾಡುಗಳೇ ಹೆಚ್ಚಾಗಿ ಕಂಡುಬರುತ್ತವೆ. ಇದಕ್ಕೆ ಕಾರಣ ಮಕ್ಕಳನ್ನು ಪಾಲಿಸಿ, ಪೋಷಿಸುವ ಮೂಲಕ ಆ ಮಕ್ಕಳು ಅತ್ತು ಕರೆದಾಗ ಸಮಾಧಾನಪಡಿಸುವ ಜವಾಬ್ದಾರಿ ಮಹಿಳೆಯದೇ ಆಗಿರುವ ಕಾರಣದಿಂದಾಗಿ ಇವು ಮಹಿಳಾ ಪ್ರಧಾನವಾಗಿ ಕಂಡುಬರುತ್ತವೆ. ಮಕ್ಕಳೇ ಈ ಬಾಳಿನ ಸಂಪತ್ತು ಎಂದು ಜನಾಂಗವು ಅರಿತುಕೊಂಡು ನೆಮ್ಮದಿಯಿಂದ ಜೀವನ ಮಾಡುತ್ತ ಬಂದಿದೆ. ಇದರಿಂದಲೇ ಮಾನವಕೋಟಿ ಉದ್ಧಾರವಾಗಿದೆ. ಗಂಡು ಹೆಣ್ಣುಗಳು ನೆಮ್ಮದಿಯಾಗಿ ದಾಂಪತ್ಯವನ್ನು ಸಾಗಿಸುವುದೇ ಮಕ್ಕಳನ್ನು ಪಡೆಯುವುದಕ್ಕಾಗಿ. ಇದುವೇ ಲಗ್ನದ ಮೂಲೋದ್ದೇಶ. ಹೆಣ್ಣಿಗೆ ಮಕ್ಕಳನ್ನು ಪಡೆದ ಮೇಲೆಯೇ ಅವಳ ಒಗೆತನದಲ್ಲಿ ದಾಂಪತ್ಯವು ಮಧುರವಾಗುವುದು. ಮಕ್ಕಳಿಂದಲೇ ಇಹಪರದಲ್ಲಿ ಗತಿ ಎಂಬ ಜಾಗೃತ ಭಾವನೆಯು ಇದೆ. ಇದಕ್ಕೆ ಪುಷ್ಟಿಯಾಗಿ ಭಾರತ ಸ್ಮೃತಿಕಾರರ 'ಅಪುತ್ರಸ್ಯ ಗತಿರ್ನಾಸ್ತಿ' (ಮಕ್ಕಳಿಲ್ಲದವರಿಗೆ ಸದ್ಗತಿಯಿಲ್ಲ) ಎಂಬ ವಾಕ್ಯವು ಭಾರತ ಧರ್ಮ ಸಂಸ್ಕೃತಿಯಲ್ಲಿ ತಲೆ ಎತ್ತಿ ನಿಂತಿದೆ. ಮಕ್ಕಳನ್ನು ಪಡೆಯದ ಹೆಣ್ಣು ಬಾಳಿನಲ್ಲಿ ಚಿಂತೆಗೀಡಾಗಿ, ಬಳಲಿ, ಕೊರಗಿ ಸಮಾಜದಲ್ಲಿ ಜನಾಪಹಾಸ್ಯಕ್ಕೀಡಾಗಲು ಹೆಜ್ಜೆ ಹೆಜ್ಜೆಗೂ ಉಸಿರು ಹಾಕುತ್ತಲೂ ಬಂದಿದೆ. ಯಾವ ಜನಾಂಗದಲ್ಲಿಯೇ ಆಗಲಿ ಹೆಣ್ಣಿನ ಹೆಣ್ತನವು ಸಾರ್ಥಕವಾಗಬೇಕಾದರೆ ಅವಳು ಮಕ್ಕಳ ತಾಯಿಯಾದ ಮೇಲೆಯೇ.[೨] ತಾಯ್ತನ ಹೆಣ್ಣಿನ ಜೀವನದ ಪರಿಪೂರ್ಣತೆಯ ಅವಸ್ಥೆ. ಇವಳಿಗೆ ತನ್ನ ಕುಟುಂಬದಲ್ಲಿ, ಸಮಾಜದಲ್ಲಿ ಗೌರವದ ಸ್ಥಾನಗಳಿವೆ. ಮಂಗಳ ಕಾರ್ಯಗಳಲ್ಲೆಲ್ಲಾ ಇವಳು ಗರತಿಯಾಗಿ ಮಹತ್ವದ ಪಾತ್ರವಹಿಸುತ್ತಾಳೆ. ಹೆತ್ತವರಮನೆಗೂ, ಕೊಟ್ಟವರ ಮನೆಯನ್ನು ಬೆಳಗುವ ಬಾಳಿನ ನಂದಾದೀಪವಾಗುತ್ತಾಳೆ.

ಹೆಣ್ಣುಮಕ್ಕಳಿಗೆ ಮಕ್ಕಳೆಂದರೆ ದೇವರಿಗಿಂತಲೂ ಪ್ರೀತಿ. ಮಕ್ಕಳ ತೂಕಕ್ಕೆ ಬರುವ ವಸ್ತು ಮತ್ತೊಂದಿಲ್ಲ. ಮಕ್ಕಳಿಗಾಗಿಯೇ ಅವಳ ಬಾಳು, ಬದುಕು ತ್ಯಾಗ. ಮಗು ಹೆತ್ತ ಹನ್ನೆಡು ದಿವಸಕ್ಕೆ ತೊಟ್ಟಿಲಲ್ಲಿ ಹಾಕಿ ಮಗು ಹೆಸರಿಡುವರು. ಅಂದು ಮನೆಯಲ್ಲಿ ಹಬ್ಬ. ಸಂಜೆ ಓಣಿಯ ಮುತ್ತೈದೆಯರೆಲ್ಲ ಕೂಡಿ ಹಾಡಿ ಮಗು ಹೆಸರಿಡುವರು. ಆಗ ಇಬ್ಬರು ದನಿಗೂಡಿಸಿ ಹಾಡಿದರೆ, ಉಳಿದವರು ತೊಟ್ಟಿಲು ಕಾಲು ಹಿಡಿದು ಜೋ ಜೋ ಎಂದು ಹಾಡಿನ ಪಲ್ಲವಿ ಹಾಡುವರು. ಇಲ್ಲಿ ತುಂಡು ತ್ರಿಪದಿಗಿಂತ ಉದ್ದನೆಯ ಹಾಡುಗಳು ಅಧಿಕವಾಗಿ ಕೇಳಿ ಬರುತ್ತವೆ. ಈ ಮಕ್ಕಳ ಹಾಡುಗಳು ಜಾನಪದ ಸೋಗಡಿನಲ್ಲಿಯೇ ಇಂದಿಗೂ ಮುಂದುವರೆಯುತ್ತಿರುವುದನ್ನು ಕಾಣಬಹುದಾಗಿದೆ.

ಜನಪದ ಸಾಹಿತ್ಯದಲ್ಲಿ ಕಂಡುಬರುವ ಮಕ್ಕಳ ಹಾಡನ್ನು ಹೆಂಗಸರೇ ರಚಿಸಿ ಹಾಡಿದ್ದಾರೆ. ಗಿಡಕ್ಕೆ ಹೂವು ಹೇಗೋ ಹೆಣ್ಣಿಗೆ ಮಕ್ಕಳು ಹಾಗೆ. ಮಕ್ಕಳಾಟ ಎಲ್ಲರನ್ನೂ ಆಕರ್ಷಿಸುತ್ತದೆ. ಅದರ ವರ್ಣನೆಯ ಸೊಬಗನ್ನು ಸಹಜವಾಗಿ ಜನಪದ ಹೆಣ್ಣು ಮಾತಿನಲ್ಲಿ ಹಿಡಿದಿಟ್ಟಿದ್ದಾಳೆ.

ನನ್ನಯ್ಯನಂತೋರು ಹನ್ನೆರಡು ಮಕ್ಕಳು
ಹೊನ್ನೆಯ ಮರದ ನೆರಳಲ್ಲಿ ಆಡುವಾಗ
ಸನ್ಯಾಸಿ ಜಪವ ಮರತಾನ.

ಸನ್ಯಾಸಿಯೂ ತನ್ನ ಧ್ಯಾನವನ್ನು ಮರೆತು ಆ ಮಕ್ಕಳ ಆಟವನ್ನು ನೋಡುತ್ತಾನೆ. ಹಾಗಿದ್ದ ಮೇಲೆ ಆ ಮಕ್ಕಳಾಟ ಅದೆಷ್ಟು ಆಕರ್ಷಕವಾಗಿರಬೇಕು. ಇದು ಅನಕ್ಷರಸ್ಥ ಸಮುದಾಯದಿಂದ ಬಂದ ನಮ್ಮ ಪೂರ್ವಿಕ ಮಹಿಳೆಯರು ಕಂಡುಕೊಂಡಿರುವ ದರ್ಶನವಾಗಿದೆ. ಇವರಿಗೆ ಔಪಚಾರಿಕ ಶಿಕ್ಷಣದ ಕೊರತೆ ಇರಬಹುದು. ಆದರೆ ಲೋಕಜ್ಞಾನಕ್ಕೆ ಬೇಕಾದ ತಿಳುವಳಿಕೆ ಇವರಲ್ಲಿ ಬದುಕಿನಿಂದಲೇ ಬಂದಿರುತ್ತದೆ. ಹೀಗಾಗಿ ಇವರದು ಶ್ರಮ ಕೇಂದ್ರಿತ ಬದುಕಿನಿಂದ ಪಡೆದ ನಿಜವಾದ ಶಿಕ್ಷಣವಾಗಿದೆ. ಇದರ ಫಲವಾಗಿಯೇ ಸಮೃದ್ಧವಾದ ಸಾಹಿತ್ಯ ಸೊಬಗನ್ನು ತಮ್ಮ ನಾಲಿಗೆಯ ತುದಿಯಲ್ಲಿ ಕೇಂದ್ರೀಕರಿಸಿಕೊಂಡು ಬಂದಿದ್ದಾರೆ.

ಎಷ್ಟೇ ಬಡತನವಿದ್ದರೂ ಮಗುವಿನ ಸಂಭ್ರಮದ ಸಮಾರಂಭದಲ್ಲಿ ಯಾವ ಕೊರತೆಯೂ ಇರುವುದಿಲ್ಲ. ಚೊಚ್ಚಲು ಹೆರಿಗೆಗಾಗಿ ತವರಿಗೆ ಬಂದ ಹೆಣ್ಣಿಗೆ ಮುಂದೆ ಹುಟ್ಟುವ ಮಗು ಹೆಣ್ಣೋ ಗಂಡೋ ಎಂಬ ಕುತೂಹಲ ಕೆರಳುತ್ತದೆ. ಜನಪದ ಸಮಾಜದಲ್ಲಿ ಹೆಣ್ಣು ಮಗುವಿಗಿಂತ ಗಂಡು ಮಗುವಿಗೆ ಹೆಚ್ಚಿನ ಬೆಲೆಯಿದೆ. ಗಂಡು ಮಗು ವಂಶೋದ್ಧಾರಕನೆಂದು ಪರಿಗಣಿಸಿ ಹೆಚ್ಚಿನ ಸಂಭ್ರಮಪಡುವರು. ಆದರೆ ಹೆಣ್ಣಿಗೆ ಯಾವುದೇ ಮಗು ಹುಟ್ಟಿದರೂ ತನ್ನ ಬದುಕು ಸಾರ್ಥಕವಾಯಿತೆಂದು ಸಂತೀಷಪಡುತ್ತಾಳೆ. ಗಂಡನ ಮನೆಯಲ್ಲಿ ಅವಳ ಸ್ಥಾನ ಭದ್ರವಾಗುತ್ತದೆ. ಹೆಣ್ಣಿನ ತಾಯ್ತನ ಕೊನರಿ, ಫಲನೀಡಿ ಅವಳನ್ನು ಉದ್ಧರಿಸುತ್ತದೆ. ಜನಿಸಿದ ಮಗುವಿಗೆ ಒಂದು ದಿನ ಶುಭ ಮೂಹೋರ್ತದಂದು 'ತೊಟ್ಟಿಲು ಕಾರ್ಯ' (ನಾಮಕರಣ) ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ಸುಮಂಗಲೆಯರೆಲ್ಲ ಸೇರಿ ಮಗುವಿನ, ದೇವ ದೇವತೆಗಳ, ಬಾಲ ಲೀಲೆಗಳನ್ನು ಕುರಿತು ಸುಂದರವಾದ ಹಾಡುಗಳನ್ನು ಹೇಳುತ್ತ ತೊಟ್ಟಿಲು ತೂಗುವರು. ಅದನ್ನು ತೂಗುತ್ತ ಹಾಡುವ ಹಾಡುಗಳೇ 'ಜೋಗುಳ ಪದ' 'ಲಾಲಿಪದ'ಗಳೆಂದು ಕರೆಯುತ್ತಾರೆ.

ಜಾನಪದ ಪ್ರಕಾರದಲ್ಲಿ ತಾವು ಈ ಶುಭ ಸಂದರ್ಭದಲ್ಲಿ ಪದಗಳನ್ನು ಹೇಳುವ ಹಾಡುಗಳಲ್ಲಿ ತಮ್ಮ ಆರಾಧ್ಯ ದೈವ ಅಥವಾ ಆರಾಧ್ಯ ಗುರುವನ್ನು ಸ್ಮರಿಸುವುದು ಕಂಡುಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಬೀದರ ಪ್ರಾಂತ್ಯದಲ್ಲಿ ಪ್ರಸಿದ್ಧ ಗುರುವಾದ ಶರಣಬಸವೇಶ್ವರರನ್ನು ಜೋಗುಳ ಪದದಲ್ಲಿ ನೆನೆಯುತ್ತ ಹಾಡುಹೇಳುವರು.

ಜೋ ಎಂದು ತೂಗಿರಿ ನಂದಿ ಬಸವನಿಗೆ
ಜೋ ಎಂದು ತೂಗಿರಿ ನಂದಿ ಕೇಶವಗೆ
ಜೋ ಎಂದು ತೂಗಿರಿ ಬಸವರಾಜನಿಗೆ
ಅರಳ ಗುಂಡಿಗಿ ಪುರದಲ್ಲಿ ಹುಟ್ಟಿದವನಿಗೆ ಜೋ ಜೋ ಜೋ ಜೋ

ಸಾಲಕ್ಕರ ಮನೆಯಲ್ಲಿ ಚಿಕ್ಕವನಾಗಿ
ಮಡದಿ ಮಾದೇವಿಗೆ ಮದುವೆಯನಾಗಿ
ಅಣ್ಣ ತಮ್ಮರೋಳು ಕದನ ಒಳಗಾಗಿ
ಸಣ್ಣ ಮನಸುಳ್ಳವರಾಗಿ ಕುಂತಾರಬ್ಯಾರಾಗಿ ॥ ಜೋ ಜೋ ॥

ಪತ್ನಿಯ ಒಡಗೂಡಿ ಇರಲು ಮನೆಯೊಳಗೆ
ಬಿಕ್ಷಕ್ಕೆ ಜಂಗಮರು ಬಂದಾರ ಬಾಗಿಲಿಗೆ
ಉಸರು ಹಾಕುತ್ತ ನೀಡ್ಯಾಳವ್ವಗೆ ऽऽ
ಶಿಶುವು ಇದ್ದಲ್ಲೇ ಇರಲೆಂದು ಕೊಟ್ಟಾರೋ ಶಾಪಾ ॥ ಜೋ ಜೋ ॥

ಬೆಳೆದ್ಧಂತ ಹೊಲವೆಲ್ಲ ಹಕ್ಕಿಯ ಪಾಲಾ
ಹದಿನೇಳ ಖಂಡುಗ ರಾಶಿಯ ಜೋಳಾ
ಕೊಟ್ಟು ದಾನಾ ಧರ್ಮ ಮಾಡ್ಯಾರೋ ಭಾಳಾ
ಬಿಟ್ಟು ಸತಿ ಪತಿ ನಡದಾರೋ ಅವರಾದಿ ಪುರಕ ॥ ಜೋ ಜೋ ॥

ಕಲಬುರ್ಗಿ ಪಟ್ನಕ್ಕ ಬಂದಾರ ಶಿವಶರಣ
ದಾಸೋಗ ನಡಸ್ಯಾರ ಉಣಸಿ ಶಿವಧ್ಯಾನ
ಹಿಂಗೆ ನಡಿಲೆಂದು ಬೇಡಿ ಕೊಳ್ಳುವೆನಾ
ಶಿವನ ಗುರುಪಾದ ಮರೆಯದೆ ಸಲಿಸುವೆ ಮುನ್ನ ॥ ಜೋ ಜೋ ॥

ಮಕ್ಕಳಿಲ್ಲದವರು ಬರಲು ನಮತನಕ
ಅಕ್ಕರದಿ ಕೊಟ್ಟಾರೋ ಕಂದ ವೀಕ್ಷಣಕ
ವಿಪ್ರವರು ಬಂದು ಬೇಡ್ಯಾರೋ ಬದುಕ
ಸಾವಿರ ಸುವರ್ಣ ಕೊಟ್ಟಾರೋ ಲಗ್ನ ಸಂಭ್ರಮಕ ॥ ಜೋ ಜೋ ॥
ಥೇರ ಎಳೆಯೋರು ರಾತುರಿ ಚಂದ
ರೂಪಾಯಿ ಹೊಡಸ್ಯಾರೋ ಬಾಗಿಲ ಮುಂದ
ಹಿಂಗೇ ನೋಡಲು ಬಂದವರೆಲ್ಲ ಪುತ್ರನತಾಯಿ ॥ ಜೋ ಜೋ ॥ [೪]

ಓಣಿಯ ಮುತ್ತೈದೆಯರೆಲ್ಲ ಕೂಡಿ ಹಾಡು ಹೇಳುವಾಗ, ಮಗುವಿನ ಹಾಸಿಗೆ, ತೊಟ್ಟಿಲು, ಮುತ್ತೈದೆಯರೆನ್ನೆಲ್ಲ ವರ್ಣಿಸುತ್ತ ಹಾಡು ಹೇಳುವರು.

ತೂಗಿರಿ ರನ್ನನ ತೂಗಿರಿ ಚಿನ್ನನ
ತೂಗಿರಿ ಎಚ್ಚ ಕರಕರಯ್ಯನ
ತೂಗಿರಿ ಎಚ್ಚ ಕರಕರಾವಪ್ಪಯ್ಯನ
ಭಾಗ್ಯವಂತರೆಲ್ಲ ತೂಗಿರಿ ನೀವು ತೂಗಿರಿ. ॥೨॥

ಕೂಸಿನ ತೊಟಲಿಗಿ ಸಾಸನ ಹೊಯ್ಯದ್ದಂಗ
ಮೋಸಗಾರನ ತೂಗಿರಿ । ಸಾಸನ ಒಳಗಿನ

ಸರವೆದ್ದು ಬರುವಾಗ ದೇಸಾಯಿ ತೊಟ್ಟಿಲು
ತೂಗಿರಿ ನೀವು ತೂಗಿರಿ

ಕೂಸಿನ ತೊಟ್ಟಿಲಿಗಿ ಗೊಂಡ್ಯಾದ ಹಾಸಿಗಿ
ಗಂಗಾಧರನ ತೂಗಿರಿ । ಗಂಗಾಧರನ
ನಂದಿಕೇಸುರಯ್ಯನ ಚಂದ್ರ ಬೇತಲದವರೆ
ತೂಗಿರಿ ನೀವು ತೂಗಿರಿ.

ಎಡದ ಜೂವಲಿಮ್ಯಾಲ ಬಲದ ಜೂವಲಿಕಟ್ಟಿ
ಮನಗಿಪ ರಂಗನ ತೂಗಿರಿ ॥೨॥

ಗಲಿಬಿಲಿದೇವ ಗಿಲಿಬಿಲಿ ಅಳುವಾಗ
ಎಳಿಯ ಬೇತಲದವರೆ
ತೂಗಿರಿ ನೀವು ತೂಗಿರಿ ॥೨॥

ಸಂಪಿವಿಗಿ ಹೂವ್ವಾ ಹಂಚುತ್ತಾ ಬರುವಾಗ
ಕಂಕಣ ದೇಶದ ಕಡೆಯವರೇ ಽಽ
ಕಂಕಣ ದೇಶದ ಕಡೆಯವರು ಬರುವಾಗ
ಹಂಪಿ ವಿರಪಾಕ್ಷಯ್ಯನ ತೂಗಿರಿ ನೀವು ತೂಗಿರಿ ॥೨॥

ಮಲ್ಲಿಗಿ ಹೂವ್ವಾ ಚೆಲ್ಲುತ್ತಾ ಬರುವಾಗ
ಕಲ್ಯಾಣ ದೇಶದ ಕಡೆಯವರೇ । ಕಲ್ಯಾಣ
ದೇಶದ ಕಡೆಯವರೇ ಬರುವಾಗ
ಚನ್ನಮಲ್ಲೇಶನ ತೂಗಿರಿ ನೀವು ತೂಗಿರಿ ॥೨॥ [೫]

ಎಂದು ತಾಯಿ ತಾನು ಅನೇಕ ಕಷ್ಟ ನಷ್ಟಗಳನ್ನು ಸಹಿಸಿದರೂ ತನ್ನ ಮಗುವನ್ನು ಗಂಗಾಧರ, ನಂದಿಕೇಸುರ, ವಿರುಪಾಕ್ಷ, ಚೆನ್ನಮಲ್ಲೇಶನೆಂದು ಗುಣಗಾನ ಮಾಡಿ ಅಂದ ಚೆಂದದ ನುಡಿಯೊಡನೆ ಲಾಲಿ ಹಾಡುಗಳನ್ನು ಕೇಳಿದಾಗ ಆ ತಾಯ್ತನದ ಹಿರಿಮೆ ಪ್ರದರ್ಶನವಾಗದಿರದು. ಲಾಲಿ ಜೋಗುಳಗಳಲ್ಲಿ ತಾಯಿಯ ಹಂಬಲ, ಪರಮಾತ್ಮನ ಸ್ತುತಿ, ಮಗುವಿನ ರೂಪಲಾವಣ್ಯ ಹಾಗೂ ವಿವಿಧ ಆಟಪಾಟಗಳ ಕೌಶಲ್ಯಾದಿಗಳ ಸೂಕ್ಷ್ಮ ನಿರೀಕ್ಷಣೆ ಮೊದಲಾದ ವಿಷಯ ವಿಸ್ತರಣೆಯನ್ನು ಕಾಣಬಹುದು. ಮುತ್ತೈದೆಯರು ಕನ್ನೆಯರೂ ಮಗುವಿಗೆ ಹೆಸರಿಟ್ಟು ತೊಟ್ಟಿಲಲ್ಲಿ ತೂಗುವಾಗ ದೇವ ದೇವತೆಗಳ ಶರಣ–ಸಂತ–ಸಾಧು, ಸತ್ಪುರುಷರ ಪ್ರಾರ್ಥನೆಯ ಜೋಗುಳವಹಾಡುವಾಗಲಂತೂ ಬಲು ಸ್ವಾರಸ್ಯವಾಗಿರುವುದು.

ಭಾಲ್ಕಿಯ ಶರಣರೇ ನೀವೆಲ್ಲ ಕೇಳಿ
ನಮ್ಮಯ ಪುಣ್ಯದ ಶರಣರ ನೋಡಿ
ಅವರ್ಹೇಳಿದಂತೆ ನಡೆದು ತೋರಿರಿ
ಹೀಗೆ ವಿಭೂತಿ ಪುರುಷನ ಸ್ಮರಣೆ ಗೈಯಿರಿ ॥ ಜೋ ಜೋ ॥ [೬]

ಇಲ್ಲಿ ಮಗುವಿಗೆ ನಾಮಕರಣ ಮಾಡುವ ಸಂದರ್ಭದಲ್ಲಿ ತಮ್ಮ ಆರಾಧ್ಯ ಗುರುವನ್ನು ಸ್ಮರಣೆ ಮಾಡುವ ಮೂಲಕವಾಗಿ, ಈ ಮಗುವು ಕೂಡ ತಮ್ಮ ಗುರುವಿನಂತೆ ನಯ ವಿನಯ ಪಡೆದು ಧರ್ಮ ಮಾರ್ಗದಲ್ಲಿ ನಡೆಯಲಿ ಎಂಬುದಾಗಿ ಅರಸುವುದನ್ನು ಈ ಜಾನಪದ ಹಾಡುಗಳಲ್ಲಿ ಕಂಡುಬರುತ್ತದೆ. ಹೀಗಾಗಿಯೇ ಇಲ್ಲಿ ಪುನಃ ಪುನಃ ಸ್ಥಳೀಯ ಆರಾಧ್ಯ ದೈವ ಜನಪದ ಸಾಹಿತ್ಯದಲ್ಲಿ ವ್ಯಕ್ತವಾಗುವುದು. ಆದ್ದರಿಂದ ಇಲ್ಲಿ ಭಾಲ್ಕಿಯ ಶರಣರ ಉಕ್ತಿ ಈ ಭಾಗದ ಜಾನಪದರ ಬಾಯಲ್ಲಿ ಪುನರುಕ್ತಿಯಾಗುವುದನ್ನು ಕಾಣಬಹುದಾಗಿದೆ.

ಮನೆಯಲ್ಲಿ ಮಗಳು, ಅಥವಾ ಸೊಸೆ ಪಡೆದ ಮಗುವು ಅವಳ ಬದುಕಿನ ಬವಣೆಯನ್ನೆಲ್ಲ ಮರೆಯುವಂತೆ ಮಾಡಿದೆ. ಅವಳು ವಂಶದ ಕುಡಿಯನ್ನು ಕುಟುಂಬಕ್ಕೆ ನೀಡಿದಾಗ ಅಜ್ಜ ಅಜ್ಜಿಯರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಅವರೆಲ್ಲರೂ ಮೊಮ್ಮಗುವನ್ನು ನೋಡಲು ಬರಿಗೈಲಿ ಬರದೆ ತಮಗಿಷ್ಟವಾದ ಆಭರಣಗಳನ್ನು ತೆಗೆದುಕೊಂಡು ಬಂದು ಮಗುವಿಗೆ ಆಭರಣವಿಟ್ಟು ಸಂತೋಷ ಪಡುವರು. ಅಜ್ಜಿಯ ಕರುಳಿನ ಕುಡಿಯನ್ನು ಮುತ್ತಿನಂಥ ಮಗುವಿಗೆ ಮುತ್ತಿನ ನೆದರ ತೆಗೆಯುವ ಮಹಾಭಿಲಾಷೆ ಅವಳ ಭಾವಜೀವನದ ಶ್ರೀಮಂತಿಗೆ ಒಂದು ಸಂಕೇತ. ಅವರನ್ನೂ ತೊಟ್ಟಿಲು ಕಾರ್ಯಕ್ರಮಕ್ಕೆ ಆಮಂತ್ರಿಸುತ್ತಾ, ಮಗುವಿನ ತಂದೆ-ತಾಯಿಯರನ್ನು ಕುರಿತ ಜಾನಪದ ಹಾಡು ಹೀಗಿದೆ,

ಅವರ ಮುತ್ತ್ಯಾ ಬರುವಾಗ ಸುಮ್ಮನ ಬರಾಲ
ಒಮ್ಮನ ಮುತ್ತ ಉಡಿಯಲ್ಲಿ ॥ ಜೋ ಜೋ ॥

ಒಮ್ಮಅನ ಮುತ್ತ ಉಡಿಯಲ್ಲಿ ತೊಗೊಂಡು
ಮುತ್ತ್ಯಾ ಬಸವರಾಜಗ ಬರಹೇಳರಿ ॥ ಜೋ ಜೋ ॥

ಅವರಾಯಿ ಬರುವಾಗ ಸುಮ್ಮನ ಬರಾಲ
ಅಚ್ಚೇರಿನ ಗೆಜ್ಜಿ ಅರಳೇಲಿ ॥ ಜೋ ಜೋ ॥

ಅಚ್ಚೇರಿನ ಗೆಜ್ಜಿ ಅರಳೇಲಿ ತೊಗೊಂಡು
ಆಯಿ ಮೀನಾಕ್ಷಿಗಿ ಬರಹೇಳರಿ ॥ ಜೋ ಜೋ ॥

ಇಲ್ಲಿ ಮಗುವಿನ ನಾಮಕರಣದ ಸಂದರ್ಭದಲ್ಲಿ ಹಾಡುವ ಈ ಹಾಡುಗಳು ನೈತಿಕತೆಯನ್ನು ಎತ್ತಿಹಿಡಿಯುತ್ತವೆ. ಈ ನೈತಿಕತೆಯು ಮಗುವಿನ ತಂದೆ ತಾಯಿಯರಿಗೆ ಆ ಮಗುವನ್ನು ಮುನ್ನಡೆಸುವ ಅಂಶಗಳನ್ನು ವ್ಯಕ್ತಪಡಿಸುತ್ತವೆ. ಹೀಗಾಗಿ ಜಾನಪದರ ಅರ್ಥಪೂರ್ಣ ಬದುಕಿಗೆ ಇಂತಹ ಜಾನಪದ ಹಾಡುಗಳೇ ದಾರಿದೀಪವಾಗಿ ಕಂಡುಬರುತ್ತವೆ.

ಮಗುವಿಗೆ ಹೆಸರಿಡಲು ಸೋದರತ್ತೆಯನ್ನು ಆಮಂತ್ರಿಸಲಾಗುವುದು. ಅದಕ್ಕೆ ಅವಳು ಪ್ರೀತಿಯಿಂದ ತಾನು ಸೋದರಳಿಯ ಸೋದರ ಸೊಸೆಗೆ ಹೆಸರಿಡುವುದಾಗಿ, ಆದರೆ ತನ್ನನ್ನು ಬೆನ್ನಲ್ಲಿ ಗುದ್ದಬೇಡಿರೆಂದು ಸದ್ಗುರುವಿನ ಮೇಲೆ ಆಣೆ ಇಡುವಳು. ಅಳಕುತ್ತ, ಬಳಕುತ್ತ ಬಂದು ಮಗುವಿಗೆ ಹೆಸರಿಡುವಳು. ಅದು ಅವಳದೇ ಅಧಿಕಾರವಾಗಿರುತ್ತದೆ.

ಅಂಜುತ್ತ, ಅಳಕುತ್ತ, ನಾಚುತ್ತ, ಬಳಕುತ್ತ
ಸೋದರತ್ತಿ ಬಂದು ಹೇಸರೀಡೇ ॥ ಜೋ ಜೋ ॥

ಸೋದರತ್ತಿ ಬಂದು ಹೆಸರೀಡೇ ಜ್ಯೋತೆಮ್ಮಾ

ಆರು ಮೂರುತನ ಗುದ್ದಂದಾರೆ ॥ ಜೋ ಜೋ ॥

ಗುದ್ದುಬ್ಯಾಡರಿ ನನ್ನ ಗುರುವಿನ ಆಣೇದ
ಸದ್ಗುರುವಿನ್ಹೆಸರ ನಾನಿಡ ಬಂದ ॥ ಜೋ ಜೋ ॥ [೭]

ಈ ರೀತಿ ಸೋದರತ್ತೆಯು ಮಗುವಿನ ಕಿವಿಯಲ್ಲಿ ಬಂದು ಮೊದಲು ಮನೆದೇವರ, ಸದ್ಗುರುವಿನ, ದೇವತೆಗಳ ಹೆಸರು ಇಡುವಳು. ಬಾಗಿಣ ಪಡೆದ ಮುತ್ತೈದೆಯರೆಲ್ಲ ಕಮ್ಮೆಕೊಡ ಎತ್ತಿ, ಮಗುವಿನ ತಂದೆ ತಾಯಿಯರನ್ನು ಕುರಿತು ಹಾಡಿ, ಮಗು ಪಡೆಯಲು ಅವರು ಪಟ್ಟ ಪಾಡನ್ನೆಲ್ಲ ಸ್ಮರಿಸಿ, ಕಷ್ಟ ಮರೆತು ಸಂತಸವಾಗಿರುವುದನ್ನು ಸ್ಮರಿಸುವರು. ಅಂತಿಮವಾಗಿ ಕಾರ್ಯಕ್ರಮ ಮುಗಿಸುವ ಪೂರ್ವದಲ್ಲಿ ಮಂಗಳಗೀತೆ ನುಡಿಯುವರು.

ಹೆಣ್ಣಾಗಿ ಹುಟ್ಟಿದ ಮೇಲೆ – ಹೆಣ್ತನದ ತೃಪ್ತಿ ಹೆಣ್ಣಿಗೆ ಸಿಕ್ಕುವುದು ತಾನು ತಾಯಿಯಾದಾಗ ಮಾತ್ರ 'ಅವ್ವ' ಎಂಬ ಮಮತೆಯ ಕೂಗನ್ನು ಮುದ್ದು ಮಗುವಿನ ಮುಖದಿಂದ ಕರೆಸಿಕೊಂಡಾಗಲೇ ಆಕೆಯ ಬದುಕಿಗೊಂದು ಧನ್ಯತೆ ಪ್ರಾಪ್ತವಾಗುತ್ತದೆ. ಇಲ್ಲದಿದ್ದರೆ ಬದುಕಿದ್ದು ಸತ್ತಂಥ ನಿರರ್ಥಕ ಜೀವನವನ್ನು ಕಳೆಯಬೇಕಾಗುತ್ತದೆ. ತೊಟ್ಟಿಲಲ್ಲಿಯ ಮಗು ಕಿರಿ ಕಿರಿ ಮಾಡಿ ಕಾಡುತ್ತಿರುವಾಗ ಆ ತಾಯಿ, ತನ್ನೆಲ್ಲ ಕೆಲಸ ಬಿಟ್ಟು ತನ್ನಷ್ಟಕ್ಕೆ ತಾನೇ ಮಗುವಿನೊಂದಿಗೆ ಹಾಡಿಕೊಂಡು ಅದನ್ನು ರಮಿಸುತ್ತಾಳೆ. ಈ ತನ್ಮಯತೆಯಲ್ಲಿ ತಾಯಿ ತನ್ನ ಜೀವನದ ಸಾರ್ಥಕತೆ ಪಡೆಯುತ್ತಾಳೆ. [೮]

ಅಳ್ಳೊಳ್ಳೇ ಆಯವ್ವ ಽ
ಬಳ್ಳೊಲ ಕಾಯವ್ವ ಽ

ಹಾಲ ಕುಡಿಯ ಹಕ್ಕಿ ಽ
ನೀರ ಕುಡಿಯ ಗುಬ್ಬಿ ಽ [೯]
ಅಳುಬ್ಯಾಡ ಅಂದರ ಛಲಮಾಡಿ ಅಳುತಾನ
ಹವಳದ ಜೊಲ್ಲ ಸುರುದಾನ ॥
ನೀರಾನ ನೆರಳನೋಡಿ ಸೂರ್ಯಚಂದ್ರರ ಕಾಣೆ
ಅದುರಂತೆ ತಾ ಬೇಡಿ ಭೋರಾಡಿ ಅಳುತಾನ [೧೦]

ತುಟಿಗಳ ನಡುವೆ ನಾಲಿಗೆಯನ್ನಾಡಿಸಿ ವಿಶಿಷ್ಟ ರೀತಿಯ ಸ್ವರ ತೆಗೆಯುತ್ತಾಳೇ. ಅದನ್ನಾಲಿಸಿ ಬ್ಯಾಳೆಂಥ ಕಣ್ಣು ತೆರೆದು ತೊಟ್ಟಿಲಲ್ಲಾಡುವ ತೊಳೆದ ಮುತ್ತನ್ನು ಕಂಡ ತಾಯಿಯ ಸಂತಸಕ್ಕೆ ಪಾರವೇ ಇಲ್ಲ. ಮಕ್ಕಳು ಹೆಣ್ಣು ಜೀವದ ಹಿರಿಪಾಲು. ಸರ್ವ ಸ್ವತ್ತೊಂದು ಕಡೆಯಾದರೆ ಮಕ್ಕಳು ಮತ್ತೊಂದು ಕಡೆ ಅಂಥ ಮಕ್ಕಳನ್ನು ಕುರಿತು ವಾತ್ಸಲ್ಯ ಧಾರೆಯೆರೆಯುವ ಭಾವದ ಬುಗ್ಗೆಯೇ ಚಿಮ್ಮಿ ಬರುವುದು ಜೋಗುಳ ಹಾಡಿನಲ್ಲಿ. ಮಗು ಹುಟ್ಟಿದ ಕ್ಷಣದಿಂದಲೂ, ತನ್ನತನವನ್ನು ಮರೆತು ಮಗುವಿನ ಲಾಲನೆ, ಪಾಲನೆ, ಆರೈಕೆಗೆ ತನ್ನೆಲ್ಲ ವೇಳೆಯನ್ನು ಮೀಸಲಾಗಿಡುವಳು. ಹೊತ್ತು ಹೊತ್ತಿಗೆ ಹಾಲುಣಿಸುವುದಲ್ಲದೆ ಮಗುವಿನ ಕಣ್ಣಿಗೆ ಕಾಡಿಗೆ ಹಚ್ಚಿ ಅದರ ಸೌಂದರ್ಯವನ್ನು ನೋಡಿ ನಲಿಯುವಳು.

ಕೂಸು ಇದ್ದ ಮನಿಗಿ ಬೀಸಣಿಕಿ ಯಾತಕ
ಕೂಸು ರವಿಕುಮಾರ ಒಳ ಹೊರಗ ಆಡಿದರ
ಬೀಸಣಿಕೆ ಹೊಳತಾ ಹೊಳದಾವ

ಹಣ್ಣು ಇದ್ದ ಮರಕ ಗಿಣ್ಣೆಮುದ್ದು

ರವಿಕುಮಾರ ನೀ ಮುದ್ದು ನನ್ನ ಬಳಗಕ್ಕೆ. [೧೧]

ಎಂದು ತಾಯಿಯು ಮಗು ಒಳಹೊರಗೆ ಓಡಾಡಿದರೂ ಅದು ಸಂತಸ ತನಗಷ್ಟೇ ಅಲ್ಲ, ತನ್ನ ಎಲ್ಲ ಬಳಗಕ್ಕೂ ಹರ್ಷ ಹೆಚ್ಚುವುದು ಎನ್ನುತಾಳೆ ತಾಯಿ. ಅಳುವ ಮಗನಲ್ಲಿಯೂ ಸೌಂದರ್ಯ ಕಾಣುತ್ತಾಳೆ. ಕಣ್ಣಲ್ಲಿಯ ನೀರು, ಬಾಯಲ್ಲಿಯ ಜೊಲ್ಲು ಕಂಡಾಗ ತಾಯಿಗೆ ಅದು ಹವಳವಾಗಿ ಕಾಣುತ್ತದೆ. ಹಠಮಾಡಿ ಅಳುವ ಮಗುವನ್ನೂ ಅನೇಕ ರೀತಿಯಿಂದ ರಮಿಸುತ್ತಾಳೆ. ಈ ಜಾನಪದ ಹಾಡು ಕರ್ನಾಟಕದಾದ್ಯಂತ ಕಂಡುಬರುತ್ತದೆ. ಆದರೆ ಈ ಹಾಡು ಬೀದರ್ ಪ್ರಾಂತ್ಯ ಹಾಗೂ ಸ್ಥಳಿಯತೆಗೆ ಹೊಂದಿಕೊಳ್ಳುವುದು ಮಾತ್ರ ಪ್ರಾದೇಶಿಕತೆಯೊಂದಿಗೆ ಬೆರೆತಾಗ. ಇಲ್ಲಿ ರವಿಕುಮಾರ ಎಂಬುದು ವೈಯಕ್ತಿಕವಾಗಿ ಬದಲಾಯಿಸಿಕೊಂಡಿರುವ ಪದವಾಗಿದೆ. ಇದನ್ನು ಜಾನಪದರು ತಮ್ಮ ಸುತ್ತಮುತ್ತಲ ಪರಿಸರಕ್ಕೆ ಒಗ್ಗಿಸಿಕೊಂಡಿರುವುದು ಕಂಡುಬರುತ್ತದೆ.

ಬಡತನ ಬಂದರ ಬಡಿಬ್ಯಾಡ್ರಿ ಮಕ್ಕಳನ್ನ

ಆಡ್ಯಾಡಿ ಬಂದು ತೊಡಿಮ್ಯಾಗ । ಕೂತರ

ಬಂದ ಬಡತನ ಬಯಲಾಗಿ. [೧೨]

ಎಂದು ಮಕ್ಕಳೇ ಸಂಪತ್ತೆಂದು ಜಾನಪದ ಪರಂಪರೆಯಲ್ಲಿ ತಮ್ಮ ತಾತ್ವಿಕತೆಯನ್ನು ಮಹಿಳೆ ನುಡಿದಿರುವಳು. ಇಲ್ಲಿ ಹೆಣ್ಣು ಬಡತನವಿದ್ದರು ಸಹಿಸುತ್ತಾಳೆ. ಆದರೆ ಬಂಜೆತನವನ್ನು ಸಹಿಸಲಾರಳು. ಇಲ್ಲಿ ಮಕ್ಕಳೆ ಸಂಪತ್ತಾಗಿ ಕಂಡುಬರುತ್ತದೆ. ಇಲ್ಲಿ ಗಂಡು ಹೆಣ್ಣೆಂಬ ಯಾವುದೇ ಬೇಧ ಭಾವಗಳಿಲ್ಲ. ಈ ಮಕ್ಕಳು ಶ್ರೀಮಂತಿಕೆಯ ಸಂಕೇತವಾಗಿರುತ್ತವೆ. ಈ ರೀತಿ ಹೆಣ್ಣಿನ ಜೀವನದಲ್ಲಿ ಮಕ್ಕಳು ಎಂತಹ ಶ್ರೇಷ್ಠ ಸ್ಥಾನ (ಅಗ್ರಸ್ಥಾನ) ಪಡೆದಿವೆ ಎಂಬುದು ಈ ಹಾಡಿನಲ್ಲಿ ವ್ಯಕ್ತವಾಗುವುದು.

ನಂದಲಾಲಾರೆ ಶಾಂತ ಹೇ ಆಭಾಳ ಸಾರೆ

ಶಾಂತ ತಾರೆ, ಶಾಂತವಾರೆ ಯಾ ಝುರಾಂಚೆ

ಸೂರ ಆತಾ ಮಂದ ಝೂಲಾರೇ ss

ಝೋಪಲ್ಯಾ ಗೋಟ್ಯಾತ ಗಾಯ

ಸಾಥ ವಾಪಡ ಸಾಥ ನಾಹಿ

ಪಾಖರಾಂಚಾ ಗಲ್ ಬಲಾಹೀ ಬಂದ್ ಝಾಲಾ

ಬಂದ ಝಾಲಾ ಬಂದ ಝಾಲಾರೇ

ಸಾವಲ್ಯಾಂಚಿ ಲೇಟ ಗಾಲಿ ಚಾಂದಣ್ಯಾಲಾ ನೀಜ ಆಲಿ

ರಾತರಾಣಿಂಚಾ ಫುಲಾಂಚಾ ಗಂಧ್ ಆಲಾರೇ, ಗಂಧ ಆಲಾರೇ

ನೀಜರೇ ಆನಂದ ಕಂದಾ ನೀಜರೇ ಮಾಝ್ಯಾ ಮುಕುಂದಾ

ಆವರೀಯಾ ಘಾಗರ್ಯಾಂಚಾ ಛಂದ್ ತುಲಾ ರೇ [೧೩]

ನನ್ನ ಪ್ರೀತಿಯ ಕಂದನೆ ಆಕಾಶವೆಲ್ಲ ಶಾಂತಿಯಿಂದ ಶುಭ್ರವಾಗಿ ಹೊಳೆಯುತ್ತಿದೆ. ನಕ್ಷತ್ರ, ಗಾಳಿ, ಝುರಿಯ ನೀರೆಲ್ಲ ಶಾಂತವಾಗಿವೆ. ಕೊಟ್ಟಿಗೆಯಲ್ಲಿ ಆಕಳುಗಳೂ ಮಲಗಿವೆ. ಹಕ್ಕಿ ಪಕ್ಷಿಗಳು ತಮ್ಮ ಗೂಡಲ್ಲಿ ಶಾಂತವಾಗಿ ಮಲಗಿವೆ. ಜಗವೆಲ್ಲ ಮಲಗಿದೆ, ಮನುಷ್ಯ ನೆರಳೂ ಇಲ್ಲ. ಆಕಾಶದಲ್ಲಿರುವ ಚಂದ್ರಮನೂ ಮಲಗಿರುತ್ತಾನೆ. ರಾತ್ರಿ ರಾಣಿಯ ಹೂವಿನ ಪರಿಮಳ ಸುತ್ತಲೂ ಪಸರಿಸಿದೆ ನೀನೂ ಮಲಗು ನನ್ನ ಕಂದನೇ ಎಂದು ತಾಯಿ ತನ್ನ ಮಗುವನ್ನು ಪರಿಪರಿಯಾಗಿ ಮುದ್ದಿಸುತ್ತಾ

ಹೇಳುತ್ತಿದ್ದಾಳೆ. ಇಲ್ಲಿ ಬೀದರ ಪ್ರಾಂತ್ಯದೊಂದಿಗೆ ಮರಾಠಿ ಭಾಷೆಯು ಬೆರೆತಿರುವುದನ್ನು ಈ ಮೇಲಿನ ಹಾಡಿನಲ್ಲಿ ಗುರುತಿಸಬಹುದಾಗಿದೆ.

ತಾಯಿ ಮಗುವಿನ ಆರೈಕೆಯಲ್ಲಿ ಜಗತ್ತನ್ನೇ ಮರೆಯುವಳು. ಅವನ ಲಾಲನೆ ಪಾಲನೆಯಲ್ಲಿಯೇ ಸದಾ ನಿರತಳಾಗಿರುತ್ತಾಳೆ. ಮಗುವಿನ ಅಳುವಿನಲ್ಲೂ, ನಗುವಿನಲ್ಲೂ ಸಂತೋಷ ಪಡುತ್ತಾಳೆ. ಅದೇ ರೀತಿ,

ಹಲೆ ಹಾನಂದಾ ಘರಿ ಪಾಳನಾ
ತ್ಯಾತ ದೇಖಣಾ ಗೋಜಿವರ್ಣಾ
ಹಸತೋ ಗೋಕುಳ ರಾಣಾ ರಾಜಾ

ಹೋತ ಲಾಲತೆ ಡೋಳೆ ಚಿಮಣಿ
ಹಾಸ್ಯಾತುನ ತ್ಯಾ ಫುಲೆ ಚಾಂದಣೆ
ಸ್ವರೂಪ ಸುಂದರ ಲೋಭಸ ವಾಣಿ
ಮೋಹುನ ಘೇಯ ಮನಾ । ಹಲೆ

ಬೋಲ ಬೋಬಡೆ ತೇ ಬಾಗ್ಯಾಚೆ
ಶಬ್ದ ವಾಟಲೆ ತೇ ವೇದಾಚಿ
ಝುಣಝುಣತಿ ತೀ ಘುಂಗುರ್ ವಾಳೆ
ಏ ಥೇನು ನಾ ಪಾನಾ । ಹಲೆ-

ನಂದ ಯಶೋಧಾ ಕರತಿ ಕೌತುಕ
ಆನಂದಾಚೆ ಅಮಾಪ ತೇ ಸುಖ
ಮಾಯ ಪಿತ್ಯಾವಿಣ ಕಸೆ ಕಳಾವೆ
ಸೌಖ್ಯಾತ ಯಾಚೆ ಕುಣಾ । ಹಲೆ- [೧೪]

ತೂಗುವ ತೊಟ್ಟಿಲಲ್ಲಿ ಮಲಗಿದ ಸುಂದರವಾದ, ಸವಿಯಾದ ಆ ಮಗು ನಗುತ್ತಿದ್ದರೆ ಮನೆಯೇ ನಂದಗೋಕುಲದಂತೆ ಕಾಣುವುದು. ಗೋಕುಲದ ಒಡೆಯನಾದ ಆ ಕೃಷ್ಣನಂತೆ ಆ ಮಗು ತೊಟ್ಟಿಲಲ್ಲಿ ಆಡುತ್ತಿದ್ದರೆ ತುಟಿಗಳು ಕೆಂಪು ರಂಗೇರಿದಂತೆ ಕಾಣುವುದು. ಅದರ ಕಣ್ಣು ಗುಬ್ಬಿ ಕಣ್ಣಿನಂತೆಯೂ ನಗುವಾಗ ಇನ್ನೂ ಕಿರಿದಾಗಿ ಮುಖ ಚಂದ್ರಮನಂತೆ ಅರಳುವುದು. ಸುಂದರ ಸ್ವರೂಪದ ಆ ಮಗುವಿನ ತೊದಲ್ನುಡಿ ತುಂಬಾ ಮೋಹಕವಾಗಿ ಕಂಡು ಎಂಥವರಿಗೂ ಮಗುವನ್ನು ಮುದ್ದಾಡಬೇಕೆನಿಸುವುದು. ತೊದಲ್ನುಡಿಗಳು ವೇದಗಳಂತೆ ಕೇಳುತ್ತಿದೆ. ಕಾಲಿನ ಗೆಜ್ಜೆಗಳು ಏನನ್ನೊ ಹೇಳುತ್ತಿರುವಂತೆ ಭಾಸವಾಗುತ್ತಿದೆ. ನಂದ ಯಶೋಧೆಯು ಮಗುವಿನ ಬಾಲಲೀಲೆಗಳನ್ನು ಕೌತುಕದಿಂದ ವರ್ಣಿಸುತ್ತಿದ್ದಾರೆ. ಕೃಷ್ಣನನ್ನು ಕುರಿತು ನೀನು ನಮ್ಮ ಜೀವನದಲ್ಲಿ ಬಂದಾಗಿನಿಂದ ನಮ್ಮ ಜೀವನ ಸುಖ, ಸಂತೋಷದಿಂದ ತುಂಬಿದೆ ಎಂದು ಹರ್ಷದಿಂದ ಪಾಡುತ್ತಿದ್ದಾರೆ.

ಅದಕ್ಕಾಗಿಯೇ ಬಾಲಕರಿಲ್ಲದ ಬಾಲಿದ್ಯಾತರ ಜನ್ಮ ಬಾಡಿಗಿ ಎತ್ತು ದುಡಿದ್ಹಂಗ ಎನ್ನುವ ಮಾತು ನಿತ್ಯ ಸತ್ಯವೆನಿಸುವುದು. ಮಗುವೊಂದಿದ್ದರೆ ಸಾಕು ಹೆಣ್ಣಿಗೆ ಯಾರ ಸಾಂಗತ್ಯವೂ ಬೇಕಿಲ್ಲ. ಮಗು ತಾಯಿಯ ಎಲ್ಲ ದು:ಖ, ಕಷ್ಟಗಳನ್ನು ನೀಗಿಸುತ್ತದೆ. ಹಾಗೆಯೇ

ಆನಂದಾಚಿ ಡೋಹಿ । ಆನಂದಾಚೆ ಅಂಗ । ಆನಂದಾಚಿ
ಕಾಯ ಸಾಂಗೂರ್ಝಾಲೇ । ಕಾಹಿಬೇಯಾ ಬಾಹಿ
ಪುಡೇ ಚಾಲಿ ನಾಹಿ ಅವಡೀಸಿ

ಗರ್ಭಾಚೆ ಆವಡೋ ಮಾತೋಚಾ ಡೋಹಳಾ
ತೆಹೀಚಾ ಜೀ ಭಾಳಾ ತೆಥೆ ಬಿಂಬೆ
ತುಕಾಮಣೆ ತೈಸಾ ಓತೋಲಾಸಾ ಠಸಾ
ಅನುಭವ ಕರೀತಾ ಮುಖಾ ಆಲಾ [೧೫]

ಎಲ್ಲ ಕಡೆಯೂ ಆನಂದದ ಪ್ರವಾಹ, ಆನಂದದ ಕಾಯ, ಆನಂದದ ದೇಹ ಎಲ್ಲ ಕಡೆ ಆನಂದವೇ ಆನಂದ ಕಾಣುವುದು. ಕಿಂಚಿತ್ತೂ ದು:ಖವೆಂಬುದಿಲ್ಲ. ತಾಯಿಯ ಆನಂದ ಗರ್ಭದಲ್ಲಿರುವಂತೆ, ಮನುಷ್ಯನ ಆನಂದ ದೇವರ ಸ್ಮರಣೆಯಲ್ಲಿದೆ. ತುಕಾರಾಮರ ಭಕ್ತಿಯಲ್ಲಿ, ಮಡಕೆ ಮಾಡುವಾಗ, ಸದಾ ದೇವರ ಸ್ಮರಣೆಮಾಡುತ್ತಿರುವುದರಿಂದ ಅವನಿಗೆ ಮಣ್ಣಿನಲ್ಲಿಯೂ (ಗಡಿಗೆ ಮಾಡುವ) ದೇವರು ಕಾಣುತ್ತಿದ್ದನು ಎಂಬುದೇ ಈ ಹಾಡಿನ ಗೂಡಾರ್ಥ. ಇಲ್ಲಿ ಬೀದರ ಜಿಲ್ಲಾ ವ್ಯಾಪ್ತಿಯಲ್ಲಿ ಕಂಡುಬರುವ ಪ್ರಾದೇಶಿಕ ಸತ್ವ ಈ ಹಾಡುಗಳಲ್ಲಿ ಕಂಡುಬರುತ್ತದೆ. ನಮ್ಮ ಜಾನಪದ ಮಹಿಳೆಯರು ಶಿಕ್ಷಣವನ್ನು ಕಲಿಯದಿದದ್ದೂ ಕೇವಲ ಅನುಕರಣೆಯಿಂದಲೇ ಇನ್ನೊಂದು ಭಾಷೆ ಹಾಗೂ ಸಾಹಿತ್ಯವನ್ನು ಸೆರೆಹಿಡಿಯುವ ಕೌಶಲ್ಯತೆಯನ್ನು ಹೊಂದಿದವರಾಗಿದ್ದಾರೆ. ಹೀಗಾಗಿ ತಮ್ಮ ಸುತ್ತಮುತ್ತಲಿನ ಭಾಷೆಯನ್ನು ಸಹ ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಂಡಿದ್ದಾರೆ. ಹೀಗಾಗಿ ಈ ಪ್ರಾಂತ್ಯದ ಹಾಡುಗಳಲ್ಲಿ ಹಿಂದಿ, ಉರ್ದು, ಮರಾಠಿ ಭಾಷೆಗಳ ಪ್ರಭಾವವಿರುವುದು ತಿಳಿದುಬರುತ್ತದೆ.

ಮಗುವಿನ ಜೋಗುಳವನ್ನು ಪ್ರತಿನಿಧಿಸುವ ಈ ಜಾನಪದ ಹಾಡಿನಲ್ಲಿ ಕೇವಲ ಮಗುವಿನ ಕುರಿತಾದ ವರ್ಣನೆ ಮಾತ್ರವೇ ಕಂಡುಬರುವುದಿಲ್ಲ. ಇದರ ಹಿಂದೆ ಬೀದರ ಪ್ರಾಂತ್ಯದ ಜನಜೀವನ ಅಡಗಿದೆ. ಬೀದರ ಜಿಲ್ಲೆಯು ಹಲವಾರು ಭಾಷೆ, ಸಂಸ್ಕೃತಿಗಳ ನೆಲೆವೀಡು. ಹೀಗಾಗಿ ಈ ಮಹಿಳಾ ಜೋಗುಳ ಪದಗಳಲ್ಲಿ ಅನ್ಯಭಾಷೆಗಳ ಸಂಗಮ ಕಂಡುಬರುತ್ತದೆ. ವಿವಿಧ ಭಾಷೆ, ಧರ್ಮ, ಸಂಸ್ಕೃತಿಯ ಸಾರಗಳು ಈ ಭಾಗದ ಮಹಿಳಾ ಸಾಹಿತ್ಯದಲ್ಲಿ ಸಮ್ಮಿಳಿತಗೊಂಡಿರುವ ಬಗೆಯನ್ನು ಗಮನಿಸಬಹುದಾಗಿದೆ. ಹೀಗೆ ಜನಪದ ಸಾಹಿತ್ಯದಲ್ಲಿ ಕಂಡುಬರುವ ಮಹಿಳೆಯ ಸೃಷ್ಟಿಯಾಗಿರುವ ಜೋಗುಳ ಪದಗಳಲ್ಲಿ ಹಲವು ಬಗೆಯ ಒಳನೋಟಗಳು ಕಂಡುಬರುತ್ತವೆ.

೩.೨ ಮೈನೆರೆದ ಹಾಡುಗಳು:

ಮನುಷ್ಯನ ಜೀವನ ಪ್ರಾರಂಭವಾಗುವುದು ಮಗುವಾಗಿ ಈ ಭೂಮಿ ಮೇಲೆ ಪಾದಾರ್ಪಣೆ ಮಾಡಿದಾಗಿನಿಂದ. ಆದರೆ ನಮ್ಮ ಸಂಪ್ರದಾಯ, ಆಚರಣೆಗಳು ಮಗು ಹುಟ್ಟುವ ಪೂರ್ವದಲ್ಲಿ ತಾಯಿಯ ಗರ್ಭದಲ್ಲಿದ್ದಾಗಲೇ ಅರಂಭವಾಗುತ್ತವೆ. ಮೈನೆರೆದ ಹಾಡು ಹೆಸರೇ ಸೂಚಿಸುವಂತೆ ಸಂಪ್ರದಾಯದ ಹಾಡು. ಈ ಹಾಡುಗಳು ಹೆಣ್ಣಿನ ಫಲವತ್ತತೆಯ ವೈಶಿಷ್ಟ್ಯವನ್ನೂ, ಉತ್ಸವವನ್ನು ವೈಭವೀಕರಿಸುವುದು. ಇಲ್ಲಿಯೂ ಮಹಿಳೆಯರದ್ದೇ ಮೇಲುಗೈಯಾಗಿರುತ್ತದೆ. ನಮ್ಮ ಆದಿಮ ಪರಂಪರೆಯು ಸ್ತ್ರೀ ಕೇಂದ್ರಿತ ನೆಲೆಯಿಂದ ಕೂಡಿದ್ದು, ಇಲ್ಲಿ ಮಾತೃ ಸಂಸ್ಕೃತಿಯು ನೆಲೆಯೂರಿತ್ತು. ಈ

ಕಾರಣದಿಂದಾಗಿ ನಮ್ಮ ಜಾನಪದ ಮಹಿಳೆಯರು ಎಲ್ಲಾ ಕೆಲಸ ಕಾರ್ಯಗಳಲ್ಲೂ ಮುಂದಿರುವುದು ಕಂಡುಬರುತ್ತದೆ.

ಮಕ್ಕಳು ಬೆಳೆಯುತ್ತಾ ಹೋದಂತೆ ಅವರಲ್ಲಿ ದೈಹಿಕ ಬದಲಾವಣೆಗಳು ಆಗುತ್ತಲೇ ಇರುತ್ತವೆ. ಹೆಣ್ಣುಮಕ್ಕಳು ಹನ್ನೊಂದು ಹನ್ನೆರಡು ವರ್ಷದವರಾದಾಗ ದೈಹಿಕ ಬದಲಾವಣೆಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಹನ್ನೆರಡರಿಂದ ಹದಿನಾಲ್ಕು ವರ್ಷಗಳಲ್ಲಿ ಲಿಂಗಪ್ರೌಢಿಮೆ ಹೊಂದಿ ಮೈನೆರೆಯುವರು. (ಮೈನೆರೆ=ಮೈ ತುಂಬು, ಪಕ್ವತೆವುಂಟಾಗು, ಋತುಮತಿ ಎಂಬರ್ಥ ಧ್ವನಿಪೂರ್ಣವಾಗಿದೆ) ಗ್ರಾಮೀಣ ಪ್ರದೇಶಗಳಲ್ಲಿ 'ದೊಡ್ಡಕಿ ಆಗ್ಯಾಳ' 'ಶ್ಯಾಣ್ಯಾಕಿ ಆಗ್ಯಾಳ' ಎಂದೂ ಹೇಳುತ್ತಾರೆ. ಮಹಿಳೆಯ ಫಲವಂತಿಕೆಗೆ ನಾಂದಿಯಾಗಿರುವ ಈ ಸನ್ನಿವೇಶವು ನಮ್ಮ ಜಾನಪದರಿಗೆ ಒಂದು ವಿಶಿಷ್ಟವಾದ ಸಂಭ್ರಮವಾಗಿ ಕಂಡುಬರುತ್ತದೆ. ಈ ಕಾರ್ಯಕ್ರಮವು ತನ್ನದೇ ಆದ ಸಾಂಸ್ಕೃತಿಕ ವೈಶಿಷ್ಟತೆಯನ್ನು ಒಳಗೊಂಡಿರುವುದು ಈ ಜಾನಪದ ಮಹಿಳಾ ಹಾಡುಗಳಿಂದ ತಿಳಿದುಬರುತ್ತದೆ. ಇಲ್ಲಿ ಈ ಹಾಡುಗಳಲ್ಲಿ ಮಹಿಳೆ ಪ್ರಧಾನ ಪಾತ್ರವನ್ನು ನಿರ್ವಹಿಸುವುದಕ್ಕೆ ಪ್ರಮುಖ ಕಾರಣವೆಂದರೆ, ಒಂದು ಹೆಣ್ಣಿನ ಸಂವೇದನೆಯು ಮತ್ತೊಂದು ಹೆಣ್ಣಿಗೆ ಮಾತ್ರ ಅರಿವಾಗುತ್ತದೆ. ಹೀಗಾಗಿ ಇಲ್ಲಿ ಮಹಿಳೆಯರೇ ತಾವು ಅನುಭವಿಸಿದ ಅನುಭವಗಳನ್ನು ಈ ಹಾಡುಗಳ ರೂಪದಲ್ಲಿ ಅಭಿವ್ಯಕ್ತಿಸುತ್ತ ಬಂದಿದ್ದಾರೆ.

ಈ ಸನ್ನಿವೇಶವು ಹುಡುಗಿಯರಿಗೆ ಒಂದು ಹೊಸ ಹಾಗೂ ವಿನೂತನವಾದ ಅನುಭವವನ್ನು ನೀಡುತ್ತದೆ. ಅವಳು ತಾನಾಗಿಯೇ ಹೇಳಬಹುದು ಅಥವಾ ಇತರರು ಗುರುತಿಸಿ, ಅವಳನ್ನು ಏನನ್ನೂ ಮುಟ್ಟಲು ಬಿಡದೆ ಒಂದು ಮೂಲೆಯಲ್ಲಿ ಕೂಡಿಸುವರು. ಅವಳ ಹತ್ತಿರ ಒಂದು ಕಟ್ಟಿಗೆಯ ಗೊಂಬೆ ಇಟ್ಟುಕೊಳ್ಳಲು ಕೊಡುವರು. ಅವಳಿಗೆ ಪ್ರತಿದಿನ ಸಾಯಂಕಾಲ ಕೂಡಿಸಿ ಹಾಡುವವರೆಗೆ ಆ ಗೊಂಬೆ ಜೊತೆಯಲ್ಲಿಯೇ ಇಡುವರು. ಭೂತ, ಪ್ರೇತ, ಪಿಶಾಚಿಗಳ ಕಾಟ ತಗುಲದಿರಲೆಂಬ ನಂಬಿಕೆಯಿಂದ ಸದಾ ಅವಳ ಕೈಯಲ್ಲಿ ನಿಂಬೆಹಣ್ಣು ಅಥವಾ ಅಡಕೊತ್ತು ಕೊಡುವರು. ಅವಳಿಗೂ ಅದೊಂದು ಹೊಸ ಅನುಭವ. ನಾಚಿಕೆಯಿಂದ ಕೆಲವರು ಅಳುವುದೂ ಉಂಟು. ನೆರೆಹೊರೆಯ ಮುತ್ತೈದೆಯರು ಬಂದು ಮದುವೆಯಲ್ಲಿ ಎಣ್ಣೆ ಇಡುವಂತೆ ಒಂದು ಜೋಳದ ದಂಟಿನ ತುದಿಗೆ ಎರಡು ವಿಳೆಯದೆಲೆಯನ್ನು ಸುತ್ತಿ ದಾರ ಕಟ್ಟಿ ಬಟ್ಟಲಲ್ಲಿ ಕೊಬ್ಬರಿ ಎಣ್ಣೆ ತೆಗೆದುಕೊಂಡು ಹಾಡುತ್ತ ಎಣ್ಣೆ ಹಚ್ಚುತ್ತಾರೆ. ಈ ಹಾಡುಗಳು ಹೆಣ್ಣು ಫಲವಂತಿಕೆಯಾಗಿ ಮುಂದೆ ಬಾಳಿ ಬದುಕಬೇಕಾದ ಎಲ್ಲಾ ಸನ್ನಿವೇಶಗಳನ್ನು ಈ ಹಾಡುಗಳಲ್ಲಿ ಹಿರಿಯ ಹೆಂಗಸರು ವ್ಯಕ್ತಪಡಿಸುತ್ತಾರೆ. ಈ ಮಹಿಳೆಯರು ಹಾಡುವ ಈ ಜಾನಪದಿಯ ಹಾಡುಗಳು ವ್ಯಕ್ತಿಯಿಂದ ವ್ಯಕ್ತಿಗೆ ನಿರಂತರವಾಗಿ ಬದಲಾಗುತ್ತವೆ. ಇಲ್ಲಿ ಯಾವ ಹುಡುಗಿಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೋ ಅದೇ ಹುಡುಗಿಯ ಮೇಲೆ ಪದಕಟ್ಟಿ ಹಾಡುವುದು ಇದರ ವಿಶಿಷ್ಟತೆಯಾಗಿದೆ. ಹೀಗಾಗಿ ಈ ಜಾನಪದಿಯ ಮಟ್ಟುಗಳು ವ್ಯಾಪಕ ಗುಣಗಳನ್ನು ಹೊಂದಿರುವುದು ತಿಳಿದುಬರುತ್ತದೆ.

ಜೋಳದ ಗಣಕಿಗಿ ವಿಳೇದ ಎಲಿ ಸುತ್ತಿ
ಒಳ್ಳೆರೊಂದೈವರು ನೆರೆದು ಮುತ್ತೈದೇರು
ಎಣ್ಣಿ ಹಚ್ಚ ಬನ್ನಿರೇ ಽಽ ೧೬

ಶುಭವನ್ನು ಕೋರುವುದು ಶೋಬನ, ಸೋಬನವೆಂತಲೂ ಕರೆಯುತ್ತಾರೆ. ಈ ಸೋಬಾನವೆನ್ನಿ ಎಂಬ ನುಡಿಯು ಈ ಮೈನೆದಿರುವ ಹೆಣ್ಣಿನ ಕುರಿತಾದ ಶುಭ ಹಾರೈಕೆಯಾಗಿದೆ. ಇಲ್ಲಿ ಕಾರ್ಯಕ್ರಮಕ್ಕೆ ನೆರೆದ ಮುತ್ತೈದೆ ಹೆಂಗಸರು ಫಲವಂತಿಕೆಯ ಸಂಕೇತವಾಗಿ ಮುನ್ನಡೆಯುತ್ತಿರುವ ಹೆಣ್ಣಿಗೆ ಶುಭ ಕೋರುವ ಜಾನಪದಿಯ ವಿಧಾನವಾಗಿ ಈ ಪರಂಪರೆಯು ಮುಂದುವರೆದುಕೊಂಡು ಬಂದಿದೆ. ಸಂತಾನಫಲ ಒದಗಲಿ ಎಂಬ ಶುಭ ಹಾರೈಕೆಯೇ ಸೋಬನವಾಗಿದೆ. ಬಾಲ್ಯವಿವಾಹ ಪದ್ಧತಿ ಇರುವಾಗ ಮದುವೆಯಾದ ಮೇಲೆ ತವರಿನಲ್ಲಿಯೇ ಹೆಣ್ಣು ಇರುತ್ತಿದ್ದಳು. ಅವಳು ಮೈನೆರೆದ ವಿಷಯ

ಗಂಡನ ಮನೆಯವರಿಗೆ ಹೇಳಿ ಕಳುಹಿಸುತ್ತಿದ್ದರು. ಹದಿನಾರನೆಯ ದಿನ ಅಥವಾ ಎರಡು ಮೂರು ತಿಂಗಳ ನಂತರ ಈ ಕಾರ್ಯ ಇಟ್ಟುಕೊಳ್ಳುತ್ತಿದ್ದರು.

ಸೋಬಾನ ಹಾಡುಗಳು ತುಂಬಾ ವೈವಿಧ್ಯಮಯವಾಗಿರುತ್ತವೆ. ಮದುವೆಯ ಇತರ ಯಾವುದೇ ಹಾಡುಗಳಿಗಿಂತ ಸೋಬಾನೆ ಹಾಡುಗಳನ್ನು ಹಾಡುವ ರೀತಿ, ಧಾಟಿಗಳಲ್ಲಿ ವೈವಿಧ್ಯತೆ ಇದೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳು ಕವನ, ನೀತಿಪದಗಳು, ಹಾಸ್ಯದ ಹಾಡುಗಳು, ಮಹಾಭಾರತದ, ರಾಮಾಯಣದ ಪ್ರಸಂಗಗಳು, ಶರಣರ ಮಹಾತ್ಮೆಯನ್ನು ಎತ್ತಿ ತೋರುವ ಹಾಡುಗಳು, ಹೆಣ್ಣು ಶೀಲ ರಕ್ಷಿಸಿಕೊಂಡ ಪತಿವ್ರತೆಯರ ಕಥೆಗಳು ಇರುತ್ತವೆ. ಲಘು ಹಾಸ್ಯದಿಂದ ಕೂಡಿದ ಹಾಡುಗಳನ್ನು ಹಾಡುತ್ತಾರೆ.

ಸೋಬನದ ಹಾಡುಗಳು ಐದು ಇಲ್ಲವೆ ಒಂಭತ್ತು ದಿನ ಹಾಡಿ ಅನಂತರ ಆರತಿ ಮಾಡಿ ಕಾರ್ಯಕ್ರಮ ಮುಗಿಸುತ್ತಾರೆ. ಆ ನಂತರ ಅವಳು ಗಂಡನ ಮನೆಯಲ್ಲಿ ಹೊಂದಿಕೊಳ್ಳತೊಡಗುವಳು. ತನ್ನ ಜವಾಬ್ದಾರಿ ಹೆಚ್ಚಾದಂತೆ ತವರಿನ ಹಂಬಲ ಕಡಿಮೆಯಾಗುತ್ತದೆ. ಬರಬರುತ್ತಾ ತವರಿಗೆ ಹೋಗುವ ಪ್ರಸಂಗಗಳೇ ಕಡಿಮೆಯಾಗುತ್ತದೆ. ಇಂತಹ ಪ್ರಸಂಗಗಳೇ ಜಾನಪದರಲ್ಲಿ ಭಾವ ಸೆಲೆಯ ಹಾಡುಗಳಾಗಿ ಹೊರಹೊಮ್ಮಿವೆ. ತಂದೆ-ತಾಯಿ, ಅಣ್ಣ-ತಮ್ಮಂದಿರಿಗೆ ತಮ್ಮ ಮನೆಯ ಮಗಳು ಹಬ್ಬಕ್ಕೆ ಇಲ್ಲವೆಂದರೆ ತುಂಬ ಭಾವನಾತ್ಮಕವಾದ ಯಾತನೆಯನ್ನು ವ್ಯಕ್ತಪಡಿಸುತ್ತಾರೆ. ಇದು ತವರಿನ ಬಾಂಧವ್ಯ. ಹೀಗಾಗಿ ಇಂತಹ ಸನ್ನಿವೇಶಗಳನ್ನು ಹೆಚ್ಚಾಗಿ ನಮ್ಮ ಜಾನಪದಿಯ ಮಹಿಳೆಯರೇ ತಮ್ಮ ನೋವು ಯಾತನೆಗಳನ್ನು ಪದಕಟ್ಟಿ ಹಾಡಿರುವುದು ಕಂಡುಬರುತ್ತದೆ.

ದೀವಳಿಗಿ ಹಬ್ಬದ ದಿನ ನೀರ ತ್ಹುಂಬ ದಿನ
ರಾಯರಿಗಿ ನೀರ ಬೆರಸೂತ ಸೋಬಾನವೇ ऽऽ
ರಾಯರಿಗೀ ನೀರು ಬೆರಸ್ಥಂತ ವ್ಯಾಳೆದಲ್ಲಿ
ಯಾಕ ತವರವರು ಬರಲಿಲ್ಲ ಸೋಬಾನವೇ ऽऽ

ಅಕ್ಷಯ್ ಕುಮಾರ ಅಡಗಿಯ ವಜ್ಜಗಳ ನಡಸ್ಯಾರೆ ಸೋಬಾನವೇ ॥ ೨ ॥
ಹೊದಕಿ ತಂದಣ್ಣನ ಹೆಸರೇನೆ ದಶಿಯೇನೆ
ದಶಿವಂತರಾಯ ಧರ್ಮರಾಯ ಸೋಬಾನವೇ ॥ ೨ ॥
ದಸಿವಂತರಾಯ ಧರ್ಮರಾಯ ಅಕ್ಷಯ್ ಕುಮಾರ
ಹೊದಕಿಯಜ್ಜಗಳ ನಡಸ್ಯಾರೇ ಸೋಬಾನವೇ ॥ ೨ ॥ [೧೭]

ಹುಡುಗಿ ಮೈನೆರೆದಾಗ ಒಂಬತ್ತು ದಿನವೋ ಹನ್ನೊಂದು ದಿನವೊ ಅಥವಾ ಹದಿನಾರು ದಿನವೂ ಸಿಂಗರಿಸಿ ಕೂಡ್ರಿಸಿ, ಮುತ್ತೈದೆಯರೆಲ್ಲ ನೆರೆದು ಹೆಣ್ತನದ ಆದರ್ಶ, ಭಕ್ತಿ, ಶೃಂಗಾರ, ನೀತಿ ಮೊದಲಾದವನ್ನು ಬಿಂಬಿಸುವ ಹಾಡುಗಳನ್ನು ಹಾಡುತ್ತಾರೆ. ಅವಳಲ್ಲಿ ಹೆಣ್ತನದ ಕಟು ಬಾಳನ್ನು ಎದುರಿಸುವ ಧೈರ್ಯ ತುಂಬುವ ವಿಚಾರವೂ ಅದರಲ್ಲಿರಬೇಕು. ಮಲ್ಲಮ್ಮ, ಸೀತೆ, ಸಾವಿತ್ರಿಯರ ಚರಿತ್ರೆಗಳನ್ನು ಹಾಡುತ್ತಾರೆ. ಗಂಡ ಹೆಂಡಿರು ಚದುರಂಗ ಆಡುವ, ಸೊಸೆಯು ಮೈನೆರೆದ ಸಡಗರ, ಹೆಂಡತಿ ಮೈನೆರೆದ ಸಂದರ್ಭದಲ್ಲಿ ಮನೆಯ ಮಗ ಮಂಚದ ಮೇಲೆ ಮಲಗಿದ್ದಾಗ, ಹೆಂಡತಿಯ ತವರಿಂದ ಫಲಶೋಭನಕ್ಕಾಗಿ ಬಂದ ಆಮಂತ್ರಣದ ಪತ್ರ, ಗಂಡ-ಹೆಂಡಿರ ಪ್ರಥಮ ಸಮಾಗಮದ ಕುರಿತು ಮಗ ಕನಸು ಕಾಣುತ್ತಾ ಸಂತೋಷ ವ್ಯಕ್ತಪಡಿಸದೇ ಮೌನವಾಗಿ ಸಂಭ್ರಮ ಪಡುವ ಸಂದರ್ಭವನ್ನು ನಾರಿಯರು ಇಲ್ಲಿ ಸುಂದರವಾಗಿ ಹಾಡಿನಲ್ಲಿ ವ್ಯಕ್ತಪಡಿಸಿದ್ದಾರೆ.

ಜನಪದ ಈ ಹಾಡುಗಳಲ್ಲಿ ಸೊಸೆ, ಮಗಳು, ಅಪ್ಸರೆಯ ಸೌಂದರ್ಯಕ್ಕೆ ಸಮಾನ ಎನ್ನುವಲ್ಲಿ 'ಅತಿರಂಬಿ' ಎಂಬ ಪದಗಳನ್ನು ಬಳಸಿದ್ದಾರೆ. ಯೌವ್ವನದಲ್ಲಿ ಕಾಲಿರಿಸಿದರೂ ಇನ್ನೂ ಅದರ ಅರಿವಿರದ ಅಳಿಯ ಮಂಚದ ಮೇಲೆ ಮಲಗಿದ್ದಾನೆ. ಮಲಗುವ ಕ್ರೀಯೆ ಇದು ಮರೆವಿನ ಸಂಕೇತವೂ ಆದಂತೆ ಅವನ ಅರಳುತ್ತಿರುವ ಲೈಂಗಿಕ ಪ್ರಜ್ಞೆಯ ಸಂಕೇತವೂ ಆಗುತ್ತದೆ. ಇಂತಹ ಸಂದರ್ಭದಲ್ಲಿ

ಅವನಿಗೆ ಹೆಂಡತಿ ದೊಡ್ಡವಳಾದ ಸಂದೇಶ ಬರುವುದು. ಆಗ ಹರ್ಷಪುಲಕಿತನಾದ ಆತ ಪತ್ರವನ್ನು ತೆಗೆದೊಗೆದು ಹೆಂಡತಿಯ ಪ್ರೀತಿಯನ್ನು ಸಂಪಾದಿಸಲು ಮುಂದಾಗುತ್ತಾನೆ. ಇಲ್ಲಿ ಹೆಂಡತಿಯ ಕೈಯೊಳಗಿನ ಮುತ್ತಿನುಂಗುರ, ಗಂಡನ ಮೇಲಿನ ಅನನ್ಯ ಪ್ರೀತಿಯ ಸಂಕೇತವಾಗಿದೆ. ಆತನಿಗೆ ಹೆಂಡತಿಯ ಅನನ್ಯ ಪ್ರೀತಿಯನ್ನು ಪಡೆಯುವುದು ಮುಖ್ಯವಾಗಿರುತ್ತದೇ ವಿನಃ ಫಲಶೋಭನ ಕಾರ್ಯದಲ್ಲಿ ತನಗೆ ಬರಲಿರುವ ಅತ್ತೆ ಮಾವಂದಿರ ಉಡುಗೋರೆಗಳು ಮುಖ್ಯವಾಗಿರುವುದಿಲ್ಲ. ಇಲ್ಲಿ ದೊಡ್ಡವಳಾದ ಕನ್ಯೆಯ ಸಹಜ ಸೌಂದರ್ಯವನ್ನು ಜನಪದ ಕವಿಯಿತ್ರಿಯರು ತಮ್ಮ ಹಾಡುಗಳಲ್ಲಿ ಈ ರೀತಿ ಹಿಡಿದಿರಿಸಿದ್ದಾರೆ.[೧೮]

ಆ ಸಂಗ ಈ ಸಂಗ ಹವಳ ಮುತ್ತಿನ ಸಂಗ
ಅವರಿಬ್ಬರಾಡೋ ಚದುರಂಗ । ಸೋಬಾನವೇ
ಅವರಿಬ್ಬರಾಡೋ ಚದುರಂಗ । ಪಡಸಲ್ಯಾಗ ।
ಚನ್ನಿಂಗ ಚಂಡ ಮರತಾನ । ಸೋಬಾನವೇ ॥ ೧ ॥

ಪತ್ತರ ಬಂದರ ಮತ್ತಾದ್ರ ನೋಡೇನ
ಮಾವನಮಗಳೊಂದತಿರಂಬಿ । ಸೋಬಾನವೇ ।
ನ ನೀ ಮಗಳ ಅತಿರಂಬಿ ಕೈಯಾನ
ವಜ್ರದುಂಗರ ಗೆದಿಯಲಿ ಬೇಕೇ । ಸೋಬಾನವೇ ॥ ೯ ॥

ಹಸಿರ ಪಟ್ಟೋಳಿ ಸೀರಿ ಅಂಚೆಲ್ಲ ಜರತಾರಿ
ಭಾಲ್ಕಿಯ ಹೊಳಿಯಲ್ಲೋಗಸ್ಯಾರೆ । ಸೋಬಾನವೇ ।
ಭಾಲ್ಕಿಯ ಹೊಳಿಯಲ್ಲೊಗಸಿದ ಈ ಸೀರಿ
ಸರಗಿಯ ಮ್ಯಾಲ ಹೊಳದಾವ । ಸೋಬಾನವೇ ॥ ೧೦ ॥

ಕೆಂಪ ಪಟ್ಟಳಿ ಸೀರಿ ಸೆರಗೆಲ್ಲ ಜರತಾರಿ
ಭಾಲ್ಕಿಯ ಹೊಳಿಯಲ್ಲೋಗಸ್ಯಾರೆ । ಸೋಬಾನವೇ ।
ಭಾಲ್ಕಿಯ ಹೊಳಿಯಲ್ಲಿ ಒಗೆಸಿದ ಈ ಸೀರಿ
ಚಿಂತಾಕದ ಮ್ಯಾಲೆ ಹೊಳದಾವ । ಸೋಬಾನವೇ । ॥ ೧೧ ॥ [೧೯]

"ಉತ್ಪತ್ತಿಯ ತತ್ವದ ಮೊದಲ ಬೇರು ಶೃಂಗಾರ"ವೆಂಬುದು ಸತ್ಯದ ಮಾತಾಗಿರುವುದರಿಂದ ನಮ್ಮ ಜಾನಪದೀಯರೂ ಶೃಂಗಾರತೆಯನ್ನು ಸಹಜವಾಗಿ ರಚಿಸುವುದನ್ನು ಕಾಣುತ್ತೇವೆ. ನವರಸಗಳಲ್ಲಿ ಶೃಂಗಾರ ಎನ್ನುವ ರಸವು ಪ್ರಮುಖವಾಗಿದ್ದು, ಇದು ದಂಪತಿಗಳ ಸಂಭಾಷಣೆಯ, ಕೂಡುವಿಕೆಯ ಹಂಬಲ ಈ ಹಾಡುಗಳಲ್ಲಿ ವರ್ಣಿತವಾಗಿದೆ. ಇಂಥ ಅನೇಕ ಜಾನಪದ ಹೆಂಗಳೆಯರು ರಚಿಸಿರುವ ಹಾಡುಗಳಲ್ಲಿ ಸಹಜ ಶೃಂಗಾರ, ವಿಪ್ರಲಂಬ ಶೃಂಗಾರ, ಸಂಭೋಗ ಶೃಂಗಾರವನ್ನು ಕಾಣಬಹುದು. ಇಲ್ಲಿ ನಲ್ಲ ನಲ್ಲೆಯರ ಸಮಾಗಮದ ಆನಂದವನ್ನು ಧ್ವನಿಪೂರ್ಣವಾಗಿ ಸೂಚಿಸಿರುವ ಕೌಶಲ್ಯವನ್ನು ಹೊಂದಿರುವ ಗುಣ ವ್ಯಕ್ತವಾಗಿರುವುದು ಸಹಜ ಶೃಂಗಾರದಲ್ಲಿ ಹೆಣ್ಣು ತನ್ನತನವನ್ನು ಮರೆತು, ತನ್ನನ್ನು ತಾನು ಸಂಪೂರ್ಣವಾಗಿ ಇನಿಯನಿಗೆ ಸಮರ್ಪಿಸಿಕೊಳ್ಳುತ್ತಾಳೆ.

ಹಾಡುಗಾರ್ತಿಯರು ಅವಳ ಅಲಂಕಾರದ ಸೊಬಗು, ಅವಳನ್ನು ಏರುಜವ್ವನ ರಂಭೆ, ಊರ್ವಶಿಯಂತೆ ಎನ್ನುವಲ್ಲಿ ಅತಿರಂಬೆ ಎಂದು ವರ್ಣಿಸಿದ್ದಾಳೆ. ಸಮಾಗಮ ಶೃಂಗಾರದಲ್ಲಿ ನಲ್ಲನಲ್ಲೆಯ ದೈಹಿಕ ಆಕರ್ಷಣೆಯ, ಪರಸ್ಪರ ದರ್ಶನ, ಸರಸ, ಸಲ್ಲಾಪ, ಕೂಡಿಕೊಂಡಿರುತ್ತದೆ. ಇಲ್ಲಿ ಹೆಣ್ಣಿನ ಬೇಡಿಕೆಗೆ ಗಂಡು, ಗಂಡಿನ ಬೇಡಿಕೆಗೆ ಹೆಣ್ಣು ಒಂದಾಗಿ ನಡೆಯುವ, ಒಲ್ಮೆಯ ಕೂಡುವಿಕೆ, ಶೃಂಗಾರದ ನಿರೂಪಣೆಯಲ್ಲಿ ಅಶ್ಲೀಲತೆಯ ದೋಷ ಬಾರದಂತೆ ಹಲವು ಜಾನಪದ ಕವಿಯತ್ರಿಯರು ಎಚ್ಚರಿಕೆವಹಿಸಿದ್ದಾರೆ.

ಸೋಬಾನ ಸೋಬಾನ ಸುಖದಿಂದೆ ಸೋಬಾನ
ಸೋಬಾನ ಬಲ್ಲವರ ಕರಿರೆವ್ವ । ಜೂಜನಾಡಿದರೆ
ಧರಗೋಳು ಜೂಜೊಂದಾಡಿದರೆ

ಹೊಟ್ಟಿಮ್ಯಾಲ ಆಡ ಮಗಳ್ಹಾಳೆ ಮಲ್ಲಮ್ಮಗ
ಬೊಟ್ಟ ನೊಂದಾವೆ ಬಿಡಕಯ್ಯ । ಜೂಜನಾಡಿದರೆ
ಧರಗೋಳು ಜೂಜೊಂದಾಡಿದರೆ ೨೦

ಈ ರೀತಿಯಾಗಿ ಹೆಣ್ಣಿನ ಜೀವನದಲ್ಲಿ ಸಂಭ್ರಮಪಡುವ ಮೊದಲ ಘಟ್ಟ ಮೈನೆರೆದಾಗ ಆಚರಿಸುವ ಸಂಪ್ರದಾಯಗಳಿಂದ ಪ್ರಾರಂಭವಾಗುವುದು. ಆಗಲೇ ಅವಳು ಬಾಲ್ಯದಿಂದ ಪ್ರೌಢಾವಸ್ಥೆಗೆ ಕಾಲಿರಿಸಿ ಹೆಣ್ತನದ ಫಲವತ್ತತೆಯ ಉತ್ಸವವನ್ನು ವೈಭವೀಕರಿಸುವಳು. ಹೆಣ್ಣು ಹೆಣ್ಣಾಗಿ ಹುಟ್ಟಿ ವಿವಿಧ ಸ್ವರೂಪ ತಾಳುತ್ತಾ ಹೋಗುವುದು ಇಲ್ಲಿಂದಲೇ. ಮೊದಲು ಮಾನವ ರೂಪ ತೊಟ್ಟು, ಮಗಳಾಗಿ, ಹೆಂಡತಿಯಾಗಿ ಗಂಡನನ್ನು ಕೂಡುವಳು. ತಾಯಾಗಿ ಮಗುವನ್ನು ಅಪ್ಪುವಳು. ಅತ್ತೆಗೆ ಸೊಸೆಯಾಗಿ ಕಾಣಿಸಿಕೊಳ್ಳುವಳು. ಇವು ಹೆಣ್ಣಿನ ಜೀವನದ ವಿವಿಧ ಸ್ವರೂಪಗಳು. ಈ ಎಲ್ಲ ರೂಪಗಳು ತಾಳುತ್ತ ಅಪೂರ್ಣತೆಯಿಂದ ಪೂರ್ಣತೆಯ ಕಡೆಗೆ ಸಾಗುವಳು. ಈ ಸಾಂಪ್ರದಾಯಿಕ ಹಾಡುಗಳು ಸಂಸ್ಕೃತಿಯ ಪ್ರತೀಕಗಳಾಗಿದ್ದು, ಹಲವಾರು ಒಳನೋಟಗಳನ್ನು ಇವುಗಳು ತನ್ನಲ್ಲಿ ಗರ್ಭಿಕರಿಸಿಕೊಂಡಿವೆ. ಹೀಗಾಗಿ ಮಹಿಳೆಯರು ಕಟ್ಟಿಕೊಟ್ಟಿರುವ ಈ ಹಾಡುಗಳು ಸಂಸ್ಕೃತಿಯ ಪ್ರತಿಬಿಂಬಗಳಾಗಿ ಕಂಡುಬರುತ್ತವೆ.

೩.೩ ಮದುವೆಯ ಹಾಡುಗಳು:

ಭಾರತಿಯ ಸಂಸ್ಕೃತಿಯಲ್ಲಿ ಮದುವೆ ಎಂಬ ಸನ್ನಿವೇಶಕ್ಕೆ ತನ್ನದೇ ಆದ ವಿಶಿಷ್ಟತೆ ಇದೆ. ಈ ಸನ್ನಿವೇಶದಲ್ಲಿ ನಮ್ಮ ಬದುಕಿನ ಹಾಗೂ ಸಂಸ್ಕೃತಿಯ ಎಲ್ಲ ಬಗೆಯ ಆಚರಣೆಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ. ಮದುವೆ ಜನಪದರ ಬಾಳಿನಲ್ಲಿ ಒಮ್ಮೆ ಬರಬಹುದಾದ ಒಂದು ದೊಡ್ಡ ಮತ್ತು ಸಂಕೀರ್ಣ ಸಂಭ್ರಮ. ಮದುವೆಗೆ ವಿವಾಹ, ಪರಿಣಯ, ಕಲ್ಯಾಣ ಮುಂತಾದ ಹೆಸರುಗಳಿಂದ ಕರೆಯುವರು. 'ಮದುವೆ' ಎಂಬುದು ಎಂದಿನಿಂದ ರೂಢಿಯಲ್ಲಿ ಬಂದಿತು ಎಂದು ಖಚಿತವಾಗಿ ಹೇಳಲು ಆಧಾರಗಳಿಲ್ಲ. ಇದರ ಕಾರ್ಯ ತಿಂಗಳಾನುಗಟ್ಟಲೆ ಸಾಗುತ್ತದೆ. ಇದು ಮಾನವನ ಜೀವನದಲ್ಲಿ ನಡೆಯುವ ಒಂದು ಅಪೂರ್ವ ಘಟನೆ. ಇದರಿಂದ ಹೃದಯ ಮನಸ್ಸುಗಳು ವಿಕಸನಗೊಂಡು ಅವಿಸ್ಮರಣೀಯ ಅನುಭವ ಉಂಟಾಗುವುದು.

ಹೆಣ್ಣಿಗೆ ಒಂದು ಸುರಕ್ಷಿತ ನೆಲೆ ಒದಗಿಸಲು, ಸಂತಾನ ರಕ್ಷಣೆಗೆ, ಪೋಷಣೆಗೆ, 'ಮದುವೆ' ರೂಢಿಯಲ್ಲಿ ಬಂದಿದೆ. ಹೆಣ್ಣು ಗಂಡು ಒಂದುಗೂಡಿ ವ್ಯವಸ್ಥಿತವಾಗಿ ಜೀವನ ಸಾಗಿಸಲು ಸಮಾಜದಲ್ಲಿ ಎಲ್ಲರೂ ಒಪ್ಪಿಗೆ ಸೂಚಿಸುವ ವ್ಯವಸ್ಥೆಯೇ ಮದುವೆ. ಮುಂದೆ ಬರುಬರುತ್ತಾ ಕಟ್ಟುಪಾಡು, ನಿಷೇಧ, ನಿರ್ಬಂಧ, ಸಪ್ತಪದಿ, ಮಂತ್ರ, ಪುರೋಹಿತಶಾಹಿ ಸೇರಿಕೊಂಡು ಮದುವೆಗೆ ಒಂದು ಧಾರ್ಮಿಕ ಚೌಕಟ್ಟು ಹಾಕಿದರು. ಮದುವೆಯ ಮುಖ್ಯ ಉದ್ದೇಶ ಗಂಡು ಹೆಣ್ಣು ಒಂದುಗೂಡಿ ಲೈಂಗಿಕತೃಪ್ತಿ ಹೊಂದುವುದು ಮತ್ತು ಸಂತಾನೋತ್ಪತ್ತಿ ಮಾಡುವುದು. ಸಂತಾನದ ರಕ್ಷಣೆಯ ಜವಾಬ್ದಾರಿ ಹೊರುವುದು ಆಗಿದೆ ಎಂಬುದು ಬಹುಜನರ ಅಭಿಪ್ರಾಯವಾಗಿದೆ. ಆದರೆ ವಿವಾಹದ ಉದ್ದೇಶ ಇಷ್ಟೇ ಆಗಿಲ್ಲ. ತನ್ನ ಆಸೆ ಆಕಾಂಕ್ಷೆಗಳಿಗೆ ಕಡಿವಾಣ ಹಾಕಿ ಸಮಸ್ತರ ಹಿತಕ್ಕಾಗಿ ಸಂಯಮದಿಂದ ಜೀವನ ಸಾಗಿಸಿಕೊಂಡು ಹೋಗಬೇಕು. ಅದಕ್ಕೆ ಮದುವೆ ಒಂದು ಅತ್ಯಂತ ಒಳ್ಳೆಯ ವ್ಯವಸ್ಥೆ ಎಂದು ಜಾರಿಯಲ್ಲಿ ತಂದುದಲ್ಲದೆ; ಕುಟುಂಬ ಜೀವನಕ್ಕೆ ಭದ್ರಬುನಾದಿ ಹಾಕಿ, ಪಾವಿತ್ರ್ಯದ ಚೌಕಟ್ಟು ತೊಡಿಸಿದರು. ಕುಟುಂಬ ಎಂಬ ಕಟ್ಟಡಕ್ಕೆ ಮದುವೆಯೇ ಮಹಾದ್ವಾರ, ಕುಟುಂಬದಲ್ಲಿ ಕಾಣಬರುವ ಎಲ್ಲ ಸಂಬಂಧಗಳನ್ನು ನಿರ್ದೇಶಿಸುವುದು ಮದುವೆ ಎನ್ನಲಾಗಿದೆ. ಹಲವಾರು ವ್ಯಕ್ತಿಗಳನ್ನು ಒಂದು ಆರ್ಥಿಕ ನೆಲೆಯಲ್ಲಿ ನಿಲ್ಲಿಸಿ ಅವರ ಸುತ್ತಲೂ ಸಾಮಾಜಿಕ, ಧಾರ್ಮಿಕ ಬಲೆಯನ್ನು ಹೆಣೆದು ಅವರ

ಬಾಳಿಗೊಂದು ಅರ್ಥವನ್ನು, ಸಾರ್ಥಕತೆಯನ್ನು ಒದಗಿಸಿ ಕೊಡುತ್ತದೆ. ಮದುವೆ ಎಂಬುದು ಸಾಮಾಜಿಕ ಒಪ್ಪಂದ ಎಂಬುದನ್ನು ಹಿಂದೆ ಸರಿಸಿ, ಎರಡು ಆತ್ಮಗಳ ಮಿಲನ. ಇದು ಸ್ವರ್ಗದಲ್ಲಿಯೇ ಜರುಗುತ್ತದೆ. ಜನ್ಮಜನ್ಮಾಂತರದ ಬಂಧನವೆನ್ನುವ ಮಟ್ಟಿಗೆ ನಂಬಿದರು.

ಎಲ್ಲ ವಿವಾಹ ಪದ್ಧತಿಗಳಲ್ಲಿ ವಧುವಿನ ತಂದೆ ಮಗಳನ್ನು ಸಂತೋಷದಿಂದ 'ಧಾರೆ' ಎರೆದು ಕೊಡುವುದು ಸಾಮಾಜಿಕ ಮನ್ನಣೆ ಪಡೆದಿದೆ. ಇಂತಹ ಮದುವೆಗಳನ್ನು ಊರ ಹಿರಿಯರು ಬಂಧು, ಬಳಗ ಸೇರಿ ಮಾಡುವುದರಿಂದ ಅದಕ್ಕೊಂದು ಸಂಭ್ರಮದ ವಾತಾವರಣ ಇರುವುದು. ತಮ್ಮ ಅನುಕೂಲ, ಗೌರವ, ಪ್ರತಿಷ್ಠೆಗಳಿಗೆ ತಕ್ಕಂತೆ ಮದುವೆಗಳನ್ನು ಸಡಗರದಿಂದ ನೆರವೇರಿಸುತ್ತಿದ್ದರು.

ಮದುವೆ ಮಾನವರಿಗಷ್ಟೇ ಮೀಸಲಾದುದಲ್ಲ ಎಂದರಿತ ಸುಸಂಸ್ಕೃತ ಹೃದಯದ ಜನಪದರು ಗಿಡಮರಗಳಿಗೂ ಲೈಂಗಿಕ, ಸಂತಾನೋತ್ಪತ್ತಿ ಬಯಕೆಗಳಿವೆ ಎನ್ನುವುದನ್ನು ತಿಳಿದುಕೊಂಡಿದ್ದಾರೆ. ಅವುಗಳಿಗೂ ಮದುವೆ ಮಾಡಿ, ಕೊರಳಲ್ಲಿ ತಾಳಿಯನ್ನು ಕಟ್ಟುತ್ತಾರೆ. ಒಳ್ಳೆಯ ಫಲವನ್ನು ನಿರೀಕ್ಷಿಸುತ್ತಾರೆ. ಅಷ್ಟೇ ಅಲ್ಲದೆ ದೇವದೇವತೆಗಳಿಗೂ ಮದುವೆ ಮಾಡಿ, ದೇವರ ಅಕ್ಷತೆ ಹಾಕಿ ಅವರ ಇಚ್ಛೆಗಳನ್ನೂ ಈಡೇರಿಸುವ ಜನಪದರು ಮದುವೆ ಸಂಪ್ರದಾಯದಲ್ಲಿ ಸರ್ವವ್ಯಾಪಿ ತತ್ವಗಳನ್ನು ಕಾಣುತ್ತೇವೆ. "ತನ್ನಂತೆ ದೇವತೆಗಳಿಗೂ ಸಂಸಾರ, ಬಳಗ, ಕದನ, ಮುನಿಸು ಇವು ಅನಿವಾರ್ಯ ಎಂದು ಬಗೆದಿರುವರು. ಮಕ್ಕಳ ಮದುವೆಯನ್ನು ಉತ್ಸಾಹದಿಂದ ಮಾಡುವಂತೆ ದೇವತೆಗಳ ಲಗ್ನವನ್ನೂ ವಿಜೃಂಭಣೆಯಿಂದ ಮಾಡುತ್ತಾರೆ." ಈ ಎಲ್ಲವೂಗಳ ದೃಷ್ಟಿಯಿಂದ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ, ಸುಸಂಸ್ಕೃತ ಜೀವನಕ್ಕೆ ಸರ್ವತೋಮುಖ ಕೌಟುಂಬಿಕ ಬೆಳವಣಿಗೆಗೆ ಮದುವೆ ಮಾನವನಿಗೆ ತೀರ ಅವಶ್ಯಕವಾಗಿದೆ.[೨೧]

ಜನಪದರ ದೃಷ್ಟಿಯಲ್ಲಿ ಇದು ಅಧ್ಯಾತ್ಮಿಕ ಮದುವೆ. ಅವರ ಭಾವನೆಯಲ್ಲಿ ಶಿವನೇ ವರನಾಗಿ, ಪಾರ್ವತಿಯೇ ವಧುವಾಗಿ ಕಲ್ಯಾಣ ಸಮಾರಂಭ ಜರಗುತ್ತದೆ. ಮದುವೆಯ ಸಂಭ್ರಮವನ್ನು ಅವರು ಒಂದೆರಡು ದಿನಗಳಲ್ಲಿಯೇ ಮುಗಿಸಿಬಿಡುವವರಲ್ಲ. ತಿಂಗಳುಗಟ್ಟಲೆ ಅದರ ಪೂರ್ವಸಿದ್ಧತೆ ಮಾಡಿಕೊಂಡು ಒಂಭತ್ತು ದಿನಗಳವರೆಗೂ ಮದುವೆ ಸಂಪ್ರದಾಯವನ್ನು ಆಚರಿಸುತ್ತಾರೆ. ಒಬ್ಬೊಬ್ಬರೂ ಒಂದೊಂದು ಕೆಲಸದಲ್ಲಿ ಮಗ್ನರಾಗಿರುತ್ತಾರೆ. ಸಂತೋಷ ಸಡಗರ, ಹಬ್ಬದ ವಾತಾವರಣ ತುಂಬಿ ಮದುವೆಯ ಮನೆ ಶೋಭಿಸುತ್ತಿರುತ್ತದೆ. ಬೀಗರ ಆಗಮನ ಹಾಗೂ ಲಗ್ನದ ಸಂಪ್ರದಾಯಗಳ ಆಚರಣೆ ಆರಂಭವಾಗುತ್ತವೆ.

ಬೀದರ ಜಿಲ್ಲೆಯಲ್ಲಿ ದೊರೆಯುವ ಮದುವೆಯ ಕುರಿತ ಹಾಡುಗಳ ಮೂಲಕ ಜನಪದರ ಮದುವೆಯ ವೈಶಿಷ್ಟ್ಯತೆಯನ್ನು ಇಲ್ಲಿ ಕಂಡುಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಆಚರಿಸಲ್ಪಡುವ ವಿಧಿ ವಿಧಾನಗಳೇ ಹಾಡುಗಳಲ್ಲಿ ತುಂಬಿಕೊಂಡಿದೆ. ಮದುವೆಯ ಹಾಡುಗಳು ಹೆಂಗಸರು ಹಾಡಬಲ್ಲ ವಿಶೇಷ ಬಗೆಯ ಭಾವಗೀತೆಗಳಾಗಿವೆ. ಈ ಹಾಡುಗಳಿಗೆ ತಮ್ಮದೇ ಆದ ಲಯ, ಧಾಟಿ, ರಾಗಗಳಿವೆ. ವಿವಿಧ ಸಂದರ್ಭಗಳಲ್ಲಿ ಇವುಗಳ ಧಾಟಿಯೂ ಬದಲಾವಣೆಯಾಗುತ್ತ ಹೋಗುತ್ತದೆ. ಮದುವೆಗೆ ನೆರೆದ ಜನರನ್ನು ಮಂತ್ರ ಮುಗ್ಧರನ್ನಾಗಿ ಮೋಡಿಗೊಳಿಸುವ ಶಕ್ತಿ ಈ ಹಾಡುಗಳಿಗಿದೆ. ಇವುಗಳಿಗೆ ಹಿನ್ನೆಲೆಯಾಗಿ ಯಾವ ವಾದ್ಯ ವಸ್ತುಗಳು ಇರದಿದ್ದರೂ ಸ್ತ್ರೀಯರ ಕೋಮಲ ಕಂಠದಿಂದ ಸೂಸಿ ಬರುವ ಈ ನಾದ ಮಾಧುರ್ಯದಲ್ಲಿ ಮನವನ್ನು ತಣಿಸುವ ಮಹಿಮೆ ಅಡಗಿದೆ.

ಮದುವೆಯಲ್ಲಿ ಜರುಗುವ ಕಾರ್ಯಗಳಲ್ಲಿ ಮಹಿಳೆಯರೇ ಮುಂದಾಳುಗಳಾಗಿರುತ್ತಾರೆ. ಎಲ್ಲ ಬಗೆಯ ಸಂಸ್ಕೃತಿಯನ್ನು ಪ್ರದರ್ಶಿಸುವವರು ಮಹಿಳೆಯರೇ ಆಗಿರುತ್ತಾರೆ. ಈ ಮಹಿಳೆಯರು ಇಲ್ಲಿ

ಹಾಲವಾರು ಬಗೆಯ ಹಾಡುಗಳನ್ನು ಪ್ರದರ್ಶಿಸುತ್ತಾರೆ. ಈ ಹಾಡುಗಳು ಇಲ್ಲಿ ನಡೆಯುವ ವಿವಿಧ ಆಚರಣೆಗಳಾದ ಹೆಣ್ಣು ನಿಶ್ಚಯ ಶಾಸ್ತ್ರ, ಒರಳು ಕಲ್ಲು ಪೂಜೆ, ಬಿಸುವಕಲ್ಲು ಪೂಜೆ, ಕೊಡ ಪೂಜೆ, ಕುಂಕುಮ ಪೂಜೆ, ಎಣ್ಣೆ ಹಚ್ಚುವುದು, ಧಾರೆ ಎರೆಯುವುದು, ಕೂಸೊಪ್ಪಿಸುವುದು, ಬಾಗಿಲು ಹಿಡಿಯುವುದು ಹಾಗೆಯೇ ಬೀಗರೊಂದಿಗಿನ ಹಾಸ್ಯದ ಕ್ಷಣಗಳನ್ನು ಪ್ರತಿನಿಧಿಸುವ ಹಾಡುಗಳನ್ನು ಇಲ್ಲಿ ಪ್ರದರ್ಶಿಸುವುದು ಕಂಡುಬರುತ್ತದೆ. ಈ ಎಲ್ಲ ಹಾಡುಗಳು ತನ್ನದೇ ಆದ ಸಾಂಸ್ಕೃತಿಕ ಮಹತ್ವವನ್ನು ಹೊಂದಿರುತ್ತವೆ. ಅವುಗಳನ್ನು ಈ ಮುಂದಿನಂತೆ ತಿಳಿಯಬಹುದಾಗಿದೆ.

೩.೩.೧ ಹೆಣ್ಣು ನಿಶ್ಚಯ ಹಾಡು:

ಜನಪದರು ಬಹುತೇಕ ಸಂಬಂಧವನ್ನು ಬೆಸೆಯುವುದು ದೂರದ ಊರಿನ ಸಂಬಂಧವನ್ನಲ್ಲ. ತಮ್ಮ ಹತ್ತಿರದ ಸಂಬಂಧವಾದ ಸಹೋದರಿಯ ಮಗಳು ಅಥವಾ ಅತ್ತೆಯ ಮಗಳನ್ನೇ ಇವರ ವರನಿಗಾಗಿ ಹುಡುಕುವರು. ಏಕೆಂದರೆ ಬಾಲ್ಯದಿಂದಲೂ ನೋಡಿಯೇ ಅಥವಾ ತವರಿಗೆ ಹೆಣ್ಣು ಕೊಟ್ಟೊ (ರಕ್ತ ಸಂಬಂಧಿಕರನ್ನು) ತೌರು ಸಮೀಪ ಮಾಡಿಕೊಳ್ಳಬೇಕೆಂಬ ಆಸೆಯೂ ಒಂದಾದರೆ, ಹಿಂದೆ ಸಾರಿಗೆಯ ವ್ಯವಸ್ಥೆಯ ಕೊರತೆಯು ಇದಕ್ಕೆ ಕಾರಣವಿರಬಹುದು. ಹೀಗಾಗಿ ಬಹುತೇಕ ರಕ್ತ ಸಂಬಂಧಗಳು ಜಾನಪದರಲ್ಲಿ ಕಂಡುಬರುತ್ತವೆ. ಹೀಗಾಗಿ ಬಹುತೇಕ ಜಾನಪದಿಯ ಹಾಡುಗಳು ಹತ್ತಿರದ ರಕ್ತ ಸಂಬಂಧವನ್ನು ಪ್ರತಿನಿಧಿಸುತ್ತವೆ.

ಅಣ್ಣನ ಮನೆಗೆ ಹೆಣ್ಣು ಬೇಡಲು ಹೋದಾಗ ನಡೆಯುವ ಸನ್ನಿವೇಶವನ್ನು ಪ್ರತಿನಿಧಿಸುವ ಹಾಡು ಹೀಗಿವೆ,

ಅಣ್ಣ ಒಪ್ಪಿದರೂ ಅತ್ತಿಗೆ ಒಪ್ಪಳು.

ಅಣ್ಣನ ಮನಿಗೆ ಹೆಣ್ಣು । ಬೇಡಲಿ ಹೋದ
ಮಗಳ ಕೊಡು ನನ್ನ ಮಗನೀಗಿ ऽऽ ॥ ೨ ॥

ಹೆಣ್ಣ ಬೇಡಕಿ ತಂಗಿ । ನಿನ್ನೆ ಬರದಿತ್ತ
ಮಡದಿ ತವರವರು ರುಳಿ ಸರಗಿ ಮಾಡಿ ऽऽ ॥ ೨ ॥
ಆ ರುಳಿ ತೆಗಿರೆಣ್ಣ । ಈ ರುಳಿ ಇಡರೆಣ್ಣ
ತಂಗಿ ಸೊಸಿನಂತ ಕರಿರಣ್ಣ ॥ ೨ ॥

ಆ ರುಳಿ ತೆಗಿಲಾರೆ । ಈ ರುಳಿ ಇಡಲಾರೆ
ತಂಗಿ ಸೊಸಿನಂತ ಕರಿಲಾರೆ ॥ ೨ ॥

ಆ ಸರಗಿ ತೆಗಿರಣ್ಣ । ಈ ಸರಗಿ ಇಡರೆಣ್ಣ
ತಂಗಿ ಸೊಸಿನಂತ ಕರಿರಣ್ಣ ॥ ೨ ॥

ಆ ಸರಗಿ ತೆಗಿಲಾರೆ । ಈ ಸರಗಿ ಇಡಲಾರೆ
ತಂಗಿ ಸೊಸಿನಂತ ಕರಿಲಾರೆ ॥ ೨ ॥

ತಂಗಿ ಸೊಸಿನಂತ ಕರಿಲಾರದಿದ್ದರ

ನಡಿ ಹೋಗರಿ ಕಲ್ಯಾಣದ ತಳದಲ್ಲಿ ॥ ೨ ॥

ನಡಿ ಹೋಗರಿ ತಂಗಿ ಕಲ್ಯಾಣದ ಗೌಡರಿಗಿ
ನ್ಯಾಯ ಹೇಳಲಿಬೇಕು ನಮಗೆಲ್ಲ ॥ ೨ ॥

ಕಲ್ಯಾಣ ಗೌಡರು ಏನಂತ ನುಡದಾರ
ತಂಗಿಗಿ ಮಗಳ ಕುಡ ಬೇಕು ॥ ೨ ॥

ಕಲ್ಯಾಣ ಬೆಳೆಯಲಿ । ಕಲ್ಯಾಣ ಚಿಗಿಯಲಿ
ಅಗಸಿಗಿ ಮುತ್ತ ಜಡಿಯಲಿ ॥ ೨ ॥

ಅಗಸಿಗಿ ಮುತ್ತ ಜಡಿಯಲಿ ನಮ್ಮಂಥವರ
ಹೆಣ್ಣುಮಕ್ಕಳ ಹ್ಯಾವ (ಮಾತು) ಗೆದಿಯಲಿ ॥ ೨ ॥ [೨೨]

ಈ ರೀತಿ ತಂಗಿ ಅಣ್ಣನ ಮನೆಗೆ ಹೆಣ್ಣು ಬೇಡಲು ಹೋದಾಗ, ಅಣ್ಣ ಅತ್ತಿಗೆಯ ಮಾತಿನಂತೆ, ಹೆಂಡತಿಯ ತವರಿಗೆ ಹೆಣ್ಣು ಕೊಡಲು ನಿಶ್ಚಯಸುತ್ತಾರೆ. ತಂಗಿ ಪರಿಪರಿಯಾಗಿ ಕೇಳಿದರೂ ಒಪ್ಪುವುದಿಲ್ಲ. ಆಗ ಅವಳು ಆ ಊರ ಗೌಡರಲ್ಲಿಗೆ ನ್ಯಾಯ ಕೇಳಲು ಹೋಗುವಳು. ಗೌಡರು ತಂಗಿಯ ಮಗನಿಗೆ ಹೆಣ್ಣು ಕೊಡುವಂತೆ ನ್ಯಾಯ ಹೇಳುತ್ತಾರೆ. ಇದನ್ನು ಕಂಡ ತಂಗಿ ಅತಿಯಾದ ಸಂತೋಷದಿಂದ ಗೌಡರನ್ನೂ, ಆ ಊರನ್ನೂ ಹರಸುವಳು. ಊರು ಚಿಗಿಯಲಿ ಊರು ಬೆಳೆಯಲಿ ಅಗಸಿಗೆ ಮುತ್ತು ಜಡಿಯಲಿ ಎಂದು ಅಂದರೆ ಊರು ಸಂಪತ್ತಿನಿಂದ ತುಂಬಿ ತಳುಕಲಿ, ನ್ಯಾಯ ಕೇಳಿದ ನಮ್ಮಂಥ ಊರು ಹೆಣ್ಣುಮಕ್ಕಳ ಮಾತು ಗೆದಿಯಲಿ ಎಂದು ಅವಳ ಬಯಕೆ. ನ್ಯಾಯ ಹೇಳಿದ ಗೌಡರಿಗೂ ಹರಸುವಳು. ಇದು ಮಹಿಳಾ ಪ್ರಧಾನ ಹಾಡಾಗಿದ್ದು, ಇಲ್ಲ ಹೆಣ್ಣಿಗೆ ತವರಿನ ಮೇಲಿರುವ ಅತಿಯಾದ ಪ್ರೀತಿಯನ್ನು ಎತ್ತಿಹಿಡಿಯುತ್ತದೆ.

ತಂಗಿಯ ಹಠದ ಮುಂದೆ ಅಣ್ಣನ ಮಾತು ಮುರಿದು ತಂಗಿಯ ಮಗನಿಗೆ ಮಗಳು ಕೊಡಲು ಅಣ್ಣ ಒಪ್ಪಿಕೊಳ್ಳುತ್ತಾನೆ. ಆಗ ನಿಶ್ಚಯ ಕಾರಣದಲ್ಲಿ 'ಸೊಸೆ' ಎಂದು ಗುರುತಿಸಿದ ಅಣ್ಣನ ಮಗಳಿಗೆ ಸೀರೆ ಉಡಿಸಿ, ಬಂಗಾರದ ಉಂಗುರವಿಟ್ಟು ಕನ್ಯಾನಿಶ್ಚಯ ಮಾಡಿ "ಗಟ್ಟಿಗಡಬು" ಕಟ್ಟಿಕೊಂಡು, ಗಂಡು ಮಕ್ಕಳಿಗೆ ಶಲ್ಯ ಮುಂಡಾಸು, ಹೆಣ್ಣು ಮಕ್ಕಳಿಗೆ ಸೀರೆ ಕುಪ್ಪಸ ಮಾಡಿಕೊಂಡು ಮದುವೆಯ ಸಿದ್ಧತೆಗಾಗಿ ತಮ್ಮೂರಿಗೆ ಮರಳುವರು. ನಂತರ ಲಗ್ನದ ಸಿದ್ಧತೆ ಮಾಡಿಕೊಂಡು ಒಂದೊಂದೇ ಆದ ಮದುವೆ ಸಂಪ್ರದಾಯಗಳ ಆಚರಣೆಗೆ ತೊಡಗುವರು. ಇವುಗಳು ಮದುವೆ ಸಂಪ್ರದಾಯ ಆರಂಭವಾಗುವುದಕ್ಕೆ ಪೂರ್ವದ ಸೂಚನೆಯ ನೆಲೆಗಳಾಗಿ ಕಂಡುಬರುತ್ತವೆ.

ಸಾಮಾನ್ಯವಾಗಿ ಸುಗ್ಗಿಯ ಕಾಲ ಮುಗಿದ ಮೇಲೆ, ಬೆಳೆಗಳೆಲ್ಲ ಕಟಾವಾಗಿ ರಾಶಿ ಮನೆಗೆ ತಂದು, ಹೊಲಗದ್ದೆಗಳ ಕೆಲಸದ ಬಿಡುವು ಮಾಡಿಕೊಂಡು ಮದುವೆಯನ್ನು ಇಟ್ಟುಕೊಳ್ಳುವರು. ಮದುವೆಯ ದಿನವನ್ನು ಹೆಣ್ಣು-ಗಂಡಿನವರು ಸೇರಿ ಚರ್ಚಿಸಿ ತಮಗೆ ಅನುಕೂಲವಾದ ದಿನವನ್ನು ನಿರ್ಧರಿಸಿ ಮದುವೆಯ ಸಿದ್ಧತೆಯನ್ನು ಭರದಿಂದ ಮಾಡುವರು. ಮನೆಯನ್ನು ಸಾರಣೆ, ಕಾರಣೆ ಮಾಡುತ್ತ ಸುಣ್ಣ, ಜಾಜವನ್ನು ಬಳಿಯುವರು. ಮನೆಯನ್ನು ಶುದ್ಧಗೊಳಿಸಿ ಮನೆ ದೇವರ ವಿಶೇಷ ಪೂಜೆ ಮಾಡುವರು.

ಮದುವೆಯಾಗಿ ಗಂಡನ ಮನೆಯಲ್ಲಿರುವ ಅಕ್ಕ-ತಂಗಿಯರನ್ನು ಬಹು ಆದರದಿಂದ ಮದುವೆಯ ಮುಂಚಿತವಾಗಿಯೇ ಕರೆದುಕೊಂಡು ಬರುವರು. ಹೆಣ್ಣು ಮಕ್ಕಳು ಮದುವೆಗೆ ಬೇಕಾಗುವ ಪರಿಕರಗಳೆಲ್ಲ ಜೋಡಿಸಿಕೊಳ್ಳುವರು. ಶಾವಿಗೆ ಮಾಡುವುದು, ಒರಳುಕಲ್ಲು ಪೂಜೆ ಮಾಡುವುದು, ಈ ಎಲ್ಲ ಕೆಲಸಗಳು ಒಬ್ಬರಿಂದಲೇ ಆಗುವುದಿಲ್ಲ. ಸಮೀಪದ ಬಂಧುಗಳು, ನೆರೆಹೊರೆಯವರು ಕೂಡಿ ಸಂಭ್ರಮದಿಂದ ಓಡಾಡುತ್ತ ಮಾಡುವರು. ಹಲವರು ಕೂಡಿ ಮಾಡುವುದರಿಂದ, ಅದಕ್ಕೆ ಸಾಮಾಜಿಕ ಸಂಭ್ರಮದ ಮೆರಗು ಬರುತ್ತದೆ. ಹೀಗೆ ಆರಂಭವಾದ ಮದುವೆಯ ಕಾರ್ಯವು ವಿವಿಧ ಬಗೆಯಲ್ಲಿ ಮುಂದುವರೆಯುತ್ತದೆ.

೩.೩.೨ ಒರಳುಕಲ್ಲು ಪೂಜೆಯ ಹಾಡು:

ಒರಳು, ಒನಕೆ ಮತ್ತು ಬೀಸುವ ಕಲ್ಲುಗಳು ಜನಪದರಿಗೆ ಅವಶ್ಯವಾಗಿ ಬೇಕಾಗುವ ಸಾಮಗ್ರಿಗಳು. ಅವುಗಳನ್ನು ಅವರು ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಒರಳುಕಲ್ಲು ಪೂಜೆಯ ದಿನದಂದು, ಒರಳು ಒನಕೆಗಳನ್ನು ಚೆನ್ನಾಗಿ ತೊಳೆದು, ಸುಣ್ಣ ಮತ್ತು ಜಾಜುಗಳಿಂದ ಕೆಂಪು ಬಿಳಿಗೆರೆ ಎಳೆದು ವಸ್ತ್ರದಲ್ಲಿ ವಿಳೆದೆಲೆಯ ಜೊತೆಗೆ ಅರಶಿಣದ ತುಂಡು ಕಟ್ಟಿ ಅದನ್ನು ಓನಕೆಗೆ ಕಟ್ಟುವರು. ಅದರಂತೆ ಬೀಸುವಕಲ್ಲನ್ನು ಸ್ವಚ್ಚವಾಗಿ ತೊಳೆದು ಕೆಂಪು ಬಿಳಿ ಎಳೆಗಳು ಬರುವಂತೆ ಸುಣ್ಣ–ಜಾಜುಗಳಿಂದ ಗೆರೆ ಎಳೆಯುವರು. ಒಂದು ಬಿಳಿ ವಸ್ತ್ರದಲ್ಲಿ ಅರಿಶಿಣ ತುಂಡು ವಿಳೆದೆಲೆಯೊಂದಿಗೆ ಕಟ್ಟಿ ಬೀಸುವ ಕಲ್ಲಿನ ಬಾಯಿಗೆ ಕಟ್ಟುವರು. ಇದಾದ ಮೇಲೆ ಕುಟ್ಟಲು ಐದು ಜನ ಮುತ್ತೈದೆಯರು, ಬೀಸುವ ಐದು ಜನ ಮುತ್ತೈದೆಯರು ಒರಳು ಕಲ್ಲಿಗೆ ಕುಂಕುಮ ವಿಭೂತಿಗಳಿಂದ ಪೂಜಿಸಿ, ಹೂ ಏರಿಸಿ, ಊದಿನಕಡ್ಡಿ ಬೆಳಗಿ, ತಾವೂ ಹೂವಿನ ದಂಡಿಯನ್ನು ತಲೆಗೆ ಮುಡಿದು ಕೊಂಡು ವಿಳೆಯ ಎಲೆಯ ಮೇಲೆ ನೆನೆಯಿಸಿದ ಕಡಲೆ ಬೇಳೆ ಹಾಗೂ ಬೆಲ್ಲ ಇಟ್ಟು ಪೂಜಿಸಿ ಹಾಡುತ್ತ ಕುಟ್ಟುವರು. ಒರಳಲ್ಲಿ ಕಳವೆ ಹಾಕಿ ಒನಕೆಯಿಂದ ಕುಟ್ಟಿದರೆ, ಬೀಸುವವರು ಗೋಧಿ ಬೀಸುವರು. ಆಗ ಈ ರೀತಿ ಹಾಡು ಹೇಳುತ್ತಾರೆ.

ಕಲ್ಲೊಳ್ಳ ಪೂಜೆಗಿ ನಿನ್ನ್ಯಾರು ಕರುಸ್ಯಾರ
ಪಿಲ್ಲೇದ ಕಾಲ ಮಗಳೀಗಿ । ಪಿಲ್ಲೇದ ಕಾಲ
ಮಗಳೀಗಿ ಮಾದೇವಿಗಿ ಪಲ್ಲಕ್ಕಿ ಕೊಟ್ಟು ಕರುಸ್ಯಾರೆ. [೨೩]

ಇಲ್ಲಿ ಪೂಜೆಗೊಳ್ಳುವ ಒರಳು ಮತ್ತು ಒನಕೆ ಹಾಗೂ ಬೀಸುವ ಕಲ್ಲುಗಳು ಸ್ತ್ರೀ ಮತ್ತು ಪುರುಷ ಸೂಚಕವಾದವುಗಳಾಗಿವೆ. ಒರಳು ಸ್ತ್ರೀ ಸೂಚಕವಾದರೆ, ಒನಕೆಯು ಪುರುಷ ಸೂಚಕವಾಗಿ ಕಂಡುಬರುತ್ತದೆ. ಇವೆರಡರ ಸಂಗಮದಿಂದ ಮಾತ್ರ ಎಲ್ಲ ಕಾರ್ಯಗಳು ಸುಗಮವಾಗಿ ಸಾಗುತ್ತವೆ ಎಂಬ ಉದ್ದೇಶದಿಂದಾಗಿ ಜಾನಪದರು ಕಲ್ಯಾಣ ಸೂಚಕವಾದ ಕಾರ್ಯಗಳನ್ನು ನಡೆಸುವ ಪೂರ್ವದಲ್ಲಿ ಇವುಗಳಿಗೂ ಪೂಜೆ ಮಾಡುವುದು ಕಂಡುಬರುತ್ತದೆ. ಈ ಸಂಪ್ರದಾಯ ಸೂಚಕವಾದ ಜಾನಪದ ಹಾಡುಗಳು ಬೀದರ ಪ್ರಾಂತ್ಯದ ಮಹಿಳಾ ಹಾಡುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಕುಟ್ಟುವ ಒಣಕೆಗೆ ಕಂಕಣ ಕಟ್ಟುವ ಹಾಡು:

ಬಿಳಿ ಬಟ್ಟೆಯಲ್ಲಿ ಅರಶಿಣ ಕೊಂಬು ವಿಳೆದೆಲೆಯಲ್ಲಿ ಸುತ್ತಿ ಕುಟ್ಟುವ ಒಣಕೆಗೆ ಕಂಕಣ ಕಟ್ಟಿ ಐದು ಜನ ಮುತ್ತೈದೆಯರು ಒರಳಿಗೂ ಒಣಕೆಗೂ ಪೂಜೆ ಮಾಡಿ, ಹುಗ್ಗಿ ಕುಟ್ಟುತ್ತಾ ಈ ಹಾಡು ಹೇಳುವರು.

ಕುಂತಲ್ಲಿ ಕುಡಿಯ ಬಾ, ನಿಂತಲ್ಲಿ ನುಡಿಯ ಬಾ
ಹೊನ್ನ ಕಳಸ ಹಿಡಿಯ ಹೆಣ್ಣು ಮಗಳು ಬಾರೆ
ಸುವ್ವಿ ಸುವ್ವಾಲೋ ಽಽ

ಎತ್ತ ಮುಟ್ಟವ ಕೊಟ್ಟಿದ, ನಾ ನನ್ನ ಗುರುಸ್ವಾಮೀನ
ಕರಿಯ ಕಳಸಿದ । ಗುಂಡ್ ಮುಂಡಾಸಿ ಕಟಿಕೊಂಡು
ಕೊಂಬ್ಬಚ್ಚಡ ಹಚಿಕೊಂಡು ಗುರುಸ್ವಾಮಿ ಬಾ ನನ್ನ
ಸರವ ಲಗ್ಗಣಕ ಸುವ್ವಿ ಸುವ್ವಾಲೋ ಽಽ

. . . .

ಹಳಸಲ್ಲದನ್ನ ಉಂಬಾಕಿ । ಹೇಸಾಲ್ಲದರಬಿ ಒಗಿಯಾಕಿ
ಪಾಸು ಪತಿ ನನ್ನ ಕೂಸಿನ ಸರಿಯಾಕಿ । ಅಗಸೂತಿ ಬಾ
ನನ್ನ ಸರವ ಲಗ್ಗಣಕ ಸುವ್ವಿ ಸುವ್ವಾಲೋ ss [೨೪]

ಈ ರೀತಿ ಅರಶಿಣದಿಂದ ತೊಯ್ಸಿದ್ದಂತ ಬಿಳಿಬಟ್ಟೆಯಲ್ಲಿ ಅರಶಿಣದ ಕೊಂಬು ಹಾಗೂ ವಿಳೆದೆಲೆಯನ್ನು ಸುತ್ತಿ ಗೋಧಿ ಹುಗ್ಗಿ ಕುಟ್ಟುವ ಒಣಕೆಗೆ ಕಟ್ಟಿ, ಒರಳಿಗೂ ಒಣಕೆಗೂ ಪೂಜೆ ಮಾಡಿ ಐದು ಜನ ಮುತ್ತೈದೆಯರು ಹುಗ್ಗಿಕುಟ್ಟುವರು. ಈ ಹಾಡಿನ ಮೂಲಕವೇ ಮನೆಯ ಗುರುಗಳನ್ನು, ಹೊನ್ನಕಳಸ ಹಿಡಿಯುವ ಮನೆಯ ಹೆಣ್ಣು ಮಗಳನ್ನು ಮೊದಲಿಗೆ ಲಗ್ನಕ್ಕೆ ಆಹ್ವಾನಿಸುವರು. ಆನಂತರ ತಂದೆ-ತಾಯಿಯರನ್ನು ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರನ್ನು ಕರೆದುಕೊಂಡು ಬರಲು ತಿಳಿಸುವರು. ಜೊತೆಗೆ ತನ್ನ ಹಂದರದಲ್ಲಿ ಮುಂದಾಗಿ ನಿಂತು ಎಲ್ಲ ಕಾರ್ಯಗಳು ನೋಡಿಕೊಂಡು ಕೆಲಸ ಮಾಡುವ, ನೋಡುವುದಕ್ಕಾಗಿ ತನ್ನ ಹಿರಿಯಣ್ಣ ಹಾಗೂ ಕಿರಿಯ ತಮ್ಮನನ್ನು ಲಗ್ನಕ್ಕೆ ಬರುವಂತೆ ಕರೆ ನೀಡುವಳು.

ಸದಾ ಅಡುಗೆ ಮನೆಯಲ್ಲಿಯೇ ಕೆಲಸ ಕಾರ್ಯಗಳಲ್ಲಿ ನಿರತಳಾಗಿರುತ್ತಿದ್ದ ಓರಗಿತ್ತಿಗೂ ಹಾಗೂ ತನ್ನ ಸಂಭ್ರಮವನ್ನು ಕಂಡು ಸಂತೋಷಪಡುವ ಆತ್ಮೀಯ ಗೆಳತಿಗೂ ಆಹ್ವಾನ ನೀಡುವಳು. ಸದಾ ಅಲ್ಲಿಂದಿಲ್ಲಿಗೆ ಮಾತು ಮುಟ್ಟಿಸುವಂಥ ನಾದುಣಿಗೂ ಹಾಗೂ ಹೇಸಿಗೆ ಪಟ್ಟುಕೊಳ್ಳಲಾರದೇ ಎಂಥ ಬಟ್ಟೆಗಳಿದ್ದರೂ ಒಗೆಯುವಂಥ ಅಗಸೂತಿಯನ್ನು ತನ್ನ ಮನೆಯಲ್ಲಿರುವ ಲಗ್ನ ಕಾರ್ಯಕ್ಕೆ ಬರಬೇಕೆಂದು ಆತ್ಮೀಯವಾದ ಆಹ್ವಾನ ನೀಡುವ ಅಂಶಗಳನ್ನು ಬೀದರ ಪ್ರಾಂತ್ಯದ ಮಹಿಳಾ ಜಾನಪದ ಹಾಡುಗಳಲ್ಲಿ ಗುರುತಿಸಬಹುದಾಗಿದೆ.

೩.೩.೩ ಬೀಸುವ ಕಲ್ಲಿನ ಪೂಜೆ ಹಾಡು:

ಒಳ್ಳಕಲ್ಲಿಡಲು ನಮ್ಮ್ಯಾರು ಕರಸ್ಯಾರೆ
ಸಾಲ ಮಾಳಿಗಿ ಮನೆಯವರು । ಸಾಲಮಾಳಿಗಿ
ಮನೆಯವರು ಬಸವರಾಜ ಒಳ್ಳಕಲ್ಲಿಡಲು
ಕರುಸ್ಯಾರೆ ss ೨೫

ಜಾನಪದ ಹಾಡುಗಳು ಕೇವಲ ಮನರಂಜನೆಯ ಗೀತೆಗಳಲ್ಲ. ಇವುಗಳಲ್ಲಿ ನಮ್ಮ ಬದುಕಿನ ಸತ್ವ ಹಾಗೂ ಸಂಸ್ಕೃತಿಯು ಅಡಗಿರುತ್ತದೆ. ಇಲ್ಲಿನ ಮದುವೆ ಕಾರ್ಯದಲ್ಲಿ ಪೂಜೆಗೊಳ್ಳುವ ಒನಕೆ, ಒರಳುಕಲ್ಲು, ಬೀಸುವ ಕಲ್ಲುಗಳು ಮಾನವನ ದೈನಂದಿನ ಬದುಕಿನ ಒಂದು ಅಂಗಗಳಾಗಿರುತ್ತವೆ. ಇವುಗಳಿಲ್ಲದೆ ನಮ್ಮ ಬದುಕಿಲ್ಲ ಎಂದು ಜಾನಪದರು ನಂಬಿಕೊಂಡು ಬಂದಿದ್ದಾರೆ. ಹೀಗಾಗಿ ಇವರು ಈ ವಸ್ತುಗಳನ್ನು ತಮ್ಮ ದೈವವೆಂದು ನಂಬಿಕೊಂಡು ಬಂದಿದ್ದಾರೆ. ಹಾಗೆಯೇ ಜಾನಪದರಿಂದ ಆರಾಧ್ಯಕ್ಕೆ ಒಳಗಾಗಿರುವ ಈ ವಸ್ತುಗಳು ಪ್ರಕೃತಿ ಮತ್ತು ಪುರುಷನ ಸಂಕೇತಗಳೂ ಹೌದು. ಇವುಗಳನ್ನು ದಾಂಪತ್ಯದ ಸಂಕೇತವಾಗಿ ಜಾನಪದರು ಕಂಡುಕೊಂಡಿದ್ದಾರೆ. ಹೀಗಾಗಿ ಈ ವಸ್ತುಗಳ ಕುರಿತಾಗಿ ವಿಶೇಷವಾದ ಗೌರವ ಜಾನಪದರಲ್ಲಿ ಕಂಡುಬರುತ್ತದೆ.

೩.೩.೪ ಕೊಡದ ಪೂಜೆ:

ಒರಳು ಕಲ್ಲು ಪೂಜೆಯೊಂದಿಗೆ ಹರದೆಯರೆಲ್ಲ ಸೇರಿ ಹೊಸ ಧಾನ್ಯಗಳನ್ನು ಕುಟ್ಟಿ-ಬೀಸಿ, ಹೊಸ ಕೊಡಗಳನ್ನು ತುಂಬಿಡುವರು. ಮಣ್ಣಿನ ಎರಡು ಕೊಡಗಳನ್ನು ಎದುರು ಬದಿರಾಗಿ ಬೋರಲ್ಹಾಕಿ ಇಟ್ಟು ಅಲ್ಲಿ ಗಡಿಗೆಗೂ ಬಸವಣ್ಣನ ಹಿತ್ತಾಳೆ ಮೂರ್ತಿಗೂ ಪೂಜೆ ಮಾಡಿ ಕಡಲೆಬೇಳೆ, ಬೆಲ್ಲ ನೈವೇದ್ಯವೆಂದು ತೋರುವರು. ಇಬ್ಬರು ಮುತ್ತೈದೆಯರು ಎದುರು ಬದುರಾಗಿ ಕುಂಕುಮ, ಹೂದಂಡೆ ಹಾಕಿಕೊಂಡು ಕುಳಿತು ಹೊಸ ಮಣ್ಣಿನ ಕೊಡಗಳ ಮೇಲೆ ಗೋಧಿ ಹಿಟ್ಟಿನಿಂದ (ಅದುಮಿದ) ಶ್ಯಾವಿಗೆ ಹೊಸೆಯುವರು. ಶ್ಯಾವಿಗೆ ಮಾಡುತ್ತ ಈ ರೀತಿಯ ಹಾಡುಗಳನ್ನು ಹೇಳುವರು.

ಹಾದಿಯಲ್ಲಿ ಗೋಧಿ ಬೀಸಿ ಐದ ಸೇರಿಲಿ
ಸೋಸಿದ್ಧಿಟ್ಟು ಕಣಕ ನಾದಿ ಮೋಜದಿಂದಲಿ
ಮದವಿ ಲಗ್ನ ಕೊಡದ ಪೂಜಿ ಮಾಡ್ವರೈವರು ॥ ೨ ॥

ಹೊಸನ ಕೊಡ ಹಸನ ತೊಳದು
ಎಸಳ ಶ್ಯಾವಿಗಿ । ಮದವಿ
ಲಗ್ನ ಕೊಡವ ಪೂಜಿ ಮಾಡ್ವರೈವರು ॥ ೨ ॥

ದುಂಡ ಮಲ್ಲಿಗಿ ದಂಡಿ ಕುಕಮ್ಮ
ಗಂಥ ತೀಡುತ । ಮದವಿ ಲಗ್ನ
ಕೊಡವ ಪೂಜಿ ಮಾಡ್ವರೈವರು ॥ ೨ ॥

ಐದ ಮಂದಿ ಮುತ್ತೈದೇರು
ಮೂರ್ತಗಳೆವರು । ಮದವಿ ಲಗ್ನ
ಕೊಡವ ಪೂಜಿ ಮಾಡ್ವರೈವರು ॥ ೨ ॥

ಹಾದಿಯಲ್ಲಿ ಗೋಧಿ ಬೀಸಿ ಐದ ಸೇರಿಲಿ
ಸೋಸಿದ್ಧಿಟ್ಟು ಕಣಕನಾದಿ ಮೋಜದಿಂದಲಿ
ಮದವಿ ಲಗ್ನ ಕೊಡದಪೂಜಿ ಮಾಡ್ವರೈವರು ॥ ೨ ॥ [೨೬]

ಇಲ್ಲಿ ಜಾನಪದರು ಕೊಡಪೂಜೆ ಮಾಡುವಂತದ್ದು ವಿಶೇಷವಾಗಿರುತ್ತದೆ. ಜಾನಪದರಲ್ಲಿ ಚಿತ್ರಿತವಾಗುವ ಈ ಕೊಡದ ಸುತ್ತ ಫಲವಂತಿಕೆಯ ಪ್ರತೀಕಗಳು ಕಂಡುಬರುತ್ತವೆ. ಇಲ್ಲಿ ಮಡಕೆ ಅಥವಾ ಕೊಡವು ಫಲವಂತಿಕೆಯ ಸಂಕೇತವಾಗಿ ಕಂಡುಬರುತ್ತವೆ. ಇದು ಗಂಡು-ಹೆಣ್ಣಿನ ಸಂತಾನದ ಪ್ರಗತಿಯನ್ನು ಅನಾವರಣಗೊಳಿಸುತ್ತದೆ.

೩.೩.೫ ಶೆಂಡಿಗೆ ಕಡಿಯುವುದು:

ಒಳ್ಳುಕಲ್ಲು ಪೂಜೆಯೊಂದಿಗೆ ಬಂದ ಎಲ್ಲಾ ಮುತ್ತೈದೆಯರು, ಐದು ಧಾನ್ಯಗಳನ್ನು ಸೇರಿಸಿ ಪುಡಿ ಮಾಡಿ, ಒಡೆದ ಹಿಟ್ಟನ್ನು ಕಲಸಿ, ಒಂದು ಬಟ್ಟೆಯ ಮೇಲೆ ಬಸವಣ್ಣನ ಹಿತ್ತಾಳೆ ಮೂರ್ತಿಯನ್ನು ಮಧ್ಯದಲ್ಲಿಟ್ಟು ಪೂಜಿಸಿ ನೈವೇದ್ಯ ತೋರಿ, ಶೆಂಡಿಗೆ ಕಡಿಯುವರು. ಶೆಂಡಿಗೆ ಕಡೆಯುವಂಥ (ಇಡುವಂಥ) ಸಂದರ್ಭದಲ್ಲಿ ಈ ಹಾಡನ್ನು ಹೇಳುವರು.

ಕಡಲಿಯ ಬ್ಯಾಳೊಡೆದು । ಒಡೆದು ಚೂರವಮಾಡಿ
ಹಸಿಯ ಹಂದರದಾಗ ಹೊರಸ್ಹಾಕಿ । ಹಸಿಯೇ ಹಂದರದಾಗ
ಹೊರಸ್ಹಾಕಿ ಸುನಿತಾಬಾಯಿ ಮಾಡ್ಯಾಳ ಮಗನ ಮದವಿಗಿ

. . . .

ನಿಂಬಿಯ ಖಂಭಗೋಳೆ, ನಿಂಬಿಯ ಬೋಧಗೊಳೆ
ನಿಂಬಿಯ ಕಂಭ ಹಾಲಗಂಭ । ನಿಂಬಿವೀಯ ಕಂಭ
ಹಾಲಗಂಭ ಹಂದರದಾಗ ರಂಭೇರು ಸೆಂಡಿಗಿ ಕಡದಾರ ss [೨೭]

ಎಂದು ಹಾಡುತ್ತ ಹರದೆಯರೆಲ್ಲ ಸೇರಿ ಸೆಂಡಿಗೆ, ಶಾವಿಗೆ, ಜೀರಗಿಮೆಂತ್ಹಿಟ್ಟು, ಐದು ದಿನಸಿನ ದಾಣಿ ದಿನಸು, ಎಲ್ಲವೂಗಳನ್ನು ಮಾಡಿ ಹೊಸ ಕೊಡಗಳನ್ನು ತುಂಬಿಡುವರು. ಇವೆಲ್ಲವೂಗಳೂ ಸಾಕ್ಷಾತ್ ದೇವತೆಗಳೆಂದೇ ಅವರು ನಂಬಿಕೊಂಡಿದ್ದಾರೆ. ತಮ್ಮ ದಿನನಿತ್ಯದ ಬದುಕು ನಡೆಯುತ್ತಿರುವುದೇ ಇವುಗಳ ಆಧಾರದ ಮೂಲಕ ಎನ್ನುವ ಲೌಕಿಕ ದೃಷ್ಟಿ ಈ ರೀತಿಯ ಪೂಜೆಗೆ ಎಡೆಮಾಡಿಕೊಟ್ಟಿದೆ. ನಿರ್ಜೀವ ವಸ್ತುಗಳಲ್ಲಿಯೂ ಸಜೀವತೆಯನ್ನು, ದೈವತ್ವವನ್ನು ಕಂಡುಕೊಂಡ ಹೃದಯ ವೈಶಾಲ್ಯತೆ ಈ ಮಹಿಳೆಯರು ಹಾಡುವ ಜಾನಪದಿಯ ಅಂಶಗಳಲ್ಲಿ ಕಂಡುಬರುತ್ತದೆ.

೩.೩.೬ ಕುಂಕುಮ ಹಚ್ಚುವ ಹಾಡು:

ಕುಂಕುಮ ಹಚ್ಚುವುದು ಮದುವೆಯ ಪ್ರಕ್ರಿಯೆಯಲ್ಲಿ ವಧುವನ್ನೊಳಗೊಳ್ಳುವ ಮೊದಲ ಕಾರ್ಯಕ್ರಮ. ಈ ಕಾರ್ಯಕ್ರಮ ವಧುವಿನ ಮನೆಯಲ್ಲಿ ನಡೆಯುತ್ತದೆ. ಊರವರ, ಬಂಧು ಬಳಗದವರ ಸಮ್ಮುಖದಲ್ಲಿ ಈ ಕಾರ್ಯಕ್ರಮ ವಿಜೃಂಭಣೆಯಿಂದ ಜರಗಿಸುವರು. ಎಲ್ಲರಿಗೂ ಕಾಣುವ ಸ್ಥಳದಲ್ಲಿ ಒಂದು ಜಮಖಾನೆ ಹಾಕಿ, ಅದರ ಮೇಲೆ ಅಕ್ಕಿಯಿಂದ ಸಸೆ ಬರೆದು ಎಡದಲ್ಲಿ ಒಬ್ಬ ಚಿಕ್ಕ ಹುಡುಗಿಯನ್ನು ಕೂಡ್ರಿಸಿ, ಬಲದ ಸಸೆಯ ಮೇಲೆ ವಧುವನ್ನು ಕೂಡಿಸುವರು. ವರನ ಕಡೆಯವರು ತಂದ ಹೊಸ ಸೀರೆ, ಕುಪ್ಪಸ ಉಡಿಸಿ, ಅವರು ಕೊಟ್ಟ ಬಂಗಾರದ ಆಭರಣಗಳು ವಧುವಿಗೆ ಹಾಕಿ, ಹೂವಿನ ದಂಡೆ ಕಟ್ಟುವರು. ಉಡಿಯಲ್ಲಿ ಬಂದ ಐದು ಜನ ಮುತ್ತೈದೆಯರು ಗೋಧಿ, ಖೊಬ್ಬರಿ, ಅರಿಶಿಣ, ಉತ್ತುತ್ತಿ, ಖಾರಿಕ್‌ದಿಂದ ಉಡಿ ತುಂಬುವರು. ನೆರೆದ ಮುತ್ತೈದೆಯರು ಹಾಡು ಹೇಳುವರು. (ಎಡದಲ್ಲಿ ಕುಳಿತ ಚಿಕ್ಕ ಹುಡುಗಿಯನ್ನು ಸೀರೆ ಉಡಿಸಿ, ದಂಡೆ ಕಟ್ಟುವರು.) ಹಾಡುಗಳು ಈ ರೀತಿಯಾಗಿರುತ್ತವೆ.

ಕುಂಕುಮ್ಹಚ್ಚಿರಿ ನಮ್ಮ ಚಂದ್ರನ ಚಲುವಿಗಿ ॥ ೨ ॥
ಸರಸತಿ ಹಡದ ಮಗಳೀಗಿ ಗಂಧದಕ್ಕೆ ಸೋ ॥ ೨ ॥
ಸರಸತಿ ಹಡದ ಮಗಳನೆ ಮಾದೇವಿಗಿ ॥ ೨ ॥
ಕುಂಕುಮ್ಹಚ್ಚಿರಿ ಶುಭದಿಂದೆ ಗಂಧದಕ್ಕೆ ಸೋ ॥ ೨ ॥

ಸರಗಿ ಇಟ್ಟಿರಿ ನಮ್ಮ ಚಂದ್ರನ ಚೆಲುವಿಗಿ ॥ ೨ ॥
ಶಿವಶರಣಿ ಹಡದ ಮಗಳಿಗಿ ಗಂಧದಕ್ಕೆ ಸೋ ॥ ೨ ॥
ಶಿವಶರಣಿನೇ ಹಡದ ಮಗಳನೇ ಶ್ರೇಯಮ್ಮಗ ॥ ೨ ॥
ಸರಗಿ ಇಟ್ಟಾರೆ ಶುಭದಿಂದೇ ಗಂಧದಕ್ಕೆ ಸೋ ॥ ೨ ॥ [೨೮]

ಇಲ್ಲಿ ಕುಂಕುಮವು ಮುತ್ತೈದೆತನದ ಸಂಕೇತವಾಗಿ ಕಂಡುಬರುತ್ತದೆ. ಮದುವೆಗೂ ಪೂರ್ವದಲ್ಲಿ, ಅಂದರೆ ಹೆಣ್ಣನ್ನು ಧಾರೆ ಎರೆಯುವ ಮುನ್ನ ಶಾಸ್ತ್ರಕ್ಕೆ ಸಜ್ಜುಗೊಳಿಸುವಾಗ ತಮ್ಮ ಮನೆಯ ಕಿರಿಮಗಳನ್ನು ಪಕ್ಕದಲ್ಲಿ ಕೂರಿಸಿ ಕುಂಕುಮ ಹಚ್ಚುವ ಶಾಸ್ತ್ರವನ್ನು ಆರಂಭಿಸುತ್ತಾರೆ. ಇಲ್ಲಿ ಮಹಿಳೆಯರು ಹೆಣ್ಣಿನ ಮುತ್ತೈದೆ ತನದ ಮಹತ್ವವನ್ನು ಕುರಿತು ಪದಕಟ್ಟಿ ಹಾಡುವುದು ಕಂಡುಬರುತ್ತದೆ.

೩.೩.೨ ಎಣ್ಣೆ ಹಚ್ಚುವ ಹಾಡು:

ನೆಯ್ಯಿ ಎಂದರೆ ಹೊಸೆ, ಹಚ್ಚು ಎಂದು ಅರ್ಥವಿದೆ. ಕೌಟುಂಬಿಕ ಜೀವನದ ಅತ್ಯಂತ ಮಹತ್ವದ ಘಟ್ಟ ಮದುವೆ. ಕನ್ಯೆ ನಿಶ್ಚಯವಾದಂದಿನಿಂದ ಹಣ್ಣು-ಕಾಯಿ ಉಡಿ ತುಂಬುವುದು, ಕುಂಕುಮ ಹಚ್ಚುವುದು, ಮುಡಿ, ಉಂಗುರ ತೊಡಿಸುವುದು ಇತ್ಯಾದಿ ಕೆಲವು ಸಂಪ್ರದಾಯಗಳನ್ನು ಗಂಡು-ಹೆಣ್ಣು ನೆರವೇರಿಸಲಾಗುತ್ತದೆ. ಗೊತ್ತಾದ ಮದುಮಕ್ಕಳಾಗುವ ಸಂದರ್ಭದಲ್ಲಿ ಅರಶಿಣ ಹಚ್ಚುವುದರಿಂದ, ತಾಳಿ ಕಟ್ಟುವವರೆಗೆ ಮತ್ತೆ ಕೆಲವು ಆಚರಣೆಗಳನ್ನು ಪಾಲಿಸಲಾಗುತ್ತದೆ. ಅಂಥವುಗಳಲ್ಲಿ "ನೆಯ್ಯಣ್ಣಿ" ಒಂದು ಶೃಂಗಾರಮಯ ಆಚರಣೆ. ಇದಕ್ಕೆ ಅಗತ್ಯವಾದ ಪರಿಕರ ತುಪ್ಪ, ಎಣ್ಣೆ, ದಂಟಿನ ಗಣಿಕೆ, ದಾರ, ವೀಳ್ಯೆ ಮುಂತಾದವುಗಳು.

ಬಡಿಗರ ಮನೆಯಿಂದ ತಂದ ಭಾಜದ ಹಸಿ ಮಣೆಯ ಮೇಲೆ ವಧು-ವರರನ್ನು ಕೂಡಿಸಿ ದೇವಸ್ನಾನ, ಅಭ್ಯಂಜನ ಸ್ನಾನ ಮಾಡಿಸುತ್ತ ಅವರನ್ನು ಪವಿತ್ರಗೊಳಿಸಲಾಗುವುದು. ಅಲ್ಲದೆ ಗಂಡಿನ ಹಾಗೂ ಹೆಣ್ಣಿನ ಕಡೆಯವರು ಒಬ್ಬೊಬ್ಬರೂ ಈ ಸುರಗಿಯ ನಡವೆ ಕುಳಿತಿರುತ್ತಾರೆ. ಇದಕ್ಕೆ ತಾಯಿ ಮಕ್ಕಳು ಮೀಯುವುದು ಎಂದೂ ಕರೆಯುತ್ತಾರೆ. ದಾಂಪತ್ಯ ಬಂಧನದ ಸವಿ ಸಂಕೇತವಾಗಿ ಸುರಗಿ ಅರ್ಥ ನೀಡುತ್ತದೆ. ನಂತರ ಇಲ್ಲಿಯೇ ಮದುಮಕ್ಕಳಿಗೆ ಎಣ್ಣೆ ಹಚ್ಚುವರು. ಜೋಳದ ಐದು ದಂಟಿನ ತುದಿಗೆ ವಿಳ್ಯದ ಎಲೆಯನ್ನು ಕಟ್ಟಿ ಬಟ್ಟಲಲ್ಲಿ ಕೊಬ್ಬರಿ ಎಣ್ಣೆಯೋ, ಒಳ್ಳೆಣ್ಣಿ ತೆಗೆದುಕೊಂಡು ಅದರಲ್ಲಿ ಆ ದಂಟಿನ ತುದಿಯನ್ನು ಅದ್ದಿ ಮೊದಲು ವರನಿಗೆ ಆ ನಂತರ ವಧುವಿಗೆ ಹಾರೈಸುತ್ತಾ ಐದು ಜನ ಮುತ್ತೈದೇಯರು ಎಣ್ಣೆ ಹಚ್ಚುವರು. ಆ ಸಂದರ್ಭದಲ್ಲಿ ಮೊದಲ ವರನಿಗೆ ಈ ರೀತಿ ಹಾಡು ಹೇಳುವರು.

ದೇವ ದೇವರಿಗೆಣ್ಣೆ, ಗುರುಹಿರಿಯರಿಗೆ ಮೊದಲ್ಲೆಣ್ಣೆ
ದೇವ ನಮ್ ಸಿದಾಯಪ್ಪಗ ಹಚ್ಚಿರೀ ಮೊದಲಣ್ಣೆ.
ಸುರಗಿಯೇ ಸುತ್ತಟ್ಗೆ, ಸಿರಿ ಬಾಗಿಲಿಗಿ ಬಿಸಲ್ಬಂದ
ನಾಲ್ವತ್ತೋಟದೇಲಿ ಬಂದ ಹರಹರ ನಮಶಿವಗೆ ನೈಯ್ಯಣ್ಣೆ

. . . .

ಕೆಸರಿಲ್ಲದಂಗಳ ಕೆಸರ್‍ಯಾಕ ನಾಗ್ಯಾವೇ । ಹೆಸರಿಗೆ ದೊಡ್ಡವ್ರ
ಮಗ ಮಿಂದ । ಹರ ಹರ ನಮ ಶಿವಗೆ ನೈಯ್ಯಣ್ಣೆ
ಹೆಸರೀಗಿ ದೊಡ್ಡವರ ಮಗ ಮಿಂದ ಅನಿಲಕುಮಾರ
ಹಸರ ಪಲ್ಲಕ್ಕಿ ನೆರಳಲ್ಲಿ ಹರ ಹರ ನಮ ಶಿವಗೆ ನೈಯ್ಯಣ್ಣೆ [೨೯]

ವಧುವಿಗೆ ಎಣ್ಣೆ ಹಚ್ಚುವಾಗ ಹಾಡುವ ಹಾಡು ಹೀಗಿದೆ,

ಕಂಚಿನ ಬಟ್ಲಾಗ ಮಿಂಚೆಣ್ಣಿ ತೊಗೊಂಡು

ಕೆಂಚೆರೊಂದ್ಯೆವರೇ । ಕೆಂಚೆರೊಂದ್ಯೆವರೆ
ನೆರೆದ ಮುತ್ತೈದೇರೆ ಎಣ್ಣಿ ಹಚ್ಚ ಬನ್ನಿರೇ ss
ಹರನಮ್ಮ ಗುರುವಿಗಿ ಮಗಳ ಮಾಹಾದೇವಿಗಿ
ಎಣ್ಣಿ ಹಚ್ಚ ಬನ್ನಿರೇ

. . . .

ಚುಕ್ಕಿಯ ಸೀರುಟ್ಟು ಚುಣಕದ ಬೊಟ್ಟಿಟ್ಟು
ಮುತ್ತಿನ ಮೂಗುತಿ ಕಪ್ಪ ನಿಟ್ಟವರೆ
ಮುತ್ತಿನ ಮೂಗುತಿ ಕಪ್ಪು ನಿಟ್ಟವರೆಲ್ಲ
ಎಣ್ಣಿ ಹಚ್ಚ ಬನ್ನೀರೇ । ಹರ ನಮ್ಮ
ಗುರುವಿಗಿ ಮಗಳ ಮಾಹಾದೇವಿಗಿ
ಎಣ್ಣಿ ಹಚ್ಚ ಬನ್ನೀರೇ ss [೩೦]

ಈ ರೀತಿ ಹಾಡು ಹೇಳುವುದರೊಂದಿಗೆ ವಧು-ವರರಿಗೆ ಎಣ್ಣಿ ಹಚ್ಚಿ ಮೈಯೆಲ್ಲಾ ಅರಶಿಣ ಹಚ್ಚಿದ ನಂತರ ಸ್ನಾನ ಮಾಡಿಸುವರು. ಹೊಸ ಬಟ್ಟೆ ಉಟ್ಟು, ಹಾರ, ತುರಾಯಿ. ದಂಡೆ ಕಟ್ಟುವರು. ನಂತರ ಚೌಕಾಕಾರವಾಗಿ ಸುತ್ತಿದ ಸುರಗಿಯ ದಾರಗಳನ್ನು ಎರಡು ಭಾಗವಾಗಿ ಬೇರ್ಪಡಿಸಿ, ವಧು, ವರರ ಕೈಯಲ್ಲಿ, ವಧು-ವರರ ತಾಯಂದಿರ ಕೈಯಲ್ಲೂ ಕಂಕಣ ಕಟ್ಟುವರು. ಇದು ಸಂಬಂಧಗಳ ಬೆಸುಗೆಯ ನಂಟನ್ನು ಅನಾವರಣಗೊಳಿಸುತ್ತದೆ.

೩.೩.೮ ಧಾರೆ ಎರೆಯುವ ಹಾಡು:

ಎಲ್ಲ ಧಾನಗಳಲ್ಲಿ ಕನ್ಯಾದಾನವು ಶ್ರೇಷ್ಠ ದಾನವಾಗಿದೆ. ದಾನದ ವಸ್ತುಗಳಲ್ಲಿ "ಹೆಣ್ಣು" ಕೂಡ ಒಂದೆಂದು ಪರಿಗಣಿಸಲಾಗಿದೆ. ಅಕ್ಷತೆಯ ಕಾರ್ಯ ಮುಗಿದ ಮೇಲೆ ವಧುವಿನ ಅಣ್ಣ ಅತ್ತಿಗೆ, ಸೋದರಮಾವ, ಅವನ ಹೆಂಡತಿ, ಚಿಕ್ಕಪ್ಪ, ಚಿಕ್ಕಮ್ಮ ಅಥವಾ ತಂದೆ-ತಾಯಿ ಯಾರಾದರೊಬ್ಬರು ದಂಪತಿಗಳಿಗೆ ವರನ ಕಡೆಯವರು ತಂದ ಹೊಸ ಬಟ್ಟೆಗಳನ್ನುಟ್ಟುಕೊಂಡು ಒಂದು ತಟ್ಟೆ ಹಾಗೂ ತುಂಬಿದ ತಂಬಿಗೆಯಿಂದ ಮಧು-ವರರ ಕಾಲು ತೊಳೆದು ಕುಂಕುಮ ಹಚ್ಚಿ ನಮಸ್ಕರಿಸುವರು. ತಮ್ಮ ಮಗಳನ್ನು ಒಳ್ಳೆಯ ರೀತಿಯಿಂದ ನೋಡಿಕೊಳ್ಳಬೇಕೆಂದು ವಧುವಿನ ಬಂಧುಗಳ ವರನ ಕಡೆಯವರಲ್ಲಿ ಬೇಡಿಕೊಳ್ಳುವರು. ಈ ಸಂದರ್ಭದಲ್ಲಿ ಹಾಡುವ ಹಾಡುಗಳು ಇಂತಿವೆ.

ಧಾರಿಯ ಎರೆಯೂತ ಮಾರಿಯ ನೋಡುತ
ಏನೇನು ಸೋತಾರಳಿಯಗ
ಏನ ಏನು ಸೋತಾರಳಿಯಗ ಬಸರಾಜ
ಹೊದಕಿಯ ಸೋತಾರಳಿಯಗ ॥ ೨ ॥

. . . .

ಹಾಲು ಬಾನಾ ನಿನ್ನ ಬಾಲಾಗ ಉಳ್ಳಾಕ್ ನೀಡಿ
ನಾಳುಂಡಾಳೆಂದು ಅನುಬ್ಯಾಡೇ
ನಾಳ ಉಂಡಾಳೆಂದು ಅನುಬ್ಯಾಡೇ ಮೀನಾಕ್ಷಿ
ನಿನ್ನ ಬಾಲನ ಸರಿ ಎಂದು ಬಗಿ ನೋಡ [೩೧]

ಈ ರೀತಿ ಧಾರೆಯ ಸಮಯದಲ್ಲಿ ಹಾಡುತ್ತಾರೆ. ಅಳಿಯನಿಗೆ ಮಗಳನ್ನು ಧಾರೆ ಎರೆದು ಕೊಡುವಾಗ, ಗಂಡಿನವರು ಏನು ಬೇಡಿದರೂ ಇಲ್ಲ ಎನ್ನದೆ ಸ್ವಇಚ್ಛೆಯಿಂದ ಕೊಡುವರು. ತಂದೆ ತನ್ನ ಮಗಳನ್ನಷ್ಟೇ ಅಲ್ಲ ಮಗಳೊಂದಿಗೆ, ಹೊದಕಿ, ಹೊನ್ನುಂಗುರ, ಕಂಠೀಸರ, ಎಲ್ಲವನ್ನು ಕೊಡುವರು. ಕೊನೆಗೆ ಧಾರೆ ಎರೆದು ಕೊಡುವಾಗ ಇನ್ನು ತನ್ನ ಮಗಳು ಪರರ ವಸ್ತುವಾಗುವಳೆಂದು ನೆನೆದು ತಂದೆ–ತಾಯಿಯರು ದು:ಖಿಸುತ್ತಾರೆ ಆಗ ಬೀಗ, ಬೀಗತಿಯರು ನಮ್ಮ ಹೆಣ್ಣು ನಾವು ತರುವಾಗ ಅವರಪ್ಪ, ಅವರವ್ವ್ಯಾಕೆ ದು:ಖ ಎಂದು ಕೇಳುವರು.

ಹೆತ್ತ ತಾಯಿ, ಮಗಳ ಅತ್ತೆಯಲ್ಲಿ ಅತೀ ವಿನಯದಿಂದ ತನ್ನ ಮಗಳು ಏನೂ ಅರಿಯದವಳು, ಅವಳನ್ನು ಅತ್ಯಂತ ಪ್ರೀತಿಯಿಂದ ನಾವು ಸಾಕಿ ಸಲುಹಿದ್ದೇವೆ. ಅವಳನ್ನು ನಿಮ್ಮ ಮಗಳೆಂದು ತಿಳಿದು ಪ್ರೀತಿಯಿಂದ ನೋಡಿಕೊಳ್ಳಬೇಕು, ನಿಮ್ಮ ಮಗನಿಗೆ ತುಪ್ಪಬಾನ, ಹಾಲುಬಾನಾ ಊಟಕ್ಕೆ ಕೊಟ್ಟಾಗ ನಿಲ್ಲದೆ ತನ್ನ ಮಗಳಿಗೂ ಊಟಕ್ಕೆ ಕೊಡಿರೆಂದು ಪ್ರಾರ್ಥಿಸುತ್ತಿದ್ದಾಳೆ. ಈ ಧಾರೆ ಎರೆಯುವ ಕಾರ್ಯವು ವಿವಾಹದ ಅತ್ಯಂತ ಮಹತ್ವದ ಭಾಗವಾಗಿದೆ.

೩.೩.೯ ಬೀಗರ ಹಾಡು: **(ಜರಿದು ಹಾಸ್ಯಮಾಡಿ ಹಾಡುವುದು)**

ಮದುವೆ ಜನಪದ ಬಾಳಿನಲ್ಲಿ ಒಮ್ಮೆ ಬರಬಹುದಾದ ಒಂದು ದೊಡ್ಡ ಮತ್ತು ಸಂಕೀರ್ಣ ಸಂಭ್ರಮ. ಇದರ ಕಾರ್ಯಕ್ರಮ ತಿಂಗಳಾನುಗಟ್ಟಲೆ ಹಿಂದೆ ಸಾಗುತ್ತಿತ್ತು. ಆದರೆ ಇದು ಇಂದು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು, ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡಿದೆ. ಒಳ್ಳಕಲ್ಲ ಪೂಜೆ, ಬೀಗರನ್ನು ಎದುರುಗೊಳ್ಳುವುದು, ಐರಾಣಿ ತರುವುದು, ಅರಿಶಿಣ ಹಚ್ಚುವುದು. ಹಾಲುಗಂಬ ನೆಡುವುದು, ಸುರಗಿ ಭೂಮ ಕೊಡುವುದು, ನೂಲು ಸುತ್ತುವುದು, ಅಡಿಕೆ ಆಡುವುದು, ಕೂಸೊಪ್ಪಿಸುವುದು ಹೀಗೆ ಹಲವು ರೀತಿಯ ಕಾರ್ಯಕ್ರಮ ಎಡೆಬಿಡದೆ ಸಾಗುತ್ತವೆ. ಪ್ರತಿಯೊಂದು ಸಂದರ್ಭದಲ್ಲಿ ಮುತ್ತೈದೆಯರು ಹಾಡುಗಳನ್ನು ಹೇಳುತ್ತಾರೆ. "ಬೀಗರ ಹಾಡುಗಳಲ್ಲಿ" ಹೊಟ್ಟೆ ಹುಣ್ಣಾಗುವ ಹಾಸ್ಯವಿದ್ದರೆ, ಕೂಸೊಪ್ಪಿಸುವ ಹಾಡಿನಲ್ಲಿ ಕಲ್ಲೆದೆಯನ್ನು ಕರಗಿಸುವ ಕರುಣೆ ಇದೆ. ಅವುಗಳ ಮೊತ್ತವೂ ಹಿರಿದಾಗಿದೆ.

ಬೀಗರನ್ನು ಕುರಿತ ಹಾಸ್ಯದ ಹಾಡುಗಳು ಈ ರೀತಿಯಾಗಿ ಹೇಳುವರು.

ದೊಡ್ಡ ದೊಡ್ಡ ಕೊಡ ಹೊರಬೇಕಂತ
ಜಿಡ್ಡಿ ನೀರ ತರಬೇಕಂತ
ದೊಡ್ಡಸ್ತನದವರ ಸೊಸಿದ್ಯಾರಂತ ಧೈರ್ಯಮಾಡಿ ಕೊಟ್ಟೇವಲ್ಲ
ಇವರು ಭಾಳ ಜೀನರಂತ ಮೊದಲೇ ತಿಳಿದಿಲ್ಲ

ಮಗಳ ಕೊಟ್ಟ ಮ್ಯಾಲ ತಿಳೀತು ಇವುಗುಣ
ಹರ್ಯಾಗ ಉಡೋದು ಪಿತಾಂಬರಂತ
ಸಂಜೀಕ ಉಡೋದು ಗಳಿಗ್ಯಾಗಂತ
ಬೀಗರು ಭಾಳ ಜೀನರಂತ
ಮೊದಲೇ ತಿಳಿದಿಲ್ಲ. ೩೨

ಬೀಗರನ್ನು ಸ್ವಾಗತಿಸುವುದು (ಜರಿಯುತ್ತ)

ಮದ್ದು, ಬಾಣು ಮುಂದಿರಬೇಕು
ಗುಲಾಲ್, ಬುಕ್ಕಿಟ್ಟು ಎದುರಿರಬೇಕು
ಬೀಗರು ನೆಂಟರು ಭೇಟಿಯಾಗಬೇಕು

ತಂದಾರು, ಬಂದಾರು, ಆನಂದ ಏನುಚಂದ, ಹೂವಿಂದ ss
ಚಂದನ, ಅರಶಿಣ ಛಂದಕ ಸೋಸಿ,
ಮುಂದ ಮುಂಗೈಗಿ ಗಂಧ ಲೇಪಿಸಿ
ಬೀಗರು, ನೆಂಟರು ಎದುರಲ್ಲಿರಿಸಿ
ತಂದಾರು, ಬಂದಾರು, ಆನಂದ, ಏನುಚಂದ, ಹೂವಿಂದ ss [೩೩]

ಹಾಸ್ಯದ ಮೂಲಕ ಬೀಗರ ಸ್ವರೂಪವನ್ನು ಬಯಲಿಗೆಳೆತಹದ್ದು ಇಲ್ಲಿ ಕಂಡುಬರುತ್ತದೆ. ಹೀಗೆ ಹೆಣ್ಣಿನ ಬೀಗರು ಗಂಡಿನ ಬೀಗರ ಜಿಪುಣತನದ ಬಗ್ಗೆ, ಅವರು ಬೀಗರೊಂದಿಗೆ ನಡೆದುಕೊಂಡ ರೀತಿಯ ಬಗ್ಗೆ ಜರಿದು ಹಾಸ್ಯ ಮಾಡುತ್ತ ಅನೇಕ ಹಾಡುಗಳೂ ಹೇಳುವರು. ಒಂದೊಂದು ಸಲ ಮನರಂಜನೆಗಾಗಿ ಹಾಡಿದ ಈ ಹಾಡುಗಳು ವಿಪರೀತಕ್ಕೆ ಹೋಗಿ ವಿರಸ ಉಂಟಾಗುವ ಸಂಭವವೂ ಹೆಚ್ಚು. ಇದು ಸಾಮಾಜಿಕ ನಿಯಂತ್ರಣದ ಒಂದು ರೀತಿಯೂ ಆಗಿರಬಹುದಾಗಿದೆ. ಇಲ್ಲಿ ಹಾಸ್ಯವು ಎರಡು ಕುಟುಂಬಗಳನ್ನು ಮುಕ್ತ ನೆಲೆಯಲ್ಲಿ ತಮ್ಮ ಭಾವನೆಗಳನ್ನು ಬೆಸೆಯುವಂತಿರುತ್ತವೆ. ಇಲ್ಲಿನ ಹಾಸ್ಯವು ಯಾವುದೇ ವೈಯಕ್ತಿಯ ನಿಂದನೆಯಿಂದ ಕೂಡಿರುವುದಿಲ್ಲ. ಇವುಗಳು ಮಹಿಳೆಯರ ಸೃಷ್ಟಿಯಾಗಿರುವ ಕಾರಣದಿಂದಾಗಿ ಇಲ್ಲಿ ನಯ ನಾಜುಕಿನ ರೀತಿಯಲ್ಲಿ ಬೀಗರುಗಳು ಹಾಸ್ಯಕ್ಕೊಳಪಡುವುದು ಕಂಡುಬರುತ್ತವೆ. ಹೆಚ್ಚಾಗಿ ಈ ಹಾಡುಗಳಲ್ಲಿ ಬೀಗರ ಗುಣ – ಗೌರವ, ವಿಡಂಬನೆ ವಿಷಯವೇ ಇದ್ದರೂ ಬೀಗತನವನ್ನು ಬಿಗಿ ಮಾಡುವ ಪ್ರಯತ್ನ ಇದು ಎನ್ನುವ ಮಾತು ಇಲ್ಲಿ ಔಚಿತ್ಯ ಪೂರ್ಣವಾದುದು.

೩.೩.೧೦ ಕೂಸೊಪ್ಪಿಸುವ ಹಾಡು:

ಹೆಣ್ಣು ಮಕ್ಕಳನ್ನು ಗಂಡನ ಮನೆಗೆ ಕಳಿಸಿಕೊಡುವ ದೃಶ್ಯ ಪ್ರತಿಯೊಂದು ಕುಟುಂಬದಲ್ಲಿಯೂ ಅತ್ಯಂತ ಸಂಭ್ರಮಪೂರ್ಣವಾದುದು. ಮಗಳಿಗೆ ಮಾಡಿದ್ದನ್ನೆಲ್ಲ ನೆನೆದು, ಅವಳ ಯೋಗ ಕ್ಷೇಮಕ್ಕಾಗಿ ಚಿಂತಿಸುತ್ತಾ, ಕಣ್ಣೀರಿಡುತ್ತಾ ಹಾಡುವ ಸನ್ನಿವೇಶ, ಗಂಡು ಮಕ್ಕಳ ಕರುಳನ್ನೂ ಕಿತ್ತಿ ಬರುವಂತಿರುತ್ತದೆ. ಬೀಗರ ಹಾಡಿನಲ್ಲಿರುವ ಬಿಂಕವನ್ನೆಲ್ಲ ಮಾಯವಾಗಿ ಪರಿಶುದ್ಧ, ಅಂತಃಕರಣದ ದರ್ಶನವನ್ನು ಇಲ್ಲಿ ಕಾಣುತ್ತೇವೆ.

ಒಳ್ಳೆಯ ಗಂಡನನ್ನು ಪಡೆದು ತಮ್ಮನ್ನು ನೆನೆಯದೇ ಸುಖವಾಗಿ ಬಾಳು ಮಾಡಲು ಹೋಗುವಳೆಂಬ ಸಂತೋಷ ಒಂದು ಕಡೆ ತಂದೆ–ತಾಯಿಗಳಿಗಿದ್ದರೆ, ಹತ್ತಾರು ವರ್ಷಗಳ ಕಾಲ ಅಕ್ಕರೆಯಿಂದ ಬೆಳೆಸಿದ ತನ್ನ ಕರುಳಿನ ಕುಡಿಯನ್ನು ಕಳಿಸಿಕೊಟ್ಟು ಮನೆಯನ್ನು ಬರಿದು ಮಾಡಿಕೊಂಡಂತಾಗಲು ಸಂಕಟ ಅವರನ್ನು ಮುಸುಕಿರುತ್ತದೆ. ಚಕ್ರವರ್ತಿಯ ಪದವಿಯನ್ನು ಅಲಂಕರಿಸಲು ಹೊರಟಿದ್ದ ಶಕುಂತಲೆಯನ್ನು ಕಳುಹಿಸಿಕೊಡುವಾಗ ಅವಳ ಸಾಕು ತಂದೆಯೂ, ಸಂಯಮಿಯೂ ಆದ ಕಣ್ವರ ಕೊರಳು ದುಃಖದಿಂದ ಬಿಗಿದು ಬಂದಿತು. ಇನ್ನು ಗೃಹಸ್ಥರ ಸ್ಥಿತಿಯಂತೂ ಹೇಳತೀರದು. ಆ ಮಹಾಸಂಭ್ರಮದ ನಡುವೆ ತಾಯಿಯ ದುಃಖ ಅವಳ ಹೃದಯವನ್ನು ಸೀಳಿಕೊಂಡು ಬರುವುದು ಆ ಕರುಳಿನ ಕೂಗು ಈ ರೀತಿಯಾಗಿರುತ್ತದೆ.

ಹರಣೆಗ್ಗರಕೆವ ಮಾಡಿ ಪರಿ ಪರಿ ದಿನ ಬೇಡಿ
ಎರಡೈದು ತಿಂಗಳ ಹೊತ್ತೆ ಎಷ್ಟು ರತವ ಮೇಲೈತೇ

ನೆತ್ತಿ ಮ್ಯಾಲೆಣ್ಣೆಹಾಕಿ, ಒತ್ತಿ ಟಾಳಗಿ ಹೂಡಿ
ಚಿತ್ತಿಟ್ಟು ನೀರೆನ್ನ ಬೆರಸಿ । ಒತ್ತಿ ಕೂಸಿನ
ಮೈ ಒರಸಿ

. . . .

ನಮಗಂಜಿ, ನಮ್ಮ ನೆರಿಗಂಜಿ ನಡದರ
ನಾವ್ ದೇವರಿಗಂಜಿ ನಡದೇವೆ ಹಿಡಿಯೇ
ಕೊಡುವೆ ಕೂಸಿನ [೩೪]

ಮದುವೆ ಕಾರ್ಯ ಮುಗಿಯುತ್ತಿದ್ದಂತೆ ಹೆಣ್ಣಿನವರು ತನ್ನ ಊರಿಗೆ ಹೊರಡುವ ತಯಾರಿ ಮಾಡುವ ಮೊದಲು, ಮಗಳನ್ನು ಗಂಡನ ಮನೆಯಲ್ಲಿ ಬಿಟ್ಟು ಹೋಗಬೇಕಾದ ಸಂದರ್ಭದಲ್ಲಿ ಹೆಣ್ಣಿನವರ ಆತಂಕ ಹೇಳತೀರದು. ಇಷ್ಟು ದಿನಗಳವರೆಗೆ ಸಾಕಿ ಸಲಹಿದ ಮಗಳನ್ನು ಹೊಸದಾಗಿರುವ ಬೀಗರ ಹತ್ತಿರ ಬಿಟ್ಟು ಹೋಗಬೇಕಾದಾಗ ಒಂದು ಕಡೆ ಸಂಭ್ರಮ, ಒಂದು ಕಡೆ ಆತಂಕವಿರುತ್ತದೆ. ಒಂಭತ್ತು ತಿಂಗಳು ಹೊತ್ತು, ಹೆತ್ತು, ಸಾಕಿ ಸಲಹಿದ ತಾಯಿ ಕರುಳು ಕಿವುಚಿದಂತಾಗುವುದು.

ಒಂಬತ್ತು ತಿಂಗಳು ನಿನ್ನ ತುಂಬಿಕೊಂಡು ತಿರಗೇನ
ಹಂಬಲಿಸಿ ನಿನ್ನ ಹಡದೇನ । ಹಂಬಅಲಿಸಿ ನಿನ್ನ
ಹಡದೇನ ಚಿತ್ತಾರ ಗೊಂಬಿ ನಿನಗೊಪ್ಪಿಸಿ ಹ್ಯಾಂಗ
ಕೊಡಲೆವ್ವ ऽऽ [೩೫]

ಒಂಭತ್ತು ತಿಂಗಳು ತನ್ನ ಮಗಳನ್ನು ಹೆತ್ತು ಹೊತ್ತು ಸಾಕಿ-ಸಲಹಿದ ತಾಯಿಯು ಪರರ ಮನೆಗೆ ಕಳುಹಿಸುವಾಗ ಆತಂಕ ಹಾಗೂ ಸಂಕಟಗಳು ಎದುರಾಗುತ್ತವೆ. ಆದರೆ ಇದು ಪ್ರಕೃತಿ ಸಹಜವಾದ ಕ್ರಿಯೆಯಾದ ಕಾರಣ ಇದು ಅನಿವಾರ್ಯವಾಗುತ್ತದೆ. ಹೆತ್ತವರಿಗೆ ಹೆಗ್ಗಣವೇ ಮುದ್ದು ಎನ್ನುವಂತೆ ತನ್ನ ಮಗಳು ಹೇಗಿದ್ದರೂ ಆ ತಾಯಿಗೆ ಅವಳು ಚಿತ್ತರದ ಗೊಂಬೆಯಂತೆ ಸುಂದರವಾಗಿಯೇ ಕಾಣುತ್ತಾಳೆ. ಅತ್ತೆ ನಾದಿನಿಯರಿಗೆಲ್ಲ ತಮ್ಮ ಮಗಳನ್ನು ಚೆನ್ನಾಗಿ ನೋಡಿಕೊಳ್ಳಿರೆಂದು ಹೇಳುವ ತಾಯಿಯ ಮಮತೆ ಬೀದರ್ ಪ್ರಾಂತ್ಯದ ಬಹುತೇಕ ಜಾನಪದ ಹಾಡುಗಳಲ್ಲಿ ವ್ಯಕ್ತವಾಗುತ್ತದೆ.

ತಾಯಿಯ ಹೃದಯ ದು:ಖದಿಂದ ಕರಗಿ ನೀರಾಗಿ ತನ್ನ ವೇದನೆಯನ್ನು ಮಾತಿನ ಮೂಲಕ ತೋಡಿಕೊಂಡರೆ, ತಂದೆ ನೆರೆದ ಜನರೆದುರಿಗೆ ತನ್ನ ದು:ಖವನ್ನು ವ್ಯಕ್ತಪಡಿಸಲಾರನು. ಆತನು ಅನುಭವಿಸುವುದು ಮೂಕವೇದನೆ, ಮೂಕ ಯಾತನೆ, ಅವನ ದು:ಖ ತಾಯಿಯ ದು:ಖಕ್ಕಿಂತ ಕಡಿಮೆಯಾದುದಲ್ಲ. ಹೃದಯವನ್ನು ಗಟ್ಟಿ ಮಾಡಿಕೊಂಡು ತಂದೆ ಮೌನವಾಗಿ ತನ್ನ ದು:ಖದ ಆಳವನ್ನು ಸೂಚಿಸುತ್ತಾನೆ. ಅದು ಈ ರೀತಿಯಾಗಿ

ಹೆಣ್ಣು ಮಕ್ಕಳ ಕಳುಹಿ ಕಣ್ಣೀಗಿ ನೀರತಂದು
ಸಣ್ಣ ಸೆಲ್ಲೆದಲೇ ಮುಸುಗ್ಹಾಕಿ । ಸಣ್ಣ ಸೆಲ್ಲೆದಲೇ
ಮುಸುಗ್ಹಾಕಿ ಹಡೆದಪ್ಪ ಹೆಣ್ಣು ಸಾಕೆಂದ ಜನುಮಕ.

ಹೆಣ್ಣು ಮಕ್ಕಳಿಗೆ ಅತ್ತೆಯ ಮನೆ ಹೂವಿನ ಹಾಸಿಗೆಯೇನಲ್ಲ. ಅವಳು ಹೊರಬೇಕಾದ ಹೊಣೆ ಅನೇಕ. ಅತ್ತೆ ಮಾವಂದಿರು ಮೆಚ್ಚುವಂತೆ, ಗಂಡನ ಮನಸ್ಸು ಅನುಸರಿಸಿ ನಡೆಯಬೇಕು. ತನ್ನ ಸುತ್ತಲಿನ ಪ್ರಪಂಚಕ್ಕೆ ಹೆದರಿ, ಉತ್ತಮವಾದ ಶೀಲದಿಂದ, ಹುಟ್ಟಿದ ಮನೆಗೂ ಕೊಟ್ಟ ಮನೆಗೂ ಕೀರ್ತಿ ತರಬೇಕೆಂದು ತಾಯಿ-ತಂದೆಗಳ ಹಂಬಲ. ಅತ್ತೆ-ಮಾವಂದಿರ, ಗಂಡ-ಭಾವ ಮೈದುನರನ್ನು ಅನುಸರಿಸಿಕೊಂಡು, ಅವರಲ್ಲಿ ಭೇದ ಹುಟ್ಟಿಸದೆ, ಒಂದಾಗಿ ಬಾಳಬೇಕೆಂದು ತಂದೆ-ತಾಯಿಗಳು ಮಗಳಿಗೆ ಬುದ್ಧಿವಾದ ಹೇಳುವರು. ಅದು ಈ ರೀತಿಯಾಗಿ

ಊರ ಮುಂದಿನ ಬಾವಿ ಯಾರು ತೋಡಿದರೇನು
ಕಾಲು ಜಾರಿದರೆ ಕೈಲಾಸ । ಕಾಲುನೇ ಜಾರಿದರೆ
ಕೈಲಾಸ ಎಲೆ ಮಗಳೆ ಮನವ ಜಾರಿದರೆ ವನವಾಸ ॥ ೨ ॥

ಕರಿಸೀರಿ ಉಡುಬ್ಯಾಡ । ಕರಿ ಕುಬ್ಬಸ ತೊಡುಬ್ಯಾಡ
ತಲಿಮ್ಯಾಲಿನ ಶೆರಗ ತೆಗಿಬ್ಯಾಡ । ತಲಿ ಮ್ಯಾಲಿನ ಸೆರಗ
ತಗಿ ಬ್ಯಾಡೆ ಎಲೆ ಮಗಳೆ ಬೀದಿಯಲಿ ನಿಂತು
ನಗಬ್ಯಾಡ ॥ ೨ ॥ [೬೬]

ಜಾನಪದರ ಈ ಹಾಡಿನ ಮುಂದೆ ಯಾವುದೇ ತತ್ತ್ವಸಿದ್ಧಾಂತವು ತಲೆ ಎತ್ತಿ ನಿಲ್ಲಲಾರದು. ಬದುಕಿನ ಪ್ರತಿಯೊಂದು ಸೂಕ್ಷ್ಮಗಳನ್ನೂ ಸಾಮಾನ್ಯ ಮಾತಿನಲ್ಲಿ ತಿಳಿಹೇಳುವ ಗುಣ ಈ ಜಾನಪದ ಸಾಹಿತ್ಯಕ್ಕೆ ಇದೆ. ಪುರೋಹಿತಶಾಹಿಯು ಮಹಿಳೆಯು ಅಸಮರ್ಥಳೆಂದು ಆಕೆಯನ್ನು ನಾಲ್ಕು ಗೋಡೆಗಳ ಮಧ್ಯೆ ಬಂಧಿಸಿಕೊಂಡು, ಆಕೆಯ ಎಲ್ಲ ಶಕ್ತಿಯನ್ನು ಹತ್ತಿಕ್ಕುವ ಕೆಲಸ ಮಾಡಿದೆ. ಆದರೆ ನಮ್ಮ ಜಾನಪದರಲ್ಲಿ ಮಹಿಳೆಯೇ ಶ್ರೇಷ್ಠ ಚಿಂತಕಿ ಹಾಗೂ ತತ್ತ್ವಜ್ಞಾನಿಯಾಗಿ ಕಂಡುಬರುತ್ತಾಳೆ. ಇದಕ್ಕೆ ಉತ್ತಮ ನಿದರ್ಶನವೆಂದರೆ ಈ ಮಹಿಳೆಯರು ಸೃಷ್ಟಿಸಿಕೊಂಡು ಬಂದಿರುವ ಸಾಹಿತ್ಯವೇ ಆಗಿದೆ.

ಅದೇ ರೀತಿ ಮರಾಠಿ ಭಾಷೆಯಲ್ಲಿಯೂ (ಬೀದರ ಜಿಲ್ಲೆಯಲ್ಲಿ) ಇದೇ ತರಹದ ಹಾಡುಗಳನ್ನು ಹಾಡುವರು. ಮಗಳು ಬೆಳೆದು ದೊಡ್ಡವಳಾದಾಗ ತಂದೆ–ತಾಯಿಯರಿಗೆ ಮಗಳ ಭವಿಷ್ಯದ ಚಿಂತೆ ಕಾಡುತ್ತಿರುತ್ತದೆ. ಆ ಕುರಿತ ಒಂದು ಹಾಡು ಈ ರೀತಿ ಹೇಳುವರು.

ಬಪವರ ಝಾಲಿ ಲೇಕ ಲಾಡಕಿ ಲಗ್ನಾಲಾ ಆಲಿ
ಸ್ವಯಂವರಾಚಿ ತಿಚಾ ಘೋಷಣಾ ದೃಪದಾನಿ ಕೇಲಿ
ಸುವರ್ಣ ಸ್ಥಂಭಾವರಿ ಬಸವಿಲಿ ಫಿರತಿ ಮತ್ಸ್ಯಾಕೃತಿ
ತೇಲಾ ಮಾಜಿ ಬಿಂಬ ಪಾಹಿನಿ ಭೆದಿಲ್ ಹೊ ಕೊನತಿ
ಭೆದಿಲ್ ತ್ಯಾಲಾ ವಿವಾಹ ಮಾಲಾ ಘಾಲಿಲ್ ಪಾಂಚಾಲಿ

. . . .

ತ್ಯಾ ನಜರೇನಿ ಸ್ಫುರಲೇ ಬಾಹೂ ವೀರ ಸಿದ್ಧ ಝಾಲಾ
ಅರ್ಜುನ್ ಲಾವನಿ ಬಾನ ತಯಾನಿ ಮತ್ಸ್ಯ ಭೇದ ಕೇಲಾ
ಧನಂಜಯಂಚಾ ಗಳಾ ಧನ್ಯತಿ ವೀರ ಮಾಲಾ ಪಡಲಿ [೬೭]

ಪ್ರೀತಿಯ ಮಗಳಾದ ದ್ರೌಪದಿಯು ದೊಡ್ಡವಳಾದಳೆಂದು ದ್ರುಪದನು ಮಗಳ ಮದುವೆಯ ಘೋಷಣೆ ಮಾಡಿದನು. ಸ್ವಯಂವರವನ್ನು ರಚಿಸಿ ದೇಶ ವಿದೇಶಗಳಿಗೆ ಪತ್ರಬರೆದು ದ್ರೌಪದಿಯ ಸ್ವಯಂವರಕ್ಕಾಗಿ ಆಹ್ವಾನಿಸಿದ. ಬಂಗಾರದ ಕಂಬದ ಮೇಲೆ ತಿರುಗುವ ಮೀನನ್ನು ಕಟ್ಟಿ, ಆ ಕಂಭದ ಕೆಳಗೆ ಎಣ್ಣೆಯ ಕಡಾಯಿಯನ್ನು ಇಟ್ಟನು. ಆ ಕಡಾಯಿಯಲ್ಲಿ ತಿರುಗುವ ಮೀನಿನ ಪ್ರತಿಬಿಂಬವನ್ನು ನೋಡಿ, ಅದರ ಕಣ್ಣಿಗೆ ಬಾಣ ಗುರಿಯಿಟ್ಟು ಹೊಡೆಯಬೇಕು. ಅಂಥವರನ್ನು ಪಾಂಚಾಲಿ ಮದುವೆಯಾಗುವಳು ಎಂದು ಘೋಷಿಸಿದನು.

ದ್ರೌಪದಿಯು ಬಹುಸುಂದರಿಯೂ, ಒಳ್ಳೆಯ ಗುಣಶೀಲಳೂ ಆಗಿದ್ದರಿಂದ ವರನೂ ಸುಂದರ, ಶೀಲವಂತ, ಲಕ್ಷಣವಂತನಾಗಿರಬೇಕೆಂದು ಸಾರಿದನು. ದ್ರೌಪತಿಯು ರೇಷ್ಮೆ ಬಟ್ಟೆ ಧರಿಸಿಕೊಂಡವಳಾಗಿದ್ದು, ಅಲಂಕಾರ ಭೂಷಿತಳಾಗಿ, ರೂಪ ಲಾವಣ್ಯವತಿಯು ತುಂಬಾ ಆಕರ್ಷಕವಾಗಿ ಕಾಣುತ್ತಿರುವಳು. ಧನುರ್ಧಾರಿಗಳನ್ನು ಆಹ್ವಾನಿಸಲಾಗಿದೆ. ಸ್ವಯಂವರಕ್ಕಾಗಿ ಕಲ್ಯಾಣ ಮಂಟಪ

ಶೃಂಗರಿಸಲಾಗಿದೆ. ದೇಶ ವಿದೇಶಗಳಿಂದ ರಾಜ-ಮಹಾರಾಜರುಗಳು ಶೂರ-ವೀರರು ತಮ್ಮ ದೈವವನ್ನು ಪರೀಕ್ಷಿಸುವುದಕ್ಕಾಗಿ ಸಭೆಯಲ್ಲಿ ಕಿಕ್ಕಿರಿದು ಸೇರಿದ್ದಾರೆ. ಗಲಾಟೆ ಹೆಚ್ಚಾಗಿದೆ. ಇಂಥ ಸಮಯದಲ್ಲಿ ತನ್ನ ಅಣ್ಣನ ಜೊತೆ ತೇಜಸ್ವಿನಿಯಾದ ದ್ರೌಪದಿಯು ಸ್ವಯಂವರದ ಸ್ಥಳಕ್ಕೆ ಬಂದಳು. ದ್ರೌಪದಿಯ ದಾಸಿ ಸೌದಾಮಿನಿ ಆಕೆಯೂ ಕೂಡಾ ಅವಳ ಹಿಂದೆಯೇ ಬಂದಳು.

ಅದೇ ಸಮಯದಲ್ಲಿ ಕರ್ಣ ಸಭಾಮಧ್ಯದಲ್ಲಿ ದ್ರೌಪದಿ ಬಂದ ಕೂಡಲೆ ಎದ್ದು ನಿಂತನು ಆದರೆ ಕೀಳು ಕುಲದವನೆಂದು ಸ್ವಯಂವರದಲ್ಲಿ ಭಾಗವಹಿಸಲು ಆಸ್ಪದ ಕೊಡಲಿಲ್ಲ. ಇಷ್ಟೆಲ್ಲ ನಡೆಯುತ್ತಿರುವಾಗ ಕೃಷ್ಣ ಯಾರಿಗಾಗಿಯೊ ದಾರಿ ಕಾಯುತ್ತಿರುವಂತಿತ್ತು. ಆ ಸಮಯದಲ್ಲಿ ಬ್ರಾಹ್ಮಣ ವೇಷದದಲ್ಲಿದ್ದ ಅರ್ಜುನನು ರಾಜ ಮಹಾರಾಜರುಗಳ ಜೊತೆ ಬಂದು ಕುಳಿತುಕೊಂಡನು. ಶ್ರೀಕೃಷ್ಣನು ಅರ್ಜನನ ಕಡೆಗೆ, ಅರ್ಜುನ ಶ್ರೀಕೃಷ್ಣನ ಕಡೆಗೆ ಒಮ್ಮೆ ದೃಷ್ಟಿ ಹರಿಸಿದರು. ಅವರ ದೃಷ್ಟಿಯ ಮಿಲನವಾಯಿತು. ಕೃಷ್ಣನ ದೃಷ್ಟಿ ಸೇರಿದುದರಿಂದ ಅರ್ಜುನನಿಗೆ ಇನ್ನಷ್ಟು ಬಲ ಹೆಚ್ಚಾದಂತೆ ಆಯಿತು. ಇದರಿಂದ ಬಲವರ್ಧಿತನಾಗಲು ಅರ್ಜುನನು ಬಾಣಹೂಡಿ ಮೀನಿನ ಕಣ್ಣನ್ನು ಭೇದಿಸಿದನು. ಕಥೆ ಬೇಡ ಹರ್ಷಪುಲಕಿತಳಾದ ದ್ರೌಪತಿಯು ಅರ್ಜುನನ ಕೊರಳಿಗೆ ಸ್ವಯಂವರದ ಜಯಮಾಲೆಯನ್ನು ಹಾಕಿದಳು. ಈ ರೀತಿ ದ್ರೌಪದಿಯ ಸ್ವಯಂವರದ ಕುರಿತು ಸುಂದರವಾದ ಹಾಡುಗಳು ಬೀದರ ಪ್ರಾಂತ್ಯದಲ್ಲಿ ರೂಪ ತಾಳಿವೆ.

ಹೆಣ್ಣು ಗಂಡನ ಮನೆಯಲ್ಲಿದ್ದರೂ ಸದಾ ಅವಳ ಮನ ತವರಿನವರಿಗಾಗಿಯೇ ಮಿಡಿಯುತ್ತಿರುತ್ತದೆ. ಈ ಒಂದು ಪ್ರೀತಿಯ ಹರಕೆಯಲ್ಲಿಯೇ ಅಣ್ಣನ, ತವರಿನವರ ಅಭಿವೃದ್ಧಿ ಅಡಗಿದೆ. ಅವಳು ಸದಾ ತವರಲ್ಲಿ ಎಲ್ಲರ ಪ್ರೀತಿಗೆ ಪಾತ್ರಳಾಗಿದ್ದವಳು. ಮದುವೆಯಾದ ಮೇಲೆ ಎಲ್ಲರನ್ನೂ ಬಿಟ್ಟು ತವರಿಗೆ ಹೆಸರು ತರುವಂತೆ ಗಂಡನ ಮನೆಯಲ್ಲಿ ಜೀವನ ಸಾಗಿಸುವಳು. ಮನೆಯಲ್ಲಿ ಹೆಣ್ಣು ಹುಟ್ಟಿದರೆ 'ಲಕ್ಷ್ಮೀ' ಹುಟ್ಟಿದಂತೆ, ಹೆಣ್ಣಿನಿಂದ ಬಳಗ ಹೆಚ್ಚಾಗುವುದು, ಹೆಣ್ಣು ಬಾಳಿನ ಕಣ್ಣು, ಹೆಣ್ಣಿದ್ದ ಮನಿಗಿ ಕನ್ನಡಿ ಯಾತಕ್ಕೆ? ಎಂದು ಹೆಣ್ಣಿನ ಜನನದಿಂದ ಜನಪದರು ಸಂತೋಷ ಪಡುತ್ತಿದ್ದರು. ಮೊದಲು ಹೆಣ್ಣು ಹುಟ್ಟಿದರೆ ತುಪ್ಪ ರೊಟ್ಟಿ ಉಂಡಷ್ಟು ಸಂತೋಷವುಂಟಾಗುವುದೆಂದು ಹಿಂದಿಯಲ್ಲಿ ಒಂದು ಗಾದೆ ಹೇಳಲಾಗುವುದು. "ಪಹೆಲಿ ಬೇಟಿ ಘೀ ರೋಟಿ" (ಚೊಚಿಲ ಮಗಳು ತುಪ್ಪರೊಟ್ಟಿ) ಎಂದು ಸಂತೋಷಪಡುವಂತಾಗುವುದು.

ಹೆಣ್ಣುಮಗಳು ತವರಿನವರಿಗೆ ಪ್ರೀತಿಯ ಪುತ್ಥಳಿಯಿದ್ದಂತೆ. ನಾನು ಈ ಮನೆಯ ಪ್ರೀತಿಯ ಮಗಳಾದರೂ, ಗಂಡನ ಮನೆಯ, ಅತ್ತೆ ಮನೆಯ ಸೊಸೆಯಾಗುತ್ತೇನೆ. ಅತ್ಯಂತ ಸುಖದಲ್ಲಿ ಪ್ರೀತಿಯಲ್ಲಿ ಬೆಳೆದವಳು, ಎಲ್ಲರ ಒಲುಮೆಯಲ್ಲಿ ಮುಳುಗೆದ್ದವಳು, ತವರಿನಲ್ಲಿ ಮೊಗ್ಗಿನಂತಿದ್ದು, ಗಂಡನ ಮನೆಯಲ್ಲಿ ಅರಳುವಳು, ತಾಯಿಯ ಕರುಳಿನ ಬಳ್ಳಿಯಾಗಿ ಗಂಡನೊಂದಿಗೆ ಮಂಟಪದಲ್ಲಿ ಆಗಮಿಸಿದ್ದಾಳೆ. ಬಾಲ್ಯವು ಮುಗಿಯುತ್ತಿದ್ದಂತೆ, ಈ ಬೊಂಬೆ ಬೆಳೆದು ದೊಡ್ಡವಳಾಗಿ ನಿಂತಿದ್ದಾಳೆ. ಅವಳು ಖುದುಖುದು ಎಂದು ನಗುತ್ತಿರುವಾಗ ಅವಳು ಬಾಲ್ಯಕಳೆದು ವಯಸ್ಸಿಗೆ ಬಂದಿರುವಳೆಂದು, ವಿವಾಹಕ್ಕೆ ಸಿದ್ಧಳಾಗಿದ್ದಾಳೆಂದು ಗೊತ್ತಾಗುತ್ತದೆ. ಹೀಗೆ ಹೆಣ್ಣಿನ ಕುರಿತು ಹಾಗೂ ವಿವಾಹ ಕುರಿತಾದ ವಿಶೇಷವಾದ ಜಾನಪದ ಹಾಡುಗಳನ್ನು ಬೀದರ್ ಪ್ರಾಂತ್ಯದ ಮಹಿಳೆಯರು ರೂಪಿಸಿಕೊಂಡು ಬಂದಿದ್ದಾರೆ.

೩.೩.೧೧ ಬಾಗಿಲು ಹಿಡಿಯುವುದು:

ಇದೊಂದು ಆತ್ಮೀಯ ಹಾಸ್ಯಮಯವಾದ ಸನ್ನಿವೇಶ. ಅಕ್ಕ ಅಥವಾ ತಂಗಿಯರು ಈಗ ತಾನೇ ಹೊಸದಾಗಿ ಮದುವೆಯಾಗಿ ಹೆಂಡತಿಯೊಂದಿಗೆ ಸಹೋದರನು ಗೃಹಪ್ರವೇಶ ಮಾಡಿದಾಗ ಆಗ ಅಕ್ಕ ತಂಗಿಯರು ದೇವರ ಮನೆಯಲ್ಲಿ ಅವರನ್ನು ಹೋಗಲು ಬಿಡದೆ ಬಾಗಿಲಲ್ಲಿ ಅಡ್ಡವಾಗಿ ಒನಕೆಯನ್ನು ಹಿಡಿದು ತಡೆಯುತ್ತಾರೆ. ಸೋದರನಿಗೆ ಮೊದಲು ಹುಟ್ಟುವ ಹೆಣ್ಣು ಮಗುವನ್ನು ತನ್ನ ಮಗನಿಗೆ ಕೊಡಬೇಕೆಂದು ಭಾಷೆ ಕೊಡುವವರೆಗೂ ಬಾಗಿಲು ತಡೆಯುವರು. ಅಣ್ಣ ತಾನು ಏನೆಲ್ಲವನ್ನು ಕೊಡುವೆ ಬಾಗಿಲು ಬಿಡು ಎಂದು ಪರಿಪರಿಯಾಗಿ ಕೇಳಿದರೂ ಅಕ್ಕ ತಂಗಿಯರು ಒಪ್ಪದೆ ಕೊನೆಗೆ ಮಗಳನ್ನು ನಿನ್ನ ಸೊಸೆಯಾಗಿ ಮಾಡುವೆ ಎಂದಾಗಲೇ ಸಂತೋಷದಿಂದ ಬಾಗಿಲು ಬಿಡುವಳು. ಆಗ ಅಕ್ಕ ತಂಗಿಯರು ಈ ರೀತಿಯ ಹಾಡು ಹೇಳುತ್ತಾರೆ.

ಆಕಳ ನಾ ಕುಡುವೆ, ಆಕಳ ಕರ ಕುಡುವೆ
ಹಿಡದ ಬಾಗಿಲು ಬಿಡುಬೇಕೆ ತಂಗಿ
ಬಾಗಿಲು ಬಿಡು ಭೇಗ ॥ ೨ ॥

ಆಕಳ ನಾ ಒಲ್ಲೆ ಆಕಳ ಕರವಲ್ಲೆ
ಹಿಡದ ಬಾಗಿಲ ಬಿಡಲಾರೆನಾ ಅಣ್ಣ

______________________.

ನಿನ್ನ ಒಡಲ್ಹುಟ್ಟಿದ ತಂಗಿ
ನಿನ್ನ ಹೆಸರಿಟ್ಟಾರ ಗಂಗಿ
ಕೋಮಲಾಂಗೀನ ಕೊಟ್ಟು ಋಣ ಮುಕ್ತ ಆಗಿದ ತಂಗಿ
ಬಾಗಿಲು ಬಿಡು ಭೇಗ

ಕೋಮಲಾಂಗೀನ ಕೊಟ್ಟು ಋಣ ಮುಕ್ತ ಆಗಿದಿ ಅಣ್ಣ
ಬಾಗಿಲು ಬಿಟ್ಟೀದ ಅಣ್ಣ ಬಾಗೀಲು ಬಿಟ್ಟೀದ. [೩೮]

ಎಂದು ಅಣ್ಣ ತನ್ನ ಮಗಳನ್ನು ನಿನ್ನ ಸೊಸೆಯಾಗಿ ಮಾಡುವೆನೆಂದಾಗ ತಂಗಿ ಬಾಗಿಲು ಬಿಡುವಳು. ಇಲ್ಲಿ ಸೋದರ, ಸೋದರಿಯರ ಪ್ರೀತಿ, ಸರಸ, ಹಾಸ್ಯ ವ್ಯಕ್ತವಾಗುತ್ತದೆ. ಇದು ತನ್ನ ಕರುಳಬಳ್ಳಿ ಸಂಬಂಧದ ಪ್ರತೀಕವಾಗಿ ಕಂಡುಬರುತ್ತದೆ. ಹೀಗೆ ಜಾನಪದ ಪರಂಪರೆಯಲ್ಲಿ ಮಹಿಳೆಯರು ಪದಕಟ್ಟಿ ಹಾಡಿರುವ ಹಾಡುಗಳು ಮಾನವೀಯ ಸಂಬಂಧಗಳ ಸೆಲೆಯಾಗಿ ಕಂಡುಬರುತ್ತವೆ.

೩.೪ ಸೋಬಾನ ಹಾಡುಗಳು:

ಶುಭ ಕೋರುವಂತಹ ಸಂಪ್ರದಾಯವನ್ನು ಜಾನಪದರು ಸೋಭನ ಅಥವಾ ಸೋಬಾನವೆಂತಲೂ ಕರೆಯುತ್ತಾರೆ. ಸಂತಾನ ಫಲ ಒದಗಲಿ ಎಂಬ ಶುಭ ಹಾರೈಕೆಯೇ ಸೋಭನವಾಗಿದೆ. ಬಾಲ್ಯವಿವಾಹ ಪದ್ಧತಿ ಇರುವಾಗ ಮದುವೆಯಾದ ಮೇಲೆ ತವರಿನಲ್ಲಿಯೇ ಹೆಣ್ಣು ಇರುತ್ತಿದ್ದಳು. ಅವಳು ಮೈನೆರೆದ ವಿಷಯ ಗಂಡನ ಮನೆಗೆ ಹೇಳಿ ಕಳಿಸುತ್ತಿದ್ದರು. ಹದಿನಾರನೆಯ ದಿನ ಹುಡುಗಿ ಹೆಂಗಸಾದಳೆಂದು ಸಿಂಗರಿಸಿ, ಕೂಡ್ರಿಸಿ, ಮುತ್ತೈದೆಯರೆಲ್ಲ ನೆರೆದು ಹೆಣ್ತನದ ಆದರ್ಶ, ಭಕ್ತಿ, ಶೃಂಗಾರ, ನೀತಿ ಮೊದಲಾದವನ್ನು ಬಿಂಬಿಸುವ ಹಾಡುಗಳನ್ನು ಹಾಡುತ್ತಾರೆ. ಅವಳಲ್ಲಿ ಹೆಣ್ತನದ ಕಟು ಬಾಳನ್ನು ಎದುರಿಸುವ ಧೈರ್ಯ ತುಂಬುವ ವಿಚಾರವೂ ಅದರಲ್ಲಿರಬೇಕು. ಈಗ ವಯಸ್ಕರಾದ ಮೇಲೆಯೇ ಮದುವೆಗಳು ಜರಗುತ್ತದೆಯಾದ ಕಾರಣ ಮದುವೆಯ ದಿನದಂದು ಅಥವಾ ಎರಡು

ಮೂರು ದಿನಗಳೊಳಗಾಗಿ ಸೋಬನ ಇಟ್ಟುಕೊಳ್ಳುವುದುಂಟು. ಜನಪದರು ಸೋಬನ ಮಾಡುವ ಐದಾರು ದಿನ ಮೊದಲು ಗಂಡ ಹೆಂಡತಿಯರನ್ನು ಸಿಂಗರಿಸಿದ ಮಂಟಪದಲ್ಲಿ ಕೂಡ್ರಿಸಿ, ಹಾಡಿಸುವರು. ಇದನ್ನೇ "ಉಡಿ ತುಂಬುವ" ಕಾರ್ಯಕ್ರಮವೆಂದೂ ಫಲಶೋಭಾನವೆಂದೂ ಸಂಬೋಧಿಸುತ್ತಾರೆ. ಹೆಣ್ಣು ಮತ್ತು ಗಂಡನ್ನು ಒಂದುಗೂಡಿಸುವ ಸಂಪ್ರದಾಯವೇ ಈ ಫಲಶೋಭನ ಕಾರ್ಯ.

"ಈ ಕಾರ್ಯದಲ್ಲಿ ಅಳಿಯ, ಮಗಳಿಗೆ, ಬೀಗ, ಬೀಗತ್ತಿಯರಿಗೆ ಹೊಸ ಬಟ್ಟೆ ಹೆಣ್ಣಿನ ತವರವರು ಮಾಡಿ, ಹೆಣ್ಣಿನ ಉಡಿಯಲ್ಲಿ ಗೋಧಿಯ ಉಡಿಯಕ್ಕಿ ಹಾಕಿ, ತೆಂಗಿನ ಫಲಗಳನ್ನು ಉಡಿಯಲ್ಲಿ ಹಾಕುವರು. ಅವಳು ಮೈನೆರೆದಾಗ ಯಾರು ನೀರು ಹಾಕಿರುತ್ತಾರೋ ಅವಳಿಗೆ ಗಂಡನ ಮನೆಯವರು (ಮುಟ್ಟೆರೆದ ಸೀರೆ) ಸೀರೆ, ಕುಪ್ಪಸ ಕೊಡುವರು. ಅಂದು ಗಂಡ-ಹೆಂಡತಿಯನ್ನು ಕೂಡಿಸಿ ಸೋಬಾನ ಹಾಡುಗಳನ್ನು ಹಾಡುವರು. ಮುಂದೆ ಅವರು ಒಳ್ಳೆಯ ಗೃಹಸ್ಥರಾಗುವುದಕ್ಕೆ ಅಡಿಪಾಯ ಹಾಕುವುದಾಗಿದೆ." [೩೯]

ಸೋಬಾನ ಹಾಡುಗಳು ತುಂಬಾ ವೈವಿಧ್ಯಮಯವಾಗಿರುತ್ತವೆ. ಮದುವೆಯ ಇತರ ಯಾವುದೇ ಹಾಡುಗಳಿಗಿಂತ ಸೋಬಾನೆ ಹಾಡುಗಳನ್ನು ಹಾಡುವ ರೀತಿ ಧಾಟಿಗಳಲ್ಲಿ ವೈವಿಧ್ಯತೆ ಇದೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳು ಕಥನ, ಕವನ, ನೀತಿಪದಗಳು, ಹಾಸ್ಯದ ಹಾಡುಗಳು, ಮಹಾಭಾರತದ, ರಾಮಾಯಣದ ಪ್ರಸಂಗಗಳು, ಶರಣರ ಮಾಹಾತ್ಮೆಯನ್ನು ಎತ್ತಿತೋರುವ ಹಾಡುಗಳು, ಹೆಣ್ಣು ಶೀಲರಕ್ಷಿಸಿಕೊಂಡ ಪತಿವ್ರತೆಯರ ಕಥೆಗಳು ಇರುತ್ತವೆ.

ಲಿಂಬಿಯ ಹಣ್ಣಿನ್ಹಂಗ ರಂಭೀಯ ಮೈಯಬಣ್ಣ ss
ತುಂಬಿದ ಮೈಯ್ಯ ಹೊಳೆವ ಕಣ್ಣ । ಸೋಬಾನ ವೇ
ಮಾವನ ಮನಿಯಾಗ ಮುತ್ತೈದಿ ಸೊಸಿ ಬಂದು
ಮಲ್ಲಮ್ಮ ಬಂದ ಮನಿ ಚಂದ । ಸೋಬಾನವೇ [೪೦]

೩.೫ ಸೀಮಂತದ ಹಾಡುಗಳು:

ಒಂದು ಹೆಣ್ಣಿನ ಜೀವನದಲ್ಲಿ ವಧುವನ್ನು ನೋಡಿ ನಿಶ್ಚಯಿಸಿ ಮದುವೆಯಾಗಿ ಸೋಬನವಾಗುವವರೆಗೆ ಒಂದು ಘಟ್ಟವಾದರೆ, ಚೊಚ್ಚಲ ಗರ್ಭಿಣಿಯಾಗಿ ಗಂಡನ ಮನೆಯ ವಂಶ ಬೆಳೆಯಿಸುವ ಘಟ್ಟ ಮುಂದಿನದು. ಚೊಚ್ಚಲ ಗರ್ಭಿಣಿಗೆ ಮಾಡುವ ಸಮಾರಂಭ ಕುಪ್ಪಸ ಮಾಡುವುದು, ಸೀಮಂತವೆಂತಲೂ ಹಾಗೂ ಹೂ ಮುಡಿಸುವುದು ಎಂದು ಸಹ ಕರೆಯುತ್ತಾರೆ. ಹೆಣ್ಣು ಪೂರ್ಣತ್ವ ಪಡೆಯುವುದು ತಾಯಿಯಾದಾಗಲೇ, ಪ್ರತಿ ಹೆಣ್ಣಿಗೆ ತಾಯಿಯಾಗುವ ಬಯಕೆ ಅದಮ್ಯವಾಗಿರುತ್ತದೆ. ಬಹಳ ದಿನಗಳವರೆಗೆ ಮಕ್ಕಳಾಗದಿದ್ದರೆ ಗಂಡನಲ್ಲಿ ಇನ್ನೊಂದು ಮದುವೆಯಾಗುವನೋ ಎಂಬ ಆತಂಕ ಒಂದೆಡೆ. ಅತ್ತೆ ಮಾವರು ಬಂಜೆ ಎಂದು ಮೂದಲಿಸುವರು. ನೆರೆಹೊರೆಯವರ ಕೊಂಕುನೋಟ ಇನ್ನೊಂದೆಡೆಗೆ. ಎಷ್ಟೇ ಕಷ್ಟವಿದ್ದರೂ ಮಕ್ಕಳ ಮುಖನೋಡಿ ಸಹಿಸಿಕೊಂಡು ಧೈರ್ಯದಿಂದಿರುತ್ತಾಳೆ. ಕಂದನಿಲ್ಲದ ಗೃಹಿಣಿ ತನ್ನ ದು:ಖವನ್ನು ಹೀಗೆ ತೋಡಿಕೊಂಡಿದ್ದಾಳೆ.

ಕಂದನ ಕೊಡು ಶಿವನೆ, ಬಂಧನ ಪಡಲಾರೆ
ಹಂಗೀನ ಬಾನ ಉಣಲಾರೆ । ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ" [೪೧]

ಹೆಣ್ಣು ಈ ರೀತಿಯಾಗಿ ದು:ಖ ವ್ಯಕ್ತ ಮಾಡಿದಾಗ ಮನ ಹಗುರವಾಗುವುದು. ಗಂಡುಮಕ್ಕಳ ಕೊರಗು ಹೊರಗೆ ವ್ಯಕ್ತವಾಗದೇ ಇದ್ದರೂ ಮನದೊಳಗೆ ನೊಂದುಕೊಳ್ಳುವರು. ಇಷ್ಟೆಲ್ಲ ಇದ್ದು ಯಾವ ಪುರುಷಾರ್ಥಕ್ಕಾಗಿ ಎಂದೂ, ವಂಶದ ಕುಡಿ ಇಲ್ಲದೆ ವಂಶ ಮುಂದುವರೆಯದು, ಕುಲಕ್ಕೆ ದೀಪ ಇಲ್ಲದೆ ಇಲ್ಲಿಗೆ ನಿಂತು ಹೋಗುವುದು. ಆಸ್ತಿಗೆ ಹಕ್ಕುದಾರರಿಲ್ಲದೆ ಆಸ್ತಿ ಗಳಿಕೆ ಯಾತಕ್ಕೆ ಎಂದೆಲ್ಲ ಕೊರಗುವರು. ಅಂಥ ಸಮಯದಲ್ಲಿ ಯಾರು ಏನು ಮಾರ್ಗದರ್ಶನ ಮಾಡುವರೋ ಅದನ್ನೆಲ್ಲ ಮಾಡುವುದಕ್ಕೆ ಪ್ರಯತ್ನಿಸುತ್ತಾರೆ. ಕೆಲವರು 'ಬಾಲಗ್ರಹ ಬಾಧೆ' ಎಂದು ಸೂಚಿಸಿ ಅದಕ್ಕೆ ಪರಿಹಾರ ಸೂಚಿಸುತ್ತಾರೆ, ಕೆಲವರು ಮಂತ್ರ, ಮಾಟ, ತಾಯಿತ, ಲಿಂಬೆಹಣ್ಣುಗಳನ್ನೆಲ್ಲ ಮಾಂತ್ರಿಕರಿಂದ ಮಂತ್ರಿಸಿ ಕೊಡುತ್ತಾರೆ. ಕೆಲವರು ದರ್ಗಾಗಳಿಗೆ ಹೋಗುತ್ತಾರೆ. ಕೆಲವರು ಗಿಡಗಳಿಗೆ, ತೆಂಗು, ತೊಟ್ಟಿಲು, ದಾರವ ಕಟ್ಟುತ್ತಾರೆ. ಅನೇಕ ಹರಕೆಗಳನ್ನು ಹೊತ್ತು ಮುಡಿಪು ಕಟ್ಟಿ ಇಡುತ್ತಾರೆ. ಮದುವೆಯಾದ ಒಂದು ವರ್ಷ ಮುಗಿಯುವದರೊಳಗಾಗಿ ಮಕ್ಕಳಾದರೆ ಸರಿ, ಇಲ್ಲವಾದಲ್ಲಿ ಹೆಣ್ಣಿಗೆ ಶೋಷಣೆ ಪ್ರಾರಂಭವಾಗುವುದು. ಶುಭಕಾರ್ಯಗಳಲ್ಲಿ ಅವಳನ್ನು ಹೆಚ್ಚು ಸೇರಿಸುವುದಿಲ್ಲ. ಯಾರಾದರೂ ಹೊಸಬರು ಎದುರಿಗೆ ಬಂದಾಗ ಮಕ್ಕಳೆಷ್ಟು ಎಂದು ಮೊದಲಿಗೆ ಪ್ರಶ್ನಿಸುವರು. ಆಗ ಅವಳ ತಳಮಳ ಹೇಳತೀರದು. ಮಕ್ಕಳಿಗಾಗಿ ಉಪವಾಸ, ವ್ರತ, ಪೂಜೆಗಳನ್ನೆಲ್ಲ ಮಾಡುವಳು.

ನಿರೀಕ್ಷೆ, ಹಾರೈಕೆ, ಹರಕೆಗಳ ಫಲವಾಗಿ ತಮ್ಮಿಬ್ಬರ ಪ್ರೀತಿಯ ದ್ಯೋತಕವಾಗಿ ಹೆಂಡತಿ ಗರ್ಭಿಣಿಯಾದರೆ ಎಲ್ಲಿಲ್ಲದ ಸಂತಸವಾಗುವುದು. ಮೊದಲು ಮನೆಯವರಿಗೆ ತಿಳಿದು, ನಂತರ ನೆರೆಹೊರೆ, ಬಂಧು, ಬಳಗ, ತವರಿನವರಿಗೆ ಈ ಸಂತಸದ ಸುದ್ದಿಯಿಂದ ಸಂತೋಷವಾಗಿ ಬಗೆ ಬಗೆಯ ಅಡುಗೆಗಳನ್ನು ಮಾಡಿ ಅವಳಿಗೆ ಉಣಬಡಿಸುವರು. "ಸಂತೋಷವಾದ ಸುದ್ದಿ ಸಂತ್ಯಾಗ ಕೇಳೀನಿ, ಕೆಂಚಿ ನನ ತಂಗಿ ಬಸುರಂತ ಕೆಂಚಿನನ ತಂಗಿ ಬಸುರಂತ ಹೇಳಿದುರ, ಹಂಪಿ ಸಾಗರದ ಬಣ್ಣಿಜ್ಞೀಗ"[೪೨] ಎಂಬ ಜಾನಪದ ಹಾಡೊಂದು ತಾಯ್ತನದ ಸಂಭ್ರಮವನ್ನು ಸೂಚಿಸುತ್ತದೆ.

ಗರ್ಭಿಣಿಗೆ ಮೂರು ತಿಂಗಳಾದಾಗ ತವರಿನವರು ಕಳ್ಳಕುಪ್ಪಸ ಮಾಡುವರು. ಮೂರು ತಿಂಗಳ ಗರ್ಭ ನಿಜವೋ, ಸುಳ್ಳೊ ಎಂದು ಜನರು ಆಡಿಕೊಳ್ಳಬಹುದೆಂದು ಬೇರೆಯವರಿಗೆ ಹೇಳದೆ ಮನೆಯವರೇ ನೆರವೇರಿಸಿಕೊಳ್ಳುವರು. ಏಕೆಂದರೆ ಈ ಅಪನಂಬಿಕೆಗೆ ಕಾರಣ ಜನಪದರ ಕಾಲದಲ್ಲಿ ಈಗಿನಂತೆ ಗರ್ಭಧಾರಣೆಯ ಕುರಿತು ಅರಿತುಕೊಳ್ಳುವ ಸೌಲಭ್ಯ ಇರಲಿಲ್ಲ. ಈಗ ಎರಡು ಮೂರು ದಿನ ಕಳೆದರೂ ವೈದ್ಯಕೀಯ ಪರೀಕ್ಷೆಯ ಮೂಲಕ ದೃಢೀಕರಿಸಿಕೊಳ್ಳಬಹುದು. ಅದಕ್ಕಾಗಿ ಜನಪದರು ಅಳುಕುತ್ತಲೆ 'ಕಳ್ಳಕುಪ್ಪಸ' ದೇವರ ಮನೆಯಲ್ಲಿ ಗರ್ಭಿಣಿಗೆ ಹಸಿರು ಒಂದು ಕುಪ್ಪಸ ಹೊಲಿದು ಹಾಕುತ್ತಿದ್ದರು. ಜೊತೆಗೆ ಮುಂಜಾನೆ ತಲೆಗೆ ಸ್ನಾನ ಮಾಡಿಸಿ ಹಸಿರು ಬಳೆ ಹಾಕುತ್ತಿದ್ದರು. ಏನಾದರೂ ಸಿಹಿ ತಿನ್ನಿಸುತ್ತಿದ್ದರು. ಗರ್ಭಿಣಿಗೆ ಇದು ಮೊದಲ ಕಾರ್ಯಕ್ರಮ.

ಅವಳು ಬಯಸಿದ ಎಲ್ಲ ಅಡುಗೆಗಳನ್ನು ಮಾಡಿ 'ಬಯಕೆಯ ಊಟ' ಮಾಡುತ್ತಾರೆ. ತವರಿನವರಿಗೆ ಇದೊಂದು ಸಂಭ್ರಮವೆ. ಬಗೆಬಗೆಯ ಊಟದ ಪದಾರ್ಥಗಳನ್ನು ಸಿದ್ಧಗೊಳಿಸಿಕೊಳ್ಳುತ್ತಾರೆ. ಮುಖ್ಯವಾಗಿ ಧಪಾಟಿ, ಸಜ್ಜಿರೊಟ್ಟಿ, ಜೋಳದನ್ನ, ಮೊಸರನ್ನ, ಶೆಂಗಾ, ಅಗಸಿ ಚಟ್ನಿ, ಕಿಚಿಡಿ. ಚುವುಡಾ (ಮಂಡಕ್ಕಿ), ಬದನೆಕಾಯಿ ಪಲ್ಯ. ಘಟ್ಟ ಬ್ಯಾಳಿ. ಮೊಲದಿ, ಹಣ್ಣುಹಂಪಲು. ಎಲ್ಲ ಅದ್ದೂರಿಯ ಅಡುಗೆ ಮಾಡಿಕೊಂಡು, ಕಟ್ಟಿ 'ಬುತ್ತಿ ರೊಟ್ಟಿ' ಎಂದು ಗರ್ಭಿಣಿ ಇದ್ದ ಮನೆಗೆ ಒಯ್ಯುವರು. ಐದು ಜನ ಮುತ್ತೈದೆಯರು ಆ ಎಲ್ಲಾ ಅಡುಗೆ ಗಂಟುಗಳಿಗೆ ಪೂಜೆಮಾಡಿ ಬಿಚ್ಚುತ್ತಾರೆ. ಗರ್ಭಿಣಿ ಹೆಣ್ಣು ಮಗಳಿಗೆ ಮಣೆಯ ಮೇಲೆ ಕುಳ್ಳಿರಿಸಿ ಅರಿಶಿಣ ಕುಂಕುಮ ಹಚ್ಚಿ ತಂದಂಥ

ಅಡುಗೆಯನ್ನು ಒಂದು ಗಂಗಾಳದಲ್ಲಿಟ್ಟು ಊಟಕ್ಕೆ ಕೊಡುತ್ತಾರೆ, ನಂತರ ಎಲ್ಲರೂ ಊಟ ಮಾಡುವರು. ಆ ಮೇಲೆ ಎಲ್ಲ ಬಂಧು-ಬಳಗ, ನೆರೆ-ಹೊರೆಯವರಿಗೆಲ್ಲ ಅಡುಗೆ ನೀಡಿ ಬರುತ್ತಾರೆ. ಗರ್ಭಿಣಿ ಬಯಸಿದ ಊಟ ಮಾಡದಿದ್ದರೆ ಹುಟ್ಟುವ ಮಗುವಿನ ಕಿವಿ ಸೋರುವುದು ಎಂಬ ಜನಪದರ ಅಭಿಮತ. ಅದಕ್ಕಾಗಿ ಅವಳು ಬಯಸಿದ ಎಲ್ಲ ಅಡುಗೆ ಹಣ್ಣು ಹಂಪಲುಗಳು ತಪ್ಪದೇ ತರುತ್ತಾರೆ. ಮಲ್ಲಿಗೆಯ ದಂಡೆ ಹಾಕಿ, ಹಸಿರು ಬಳೆಯನ್ನು ಮುತ್ತೈದೆಯರು ತೊಡಿಸುತ್ತಾರೆ. ಮುಂದೆ ಐದು ಅಥವಾ ಏಳು ತಿಂಗಳಲ್ಲಿ ಕುಪ್ಪಸ ಮಾಡುತ್ತಾರೆ. ಒಂದು ವೇಳೆ ಅದಕ್ಕೂ ಏನಾದರೂ ಅಡಚಣೆ ಆದರೆ ಒಂಭತ್ತನೆಯ ತಿಂಗಳಲ್ಲಿ ಮಾಡುತ್ತಾರೆ.

ಕುಪ್ಪಸ ಮಾಡುವ ಉದ್ದೇಶ ಬಸಿರಿಗೆ, ಮಗುವಿಗೆ ಶುಭಹಾರೈಸಿ ಅಮಂಗಳ ನಿವಾರಣೆ ಮಾಡುವುದಾಗಿದೆ. ಗರ್ಭಿಣಿ ಸಂತೋಷ ಹಾಗೂ ಪ್ರಸನ್ನಳಾಗಿರಲಿ ಎಂಬ ಉದ್ದೇಶವೂ, ಹಾರೈಕೆಯೂ ಇದೆ. ಹೆಣ್ಣಿನ ತವರವರು ತಮ್ಮ ಮಗಳಿಗೆ ಬಳೆ, ಸೀರೆ, ಕುಪ್ಪಸ, ಅಳಿಯನಿಗೆ ಬಟ್ಟೆ, ಬಂಗಾರ, ಅಳಿಯನ ತಂದೆ, ತಾಯಿ, ಭಾವ ನೆಗೆಯಣ್ಣಿ ನಾದುನಿಯರಿಗೂ ಬಟ್ಟೆಗಳನ್ನು ತರುವರು. ಜೊತೆಗೆ ಬಗೆ ಬಗೆಯ ತಿಂಡಿ, ತಿನಿಸುಗಳನ್ನು ತರುವರು. ಇವರು ತಂದಂಥ ತಿಂಡಿ, ತಿಸಿಸು ಅಡುಗೆಯಲ್ಲಿ ಕರಜಿಕಾಯಿ, ಹಿಂಡಿ ಮೊಸರನ್ನ, ಪುಂಡಿಪಲ್ಯ, ಎಳ್ಳಹಚ್ಚಿದ ಸಜ್ಜಿರೊಟ್ಟಿ, ಸಜ್ಜಕದ ಹೋಳಿಗೆ, ಗಜ್ಜರಿ ಚೆಟ್ನಿ ತರುವರು. ಊಟಕ್ಕೆ ಬಂದ ಎಲ್ಲರಿಗೂ ಬಡಿಸುವರು. ಓಣಿಯಲ್ಲಿ ಮನೆ ಮನೆಗೂ ಹಂಚುವರು. ಮಗಳ ಬಸಿರಿನ ವಿಷಯ ತಿಳಿದ ತವರವರು ಬಸೀರೂಟ ತಂದಾಗ, ಹೀಗೆ ಹೇಳುವರು;

ಸಜ್ಜೀಯ ರುಚಿರೊಟ್ಟಿ । ಸಜ್ಜಕದ ಹೋಳಿಗಿ
ಗಜ್ಜರಿ ಚೆಟ್ಟು ಎಳ್ಳೆಣ್ಣೆ । ತಂಗೆವ್ವ
ಗುಜ್ಜ ನಿನ ಬಂಕಿ ತಿಳಿಯಾವ

ಹೀಗೆ ಒಯ್ದು ಬಯಕೆಯ ಊಟವು ಮಗಳ ಹೊಟ್ಟೆಯಲ್ಲಿ ಬೆಳೆಯುವ ಎಂಥ ಕೂಸಿಗೆ ಅಂದರೆ

ಬಂಗಾರ ಬಳೆಯೊತ್ತಿ, ದುಂಡಕಂಕಣವೊತ್ತಿ
ಗೊಂಡೇವ ಒತ್ತಿ ಮನಗ್ಯಾಳ । ನನ ಮಗಳು
ದಂಡನಾಳವನ ಬಂಕೇಲಿ ॥

ಎಂದು ಮಗಳ ಬಸಿರು ಅರಸಾಗಿ ಹುಟ್ಟಲೆಂದು ಆಶಿಸುತ್ತಾರೆ. ಮಗಳು ಶೀಲವಂತೆ, ಶಿವಶರಣೆ, ಅವಳ ಭಾವಕ್ಕೆ ಮೆಚ್ಚಿ ಶಿವನು ಸಹ ಸದರು ಇಳಿಯುವನು.[೪೩]

ಬಸುರಾದರ ತೊಡಬೇಕ ಹಸುರು ತಾಬೂತಿ ಕುಬಸ
ಹಸರೇಲಿ ಒಳಗ ಉಣಬೇಕ । ನನ ತಮ್ಮ
ಹೊಸ ಬೀಗನಾಗಿ ಬರಬೇಕು.

ಎಂದು ತಾನು ಬಸಿರ-ಬಂಕೆ (ಬಯಕೆ) ಯನ್ನು ಹೊರಬೇಕು. ತಮ್ಮನು ಹೊಸ ಬೀಗನಾಗಿ ತನ್ನ ಮನೆಗೆ ಬರಬೇಕು ಎಂಬ ಬಯಕೆ ಅಕ್ಕ ವ್ಯಕ್ತಪಡಿಸುವಳು.[೪೪]

ಈ ರೀತಿ ಅವಳು ಬಯಸಿದ ಎಲ್ಲ ವಸ್ತು, ಪದಾರ್ಥಗಳನ್ನು ತೆಗೆದುಕೊಂಡು ಬಂದು ಕುಪ್ಪಸ ಮಾಡುವರು. ಮಗಳು ಅಳಿಯನಿಗೆ ಬಟ್ಟೆ ಬಂಗಾರ ಮಾಡಿ ಉಡಿಯಕ್ಕಿ ಹಾಕಿ, ಗೋಧಿ ನೆನೆಹಾಕಿ ಪೋಣಿಸಿದ ಸರ ಅವಳ ಕೊರಳಲ್ಲಿ ಹಾಕುತ್ತಾರೆ. ಉಡಿಯಲ್ಲಿ ಹಸಿತೆಂಗು, ಅತ್ತಿಹಣ್ಣು, ಉತ್ತುತ್ತಿ, ಬಾದಾಮಿ, ಅಡಿಕೆಯಿಂದ ಉಡಿ ತುಂಬುತ್ತಾರೆ. ಅತ್ತಿಹಣ್ಣು ಉಡಿಯಲ್ಲಿ ಹಾಕುವ ಉದ್ದೇಶವೆಂದರೆ ಎಲ್ಲ ಹಣ್ಣಿನ ಗಿಡಗಳಿಗಿಂತಲೂ ಅತ್ತಿಗಿಡ ಹೆಚ್ಚು ಫಲಕೊಡುತ್ತದೆ. ಅದರಂತೆ ಅವಳಿಗೂ ಮನೆತುಂಬ

ಮಕ್ಕಳಾಗಲಿ ಎಂಬ ಉದ್ದೇಶವಿದೆ. ಗೋಧಿಯ ಸರ ಕೊರಳಲ್ಲಿ ಹಾಕುವುದೆಂದರೆ ಧಾನ್ಯಗಳಲ್ಲಿ ಗೋಧಿ ಶ್ರೇಷ್ಠ ಸ್ಥಾನಪಡೆದಿದೆ. ಎಲ್ಲ ಹಬ್ಬ-ಹರಿದಿನಗಳಲ್ಲಿ, ಶುಭಕಾರ್ಯಗಳಲ್ಲಿ, ಸಂತೋಷದ ದಿನಗಳಲ್ಲಿ ಗೋಧಿಯನ್ನೇ ಅಡುಗೆಯಲ್ಲಿ ಹೆಚ್ಚು ಬಳಸುತ್ತಾರೆ. ಉಡಿ ತುಂಬಿದ ಮೇಲೆ ಗಂಡ-ಹೆಂಡತಿಯರನ್ನು ಕೂಡಿಸಿ ಹಾಡುವರು.

ಈ ಕುಪ್ಪಸದ ಹಾಡುಗಳು ಗರ್ಭಿಣಿಯ ಬಯಕೆ, ಅವಳು ಒಂದೊಂದು ತಿಂಗಳಿಂದ ಅನುಭವಿಸಿದ ಅನುಭವಗಳನ್ನೆಲ್ಲ, ಒಂದು ತಿಂಗಳಿಂದ ಒಂಭತ್ತು ತಿಂಗಳವರೆಗೆ ಅವಳಲ್ಲಾದ ಬದಲಾವಣೆಗಳನ್ನು ಕುರಿತ ಸೂಕ್ಷ್ಮತೆಯನ್ನು ಎಳೆಎಳೆಯಾಗಿ ವಿವರಿಸುವ ಹಾಡು ಈ ರೀತಿಯಾಗಿ ಹೇಳುವರು.

ಪರಮೇಶುರಗ ಪಾರ್ವತಿ ಕಯ ಮುಗದು ನಿಂತಾಳೋ ಭಂಗಿ
ಪಿಂಡ ಪ್ರಕೃತಿ ಆಗೋ ಆಕರ ನಮಗ ತಿಳಸರಿ ಅದರ ಬಗಿ

ಇರವಿ ಎಂಭತ್ತ ಕೋಟಿ ಜೀವ ರಾಶಿಗೆ ಸ್ವಾಮಿ
ನಿಮ್ಮ ಅಂತಃಕರಣ ಜನನ ಮರಣ
ಎಲ್ಲ ನಿಮ್ಮ ಸ್ವಧ್ಯಾಣ । ಜಗದ್ಗುರು ಅನಿಸಿರಿ ನೀವು

. . . .

ಒಂಭತಿಂಗಳಿಗಿ ತುಂಬಿ ದೊಡ್ಡವನಾಗಿ
ಸರದು ಓಡಾಡುತಾನ ಸರುದಾರ
ತೆಲಿ ತೆಳಕ ಕಾಲು ಮ್ಯಾಲಕ ಆವಾಗ ಮಾಡ್ಯಾರ
ಉಪರಾಟೆ. [೪೫]

ಈ ರೀತಿ ಪಾರ್ವತಿಯು ಶಿವನಿಗೆ ಮಾನವನ ಜನ್ಮ ವೃತ್ತಾಂತವನ್ನು ಕೇಳುವುದರ ಮೂಲಕ, ತಂದೆ-ತಾಯಿಯರಿಂದ ಮಗು ಹೇಗೆ ಜನ್ಮ ತಾಳುವುದು ಕ್ಷಣ ಕ್ಷಣಕ್ಕೂ ಅದರ ಬೆಳವಣಿಗೆ ಹೇಗೆ ಉಂಟಾಗುವುದು ಎಂಬುದನ್ನು ಶಿವ-ಸಾಂಬರ ಬಾಯಿಂದ ವಿವರವಾಗಿ ಇಲ್ಲಿ ವರ್ಣಿಸಲಾಗಿದೆ. ಎಂಭತ್ತು ಕೋಟಿ ಜೀವರಾಶಿಗಳಿಗೆ ಶಿವನು ಒಡೆಯ, ಕಾರಣಕರ್ತನು ಎನ್ನುವ ವಿಷಯ ವಿಷದೀಕರಿಸಿದೆ.

ಹೆಣ್ಣಿನ ಗರ್ಭಧಾರಣೆ ಯಾವಾಗ ಉಂಟಾಗಿ, ಒಂದೊಂದೆ ತಿಂಗಳಲ್ಲಿ ಹೇಗೆ ಬದಲಾವಣೆಯಾಗುತ್ತಾ, ಬೆಳವಣಿಗೆ ಆಗಿ ಕಣ್ಣು, ಮೂಗು, ಕೈ, ಕಾಲು, ಬೆರಳು, ಮೆದುಳು ಹುಟ್ಟಿಕೊಳ್ಳುತ್ತವೆ ಎಂಬುದನ್ನು ವಿಜ್ಞಾನ ಬಲ್ಲ ಈಗಿನ ಯುಗದವರಿಗಿಂತಲೂ ಜನಪದರು ಎಲ್ಲವನ್ನೂ ಬಲ್ಲವರಾಗಿ ಹಾಡಿನಲ್ಲಿ ವಿವರಿಸಿದ್ದನ್ನು ಕಂಡಾಗ, ಈಗಿನ ಆಧುನಿಕ ವೈದ್ಯರಿಗಿಂತ ಜಾನಪದರು ತಿಳುವಳಿಕೆಯಲ್ಲಿ ಕಡಿಮೆಯಲ್ಲ ಎಂದೆನಿಸುವುದು. ಅದೇ ರೀತಿಯಾಗಿ,

ಶೆಟ್ಟಿಶಿವಭದ್ರಿ ಹೊಟ್ಟಲ್ಲಾಳಂಬ ಸುದ್ಧಿ
ಪಟ್ಟಣದಾಗ ಕೇಳಿದೇವ್ರಿ । ರನ್ನದ್
ಪಡಸಾಲಿದಾಗ. ಚಿನ್ನದ್ ಮಂಚವನ್ಹಾಕಿ
ಮೆತ್ತನ್ ಗಾದಿ ಹಾಕಿ ಮಿತ್ರಿ ತಾ ಮಲಗಿದುಳ
ಅತ್ತ ಇತ್ತ ನೋಡಟಗೆ ಅಕಿನ್ ಗಂಡ ಬಂದಾರ್ಹೊರಗಿಂದೆ sss
ರನ್ನದಂಗುಳುದಾಗ sss ಚಿನ್ನದೊಲಿಯ ಹೂಡಿ
ನಮ್ಮವ್ವಗ ಹೇಳಿ । ಏಳ ಹಾಂಡ್ಯಾವ ನೀರ

ನಿನ್ನಗಾದರ ಬೆರಸಲೇನೇ SSS

. . . .

ಗಂದ್ಹೆಣ್ಣಿ ತರಸಲೇನೇ । ನಿನ್ನ ಅಂಗೈಯ
ಒರಸಲೇನೇ । ನಮ್ಮಕ್ಕಗ ಹೇಳಿ ನನ್ನ
ಹೇಸರ್ ಮಾಡಿ ನಿನ್ನಗಾದರ ಉಣಸಲೇನೇ SSS [೪೬]

ಈ ರೀತಿ ಗಂಡನು ತನ್ನ ಹೆಂಡತಿ ಬಯಕೆಯಿಂದ ಬೆಂದು ಮಲಗಿರುವಾಗ ಅವಳನ್ನು ಸಂತೈಸಲು, ಅವಳ ಇಚ್ಛೆ ಅರಿತು ಪೂರೈಸಲು ಪರಿಪರಿಯಾಗಿ ಕೇಳುವನು. ತಾಯಿ, ಅಕ್ಕಂದಿರು ತನಗೆ ಬೇಕೆಂದಿದ್ದನ್ನೆಲ್ಲ ಸಂತೋಷದಿಂದ ಮಾಡಿಕೊಡುವರು. ಸೊಸೆಗೆ ಮಾಡಲು ಹಿಂದೇಟು ಹಾಕುವರೆಂದರಿತ ಗಂಡ ತನ್ನ ಹೆಸರು ಹೇಳಿ ಅಂದರೆ ತನಗೆ ಬೇಕೆಂದು ಮಾಡಿಸಿ ನಿನಗೆ ಉಣಿಸುವೆ, ಉಡಿಸುವೆ, ತೊಡಿಸುವೆ ಎಂದು ಪ್ರೀತಿಯಿಂದ ರಮಿಸುವನು.

ಮುಂಜಾನೆ ಎದ್ದು ಕೆಲಸದಲ್ಲಿ ನಿರತಳಾಗುವ ಮಡದಿ ಮಲಗಿರುವುದನ್ನು ಕಂಡು ಚಿಂತಿತನಾಗಿ, ಕಾರಣ ಕೇಳುವನು. ಅವಳು ಎತ್ತರಿಲ್ಲದ, ಕತ್ತಲೆಯಿಂದ, ಹೊಗೆಯಿಂದ ತುಂಬಿದ ಅಡಗಿ ಮನೆಯಲ್ಲಿ ಸುತ್ತಿ ಸುತ್ತಿ ಹೊಗೆ ಬಡಿದಿದೆ ಅದಕ್ಕಾಗಿ ಮಲಗಿರುವೆ ಎಂದು ತುಂಟು ನೆಪ ಹೇಳುವಳು. ಆದರೂ ಅದನ್ನು ನಂಬದ ಗಂಡ ಇದ್ದಂಥ ಸತ್ಯ ಮಾತು ಹೇಳು ಎಂದು ಒತ್ತಾಯಪೂರ್ವಕವಾಗಿ ಕೇಳುವನು. ಅವಳನ್ನು ರಮಿಸಲು ಪರಡಿಯ ಪಾಯಸ ಮಾಡಿಸುವೆ, ಸಿಹಿ ಶ್ಯಾವಗಿ ನನ್ನ ಹೆಸರು ಹೇಳಿ ಮಾಡಿಸಿ ನಿನ್ನನ್ನು ತಿನ್ನಿಸುವೆ ಎಂದೆಲ್ಲ ತನ್ನ ಪ್ರೀತಿಯನ್ನು ವ್ಯಕ್ತಪಡಿಸುತ್ತಾನೆ.

ಬಸುರಿ ಹೆಣ್ಣು ಮಗಳು ಬಗೆ ಬಗೆಯ ತಿನಿಸುಗಳನ್ನು ಬಯಸುತ್ತಾಳೆ. ಆದಷ್ಟು ಎಲ್ಲವನ್ನೂ ಪೂರೈಸಲು ಸಂಬಂಧಿಕರು ಪ್ರಯತ್ನಿಸುತ್ತಾರೆ. ಆಗ ಈ ರೀತಿಯ ಹಾಡು ಹೇಳಲಾಗಿದೆ. ಹಾಡಿನಲ್ಲಿ ಗರ್ಭಿಣಿಯು ಬಯಸುವ ಬಯಕೆಯನ್ನು, ನಿರ್ಭೀಡೆಯಿಂದ ಹೇಳಿಕೊಳ್ಳುವ ರೀತಿ ಈ ರೀತಿಯಾಗಿದೆ.

ಮುಟ್ಟನಾದ ಮೂರ ದಿನಕ ಬೊಟ್ಟನಾದ ಬಿಳುಪನಾದ
ಕೊಟ್ಟಿದ್ದಂತ ತಾಯ ತಂದಿ ಹೊಟ್ಟಿ ಮುಟ್ಟಿ ನೋಡಾಗ
ಗ್ಯಾನಿ ನೀ ಹ್ಯಾಂಗ ಸುಮ್ಮನಿದ್ದಿರ SS

. . . .

ಮಾವನ ಕರಸರಿ ಮತ್ತೊಂದು ಹೇಳತೀನಿ
ಬಾಜಾ ಬಾಜಂತರಿ ಬಗಸೀತಾಕಿನ ಜೀವಾ
ಗ್ಯಾನಿ ನೀ ಹ್ಯಾಂಗ ಸುಮ್ಮನಿದ್ದೀರ SSS [೪೭]

ಇದರ ಉದ್ದೇಶ ಅವಳ ಮನಸ್ಸಿನಲ್ಲಿ ಯಾವ ಕೊರಗೂ ಇಲ್ಲದೆ ಬಯಸಿದುದೆಲ್ಲವೂ ತಿನ್ನಲಿ, ಅವಳು ಸಂತೋಷದ ಮನಸ್ಥಿತಿಯಿಂದಿರಲಿ ಎಂಬ ಉದ್ದೇಶದಿಂದ ಎಲ್ಲವನ್ನೂ ಪೂರೈಸುವರು. ಬಂಧುಗಳು ತಂದ ಊಟ, ತಿಂಡಿಗಳು ಯಾವುದನ್ನು ಸೇರದೆ, ತಿನ್ನದೆ ಅವಳು ಹಾಗೆಯೇ ಮಲಗಿದಾಗ, ಅವಳ ಒಂಭತ್ತು ತಿಂಗಳ ಮಾನಸಿಕ ಸ್ಥಿತಿ, ಅನಿಸಿಕೆ ಹೇಳಿದ್ದಾಳೆ. ಅದರ ತಿರುಳೇ ಈ ಕುಪ್ಪಸ ಮಾಡುವಾಗಿನ ಹಾಡುಗಳು. ಇದನ್ನು ಅನುಭವಿಸಿದವರೇ ಸರಿಯಾಗಿ ಅರ್ಥ ಮಾಡಿಕೊಳ್ಳಬಲ್ಲರು. ಮಕ್ಕಳ ಅನುಭವ ಇಲ್ಲದವರಿಗೆ ಇದೊಂದು ಅತಿಶಯೋಕ್ತಿ ಎನಿಸಬಹುದು. ಕೆಲವರು ಏನನ್ನೂ ತಿನ್ನದೇ ಕೇವಲ ನೀರಿನ ಮೇಲೆಯೇ, ಕೆಲವರು ಮಜ್ಜಿಗೆ ಮೇಲೆಯೇ

ಜೀವಿಸಿರುತ್ತಾರೆ. ಕೆಲವರಿಗೆ ಗಾಳಿಯಲ್ಲಿಯೂ ಏನೋ ಒಂದು ವಾಸನೆ ಬಂದಂತಾಗುವುದು. ಎದ್ದು ನಿಲ್ಲಲೂ ಆಗದು ಇಂಥ ಸಮಯದಲ್ಲಿ ಹೆಣ್ಣು ಸಂಪೂರ್ಣ ಅಸಹಾಯಕಳಾಗುವಳು.

ಕುಬಸ ತೊಡಿಸಿರಿ ನಮ್ಮ
ಸಿವರೋಚನಿಗೆ
ಕುಬ್ಬಸ ತೊಡಿಸೋದಕ ನಡೀರೆವ್ವ
ಗಂಧದಕ್ಕೆ ss

. . . .

ಪರಸಪಾದ ಸಮಯದೊಳು
ಮದಲು ನೆನಿರಿ ಪಾರ್ಮಾತ್ಮಾನ ಸತಿಗಿ
ರೇಣುಕಾರ ಜ್ಞಾನದಿಂದೆ
ಆತ್ಮ ಜ್ಞಾನಿ ಮಗ ಹುಚ್ಚ್ಯಾನ ಸತಿಗಿ [೪೮]

ಗರ್ಭಿಣಿ ಬಯಸುವ ವಸ್ತುಗಳು ಕೆಲವು ಸಲ ಸಾಮಾನ್ಯವೆನಿಸುತ್ತವೆ. ದೇಹದಲ್ಲಾಗುವ ಬದಲಾವಣೆಗಳೊಂದಿಗೆ, ಮಾನಸಿಕ ತೊಳಲಾಟ, ಆತಂಕ ಆರಂಭದ ದಿನಗಳಲ್ಲಿರುತ್ತವೆ. ಮನೆಯವರ ಪ್ರೀತಿಯ ಉಪಚಾರದಿಂದ ಅವಳಿಗೆ ಧೈರ್ಯ ಬರುವುದು. ಬಸಿರಿನ ಕೊನೆಯ ದಿನಗಳಲ್ಲಿ ತವರಿಗೆ ಹೋಗಿ ತಾಯಿಯ ಹತ್ತಿರ ಇರಬೇಕೆಂಬ ಅವಳ ಮನೋಭಾವನೆಗೆ ಕಾರಣ ಹುಡುಕಬೇಕಾಗಿಲ್ಲ. ತಾಯಿಗಿಂತ ಆತ್ಮೀಯ ವ್ಯಕ್ತಿ ಇನ್ನೊಬ್ಬರಿರುವುದಿಲ್ಲ. ಇಂಥ ಸಮಯದಲ್ಲಂತೂ ತಾಯಿಯ ಅವಶ್ಯಕತೆ ತುಂಬಾ ಕಂಡುಬರುವುದು. ತನ್ನ ತಾಯಿ ನೋವು ಅನುಭವಿಸಿದವಳು, ಅವಳ ಹತ್ತಿರವಿದ್ದರೆ ಎಷ್ಟೋ ಧೈರ್ಯ, ನೆಮ್ಮದಿ ಸಿಗುತ್ತದೆ ಎಂಬ ಭಾವನೆ ಪ್ರತಿಯೊಬ್ಬ ಹೆಣ್ಣಿನಲ್ಲಿರುತ್ತದೆ. ಹೀಗಾಗಿ ಹೆರಿಗೆಯ ದಿನಗಳು ಸಮೀಪಿಸಿದಂತೆ ತಾಯಿಯ ಹತ್ತಿರ ಹೋಗಬೇಕೆಂಬ ಅಪೇಕ್ಷೆ ಉತ್ಕಟವಾದುದು ಸಹಜ.

ಕೆಲವು ಸಲ ಗಂಡನ ಮನೆಯವರಿಗೂ ತಾಯಿ ಮನೆಯವರ ಮಧ್ಯ ಯಾವುದೋ ಕಾರಣಕ್ಕಾಗಿ ಮನಸ್ತಾಪ ಉಂಟಾಗಿ ಬಸುರಿಯನ್ನು ತವರಿಗೆ ಕಳಿಸುವುದೇ ಇಲ್ಲ. ಅಂಥ ಸಂದರ್ಭದಲ್ಲಿ ಅವಳು ಅನುಭವಿಸಿದ ನೋವು ಹೇಳತೀರದು. ದೈಹಿಕ ಭಾಧೆಯೊಂದಿಗೆ ಮಾನಸಿಕ ಬಾಧೆಯೂ ಕಾಡುತ್ತಿರುತ್ತದೆ. ತಾಯಿಯ ಹತ್ತಿರ ಹೇಳುವಂಥ ನೋವಿನ ನುಡಿ ಅತ್ತೆ, ಅತ್ತೆ ಮನೆಯವರ ಹತ್ತಿರ ಹೇಳಲಾಗದು. ಅತ್ತೆ ಎಷ್ಟೇ ಪ್ರೀತಿಯಿಂದ ನೋಡಿಕೊಂಡರೂ ಯಾವತ್ತೂ ಅವಳು ತಾಯಿಯಾಗಲಾರಳು. ತಾಯಿಯ ಸ್ಥಾನ ತುಂಬಲು ಯಾರಿಂದಲೂ ಸಾಧ್ಯವಿಲ್ಲ. ಅವಳ ಮುಖ ನೋಡಿದರೇನೆ ಅರ್ಧ ನೋವು ಕಡಿಮೆಯಾಗುವುದು. ಅವಳ ಮೆಲ್ನುಡಿ, ಪ್ರೀತಿ, ವಾತ್ಸಲ್ಯ, ಮಮತೆಯ ನುಡಿ ಕೇಳಿದಾಗ ಮಗಳಿಗೆ ಹೆರಿಗೆಯ ನೋವು ಕಾಣಿಸುವುದೇ ಇಲ್ಲವೆನಿಸುವಷ್ಟು ತಾಯಿ ಆತ್ಮೀಯಳು. ಮಗಳು ಹೆರಿಗೆ ನೋವಿನಿಂದ ನರಳುತ್ತಿದ್ದರೆ, ತಾಯಿ ಅವಳ ನೋವು ಕಂಡು ಅದಕ್ಕೂ ಹೆಚ್ಚು ನೋವು ಅನುಭವಿಸುವಳು. ಎಷ್ಟೋ ತಾಯಿಂದಿರು ಮಗಳ ನೋವು ನೋಡಲು ಸಾಧ್ಯವಾಗದೆ ಮರೆಯಾಗಿ ನಿಲ್ಲುವುದೂ ಉಂಟು.

ಕುಪ್ಪಸ ಮಾಡುವಾಗ ಕಲಗುರ್ಗಿ ಜಿಲ್ಲೆಯವರು ಈ ರೀತಿಯಾಗಿ ಹಾಡು ಹೇಳುವರು. ಬೀದರ ಜಿಲ್ಲೆಗಿಂತಲೂ ಅಲ್ಪ ಸ್ವಲ್ಪ ಬದಲಾವಣೆ ಭಾಷೆಯಲ್ಲಿ ಕಾಣುತ್ತೇವೆ. ಇಲ್ಲಿ ಸಂಪೂರ್ಣ ಆಡುಭಾಷೆಯನ್ನೇ ಹಾಡುಗಳು ಒಳಗೊಂಡಿರುತ್ತವೆ. ಆದರೆ ಅಲ್ಪ ಸ್ವಲ್ಪ ಗ್ರಾಂಥಿಕ ಭಾಷೆಯನ್ನು ಕಲಬೆರಕೆಯಾಗಿರುವುದು ಗಮನಕ್ಕೆ ಬರುವುದು.

ಇಂದ್ರ ಜಾನಕಿ ನಿನಗ ಚಂದ್ರ ಮೂಡಿದನೇನ
ನಾರಿ ಜಾನಕಿ ನಿನಗ ಸೂರ್ಯ ಮೂಡಿದನೇನ
ಎರಡಂಬ ತಿಂಗಳಿಗಿ ಎರಡೇನ ಬಯಸ್ಯಾಳ
ಕಡ್ಡಿಯ ಬಳಿ ಕೈತುಂಬ ಇಟ್ಟೆನೆಂಬುವಳ ॥ ಇಂದ್ರಜಾನಕಿ ॥

ಒಂಭತ್ತ ತಿಂಗಳಿಗಿ ತುಂಬ್ಯಾವ ದಿನಗಳು
ಚಂದ್ರನಂಥ ಮಗನ ಹಡದಾಳ ॥ ಇಂದ್ರಜಾನಕಿ ॥
ಇಂದ್ರ ಜಾನಕಿ ನಿನಗ ಚಂದ್ರ ಮೂಡಿದನೇನ
ನಾರಿ ಜಾನಕಿ ನಿನಗ ಸೂರ್ಯ ಮೂಡಿದನೇನ [೪೯]

ಕುಪ್ಪಸ ಮಾಡುವ ಸಮಾರಂಭ ಚೊಚ್ಚಿಲ ಬಸುರಿಗೆ ಮಾತ್ರ. ಮುಂದೆ ಅವಳು ಬಸುರಿಯಾದರೂ ಈ ಕಾರ್ಯಕ್ರಮ ಮಾಡುವುದಿಲ್ಲ. ಒಂಭತ್ತು ತಿಂಗಳಾದ ಮೇಲೆ ಹೆರಿಗೆಯಾಗಿ ಇನ್ನೊಂದು ಜೀವ ಜನಿಸಿ ಆ ಜೀವದ ಜೀವನ ಚಕ್ರ ಆರಂಭವಾಗುತ್ತದೆ. ಹಳೆಯ ಜೀವವು ಪಕ್ವವಾಗುತ್ತಾ ಹೋಗುತ್ತದೆ. ಹೀಗೆ ಮಹಿಳೆಯರು ಕಟ್ಟಿಕೊಡುವ ಜಾನಪದ ಹಾಡುಗಳು ಬಸುರಿಯಾದ ಹೆಣ್ಣಿನ ಬಯಕೆ, ತುಡಿತಗಳನ್ನು ಕಟ್ಟಿಕೊಡುತ್ತವೆ.

೩.೬ ಮರಣದ ಹಾಡುಗಳು:

ಸಾವು ಯಾರನ್ನೂ ಬಿಟ್ಟಿದ್ದಲ್ಲ. ವ್ಯಕ್ತಿಯೊಬ್ಬ ತೀರಿಕೊಂಡಾಗ ಅವರ ರಕ್ತ ಸಂಬಂಧಿಗಳು ಶವದ ಮೇಲೆ ಬಿದ್ದು ಹೊರಳಾಡುತ್ತ, ಎದೆಗುದ್ದಿಕೊಳ್ಳುತ್ತಾ, ರಾಗಾಲಾಪ ಮಾಡುತ್ತ ಲಯಬದ್ಧವಾಗಿ ಹೇಳುವಂಥ ಹಾಡುಗಳು ಅಥವಾ ಪದಗಳೆ ಮರಣದ ಹಾಡುಗಳಾಗಿವೆ. ಸಾವಿನ ಸಂದರ್ಭದಲ್ಲಿ ಮಾತ್ರ ಕೇಳಿಬರುವ ಈ ರಚನೆಗಳನ್ನು ಹಾಡುವರಲ್ಲಿ ಹೆಂಗಸರದ್ದೇ ಮೇಲುಗೈ. ಮೃತನ ಸಿದ್ಧಿ, ಸಾಧನೆ, ಧೈರ್ಯ, ಸ್ಥೈರ್ಯಾದಿಗಳನ್ನು ನೆನೆದುಕೊಂಡು ರಾಗಾಲಾಪ ಮಾಡುತ್ತಾರೆ. ಸಾವು ಮಾನವ ಬದುಕಿನ ಕೊನೆಯ ಘಟ್ಟವಾದ್ದರಿಂದ ಈ ಸಂದರ್ಭದಲ್ಲಿ ಹೊಗಳುವ ಪದಗಳಿಗೆ ವಿಶೇಷ ಮಹತ್ವವಿದೆ.

ಗಂಡನನ್ನು ಕಳೆದುಕೊಂಡ ಹೆಂಡತಿಯೊಬ್ಬಳು ಪ್ರಲಾಪಿಸುವ ಬಗೆ ಇಂತಿದೆ.

ಅಯ್ಯೋ ನನ್ನ ರಾಜಾ ನಿಮಗೇನು ಬಂದಿತ್ತು
ನನ್ನನ್ನು ಒಬ್ಬಳೇ ಮಾಡಿ ಬಿಟ್ಟು ಹೋದೆ
ಇನ್ನ ನಾ ಹ್ಯಾಂಗ್ ಮಾಡ್ಲಿ । ನಾ ಎಲ್ಲಿ ಹೋಗ್ಲಿ
ಯಾ ಗಿಡ ತಪ್ಪಲು ಮಾಡ್ಡಿ । ನಂಗಿನ್ನ್ಯಾರ ಗತಿ
ಶಿವ ಎಂಥ ಯ್ಯಾಳೆತಂದಾ । ನಡು ಮಧ್ಯಾಣದಾಗೆ
ಕತ್ತಲು ಮಾಡ್ದಿ । ನಾ ಯಾರ್ದೇನ್ ಕೆಟ್ಟದ್ದು ಮಾಡಿದ್ದ್ಯ
ನನಗ್ಯಾಕ್ ಈ ಶಿಕ್ಷಾ ಕೊಟ್ಟೆ । ನನ್ನ ಮಕ್ಕ ಮರಿಗೊಳಿಗೆ
ಯಾರ್ ಕೈಯ್ಯಾಗ ಕೊಟ್ಟೆ । ಯಾರೀಗೇನ್ ಹೇಳ್ದಿ
ನಂದು ಹ್ಯಾಂಗ್ ಆಗೇತಂದರ ಚಿಂತಿ ಬಂದಿಲ್ಲೇನು ನಿನಗ
ಹಿಂಗ್ ನಡು ನೀರಾಗ ಕೈ ಬಿಡ್ತೀರಂತ ಗೊತ್ತಿಲ್ದಂಗ್ ಆಯ್ತು
ನಾ ಮುಂದ ಹ್ಯಾಂಗ್ ಮಾಡ್ಲಿ । ಯಾರಿಗಿ ಹೆಳ್ಲಿ
ನಮ್ಮೆಲ್ಲಾ ಯಾರು ಆಸರಿ ಅಂತಾರೆ ನಿನಗ ಹೊಳದಿಲ್ಲೇನು?
ಮಕ್ಕಳದಾರ ವಿಚಾರ ಬಂದಿಲ್ಲೇನು? ಹೋಗಾಗ ಯಾರಿಗೇನ್
ಹೇಳ್ದಿ । ನಂಗೇನ್ ಹೇಳ್ದಿ । ನಿನ್ನ ಹಾದಿ ನೀ ಸುದ್ದ ಮಾಡ್ ಕೊಂಡಿ

ನಮ್ದೇನು? ಚಿಂತಿ ಬಂದಿಲ್ಲೇನು? ನಮಗೂ ಕರಕೊಂಡು
ಒಯ್ಯೆದಿತ್ತಲ್ಲೊ ನನ ರಾಜಾ । ನನ್ನ ಮುತ್ತೈದಿ ತನ ಕಳದಿಟ್ಟೆಲ್ಲಾ
ನನಗ ಮೂಲ್ಯಾಗ ಕೂಡಹಂಗ ಮಾಡ್ದೆಲ್ಲೊ ನನ್ನ ರಾಜಾ. [೫೦]

ಎಂದೆಲ್ಲಾ ರಾಗಬದ್ಧವಾಗಿ ಮನಸ್ಸಿಗೆ ಬಂದಂತೆ ಹುಯ್ಲಿಡುವ ವಿಧವೆಯ ಗೋಳು, ಕಕ್ಕುಲತೆ ನೋವು ಎಲ್ಲವೂ ಇಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಳ್ಳುವುದು. ವ್ಯಕ್ತಿಯೊಬ್ಬ ಸತ್ತಾಗ ಒಬ್ಬರು ಇನ್ನೊಬ್ಬರ ಕೊರಳು ಕಟ್ಟಿಕೊಂಡು ಅಳುವುದರಿಂದ ಪರಸ್ಪರರು ನೋವು ನಿರಾಶೆಯ ಭಾವಗಳನ್ನು ಹೊರಹಾಕಲು ಒಂದು ಮಾರ್ಗದೊರೆತು ದು:ಖದ ಭಾರ ಕಡಿಮೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಮರಣದ ಸಂದರ್ಭದಲ್ಲಿ ಹಾಡುವ ಈ ರಚನೆಗಳು ಗಮನಾರ್ಹವಾಗಿವೆ.

ಸತ್ತಾಗ ಹಾಡಿದಂತೆ ಹೇಳುತ್ತ ಅಳುತ್ತ ಹೃದಯದ ತಳಮಳ, ಆಕ್ರೋಶ, ನೋವು, ನಿರಾಶೆ, ಆಕಸ್ಮಿಕ ಘಟನೆಯ ಒತ್ತಡ ಮುಂತಾದವುಗಳನ್ನು ಈ ಹಾಡುಗಳಲ್ಲಿ ಕಾಣಬಹುದು. ಅದು ಇನ್ನೂ ಉಳಿದಿರುವುದು ಮುಗ್ಧ ಹಳ್ಳಿಯ ಹೆಣ್ಣು ಮಕ್ಕಳಲ್ಲಿ ಮಾತ್ರ. ಈ ರೀತಿ ರಾಗ ಲಯಬದ್ಧವಾಗಿ ಹಾಡುತ್ತ ಅಳುವುದಕ್ಕೆ ಎಲ್ಲರಿಗೂ ಬಾರದು. ಕೇವಲ ಕೆಲವರಿಗೆ ಮಾತ್ರ ಹಾಡಿಕೊಂಡು ಅಳುವುದಕ್ಕೆ ಸಾಧ್ಯವಾಗುವುದು. ಸತ್ತಾಗ ಅತ್ತರೇನೆ ಹೆಣಕ್ಕೆ ಕಳೆ ಎಂದು ಜನಪದರ ಅನಿಸಿಕೆ ಅಂತೆಯೇ "ಅತ್ತರೆ ಹೆಣ ಚೆಂದ, ನಕ್ಕರೆ ಮದುವೆ ಚೆಂದ" ಎಂಬ ನಾಣ್ನುಡಿ ಇದೆ.

ಸಾವು ಪ್ರತಿಯೊಬ್ಬರಿಗೂ ಕೊನೆಯ ಘಟ್ಟ. ಇಲ್ಲಿ ಈ ವ್ಯಕ್ತಿಯನ್ನು ತೆಗಳುವುದರಿಂದ ಏನೂ ಪ್ರಯೋಜನವಿಲ್ಲವೆನ್ನುವ ಮನೋಭಾವದಿಂದ, ಅವನು ಎಷ್ಟೇ ಕೆಟ್ಟವನಾಗಿದ್ದರೂ ತೆಗಳದೆ ಹೊಗಳುವ ಮನೋಭಾವ ಜನಪದರದಾಗಿದೆ. ಹೆತ್ತವರ ಹಾಡು, ಹೃದಯದ ತಳಮಳ, ಆಕ್ರೋಶ, ನೋವು, ನಿರಾಶೆ ಮತ್ತು ಚಿಂತೆಯಿಂದ ತುಂಬಿಕೊಂಡಿರುತ್ತದೆ. ಜನಪದರ ಸತ್ತವರ ಹಾಡುಗಳು ವಿವಿಧ ಅವಸ್ಥೆಯನ್ನು ಪಡೆದುಕೊಂಡಿದೆ. ಮುಸ್ಲಿಂ ಜನಾಂಗದ ವ್ಯಕ್ತಿ ಸತ್ತಾಗ ಮನೆಯಲ್ಲಿಯೇ ಅಳುವ ಪದ್ಧತಿ ಇದೆ. ಇತರ ವರ್ಗದ ವ್ಯಕ್ತಿ ಸತ್ತಾಗ ಮನೆಯಿಂದ ಸ್ಮಶಾನದ ವರೆಗೆ ಅಳುತ್ತಲೆ ಹೋಗುತ್ತಾರೆ. ಇಂಥ ಸಮಯದಲ್ಲಿ ಹೆಣ್ಣು ಮಕ್ಕಳ ಪಾತ್ರ ಪ್ರಮುಖವಾಗಿರುತ್ತದೆ. ಒಟ್ಟಿನಲ್ಲಿ ಚಿಂತೆ ದುಃಖದ ಭಾರ ಇಳಿಸಿಕೊಳ್ಳುವ ದೃಷ್ಟಿಯಿಂದ ಸತ್ತ ಮೇಲೆ ಅಳುವ ಪದ್ಧತಿ ಇನ್ನು ಹಳ್ಳಿಗಳಲ್ಲಿ ಹಸಿರಾಗಿದೆ. ನಗರ ಪಟ್ಟಣಗಳಲ್ಲಿ ಕೊಂಚ ಕಡಿಮೆಯಾಗಿದೆ. ಒಟ್ಟಿನಲ್ಲಿ ಸತ್ತವರ ಶವಸಂಸ್ಕಾರ ಪದ್ಧತಿ ಮತ್ತು ಹಾಡುಗಳು (ಶೋಕಗೀತೆಗಳು) ಆಯಾ ಸಮಾಜ, ಜನಾಂಗ, ಮತ್ತು ಸತ್ತ ವ್ಯಕ್ತಿಯ ವಯಸ್ಸಿನ ಮೇಲೆ ಪ್ರತಿಬಿಂಬಿಸಿವೆ. ದು:ಖ ಆವೇಶದ ರಾಗಾಲಾಪ ಮಾಡುವ ಬಗ್ಗೆ ತೀರ ಭಿನ್ನವೆನಿಸಿದೆ. ಜನರಿಂದ ಹುಟ್ಟಿದ ಸತ್ತವರ ಹಾಡುಗಳು ಸಂಗ್ರಹ ಕಾರ್ಯ ಇಲ್ಲಿ ಮಾಡಲಾಗಿದೆ.

ಹನ್ನೆರಡು ವರ್ಷದ ಕಾಳಿಂಗರಾಯ ತಂದೆ-ತಾಯಿಯರ ಮಾತುಮೀರಿ ದಂಡು ಸಮೇತ ಅರಣ್ಯಕ್ಕೆ ಹೋಗುತ್ತಾನೆ. ಅರಣ್ಯದಲ್ಲಿ ನೀರಡಿಕೆಯಾಗಿ ಬಾವಿಯೊಂದರಲ್ಲಿ ಮೂರು ಗುಟುಕು ನೀರು ಕುಡಿದು ಮೇಲೆ ನೋಡಿದಾಗ ಚಿತ್ರದ ಹುಲಿಯನ್ನು ಕಂಡು ಮಡಿಯುತ್ತಾನೆ. ಸುದ್ದಿ ತಿಳಿದ ತಂದೆ-ತಾಯಿಗಳು ಮದುವೆ ಮಾಡಬೇಕೆಂದು, ಹೊನ್ನಿನ ಆಸೆ ತೋರಿಸಿ ಸತ್ತ ಮಗನಿಗೆ ಹೆಣ್ಣು ಕೊಡಿರೆಂದು ಸಾರಿಕೊಂಡು ಹೋಗುತ್ತಾರೆ. ಕೊನೆಗೆ ಹಾರೂರಗೇರಿಯಲ್ಲಿದ್ದ ಒಬ್ಬ ಬಡವ ಹೊನ್ನಿನ ಆಸೆಗಾಗಿ ಮಗಳನ್ನು ಕೊಡಲು ಮುಂದಾಗುತ್ತಾನೆ. ಹಣೆಬರಹ ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲೆಂದು ಸತ್ತ ಹೆಣದೊಂದಿಗೆ ಮದುವೆಯಾಗುತ್ತಾಳೆ. ಆಗ ಯಾರೂ ಅವಳಿಗೆ ಮುಟ್ಟಿ ಮಡವೇ ವಸ್ತ್ರ, ಸೀರೆ, ಕೊಡುವುದಿಲ್ಲ. ದೂರದಿಂದಲೇ ಕೊಟ್ಟು ಉಟ್ಟಿಕೋ ಎಂದು ಹೇಳುವರು. ಆಗ ಆಕೆ ಅವರು ಹೇಳಿದಂತೆ ಮಾಡಿ ಈ ರೀತಿ ದು:ಖಿಸುತ್ತಾಳೆ.

ಸಿರ್‍ಯಾರ ತಂದಾರೋ ಬಸವ
ಉಟ್ಟಿಕೋ ಅಂತಾರೋ ಬಸವ
ನಮ್ಮಗ ಮುಟ್ಟಿ ಉಡ್ಸವರಿಲ್ಲೊ ಬಸವ
ನಮ್ಮ ದೈವ ಕೇಳರಿ ಚನ್ನ ಬಸವ
ಜಯದೇವ ಜಯ ಚನ್ನ ಬಸವ
ನಮ್ಮ ದೈವ ಕೇಳರಿ ಚನ್ನ ಬಸವ

. . . .

ಉಡಿಯಕ್ಕಿ ತಂದಾರೋ ಬಸವ
ದೂರಿಂದೆ ಇಟ್ಟಾರೋ ಬಸವ
ಹಾಕಿಕೊಳ್ಳಂತಾರೋ ಬಸವ ನಮ್ಗ
ಮುಟ್ಟಿ ಹಾಕೋರಿಲ್ಲೊ ಬಸವ ನಮ್ಮ
ದೈವ ಕೇಳರಿ ಚೆನ್ನ ಬಸವ
ಜಯದೇವ ಜೈ ಚೆನ್ನ ಬಸವ
ನಮ್ಮ ದೈವ ಕೇಳರಿ ಚೆನ್ನ ಬಸವ [೫೧]

ಈ ರೀತಿ ಸತ್ತ ದೇಹದೊಂದಿಗೆ ಮದುವೆಯಾದ ಹೆಂಡತಿ ತನ್ನ ಪರಿಸ್ಥಿತಿಯನ್ನು ವಿವರಿಸುತ್ತ, ತನ್ನ ದೈವವನ್ನು ಹಳಿಯುತ್ತ ಮನಕರಗುವಂತೆ ಪ್ರಲಾಪಿಸುವಳು. ನೆರೆದವರ ಕಣ್ಣಲ್ಲಿ ಧಾರಾಕಾರವಾಗಿ ನೀರು ಸುರಿಯುತ್ತಿದೆ. ಅವಳ ಅಸಾಹಾಯಕತೆಯನ್ನು ಕಂಡು ಮರಗುವರು. ವಿಧಿ ಲಿಖಿತಕ್ಕೆ ವಿಧಿಯನ್ನು ಕುರಿತು ಶಪಿಸುವರು. "ತಾನೊಂದು ಬಗೆದರೆ ಮಾನವ ವಿಧಿಯೊಂದು ಬಗೆಯಿತು ದೈವ" ಎನ್ನುವಂತೆ ಅವಳ ಕನಸೆಲ್ಲ ನುಚ್ಚು ನೂರಾಗಿ ಹೆಣದೊಂದಿಗೆ ಮದುವೆಯಾಗುವ ಸಂದರ್ಭ ಬಂದೊದಗುವುದು. ಅದಕ್ಕಾಗಿ ಹಿಂದಿಯಲ್ಲಿ ಒಂದು ಗಾದೆ ಹೆಳುವರು "ಬ್ರಹ್ಮ ಲಿಪಿ ಕಭಿ ನ ಚುಕಿ" ಅಂದರೆ ಬ್ರಹ್ಮನ ಬರಹ ಎಂದಿಗೂ ತಪ್ಪದು ಎಂದು.

ತಾಯಿ ಸತ್ತಾಗ ಮಗಳು. ಮಗ ಅಳುವುದು ಹೀಗೆ

ಅವ್ವ ಅವ್ವ ಎಲ್ಲಿ ಹೋದಿ
ಕಿರಿಕಿರಿ ಮಾಡುತ್ತ ಕಷ್ಟವು ಬೀರುತ್ತ
ಎತ್ತಿಕೊಂಡು ಮುದ್ದಾಡಿದಲ್ಲೆ ತಾಯಿ
ಹೆಪ್ಪ ಮುರದು ಮೊಸರುಣಿಸಿದಲ್ಲೆ ತಾಯಿ
ಹಾಲು-ಸಕ್ಕರಿ ಬಾನಾ ಉಣ್ಣಿಸಿ
ಕಿರಿ ಕಿರಿ ಮಾಡಬ್ಯಾಡಂತ ಹೇಳ್ತಿದ್ದಿ
ಅವ್ವಾ ಇನ್ನಾರ್ ಹೇಳ್ತಾರವ್ವ ऽऽऽ
ರಾತ್ರಿ ಮನಿಗಿ ಜಲ್ದಿ ಬರಬೇಕಂತ ಹೇಳಿ ಕಳಿಸ್ತಿ
ದುಶ್ಚಟ ಹಿಡಿಬ್ಯಾಡ ಅಂತ ಹೇಳಿ
ಮಲಗಿಸ್ತಿದ್ದಿ ಅವ್ವಾ [೫೨]

ತಾಯಿ ಸತ್ತಾಗ ಮಗಳು ಅಳುತ್ತಿರುವದು:

ನನ್ನ ಬಿಟ್ಟು ನೀ ಎಲ್ಹೋದೆ ಯವ್ವಾ
ನಾ ನಿನ್ನ ತವರಿಗಿ ಹ್ಯಾಂಗ ಬರಲೇ ಯವ್ವಾ

ನಾ ಬಂದಾಗ ನೀ ಎದುರಿಲ್ಲಂದ್ರ ನಾ ಹುಡ್ಕುತಿದ್ದೆಲ್ಲೆ ಯವ್ವಾ
ಈಗ ನಾ ಯಾರಿಗಿ ಹುಡುಕ್ಲೆ ಯವ್ವಾ

ಹಬ್ಬ ಹುಣ್ಣಿಗಿ ಯಾರ್ ಕರಸ್ತಾರೆ ಯವ್ವಾ
ನಾ ಯಾರ್ ಕಡ್ ಹಾದಿ ನೋಡಲೇ ಯವ್ವಾ
ದುನೇದಾಗ ತವರು ಅಂಬೋದು ಕಡಿತಲ್ಲೆ ಯವ್ವಾ
ನಾ ಹ್ಯಾಂಗ್ ಮಾಡ್ಲೆ ಯವ್ವಾ ನಾ ಹ್ಯಾಂಗ್ ಮಾಡ್ಲೆ ಯವ್ವಾ [೫೩]

ಈ ಹಾಡುಗಳು ಕರಳು ಕತ್ತರಿಸುವ ಖಡ್ಗದಂತಿವೆ. ಗುಡುಗಿನಂತೆ ಗುಡುಗುವ ಕಾರ್ಮೋಡದಂತಿವೆ. ನೋವು–ನಿರಾಶೆಯ ಬಿಸಿಲಿನಂತಿವೆ. ಈ ಜನಪದರ ಸತ್ತವರ ಹಾಡುಗಳು ವಿವಿಧ ಆವಸ್ಥೆಯನ್ನು ಪಡೆದುಕೊಂಡಿವೆ. ಈ ಹಾಡುಗಳು ಮನುಷ್ಯನ ಮಾನವೀಯ .ಗುಣಗಳನ್ನು ಹಾಗೂ ಆತನ ಗುಣಗಳನ್ನು ಪ್ರತಿನಿಧಿಸುತ್ತವೆ. ಈ ವೇದನೆ ಹೆಚ್ಚಾಗಿ ಒಡಮೂಡುವುದು ಮಹಿಳೆಯರಲ್ಲಿ. ಆದ್ದರಿಂದಲೇ ಇವರಿಗೆ 'ಹೆಂಗರುಳು' ಎಂದು ಕರೆಯುತ್ತಾರೆ. ಈ ಹಾಡುಗಳು ಮಹಿಳೆಯ ಸೃಷ್ಟಿಯಾಗಿದ್ದು, ಜಾನಪದ ಹಾಡುಗಳಲ್ಲಿ ಇವು ಕೂಡ ಒಂದು ಪ್ರಕಾರವಾಗಿ ಕಂಡುಬರುತ್ತವೆ. ಹೀಗೆ ಜಾನಪದರು ಮಾನವ ಜೀವನದ ಪ್ರತಿಯೊಂದು ಘಟನೆಗಳನ್ನು ಮೌಖಿಕ ಪ್ರಕಾರವಾದ ಜಾನಪದ ಹಾಡುಗಳ ಮೂಲಕ ವ್ಯಕ್ತಪಡಿಸುತ್ತ ಬಂದಿದ್ದಾರೆ. ಈ ಹಾಡುಗಳು ಗತಕಾಲದ ಬದುಕಿನ ಜೀವನ ಮೌಲ್ಯಗಳನ್ನು ಅರಿಯುವುದಕ್ಕೆ ಸೂಕ್ತವಾದ ಆಕರಗಳಾಗಿ ಕಂಡುಬರುತ್ತವೆ.

ಕೊನೆ ಟಿಪ್ಪಣಿ:

೧) ಗುಲ್ಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು : ಡಾ. ಯಶೋಧರಾ ಶಾಸ್ತ್ರಿ ಪುಟ: ೧೫೪
೨) ಹೈದ್ರಾಬಾದ ಕರ್ನಾಟಕದ ಜನಪದ ಸಹಿತ್ಯ: ಡಾ. ಬಸವರಾಜ ಪೋಲಿಸ್ ಪಾಟೀಲ: ಪುಟ: ೧೧೦, ೧೧೧
೩) ಗದಗಿಮಠರ ಬರಹಗಳು: ಡಾ.ಬಿ.ಎಸ್. ಗದ್ದಗಿಮಠ : ಪುಟ: ೧೩೬
೪) ಮಾಹಿತಿ: ಶ್ರೀದೇವಿ ಬಾಬುರಾವ ಬುಕ್ಕಾ ಹಿಪಳ್‌ಗಾಂವ್ (ತಾ॥ ಔರಾದ) ವಯಸ್ಸು: ೫೩
೫) ರಾಜೇಶ್ವರಿ ಕಮಲಾಕರ್ ಮೇತ್ರೆ – ಕಬೀರಾಬಾದ ವಾಡಿ (ತಾ.ಹುಮನಾಬಾದ) ವಯಸ್ಸು: ೩೫
೬) ಮಾಹಿತಿ: ಶಿವರುದ್ರಯ್ಯಾ ಸ್ವಾಮಿ ಲಖನ್‌ಗಾವ್ (ತಾ॥ ಭಾಲ್ಕಿ): ವಯಸ್ಸು: ೫೩
೭) ಮಾಹಿತಿ: ಜ್ಯೋತಿಲಕ್ಷ್ಮಿ ಕಲಶೆಟ್ಟಿ ಹಿಪ್ಪಳ್‌ಗಾಂವ್ (ತಾ॥ಔರಾದ) ವಯಸ್ಸು: ೪೩
೮) ಸಾಹಿತ್ಯ ಜ್ಯೋತಿ: ಸಂ: ವಿರಶೆಟ್ಟಿ ಬಾವುಗೆ: ಪುಟ: ೩೯,೪೦
೯) ಜಾನಪದ ಸಮಾಲೋಕನ : ಡಾ.ಎಂ.ಜಿ. ಬಿರಾದಾರ: ಪುಟ: ೭೧
೧೦) ಮಾಹಿತಿ: ಲಲಿತಾಬಾಯಿ ಕಲ್ಲಪ್ಪಾ ಲದ್ದಿ: (ತಾ॥ಔರಾದ) ವಯಸ್ಸು: ೪೬
೧೧) ಜನಪದ ಮುಕ್ತಕಗಳು: ಎಚ್.ಎಮ್. ನಾರಾಯಣರಾವ್ : ಪುಟ: ೩೨
೧೨) ಮಾಹಿತಿ: ಗದ್ದಗಿಮಠರ ಬರಹಗಳು: ಡಾ.ಬಿ.ಎಸ್. ಗದ್ದಗಿಮಠರ – ಪುಟ: ೧೩೭
೧೩) ಮಾಹಿತಿ: ಕಲಾವತಿ, ರಾವಸಾಬ, ತೇಲಗಾಂವ (ಭಾಲ್ಕಿ) ವಯಸ್ಸು: ೫೧
೧೪) ಸೋಜಲ್‌ಬಾಯಿ ವಿಠ್ಠಲರಾವ್ ಭಾಡಸಂಗವಿ (ಭಾಲ್ಕಿ) ವಯಸ್ಸು: ೪೫
೧೫) ಲಕ್ಷ್ಮೀಬಾಯಿ ಶೇಷರಾವ ಜಾಧವ್ ಭಾಲ್ಕಿ – ವಯಸ್ಸು: ೭೦
೧೬) ಗುಲ್ಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು – ಡಾ: ಯಶೋಧರಾ ಶಾಸ್ತ್ರೀ ಪುಟ: ೨೯
೧೭) ಸಂಗಮ್ಮಾ ಬಸಪ್ಪಾ ನಾಗಬಟ್ಟೆ – ಕಣಜಿ – (ಭಾಲ್ಕಿ) ವಯಸ್ಸು: ೫೮
೧೮) ಜಾನಪದ ಸಮಾಲೋಕನ – ಡಾ. ಎಂ.ಜಿ. ಬಿರಾದಾರ – ಪುಟ: ೭೧

೧೯) ಜಾನಪದ ಕಾವ್ಯ ಪ್ರಥಮ ವಿಮರ್ಶೆ – ಡಾ. ವೀರಣ್ಣಾ ದಂಡೆ –ಪುಟ: ೫

೨೦) ಇಂದುಮತಿ ಭೀಮಶಾ ಇಚೆಡಿ – ಹಳ್ಳಿಖೇಡ್ (ಕೆ) (ಹುಮನಾಬಾದ) ವಯಸ್ಸು: ೫೩

೨೧) ಗುಲ್ಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು – ಡಾ. ಯಶೋಧರಾ ಶಾಸ್ತ್ರೀ: ಪುಟ: ೩೬,೩೭

೨೨) ರೇಣುಕಾ, ರವಿಂದ್ರಕುಮಾರ – ಭಾತಂಬ್ರಾ (ಭಾಲ್ಕಿ) ವಯಸ್ಸು: ೩೬

೨೩) ಗುಲ್ಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು – ಡಾ. ಯಶೋಧರಾ ಶಾಸ್ತ್ರಿ ಪುಟ: ೪೬,೪೭

೨೪) ಸ್ನೇಹಾ, ಕ್ರಾಂತಿಕೂಮಾರ – ರಾಮತೀರ್ಥವಾಡಿ – ವಯಸ್ಸು – ೪೭

೨೫) ಶ್ವೇತಾ ಶರತ್‌ಕುಮಾರ – ಭಾತಂಬ್ರಾ – ವಯಸ್ಸು: ೩೮

೨೬) ಸುರೇಖಾಬಾಯಿ, ಸಂಜೀವಕೂಮಾರ – ರಾಮತೀರ್ಥವಾಡಿ – ವಯಸ್ಸು : ೪೮

೨೭) ಸಂಜೀವಿನಿ ಸುರೇಶಕೂಮಾರ – ಬೀದರ – ವಯಸ್ಸು: ೪೯

೨೮) ರೇಣುಕಾ ಸಂಜೀವಿನಿ ಸುರೇಶಕೂಮಾರ – ಬೀದರ – ವಯಸ್ಸು: ೪೯

೨೯) ಮಂಜುಳಾಬಾಯಿ ರಮೇಶಕುಮಾರ ಕದಲಾಬಾದ (ಭಾಲ್ಕಿ) ವಯಸ್ಸು: ೪೮

೩೦) ಶೋಭಾವತಿ ಅಮೃತರಾವ ರುಮ್ಮಾ – ಕಲವಾಡಿ (ಭಾಲ್ಕಿ) ವಯಸ್ಸು: ೫೧

೩೧) ಮಹಾನಂದಾ ರಾಜಕುಮಾರ ರುಮ್ಮಾ– ಕಲವಾಡಿ (ಭಾಲ್ಕಿ) ವಯಸ್ಸು: ೫೩

೩೨) ಜಾನಪದ ಸಮಾಲೋಕನ – ಡಾ: ಎಂ.ಜಿ. ಬಿರಾದಾರ – ಪುಟ: ೭೨

೩೩) ಹೈ. ಕ. ಜನಪದ ಸಾಹಿತ್ಯ, ಡಾ: ಬಸ್ವರಾಜ ಪೋ. ಪಾಟೀಲ್ – ಪುಟ:೪ ೨೧೫

೩೪) ಗಂಗೂಬಾಯಿ ಸುನಿಲಕೂಮಾರ ಜಾನಾಪುರಕರ್ – ಬ. ಕಲ್ಯಾಣ – ವಯಸ್ಸು: ೭೨

೩೫) ಜನಪದ ಮುಕ್ತಕಗಳು" – ಎಚ್.ಎಮ್. ನಾರಾಯಣರಾವ – ಪುಟ: ೧೫

೩೬) ಉಮಾದೇವಿ ಶಿವಪುತ್ರಪ್ಪಾ ಡಿಗ್ಗಿಕರ್ – ಡಿಗ್ಗಿ (ಔರಾದ) ವಯಸ್ಸು: ೫೨

೩೭) ಲಕ್ಷ್ಮೀಬಾಯಿ ಲಕ್ಷ್ಮಣರಾವ ಹುಣಜಿ (ಭಾಲ್ಕಿ) ವಯಸ್ಸು: ೪೮

೩೮) ಗೀತಾದೇವಿ ಪ್ರಸನ್ನಕುಮಾರ ಸಜ್ಜನಶೆಟ್ಟಿ – ಕಮಲನಗರ್ (ಔರಾದ) ವಯಸ್ಸು: ೩೮

೩೯) ಹೈ.ಕ. ಜನಪದ ಸಾಹಿತ್ಯ – ಡಾ: ಬಸವರಾಜ ಪೊ. ಪಾಟೀಲ – ಪುಟ: ೨೨೩

೪೦) ಮಾಹಿತಿ: ಸರಸ್ವತಿ ಬಾಬುರಾವ ಬಿರಾದಾರ – ದುಬಲಗುಂಡಿ (ಹುಮನಾಬಾದ) ವಯಸ್ಸು: ೫೨

೪೧) ಗುಲ್ಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು: ಡಾ: ಯಶೋಧರಾ ಶಾಸ್ತ್ರಿ: ಪುಟ: ೮೦

೪೨) ಕನ್ನಡ ಜಾನಪದ ಗೀತೆಗಳು" ಡಾ: ಬಿ.ಎಸ್. ಗದ್ದಗೀಮಠ – ಪುಟ: ೮೪

೪೩) ಕನ್ನಡ ಜಾನಪದ ಗೀತೆಗಳು – ಡಾ ಬಿ.ಎಸ್. ಗದ್ದಗೀಮಠ: ಪುಟ: ೮೪

೪೪) ಕನ್ನಡ ಜಾನಪದ ಗೀತೆಗಳು – ಡಾ ಬಿ.ಎಸ್. ಗದ್ದಗೀಮಠ: ಪುಟ: ೮೪

೪೫) ವಿಜಯಲಕ್ಷ್ಮೀ ಅಮೃತರಾವ ರಂಜೇರಿ ಧನ್ನೂರ (ಬಿ) – ವಯಸ್ಸು: ೫೩

೪೬) ಗಂಗೂಬಾಯಿ, ಶಿವಾಜಿರಾವ, ಜಾಧವ್ – ಕಮಲನಗರ – ವಯಸ್ಸು: ೫೩

೪೭) ಸುಶೀಲಾಬಾಯಿ ನವನಾಥ ಬುಕ್ಕಾ – ಹಿಪ್ಪಳಗಾಂವ (ಔರಾದ (ಬಿ)) ವಯಸ್ಸು: ೭೨

೪೮) ಉಮಾದೇವಿ ಶಿವಪುತ್ರಪಪಾ ಡಿಗ್ಗಿಕರ್, ಡಿಗ್ಗಿ (ಔರಾದ) ವಯಸ್ಸು: ೫೫

೪೯) ಗುಲ್ಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು – ಡಾ: ಯಶೋಧರಾ ಶಾಸ್ತ್ರಿ – ಪುಟ: ೮೦

೫೦) ಮಾಹಿತಿ: ನಾಗಮ್ಮಾ ಪ್ರಕಾಶ ಬಾಲಕುಂದಾ (ಬಸವಕಲ್ಯಾಣ) ವಯಸ್ಸು: ೫೭

೫೧) ಮಾಹಿತಿ: ಚಿಮಣಾಬಾಯಿ ವಿರಶೆಟ್ಟಿ ಕರೆಪ್ಪನೂರ್ – ನಿಟ್ಟೂರ (ಬಿ) ವಯಸ್ಸು: ೬೯

೫೨) ಸತ್ತವರ ಹಾಡುಗಳು – ಡಾ: ಜಗನ್ನಾಥ ಹೆಬ್ಬಾಳೆ (ಸಂ) ಪುಟ: ೪೦–೪೧

೫೩) ಮಾಹಿತಿ: ಶೋಭಾವತಿ ಅಮೃತರಾವ ರುಮ್ಮಾ – ಬೀದರ್ – ವಯಸ್ಸು: ೬೫

ಅಧ್ಯಾಯ: ನಾಲ್ಕು

ವಾರ್ಷಿಕಾವರ್ತನದ ಆಚರಣಾ ಹಾಡುಗಳ ವಿಶ್ಲೇಷಣೆ

೪.೧ ಬುಲಾಯಿ ಹಾಡುಗಳು.

೪.೨ ಶೀಗಿ ಹಾಡುಗಳು.

೪.೩ ಗೌರಿ ಹಾಡುಗಳು.

೪.೪ ಎಳ್ಳಾಮಾವಾಸ್ಯೆಯ ಹಾಡುಗಳು.

೪.೫ ಆರತಿ ಹಾಡುಗಳು.

ಅಧ್ಯಾಯ: ನಾಲ್ಕು

ವಾರ್ಷಿಕಾವರ್ತನದ ಆಚರಣಾ ಹಾಡುಗಳ ವಿಶ್ಲೇಷಣೆ:

ಭಾರತೀಯ ಜನಪದರ ಜೀವನದಲ್ಲಿ ಹಬ್ಬಗಳಿಗೆ ಅಪಾರವಾದ ಮಹತ್ವವಿದೆ. ಜನಜೀವನದಲ್ಲಿ ಹಬ್ಬಗಳು ಮಹತ್ತರವಾದ ಪಾತ್ರವಹಿಸುತ್ತವೆ. ಜನಸಾಮಾನ್ಯರು ಹಬ್ಬದ ದಿನವು ಪವಿತ್ರ ದಿನವೆಂಬುದಾಗಿಯೂ ಭಾವಿಸುತ್ತಾರೆ. ಅಂದು ಒಳ್ಳೆಯ ನಡೆ-ನುಡಿಯಿಂದ, ಸ್ವಚ್ಛತೆಯಿಂದಿರಲೂ ಎಚ್ಚರಿಕೆ ವಹಿಸುವರು. ಆ ದಿನ ಒಳ್ಳೆಯ ರೀತಿಯಿಂದ ನಡೆದುಕೊಂಡರೆ ಇಡೀ ವರ್ಷ ಹಾಗೆಯೇ ಸಾಗುತ್ತದೆ. ಇಲ್ಲವಾದರೆ ಇಡೀ ವರ್ಷ ಸಂಕಷ್ಟಗಳ ಸರಮಾಲೆಯನ್ನು ಅನುಭವಿಸಬೇಕಾಗುತ್ತದೆ ಎಂಬುದಾಗಿ ಭಾವಿಸುತ್ತಾರೆ. ಹಬ್ಬಗಳು ಧಾರ್ಮಿಕ ದೃಷ್ಟಿಯಿಂದ ಹೆಚ್ಚಿನ ಪ್ರಾಮುಖ್ಯತೆ ಪಡೆದಿವೆ. ಅಂದು ಪೂಜೆ ಪುನಸ್ಕಾರ ಹಾಗೂ ಪ್ರಾರ್ಥನೆಗೆ ಅಪಾರವಾಗಿ ಅವಕಾಶವಿರುತ್ತದೆ. ವಿವಿಧ ದೇವ-ದೇವತೆಗಳನ್ನು ಪೂಜಿಸಲಾಗುತ್ತದೆ. ಧಯೆ, ದಾನ, ಧರ್ಮ, ಕರುಣೆ ಹಾಗೂ ಅನುಕಂಪದಿಂದ ಪರಿವರ್ತಿಸಲಾಗುತ್ತದೆ. ಜನರು ಸ್ನಾನಮಾಡಿ ಮಡಿಬಟ್ಟೆಯನ್ನುಟ್ಟು ಶುಚಿಯಾಗುತ್ತಾರೆ. ಹಬ್ಬದ ದಿನ ಕೆಟ್ಟ ಆಲೋಚನೆ ದುಷ್ಟ-ವರ್ತನೆಗಳನ್ನು ತಂದುಕೊಳ್ಳುವುದಿಲ್ಲ. ಒಂದು ಧಾರ್ಮಿಕ ಸಭೆ ಸಮಾರಂಭಗಳನ್ನು ಏರ್ಪಡಿಸಿ, ಹರಿಕಥೆ, ಶಿವಕಥೆ, ಸಂಗೀತಕಛೇರಿ ಮೊದಲಾದ ಉಪಯುಕ್ತ ಉತ್ತಮ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಎಲ್ಲೆಲ್ಲಿಯೂ ಆಧ್ಯಾತ್ಮಿಕ ವಾತಾವರಣ ಕಂಡುಬರುತ್ತದೆ. ಜನರು ವ್ಯವಹಾರಗಳಿಗಿಂತ ಪಾರಮಾರ್ಥಿಕ ಚಿಂತನೆಗಳಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿರುತ್ತಾರೆ. ಮಠ ಮಂದಿರಗಳಿಗೆ ಭಕ್ತಿ ಭಾವದಿಂದ ಮತ್ತು ಸದ್ಭಾವನೆಗಳಿಂದ ನಡೆದುಕೊಳ್ಳುವರು.

ಜನಪದರ ಜೀವನದಲ್ಲಿ ಹಬ್ಬಗಳು ಸಾಮಾಜಿಕ ದೃಷ್ಟಿಯಿಂದಲೂ ಹೆಚ್ಚಿನ ಪ್ರಾಮುಖ್ಯತೆ ಪಡೆದಿವೆ. ಹಬ್ಬದ ದಿನದಂದು ವಿವಿಧ ಜಾತಿಯ ಜನ ಪರಸ್ಪರ ಬೆರೆಯುತ್ತಾರೆ. ಅದು ಅವರ ನಡುವೆ ಇರಬಹುದಾದ ಬಿಗುವು ಕಡಿಮೆ ಮಾಡಿಕೊಳ್ಳಲು ನೆರವಾಗುತ್ತದೆ. ಜನರು ಒಬ್ಬರ ಮನೆಗೊಬ್ಬರು ಭೇಟಿಕೊಟ್ಟು ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಅನೇಕ ಹಬ್ಬಗಳಲ್ಲಿ ಜನರ ವೈಯಕ್ತಿಕ ಕಾರ್ಪಣ್ಯಗಳನ್ನು ಮರೆತು ಆನಂದವಾಗಿ ಕಾಲ ಕಳೆಯುತ್ತಾರೆ. ಸಣ್ಣ ಪುಟ್ಟ ವೈಮನಸ್ಸುಗಳು ಮರೆತು ಸ್ನೇಹದಿಂದ, ಪ್ರೀತಿ ಸಹಕಾರದಿಂದ ಕೂಡಿ ಬಾಳುವ ತುಂಬು ಮನಸ್ಸಿನಿಂದ ನಡೆದುಕೊಳ್ಳುತ್ತಾರೆ. ಹೆಣ್ಣು ಮಕ್ಕಳು ಹತ್ತಿರದ ಬಂಧುಗಳು ಹಾಗೂ ದೂರದ ಸಂಬಂಧಿಕರು, ಗ್ರಾಮದ ಎಲ್ಲಾ ಜನರು ಆಪ್ತೇಷ್ಟರೊಡನೆ ಕೂಡಿ ಆನಂದದಿಂದ ಕಾಲ ಕಳೆಯುತ್ತಾರೆ. ಹೀಗಾಗಿ ಹಬ್ಬದ ದಿನದಂದು ಇಡೀ ಗ್ರಾಮವು ಸಂತೋಷದಾಯಕ ವಾತಾವರಣದಿಂದ ತುಂಬಿ ತುಳುಕಾಡುತ್ತಿರುವಂತೆ ಭಾಸವಾಗುತ್ತದೆ.

ಹಬ್ಬಗಳು ವಿಶೇಷ ವಾತಾವರಣ ಸೃಷ್ಟಿಸಿ ಮನರಂಜನೆ ಒದಗಿಸುತ್ತವೆ. ಜನರು ಬಹುಮಟ್ಟಿಗೆ ಉತ್ಸಾಹ, ಸಡಗರ, ಆನಂದದಿಂದ ವರ್ತಿಸುತ್ತಾರೆ. ದೇವರ ಉತ್ಸವ, ಮೆರವಣಿಗೆ, ನೃತ್ಯ, ಕುಣಿತ, ಸಂಗೀತ, ಕಲೆ, ಸಾಹಿತ್ಯ, ವಿಶೇಷವಾಗಿ ಅಭಿವ್ಯಕ್ತವಾಗುತ್ತವೆ. ನಾಟಕ, ಸರ್ಕಸ್, ಕುಸ್ತಿ, ಪಂದ್ಯ, ಪಟಾಕಿಗಳ ಸಿಡಿತ ಬಾಣ ಬಿರುಸುಗಳನ್ನು ಸುಡುವುದು ಇವೇ ಮೊದಲಾದವು ಜನಪದರಿಗೆ ಹೆಚ್ಚಿನ ಮನರಂಜನೆ ಒದಗಿಸುತ್ತವೆ. ದಿನಪಿಡೀ ದುಡಿದುಬರುವ, ವರ್ಷಪಿಡೀ ಪರಿಶ್ರಮ ಪಡುವ ಹಳ್ಳಿಯ

ಜನರ ಮನಸ್ಸಿಗೆ ಮುದ ನೀಡುವ ಅಪೂರ್ವ ಅವಕಾಶ ಹಬ್ಬದ ದಿನದಂದು ವಿಶೇಷವಾಗಿ ಲಭ್ಯವಾಗುತ್ತದೆ.

ಜನಪದರ ಜೀವನದಲ್ಲಿ ಹಬ್ಬಗಳು ಸಾಂಸ್ಕೃತಿಕ ದೃಷ್ಟಿಯಿಂದಲೂ ಮಹತ್ವಪೂರ್ಣವಾದವುಗಳಾಗಿವೆ. ಆಯಾ ಗ್ರಾಮಗಳು ತಮ್ಮ ಸುತ್ತಮುತ್ತಲಿನ ಗ್ರಾಮಗಳಲ್ಲಿನ ಜನರ ಜಾನಪದ ಕಲೆ ಮತ್ತು ಸಾಹಿತ್ಯಗಳು ಹಬ್ಬಗಳಲ್ಲಿ ವಿಶೇಷವಾಗಿ ಪ್ರಕಟಗೊಳ್ಳುತ್ತವೆ. ಜಾನಪದ ಕಲಾವಿದರು, ಅಪರೂಪದ ಅವಕಾಶ ಪಡೆದು ಬೆಳಕಿಗೆ ಬರುತ್ತಾರೆ. ಗ್ರಾಮೀಣರ ಸುಪ್ತ ಸಾಮರ್ಥ್ಯಗಳು ಜಾಗೃತಗೊಳ್ಳಲು ಈ ಹಬ್ಬಗಳಲ್ಲಿ ವಿಪುಲ ಅವಕಾಶ ದೊರೆಯುತ್ತವೆ. ಸಾಮೂಹಿಕ ಗಾನ, ಸಾಮೂಹಿಕ ನರ್ತನ, ಕುಣಿತ ಮೊದಲಾದವು ಹಳ್ಳಿಯ ಜನರಲ್ಲಿ ಸಮುದಾಯ ಭಾವನೆ ಅಧಿಕಗೊಳ್ಳಲು ನೆರವಾಗುತ್ತವೆ. ಅವರಲ್ಲಿ ಉನ್ನತ ಮಟ್ಟದ ಸಾಂಸ್ಕೃತಿಕ ಚಟುವಟಿಕೆ ಹಾಗೂ ಉತ್ತಮ ಪರಿಸರ ಅಭಿವೃದ್ಧಿಗೊಳ್ಳಲು ಪೂರಕ ಸನ್ನಿವೇಶಗಳನ್ನು ಒದಗಿಸುತ್ತವೆ.

ಜನಪದ ಹಬ್ಬಗಳು ಯಾವ ವಿಧದಲ್ಲಿಯೂ ಹಿಂದೆ ಬಿದ್ದಿಲ್ಲ. ಹಬ್ಬಗಳು ಶುಭ ದಿನಗಳೆಂದು ಹೇಳುವ ಅಭ್ಯಾಸವಿದೆ. ಯುಗಾದಿ ಹಬ್ಬ ಹಳೆ ವರ್ಷ ಕಳೆದು ಹೊಸ ವರ್ಷದ ಶುಭದಿನ ತಂದು ಕೊಡುವ ಸುದಿನವಾದರೆ, ನಾಗರಪಂಚಮಿ ನಾಗಪ್ಪನಿಗೆ ಹಾಲನ್ನೆರೆಯುವ ದಿನ. ಮಹಿಳೆಯರು ಗಂಡನ ಮನೆಯಿಂದ ತವರು ಮನೆಗೆ ಬಂದು ಆನಂದದಿಂದ ಜೋಕಾಲಿ ಜೀಕುವ, ಬುಲಾಯಿ ಹಾಡುವ ಹಬ್ಬವಾಗಿದೆ. ವಿಜಯ ದಶಮಿಯ ಹಬ್ಬದಂದು ದೇವಿಯ ಆರಾಧನೆ ಮಾಡುವುದಾಗಿದೆ. ಶೀಗಿ ಪೂಜೆಯೂ ಈ ಹಬ್ಬದಲ್ಲಿಯೇ ಆಚರಿಸಲಾಗುವುದು.

'ದೀಪಾವಳಿ' ಜನರಿಗೆ ಅಜ್ಞಾನ ದೂರವಿರಿಸಿ, ಸುಜ್ಞಾನ ತಂದುಕೊಡುವ ಶುಭದಿನವಾಗಿದೆ. ಅಂದು ಎಲ್ಲಿ ನೋಡಿದರಲ್ಲಿ ಹೊನಲು ದೀಪಗಳಿಂದ ಮನ, ಮನೆ ಬೆಳಗುತ್ತಿರುತ್ತದೆ. ದೀಪಾವಳಿ ಹಬ್ಬದಲ್ಲಿಯೇ ಗೌರಿ ಪೂಜೆಯನ್ನು ಮಾಡುವರು. ಇದಕ್ಕೆ 'ಗೌರಿಹುಣ್ಣಿಮೆ' ಎಂದು ಕರೆಯುವರು. ಎಳ್ಳಾಮಾವಾಸ್ಯೆ ಹಬ್ಬದಂದು ಹೊಲಗದ್ದೆಗಳಿಗೆ ಎಲ್ಲರೂ ಊಟಕ್ಕಾಗಿ ಅಡುಗೆ ತೆಗೆದುಕೊಂಡು ಹೋಗಿ, ಹೊಲಗಳಲ್ಲಿ ಲಕ್ಷ್ಮೀಪೂಜೆ, ಪಾಂಡವರ ಪೂಜೆ ಮಾಡುವರು. ಗಿಡಮರಗಳಿಗೆ ಜೋಕಾಲಿ ಕಟ್ಟಿ ಆಡುವರು. ಈ ಸಂದರ್ಭದಲ್ಲಿ ಬೆಳೆ ಚೆನ್ನಾಗಿ ಬೆಳೆಯಲೆಂದು ಹಾರೈಸಿ ಹಾಡು ಹೇಳುವರು (ಮಹಿಳೆಯರು). ಇದೊಂದು ವನದೇವತೆಯ ಹಬ್ಬವೆನಿಸಿದೆ. ಸಂಕ್ರಾಂತಿ ಇದೊಂದು ಸೂರ್ಯ ಮತ್ತು ನಕ್ಷತ್ರ ವೃತ್ತದ ಮೇಲೆ ಬರುವುದನ್ನು ತೋರಿಸುವ ದಿನ. ಅಂದು ಕಹಿಯನ್ನು, ದ್ವೇಷವನ್ನೆಲ್ಲ ಮರೆತು ಎಳ್ಳು ಸಕ್ಕರೆ ಹಂಚಿ ಸಿಹಿ, ಪ್ರೀತಿಯನ್ನು ವ್ಯಕ್ತಪಡಿಸುವ ದಿನವಾಗಿ ಆಚರಿಸಲಾಗುವುದು. ಇಂತಹ ಅನೇಕ ಹಬ್ಬ ಹರಿದಿನಗಳು ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿಕೊಂಡು ಆಚರಿಸಲ್ಪಡುತ್ತಿವೆ. ಈ ಹಬ್ಬಗಳಲ್ಲಿ ಕೆಲವು ವಿಶೇಷ ಹಾಡುಗಳನ್ನು ಹೆಣ್ಣುಮಕ್ಕಳಿಂದ ಸಾಂದರ್ಭಿಕವಾಗಿ ಹಾಡಲಾಗುವುದು.[೧]

ಜಾನಪದ ಹಾಡುಗಳನ್ನು ಹಲವು ಪ್ರಕಾರಗಳಲ್ಲಿ ವಿಭಾಗಿಕರಣ ಮಾಡಿಕೊಂಡಿರುವುದು ಕಂಡುಬರುತ್ತದೆ. ಇಂತಹ ಪ್ರಕಾರಗಳಲ್ಲಿ ವಾರ್ಷಿಕಾವರ್ತನ ಹಬ್ಬಗಳು ಒಂದಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಈ ಪ್ರಕಾರದ ಹಾಡುಗಳನ್ನು ಅಧ್ಯಯನಕ್ಕೆ ಒಳಪಡಿಸುವ ಪೂರ್ವದಲ್ಲಿ 'ವಾರ್ಷಿಕಾವರ್ತನ' ಎಂಬ ಪದದ ಕುರಿತು ಅರ್ಥೈಸುವುದು ಸೂಕ್ತವೆಂದು ಭಾವಿಸಲಾಗಿದೆ. ಇಲ್ಲಿ ವಾರ್ಷಿಕಾವರ್ತನ ಎಂಬ ಪದವನ್ನು ಕಾಲಮಾನ ಸೂಚಕವಾಗಿ ಬಳಸಿಕೊಳ್ಳಲಾಗಿದೆ. ಅಂದರೆ ಒಂದು ವರ್ಷಕ್ಕೆ ಒಂದು ಸಾರಿ ಆಚರಿಸುವಂತಹ ಹಬ್ಬಗಳನ್ನು ವಾರ್ಷಿಕಾವರ್ತನ ಎಂಬ ನೆಲೆಯಲ್ಲಿ

ಗುರುತಿಸಿಕೊಳ್ಳಲಾಗಿದೆ. ಈ ಆಚರಣೆ ಅಥವಾ ಹಬ್ಬಗಳು ವರ್ಷಕ್ಕೊಮ್ಮೆ ಮಾತ್ರ ಪುನರಾವರ್ತನೆಯಾಗಿ ಬರುವುದು ಕಂಡುಬರುತ್ತದೆ. ಆದ್ದರಿಂದ ಇವುಗಳನ್ನು ಅಧ್ಯಯನದ ದೃಷ್ಟಿಯಿಂದಾಗಿ ಕಾಲಸೂಚಕದ ನೆಲೆಯಲ್ಲಿ ವಾರ್ಷಿಕಾವರ್ತನ ಎಂದು ಕರೆಯಲಾಗುತ್ತದೆ.

"ಜಾನಪದದಲ್ಲಿ ಸ್ತ್ರೀಯರ ಭಾಗವಹಿಸುವಿಕೆಯೇ ಪ್ರಧಾನವಾದ ಅನೇಕ ಆಚರಣೆಗಳಿವೆ. ಉತ್ತರ ಕರ್ನಾಟಕದ ಮಣ್ಣೆತ್ತಿನ ಅಮವಾಸ್ಯೆ, ಗುಳ್ಳವ್ವನ ಪೂಜೆ, ಶೀಗಿ ಹುಣ್ಣಿಮೆ, ಚಂಗಳವ್ವನ ಆಚರಣೆ, ಜೋಕುಮಾರನ ಪೂಜೆ, ನಾಗರಪಂಚಮಿ, ದಕ್ಷಿಣ ಕರ್ನಾಟಕದ ಕೊಂತಿಪೂಜೆ, ಬೆಳದಿಂಗಳಪ್ಪನ ಪೂಜೆ, ಮಲೆನಾಡಿನ ಭೂಮಿ ಹುಣ್ಣಿಮೆ ಮೊದಲಾದವನ್ನು ಹೆಂಗಸರ ಆಚರಣೆಗಳು ಎಂದೇ ಗುರುತಿಸಲಾಗುತ್ತದೆ. ಈ ಆಚರಣೆಗಳ ಸ್ವರೂಪ, ಆಚರಣಾ ವಿಧಿಗಳನ್ನು ಗಮನಿಸಿದಾಗ ಇವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಮಣ್ಣು, ಭೂಮಿ ಹಾಗೂ ನೀರಿಗೆ ಸಂಬಂಧಿಸಿದ ಆಚರಣೆಗಳಾಗಿರುವುದು ಕಂಡುಬರುತ್ತವೆ. ಕೃಷಿ ಬದುಕಿನ ಮೂಲ ಉತ್ಪಾದಕ ವಸ್ತುಗಳಾದ ಮಣ್ಣು ಮತ್ತು ನೀರನ್ನು ಹೆಂಗಸರು ಸದಾ ಪೂಜನೀಯವಾಗಿ ಕಂಡಿದ್ದಾರೆ."(ಕೆ.ಆರ್. ಸಂಧ್ಯಾರೆಡ್ಡಿ, ಮಹಿಳಾ ಜಾನಪದ, ಪು–xix) ಹೀಗೆ ಮಹಿಳೆಗೂ ಮತ್ತು ಕೃಷಿಗೂ ಸಂಬಂಧವಿರುವಂತೆ, ಮಹಿಳೆಗೂ ಜಾನಪದ ಸಾಹಿತ್ಯಕ್ಕೂ ಅವಿನಾಭಾವ ಸಂಬಂಧವಿದೆ. ಈ ಹಾಡುಗಳು ಕೃಷಿ ಮೂಲದವುಗಳಾಗಿದ್ದು, ಆಯಾ ಕಾಲಘಟ್ಟ ಹಾಗೂ ಹಬ್ಬ ಹರಿದಿನಗಳಿಗೆ ಪೂರಕವಾದ ನೆಲೆಯಲ್ಲಿ ಜಾನಪದರು ತಮ್ಮ ಸಾಹಿತ್ಯವನ್ನು ರೂಪಿಸಿಕೊಂಡು ಬಂದಿದ್ದಾರೆ.

ಇಲ್ಲಿ ವಾರ್ಷಿಕಾವರ್ತನ ನೆಲೆಯಲ್ಲಿ ಆಚರಣೆಯಲ್ಲಿರುವ ಹಬ್ಬಗಳನ್ನು ಜಾನಪದರು ಆಯಾ ಕಾಲಘಟ್ಟದಲ್ಲಿಯೇ ಆಚರಿಸಿಕೊಂಡು ಬರುತ್ತಿದ್ದಾರೆ. ಈ ಸಂದರ್ಭವನ್ನು ಪ್ರತಿನಿಧಿಸುವ ನೆಲೆಯಲ್ಲಿ ಜಾನಪದ ಪರಂಪರೆಯಲ್ಲಿ ವಿವಿಧ ಆಚರಣೆಗಳು ಅಸ್ತಿತ್ವದಲ್ಲಿರುವುದನ್ನು ಗಮನಿಸಬಹುದಾಗಿದೆ. ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಆಚರಣೆಗೊಳ್ಳುವ ವಾರ್ಷಿಕಾವರ್ತನ ಪ್ರಧಾನವಾದ ಜಾನಪದ ಹಬ್ಬಗಳಲ್ಲಿ ಈ ಭಾಗದ ಮಹಿಳೆಯರ ಹಾಡುವ ಹಾಡುಗಳನ್ನು ಇಲ್ಲಿ ಪ್ರಮುಖವಾಗಿ ಅಧ್ಯಯನ ಮಾಡಲಾಗುವುದು. ಇಂತಹ ವಾರ್ಷಿಕಾವರ್ತನ ನೆಲೆಯಲ್ಲಿ ಮಹಿಳೆಯರು ಹಾಡುವ ಹಾಡುಗಳೆಂದರೆ, ಬುಲಾಯಿ ಹಾಡುಗಳು, ಸೀಗಿ ಹಾಡುಗಳು, ಗೌರಿ ಹಾಡುಗಳು, ಎಳ್ಳಾಮಾವಾಸ್ಯೆಯ ಹಾಡುಗಳು, ಆರತಿ ಹಾಡುಗಳು ಪ್ರಮುಖವಾಗಿವೆ. ಬೀದರ್ ಪ್ರಾಂತ್ಯದಲ್ಲಿ ಕಂಡುಬರುವ ಈ ಮಹಿಳಾ ಹಾಡುಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಆದ್ದರಿಂದಾಗಿ ಈ ಮುಂದಿನಂತೆ ಮಹಿಳಾ ಹಾಡುಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೪.೧ ಬುಲಾಯಿ ಹಾಡುಗಳು:

ಜನಪದ ಕಲೆ ಒಂದು ನಾಡಿನ ಸಂಸ್ಕೃತಿಯ ಜೀವಂತ ಶಕ್ತಿಯಾಗಿ ಕಂಡುಬರುತ್ತದೆ. ಬೀದರ್ ಜಿಲ್ಲೆಯು ಕನ್ನಡ ನಾಡಿನ ತಲೆಮಣಿಯಾಗಿದ್ದು, ತನ್ನದೇ ಆದ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಉತ್ತರ ಮತ್ತು ಪಶ್ಚಿಮಕ್ಕೆ ಮಹಾರಾಷ್ಟ್ರ ಹಾಗೂ ಪೂರ್ವಕ್ಕೆ ಆಂಧ್ರದ ಗಡಿ ಭಾಗಗಳನ್ನು ಹೊಂದಿರುವ ಇದು ಮರಾಠಿ, ತೆಲಗು, ಉರ್ದುಭಾಷೆ ಹಾಗೂ ಹಲವು ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗಿದೆ. ಹನ್ನೆರಡನೆಯ ಶತಮಾನದ ಶರಣರ ಪ್ರಭಾವವು ಈ ಭಾಗದ ಸಂಸ್ಕೃತಿಯ ಮೇಲೆ ಸಾಕಷ್ಟು ಪ್ರಭಾವ

ಬೀರಿದೆ. ಕರ್ನಾಟಕದ ಉಳಿದ ಜಿಲ್ಲೆಗಳಲ್ಲಿ ಲಭ್ಯವಾಗದೇ ಇರುವಂಥ ವಿಶಿಷ್ಟವಾದ ಕಲೆಗಳು ಬೀದರ್ ಜಿಲ್ಲೆಯಲ್ಲಿ ಲಭ್ಯವಾಗುತ್ತವೆ.

ಕರ್ನಾಟಕ ಜಾನಪದದಲ್ಲಿ ಕರಿಮಣಿಯ ಸರದಲ್ಲಿ ಚೆಂಬಳಗಳಂತೆ ಇವು ಕಂಗೋಳಿಸುತ್ತಾ ಬಂದಿದ್ದು, ನಮ್ಮ ಸಂಸ್ಕೃತಿಯ ಸೌಂದರ್ಯವನ್ನು ಇಮ್ಮಡಿಸಿವೆ. ಅಂಥ ಚೆಂಬಳಗಳಲ್ಲಿ 'ಬುಲಾಯಿ ಹಾಡುಗಳು' ಒಂದಾಗಿವೆ. ಈ ಬುಲಾಯಿ ಹಬ್ಬವು ಈ ಭಾಗದಲ್ಲಿ ವಿಶೇಷವಾಗಿ ಆಚರಣೆಗೊಳ್ಳುವ ಹಬ್ಬಗಳಲ್ಲೊಂದಾಗಿದೆ. ಬುಲಾಯಿ ಹಬ್ಬದ ಸಂದರ್ಭದಲ್ಲಿ ಬುಲಾಯಿ ಹಾಡುಗಳನ್ನು ಹೆಚ್ಚಾಗಿ ಮಹಿಳೆಯರು ಹಾಡುತ್ತಾರೆ. ಈ ಸಂದರ್ಭದಲ್ಲಿ ಮಾತ್ರ ಈ ಹಾಡುಗಳನ್ನು ಮಹಿಳೆಯರು ಭಕ್ತಿ ಭಾವದ ನೆಲೆಯಲ್ಲಿ ಹಾಡುವುದು ಕಂಡುಬರುತ್ತದೆ. ವಿಶೇಷವಾಗಿ ನಾಗರ ಪಂಚಮಿ ಹಬ್ಬದ ಸಂದರ್ಭದಲ್ಲಿ ಹೆಣ್ಣುಮಕ್ಕಳು ಹಾಡುವ ವಿಶಿಷ್ಟವಾದ ಹಾಡುಗಳಿಗೆ 'ಬುಲಾಯಿ ಹಾಡುಗಳು'ಎಂದು ಕರೆಯುತ್ತಾರೆ.[೩] ಬುಲಾಯಿ ಹಾಡುಗಳು ಬೀದರ್ ಜಿಲ್ಲೆಯ ಸುತ್ತಮುತ್ತಲಿನ ಹಳ್ಳಿಗಳಲ್ಲದೆ, ಮಹಾರಾಷ್ಟ್ರದಲ್ಲಿಯೂ ಕೇಳಬಹುದು. ನಾಗರಪಂಚಮಿ ಹಬ್ಬಕ್ಕೆಂದು ತವರು ಮನೆಗೆ ಬಂದ ಹೆಣ್ಣುಮಕ್ಕಳು, ಊರಿನವರು ಹಾಗೂ ಓಣಿಯ ಹೆಣ್ಣು ಮಕ್ಕಳೆಲ್ಲ ಸೇರಿ ಬುಲಾಯಿ ಹಾಕುತ್ತಾರೆ. ನಾಗರಪಂಚಮಿ ಇನ್ನೂ ೮–೧೦ ದಿವಸಗಳು ಮುಂದಿರುವಾಗಲೇ ಬುಲಾಯಿ ಹಾಕುತ್ತಾರೆ. ಪ್ರತಿದಿನ ರಾತ್ರಿ ಹೆಣ್ಣುಮಕ್ಕಳೆಲ್ಲ ತಮ್ಮ ದೈನಂದಿನ ಕೆಲಸಗಳನ್ನು ಮಾಡಿ ಮುಗಿಸಿ, ಮನೆಗೆ ಬಂದು ಊಟ ಮಾಡಿದ ಮೇಲೆ ಊರಿನ ಅವರವರ ಓಣಿಗೆ ಅವರದೇ ಆದ ಒಂದು ಗುಂಪು ಕಟ್ಟಿಕೊಂಡಿರುತ್ತಾರೆ. ಆ ಓಣಿಯ ಸ್ತ್ರೀಯರು ಆಯಾ ಓಣಿಯ ಯಾರಾದರೊಬ್ಬರ ವಿಶಾಲವಾದ ಮನೆಯ ಅಂಗಳದಲ್ಲಾಗಲಿ ಅಥವಾ ದೇವಾಲಯದ ಮುಂಭಾಗದಲ್ಲಾಗಲಿ ಬಂದು ಸೇರುತ್ತಾರೆ. ಅಲ್ಲಿ ಸೇರಿದ ಎಲ್ಲರೂ ಗೋಲಾಕಾರದಲ್ಲಿ ನಿಂತು ಪ್ರತಿಯೊಬ್ಬರೂ ಕೈಕೈ ಹಿಡಿದುಕೊಂಡು ಹಾಡುಗಳನ್ನು ಹೇಳುತ್ತಾರೆ. ವರ್ತುಲದಲ್ಲಿರುವ ಇಬ್ಬರು ಮುಮ್ಮೇಳವಾಗಿ ಹಾಡುತ್ತಾರೆ. ಉಳಿದವರು ಕೊನೆಯ ನುಡಿ (ಅನುಪಲ್ಲವಿ) ಯನ್ನು ಪುನರಾವರ್ತಿಸುತ್ತಾರೆ. ಹಾಡುವಾಗ ಪ್ರತಿಯೊಂದು ಜೋಡಿಯು ತಲೆಗೆ ತಲೆ ಹಚ್ಚಿ ಪರಸ್ಪರ ಕೈ ಹಿಡಿದುಕೊಂಡು ಕೆಳಗೆ ಮೇಲೆ ಮಾಡುತ್ತ ಹಾಡುತ್ತಾರೆ. ಹೀಗೆ ಮೆಲ್ಲಮೆಲ್ಲನೆ ವರ್ತುಲಾಕಾರವಾಗಿ ಸುತ್ತುತ್ತಾರೆ. ಯಾವುದೇ ವಾದ್ಯಗಳ ಸಹಾಯವಿಲ್ಲದೆ ಮಧುರ ಕಂಠವೇ ವಾದ್ಯವಾಗಿ ಹಾಡು ಮುಂದುವರೆಯುತ್ತಾ ಹೋಗುತ್ತದೆ.

'ನಾಗರ ಪಂಚಮಿ' ಹೆಣ್ಣು ಮಕ್ಕಳಿಂದ ಆಚರಿಸಲಾಗುವ ನಾಗಾರಾಧನೆಯ ಹಬ್ಬದ ದಿನವಾಗಿ ಹಾಗೂ ಹೆಣ್ಣು ಮಕ್ಕಳನ್ನು ತವರು ಮನೆಗೆ ಕರೆತರುವ ಹಬ್ಬವಾಗಿ ರೂಪು ಪಡೆದುಕೊಂಡಿದೆ. ಜೊತೆಗೆ ಗಂಡನ ಮನೆಯಲ್ಲಿ ಅನುಭವಿಸಿದ ಕಷ್ಟಗಳ ಭಾರವನ್ನು ತವರಿನಲ್ಲಿ ಹಾಡಿ–ಪಾಡಿ–ಕುಣಿದು–ಕುಪ್ಪಳಿಸಿ ಉಯ್ಯಾಲೆಯಾಡಿ ಮನಸ್ಸು ಹಗುರ ಮಾಡಿಕೊಳ್ಳುವ ಭಾವವನ್ನು ಪ್ರತಿನಿಧಿಸುವ ನೆಲೆಯಲ್ಲಿ ನಾಗರ ಪಂಚಮಿ ಹಬ್ಬದಲ್ಲಿ ಬುಲಾಯಿ ಹಾಕುತ್ತ ಅನೇಕ ಹಾಡುಗಳನ್ನು ಹಾಡುವರು. ಬುಲಾಯಿ ಹಾಡುಗಳು ನಮ್ಮ ಬೀದರ್ ಜಿಲ್ಲೆಗೆ ಮಾತ್ರ ಸೀಮಿತವಾಗಿವೆ. ಈ ಬುಲಾಯಿಯನ್ನು ಇಷ್ಟೊತ್ತು ಹಾಕಬೇಕೆಂಬ ನಿಬಂಧನೆಗಳಿಲ್ಲ. ಆದರೆ ಬುಲಾಯಿ ಹಾಡುಗಳಿಗೆ ತನ್ನದೇ ಆದ ವಿಶಿಷ್ಟವಾದ ಸಂಪ್ರದಾಯವಿದೆ. ಈ ಸಂಪ್ರದಾಯವನ್ನು ಇಂದಿಗೂ ಮೂಲ ಸ್ವರೂಪದಲ್ಲಿ ಕಾಪಾಡಿಕೊಂಡು ಬರಲಾಗಿದೆ.

ಕರ್ನಾಟಕದ ಕಿರೀಟಪ್ರಾಯವಾಗಿದ್ದು, ಗಡಿ ಎನಿಸಿರುವ ಬೀದರ್ ಜಿಲ್ಲೆ ಜನಪದ ಸಾಹಿತ್ಯದ ತಲೆ ಹಾಗೂ ತವರೂರು. ಈ ಜಿಲ್ಲೆ ಜನಪದ ಸಾಹಿತ್ಯದ ನೆಲೆ–ಸೆಲೆಯಾಗಿದೆ. ನಾರಿಯರ ಹಬ್ಬ,

ನಾಗರಪಂಚಮಿ ಎನಿಸಿದೆ. ಇದೇ ಸಂದರ್ಭದಲ್ಲಿ ನಾರಿಯರು ಈ ಬುಲಾಯಿ ಹಾಡುಗಳನ್ನು ಹಾಡುತ್ತಾರೆ. "ಬುಲಾಯಿ" ಎನ್ನುವ ಪದ ಉರ್ದುವಿನ "ಬೆಹಲಾವ" ಶಬ್ದದಿಂದ ಬಂದಿರಬೇಕೆಂದು ಉಹಿಸಲಾಗುತ್ತದೆ. ಬೆಹಲಾವ್ ಎಂದರೆ ಮನರಂಜನೆ ಎಂದರ್ಥ. ಮನರಂಜನೆಯ ಪ್ರತೀಕವಾದ ಬುಲಾಯಿ ಹಾಡುಗಳು ರಜಾಕಾರರ ಹಾವಳಿ, ಪೌರಾಣಿಕ ಕಥೆಗಳು, ಹಾಗೂ ಐತಿಹಾಸಿಕ ಕಥೆಗಳು ಮೊದಲಾದ ಘಟನೆಗಳಿಂದ ಕೂಡಿವೆ. ಈ ರಜಾಕರ ಎಂದರೆ 'ಸ್ವಯಂ ಸೇವಕ' ಎಂದರ್ಥ. ೧೯೪೮ ರಲ್ಲಿ ರಜಾಕಾರರು ಹಿಂದುಗಳ ಮೇಲಿನ ದಾಂಧಲೆ ಕುರಿತು ಹಾಡುಗಳೇ ರಜಾಕಾರರ ಹಾವಳಿ ಹಾಡುಗಳು. ನಾಗಾರಾಧನೆ, ನಾಗರಪಂಚಮಿ ಇದು ಶ್ರಾವಣ ಮಾಸದ ಶುದ್ಧ ಪಂಚಮಿಯಂದು ಆಚರಿಸುವಂಥದ್ದು. ಶ್ರಾವಣ ತಿಂಗಳಲ್ಲಿ ಸುತ್ತಮುತ್ತಲೂ ಹಸಿರು ಬೆಳೆದು ನಿಂತಿರುತ್ತದೆ. ಈ ಕಾಲದಲ್ಲಿ ಹಾವುಗಳ ಕಾಟ ಹೆಚ್ಚು ಶ್ರಾವಣ ಮಾಸದ ನಾಗರ ಪಂಚಮಿಯ ಹಬ್ಬ ಆಚರಣೆಗೆ ಹೇಗೆ ಬಂತೆಂಬುದರ ಕುರಿತು ಒಂದು ಜಾನಪದ ಕಥೆ ಹಾಡಿನ ರೂಪದಲ್ಲಿ ಹೀಗೆ ಬಳಕೆಯಲ್ಲಿದೆ.

ಬುಲಾಯಿ ಆಚರಣೆ ಬಗೆಗಿನ ಜನಪದ ಕಥೆ:

ಬಡಪಾಯಿಯಾದ ಅಣ್ಣನು ತಂಗಿಯನ್ನು ತವರಿಗೆ ಕರೆತರಲು ಬಂದ. ತಂಗಿ ಶ್ರೀಮಂತ ಮನೆತನದ ಸೊಸೆ. ತಂಗಿಯನ್ನು ಕರೆದುಕೊಂಡು ಹೋಗುತ್ತಿದ್ದ. ಅಣ್ಣನಿಗೆ ತಂಗಿಯ ಮೇಲಿದ್ದ ಚಿನ್ನದ ಆಭರಣಗಳ ಮೇಲೆ ದುರಾಸೆಯುಂಟಾಯಿತು. ಅವನ್ನೆಲ್ಲ ಕೊಡು ಎಂದಾಗ ಆಕೆ ಸಂತೋಷದಿಂದ ಕೊಡಲು ಒಪ್ಪಿದಳು. ಅದಕ್ಕೂ ತಾಳದೆ ಕೊಂದು ಬಿಡಲು ಯೋಚಿಸಿ ಕಲ್ಲು ಬಂಡೆಯನ್ನೆತ್ತಿದ. ಅದರ ಕೆಳಗಿದ್ದ ಹಾವೊಂದು ಅವನನ್ನು ಕಚ್ಚಿ ಕೊಂದಿತು. ಇದನ್ನು ಕಣ್ಣಾರೆ ಕಂಡ ತಂಗಿ ನಾಗದೇವನನ್ನು ಪ್ರಾರ್ಥಿಸಿ ಅಣ್ಣನನ್ನು ಬದುಕಿಸಿದಳು. ಇದೇ ಮುಂದೆ ಹೆಣ್ಣು ತವರಿಗೆ ಕರೆತರುವ ಹಬ್ಬವಾಗಿ ರೂಪುಗೊಂಡಿತು. ೨

ಈ ಬುಲಾಯಿ ಹಾಡುಗಳು ಅಣ್ಣ ತಂಗಿಯರ ಬಂಧ ಸೂಚಕವಾಗಿಯೂ ಸಾಂಪ್ರದಾಯಿಕ ನೆಲೆಯಲ್ಲಿ ಬೆಳೆದುಬಂದಿವೆ. ಇಲ್ಲಿ ನಾಗರ ಪಂಚಮಿಯು ಹೆಣ್ಣಿಗೆ ತವರಿನ ಸಂಭ್ರಮದ ಪ್ರತೀಕವಾಗಿ ಕಂಡುಬರುತ್ತದೆ. ಹೆಣ್ಣು ಯಾವುದೇ ಹಬ್ಬಕ್ಕೆ ತನ್ನ ತವರಿಗೆ ಹೋಗದಿದ್ದರೂ ಸಹ ನಾಗರ ಪಂಚಮಿಗೆ ಮಾತ್ರ ಬಿಡುವುದಿಲ್ಲ. ಈ ಮೇಲಿನ ಕತೆಯಲ್ಲಿ ಚಿತ್ರಿತವಾಗಿರುವ ಅಣ್ಣ ತಂಗಿಯರ ನಡುವಿನ ಆರ್ಥಿಕ ಸಂಘರ್ಷದ ಕಥನವು ಹೆಣ್ಣಿನ ತವರು ಪ್ರೇಮವನ್ನು ಎತ್ತಿಹಿಡಿಯುತ್ತದೆ. ಇಲ್ಲಿ ಈ ಹಾಡುಗಳು ಮಹಿಳಾ ಲೋಕದ ಸೃಷ್ಟಿಗಳಾಗಿದ್ದು, ಈ ಮಹಿಳೆಯರು ಇಂತಹ ಹಾಡುಗಳ ಮೂಲಕವಾಗಿ ತನ್ನ ಬಾಂಧವ್ಯದ ನೆಲೆಗಳನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

ನಾಗರ ಪಂಚಮಿ ನಾಡಹೆಣ್ಣಿಗೆ ಹಬ್ಬ
ನಾಗಪ್ಪಗ್ಹಾಲ ಎರಿಯೋಣ ॥ ಕೊಲೆಣ್ಣಾ ಕೋಲೆ ॥
ನಾಗಪ್ಪಗೆಲೆ ಹಾಲು ಎರೆಯೋಣ ನನ್ನ ಗೆಳದಿ
ನಾಗರ ಹೆಡಿಹಾಂಗ ಆಡೋಣ ॥ ಕೋಲೆಣ್ಣಾ ಕೋಲೆ ॥

ಬುಲಾಯಿ ಪದಗಳು ಇತಿಹಾಸ ಹಾಗೂ ಪುರಾಣಗಳಲ್ಲಿ ಕಾಣಿಸಿಕೊಳ್ಳುವ ಮಹಾಪುರುಷರ ಕುರಿತಾಗಿವೆ. ಸಂಭಾಷಣಾ ರೂಪದ ಸರಪಳಿಯಂತಿರುವ ಈ ಹಾಡುಗಳು ತುಂಬಾ ಸ್ವಾರಸ್ಯಕರವಾಗಿವೆ. "ಕೊಲೇಣ್ಣಾ ಕೋಲೆ" ಮತ್ತು "ರನ್ನಾದೆ ಏ ಹೂವಿನ ಕೋಲೆಣ್ಣಾಕೋಲೆ" ಎಂಬ

ಪುನರಾವರ್ತನೆಯಾಗುವ ಪ್ರತಿ ನುಡಿಯೊಂದಿಗೆ ಈ ಹಾಡು ಹಾಡಲಾಗುತ್ತದೆ. ಈ ಹಾಡುಗಳು ಮೋಹರಂ ಹಾಡುಗಳ ಸ್ವರೂಪದಂತೆ ಇರುವ ಬುಲಾಯಿ ಹಾಡುಗಳು ಮುಂದೆ ಹಾಡುವವರ ಗತಿಗೆ ತಕ್ಕಂತೆ ಹಾಡಿನ ಧಾಟಿ ಇರುತ್ತದೆ. ಹಿಗ್ಗಿಸಿ– ಕುಗ್ಗಿಸಿ ಹಾಡನ್ನು ಹಾಡುತ್ತಾರೆ.

ಕೆಂಪು ಮಣ್ಣಿನ ಬುಲಾಯಿ ಹಾಡುಗಳು ಕನ್ನಡಿಗರ ಜೀವದುಸಿರಾಗಿ ಹೊರಟು ಹರಡಿ ನಿಂತಿವೆ. ಬೀದರ್ ಜಿಲ್ಲೆ ಪ್ರತಿಯೊಂದು ಗೂಡಿನಲ್ಲಿಯೂ ಪ್ರತಿಯೊಬ್ಬರ ಬಾಯಲ್ಲಿಯೂ ನಮಗೆ ಹಾಡುಗಳು ಸಿಗುತ್ತವೆ. ನಾಗರ ಪಂಚಮಿ ಹಬ್ಬದಂದು ಹಾಲು ಹಾಕಿದ ನಂತರ ಮೂರನೆಯ ದಿನ ಶಿರೋಳಶೆಟ್ಟಿಯ ಆಚರಣೆ ಮಾಡಲಾಗುತ್ತದೆ. ಕೆಸರಿನಿಂದ 'ಶಿರೋಳ ಶೆಟ್ಟಿ' ಯ ಮೂರ್ತಿ ಮಾಡಿ ಮಧ್ಯದಲ್ಲಿಟ್ಟು, ಸುತ್ತುವರೆದು ಹಾಡುಗಳನ್ನು ಹಾಡುತ್ತಾರೆ. ಈ ಶಿರೋಳಶೆಟ್ಟಿಯ ಬಗೆಗಿರುವ ಪೌರಾಣಿಕ ಹಿನ್ನೆಲೆಯು ಹೀಗಿದೆ; 'ಶಿರೋಳ' ಎಂಬ ಊರಿನಲ್ಲಿ ಒಬ್ಬ ರಾಜನಿದ್ದು, ಬಹಳ ದಿನಗಳವರೆಗೆ ಅವನಿಗೆ ಸಂತಾನ ಪ್ರಾಪ್ತಿಯಾಗಲಿಲ್ಲ. ಹೀಗಾಗಿ ಅವನು ಈಶ್ವರನ ಆರಾಧನೆಗೆ ತೊಡಗುತ್ತಾನೆ. ಈಶ್ವರನು ಇವನ ಭಕ್ತಿಗೆ ಮೆಚ್ಚಿ ವರ ಕೇಳಿದಾಗ, ಹೆಚ್ಚು ಆಯುಷ್ಯವುಳ್ಳ ಮಗನಾಗದಿದ್ದರೂ, ಕನಿಷ್ಠ ಏಳು ದಿನಗಳ ಆಯುಷ್ಯವುಳ್ಳ ಮಗನನ್ನಾದರೂ ದಯಪಾಲಿಸಬೇಕೆಂದಾಗ, ಭಗವಂತನು ಅವನ ಹರಕೆಯನ್ನು ಈಡೇರಿಸುತ್ತಾನೆ. ಆ ಶೆಟ್ಟಿಗೆ ಹುಟ್ಟಿದ ಮಗನೇ 'ಶಿರೋಳ ಶೆಟ್ಟಿ' ಎಂದು ಹೆಸರು ಪಡೆದನು. ನಂತರ ಶಿರೋಳ ಶೆಟ್ಟಿಯು ಅಗಸರ ಹೆಣ್ಣಿನ ಮೇಲೆ ಮನಸ್ಸು ಮಾಡಿದರಿಂದ ಆ ಹೆಣ್ಣು ಇವನನ್ನು ಕೊಲೆ ಮಾಡಿಸಿ ಬಂಡಿಯ ಕೆಳಗೆ ಹೂಳಿಟ್ಟಳು. ಹುಟ್ಟಿದ ಏಳು ದಿನಕ್ಕೆ ಮರಣ ಹೊಂದಿದ ಶಿರೋಳ ಶೆಟ್ಟಿಯು ಪಂಚಮಿಯ ಮಾರನೇ ದಿವಸ (ಷಷ್ಠಿಯ ದಿನ) 'ಹುತ್ತ' ಆದನೆಂಬ ನಂಬಿಕೆಯಿಂದ ಶೆಟ್ಟಿಯ ಮಣ್ಣಿನ ಮೂರ್ತಿಯನ್ನು ಮಾಡಿ ಪೂಜಿಸಲಾಗುತ್ತದೆ. ಶಿರೋಳಶೆಟ್ಟಿಯ ಸ್ಮರಣೆಯೇ ಇದರ ಮುಖ್ಯ ಉದ್ದೇಶ.

ಹುತ್ತಿನ ಮಣ್ಣನ್ನು ತಂದು ಮೀಸಲು ನೀರಿನಲ್ಲಿ ಪುರುಷಾಕೃತಿಯನ್ನು ತಯಾರಿಸಲಾಗುತ್ತದೆ. ಈ ಮೂರ್ತಿಗೆ ಅರಿಶಿಣ, ಕುಂಕುಮದಿಂದ ಪೂಜಿಸಿ, ಹೂವು, ದೀಪ, ಧೂಪದಿಂದ ಅಲಂಕರಿಸಿ, ನೈವೇದ್ಯಗಳಿಂದ ಪೂಜಿಸುತ್ತಾರೆ. ಮಕ್ಕಳಿಲ್ಲದವರಿಗೆ ಮಕ್ಕಳಾಗುವವೆಂಬ ನಂಬಿಕೆ ಇಂದಿಗೂ ಇಲ್ಲಿಯ ಹೆಣ್ಣು ಮಕ್ಕಳಲ್ಲಿದೆ. ಈ ಶಿರೋಳಶೆಟ್ಟಿಯ ಪೂಜೆಯು ವಿಜಾಪುರ ಭಾಗದಲ್ಲಿರುವ ಜೋಕುಮಾರನ ಆರಾಧನೆಯನ್ನು ಹೋಲಿದರೆ ತೆಲುಗು ನಾಡಿನಲ್ಲಿ ಆಚರಿಸುವ 'ಬದುಕಮ್ಮನ' ಆರಾಧನೆಯಲ್ಲಿಯೂ ಶಿರೋಳಶೆಟ್ಟಿಯ ಆರಾಧನೆಯ ಕೆಲವು ಅಂಶಗಳು ಕಂಡು ಬರುತ್ತವೆ.

ಸ್ವರೂಪ ಲಕ್ಷಣ:

ಜನಪದ ಕಥನ ಗೀತೆಗಳಂತೆಯೇ
ಹಾಡ ಹಾಡಂದರ ಪಾಪ ಹಾಡದಿದ್ದರ ಪಾಪ
ಹಾಡ ಕೇಳವರ ಪರಚಿತ್ತ ಕೋಲೆ ॥ ಪಲ್ಲ ॥

ಹಾಡನ್ನೇ ಕೇಳವರ ಪರಚಿತ್ತ ಪರಧ್ಯಾನ
ಬಾಲ ಅಳತಾನಂತ ಮನಿಗ್ಹೋದ ಕೋಲೆ
ಬಾಲಾ ಅಳತಾನಂತ ಮನಿಗ್ಹೋದ
ಹಡದವ್ವ ಬಾಗಿಲ ಮುಂದದ ಯಮಗಂಡ ಕೋಲೆ.

ಸರಸತಿ ಹಿಡಿದೇನು ನಿಮ್ಮ ಚರಣ
ಇರಲಿ ನಿಮ್ಮ ಅಂತ:ಕರಣ ॥ ಕೋಲೆಣ್ಣ ಕೋಲೆ ॥

ಎಂದು ತಮ್ಮ ಇಷ್ಟ ದೈವದ, ಅದರಲ್ಲೂ ಗಣಪತಿ, ಶಿವ, ಸರಸ್ವತಿ, ಪಾರ್ವತಿ ಈ ದೇವತೆಗಳ ಸ್ತುತಿ ಪ್ರಾರಂಭದಲ್ಲಿರುತ್ತದೆ. ಹಾಡು ಹಾಡುವ, ಕೇಳುವ ಪರಂಪರೆ ಮುಂದುವರಿಯಬೇಕೆಂಬ ಆಶಯದ ಹಿನ್ನೆಲೆಯಲ್ಲಿ ಹಾಡುಗಳ ಬಗೆಗೆ ಪ್ರೀತಿ, ಗೌರವವಿರಬೇಕೆನ್ನುವ ಭಾವನೆ ಇಲ್ಲಿರುವುದನ್ನು ಕಾಣುತ್ತೇವೆ.

ಧಾಟಿ:

ಹಾಡುವಾಗ ಒಂದು ಚರಣದ ಕೊನೆಯ ನುಡಿಯ ಪುನರಾರ್ವತನೆಯು ಈ ಹಾಡುಗಳ ಪ್ರಮುಖ ಲಕ್ಷಣವಾಗಿ ಹೊರಹೊಮ್ಮಿದೆ. ಉದಾಹರಣೆಗಾಗಿ

ಹಳ್ಳದ ಥಡಿಗೊಂಟ ಹೊಂಟಾರ ನಮ್ಮ ಶಿವನು
ಲಿಂಗಕೈದ ಹೂವ್ವಾ ದಯಮಾಡಿ ॥ ಕೋಲೆಣ್ಣ ಕೋಲೆ ॥

ದ್ವಿಪದಿ:

ಬುಲಾಯಿ ಹಾಡುಗಳು ದ್ವಿಪದಿಯಲ್ಲಿರುತ್ತವೆ. ದ್ವಿಪದಿ ಎಂದರೆ ಎರಡು ಪಾದಗಳುಳ್ಳ ಪದ್ಯಗಳು.

ಹಳ್ಳದ ಥಡಿಗೊಂಟ ಹೊಂಟಾಳೆ ಸಿರಿಗಂಗಿ
ಲಿಂಗಕ್ಯದ ಹೂವ್ವಾ ದಯಮಾಡಿ ॥ ಕೋಲೆಣ್ಣ ಕೋಲೆ ॥
ಮುತ್ತಲ ಎಲಿಮ್ಯಾಲ ಪತ್ತರ ಬರದಾರ
ಸುತ್ತ ರಾಜೇರಿಗಿ ಖಳುವ್ಯಾರೆ ಕೋಲ

ಕೆಲವೊಮ್ಮೆ ಚರಣದ ಕೊನೆಯ ಸಾಲಿನ ಕೋಲೆನ್ನ ಕೋಲೆ ಪದಗಳು ರನ್ನದ ಕೋಲೆನ್ನ ಕೋಲೆ, ಯೇಹೂವಿನ ಕೋಲೆನ್ನ ಕೋಲೆ ಎಂದು ಎರಡು ಸಲ ಪುನರಾವೃತ್ತಿ ಆಗುವುದುಂಟು. ದ್ರೌಪದಿಯ ಹಾಡಿನ ಚರಣವನ್ನು ಉದಾಹರಣೆಯಾಗಿ ನೋಡಬಹುದು.

ಕಲಕಲ ನಗಬ್ಯಾಡ ಕೈ ಚಪ್ಪಾಳಿ ಬಡಿಬ್ಯಾಡ
ಎಚ್ಚರರೆ ಇರಲಿ ಮನದಾಗ ರನ್ನದ ಕೋಲೆನ್ನ ಕೋಲೆ
॥ ಯೇ ಹೂವಿನ ಕೊಲೆನ್ನ ಕೋಲೆ ॥

ಹೀಗೆ ಪ್ರತಿ ಚರಣದ ಕೊನೆಯ ಸಾಲಿನ ಪುನರಾವರ್ತನೆ ಉಂಟಾಗಲು ಹಾಡುವ ಅನುಕೂಲತೆ ಹಾಗೂ ಉಸಿರು ತೆಗೆದುಕೊಳ್ಳಲು ಮುಂದಿನ ಚರಣ ನೆನಪಿಸಿಕೊಳ್ಳಲು, ಜೊತೆಗೆ ಕೇಳುಗರಿಗೆ ಕಥೆ ತಿಳಿದುಕೊಳ್ಳಲು ಸಹಾಯಕಾರಿಯಾಗುತ್ತದೆ. ಕಥನ ಗೀತೆಗಳಲ್ಲಿ "ಇಲ್ಲಿಗೆ ಹರ ಹರ ಇಲ್ಲಿಗೆ ಶಿವ ಶಿವ" ಎಂದು ಕಥೆಯನ್ನು ಮುಗಿಸುವಂತೆ "ಇಲ್ಲೀಗಿ ಸರೀತ ಅವರ ಕಥೀ ಕೋಲೇ" ಎಂದು ಮುಗಿಸಲಾಗುತ್ತದೆ. ಇದು ಈ ಬುಲಾಯಿ ಹಾಡುಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ.

ಬುಲಾಯಿಯ ಪ್ರಸ್ತುತತೆ:

ಜೀವನವನ್ನು ಮುಖ್ಯ ತಳಹದಿಯಾಗಿ ಮಾಡಿಕೊಂಡು ವಿಚಾರಗಳಿಗೆ ಒತ್ತು ನೀಡುವ ಜನಪದ ಸಾಹಿತ್ಯದ ಪ್ರಮುಖ ಅಂಗವಾದ ಬುಲಾಯಿ ಹಾಡುಗಳಲ್ಲಿ ಕಷ್ಟ, ಸಹಿಷ್ಣುತೆ, ಛಲ, ದ್ವೇಷ, ತ್ಯಾಗ, ಪ್ರೇಮ, ಸಾಹಸ, ನೋವು, ನಗೆ ಎಲ್ಲವೂ ಸೇರಿವೆ. ಹೈದ್ರಾಬಾದ ನಿಜಾಮನ ಆಡಳಿತಕ್ಕೆ ಒಳಪಟ್ಟು ಬೀದರ, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ವಾಸವಾಗಿದ್ದ ಹಿಂದುಗಳು ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ತನು-ಮನ-ಧನವನ್ನು ಸಲ್ಲಿಸಿ ದೇಶ, ನಾಡು, ನುಡಿಗಾಗಿ ಅಹೋರಾತ್ರಿ ಹೋರಾಡಿ ರಜಾಕಾರರ ಹೊಡೆತ ಮತ್ತು ತುಳಿತಕ್ಕೆ ಒಳಗಾಗಿ ಸಾವನ್ನಪ್ಪಿದ ಮಹನೀಯರುಗಳ ತ್ಯಾಗ, ಕಡ್ಲಿಮಟ್ಟಿ

ಕಾಶಿಬಾಯಿ, ಸತಿ ಸಾವಿತ್ರಿಯ ಶೀಲದ ಮಹತ್ವ, ಬಸವಣ್ಣ, ಚನ್ನಬಸವಣ್ಣ, ಮಹಾದೇವಿ, ರಾಮಾಯಣ, ಮಹಾಭಾರತ ಮುಂತಾದ ಪೌರಾಣಿಕ ಮತ್ತು ಐತಿಹಾಸಿಕ ಕಥೆಗಳ ಕಲ್ಪನೆ ಮತ್ತು ದಾಖಲೆ ನೂರಾರು ವರ್ಷಗಳ ಸಂಸ್ಕೃತಿಯ ಮೂಲ ಸ್ವರೂಪ ಈ ಬುಲಾಯಿ ಹಾಡುಗಳು. ಈ ಬುಲಾಯಿಗಳು ಇಂದಿನ ಸಮಾಜದ ಮೇಲೆ ಬೆಳದಿಂಗಳಂತೆ ಬೆಳಕು ಚೆಲ್ಲುತ್ತಾ ಹೋಗುತ್ತವೆ.

ಸೋಮರಾಯ, ಭೀಮರಾಯ, ನೀಲಕಂಠ ರಾಜನ ಕಥೆ, ಹೇಮರೆಡ್ಡಿ ಮಲ್ಲಮ್ಮ, ಕುಮಾರ ರಾಮನ ಪ್ರಾಚೀನ ಚರಿತ್ರೆಗಳು, "ಸತ್ಯಕ್ಕೆ ಸತ್ಯಾನೇ ಕೊನೆ, ದುಷ್ಟರಿಗೆ ಶಿಕ್ಷೆಯೇ ಕೊನೆ" ಎಂಬುದನ್ನು ಬುಲಾಯಿ ಹಾಡುಗಳು ಸಾರುತ್ತವೆ. ನಿಸ್ವಾರ್ಥ, ನಿಷ್ಠೆ, ಸಹಬಾಳ್ವೆ, ಬಲಿದಾನ, ತ್ಯಾಗ ಕುರಿತಾದ ಬುಲಾಯಿ ಹಾಡುಗಳು ನಾವು ಮೆಲುಕು ಹಾಕಿದಂತೆಲ್ಲಾ ಜೀವನ ಸಾರ್ಥಕವಾಗುತ್ತದೆ ಎಂಬ ನಂಬಿಕೆ ಜನಪದರಲ್ಲಿ ನೆಲೆಯೂರಿದೆ. ಈ ಕಾರಣದಿಂದಾಗಿ ಇವುಗಳನ್ನು ಸಾಂಸ್ಕೃತಿಕ ತನ್ನದೇ ಆದ ನೆಲೆಯಲ್ಲಿ ಕಾಪಾಡಿಕೊಂಡು ಬರಲಾಗಿದೆ. ಈ ಬುಲಾಯಿ ಹಾಡುಗಳು ಬದಲಾಗುತ್ತಿರುವ ಸಮಾಜದಲ್ಲಿ ಹಿಂದಿನ ಸಂಸ್ಕೃತಿಯನ್ನು ಪ್ರತಿನಿಧಿಸಿ, ಸಂಶೋಧನೆಗೆ ಆಕರವನ್ನು ಒದಗಿಸುತ್ತವೆ. ಆ ಕಾರಣಕ್ಕಾಗಿಯೇ ಅವುಗಳನ್ನು ಸಂಗ್ರಹಿಸದೇ ಬಿಡುವುದು ಸರಿಯಲ್ಲ. ಹಾಡು ಹೇಗಿದ್ದರೇನು ಆ ಹಾಡಿನ ಒಳ ಹೊರವು ನಮಗೆ ಮುಖ್ಯವಾಗಿರುತ್ತದೆ. ಆದ್ದರಿಂದ ಅವುಗಳನ್ನು ನಿರ್ಲಕ್ಷಿಸಿ ಕೈಬಿಡುವುದು ಉಚಿತವಲ್ಲ. ಅದಕ್ಕಾಗಿಯೇ ಇಲ್ಲಿ ಕೆಲವು ಬೀದರ ಜಿಲ್ಲೆಯ ಬುಲಾಯಿ ಹಾಡುಗಳನ್ನು ಸಂಗ್ರಹಿಸಲಾಗಿದೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿರುತ್ತವೆ.

ಸಾಮಾಜಿಕ ಹಾಡುಗಳು:

ಸುತ್ತ ಮುತ್ತ ಜನ ನೆರೆದು ಕುಂತೀರಿ ಹಿಂಗ
ಕಲಿಯುಗದ ಕೌತುಕ ನಡದಾವ ಬಲ್ಲಂಗ ಇಸವಾಸದೊಳಗ
ಕಲಿಕೆಟ್ಟಿಲ್ ತಲಿಕೆಟ್ಟದ್ ಹೆಣ್ಣು ಗಂಡೀಂದೀಗ ॥ ಕೋಲೇಣ್ಣ ಕೋಲೆ ॥

ಭಿಮ್ನಳ್ಳಿ ಊರಾಗ ಇದ್ದಾನೋ ಸೌಕಾರ
ಗುಮಾಸ್ತಿ ಇಟ್ಟಾನ ಮನಿ ಮಗನ್ಹಂಗ
ಉದ್ರಿಖಾತಾ ನಗ್ದಿರೊಕ್ಕಾ ಅವನ ಕೈದೊಳ್ಗ ॥ ಕೋಲೇಣ್ಣ ಕೋಲೆ ॥[೨]

ಸಮಾಜ ಗತಿಶೀಲವಾದದ್ದು, ಅದರಲ್ಲಿ ನಿರಂತರವಾಗಿ ಘಟನೆಗಳು ಸಂಭವಿಸುತ್ತಲೇ ಇರುತ್ತವೆ. ಈ ಘಟನೆಗಳು ಸಾಮಾಜಿಕ ಏರುಪೇರುಗಳಿಗೆ, ಮೌಲ್ಯಗಳ ಘರ್ಷಣೆಗಳಿಗೆ ಕಾರಣವಾಗುತ್ತವೆ. ಜನಪದರು ತಮ್ಮ ಸುತ್ತಲೂ ಸಂಭವಿಸುವ ಘಟನೆಗಳಿಗೆ ಮೈಮನ ತೆರೆದುಕೊಂಡಿದ್ದು, ತಮ್ಮ ಮನಸ್ಸಿನ ಮೇಲೆ ಬದುಕಿನ ಘಟನೆಗಳ ಮೇಲೆ ಪ್ರಭಾವ ಬೀರುವ ವಿಷಯಗಳಿಗೆ ಸಾಹಿತ್ಯದ ಮೂಲಕ ಸ್ಪಂದಿಸುತ್ತಾರೆ. ಜನಪದ ಸ್ತ್ರೀಯರು ತಮ್ಮ ಅನುಭವಗಳನ್ನು ಹಾಡಾಗಿಸಿ ಹಾಡಿದ್ದಾರೆ. ಬುಲಾಯಿ ಹಾಡುಗಳಲ್ಲಿ ಇದನ್ನು ಗಮನಿಸಬಹುದಾಗಿದೆ. ಜನಪದರಲ್ಲಿ ಹೆಣ್ಣಿಗೆ ವಿಶಿಷ್ಟವಾದ ಸ್ಥಾನವಿದೆ. ಅವಳ ಶೀಲಕ್ಕೆ ಹೆಚ್ಚಿನ ಬೆಲೆಯಿದೆ. ಅದನ್ನು ಉಳಿಸಿಕೊಳ್ಳಲು ಹೆಣ್ಣು ಎಲ್ಲಾ ತ್ಯಾಗಕ್ಕೂ ಸಿದ್ಧಳಾಗಿರುತ್ತಾಳೆ. ಈ ಮೇಲಿನ ಹಾಡಿನಲ್ಲಿ ಇದು ಬಿಂಬಿತವಾಗಿದೆ.

ಭೀಮ್ನಳ್ಳಿ ಊರಲ್ಲಿರುವ ಶ್ರೀಮಂತನ ಮನೆಯಲ್ಲಿ ಮನೆಯ ಮಗನಿಗಿಂತಲೂ ಹೆಚ್ಚು ವಿಶ್ವಾಸಕ್ಕೆ ಪಾತ್ರನಾದ ಗುಮಾಸ್ತನಿದ್ದ ಒಂದು ದಿನ ಶ್ರೀಮಂತನ ಮಡದಿಗೆ ಪಂಚಮಿ ಹಬ್ಬದ ನಿಮಿತ್ತ ತೌರೂರಿಗೆ

ಹೋಗಲು ಇಚ್ಛೆಯಾಗುವುದು. ತನ್ನ ಇಂಗಿತವನ್ನು ಪತಿಯೆದುರು ಇಟ್ಟಾಗ, ಅತ್ಯಂತ ವಿಶ್ವಾಸಕ್ಕೆ ಪಾತ್ರನಾದ ಗುಮಾಸ್ತನ ಜೊತೆಯಲ್ಲಿ ಹೆಂಡತಿ, ಮಗುವನ್ನು ಕಳಿಸಿಕೊಡಲು ಸಿದ್ಧನಾದನು. ತನ್ನ ಹೆಂಡತಿ ಮಗುವನ್ನು ಅತ್ಯಂತ ಕಾಳಜಿಯಿಂದ ತವರಿಗೆ ಕರೆದೊಯ್ಯಲು ಗುಮಾಸ್ತನಿಗೆ ತಿಳಿಸುತ್ತಾನೆ. ಗುಮಾಸ್ತ ಎತ್ತು, ಗಾಡಿ, ಕಟ್ಟಿ ಸಿದ್ಧಪಡಿಸಿ ಸಾಹುಕಾರನ ಹೆಂಡತಿ ಮಗನನ್ನು ಕರೆದೊಯ್ಯುವನು. ದಾರಿಯಲ್ಲಿ ಅವನ ಮನಸ್ಸು ಬದಲಾವಣೆಯಾಗಿ ದುಷ್ಟ ಬುದ್ಧಿಯಿಂದ ಗಾಡಿಯನ್ನು ಕಾಡುದಾರಿಗೆ ಒಯ್ಯುವನು. ಅವನು ಈಕೆಯ ಕೈಯಲ್ಲಿರುವ ಕೂಸನ್ನು ಎಸೆದು ಕೊಡಲಿಯಿಂದ ಅವಳ ಮೇಲೆ ಪ್ರಹಾರ ಮಾಡಲು ಮುಂದಾದ. ಅಷ್ಟರಲ್ಲಿ ಮೇಲಿರುವ ಮರಕ್ಕೆ ಕೈ ತಾಗಿ ಕೊಡಲಿ ಕೆಳಗೆ ಬಿದ್ದಿತು. ಕತ್ತಲಲ್ಲಿ ಕೈ ಸವರುತ್ತಿರುವಾಗ ಅಲ್ಲಿರುವ ಹಾವು ಕಚ್ಚಿ ಅವನು ಸಾವನ್ನಪ್ಪುವನು. ಬೆಳಗ್ಗೆ ಅಲ್ಲಿಂದ ಒಬ್ಬ ಸನ್ಯಾಸಿ ಭಿಕ್ಷೆಗೆ ಹೋಗುತ್ತಿದ್ದಾಗ ಮಗುವಿನ ಧ್ವನಿ ಕೇಳಿ ಆ ಕಡೆ ಬಂದು ತಾಯಿ ಮಗುವನ್ನು ಸುರಕ್ಷಿತವಾಗಿ ಸಾಹುಕಾರನಲ್ಲಿಗೆ ತಂದು ಒಪ್ಪಿಸುವನು. ಅದಕ್ಕೆ ಋಣಿಯಾದ ಸಾಹುಕಾರ ಹಾಗೂ ಪತ್ನಿ ಆ ಸನ್ಯಾಸಿಯನ್ನು ತಂದೆಯಂತೆ ಪ್ರೀತಿಯಿಂದ ಸಾಕಿ ಸಲಹಿದರು. ಇಂತಹ ನೀತಿ ಸೂಚಕವಾದ ಅಂಶಗಳು ಈ ಭಾಗದ ಬುಲಾಯಿ ಹಾಡುಗಳಲ್ಲಿ ಕಂಡುಬರುತ್ತವೆ. ಇಲ್ಲಿ ಸಮಾಜದಲ್ಲಿನ ಮಾನವ ಸಂಬಂಧಗಳ ಸೂಕ್ಷ್ಮ ಅಂಶಗಳು ಇಂತಹ ಹಾಡುಗಳಲ್ಲಿ ಕಂಡುಬರುತ್ತವೆ.

ಬುಲಾಯಿ ಹಾಡುಗಳ ವಸ್ತು-ವೈವಿಧ್ಯತೆ:

ದಿನನಿತ್ಯ ಸಮಾಜದಲ್ಲಿ ಘಟನೆಗಳು ಸಂಭವಿಸುತ್ತಲೇ ಇರುತ್ತವೆ. ಜನಪದರು ತಮ್ಮ ಸುತ್ತಲೂ ಸಂಭವಿಸುವ ಘಟನೆಗಳಿಗೆ ಮೈಮನ ತೆರೆದುಕೊಂಡಿದ್ದು, ತಮ್ಮ ಮನಸ್ಸಿನ, ಬದುಕಿನ ಘಟನೆಗಳ ಮೇಲೆ ಪ್ರಭಾವ ಬೀರುವ ವಿಷಯಗಳಿಗೆ ಸಾಹಿತ್ಯದ ಮೂಲಕ ಸ್ಪಂದಿಸಿದ್ದಾರೆ. ಜನಪದ ಸ್ತ್ರೀಯರು ತಮ್ಮ ಅನುಭವಗಳನ್ನು ಹಾಡಾಗಿಸಿದ್ದಾರೆ. ಈ ಜಾನಪದ ಹಾಡುಗಳ ಕಥಾವಸ್ತು ಬೇರೆ ಯಾವುದೇ ಅನ್ಯ ವಿಚಾರವಾಗಿರುವುದಿಲ್ಲ. ತಮ್ಮ ಬದುಕಿನ ಸುತ್ತಮುತ್ತಣದಲ್ಲಿ ನಡೆಯುವ ಸಂಗತಿಗಳನ್ನೆ ಹಾಡುಗಳಾಗಿ ಕಟ್ಟಿಕೊಂಡು ಬಂದಿದ್ದಾರೆ. ಆದರೆ ನೋಡಿರುವುದೆಲ್ಲ ಇಲ್ಲಿ ಜಾನಪದರಿಗೆ ವಸ್ತುವಾಗುವುದಿಲ್ಲ. ಸಾಮಾಜಿಕ ಜನ ಜೀವನದ ಮೆಲೆ ಪ್ರಭಾವ ಬೀರಿದ ವಿಶಿಷ್ಟವಾದ ಸಂಗತಿಗಳನ್ನು ಇವರು ಪದಕಟ್ಟಿ ಹಾಡಿಕೊಂಡು ಬಂದಿದ್ದಾರೆ.

ಸುತ್ತ ಮುತ್ತ ಜನ ನೆರೆದು ಕುಂತಿರ್ರಿ ಹಿಂಗ
ಕಲಿಯುಗದ ಕೌತುಕ ನಡದಾವ ಬಲ್ಲಂಗ
ಕಲಿಕೆಟ್ಟಿಲ್, ತಲಿಕೆಟ್ಟದ್ ಹೆಣ್ಣು ಗಂಡಿಂದೀಗ ॥ ಕೋಲೆಣ್ಣಾ ಕೋಲೆ ॥

ದೇವರಂತೆ ಅಲ್ಲಿಗೆ ಬಂದು ತನ್ನನ್ನೂ, ಮಗುವನ್ನು ಕಾಪಾಡಿದಂಥ ಗೋಸಾಯಿಯನ್ನು ತನ್ನ ತಂದೆಯಂತೆ ಸೇವೆ ಮಾಡಿ ಸಲುಹಬೇಕೆಂದು ಪತಿಗೆ ಹೇಳುವಳು.

ತಂದಿ ಬಂದಾರಂತ ಬಂದೇವಿಲ್ಲೀಗ
ಬಿಚ್ಚಿ ಬಿಚ್ಚಿ ದು:ಖ ಮಾಡಿ ಹೇಳತಾಳ ತನಪತೀಗ
ತೂಗಿ ತೊಟ ಲೋಳಗ್ಹಾಕಿ ಸಲು ಬೇಕೀವರೀಗ ॥ ಕೋಲೆಣ್ಣಾ ಕೋಲೆ ॥

ಸಮಾಜದಲ್ಲಿ ಹೆಣ್ಣಿನ ಶೀಲಕ್ಕಿರುವ ಮಹತ್ವ, ಆ ಮೌಲ್ಯದಲ್ಲಿ ಏನಾದರೂ ಆತಂಕ, ಅನುಮಾನ, ಉಂಟಾದಲ್ಲಿ ಆ ಹೆಣ್ಣಿನ ಬದುಕಿನಲ್ಲಾಗುವ ಬಿರುಕು, ಪುರುಷ ಪ್ರಧಾನ ಸಮಾಜದಲ್ಲಿ ಶೀಲ ಮೌಲ್ಯದ ಹೆಸರಿನಲ್ಲಾಗುವ ಮಹಿಳಾ ಶೋಷಣೆಗಳನ್ನು ಸರಳವಾಗಿ ಚಿತ್ರಿಸಲಾಗಿದೆ.

ಗಂಡನಿಲ್ಲದ ಬಾಲಿ ಲಿಂಬಿಯ ಹಣ್ಣಿನ್ಹಂಗ
ರಂಬಿ ಬಸುರಾದ ಬಗಿ ಹೇಳರಿ ಕೋಲ

ಇಲ್ಲಿ ಹೆಣ್ಣು ವಿಧ ವಿಧವಾದ ಪರೀಕ್ಷೆಗೆ ಗುರಿಯಾಗುತ್ತಾಳೆ. ಪತಿವ್ರತೆಯಾದವಳು ಹೆದರದೇ ಪರೀಕ್ಷೆಗೆ ಮುಂದಾಗಿ ಜಯಶೀಲಳಾಗುವಳು.

ಕಾಜಿನ ಒಲಿಹೂಡಿ, ಕಬ್ಬಿಣ ಕಡೈನಿಟ್ಟು
ಎಣ್ಣಿ ಕಾಸ್ಯಾರೆ ಎಸರ್ಹಂಗ ಕೋಲ
ಎಲ್ಲ ದೇವರ ನೆನೆದು ಹಾಕ್ಯಾಳೆ ಬಲಗೈಯ
ಮುತ್ತಿನುಂಗುರ ತೆಗದಾಳೆ ಕೋಲ

ಇಲ್ಲಿ ತಪ್ಪು ಯಾರದೇ ಇರಲಿ, ಆದರೆ ಸಮಾಜ ದೋಷಿಸುವುದು ಹೆಣ್ಣನ್ನೆ. ಅಪರಾಧಿಯಾದರೂ ಗಂಡು ಯಾವಾಗಲೂ ನಿರಪರಾಧಿಯ ಸ್ಥಾನದಲ್ಲಿಯೇ ನಿಂತಿರುತ್ತಾನೆ. "ಗಂಗಿ-ಗೌರಿ"ಯರ ಹಾಡಿನಲ್ಲಿ ಶಿವನು ತನ್ನ ಜಡೆಯಲ್ಲಿ ಗಂಗೆಯನ್ನು ತಂದಿರುತ್ತಾನೆ. ಆದರೆ ಗೌರಿಗೆ ಅದರ ಸುಳಿವು ಸಿಗದಂತೆ ಮಾಡಲು ಪ್ರಯತ್ನಿಸುತ್ತಾನೆ. ಆದರೂ ಜಡೆಗೆ ಎಣ್ಣೆ-ನೀರಿನಿಂದ ಎರೆದು ಗಂಗೆಯನ್ನು ಪತ್ತೆ ಹಚ್ಚುತ್ತಾಳೆ. ಅವಮಾನದಿಂದ ಸಿಡಿದೆದ್ದ ಗಂಗೆ ತವರಿಗೆ ಹೊರಟು ಹೋಗುತ್ತಾಳೆ. ನೀರಿಲ್ಲದೆ ಗೌರಿ ತೊಂದರೆಗೆ ಸಿಲುಕಿಕೊಳ್ಳುತ್ತಾಳೆ. ಇಂತಹ ಸನ್ನಿವೇಶಗಳನ್ನು ಪ್ರದರ್ಶಿಸುವ ಹಾಡುಗಳು ಇಲ್ಲಿ ಕಂಡುಬರುತ್ತವೆ.

ಗಂಗಮ್ಮ ಹೋದ ಮ್ಯಾಲ ಗೌರಿ ಮುಟ್ಟಾಗ್ಯಾಳೆ
ಹರಿ ಹಳ್ಳ ಎಲ್ಲ ಬರಿ ಬತ್ತಿ ॥ ಕೋಲೆಣ್ಣಾ ಕೋಲೆ ॥

ಇಲ್ಲಿ ಗಂಗೆ ರೂಪದಲ್ಲಿರುವ ನೀರಿನ ಅವಶ್ಯಕತೆ ಎಷ್ಟೆಂಬುದು ಹಾಡುಗಾರರ ಸೂಕ್ಷ್ಮ ಗ್ರಹಿಕೆಗೆ ಸಾಕ್ಷಿಯಾಗಿ ನಿಲ್ಲುತ್ತದೆ. ಇಲ್ಲಿನ ಜಾನಪದ ಪರಂಪರೆಯಲ್ಲಿ ಶಿವ, ಪಾರ್ವತಿ ಹಾಗೂ ಗಂಗೆಯರು ಪ್ರಕೃತಿಯ ಸೃಷ್ಟಿಯಾಗಿ ಕಂಡುಬರುತ್ತಾರೆ. ಒಂದನ್ನು ಬಿಟ್ಟು ಒಂದಿಲ್ಲ ಎನ್ನುವಂತೆ ಜನಪದರು ಈ ಮೂವರನ್ನು ಸಮಾನ ನೆಲೆಯಲ್ಲಿ ಸ್ವೀಕರಿಸಿರುವುದಾಗಿ ಕಂಡುಬರುತ್ತದೆ. ಹೀಗಾಗಿ ಗಂಗೆ ಸವತಿ ಮಾತ್ಸರ್ಯದಿಂದ ಹೊರಬಂದು, ಅವಳು ಕೂಡ ಜೀವನದ ಅತ್ಯಾವಶ್ಯಕ ಅಂಶವಾಗಿ ಪ್ರತಿನಿಧಿತವಾಗುತ್ತಾಳೆ. ಇದು ಜನಪದ ಪರಂಪರೆಯಲ್ಲಿ ದರ್ಶನವಾಗುವ ಗಂಗೆಯ ಸ್ವರೂಪ. ಹೀಗಾಗಿಯೇ ಜಾನಪದರು ಗಂಗೆಯ ಬಗೆಗೆ ಯಾವುದೇ ಹಾದರದ ಭಾವವನ್ನು ತಾಳುವುದಿಲ್ಲ. ಶಿವ ಬೀಜವಾದರೆ, ಪಾರ್ವತಿ ಭೂಮಿಯಾಗುತ್ತಾಳೆ. ಈ ಬೀಜವು ಭೂಮಿಯಲ್ಲಿ ಮೊಳೆತು ಸಮೃದ್ಧವಾದ ಫಸಲು ಬರುವುದಕ್ಕೆ ಗಂಗೆ(ಮಳೆ) ಅನಿವಾರ್ಯವಾಗಿ ಬೇಕಾಗುತ್ತದೆ. ಹೀಗಾಗಿ ಜಾನಪದರಲ್ಲಿ ಗಂಗೆ ಕೇವಲ ಸವತಿಯಾಗಿ ಮಾತ್ರ ಚಿತ್ರಿತವಾಗುವುದಿಲ್ಲ. ಬದಲಾಗಿ ಪ್ರಕೃತಿಯ ಒಂದಂಶವಾಗಿ ಕಂಡುಬರುತ್ತಾಳೆ. ಇಂತಹ ಹಲವಾರು ಸನ್ನಿವೇಶಗಳನ್ನು ಬೀದರ್ ಪ್ರಾಂತ್ಯದ ಮಹಿಳಾ ಜಾನಪದ ಹಾಡುಗಳಲ್ಲಿ ಗುರುತಿಸಬಹುದಾಗಿದೆ.

'ಸೀತಾಪಹರಣ' ಹಾಡಿನಲ್ಲಿ ರಾವಣನು ಮೋಸದಿಂದ ಬಂಗಾರದ ಜಿಂಕೆಯಾಗಿ ಬಂದು ಸೀತೆಯನ್ನು ಅಪಹರಿಸಿದ ದೃಶ್ಯವು ಪ್ರಸ್ತುತ ಹಾಡಿನಲ್ಲಿದೆ.

ಎಷ್ಟನೆ ಹೇಳಿದರ ಕೇಳಳ್ಳೆ ಸೀತಾದೇವಿ
ಹಟ ಮಾಡಿ ಆಕಿ ಬೇಡುತ್ತಾಳೆ ಕೋಲ ॥ ೨ ॥
ಲಂಕಾದ ರಾವಳ ಏನಂತ ಅನುತಾನೆ
ನೀರರ ನೀನು ಕೊಡಬೇಕೆ ಕೋಲ ॥ ೨ ॥

ಈ ರೀತಿ ಸೀತಾದೇವಿಯನ್ನು ರಾವಣನು ಅಪಹರಿಸಿಕೊಂಡು ಹೋಗುವ ದೃಶ್ಯ ಈ ಹಾಡಿನಲ್ಲಿ ಸುಂದರವಾಗಿ ಮೂಡಿಬಂದಿದೆ. ಸೀತೆಯನ್ನು ರಾವಣ ಅಪಹರಿಸಿಕೊಂಡು ಹೋಗುವ ಸನ್ನಿವೇಶವನ್ನು ಜಾನಪದರು ತುಂಬಾ ಕರುಣಾಜನಕವಾಗಿ ಚಿತ್ರಿಸಿಕೊಂಡು ಬಂದಿದ್ದಾರೆ. ಅದರಲ್ಲೂ ಮಹಿಳೆಯರೇ ಸೃಷ್ಟಿಸಿರುವ ಬಹುತೇಕ ಹಾಡುಗಳು ಸ್ತ್ರೀ ಸಂವೇದನೆಯ ಆಳ ಮತ್ತು ಅಗಲವನ್ನು ಈ ಜಾನಪದ ಹಾಡುಗಳಲ್ಲಿ ಸೆರೆಹಿಡಿದಿದ್ದಾರೆ.

'ಪಾಂಡವರ' ಹಾಡಿನಲ್ಲಿ ಕರ್ಣನ ಜನ್ಮ ವೃತ್ತಾಂತವನ್ನು ಸುಂದರವಾಗಿ ಈ ಹಾಡಿನಲ್ಲಿ ನಿರೂಪಿಸಲಾಗಿದೆ.

ಪಾಂಡುರಾಜಾ ಮಾಡಿದ ಕರ್ಮ ಭವ ಎಳ್ಳೀನ ಕೊಲ್ಲ್ಯಾನ ಪ್ರಾಣ
ಇಲ್ಲಿ ಶರಪ ತಗೊಂಡಾನ ಸಖಿಯೇ ಉಪಾಯ ಮಾಡಲೇನ ॥ ಕೋಲ ॥ ೨ ॥
ಹಾದಿಗ್ಹಡದಾರಂತಾರ ಜನ ಉಳಿವಲ್ಲ ಎನ್ನ ಮಾನ
ಸಖೀಯೇ ಗಂಗಿ ಪಾಲಾ ಮಾಡ್ಯಾಳ ಮಗನ ॥ ಕೋಲ ॥

ಜನನಿಂದೆಗೆ ಹೆದರಿ ಕುಂತಿ ಕರ್ಣನನ್ನು ಗಂಗೆಯ ಪಾಲು ಮಾಡುವಳು. ಮುಂದೆ ಕರ್ಣ ತನ್ನ ಜನ್ಮ ವೃತ್ತಾಂತ ಅರಿಯದೇ ಪಾಂಡವರ ವಿರುದ್ಧ ಪಕ್ಷದಲ್ಲಿ ನಿಲ್ಲುವನು. ಆದರೆ ಅಧರ್ಮದ ಪಕ್ಷದಲ್ಲಿದ್ದುದರಿಂದ ಕರ್ಣನ ಅವಸಾನವುಂಟಾಗುವುದು. ಜಾನಪದ ಹಾಡುಗಳು ಕೇವಲ ತನ್ನ ಸುತ್ತಮುತ್ತಲಿನಲ್ಲಿ ನಡೆಯುವ ಸನ್ನಿವೇಶವನ್ನು ತಮ್ಮಲ್ಲಿ ಗರ್ಭೀಕರಿಸಿಕೊಂಡಿರುವುದಿಲ್ಲ. ಪುರಾಣ ಮತ್ತು ಇತಿಹಾಸದ ಹಲವು ಸಂಗತಿಗಳು ಈ ಜಾನಪದ ಪರಂಪರೆಯಲ್ಲಿ ಮೌಖಿಕವಾಗಿ ಬೆಳೆದುಬಂದಿವೆ.

ನೂರನೊಂದು ಕೌರವರು ಮಾಪುಂಡ ಬಲ ಕರಣ
ಬಿಡಬ್ಯಾಡಂದರಂದ ಬಲಭೀಮ ಸಕೀಯೇ ಉಪಾಯಮಾಡಲೇನ ॥ ಕೋಲ ॥ ೨ ॥

ಹಿಂದೆ ಆಗಿ ಹೋದ ಮಹತ್ವದ ಘಟನೆಗಳು ಇತಿಹಾಸದ ಪ್ರಪಂಚಕ್ಕೆ ಸೇರುತ್ತವೆ. ಆ ಘಟನೆಗಳು ಜನಪದರ ಮನಸ್ಸಿನಲ್ಲಿ ಬೇರೂರಿ ಕಥೆ, ಕವನಗಳ ಮೂಲಕ ಅಭಿವ್ಯಕ್ತವಾಗಿ ಜನಪದರ ಮಧ್ಯದಲ್ಲಿ ಜೀವಂತವಾಗಿರುತ್ತವೆ. ಬೀದರ್ ಭಾಗದ ಬುಲಾಯಿ ಹಾಡುಗಳು ಹಲವಾರು ವಿಚಾರಗಳ ಗಣಿಯಾಗಿ ಕಾರ್ಯನಿರ್ವಹಿಸುತ್ತ ಬಂದಿವೆ. ಇಲ್ಲಿ ಸಮಾಜದ ವಿವಿಧ ಸ್ತರಗಳು ಜೀವಂತ ನೆಲೆಯಲ್ಲಿ ಚಿತ್ರಿತವಾಗಿರುವುದನ್ನು ಗುರುತಿಸಬಹುದಾಗಿದೆ.

೧೯೪೭ ಅಗಷ್ಟ ೧೫ ರಂದು ಭಾರತ ಬ್ರೀಟೀಷರಿಂದ ಸ್ವತಂತ್ರವಾದರೂ ಹೈದ್ರಾಬಾದ ನಿಜಾಮನು ಭಾರತದ ಒಕ್ಕೂಟದಲ್ಲಿ ವಿಲೀನನಾಗಲು ಸಿದ್ಧವಿರಲಿಲ್ಲ. ಅಲ್ಲಿಯ ಸೈನ್ಯದ ಮುಖ್ಯಸ್ಥನಾದ ಖಾಸೀಮ್ ರಜವಿಯ ನೇತೃತ್ವದಲ್ಲಿ ಹಿಂದೂಗಳನ್ನೆಲ್ಲ ಕೊಲೆ ಮಾಡುತ್ತ ಹೆಣ್ಣುಮಕ್ಕಳ ಮಾನಭಂಗ ಮಾಡುತ್ತ ನಡೆದನು. ಆದರೆ ಸರ್ದಾರ ವಲ್ಲಭಾಯಿಯವರ ದಿಟ್ಟತನದ ನಿಲುವಿನಿಂದ ಮಿಲಿಟರಿ ಇಲ್ಲಿಗೆ ಬಂದು ಮುಸ್ಲಿಮರನ್ನು ಕೊಂದದ್ದಷ್ಟೇ ಅಲ್ಲ. ನಿಜಾಮನ ದರ್ಪ ಮತ್ತು ಆತನ

ಸಾಮ್ರಾಜ್ಯವನ್ನು ನಿರ್ಮೂಲನೆ ಮಾಡಿತು. ಈ ಕುರಿತು ಹಲವಾರು ಬುಲಾಯಿ ಹಾಡುಗಳು ಬೀದರ್ ಪ್ರಾಂತ್ಯದಲ್ಲಿ ಕಂಡುಬರುತ್ತವೆ. ಈ ಮಹಿಳಾ ಹಾಡುಗಳಲ್ಲಿ ಸಾಮಾಜಿಕ ಕಳಕಳಿ ಇದ್ದು, ಜೀವಪರವಾದ ನಿಲುವುಗಳನ್ನು ಇವುಗಳಲ್ಲಿ ಗುರುತಿಸಬಹುದಾಗಿದೆ. ಇದರ ಜೊತೆಗೆ ರಜಾಕಾರರ ಹಾವಳಿಯನ್ನು ಹಿಮ್ಮೆಟ್ಟಿಸುವ ನೆಲೆಯಲ್ಲಿ ಇಲ್ಲಿನ ಯುವಜನತೆಯನ್ನು ಹುರಿದುಂಬಿಸುವ ಕ್ರಾಂತಿಗೀತೆಗಳಾಗಿ ಈ ಮಹಿಳಾ ಬುಲಾಯಿ ಹಾಡುಗಳು ಕಾರ್ಯಪ್ರವೃತ್ತವಾಗಿರುವುದು ಕಂಡುಬರುತ್ತದೆ.

ಹೈದರಾಬಾದ ಬೀದರ ಜಿಲ್ಲಾ ರಝಾಕಾರ ಪುಂಡರೆಲ್ಲಾ
ದಂಡೆತ್ತಿ ಬಂದಾರೋ ಗೊರಟ ಮ್ಯಾಲ ॥ ಕೋಲೆಣ್ಣಾ ಕೋಲೆ ॥
ಲಾತೂರ ಖಾಸೀಮನು ಜೊಕಮಾರ ನಂತಿಹನು
ರಝಾಕಾರರಾಗಿ ಉರಿದಿದ್ದನು ॥ ಕೋಲೆಣ್ಣಾ ಕೋಲೆ ॥
ರಾಸೂರ ಹುಮನಾಬಾದಿ ಬೀದರ ಜಹಿರಾಬಾದಿ
ಹೋಗ್ಯಾರೋ ಹೈದರಾಬಾದಿ ॥ ಕೋಲೆಣ್ಣಾ ಕೋಲೆ ॥

ಇದೊಂದೇ ಗ್ರಾಮವಲ್ಲದೆ ಇಂಥ ಹಲವಾರು ಊರುಗಳಲ್ಲಿಯೂ ಇದೇ ರೀತಿಯ ಕ್ರೂರಕೃತ್ಯ ನಡೆಸಿದರು. ಅನೇಕರು ಪ್ರಾಣ ಕಳೆದುಕೊಂಡರು. ಉಳಿದವರು ಪ್ರಾಣಭೀತಿಯಿಂದ ಸೊಲ್ಲಾಪುರ, ಬಿಜಾಪುರ, ಪುಣೆಗಳಿಗೆ, ಹೊರಟು, ವಾಡಿ ಮುಂತಾದ ಊರುಗಳಿಗೆ ಓಡಿ ಹೋಗಿ ಪ್ರಾಣ ಉಳಿಸಿಕೊಂಡರು. ಧಾರ್ಮಿಕ ಹಿನ್ನೆಲೆಯಲ್ಲಿ ಮೂಡಿ ಬಂದಿರುವ ಬುಲಾಯಿ ಹಾಡುಗಳಲ್ಲಿ ಪುರಾತನ ಹಾಗೂ ನೂತನ ಶಿವಶರಣರನ್ನು, ಭಕ್ತರನ್ನು ಕುರಿತಾದ ಹಾಡುಗಳು ವಿಶಿಷ್ಟವಾಗಿವೆ.

ಜಾಗೀರಿ ಡೊಣಗಾಯಿ ಸ್ವಾಮಿ ಎನ್ನದೇ ಕಾಯಿ
ಮರ್ಥ್ಯದಾಗ್ಹಾರಾ ಹಾವಗಿ ಸ್ವಾಮಿ ॥ ಕೋಲೆಣ್ಣಾ ಕೋಲೆ ॥
ರಂಡ್ಯಾಳ ಊರಲ್ಲಿ ಸತಿ ಪತಿ ಮನೆಯಲ್ಲಿ
ಭಾಳ ಬಡತನ ಅವರಲ್ಲಿ ॥ ಕೋಲೆಣ್ಣಾ ಕೋಲೆ ॥

ಗಂಡನಿಗೆ ನಾಗರ ಹಾವು ಕಡಿದು ಸಾವನ್ನಪ್ಪುವನು. ಮರುದಿನ ಬೆಳಂಬೆಳಿಗ್ಗೆ ಜಂಗಮರು ಭಿಕ್ಷೆಗೆ ಬಂದಾಗ ಹೇಗೆ ತಿರುಗಿ ಕಳಿಸುವುದು ಎಂದು ಹಣೆಯಲ್ಲಿ ಕುಂಕುಮ ಹಚ್ಚಿಕೊಂಡು ಜಂಗಮರಿಗೆ ಭಿಕ್ಷೆ ನೀಡುವಳು. ಸಂತುಷ್ಟನಾದ ಜಂಗಮ ಮುತ್ತೈದಿತನ ಕೊನೆತನಕ ಇರಲೆಂದು ತಲೆಮೇಲೆ ಕೈಯಾಡಿಸುವರು. ಇದರಿಂದ ಸತ್ತ ಗಂಡ ಜಂಗಮನ ಪಾದಸ್ಪರ್ಷದಿಂದ ಎದ್ದು ಕುಳಿತು ಕೊಳ್ಳುವರು. ಇದೊಂದು ಪವಾಡವೆಂದೇ ಹೇಳಬೇಕು. ಎಲ್ಲಿ ಭಕ್ತರಿಗೆ ದೇವರು, ಗುರು, ಲಿಂಗ, ಜಂಗಮರಲ್ಲಿ ನಿಷ್ಠೆ ಇರುವುದೋ ಅಲ್ಲಿ ದೇವರ ಅನುಗ್ರಹವುಂಟಾಗುವುದೆಂದು ಹೇಳಲಾಗುವುದು. ಭಕ್ತಿಯ ಪ್ರವರ್ತಕ ನೆಲೆಯಲ್ಲಿ ಬುಲಾಯಿ ಹಾಡುಗಳು ಈ ಭಾಗದಲ್ಲಿ ವಿಶೇಷವಾಗಿ ಕಂಡುಬರುತ್ತವೆ.

ಬುಲಾಯಿ ಹಾಡುಗಳ ವೈಶಿಷ್ಟ್ಯ:

ಜನಪದ ಹಾಡುಗಳು ಒಂದು ನಾಡಿನ ಸಂಸ್ಕೃತಿಯ ವಾಹಕಗಳು. ಜನಪದರ ಬದುಕಿನ ರೀತಿ, ನೀತಿ, ನಂಬಿಕೆ, ಆದರ್ಶ, ಆಲೋಚನೆ, ಕಲ್ಪನೆ, ಶೌರ್ಯ ಸಾಹಸ ಮುಂತಾದ ಅಂಶಗಳು ಹಾಡಾಗಿ ಹೊರಹೊಮ್ಮುತ್ತವೆ. ಜನಪದರು ತಮ್ಮ ಅನುಭವಗಳಿಗೆ ಹಾಡಿನ ರೂಪಕೊಟ್ಟು ತಣಿದಿದ್ದಾರೆ. ಆ

ಮೂಲಕ ತಮ್ಮ ಸಂಸ್ಕೃತಿಯನ್ನು ಮೌಖಿಕವಾಗಿ ಮುಂದುವರೆಸಿಕೊಂಡು ಹೋಗಿದ್ದಾರೆ. ಈ ಬುಲಾಯಿ ಹಾಡುಗಳಲ್ಲಿ ಈ ಅಂಶ ಸ್ಪಷ್ಟವಾಗಿ ಎದ್ದು ತೋರುತ್ತದೆ.

ಒಟ್ಟಾರೆ ಬೀದರ್ ಪ್ರದೇಶದ ಜನಪದ ಸಂಸ್ಕೃತಿಯ ಸಾಮಾಜಿಕ, ಧಾರ್ಮಿಕ ಹಾಗೂ ಪೌರಾಣಿಕ ಪ್ರಜ್ಞೆಯ ಚಿತ್ರಣವನ್ನು ಇವು ನೀಡುವುದರ ಜೊತೆಗೆ ಇತಿಹಾಸದ ಪುನರ್ ರಚನೆಗೆ ಮಹತ್ವದ ಆಕಾರ ಸಾಮಗ್ರಿಗಳಾಗಿ ನಿಂತಿವೆ. ಭಾಷಾ ಪರಂಪರೆಯನ್ನು ಶ್ರೀಮಂತಗೊಳಿಸಿ ಅದರ ಅಧ್ಯಯನಕ್ಕೆ ಜೀವಂತವಾದ ಮೌಖಿಕ ಸಾಮಗ್ರಿಗಳಾಗಿವೆ. ಬುಲಾಯಿ ಹಾಡುಗಳು ಬದಲಾಗುತ್ತಿರುವ ಸಮಾಜದಲ್ಲಿ ಹಿಂದಿನ ಸಂಸ್ಕೃತಿಯನ್ನು ಪ್ರತಿನಿಧಿಸಿ ಸಂಶೋಧನೆಗೆ ಆಕರವನ್ನು ಒದಗಿಸುತ್ತವೆ. ಆ ಕಾರಣಕ್ಕಾಗಿ ಅವುಗಳನ್ನು ಸಂಗ್ರಹಿಸದೆ ಬಿಡುವುದು ಸರಿಯಲ್ಲ. ಹಾಡು ಹೇಗೆಯೇ ಇರಲಿ ಆ ಹಾಡಿನ ಒಳ ಹರವು ನಮಗೆ ಮುಖ್ಯವಾಗಿರುತ್ತದೆ. ಆದ್ದರಿಂದ ಅವುಗಳನ್ನು ನಿರ್ಲಕ್ಷಿಸಿ ಕೈ ಬಿಡುವುದು ತಪ್ಪಾಗುತ್ತದೆ. ಜಾನಪದ ಅಧ್ಯಯನ ಸಮರ್ಪಕವಾಗಿ ನಡೆಯಬೇಕಾದರೆ ಅದಕ್ಕೆ ಪೂರಕ ಸಾಮಗ್ರಿ ಇಡಿಯಾಗಿ ದೊರೆಯಲೇಬೇಕು. ಆ ದಿಶೆಯಲ್ಲಿ ಈ ಹಾಡುಗಳ ಸಂಗ್ರಹ ಕಾರ್ಯ ನಡೆಯಬೇಕು. ಆಗ ಬುಲಾಯಿ ಹಾಡುಗಳ ಕುರಿತು ನಿಖರವಾಗಿ ಸಂಶೋಧನೆ ಮಾಡಲು ಸಾಧ್ಯವಾಗುತ್ತದೆ. ಇಂತಹ ಹಾಡುಗಳು ಮುಂದಿನ ಪೀಳಿಗೆಗೆ ತಮ್ಮ ನಾಡಿನ ಚರಿತ್ರೆಯನ್ನು ಅರಿಯುವುದಕ್ಕೆ ಪ್ರಮುಖವಾದ ಆಧಾರಗಳಾಗುತ್ತವೆ.

೪.೨ ಶೀಗಿ ಹಾಡುಗಳು:

ಹೆಣ್ಣು ಮಕ್ಕಳು ಶಿವ ಶಿವೆಯರ ಕುರಿತು ಆಡುವ ಹಾಡುವ ಶೀಗಿ. ಇದೊಂದು ಸಾಂಪ್ರದಾಯಿಕ ಕಲೆ. ಇದಕ್ಕೆ ತನ್ನದೇ ಆದ ಪರಂಪರೆ ಇದೆ. ಇದನ್ನು ಆಡುವಾಗ ಹಾಡುವ ಹಾಡುಗಳು ಕೂಡ ಶೀಗಿ ಹಾಡುಗಳೆಂದೇ ಪ್ರತ್ಯೇಕವಾಗಿವೆ. ಶೀಗಿ ಬರೆಯುವುದು ವಿಜಯದಶಮಿಯ ಮಹಾನವಮಿಯ ದಿನದಿಂದ ಪ್ರಾರಂಭಿಸಿ ಹುಣ್ಣಿಮೆಗೆ ಮುಕ್ತಾಯವಾಗುತ್ತದೆ. ಮುಂದೆ ಒಂದು ತಿಂಗಳಲ್ಲಿ ಬರುವ ಗೌರಿ ಹುಣ್ಣಿಮೆಗೆ ಗೌರಿ ಕುರಿತು ಆಡಿ ಹಾಡುವ ಸಂಪ್ರದಾಯವಿದೆ. ಹೀಗೆ ಶಿವ ಹಾಗೂ ಅವನ ಅರ್ಧಾಂಗಿನಿಯರಾದ ಗಂಗಿ–ಗೌರಿಯರನ್ನು ಕುರಿತು ಸ್ಮರಿಸುವ, ಹೊಗಳುವ, ಹಾಡುವ ಭವ್ಯ ಪರಂಪರೆಯ ಒಂದು ಜನಪದ ಆಚರಣೆಯೇ "ಶೀಗಿ" ಆಗಿದೆ.

ಬೀದರ್ ಜಿಲ್ಲೆಯ ಆಡು ನುಡಿಯಲ್ಲಿ ಶೀಗಿ, ಶೀಗೆ, ಶಿವುಗಿ ಮುಂತಾಗಿ ಬಳಸುವುದಲ್ಲದೆ, ಅಳತೆ ಮಾಡುವಾಗಲೂ ಶೀಗಿ ಎಂಬ ಪದವನ್ನು ಬಳಸುವುದನ್ನು ಕಾಣುತ್ತೇವೆ. ಹೆಣ್ಣು ಮಕ್ಕಳು ತಲೆಸ್ನಾನ ಮಾಡುವಾಗ ಶೀಗಿಕಾಯಿಯನ್ನು ತಲೆಗೆ ಹಚ್ಚಿಕೊಂಡು ಸ್ನಾನ ಮಾಡುವರು. ಇದಕ್ಕೂ ಶೀಗಿ ಎಂದೇ ಕರೆಯುವರು. ಪ್ರತಿವರ್ಷ ತನ್ನದೇ ಆದ ನಿರ್ದಿಷ್ಟ ದಿನದಂದು ಆಡುವ ಹಾಡುವ 'ಶೀಗಿ'. ಈ ಮೇಲಿನ ಯಾವ ಒಂದು ಪದಗಳಿಗೂ ಸೇರದಂಥ, ಅನ್ವಯಿಸದಂಥ ವಿಶಿಷ್ಟ ರೀತಿಯ ಸಾಂಪ್ರದಾಯಕ ಸ್ವರೂಪವುಳ್ಳದ್ದಾಗಿದೆ. ಇದನ್ನು ಆಡುವುದು, ಹಾಡುವುದು, ಗಮನಿಸಿದಾಗ ಶಿವ–ಶಿವೇಯರು ಸೀಗೀ ಹೊಡೆಯುವುದಕ್ಕೆ ಈ ಆಟವಾದ ಕಾರಣ ಶೀಗಿ ಪದ ಹುಟ್ಟಿಕೊಂಡಿರಬೇಕು. ಈ ಆಚರಣೆಯು ಎಲ್ಲಾ ಕಾಲದಲ್ಲಿ ಕಂಡುಬರುವುದಿಲ್ಲ. ಇದಕ್ಕೆ ತನ್ನದೆ ಆದ ನಿರ್ಧಿಷ್ಟವಾದ ಸಂದರ್ಭವಿದೆ. ಅದನ್ನು ನಾವು ಈ ಮುಂದಿನಂತೆ ಅಧ್ಯಯನಕ್ಕೆ ಗುರಿಪಡಿಸಬಹುದಾಗಿದೆ.

ಶೀಗಿ ಆಡುವ ಸಂದರ್ಭ:

ಯಾವುದೇ ಆಟವಾಡಲು ಅವರದೇ ಆದ ಸಂದರ್ಭಗಳಿರುತ್ತವೆ. ಮಕ್ಕಳು ಕೆಲಮೊಮ್ಮೆ ಹೆಚ್ಚಾಗಿ ಕುಣಿಯುವದಕ್ಕೂ ಅವುಗಳಿಗೆ ಸಂತೋಷ ಉಕ್ಕಿ ಬರಬೇಕಾಗುತ್ತದೆ. ಶೀಗಿ ಪ್ರತಿವರ್ಷ ಮಾನಂಬಿ ದಿನದಂದು ಆಡಲು ಪ್ರಾರಂಭಿಸಿ, ಬರುವ ಶೀಗಿ ಹುಣ್ಣಿಮೆ ತನಕ ಆಡಿ ಶೀಗಿ ಹುಣ್ಣಿಮೆ ದಿನದಂದು ಮುಕ್ತಾಯಗೊಳಿಸುತ್ತಾರೆ. ಇದನ್ನು ಶೀಗಿ ಆಚರಣೆಯ ಹಾಡಿನಲ್ಲಿಯೂ ಕಾಣಬಹುದಾಗಿದೆ.

ಈಳೆಯವ ಕುಡುಲಾಕ ಸರಿಯವ ಬರುಲಾಕ
ಕುಡು ನನ್ನ ಹಬ್ಬ ದಸರಿಯೇ ಕೋಲೆ
ಕೂಡೂ ನನ್ನ ಹಬ್ಬ ದಸರಿ ಮಾನಂಬಿದಿನ
ಹಸುಮಕ್ಕಳೆಲ್ಲಾ ಗವರ್‍ಯಾಡಿ ಕೋಲೆ [೪]

ಹೀಗೆ ಮಾನಂಬಿಯಿಂದ ಏಳು ದಿನಗಳು ಶೀಗಿ ಆಚರಿಸುವ ಸಮಯವಾಗಿದೆ. ಸಾಮಾನ್ಯವಾಗಿ ಸಾಯಂಕಾಲ ಏಳು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೆ ಒಬ್ಬೊಬ್ಬರ ಮನೆಯ ಮುಂದೆ ಸ್ವಲ್ಪಸ್ವಲ್ಪ ಹೊತ್ತು ಈ ಶೀಗಿ ಹೊಡೆಯುವುದು ಮತ್ತು ಹಾಡಿ ಆಡುವುದು. ಈ ಆಚರಣೆಯು ಹಿಂದು ಮಹಿಳೆಯರಾದ ಲಿಂಗಾಯತ, ಜಂಗಮ, ಪಾಂಚಾಳ ಮುಂತಾದವರು ಆಚರಿಸುವುದನ್ನು ಕಾಣುತ್ತೇವೆ. ಈ ಶೀಗಿ ಆಚರಣೆಯಲ್ಲಿ ಹೆಚ್ಚಾಗಿ ಚಿಕ್ಕ ವಯಸ್ಸಿನ ಹುಡುಗಿಯರು ಹಾಗೂ ವಯಸ್ಸಾದ ಮುದುಕಿಯರೇ ಭಾಗವಹಿಸುವರು. ಏಕೆಂದರೆ ಮಧ್ಯಮ ವಯಸ್ಸಿನವರಿಗೆ ದಿನನಿತ್ಯ ಜೀವನದ ಕೆಲಸದಲ್ಲಿ ಸಮಯದ ಬಿಡುವು ಕಡಿಮೆ. ಓಣಿಯವರೆಲ್ಲ ಸೇರಿ ಎಲ್ಲರ ಮನೆಯ ಮುಂದೆ ಈ ಹಬ್ಬದ ಸಮಯದಲ್ಲಿ ಎಲ್ಲಾ ಒತ್ತಡಗಳಿಂದ ಬಿಡುವು ಮಾಡಿಕೊಂಡು ಸ್ವಲ್ಪ ಸ್ವಲ್ಪ ಆಡಿ ಹಾಡುವರು. ಇದು ಕಡ್ಡಾಯವಾಗಿರದಿದ್ದರೂ ಸಂಪ್ರದಾಯವಾಗಿದೆ.

ಆಕಳ ಸಗಣಿಯನ್ನು ಪವಿತ್ರವೆಂದು ಭಾವಿಸುವುದುಂಟು. ಕಾರಣ ಮಹಾಭಾರತದ ಅನುಶಾಸನ ಪರ್ವದಲ್ಲಿ ಒಂದು ಕಥೆ ಇದೆ, ಹಸುಗಳೆಲ್ಲ ಒಂದು ಕಡೆ ಮೇಯುತ್ತಿದ್ದಾಗ ಅಲ್ಲಿಗೆ ಲಕ್ಷ್ಮೀ ಬಂದು ಅವುಗಳನ್ನು ನೋಡಿ ಯಾವ ವರಗಳನ್ನಾದರೂ ಬೇಡಿಕೊಳ್ಳಿ ಎಂದಳು. ಹೊಟ್ಟೆ ತುಂಬಿಕೊಂಡಿದ್ದ ಹಸುಗಳು ಲಕ್ಷ್ಮೀಯ ಮಾತನ್ನು ಲಕ್ಷಿಸಲಿಲ್ಲ. ಮತ್ತೆ ಬಲವಂತ ಪಡಿಸಿದಳು. ಆಗ ಹಸುಗಳು ನಮ್ಮ ಶ್ರೇಷ್ಠತೆ ನಮ್ಮ ಸೆಗಣೆಯಲ್ಲಿಯೂ ಉಳಿಯಬೇಕು ಎಂದು ಕೇಳಿಕೊಂಡವು. ಆಗ ಲಕ್ಷ್ಮೀ ಆಶೀರ್ವದಿಸಿದಳು. ಈ ಕಾರಣದಿಂದ ಇಂದಿಗೂ ಸೆಗಣಿ ಮಂಗಳಕರವಾದುದೆಂದು ನಂಬಿಕೆಯಿದೆ. ಅಂತೆಯೇ ಸೆಗಣಿಯನ್ನು ಮನೆಸಾರಿಸಲು, ಅಂಗಳಕ್ಕೆ ಥಳಿ ಹಾಕಲು ಬಳಸುತ್ತಾರೆ. ಅದೇ ರೀತಿ ಶೀಗಿ ಬರೆಯಲು ಕೂಡಾ ಆಕಳ ಸೆಗಣಿಯನ್ನೇ ಉಪಯೋಗಿಸುತ್ತಾರೆ. ಇದು ಕ್ರಿಮಿನಾಶಕವೂ ಹೌದು. ಆಕಳ ಸೆಗಣೆಯಿಂದ ಶೀಗಿ ಬರೆದು ಅದಕ್ಕೆ ವಿಶೇಷವಾಗಿ ಕುಕ್ಕೇನ್ ಹೂ, ಕಾರಳ ಹೂಗಳನ್ನು ಬಳಸುವರು. ಅದಕ್ಕಾಗಿ ಈ ಹೂಗಳ ಕುರಿತು ಶೀಗಿ ಹಾಡಿನಲ್ಲಿ ಅಳವಡಿಸಿ ಹಾಡುವರು.

ಕುಕ್ಕೇನ್ಹೂವಕ ಭಾಳ ಪ್ರೀಯ ರಂಗಯ್ಯ ॥ ೨ ॥

ಯಾಕೋ ರಂಗಯ್ಯ ನಿನ್ನ ಕಾಕ ಬದಿಗೋಳು ॥ ೨ ॥

ಸಾಕ ನಡಿ ನಡಿ ಸರಿಯ ಸೌತಿ ಮನಿಕಡಿ ॥ ೨ ॥
ಹರಿಯ ಹಾಯಲ್ಲ್ಯೋ ದೊಡ್ಡ ಮಡವ ಡುಮಕಲ್ಲ್ಯೋ॥ ೨ ॥

ಕಾರಳ್ಹೂವಕ ಭಾಳ ಪರಿಯ ಮಾಡಿರೆ ॥ ೨ ॥


ಯಾಕೋ ರಂಗಯ್ಯ ನಿನ್ನ ಕಾಕ ಬದಿಗೋಳು ॥ ೨ ॥

ಸಾಕ ನಡಿ ನಡಿ ಸರಿಯ ಸೌತಿ ಮನಿಕಡಿ॥ ೨ ॥

ಹರಿಯ ಹಾಯಲ್ಲ್ಯೊ ದೊಡ್ಡ ಮಡವ ಡುಮಕಲ್ಲ್ಯೊ ॥ ೨॥ [೫]

ಇಲ್ಲಿ ಶೀಗೆ ಆಚರಣೆಗೆ ಬೇಕಾಗುವ ಕುಕ್ಕೆ, ಕಾರಳ, ಝುಂಡೂ ಹೂ ಮುಂತಾದವುಗಳು ತರುವುದು. ತರದಿದ್ದರೆ ಶೀಗಮ್ಮ ಮುನಿಯುವಳು. ಹೇಗಾದರೂ ಮಾಡಿ ತಂದ ಹೂಗಳಿಗೆ ಬಹಳಷ್ಟು ಪರಿಪರಿ ಮಾಡುವುದು ಅವುಗಳಿಂದ ಶೀಗಿಯನ್ನು ಶೃಂಗರಿಸುವುದಾಗಿದೆ. ಆದರೆ ರಂಗಯ್ಯ ಕಾಡಿಸುವ ಕಾರಣ ಸವತಿಯ ಮನೆಕಡೆಗೆನಡೆ ಎನ್ನಲಾಗಿದೆ. ಏಳು ದಿವಸವು ಶೀಗಿ ಬರೆಯುವ ವಿನ್ಯಾಸ ಬೇರೆ ಬೇರೆಯೇ ಆಗಿರುತ್ತದೆ.


01) ಮೊದಲನೇ ದಿವಸಕ್ಕೆ ಚುಕ್ಕಿ ಚಂದ್ರರ ವಿನ್ಯಾಸ. * * * * 

02) ಎರಡನೇ ದಿವಸಕ್ಕೆ ಗಂಗಿ–ಗೌರಿ ವಿನ್ಯಾಸ 

03) ಮೂರನೇ ದಿವಸಕ್ಕೆ – ಖಬ್ಬಿನ ಮಡು 

04) ನಾಲ್ಕನೇ ದಿವಸಕ್ಕೆ – ಭಾರಂಭಾಯಿ ಬಾಳೇ ಗಿಡ ಕಮಲದ ಹೂ 

05) ಐದನೇ ದಿವಸಕ್ಕೆ – ಕರಬನ – ಅಡಕೀಲ 

06) ಆರನೇ ದಿವಸಕ್ಕೆ – ಏಳು ಸುತ್ತಿನ ಕ್ವಾಟಿ 

07) ಏಳನೇ ದಿವಸ ಹುಣ್ಣಿಮೇ: ಕೊನೆಯ ದಿನ ಗಂಗಿ –ಗೌರಿಯರನ್ನು ಬಿಳ್ಕೊಡುವದಿನ ಈ ಹಾಡನ್ನು ಹೇಳುವರು.

ಒಂದ ಸೇರಕ್ಕಿ ತರಲೇ ಗೌವರವ್ವಗೊಂದೇ ಮಂಡಲ ಬರಿಲೇ

ಚುಕ್ಕಿ ಚಂದರಗೇರಿ ನೆರಮನಿ ಗುಜರತಿ ಕರದು

ಬಾಗಿಣ ಕೊಡಲೇ ಗವರವ್ವಗ ಹುಣ್ಣಿ ಮಾಡಿ ಖಳಕೂಡಲೇ [೬]

ಹೀಗೆ ಏಳು ದಿನದ ಏಳು ಸೇರಕ್ಕಿ ತರಲೇ ಎಂದು ಹಾಡುತ್ತ ಗಂಗಿ–ಗೌರಿಯರನ್ನು ಗಂಡನ ಮನೆಗೆ ಕಳಿಸಿಕೊಡುವಂತೆ ಹಾಡು ಹೇಳುವರು. ಮುಕ್ತಾಯಗೊಳಿಸುವಾಗ ಆರತಿ ಪದದೊಂದಿಗೆ, ಫರಾಳ ತೋರುವ ಪದಗಳನ್ನು ಹಾಡುವರು.

ಚುಕ್ಕಿಯ ಸೀರುಟ್ಟು ಚುಣಕದ ಬೊಟ್ಟಿಟ್ಟು
ಶಂಭೋ ಶಿವನು ರಂಬಿ ಪಾರ್ವತಿಗಾರುತಿ ಬೆಳಗುವೆನು
ಸಾರಿ ಬಂದೇವೆ ದಾರೀಗಿ ನಾಯೇನೆಂದೆ
ರೀ ರೀ ಮೊದಲಾಗಿ ಪಾರ್ವತಿಗಾರೂತಿ ಬೆಳಗುವೇನೆ
ಗಂಜಿಯ ಸೀರುಟ್ಟು ಗಂಧದ ಬಟ್ಟಿಟ್ಟು
ಶಂಬೋ ಶಿವನು ರಂಬಿ ಪಾರ್ವತಿಗಾರುತಿ ಬೆಳಗುವೇನೆ.

ಎಂಬ ನುಡಿಯಿಂದ ಮುಕ್ತಾಯವಾಗುವುದು. ನಂತರ ಫರಾಳ ಪದ ಹೇಳುವರು:

ಗೌರವ್ವ ಗೌರವ್ವ ಹೂವಾ ಮುಡಿಯವ್ವ
ಅವರಿಹಂತ ಅಣ್ಣೆರಲಿ, ತೊಗರಿಹಂತಾ ತಮ್ಮಿರಲಿ
ಮನ್ನೀರಂಥಾ ಮಾವಿರಲಿ, ಸೆಟ್ಟೆರಂಥಾ ಭಾವಿರಲಿ
ತಾಯಿನೇ ಸುಕುಲಿರಲಿ ಗೌರವ್ವ ತಂದಿನೇ ಸುಕುಲಿರಲಿ
ಮತ್ತೈದು ಹೂವ್ವಾನೇರುಸ್ತಾ ಮಕ್ಕಳ ಸುಕುವಿರಲಿ
ಸುತ್ತೈದು ಹೂವಾನೇರುಸ್ತಾ ಗೌರವ್ವ ಮುತ್ತೈದಿತನ ಸುಕವಿರಲಿ

ಹೀಗೆ ಬೀದರ್ ಜಿಲ್ಲೆಯ ಹೆಣ್ಣುಮಕ್ಕಳ ವಿಶಿಷ್ಟವಾದಂತಹ 'ಶೀಗಿ' ಒಂದು ಜನಪದ ಆಚರಣೆ ಇಡೀ ಜಿಲ್ಲೆಯಲ್ಲಿ ಸಣ್ಣವರು, ದೊಡ್ಡವರು ಯಾರೇ ಹಾಡಿದರೂ ಕೂಡಾ ಶೀಗಿ ಹಾಡುಗಳ ಮೂಲಧಾಟಿ ಒಂದೇ ಆಗಿದೆ. ಈ ಶೀಗಿ ಹಾಡುಗಳಲ್ಲಿ ವಿವಿಧ ಬಗೆಯ ಸನ್ನಿವೇಶಗಗಳು ಕಂಡುಬರುತ್ತವೆ. ಇವುಗಳನ್ನು ಈ ಮುಂದಿನಂತೆ ಕಾಣಬಹುದಾಗಿದೆ.

ಶೀಗಿ ಹಾಡುಗಳಲ್ಲಿ ವಿರೇಶನಿಗೆ ಆಮಂತ್ರಣ:

ಕೋಲು ಹಾಕುತ ನಾನು ಖನಾನ ಮನಿಗ್ಹೋದ
ಖನಾನಿರೇಶ ಒಳಗಿಲ್ಲ ಕೋಲ
ಖನಾನ ಈರೇಶ ಒಳಗಿಲ್ಲ ಹೊರಗಿಲ್ಲ
ಇಳೆಯವ ಕೊಟ್ಟು ಕರಸಿದ ಕೋಲ
ಇಳೆಯವ ಕುಡುಲಾಕ ಸರೀಯವ
ಬರುಲಾಕ । ಕುಡು ನನ್ನ ಹಬ್ಬ ದಸರಿಯೇ ಕೋಲ.

ಕುಡು ನನ್ನ ಹಬ್ಬ ದಸರಿ ಮಾನಂಬಿದಿನ
ಹಸು ಮಕ್ಕಳೆಲ್ಲ ಗವರ್‍ಯಾಡಿ ಕೋಲ
ಹಸು ಮಕ್ಕಳೆಲ್ಲ ಗವರ್‍ಯಾಡಿ ಬರುವಾಗ
ಹಸನ ತೂಗಿತ್ತೇ ಹಳ್ಳಿಖೇಡ ಕೋಲ.
ಹಸನನೇ ತೂಗಿತ್ತೆ ಹಳ್ಳಿಖೇಡ ಊರ ಮುಂದ
ತುಪ್ಪ ತೂಗಿತ್ತೆ ತೂಗಾಯಿ ಕೋಲ

ತುಪ್ಪಾನೇ ತೂಗಿತ್ತೆ ತೂಗಾಯಿ ಊರ ಮುಂದ
ಹೂವ್ವಾ ತೂಗಿತ್ತೇ ಹುಮನಾಬಾದಿ ಕೋಲ

ಚಿನ್ನ ತೂಗಿತ್ತೆ ಚಿಡಗುಪ್ಪಿ ಕೋಲ[೭]

"ಶೀಗಮ್ಮನಿಗೆ ವಿರೇಶನಿಗೆ ಶೀಗಿ ಆಚರಣೆಗಾಗಿ ಆಮಂತ್ರಿಸುವುದು, ಬಿಳ್ಕೊಡುವುದು ಇಲ್ಲಿ ಶಿವನನ್ನು ಊಟಕ್ಕಾಗಿ ಆಮಂತ್ರಿಸಲು ಹೋದಾಗ ಅವನಿರುವುದಿಲ್ಲ. ಆದ ಕಾರಣ ವಿಳೇಯ ಕೊಡಲು, ಸರಿಯಾಗಿ ಬರಲು ದಸರಿಯ ಮಾನಂಬಿಯ ದಿನ ನಿಶ್ಚಿತಗೊಳಿಸು ಎಂದು ಕೇಳುತ್ತಾರೆ. ಅಂದು ಹಬ್ಬದ ಸಡಗರ ಮಕ್ಕಳೆಲ್ಲ ಗವರಿ ಆಡಿ ಬರುತ್ತಿದ್ದರೆ ಊರಿನ ಕಳೆ ಚಿನ್ನಗಟ್ಟಿದಂತಾಗುತ್ತದೆಂದು ವರ್ಣಿಸುತ್ತಾರೆ."

:

ಒಂದ ಸೇರಕ್ಕಿ ತರಲೇ ನಮ್ಮ ಗೌರವನ ಪೂಜೆಗೆ
ಅಕಿನ ತೊಡಿ ಮ್ಯಾಲ ಬೆಳ್ಳಿ ಛತ್ತರಿ
ಬಂಗಾರ ಹೇರಿ ಕೊಂಡು ಅಣ್ಣ ಮಾಲಿಂಗ
ದಂಡಿಗ್ಹೋದರ ಪಂಚ ಪಾತರಿ
ಸಂಕರಾತರಿ ಓ ಎಂಬ ಕೋಗಿಲೇ ss
ಐದ ಸೇರಕ್ಕಿ ತರಲೇ । ನಮ್ಮ ಗೌರವನ ಪೂಜೆಗೆ
ಅಕಿನ ತೊಡಿ ಮ್ಯಾಲ ಬೆಳ್ಳಿ ಛತ್ತರಿ
ಬಂಗಾರ ಹೇರಿಕೊಂಡು ಅಣ್ಣ ಮಾಲಿಂಗ
ದಂಡಿಗ್ಹೋದರ ಪಂಚ ಪಾತರಿ
ಸಂಕರಾತರಿ ಓ ಎಂಬ ಕೋಗಿಲೇ ss [೮]

ಗೌರಮ್ಮನ ಪೂಜೆಗೆಂದು ಒಡವೆ ಮುಂತಾದವುಗಳನ್ನು ಹೇರಿಕೊಂಡು ದಂಡಿಗೆ ಹೋದರೆ ಎಂದು ಕೂಗುವಂತಾಯಿತು, ಎಂಬುದಾಗಿ ಈ ಭಾಗದ ಮಹಿಳೆಯರು ಪದಕಟ್ಟಿ ಹಾಡಿರುವುದನ್ನು ಗಮನಿಸಬಹುದಾಗಿದೆ.

ಶಿವ :

ಇಲ್ಲಿ ಶಿವನು ತನ್ನ ಉಪಪತ್ನಿಯಾಗಿ ಗಂಗೆಯನ್ನು ಮನೆಗೆ ತಂದಾಗ ಶಿವ ಮತ್ತು ಗೌರಿಯ ನಡುವೆ ನಡೆಯುವ ಕೌಟುಂಬಿಕ ಕಲಹ ರೂಪದ ಸಂಭಾಷಣೆಯನ್ನು ಜಾನಪದರು ಈ ಮುಂದಿನಂತೆ

ಶಿವ: ದೇಶ ದೇಶವ ಸುತ್ತಿ ಬ್ಯಾಸತ್ತು ನಾ ಬಂದ
ಕಾಲೀಗಿ ನೀರು ತಾರೆ ಶ್ರೀಗವರಿ ಕೋಲೆ ॥ ೨ ॥
ಒಂದ ಗಿಂಡಿ ತಾ ಅಂದರ ಎರಡು ಗಿಂಡಿ ತಂದಾಳ
ಯಾಕ್ಯಾಕೆ ಗವರಿ ಎರಡು ಭಾವ ಕೋಲೆ ॥ ೨ ॥

ಗೌರಿ: ಅಯ್ಯಯ್ಯೊ ಶಿವರಾಯ ಅಣಕದು ಮಾತ್ಯಾಕ
ಶ್ರೀಗಂಗಾಗೊಂದು, ನಿಮಗೊಂದು ಕೋಲೆ ॥ ೨ ॥

ಶಿವ: ಒಂದೆಡಿ ಮಾಡಂದ್ರ ಎರಡೆಡಿ ಮಾಡ್ಯಾಳೆ
ಯಾಕ್ಯಾಕ ಗವರಿ ಎರಡು ಭಾವ ಕೋಲೆ ॥ ೨ ॥

ಗೌರಿ: ಅಯ್ಯಯ್ಯೊ ಶಿವರಾಯ ಅಣಕದು ಮಾತ್ಯಾಕ
ಶ್ರೀಗಂಗಾಗೊಂದು ನಿಮಗೊಂದು ಕೋಲೆ ॥ ೨ ॥

ಶಿವ: ಗಂಗೀಗಿ ತಂದರ ತಂಗಿಗಿ ತಂದ್ಹಂಗ
ತಂದಿಲ್ಲ ಬಾರೆ ಶ್ರೀಗವರಿ ಕೋಲೆ ॥ ೨ ॥
ಗಂಗೀಗಿ ತಂದರ ತಾಯಿಗಿ ತದ್ಹಂಗ
ತಂದಿಲ್ಲ ಬಾರೆ ಶ್ರೀ ಗವರಿ ಕೋಲೆ ॥ ೨ ॥
ಆಣೆ ಮಾಡಲಿ ಬಾರೆ ಕೂಡಿ ಉಂಬರಿ ಬಾರೆ
ತಂದಿಲ್ಲ ಬಾರೆ ಶ್ರೀಗವರಿ ಕೋಲೆ ॥ ೨ ॥ [೯]

ಶಿವನು ಗಂಗಿಯನ್ನು ತನ್ನ ಜಡೆಯಲ್ಲಿ ಇಟ್ಟುಕೊಂಡು ಮನೆಗೆ ಬಂದು ಹಿರಿಯ ಹೆಂಡತಿ ಗೌರಿಯನ್ನು ಕಾಲಿಗೆ ನೀರು ಕೊಡು ಎಂದು ಕೇಳುತ್ತಾನೆ. ಆಗ ಗೌರಿ ಶಿವನಿಗೊಂದು, ಗಂಗಿಗೊಂದು ಎಂದು ಎರಡೆರಡು ತಂಬಿಗೆ ನೀರು, ಊಟ ಮುಂತಾಗಿ ಕೊಡುತ್ತಾಳೆ. ಶಿವನು ಗಂಗೆಗೆ ತಂದಿರುವುದು ಗವರಿಗೆ ಗೊತ್ತಿರುತ್ತದೆ. ಅದಕ್ಕಾಗಿ ಎಲ್ಲವೂ ಎರಡೆರಡು ತಂದಾಗ ಶಿವನು ಎರಡೆರಡು ತರಲು ಕಾರಣ ಕೇಳುತ್ತಾನೆ. ಆಗ ಗವರಿ ನಿಮ್ಮೊಂದಿಗೆ ಗಂಗಿಯನ್ನು ತಂದಿದ್ದೀರಿ ಎಂದು ಹೇಳುತ್ತಾಳೆ. ಆದರೆ ಶಿವನು ಅದನ್ನು ಅಲ್ಲಗಳೆದು ಗಂಗೀನ ತಂದರೆ ತಂಗೀನ, ತಾಯೀನ ತಂದಂತೆ ಎಂದು ಪ್ರಮಾಣ ಮಾಡುವನು. ಕೊನೆಗೆ ಗೌರಿ ಶಿವನ ಜಡೆ ಎರೆದು ಸ್ನಾನ ಮಾಡಿಸುವಾಗ ವಿಷಯ ಬಯಲಾಗುತ್ತದೆ.

ಗೌರಿ: **ಬೆಳ್ಳಿಯ ಬಟಲಾಗ ಒಳ್ಳೊಣ್ಣಿ ತಗೊಂಡು**
ಝುಲ್ಲುಸ್ತಾ ಜಡಿಯೆ ಎರದಾಳೇ ಕೋಲೆ ॥ ೨ ॥
ಝುಲ್ಲುಸ್ತಾ ಜಡಿಯೇ ಎರದಾಳೆ ಶ್ರೀಗವರಿ
ಬಾಳ್ಹಣ್ಣಿನ್ಹಂಗ ಛಿಡದಾಳೆ ಕೋಲೆ ॥ ೨ ॥
ಗಂಗೀನ ತಂದರ ತಂಗೀನ ತಂದಗ್ಹಂದ್ರಿ
ತಂಗಿ ನಿಂತಾಳೆ ಕರೀರಯ್ಯ ಕೋಲೆ ॥ ೨ ॥
ಗಂಗೀನ ತಂದರ ತಾಯೀನ ತಂದಗ್ಹಂದ್ರಿ
ತಾಯಿ ನಿಂತಾಳೆ ಕರೀರಯ್ಯ ಕೋಲೆ ॥ ೨ ॥

ಹೀಗೆ ಇಬ್ಬರೂ ಸವತಿಯರಾಗುತ್ತಾರೆ. ಜೊತೆಗೆ ಇಬ್ಬರೂ ನಾ ಮೇಲು ನೀ ಮೇಲು ಎಂದು ಜಗಳ ಆಡಿ ಗಂಗಿ ಸಿಟ್ಟಿನಿಂದ ಮನೆಬಿಟ್ಟು ಹೋಗಿ ಬಿಡುತ್ತಾಳೆ. ಇವಳು ಹೋದ ಮರುದಿವಸವೇ ಗೌರವ್ವ ಮುಟ್ಟಾಗಿ ಸ್ನಾನ ಮಾಡಲು ನೀರಿರುವುದಿಲ್ಲ. ಆಗ ಪರಿಸ್ಥಿತಿಯನ್ನರಿತ ಶಿವನು ಗಂಗಿ–ಗೌರಿಯರಿಬ್ಬರೂ ಇರಬೇಕೆಂದು ಗಂಗೆಯನ್ನು ಪುನಃ ಕರೆದು ತರುತ್ತಾನೆ. ಆಗ ಗೌರಮ್ಮನ ಸ್ನಾನ, ಪೂಜೆ ನೆರವೇರುತ್ತದೆ. ಗಂಗೆ ಮತ್ತು ಗೌರಿಯರ ನಡುವಿನ ಕಲಹ ರೂಪದ ಸಂವಾದವನ್ನು ಜಾನಪದ ಹಾಡುಗಳು ಈ ಮುಂದಿನಂತೆ ಬಿತ್ತರಿಸುತ್ತವೆ:

ಗಂಗಿ: **ಸಟ್ಟಿ ಮಂಚುದ ಮ್ಯಾಲ ಶ್ರೀಗವರಿ ಕುಂತಾಳೆ**
ಹೋಗಿ ಗವರೀಗಿ ಶರಣನುವೆ ಕೋಲೆ ॥ ೨ ॥

ಗೌರಿ: **ಹಾಸವಂತನಾಗೆ, ಐದು ಘೊಲ್ಲೇವನಾಗೆ**
ಅಂಬಿಗರ ಮಗಳ ಜಯವಾಗೆ ಕೋಲೆ ॥ ೨ ॥

ಗಂಗಿ: **ಅಂಬಿಗರ ಮಗಳಂತ ಕುಲವೆತ್ತಿ ಬೈಯ್ಯಲಿಬ್ಯಾಡ**
ತಂದಿಟ್ಟನ ಮೀಣ ಮೊಸಳಿಯೇ ಕೋಲ ॥ ೨ ॥

ಗೌರಿ: **ಇಡಹೋಗ ನಿಮ್ಮವ್ವಗ, ಇಡಹೋಗ ನಿಮ್ಮಪ್ಪಗ**
ಇಡಹೋಗೆ ತಂದಂಥ ಪುತುಪ್ಯಾಗೆ ಕೋಲ ॥ ೨ ॥

ಗಂಗಿ: ಇಟ್ಟೇನಿ ನಮ್ಮವ್ವಗ । ಇಟ್ಟನಿ ನಮ್ಮಪ್ಪಗ
ಇಟ್ಟೇನಿ ತಂದು ಕವಲೇಗೆ "ಕೋಲ"

ಗೌರಿ: ಆನಿಯ ಹುಟ್ಟಲಿ, ಅಂಬರಿ ಕಟ್ಟಲಿ

ನಾ ಉಂಬೋ ಗಿಣ್ಣ, ಕಡಿಯಲ್ಲೇ ಕೋಲೆ ॥ ೨ ॥

ಹಳ್ಳದ ಧಡ್ಡೀಲಿ ಹಾವ ಕಪ್ಪಿಗೋಳು

ಸಾಲೋದೆ ಮೀನ ಸರಿಗಬ್ಬ ಕೋಲ ॥ ೨ ॥ [೧೦]

ಹೆಸರೇ ಸೂಚಿಸುವಂತೆ ಇಲ್ಲಿಯ ಹಾಡುಗಳಲ್ಲಿ ವಾದವಿವಾದಗಳಿಂದ ಕೂಡಿರುವುದಾಗಿದೆ. ಕರಾರೆಲ್ಲ ಶಿವನು ಒಪ್ಪಿಕೊಳ್ಳುವನು. ನಂತರ ಗಂಗಿಗೆ ತನ್ನ ಜೊತೆಗೆ ಕರೆ ತಂದಾಗ ಗೌರಿ ವಿಚಾರಿಸುವುದು. ಶಿವನ ಮೇಲೆ ಸಂಶಯಗೊಂಡು ಪ್ರಶ್ನಿಸುವುದು. ಶಿವನು ಉತ್ತರಿಸುವುದು. ಮುಂತಾದ ಹಾಡುಗಳು ಜನಪದರು ಸಂಭಾಷಣೆಯ ರೂಪದಲ್ಲಿ ಹಾಡಿದ್ದಾರೆ. ಇಲ್ಲಿ ಮಹಿಳೆ ತನ್ನ ಅಸ್ತಿತ್ವಕ್ಕಾಗಿ ಪುರುಷನಿಗೆ ಸವಾಲೆಸೆಯುವ ಸಂದರ್ಭವನ್ನು ಗಮನಿಸಿದರೆ ಜಾನಪದ ಪರಂಪರೆಯಲ್ಲಿ ಪುರುಷನಷ್ಟೆ ಮಹಿಳೆಯು ಸ್ವತಂತ್ರವಾಗಿ ಬಾಳಿ ಬದುಕಿರುವ ಅಂಶಗಳು ಸ್ಪಷ್ಟವಾಗುತ್ತವೆ. ವನಿತೆಯರೆಲ್ಲ ಸೇರಿ ಆಡುವ ಈ ಸೀಗಿಯಲ್ಲಿ ಉಳಿದ ಆಟ, ಆಚರಣೆ ಹಬ್ಬಗಳಲ್ಲಿರುವಂತೆ ಯಾರೊಬ್ಬರೂ ಸಿಂಗರಿಸಿಕೊಂಡು ಒಯ್ಯಾರದಿಂದ ಬರಲಾರದೆಂಬ ಒಂದು ಅಂಶ ಗಮನಿಸುವಂತಿದೆ. ಶೀಗಿ ಆಡುವುದು ರಾತ್ರಿ ಸಮಯವಾದುದರಿಂದ ತನ್ನ ಶೃಂಗಾರ ಕಾಣುವವರಿರಲಾರರೆಂದು ಹೇಳಲಿಕ್ಕಾಗದು. ಜೊತೆಗೆ ಶೀಗಿ ಆಡುವುದೇ ಸೆಗಣಿಯಿಂದ ಹಾಗೂ ಧೂಳಿರುವ ಬಾಗಿಲು ಹತ್ತಿರ ಕೂಡುವುದರಿಂದ ತಮ್ಮ ಸಡಗರ ಹಾಳಾಗುತ್ತಿರಬಹುದೆಂಬ ಕಲ್ಪನೆಯಿರಬೇಕು.

೪.೩ ಗೌರಿ ಹಾಡುಗಳು:

ಮಳೆಗಾಲದ ಕೊನೆಯ ಸಂಪ್ರದಾಯವೆಂದರೆ ಗೌರಿಯ ಹುಣ್ಣಿಮೆ. ಬಹುತೇಕ ಈ ಹುಣ್ಣಿಮೆಯಾದ ನಂತರ ಹಿಂಗಾರಿನ ಮಳೆಯ ಅವಸಾನವೂ ಕಡಿಮೆಯಾಗಿ, ಚಳಿಯ ಆವೇಶವೂ ತುಂಬುವುದು. ಗೌರಿಯ ಪೂಜೆಯು ನಮ್ಮ ಜಾನಪದ ಪರಂಪರೆಯಲ್ಲಿ ಅನೇಕ ವಿಧಾನದಲ್ಲಿ ಬೆಳೆದುಬಂದಿದೆ. ಮಂಗಳ ಗೌರಿ, ಸಂಪತ್ ಗೌರಿ, ಗಜಗೌರಿ ಮೊದಲಾದ ಸ್ವರೂಪಗಳಲ್ಲಿ ಕಂಡುಬರುತ್ತದೆ. ಜಾನಪದ ಪರಂಪರೆಯಲ್ಲಿನ ಮಹಿಳೆಯರಿಗೆ ಗೌರಿಯ ಮೇಲೆ ಎಲ್ಲಿಲ್ಲದ ಪ್ರೀತಿ. ಹೀಗಾಗಿ ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಗೌರಿಯನ್ನು ಆಡದ ಹೆಣ್ಣು ಮಕ್ಕಳಿಲ್ಲ.

ಗೌರಿ ಹುಣ್ಣಿವೆಯ ಐದು ದಿನ ಇರುವಾಗಲೇ ಹಳ್ಳಿಯ ಹೆಣ್ಣು ಮಕ್ಕಳು ಬೆಳದಿಂಗಳಲ್ಲಿ ಆಡಲು ಪ್ರಾರಂಭ ಮಾಡುವರು. ಆದುದರಿಂದ ಇದನ್ನು ಬೆಳದಿಂಗಳ ಹಬ್ಬ, ಹಾಡುಗಳೆಂದೂ ಕರೆಯುತ್ತಾರೆ. ೧ ಹಾಡಿದರೆ ಹೆಣ್ಣು ಹುಡುಗಿಯರು ಕೋಲು ಹಾಕಿ ಕುಣಿಯುವ ರೂಢಿಯೂ ಇದೆ. ಗೌರಿಗೆ ದಿನವೊಂದು ತರದ ಆರತಿಯನ್ನೆತ್ತಿ ಹೂಗಳನ್ನೇರಿಸುವರು. ಸಣ್ಣ ಮಕ್ಕಳು ಅನೇಕ ಹಾಡುಗಳನ್ನು ಹೇಳುತ್ತಾ ಆರತಿ ಬೆಳಗುವರು.

ಗೌರಿ ಗೌರಿ, ಗಾಣಾ ಗೌರಿ, ಮ್ಯಾಣಾ ಗೌರಿ, ಕುಳ್ಳಿ ಗೌರಿ, ಕುಂಕುಮ ಗೌರಿ

ಅವರಿಯಂಥ ಅಣ್ಣನ ಕೊಡ ಅಣ್ಣನ ಕೋಡು ।

ತೊಗರಿಯಂಥ ತಮ್ಮನ ಕೊಡು ತಮ್ಮನ ಕೋಡು

ನಿಲ್ಲ ನಿಲ್ಲ ಗೌರವ್ವಾ ಗೌರವ್ವಾ

ನಿಲ್ಲಿಸಿ ಕೋರೋ ಬಸಪ್ಪ ಬಸಪ್ಪ

ವರುಷಕ್ಕೊಮ್ಮೆ ಕರಸೇನ ಕರಸೇನ

ಅರಶಿಣ ಪತ್ತಲ ಉಡಸೇನ ಉಡಸೇನ
ಉಡಿಯಕ್ಕಿ ಹಾಕಿ ಕಳಿಸೇನ ಕಳಿಸೇನ
ಅಗಸಿಮಟ ಕಳಿಸೇನ ಕಳಿಸೇನ
ಆಡಲಾರೀನೇ ಗೌರಿ, ಪಾಡಲಾರೀನೇ ಗೌರಿ, ಚಿನ್ನದ ಚಿಟಗಾಳೇ ಗೌರಿ
ಬಣ್ಣದ ಬಾಚುಣುಕೆ ಗೌರಿ ದಾಳಿಂಬ್ರೊ [೧೧]

ಎಂದು ಹಾಡಿ ಗೌರಿಗೆ ಆರತಿ ಬೆಳಗುವರು. ಅವರು ಅವರಿಯಂಥ ಅಣ್ಣನು ಬೇಕು, ತೊಗರಿಯಂಥ ತಮ್ಮನು ಬೇಕು ಎಂದು ಗೌರಿಗೆ ಬೇಡಿ ಕೊಂಡಿದ್ದಾರೆ. ಗೌರಿಯು ತವರು ಮನೆಯ ಪ್ರಗತಿಯ ಸಂಕೇತವೂ ಹೌದು. ಹೀಗಾಗಿ ಗೌರಿಯನ್ನು ವಿಶೇಷವಾಗಿ ಆರಾಧಿಸುತ್ತಾರೆ.

ಸಿರಿಗಂಗಿ ಇಲ್ಲಿ ಅಡಗ್ಯಾಳ ॥ ಕೋ ॥
ಆಲದ ಮರ ಬಿಟ್ಟು, ಹೊರಗ ಹರಿದಾಳ ಗಂಗಿ
ಕತ್ತೆಯ ಮೂಗ ಸೀಳ್ಯಾಳ ॥ ಕೋ ॥
ನೆನೆಯಕ್ಕಿ ನೆನೆಗಡಲೆ, ಗೊನೆಯಬಾಳೆಹಣ್ಣು
ತನುವೇರಿದಡಕಿ ಬಿಳಿಯೆಲೆ
ತಗೊಂಡು ಗಂಗವ್ವ ಪೂಜೆಗೈದಾರ ॥ ಕೋ ॥

ಅನೇಕ ವಾದ ಸಂವಾದಗಳನ್ನೊಳಗೊಂಡ ಈ ಹಾಡು ಇಲ್ಲಿ ಹೆಣ್ಣು ಮಕ್ಕಳ ಮೆಚ್ಚಿನ ಹಾಡಾಗಿದೆ. ಆದುದರಿಂದ ಈ ಹಾಡು ಎಲ್ಲ ಭಾಗಗಳಲ್ಲಿಯೂ ದೊರೆಯುವುದು. ಮಳೆಗಾಲದ ಸಂಪ್ರದಾಯಗಳು ಇಲ್ಲಿಗೆ ಮುಕ್ತಾಯವಾಗಿ ಸುಗ್ಗಿಯು ಕಾಲಿಡುವುದು. ಈ ಹಬ್ಬದ ತರುವಾಯ ನಮ್ಮ ಜನಪದರು ಕೆಲಸದಲ್ಲಿ ನಿರತರಾಗುವರು. ಆ ಕಾಲದಲ್ಲಿ ಸುಗ್ಗಿಯ ಸಂಪ್ರದಾಯಗಳನ್ನು ಬಿಟ್ಟರೆ ವಸಂತೋದಯದವರೆಗೆ ಜನಪದರು ಮತ್ತ್ಯಾವ ಸಂಪ್ರದಾಯವನ್ನೂ ಆಚರಿಸುವಂತೆ ಕಂಡುಬರುವುದಿಲ್ಲ.

ಗೌರಿ:

ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತ ವಿರುವ ಶೀಗಿ-ಗೌರಿ ಹುಣ್ಣಿಮೆಯ ಆಚರಣೆಯು ಸ್ತ್ರೀದೇವತೆಗಳನ್ನು ಕುರಿತದ್ದಾಗಿದೆ. ಸ್ತ್ರೀಯನ್ನು ಶಕ್ತಿಯನ್ನಾಗಿ ಭಾವಿಸಿ ಶಕ್ತಿಯ ಆರಾಧನೆ ಮಾಡುವ ಸಂಪ್ರದಾಯವು ವೇದಗಳ ಕಾಲದಿಂದಲೂ ಇದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಶೀಗಿ-ಗೌರಿಯರಿಬ್ಬರೂ ಭೂದೇವಿಯರೇ ಆಗಿದ್ದರೂ ಶಕ್ತಿ ದೇವತೆಯೆಂದು ಗೌರಿಯನ್ನು ಪೂಜಿಸಿದರೆ, ಭೂತಾಯಿಯ ಪೂಜೆಯೆಂದು ಶೀಗಿಯನ್ನು ಪೂಜಿಸುವುದು ರೂಢಿಯಲ್ಲಿದೆ. ಮಣ್ಣಿನ ಪೂಜಕರಾದ ಕೃಷಿಕರು ತುಂಬಾ ಶ್ರದ್ಧೆಯಿಂದ ಸಡಗರ-ಸಂಭ್ರಮದಿಂದ ಇದನ್ನು ಆಚರಿಸುತ್ತಾರೆ. ಆದ್ದರಿಂದ ಇವುಗಳನ್ನು ಜನಪದರ ಹಬ್ಬಗಳೆಂದೇ ಕರೆಯುವುದು ವಾಡಿಕೆಯಲ್ಲಿದೆ. ಈ ಎರಡೂ ವಿಧಿ-ವಿಧಾನಗಳಲ್ಲಿ, ಆಚರಣೆಗಳಲ್ಲಿ ಪ್ರಾದೇಶಿಕ ಭಿನ್ನತೆ ಇದ್ದರೂ ಶೀಗಿ-ಗೌರಿಯನ್ನು ಕುರಿತು ರಚನೆಯಾಗಿರುವ ಆರಾಧನಾ ಹಾಡುಗಳಲ್ಲಿ ಮಾತ್ರ ವ್ಯತ್ಯಾಸವಿಲ್ಲದಿರುವುದು ವಿಶೇಷ ಸಂಗತಿಯಾಗಿದೆ. ಹಾಗೆಯೇ ಈ ಪೂಜಾ ಪರಂಪರೆಯನ್ನು "ಶೀಗಿ ಹುಣ್ಣಿಮೆ ಮತ್ತು ಗೌರಿ ಹುಣ್ಣಿಮೆ" ಎಂದು ಅವರವರ ಹೆಸರಿನಲ್ಲೇ ಆಚರಿಸುತ್ತಲಿರುವುದು ಮತ್ತೊಂದು ವೈಶಿಷ್ಟ್ಯವಾಗಿದೆ. ಜಾನಪದ ಪರಂಪರೆಯಲ್ಲಿ ಮನೆಯ ಹೆಣ್ಣು ಮಕ್ಕಳನ್ನು ವರುಷಕ್ಕೊಮ್ಮೆ ಕರೆಸಿ, ಆದರದಿಂದ ಹಸಿರು ಬಳೆ, ಕುಂಕುಮ, ಅರಿಶಿಣ ಪತ್ತಲ ಮೊದಲಾದ ಮಂಗಳ ವಸ್ತುಗಳನ್ನು ಇಡಿಸಿ ಗೌರಿಹಬ್ಬವನ್ನು ಆಚರಿಸುತ್ತಾ ಬಂದಿದ್ದಾರೆ. ಇಲ್ಲಿ ಜನಪದರಿಗೆ ಗೌರಿಯು ಮನೆ ಮಗಳ ಸಂಕೇತವು ಹೌದು. ಇಂತಹ ಗೌರಿಗೆ ವಿಧ

ವಿಧದ ಆರತಿ ಮಾಡುತ್ತ ಈ ತಮ್ಮ ಸಾಂಪ್ರದಾಯಿಕ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಕಣಕದಾರೂತಿ ಮಾಡೇನ ಗೌರಿ
ಭಾಳದೀವೀಗೆ ಹಚ್ಚೇನ ಗೌರಿ
ಹಾರೂರಾಡುದು ಹಾದೀ ಬೀದ್ಯಾಗ
ಸೆಟ್ಟರಾಡುದು ಪಟ್ಟಣ ಸಾಲ್ಯಾಗ
ಏಕದಾರೂತೆ ಗೌರಿಗೆ ಬೆಳಗೀರಾಖೂತೆ

ಹೀಗೆ ದಿನ ಒಂದಕ್ಕೂ ಬೇರೆ ಬೇರೆ ಆರತಿಯನ್ನು ಮಾಡಿ ಹಾಡುತ್ತಾರೆ. ಗೌರಿಯ ಹುಣ್ಣಿಮೆಯ ದಿವಸ ಆನೆಗೆ ಅಂಬಾರಿಯನ್ನು ಕಟ್ಟಿ ಬಹಳ ಸಂಭ್ರಮದಿಂದ ಹೆಣ್ಣುಮಕ್ಕಳು ಕೂಡಿ ಗೌರಿಯನ್ನು ಕಳಿಸುವರು. ಗೌರಿಯು ತನ್ನ ಗಂಡನ ಮನೆಗೆ ನಂದಾದೀವಿಗೆಯ ಬೆಳಕಿನಲ್ಲಿ ಹೋಗಲೆಂದು ಕೊಂಗಡಗಳ ಬತ್ತಿಗಳನ್ನು ಸಿಂಗಾರ ಮಾಡಿ ಊರ ಮುಂದಿನ ದೊಡ್ಡ ಜಲಾಶಯಗಳಲ್ಲಿ ಬಿಡುವುದನ್ನು ಉತ್ತರ ಕರ್ನಾಟಕದ ಎಲ್ಲ ಹಳ್ಳಿಗಳಲ್ಲೂ ಕಾಣಬಹುದು. ಈ ಸಮಯದಲ್ಲಿ ಹೆಣ್ಣುಮಕ್ಕಳು ಗೌರಿ
ಮೊದಲಾದವುಗಳನ್ನು ಕುರಿತು ಜಿದ್ದಿಗೆ ಜಿದ್ದು ಹಾಡುಗಳನ್ನು ಹಾಡುವರು. ಹಲಕೆಲವರು ಕೋಲು ಹಾಕುವರು. ಗೌರಿ ಗಂಗೆಯರ ಸಂವಾದದ ಹಾಡು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಕಂಡು ಬರುವವು. "ಗೌರಿಯು ಮುಟ್ಟಾದದ್ದು", "ಗಂಗೆಯು ಜಗಳ ಮಾಡಿ ಮಾಯವಾದದ್ದು" ಇವುಗಳು ಜನಪದ ಸಾಹಿತ್ಯವನ್ನು ಸಂಕಲನ ಮಾಡುವಾಗ ಈ ಹಾಡಿನ ಅನೇಕ ರೂಪಾಂತರಗಳು ನಿದರ್ಶನಕ್ಕೆ ಬರುತ್ತವೆ. ಬೆಳವಲದಲ್ಲಿ ಸಂಕಲಿಸಲಾದ ಹಾಡಿನಲ್ಲಿ ಗಂಗೆಯು ಪಾತಾಳಲೋಕದಲ್ಲಿ ಆಲದ ಮರದ ಬುಡದಲ್ಲಿ ಅಡಗಿರುವಳೆಂದು, ಅಲ್ಲಿಯೇ ಹಸಿರನ್ನು ಮೇಯುವ ಕತ್ತೆಯು ಹೇಳಲು, ಹುದುಗಿದ ಗಂಗೆಯು ಪಾತಾಳದಿಂದ ಹೊರಬಿದ್ದು ಕತ್ತೆಯ ಮೂಗನ್ನು ಸೀಳಿದಳೆಂದು ಹಾಡಿನಲ್ಲಿ ಬಂದಿದೆ. ಆದುದರಿಂದಲೇ ಕತ್ತೆಯ ಮೂಗಿನ ಸೆಂಬೆಗಳು ಹರಿದು ಇಂದಿನವರೆಗೂ ಜೋತಾಡುವುದನ್ನು ಕಾಣುತ್ತೇವೆ.

ಮೇಲಲೋಕ ಹುಡುಕಿ । ನಡುವಿನ ಲೋಕ ಹುಡುಕಿ
ಪಾತಾಳ ಲೋಕರ ಇಳಿದಾರ ॥ ಕೋ ॥
ಎಲ್ಲೆಲ್ಲಿ ಹುಡುಕಿದರ ಸಿರಿಗಂಗಿ ಸಿಗವಳ್ಳ
ಆಲದ ಮರದಾಗ ಅಡಗ್ಯಾಳ ॥ ಕೋ ॥
ಅಲ್ಲೊಂದು ಒತ್ಯಾರ್ಗಿ, ಸುತ್ತಲ್ಲ ಹಸುರಾಗಿ
ಹಸುರಾಗ ನಿಂತು ಒದರೀತ । ಹಿರಿಗತ್ತಿ

ಶೀಗಿ-ಗೌರಿಯರಿಬ್ಬರೂ ಅಕ್ಕ ತಂಗಿಯರೆಂದು ಭಾವಿಸುತ್ತಾರೆ. ಅವರು ತಮ್ಮ ಮನೆಯ ಹೆಣ್ಣು ಮಕ್ಕಳೆಂಬುದು ಜನಪದರ ಭಾವನೆಯಾಗಿದೆ. ಆದುದರಿಂದ ಇವರಿಬ್ಬರನ್ನು ಜನಪದರು ಗೌರವಿಸುತ್ತಾ ಬಂದಿದ್ದಾರೆ. ನಮ್ಮ ಭಾರತೀಯ ಬಹುಪಾಲು ಹಬ್ಬಗಳಿಗೆ ಪೌರಾಣಿಕ ಹಿನ್ನೆಲೆಯೊಂದು ಇದ್ದೇ ಇರುತ್ತದೆ. ಆದರೆ ಅಶ್ವಿನಿ ಮಾಸದಲ್ಲಿ ಪೂಜೆಗೊಳ್ಳುವ ಶೀಗೆ ಹುಣ್ಣಿಮೆಯ ಹಬ್ಬಕ್ಕೆ ಯಾವ ಪೌರಾಣಿಕ ಹಿನ್ನೆಲೆಯು ಇಲ್ಲ. ಇದು ಅಪ್ಪಟ ಜನಪದರ ಹಬ್ಬವೆಂದೇ ಹೇಳಲಾಗುವುದು.

ಗೌರಿಯು ಪಾರ್ವತಿಯ ರೂಪಾಂತರ. ಅವಳನ್ನು ಪೂಜಿಸುವುದರಿಂದ ಸರ್ವಾಭಿಷ್ಟಗಳನ್ನು ಕೊಡುತ್ತಾಳೆಂದು ಪುರಾಣಗಳು ಹೇಳುತ್ತ ಚೈತ್ರ ಮೊದಲಾದ ಹನ್ನೆರಡು ಚಂದ್ರಮಾಸಗಳಲ್ಲಿ ಬರುವ ಶುಕ್ಲ ತೃತಿಯಾ ಮತ್ತು ಕೃಷ್ಣ ತೃತಿಯಾ ತಿಥಿಗಳಲ್ಲಿ ಗೌರಿಯನ್ನು ಬೇರೆ ಬೇರೆ ಹೆಸರುಗಳಿಂದ ಪೂಜಿಸುವ ವಿಧಾನ ಪುರಾಣಗಳಲ್ಲಿ ಉಕ್ತವಾಗಿವೆ. ಗೌರವ (ಹಳದಿ, ಬಿಳುಪು ಮಿಶ್ರ ಅಥವಾ ಗೋಧಿ ವರ್ಣದ) ವರ್ಣದ ಶರೀರದಿಂದ, ಕೂಡಿಪಾರ್ವತಿ ರೂಪಾಂತರವನ್ನು ತಳೆದುದರಿಂದ ಆಕೆಗೆ 'ಗೌರಿ' ಎಂದು ಹೆಸರು ಬಂದಿದೆ. ಕಪ್ಪು ಶರೀರವನ್ನು ತ್ಯಜಿಸಿ ಗೌರವ ವರ್ಣದ ಶರೀರವನ್ನು ಪಡೆದುದಕ್ಕಾಗಿ ಪಾರ್ವತಿಗೆ 'ಗೌರಿ' ಎಂಬ ಹೆಸರು ಅನ್ವರ್ಥಕವಾಗಿ ಪಾರ್ವತಿ ಅವಿರ್ಭವಿಸಿದುದರಿಂದ ಆ ದಿವಸ ಗೌರಿ ವೃತವನ್ನು ತಪ್ಪದೇ ಆಚರಿಸುವುದು ಕರ್ನಾಟದಲ್ಲಿ ರೂಢಿಯಲ್ಲಿದೆ. ಗೌರವರ್ಣದವಳೂ 'ಗೌರವ್ವ' ನೆಂಬ ನಾಮಾಂಕಿತದಿಂದ ಲೋಕದಲ್ಲಿ ಪೂಜೆಗೊಳ್ಳುತ್ತಿದ್ದಾಳೆ ಎಂಬುದು ವಿಧಿತವಾಗುತ್ತದೆ. ಜನಪದ ಹಾಡುಗಳಲ್ಲಿ 'ಗೌರಿ' ಪದವು ವ್ಯಾಪಕಾರ್ಥದಲ್ಲಿ ಬಳಕೆಯಾಗುವುದು ಕಂಡುಬರುತ್ತದೆ. ಜನಪದರು ಅಭಿಮಾನ ಹಾಗೂ ಗೌರವ ಭಾವನೆಯಿಂದ ಅವಳನ್ನು 'ಗೌರಮ್ಮ' ಎಂದು ಕರೆದರು ಕೆಲವು ಕಡೆ 'ಗೌರವ್ವ' ಎಂದೂ ಸಂಬೋಧಿಸಿದ್ದಾರೆ.

ಬೀದರ್ ಜಿಲ್ಲೆಯ ನಗರ, ಗ್ರಾಮಗಳಲ್ಲಿ ಶಿವನ ಮಡದಿಯಾದ ಪಾರ್ವತಿಯನ್ನು ಗೌರಿ, ಗೌರವ್ವ, ಗೌರಮ್ಮ ಎಂದು ಕರೆದು ಒಂಭತ್ತು ದಿನಗಳವರೆಗೆ ಕೂಡಿಸುತ್ತಾರೆ. ಆದರೆ ಹಾಡುವುದು ಐದು ದಿನಗಳು ಮಾತ್ರ. ಕಟ್ಟಿಗೆಯಿಂದ ಮಾಡಿದ ಹೂಜಿ ಆಕಾರದ ಗೌರಿ ಕುಳ್ಳಿಯನ್ನು ಹಲವಾರು ಅಂಗಡಿಯವರು ಮಾರಾಟಕ್ಕೆ ಇಟ್ಟಿರುತ್ತಾರೆ. ಪ್ರತಿಯೊಂದು ಕುಟುಂಬದವರು ತಮಗೆ ಎಷ್ಟು ಜನ ಹೆಣ್ಣು ಮಕ್ಕಳಿದ್ದಾರೋ ಅಷ್ಟು ಗೌರಿ ಕುಳ್ಳಿಗಳನ್ನು ಖರೀದಿಸಿ ತಂದಿರುತ್ತಾರೆ. ಗೌರಿ ಹುಣ್ಣಿಮೆ ಒಂಭತ್ತು ದಿನಗಳಿರುವರೆಗೆ ಗೌರಿ ಕುಳ್ಳಿಯನ್ನು ದಿನಾಲೂ ಒಂದೊಂದು ಸ್ಥಳದಲ್ಲಿಟ್ಟು ಪೂಜೆ ಮಾಡಿ ಆರುತಿ ಹಾಡುಹೇಳಿ ನೈವೇದ್ಯ ತೋರುವರು. ಒಂದು ದಿನ ದೇವರ ಜಗುಲಿಯ ಮೇಲೆ, ಒಂದು ದಿನ ಬೀಸುವ ಕಲ್ಲಿನ ಮೇಲೆ, ಒಂದು ದಿನ ಕುಟ್ಟುವ ಒಳ್ಳಿನ ಮೇಲೆ, ಮತ್ತೊಂದು ದಿನ ಮನೆಯ ಮಾಳಿಗೆಯ ಮೇಲೆ, ಒಂದು ದಿನ ಬಾವಿಯ ಕಟ್ಟೆಯ ಮೇಲಿಟ್ಟು ಗೌರಿ ಕುಳ್ಳಿಯನ್ನಿಟ್ಟು ಪೂಜಿಸುತ್ತ ಹಾಡುವರು.

ಕೊಲ್ ಕೊಲ್ ಗವರಿ (ಗೌರಿ) ಕೋಲ
ಕಂಚಿನ್ ಗೌರಿ ಕೋಲ
ಒಂದೆಳಿ ಸರ ನಿನ್ನಗ ಗೌರಿ ಕುಕ್ಕಮ್ಮ ಬಟ್ಟಲ್ ನನ್ನಗ
ರಾಯರ ಮಗಳು ರುಕಮಿಣಿ ಗೌರಿ ತೂಗ ಮಂಚುದ ಮ್ಯಾಲ
ಮನಗ್ಯಾಳ । ಗವರಿ ತೂಗ ಮಂಚದ ಮ್ಯಾಲ ಮನಗ್ಯಾಳ

ಕೊಲ್ ಕೊಲ್ ಗೌರಿ ಕೋಲ ಗೌರಿ ಕಂಚಿನ್ ಗೌರಿ ಕೋಲ
ಎಡ್ಡೇಳಿ ಸರ ನಿನ್ನಗ ಗೌರಿ ಗಂಧದ ಬಟ್ಟಲು ನನ್ನಗ
ರಾಯರ ಮಗಳು ರುಕಮಿಣಿ ಗೌರಿ ತೂಗ ಮಂಚದ ಮ್ಯಾಲ
ಮನಗ್ಯಾಳ । ಗವರಿ ತೂಗ ಮಂಚದ ಮ್ಯಾಲ ಮನಗ್ಯಾಳ

ಕೊಲ್ ಕೊಲ್ ಗೌರಿ ಕೋಲ ಗೌರಿ ಕಂಚಿನ್ ಗೌರಿ ಕೋಲ

ಮೂರೇಳಿ ಸರ ನಿನ್ನಗ ಗೌರಿ ಮುತ್ತಿನ ಮೂಗುತಿ ನನ್ನಗ
ರಾಯರ ಮಗಳು ರುಕಮಿಣಿ ಗೌರಿ ತೂಗ ಮಂಚದ ಮ್ಯಾಲ

ಮನಗ್ಯಾಳ । ಗವರಿ ತೂಗ ಮಂಚದ ಮ್ಯಾಲ ಮನಗ್ಯಾಳ
ಕೊಲ್ ಕೊಲ್ ಗೌರಿ ಕೋಲ ಗೌರಿ ಕಂಚಿನ್ ಗೌರಿ ಕೋಲ
ಹತ್ತೇಳಿ ಸರ ನಿನ್ನಗ ಗೌರಿ ಮುತ್ತಿನ ಮೂಗುತಿ ನನ್ನಗ
ರಾಯರ ಮಗಳು ರುಕಮಿಣಿ ಗೌರಿ ತೂಗ ಮಂಚದ ಮ್ಯಾಲ
ಮನಗ್ಯಾಳ । ಗವರಿ ತೂಗ ಮಂಚದ ಮ್ಯಾಲ ಮನಗ್ಯಾಳ [೧೨]

ಗೌರಿ ಹುಣ್ಣಿಮೆಯಂದು ಗ್ರಾಮದ ಹೆಣ್ಣು ಮಗಳು ೮-೧೦ ರಿಂದ ಹನ್ನೆರಡು ವಯಸ್ಸಿನ ಹುಡುಗಿಯರು ತಮ್ಮ ತಮ್ಮ ಗೌರಿ ಕುಳ್ಳಿಯನ್ನು ಸಿಂಗಾರ ಮಾಡಿ ಹೊಲಕ್ಕೊ ಅಥವಾ ಕೆರೆಗೊ, ತೋಟಕ್ಕೊ ತೆಗೆದು ಕೊಂಡು ಹೋಗುವರು. ಎಲ್ಲರೂ ತಮ್ಮ ಗೌರಿ ಕುಳ್ಳಿಗಳನ್ನು ಒಂದೆಡೆಗೆ ಇಟ್ಟು ಪೂಜೆ ಮಾಡುವರು. ಗೌರಿಯ ಕುರಿತು ಹಾಡು ಹೇಳಿ ನೈವೇದ್ಯ ತೋರುವರು. ನಂತರ ಎಲ್ಲರೂ ತಾವು ತಂದ ಬುತ್ತಿಯನ್ನು ಒಂದೆಡೆ ಸೇರಿಸಿ ಊಟ ಮಾಡುವರು. ಸಂಭ್ರಮಿಸಿ ಅಲೆದಾಡಿ ಆಟವಾಡಿ ಕುಣಿದು ಕುಪ್ಪಳಿಸುವರು. ಎಲ್ಲರೂ ಸೇರಿ ಮಣ್ಣನ್ನು ನೀರಿನಲ್ಲಿ ಕಲೆಸಿ ಕುಯ್ಯಾ ಮಾಡಿ ಆಡುವರು. ಈ ಧಾರ್ಮಿಕ ನಂಬಿಕೆ ಮತ್ತು ಆಚರಣೆಯ ಹಿನ್ನೆಲೆಯಲ್ಲಿಯೇ ಈ ಗೌರಿ ಹಾಡುಗಳು ರಚನೆಯಾಗಿವೆ.

ಊರ ಸುತ್ತಿನ ಹೊಳಿಯೇ ಸೀರಿ ಮಾಸ್ಯಾದ ಕಳಿಯೇ
ನಮ್ ಗೌರಮ್ಮ ಇಟ್ಟಾಳ ರುಳಿಯೇ
ಕೋಲು ಮುತ್ತಿನ ಕೋಲ ॥ ೨ ॥

ಊರ ಮುಂದಿನ ಹುತ್ತು ಕುಡಗಿಲ್ಲಚ್ಚಿ ಕೆತ್ತು
ನಮ್ ಗೌರಮ್ಮ ಇಟ್ಟಾಳ ನತ್ತು
ಕೋಲು ಮುತ್ತಿನ ಕೋಲ ॥ ೨ ॥ [೧೩]

ಈ ರೀತಿ ಹಾಡು ಹೇಳುತ್ತಾ ಸಾಯಂಕಾಲ ಮನೆಗೆ ಬರುವಾಗ ಎಲ್ಲ ಹೆಣ್ಣು ಹುಡುಗಿಯರು ತಮ್ಮ ತಮ್ಮ ಗೌರಿ ಕುಳ್ಳಿಗಳನ್ನು ಝುಂಡು ಹೂವಿನಿಂದ ಮಾಲೆ (ಸರ) ಮಾಡಿ ಕುಳ್ಳಿಯ ಮಧ್ಯದ ಗುಂಡಿಗೆ ಸಿಕ್ಕಿಸುವರು. ಮಾಲೆಯನ್ನು ಕೈಯಲ್ಲಿ ಹಿಡಿದು ಗೌರಿ ಕುಳ್ಳಿಯನ್ನು ಕೆಳಗೆ ನೇತಾಡುತ್ತಾ ಸಡಗರ ಸಂಭ್ರಮದಿಂದ ಹಾಡು ಹೇಳುತ್ತಾ ಬರುವರು. ಎಲ್ಲಾ ಮನೆಯಲ್ಲಿ ಮದುವೆಯಾದ ಹೆಣ್ಣು ಮಕ್ಕಳು ತೌರಿಗೆ ಬಂದಿರುತ್ತಾರೆ. ಗೌರಿಯ ಪೂಜೆ ಮಾಡುತ್ತ, ಹಾಡುತ್ತ ಮತ್ತೇ ಬಾಲ್ಯವನ್ನು ಸ್ಮರಿಸುವರು. ಮನೆಯಲ್ಲಿ ದವಸ, ಧಾನ್ಯ, ಹೆಣ್ಣು ಮಕ್ಕಳಿಂದ ತುಂಬಿದ್ದು ವಿಶೇಷವಾದ ಸಂಭ್ರಮವುಂಟಾಗುವುದು. ಗೌರಿ ಪೂಜೆಗೆ ಹೆಚ್ಚಿನ ಖರ್ಚು, ವೆಚ್ಚ ಬರದಿದ್ದರೂ ಹೆಚ್ಚಿನ ಮನರಂಜನೆ, ಸಂತೋಷ ದೊರಕುವುದು. ಆಗ ಗೌರಿಯನ್ನು ಕುರಿತು ಹೆಂಗಳೆಯರು ಈ ರೀತಿ ಹಾಡು ಹೇಳುವರು.

ಕಡ್ಡಿ ಹೇರು ಬಂದಾವಕ್ಕ
ಬಂದ್ ಬಂದು ಬಾಗಿಲಿಗಿ ಬಿದ್ದಾವಕ್ಕ
ಹಾರೂರ ಪಾರೊಂದಂಡಿಗಿ ಹೋದ
ದಂಡಿಗಿ ಚೆಂಡೊಂದಾಡುತ್ತ ಬಂದ
ಊದಿನ ಖಡ್ಡ್ಯೊಂದೂರುತ್ತ ಬಂದ
ಗೌರಿ ಕಂಡೇನೆ ಹೂವಿನ ಬನವೇನೆ

ಗೌರಿ ಕಂಡೇನೇ ಹಣ್ಣಿನ ಬನವೇನೆ.
ಚಣಗಿ ಹೇರು ಬಂದಾವಕ್ಕ
ಬಂದ್ ಬಂದು ಬಾಗಿಲಿಗಿ ಬಿದ್ದಾವಕ್ಕ
ಹಾರೂರ ಪಾರೊಂದಂಡಿಗಿ ಹೋದ
ದಂಡಿಗಿ ಚೆಂಡೊಂದಾಡುತ್ತ ಬಂದ
ಊದಿನ ಖಡ್ಡ್ಯೊಂದು ಊರುತ್ತ ಬಂದ
ಗೌರಿ ಕಂಡೇನೆ ಹೂವಿನ ಬನವೇನೆ
ಗೌರಿ ಕಂಡೇನೇ ಹಣ್ಣಿನ ಬನವೇನೆ. [೧೪]

ಇದೇ ಹಾಡನ್ನು ಇನ್ನೂ ಕೆಲವರು ಪ್ರಾದೇಶಿಕವಾರು ಸ್ವಲ್ಪ ಬದಲಾವಣೆ ಮಾಡಿ ಈ ರೀತಿಯೂ ಹಾಡುತ್ತಾರೆ.

ಗೋಧಿ ಹೇರು ಬಂದಾವಕ್ಕ
ಬಂದ್ ಬಂದು ಬಾಗಿಲಿಗಿ ಬಿದ್ದಾವಕ್ಕ
ಹಾರೂರ ಪಾರೊಂದ್ಂಡೀಗಿ ಹೋದ
ದಂಡೀಗಿ ಚೆಂಡೊಂದಾಡುತ್ತ ಬಂದ
ಊದಿನ ಖಡ್ಡ್ಯೊಂದು ಊರುತ್ತ ಬಂದಾ sss
ಹಾsssಲ್ಬಂಥ ಬೆಳದಿಂಗ್ಳೆ ಹರಿದಾವೆ ಗವರಮ್ಮ
ನೀರ್ಬಂಥ ಬೆಳದಿಂಗ್ಳೆ ಹರಿದಾವೇ ಗವರಮ್ಮ
ಕುಸುಬಿ ಹೇರು ಬಂದಾವಕ್ಕ
ಬಂದ್ ಬಂದು ಬಾಗಿಲಿಗಿ ಬಿದ್ದಾವಕ್ಕ
ಹಾರೂರ ಪಾರೊಂದ್ಂಡೀಗಿ ಹೋದ
ದಂಡೀಗಿ ಚೆಂಡೊಂದಾಡುತ್ತ ಬಂದ
ಊದಿನ ಖಡ್ಡ್ಯೊಂದೂರುತ್ತ ಬಂದಾ
ಹಾsssಲ್ಬಂಥ ಬೆಳದಿಂಗ್ಳೆ ಹರಿದಾವೆ ಗವರಮ್ಮ
ನೀರ್ಬಂಥ ಬೆಳದಿಂಗ್ಳೆ ಹರಿದಾವೇ ಗವರಮ್ಮ [೧೫]

ಗೌರಿ ಹುಣ್ಣಿಮೆಯಲ್ಲಿ ಸ್ವಚ್ಛವಾದ ವಾತಾವರಣವಿದ್ದು, ಆಗಸ ನಿರ್ಮಲವಾಗಿದ್ದು, ಹುಣ್ಣಿಮೆಯ ಪೂರ್ಣ ಚಂದ್ರನ ಬೆಳಕು ಭೂಮಿ ಆಕಾಶವನ್ನು ಆವರಿಸಿರುತ್ತದೆ. ಕೃಷಿಕನು ಬೆಳೆದ ಬೆಳೆಯೆಲ್ಲ ರಾಶಿರಾಶಿಯಾಗಿ ಮನೆಯ ಬಾಗಿಲಿಗೆ ಬಂದು ತುಂಬಿಕೊಂಡಿವೆ. ಇಂಥಹ ಸಮೃದ್ಧವಾದ ವಾತಾವರಣದಲ್ಲಿ ಹಾರೂರ ಹುಡುಗ ಸ್ವಚ್ಛಂದವಾಗಿ ಚೆಂಡಾಡುತ್ತಿದ್ದಾನೆ. ಎಲ್ಲ ಕಡೆಯೂ ಹಾಲಿನಂಥ ಬೆಳದಿಂಗಳು, ನೀರಿನಷ್ಟೆ ಸ್ವಚ್ಛ, ಸ್ಪಷ್ಟವಾದ ಬೆಳದಿಂಗಳು ಆವರಿಸಿಕೊಂಡಿರುತ್ತದೆ. ಅದರಲ್ಲಿ ಎಲ್ಲರೂ ಗೌರಮ್ಮನ ಪೂಜೆ ಮಾಡುತ್ತಾರೆ.

ಜನಪದರು ನಿಸರ್ಗದ ಕೊಡುಗೆಯನ್ನು ಸ್ವೀಕರಿಸಿಯೇ ಈ ಸೀಗಿ, ಗೌರಿಯ ಹಬ್ಬಗಳನ್ನು ಆಚರಿಸುತ್ತಿದ್ದರು. ಯಾವದೇ ಖರ್ಚು ವೆಚ್ಚಕ್ಕೂ ಆಸ್ಪದವಿಲ್ಲ, ಆಡಂಬರವಂತು ಇಲ್ಲವೇ ಇಲ್ಲ. ಮನಪೂರ್ಣ ಮನರಂಜನೆ ಪಡೆಯುತ್ತಿದ್ದರು. ಎಲ್ಲರೂ ಧಾರ್ಮಿಕ ಭಕ್ತಿ ಭಾವದೊಂದಿಗೆ, ಸಹಜವಾದ ಮನರಂಜನೆ ದೊರಕಿಸಿಕೊಳ್ಳುತ್ತಿದ್ದರು. ಸುಗ್ಗಿಯ ಕಾಲ ಮುಗಿಯುತ್ತ ಬಂದಂತೆ ಹೆಚ್ಚು

ಸಮಯವೂ ದೊರೆಯುತ್ತಿತ್ತು. ಇದೊಂದು ಹೆಂಗಳೆಯರಿಗೆ ಕೂಡಿ ಆಡುವ, ಸಾಮರಸ್ಯ ಹಾಗೂ ಐಕ್ಯತೆಯ ಭಾವನೆ ಮೂಡಿಸುವ ಹಬ್ಬವಾಗಿ ಕಂಡುಬಂದಿದೆ.

ಆದರೆ ಇಂದು ಕಾಲ ಕ್ರಮೇಣ ಆಧುನೀಕರಣದ ಪ್ರಭಾವದಿಂದಾಗಿ ಈ ಆಚರಣೆಗಳು ಸಂಪ್ರದಾಯಗಳಾಗಿ, ತಾತ್ವಿಕ ವಿಚಾರಗಳು ಗೌಣವಾಗಿ ಮರೆತೇ ಹೋಗುತ್ತಿವೆ. ಜನಪದರು ಶೀಗಿ-ಗೌರಿ ಪೂಜೆಯನ್ನು ಒಂಭತ್ತು ದಿನಗಳವರೆಗೆ ಆಚರಿಸುತ್ತಿದ್ದರು. ಆದರೆ ಇಂದು ಕೇವಲ ಸಂಪ್ರದಾಯದ ಹೆಸರಿನಲ್ಲಿ ಅದೂ ನೆನಪಿನಲ್ಲಿದ್ದರೆ ಹುಣ್ಣಿಮೆಯ ಒಂದು ದಿನ ಮಾತ್ರ ಪೂಜೆ ಮಾಡಿ ಮುಗಿಸುತ್ತಿದ್ದಾರೆ. ಶೀಗಿ ಬರೆಯುವುದಂತೂ ಕೇವಲ ಹುಣ್ಣಿಮೆಯ ದಿನದಂದು. ಹೊರಬಾಗಿಲ ಹಿಂದೆ ಯಾರಿಗೂ ಕಾಣದ ಸ್ಥಳದಲ್ಲಿ ಸುಣ್ಣ ಬಳೆದು, ಚಿಕ್ಕದಾಗಿ ಒಂದು ಸ್ಥಳದಲ್ಲಿ ಜಾಜದಿಂದ ಶೀಗಿಯ ಕೆಲವು ಚಿತ್ರಗಳನ್ನು ಬರೆದು, ಅರಿಶಿಣ-ಕುಂಕುಮ, ಊದಿನಕಡ್ಡಿ ಹಚ್ಚಿ, ನೈವೈದ್ಯ ತೋರಿದರೆ ಮುಗಿಯಿತು.

ಅದೇ ರೀತಿ ಗೌರಿ ಪೂಜೆಯೂ ಕೂಡಾ ಒಂಬತ್ತು ದಿನಗಳವರೆಗೆ ಮಾಡದೇ ಕಟ್ಟೆಗೆಯ ಗೌರಿ ಕುಳ್ಳಿಯಂತೂ ಕಾಣುತ್ತಿಲ್ಲ. ಹಿತ್ತಾಳೆ ಹೂಜಿಯನ್ನೇ ಗೌರಿ ಕುಳ್ಳಿಯೆಂದು ಜಗುಲಿಯ ಮೇಲೆ ಇಟ್ಟು ಪೂಜಿಸಿ, ಒಂದು ಹೂ ಸಿಕ್ಕಿಸಿದರೆ ಸಾಕು ಗೌರಿ ಪೂಜೆಯೇ ಮುಗಿಯಿತು. ಇಂದು ಹೆಣ್ಣು ಹುಡುಗಿಯರು ಶಾಲೆಗಳಿಗೆ, ಹೆಚ್ಚಿನ ವಿಶೇಷ ಪಾಠಕ್ಕಾಗಿ ದಿನದ ಹೆಚ್ಚಿನ ಸಮಯ ಮನೆಯ ಹೊರಗೆ ಕಳೆಯುತ್ತಿದ್ದಾರೆ. ಶಿಕ್ಷಣಕ್ಕಾಗಿ ಹುಡುಗಿಯರು ವಸತಿ ಶಾಲೆಗೆ ಸೇರುತ್ತಿದ್ದಾರೆ. ಇನ್ನೂ ಸಮಯದ ಅಭಾವ. ತಂದೆ ತಾಯಿಯರೂ ಹೊರಗಡೆ ದುಡಿಯಲು ಹೊಗುತ್ತಿದ್ದಾರೆ. ಅವಿಭಕ್ತ ಕುಟುಂಬಗಳೆಲ್ಲ ಒಡೆದು ಹಿರಿಯರೂ ಇಂಥ ಸಂಪ್ರದಾಯಗಳನ್ನು ತಮ್ಮ ಮಕ್ಕಳಿಗೆ ಹೇಳಿ ಕೊಡಲು ಆಗುತ್ತಿಲ್ಲ. ಈ ಎಲ್ಲ ಕಾರಣಗಳಿಂದಾಗಿಯೂ ಸುಶಿಕ್ಷಿತರು ಗೊಡ್ಡು ಸಂಪ್ರದಾಯವೆಂತಲೂ, ಹೆಸರಿಗೆ ಮಾತ್ರ ಒಂದು ದಿನದ ಪೂಜೆಮಾಡಿ ಮುಗಿಸುತ್ತಿರುವುದರಿಂದ ಈ ಶೀಗಿ-ಗೌರಿಯನ್ನು ಮರೆತು ಹಿಂದಿನ ನಮ್ಮ ಜಾನಪದ ಸಂಪ್ರದಾಯವು ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳುವ ಹಂತದಲ್ಲಿದೆ. ಈ ಹಬ್ಬವನ್ನು ಹೈದ್ರಾಬಾದ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಕಾಣುತ್ತೇವೆ.

ಜಾಗತೀಕರಣದ ಹಿನ್ನೆಲೆಯಲ್ಲಿ ನಮ್ಮ ನೆಲ-ಸಂಸ್ಕೃತಿ, ಜಲಸಂಸ್ಕೃತಿ, ಕಾಪಾಡಿಕೊಳ್ಳುವ ಅಗತ್ಯತೆ, ಅನಿವಾರ್ಯತೆ ಹಿಂದೆಗಿಂತಲೂ ಇಂದು ಮುಖ್ಯವಾಗಿದೆ. ಈ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಶೀಗಿ ಗೌರಿ ಹಾಡು ಹಬ್ಬಗಳಲ್ಲಿ ಬಿಂಬಿತವಾಗಿರುವ, ಹಿಡಿದಿಟ್ಟಿರುವ ದೇಶಿ ಸಂಸ್ಕೃತಿಯ ಚಿಂತನೆಯನ್ನು ಸ್ಥೂಲವಾಗಿ ನಡೆಸಲಾಗಿದೆ. ಈ ಸಂಗ್ರಹದ ಸೀಗಿ-ಗೌರಿ ಹಾಡುಗಳಲ್ಲಿ ನಮ್ಮ ಸಂಸ್ಕೃತಿಯ ಬಿಂಬವನ್ನು ಕಾಣುತ್ತೇವೆ.

ನಮ್ಮ ಭಾರತ ದೇಶವು ಸರ್ವಧರ್ಮಗಳ ನೆಲೆವೀಡಾಗಿದೆ. ಇಲ್ಲಿಯ ಮುಖ್ಯ ಉದ್ಯೋಗ ಕೃಷಿ. ರೈತ ದೇಶದ ನಾಡಿ, ಬೆನ್ನೆಲುಬು. ಇಡೀ ದೇಶವೇ ಅವನ ಮೇಲೆ ಅವಲಂಬಿತವಾಗಿದೆ. ಎಲ್ಲಾ ಹಬ್ಬಗಳಂತೆ ರೈತರು ಆಚರಿಸುವ ಹಬ್ಬವೂ ಎಲ್ಲಕ್ಕೂ ಶ್ರೇಷ್ಠ ಹಬ್ಬವೆನಿಸಿದೆ. ಎಲ್ಲಾ ಹಬ್ಬಗಳು ಊರಲ್ಲಿ, ಮನೆಗಳಲ್ಲಿ ಆಚರಿಸಿದರೆ ರೈತರು ಹೊಲಗಳಲ್ಲಿ ಆಚರಿಸುವ ಹಬ್ಬ 'ಎಳ್ಳಾಮಾವಾಸ್ಯೆ'. ಹೆಚ್ಚಾಗಿ ಡಿಸೆಂಬರ್ ಜನವರಿ ತಿಂಗಳಲ್ಲಿ ಈ ಹಬ್ಬವು ಆಚರಿಸಲ್ಪಡುವುದು. ರೈತರು ಪ್ರತಿವರ್ಷ ತಮ್ಮ

ಹೊಲಗದ್ದೆಗಳಲ್ಲಿ ಆಚರಿಸುವ ವಿಶೇಷ ಎಳ್ಳಮಾವಾಸ್ಯೆಯನ್ನು ಯಾವುದೇ ಜಾತಿ-ಮತ-ಭೇದವಿಲ್ಲದೆ ತಮ್ಮ ತಮ್ಮ ಹೊಲಗದ್ದೆಗಳಲ್ಲಿ ಪ್ರತಿಯೊಬ್ಬರೂ ಆಚರಿಸುವ ಹಬ್ಬ ಇದಾಗಿದೆ. ಅನ್ನದಾತರು ತಮ್ಮ ಹಬ್ಬವಾದ ಎಳ್ಳಮಾವಾಸ್ಯೆಯನ್ನು ಭೂತಾಯಿಗೆ ವಿಶೇಷ ಪೂಜೆ ಸಲ್ಲಿಸಿ ನಮಿಸಿ ಹೆಚ್ಚಿನ ಫಸಲು ನೀಡುವಂತೆ ಕೋರುವರು. ಇಂದು ರೈತಾಪಿಗಳಿಗೆ ಸಮೃದ್ಧಿಯ ಸಂಕೇತದ ದಿನವಾಗಿ ಕಂಡುಬರುವುದು. ಎಳ್ಳಾಮಾವಾಸ್ಯೆಯಂದು ರೈತರಲ್ಲಿ ನೂತನ ಚೈತನ್ಯ ಚಿಮ್ಮುವುದು.

ವಿಶೇಷವಾಗಿ ವಿವಿಧ ತರಕಾರಿಗಳನ್ನೊಳಗೊಂಡ ಹಾಗೂ ಅವರೇ ಬೀಜ, ಕಡಲೇ ಬೀಜ, ಒಟಾಣಿ ಬೀಜ, ಎಲ್ಲ ಹಸಿ ಕಾಳುಗಳನ್ನು ಸರಿಯಾಗಿ ಬೇಯಿಸಿ, ಕಡಲೆಹಿಟ್ಟಿನಲ್ಲಿ ಸೇರಿಸಿ, ಎಲ್ಲ ತರಕಾರಿಗಳನ್ನು ಹಾಕಿ 'ಭಜ್ಜಿ' ಎನ್ನುವ ವಿಶೇಷ ಪಲ್ಲ್ಯ ಮಾಡುವರು. ಜೊತೆಗೆ ಬಿಳಿ ಜೋಳದ, ಸಜ್ಜಿ ರೊಟ್ಟಿಯನ್ನೂ, ಗೋಧಿ ಹುಗ್ಗಿ, ಜೋಳದ ಬಾನಾ, ಅಂಬಲಿ, ಕಾನೋಲಿ, ಬಿಳಿ ಅಕ್ಕಿಅನ್ನ, ಮೆಂತಿ ಪಲ್ಲ್ಯಾ, ಹಾಲು, ತುಪ್ಪ, ಹೀಗೆ ಬಗೆ ಬಗೆಯ ಅಡುಗೆ ಮಾಡಿಕೊಂಡು ದೊಡ್ಡದಾದ ಬುಟ್ಟಿಯಲ್ಲಿ ಇಟ್ಟುಕೊಂಡು ಬೆಳಿಗ್ಗೆಯಿಂದಲೇ ಹೊಲಕ್ಕೆ ಹೋಗುವ ಪದ್ಧತಿ ಬೀದರ್ ಜಿಲ್ಲೆ ಸೇರಿದಂತೆ ಹೈದ್ರಾಬಾದ ಕರ್ನಾಟಕದ ಭಾಗದಲ್ಲಿ ನಡೆದು ಬಂದಿದೆ.

ಎಲ್ಲ ತರಹದ ಅಡುಗೆ ಮಾಡಿಕೊಂಡು ಎತ್ತಿನ ಹೆಗಲಿಗೆ ನೊಗ ಕಟ್ಟಿ, ಸಿಂಗರಿಸಿದ ಬಂಡಿಗಳಲ್ಲಿ ಅಂಬಲಿ ಗಡಿಗೆ, ಭಜ್ಜಿ, ಕಡುಬು, ಹೋಳಿಗೆ ಇತ್ಯಾದಿ ಪದಾರ್ಥಗಳೊಂದಿಗೆ, ಹೊಸ ಹೊಸ ಬಟ್ಟೆ ಧರಿಸಿ ಬಂಡಿಯಲ್ಲಿ ಕುಳಿತು ಹೊಲಗದ್ದೆಗಳಿಗೆ ಹೋಗುವರು. ಇಂದು ಬಂಡಿಗಳ ಬದಲಾಗಿ ಕಾರು, ಜೀಪು, ದ್ವಿಚಕ್ರ ವಾಹನಗಳು, ಟ್ರ್ಯಾಕ್ಟರ್‌ಗಳು, ಒಮಿನಿ, ಮಿನಿ ಬಸ್ಸುಗಳು ಕಂಡುಬರುತ್ತಿವೆ. ಮುನ್ನಾ ದಿನವೇ ಹೊಲಗಳಲ್ಲಿ ಬಿಳಿಜೋಳದ ಕಣಕಿಯಿಂದ ಗುಡಿಸಲಿನಂತೆ ಕೊಂಪಿ ಹಾಕುತ್ತಾರೆ. ಅದರಲ್ಲಿ ಎಲ್ಲ ಅಡುಗೆ ಸಾಮಾನುಗಳನ್ನು, ಇಟ್ಟುಕೊಳ್ಳುವರು ಗುಡಿಸಲಿನ ಕೊಂಪೆಯಲ್ಲಿ ಲಕ್ಷ್ಮಿದೇವಿಯ ಪೂಜೆ ಮಾಡುವರು. ದೀಪ ಬೆಳಗಿಸಿ, ಎರಡು ಕುಬುಸದ ಖಣ, ಎರಡು ಇಲ್ಲವೆ ಐದು ವಿಧದ ಹಣ್ಣು, ಅಡಕಿ, ಖಾರಿಕ್, ಬದಾಮು ಇಟ್ಟು ಅರಿಶಿಣ ಕುಂಕುಮದಿಂದ ಪೂಜೆ ಮಾಡಿ ಆರುತಿ ಬೆಳಗುವರು. ಎಲ್ಲ ವಿಧದ ಅಡುಗೆ ಲಕ್ಷ್ಮಿದೇವಿಯ ಅಂದರೆ ಭೂಮಿತಾಯಿಗೆ ಬಯಕೆಯ ಊಟವೆಂದು ನೈವೇದ್ಯ ತೋರುವರು.

ಮನೆಯ ಯಜಮಾನರಲ್ಲಿ ಯಾರಾದರೂ ಇಬ್ಬರು ಹೊಲವನ್ನೆಲ್ಲ ತಿರುಗಿ ಸರಗ ಚೆಲ್ಲುವರು. ಒಬ್ಬರು ಮುಚ್ಛಳ (ಮಣ್ಣಿನ ಮುಚ್ಚಳ) ದಲ್ಲಿ ಎಲ್ಲ ಅಡುಗೆ ನೈವೇದ್ಯವೆಂದು ತೆಗೆದುಕೊಳ್ಳುವರು. ಎರಡನೆಯವರು ಮಣ್ಣಿನ ಮಗಿಯಲ್ಲಿ ಅಂಬಲಿ ತೆಗೆದುಕೊಂಡು ಇಡೀ ಹೊಲವನ್ನೆಲ್ಲ ಮೂರು ಇಲ್ಲವೇ ಐದು ಸುತ್ತು ತಿರುಗಿ ಅನ್ನವನ್ನು ಎಸೆಯುವರು. ಹಿಂದಿರುವವರು ಜೋಳದ ಎಲೆಯಿಂದ ಅಂಬಲಿಯಲ್ಲಿ ಅದ್ದಿ ಎಲ್ಲ ಕಡೆ ಸಿಂಪಡಿಸುತ್ತಾ ಹೋಗುವರು. ಅವರು ಸರಗ ಚೆಲ್ಲುವಾಗ ಈ ರೀತಿ

ಎರಡನೆಯವನು: ಚೆಲ್ಗಂ ಪಲ್ಗ್ಯಾ (ಅಂಬಲಿ ಸಿಂಪಡಿ

ಮೂರು ಸುತ್ತು ಹೊಲವೆಲ್ಲ ಸಿಂಪಡಿಸಿ ಕೊನೆಗೆ ಲಕ್ಷೀಯನ್ನು ಪೂಜಿಸಿದ ಕೊಂಪೆಯ ಎದುರು ಬಂದು ಬೋರಲಾಗಿ ಮಲಗಿಕೊಳ್ಳುವರು. ಅವರಿಬ್ಬರ ಕೈಗಳು ಬೆನ್ನಮೇಲಿಟ್ಟು ಕೊಂಡಿರುತ್ತಾರೆ.

ಅಲ್ಲಿದ್ದವರು ಎರಡೆರಡು ಕಾನೋಲಿ ಅಥವಾ ಎಳ್ಳು ಸಕ್ಕರೆ ಹಾಕಿ ಮಾಡಿದ ಕಡಬು ಅವರ ಕೈಯಲ್ಲಿಡುತ್ತಾರೆ. ಅವರು ಸಾಸ್ಟಾಂಗ ಎರಗಿ ಎದ್ದು ಕುಳಿತು ಆ ಕಾನೋಲಿಯನ್ನು ತಿನ್ನುತ್ತಾರೆ.

ಹೊಲದಲ್ಲಿ ಬನ್ನಿ ಗಿಡದ ಕೆಳಗೆ ಪಾಂಡವರ ಐದು ಕಲ್ಲುಗಳನ್ನು ಸ್ಥಾಪಿಸಿರುತ್ತಾರೆ. ಅವುಗಳಿಗೆ ಸುಣ್ಣ ಜಾಜ ಹಚ್ಚಿರುತ್ತಾರೆ. ಸಾಕ್ಷಾತ್ ಪಾಂಡವರೆಂದೇ ನೆನೆದು ಪೂಜೆ ಸಲ್ಲಿಸುವರು. ನೈವೇದ್ಯ ತೋರಿ, ತೆಂಗಿನಕಾಯಿಒಡೆದು ಒಡೆದು, ಊದುಬತ್ತಿ ಹಚ್ಚುವರು. ಗಂಗಾ ಪೂಜೆ, ಭೂಪೂಜೆ, ಹಿರೋಡ್ಯಾನ ಪೂಜೆ ಮಾಡಿ ತೆಂಗಿನಕಾಯಿಒಡೆದು ಕರ್ಪೂರಬೆಳಗಿ ಪಂಚ ಪಕ್ವಾನ್ನ ಅಡಿಗೆ ನೈವೇದ್ಯ ತೋರುವರು. ಲಕ್ಷ್ಮಿ ಕೊಂಪೆಯ ಎದುರು ಸ್ವಲ್ಪ ದೂರದಲ್ಲಿ ಬೆಂಕಿಯ ಅಗ್ಗಿಷ್ಟಿಕೆ ಹಾಕಿ ಅದರಲ್ಲಿ ಹಾಲು, ತುಪ್ಪ ಇಡುವರು. ಪೂಜೆ ಆದ ನಂತರ ಬಂದಂಥ ಎಲ್ಲರನ್ನೂ ಊಟಕ್ಕೆ ಬಡಿಸುವರು. ನೆರೆ ಹೊರೆಯವರು, ಬಂಧುಮಿತ್ರರನ್ನು ಅಂದು ಹೊಲಕ್ಕೆ ಆಹ್ವಾನಿಸುತ್ತಾರೆ. ಶಿವಾರದಲ್ಲಿರುವವರನ್ನೆಲ್ಲ ಊಟಕ್ಕೆ ಕರೆಯುವರು. ಅವರೂ ಬಂದು ಭಜ್ಜಿಯ ಸವಿ ಸವಿಯುವರು. ಊಟದ ನಂತರ ಕಬ್ಬು, ಕಡಲೆಕಾಯಿ, ಬೋರೆಹಣ್ಣು, ಪೇರಲಹಣ್ಣು ತಿನ್ನುವರು. ಹೆಣ್ಣು ಮಕ್ಕಳು ದೊಡ್ಡ ದೊಡ್ಡ ಮರಗಳಿಗೆ ಕಟ್ಟಿದ ಜೋಕಾಲಿಯನ್ನು ಜೀಕುವರು. ಕೇ ಕೇ ಹಾಕಿ ನಕ್ಕು, ನಲಿದು ಕುಣಿದು ಕುಪ್ಪಳಿಸುವರು. ಗಂಡುಮಕ್ಕಳು ಪತಂಗ ಹಾರಿಸುವರು. ಹಿರಿಯರೆಲ್ಲ ಹೊಲಗದ್ದೆ ತಿರುಗಿ ಬೆಳೆಯನ್ನು ವೀಕ್ಷಿಸುವರು.

ಅಂದು ಎಲ್ಲ ಜನರೂ ಹೊಲಗದ್ದೆಗಳಲ್ಲಿಯೇ ಕಾಣಸಿಗುತ್ತಾರೆ. ಮನೆಗಳಿಗೆಲ್ಲ ಬೀಗಗಳೇ ಕಂಡುಬರುತ್ತವೆ. ಊರು ಬೀಕೋ ಎನ್ನುವದು. ಜನರಿಲ್ಲದೆ ಭಣಭಣ ಗುಟ್ಟುವುದು. ಪೋಲಿಸರು ಮಾತ್ರ ಗಸ್ತು ತಿರುಗುತ್ತಿರುತ್ತಾರೆ. ಏಕೆಂದರೆ ಕಳ್ಳಕಾಕರ ಕಾಟ ಅಂದು ಊರಲ್ಲಿ ಹೆಚ್ಚಾಗುವುದೆಂದು. ಬೇರೆ ಊರುಗಳಲ್ಲಿ, ಪಟ್ಟಣಗಳಲ್ಲಿ ಕೆಲಸಕ್ಕೆಂದು ಹೋದವರೆಲ್ಲ ಎಷ್ಟೇ ದೂರದೂರದಲ್ಲಿ ಇದ್ದರೂ ಎಳ್ಳಮಾವಾಸ್ಯೆಯ ದಿನದಂದು ಅವರೆಲ್ಲರೂ ಊರಿಗೆ ವಾಪಸ್ಸು ಬಂದಿರುತ್ತಾರೆ. ಎಲ್ಲರೂ ಒಂದು ಕಡೆ ಸೇರಿದ್ದರಿಂದ ಇದೂ ಒಂದು ವಿಶೇಷ ಸಂಭ್ರಮವೇ. ಮುಂಜಾನೆಯಿಂದ ಸಂಜೆಯವರೆಗೆ ಹೊಲಗದ್ದೆಗಳಲ್ಲಿ ಉಂಡು-ತಿಂದು ಆಡಿ, ಹಾಡಿ, ಜೀಕಿ, ಸಂಭ್ರಮಿಸಿ ಸಾಯಂಕಾಲದ ಹೊತ್ತು ಮನೆಯ ಕಡೆಗೆ ಹೋಗುವ ಸಿದ್ಧತೆ ಮಾಡಿಕೊಳ್ಳುವರು. ಸಾಯಂಕಾಲ ಗುಡಸಲಿನ ಕೊಂಪೆಯ ಎದುರು ಹಾಕಿದ ಅಗ್ಗಿಷ್ಟಿಕೆಯಲ್ಲಿ ಚಿಕ್ಕದ್ದೊಂದು ಮಣ್ಣಿನ ಕುಳ್ಳಿಯಲ್ಲಿ ಹಾಲು ಹಾಕಿ ಬೆಂಕಿಯ ಮಧ್ಯ ಭಾಗದಲ್ಲಿ ಇಡುವರು. ಅದರಲ್ಲಿ ಸ್ವಲ್ಪ ಅಕ್ಕಿ ಹಾಗೂ ಶ್ಯಾವಿಗೆ ಹಾಕಿರುತ್ತಾರೆ. ಐದು ಜನ ಮುತ್ತೈದೆಯರು ಅಗ್ಗಿಷ್ಟಿಕೆಯ ಸುತ್ತಲೂ ಗೋಲಾಕಾರವಾಗಿ ನಿಂತು ಕೈಯಲ್ಲಿ ಕಡಲೆಗಿಡದ ಎಲೆ ಹಾಗೂ ಕುಸುಬೆ ಎಲೆಗಳನ್ನು ಬಾಗಿಣ ಎಂದು ಹಿಡಿದಿರುತ್ತಾರೆ. ಒಬ್ಬರು ಇನ್ನೊಬ್ಬರಿಗೆ ಅರಿಶಿಣ ಕುಂಕುಮ ಹಚ್ಚಿಕೊಂಡು, ಭೂಮಿ ತಾಯಿಗೆ ಸಮೃದ್ಧವಾಗಿ ಬೆಳೆ ಕೊಡುವಂತೆ ಪ್ರಾರ್ಥಿಸುತ್ತಾರೆ. ಆ

ಕಂಚಗಾರ ಮನಿಯಾಗ ಕಂಚಿನ ಬ್ಹಾಸಿಂಗ
ಹೋಗಿ ಶಶಿಧರ ತಗತಂದ ಬೆಳಿಯೋ ಜೋಳವೇ sss
ಹೋಗಿನೇ ಶಶಿಧರ ತಗತಂದು ಹೂಡ್ಯಾರೆ
ಕಂಚ್ ಮಿಂಚೆಂಬ ಎರಡೆತ್ತು ಬೆಳಿಯೋ ಜೋಳವೇ sss
ಹೂಗಾರ ಮನಿಯಾಗ ಹೂವಿನ ಬ್ಹಾಸಿಂಗ

ಹೋಗಿ ರವಿಕುಮಾರ ತಗತಂದ ಬೆಳಿಯೋ ಜೋಳವೆ ss
ಹೋಗಿನೇ ರವಿಕುಮಾರ ತಗತಂದು ಹೂಡ್ಯಾರೆ
ಹವಳ ಗವಳೆಂಬ ಎರಡೆತ್ತು ಬೆಳಿಯೋ ಜೋಳವೇ ss [೧೬]

ಮನೆಯ ಯಜಮಾನರು ರೈತನ ಗೆಳೆಯನಾದ ಎತ್ತುಗಳಿಗೆ ಈ ಹಬ್ಬದಲ್ಲಿ ಹೂವಿನ, ಕಂಚಿನ ಭಾಸಿಂಗಗಳನ್ನು ತಂದು ಎತ್ತುಗಳಿಗೆ ಕಟ್ಟಿ ಸಿಂಗರಿಸುತ್ತಾರೆ. ಆ ನಂತರ ಬಂಡಿಯ ನೊಗಕ್ಕೆ, ನೇಗಿಲಿಗೆ ಎತ್ತುಗಳನ್ನು ಕಟ್ಟಿ ಪೂಜಿಸಿ, ನೈವೇದ್ಯಕೊಟ್ಟು ಕೆಲಸಕ್ಕೆ ಸಿದ್ಧಗೊಳಿಸುತ್ತಾರೆ. ಭೂಮಿತಾಯಿಯಲ್ಲಿ ಜೋಳ, ಬೆಳೆ ಸಮೃದ್ಧವಾಗಿ ಬೆಳೆಯಲು ಪ್ರಾರ್ಥನೇ ಮಾಡುತ್ತಾರೆ.

ದೇವರ ಮನಿಯಾಗ ನಲವತ್ತೊಂದು ಒಲಿ ಹೂಡಿ
ಅಕ್ಕದೇರು ಕುಂತಾರೆ ಅಡಗಿಗಿ ಬೆಳಿಯೋ ಜೋಳವೇ ss
ಅಡಗಿಯ ಮನಿಯಾಗ ಅರವತ್ತೊಂದ್ ಒಲಿಹೂಡಿ
ತಂಗಿದೇರು ಕುಂತಾರೆ ಅಡಗೀಗಿ ಬೆಳಿಯೋ ಜೋಳವೇ ss

ಹೊಲಗದ್ದೆಗಳಿಗೆ ನೆರೆಹೊರೆಯವರನ್ನು, ಬಂಧುಮಿತ್ರರನ್ನು, ಬರುವಂತೆ ಆಹ್ವಾನಿಸಿರುತ್ತಾರೆ. ಅದಕ್ಕಾಗಿ ಎಲ್ಲರೂ ಬೇರೆ ಬೇರೆ ಒಲೆಗಳನ್ನು ಹಾಕಿ ರಾತ್ರಿಯೆಲ್ಲ ಅಡುಗೆ ಮಾಡುತ್ತಾರೆ. ಕೆಲವರು ಸಜ್ಜಿ ರೊಟ್ಟಿ, ಕೆಲವರು ಬಿಳಿಜೋಳದ ರೊಟ್ಟಿ, ಕೆಲವರು, ಕಡುಬು, ಕಾನೋಲಿ, ಕೆಲವರು ಮೊಸರನ್ನ, ಕೆಲವರು ಭಜ್ಜಿ, ಕೆಲವರು ಗೋಧಿ ಹುಗ್ಗಿಕುಟ್ಟುವರು ಹೀಗೆ ಎಲ್ಲರೂ ಸೇರಿ ವಿವಿಧ ಭಕ್ಷ್ಯಗಳನ್ನು ಸಿದ್ಧಪಡಿಸಿಕೊಳ್ಳುವರು. ಅದೇ ರೀತಿ ಭಜ್ಜಿಯ ಗಡಿಗೆಗೂ, ಅಂಬಲಿಯ ಮಣ್ಣಿನ ಗಡಿಗೆಗೂ ಸುಂದರವಾದ ಬಿಳಿ ಬಣ್ಣದ ಚಿತ್ತಾರ ಬರೆದು, ಅರಿಶಿಣ ಕುಂಕುಮದಿಂದ ಪೂಜಿಸಿ ಸಿಂಗರಿಸುವರು. ಗಡಿಗೆಯ ಕೊರಳಿಗೆ ಹೂವಿನ ಹಾರ ಕಟ್ಟುವರು.

ಭಜ್ಜಿಯ ಗಡಿಗಿಗಿ ಗೆಜ್ಜಿ ತೋರಣ ಕಟ್ಟಿ
ಕಂದನ ಕೈ ಮಾಡಿ ಕರದಾಳೆ ಬೆಳಿಯೋ ಜೋಳವೇ ss
ಕಂದನ ಕೈ ಮಾಡಿ ಕರದಾಳೆ ಜ್ಯೋತೆಮ್ಮಾ
ಇಳವಂದಾಳ ಸಣ್ಣ ಮಳಗ್ಯಾಗ ಬೆಳಿಯೋ ಜೋಳವೇ ss

ಅಂಬಲಿ ಗಡಗಿಗಿ ಗೆಜ್ಜಿ ತೋರಣ ಕಟ್ಟಿ
ಕಂದನ ಕೈ ಮಾಡಿ ಕರದಾಳೆ ಬೆಳಿಯೋ ಜೋಳವೇ ss
ಕಂದನ ಕೈ ಮಾಡಿ ಕರದಾಳೆ ದೀಪಮ್ಮ
ಇಳವಂದಾಳೆ ದೊಡ್ಡ ಮಳಗ್ಯಾಗ ಬೆಳಿಯೋ ಜೋಳವೇ ss [೧೭]

ರೈತರು ವ್ಯವಸಾಯಕ್ಕೆ ಬೇಕಾದ ಕಟ್ಟಿಗೆಯ ಸಾಮಗ್ರಿಗಳನ್ನು ಹೊಲದಲ್ಲಿರುವ ಗಿಡ, ಮರಗಳನ್ನು ಕಡಿದು ಸಿದ್ಧಪಡಿಸಿಕೊಂಡಿರುತ್ತಾರೆ. ಜೊತೆಗೆ ನೇಗಿಲ ಸಾಮಗ್ರಿ, ಉತ್ತು ಬಿತ್ತುವ ಕೂರಿಗೆ, ನೊಗ ಇವುಗಳನ್ನೆಲ್ಲ ತಮ್ಮಲ್ಲಿ ಬೆಳೆಯುವ ಗಿಡಮರಗಳಿಂದ ಸಿದ್ಧ ಪಡಿಸಿಕೊಳ್ಳುವರು ಪ್ರತಿಯೊಂದು ಹೊಲಗಳಲ್ಲಿ ಪಾಂಡವರ ಪ್ರತಿಷ್ಠಾಪನೆ ಮಾಡಿರುತ್ತಾರೆ. ಪಾಂಡವರು ರೈತನ ಆರಾಧ್ಯ ದೈವವೆಂದೇ ಪೂಜಿಸುವರು ಅವರು ಬೇಸಾಯದ ಎಲ್ಲ ಸಾಮಗ್ರಿಗಳೊಂದಿಗೆ ಪಾಂಡವರಿಗಾಗಿ ಮಣೆಯನ್ನು ಮಾಡುವರು.

ಅತ್ತಿಯ ಗಿಡ ಕಡದು ನೊಗ ಮಾಡಿ ಇಸ ಮಾಡಿ
ಪಾಂಡೋರ್ ಕೂಡುವ ಮಣೆ ಮಾಡಿ ಬೆಳಿಯೋ ಜೋಳವೇ ss

ಬೇವಿನ ಗಿಡ ಕಡದು ನೊಗ ಮಾಡಿ ಇಸ ಮಾಡಿ
ಪಾಂಡೋರ್ ಕೂಡುವ ಮಣಿ ಮಾಡೀ ಬೆಳಿಯೋ ಜೋಳವೇ ಽಽ

ಎಂದು ಬೆಳೆಯ ಸಮೃದ್ಧಿಗಾಗಿ ಭೂಮಿ ತಾಯಿಯಲ್ಲಿ ಪ್ರಾರ್ಥಿಸುವರು.

ಭಜ್ಜಿ ಗಡಗೀಗಿ ಗೆಜ್ಜಿ ತ್ವಾರಣ ಕಟ್ಟಿ
ಗುಜ್ಜೇರು ಬರ್‍ರೆ ನಮ್ಮ ಹೊಲಕ ಬೆಳಿಯೋ ಜೋಳವೇ ಽಽ
ಹುಗ್ಗಿಯ ಗಡಗೀಗಿ ಗೆಜ್ಜಿ ತ್ವಾರಣ ಕಟ್ಟಿ
ಮುತ್ತೈದೇರ್ ಬರ್‍ರಿ ನಮ್ಮ ಹೊಲಕ ಬೆಳಿಯೋ ಜೋಳವೇ ಽಽ

ನಡುವ ಪಡಸಾಲ್ಯಾಗ ಇಪ್ಪತ್ತೊಂದೊಲಿಹೂಡಿ
ಅವ್ವ ಕುಂತಾಳೆ ಅಡಗೀಗಿ ಬೆಳಿಯೋ ಜೋಳವೇ ಽಽ
ಹಿರಿಮನಿಯಾಗ ಹನ್ನೊಂದು ಒಲಿ ಹೂಡಿ
ಅತ್ತೆವ್ವ ಕುಂತಾಳೆ ಅಡಗೀಗಿ ಬೆಳಿಯೋ ಜೋಳವೇ ಽಽ [೧೮]

ಈ ರೀತಿ ಹಾಡು ಹೇಳುತ್ತಿರುವಾಗ ಅಗ್ಗಷ್ಟಿಕೆಯಲ್ಲಿದ್ದ ಹಾಲು ತುಂಬಿದ ಮಣ್ಣಿನ ಕುಳ್ಳಿಯಲ್ಲಿರುವ ಹಾಲು ಉಕ್ಕೇರು ಬರುವುದು. ಅದು ಯಾವ ದಿಕ್ಕಿನಲ್ಲಿ ಉಕ್ಕುವುದೋ ಆ ದಿಕ್ಕಿನಲ್ಲಿ ಹೆಚ್ಚು ಬೆಳೆ ಬೆಳೆಯುವುದೆಂದು ಜನಪದರ ಲೆಕ್ಕಾಚಾರ. ಗಂಗಿಯ ದಿಕ್ಕಿಗೆ ಹಾಲುಕ್ಕಿದರೆ ಸಮೃದ್ದ ಬೆಳೆ ಬೆಳೆಯುವುದೆಂದು ಅವರ ಅನಿಸಿಕೆ. ಆ ನಂತರ ಆರುತಿ ಪದ ಹೇಳಿ ಹಾಲುಕ್ಕಿಸುವ ಕಾರ್ಯ ಮುಕ್ತಾಯಗೊಳಿಸುವರು. ಮುತ್ತೈದೆಯರು (ಐವರು) ಹಾಲುಕ್ಕಿದ ನಂತರ ಮಂಗಳ ಪದ ಹೇಳಿ ತಮ್ಮ ಕೈಯಲ್ಲಿ ಹಿಡಿದಿರುವ ಬಾಗಿಣ ಆ ಹಾಲಿನಲ್ಲಿ ಹಾಕುವರು.

ಆರುತಿ ಬೆಳಗಿರಿ ಹೋಗುತ್ತ ಹರದೇರು
ಮುಕ್ಕಣ್ಣ ಶಿವನ ಜಗನಾಥಗೇ
ಗಂಗೀಗಿ ಗೌರಿಗಿ ಸನ್ಮುಖ ಸ್ವಾಮಿಗಿ
ರಾಜಾ ಗೋಪಾಲ ರೂಪೀಂದ್ರಗೇ
ಜಯ ಮಂಗಲವನಿತ್ಯ ಶುಭ ಮಂಗಲ [೧೯]

ಮಂಗಳ ಗೀತೆ ಹಾಡಿದ ನಂತರ ಬಿದಿರ ಬುಟ್ಟಿ ಯಲ್ಲಿ ಲಕ್ಷ್ಮಿಪೂಜೆಗೆ ಇಟ್ಟ ಕುಬ್ಬುಸದ ಖಣಗಳು ಮನೆಯ ಯಜಮಾನಿಯ ಉಡಿಯಲ್ಲಿ ಹಾಕಿ ನಂತರ ಬುಟ್ಟಿಗೆ ಬಿಳಿ ಜೋಳದ ಸಣ್ಣ ಸಣ್ಣ ಐದು ಹಸಿರು ದಂಟಿನಿಂದ ಬುಟ್ಟಿಯ ಸುತ್ತಲೂ ಕಟ್ಟುವರು. ಅದರ ಮೇಲೆ ಕುಬ್ಬುಸದ ಬಟ್ಟೆಯಿಂದ ಗುಡಿಯಾಕಾರದಲ್ಲಿ ಕಟ್ಟಿ, ಕೊಂಪೆಯಲ್ಲಿದ್ದ ದೀಪ ಅದರಲ್ಲಿ ಇಡುವರು ಅದಕ್ಕೆ "ಸೆಸಿ ಬುಟ್ಟಿ" ಎನ್ನುವರು. ಆ ಬುಟ್ಟಿಯನ್ನು ಮನೆಯ ಯಜಮಾನಿಯ ತಲೆಯ ಮೇಲೆ ಕೊಡುವರು ಅವಳು ಅದನ್ನು ಹೊತ್ತುಕೊಂಡು ಆ ಲಕ್ಷ್ಮೀಕೊಂಪೆಗೆ ಮಾತಾಡದೇ ಎರಡು ಸುತ್ತು ಹಾಕಿ ಹೊಲದಿಂದ ಮನೆಯ ಕಡೆಗೆ ಹೊರಡುವರು. ತಮ್ಮ ಹೊಲ ಬಿಟ್ಟು ಹೊರಗೆ ಬರುವವರೆಗೆ ಯಾರೊಂದಿಗೂ ಮಾತಾಡುವುದಿಲ್ಲ. ಹಿಂದೆ ತಿರುಗಿಯೂ ನೋಡುವುದಿಲ್ಲ. ಅದೇ ರೀತಿ ಊರ ಹೊರಗಿರುವ ಹಣಮಂದೇವರ ಗುಡಿಗೆ ಬಂದು, ಅಲ್ಲಿ ಟೆಂಗು ಒಡೆದು ಮನೆಗೆ ಬರುವರು. ಆದರೆ ಈಗ ಯಾರೂ ಮನೆಯ ತನಕ ಸೆಸಿ ಬುಟ್ಟಿ ತೆಗೆದುಕೊಂಡು ಬರಲಾರರು. ತಮ್ಮ ಹೊಲದಾಟುವವರೆಗೆ ಮಾತ್ರ ತಮ್ಮ ತಲೆಯ ಮೇಲೆ ಹೊತ್ತು ಕೊಳ್ಳುವರು. ಆ ನಂತರ ಯಾರಾದರೂ ಕೆಲಸದವರ ತಲೆ ಮೇಲೋ ಅಥವಾ ಮನೆಯ ಇನ್ನೊಬ್ಬ ಸದಸ್ಯರ ತಲೆಯ ಮೇಲೆ ಕೊಡುವರು. ಅವರೇ ಹನುಮಂದೇವರ ಗುಡಿಗೆ ಹೋಗಿ ದೀಪ ಹಚ್ಚಿ ತೆಂಗಿನಕಾಯಿ ಒಡೆದು ಬರುವರು.

ಮರುದಿವಸ ಹೊರ ಊರಿಂದ ಬಂದ ಸಂಬಂಧಿಕರು, ನೆಂಟರಿಷ್ಟರು, ಬಂಧು ಮಿತ್ರರು ಹೊರಡುವರು. ಅಥವಾ ಕೆಲಸಕ್ಕೆಂದು ಬೇರೆ ಊರಲ್ಲಿರುವ ಮನೆಯವರ ಮಕ್ಕಳು ಊರಿಗೆ ಹೊರಡುವರು. ಈಗೀಗ ಸಮಯದ ಆಭಾವದಿಂದ ಅಂದೇ ಸಾಯಂಕಾಲ ಹೋಗಲು ಸಿದ್ದರಾಗುತ್ತಾರೆ. ಸ್ವಂತ ವಾಹನವಿದ್ದರೆ ಹೊಲಗದ್ದೆಗಳಿಂದಲೇ ಹೋಗುವರು.

ಈ ರೀತಿ ಬೀದರ್ ಜಿಲ್ಲೆಯಲ್ಲಿ ಎಳ್ಳಾಮಾವಾಸ್ಸೆ ಆಚರಿಸಿದರೆ, ಹೈದ್ರಾಬಾದ್ ಕರ್ನಾಟಕದ ವಿವಿಧೆಡೆಯಲ್ಲಿ ವಿವಿಧ ರೀತಿಯಲ್ಲಿ ಎಳ್ಳ ಅಮಾವಾಸ್ಯೆ ಆಚರಿಸುವರು. ಇದು ಆಯಾ ಪ್ರಾದೇಶಿಕತೆಗೆ ಅನುಗುಣವಾಗಿರುತ್ತದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಬೀದರ್ ಜಿಲ್ಲೆಯಂತೆ ಗಟ್ಟಿ ಭಜ್ಜಿ, ಕಟಿ ರೊಟ್ಟಿ ಮಾಡದೆ, ನೀರಿನಂಥ ಹುಳಪಲ್ಲ್ಯಾ ಮತ್ತು ಜೋಳದ ಕಡುಬು ಮಾಡುವರು. ಎಲ್ಲಾ ತರಕಾರಿ ಹಸಿರು ಕಾಳುಗಳನ್ನು ಸೇರಿಸಿ ಹುಳಿಯಾದ ನೀರಿನಂಥ ಪಲ್ಯದ ಜೊತೆಗೆ ಜೋಳದ ಹಿಟ್ಟು ಗಟ್ಟಿಯಾಗಿ ಕಲಿಸಿ ಹದಮಾಡಿ ಚಿಕ್ಕ ಚಿಕ್ಕ ಗೋಟಿಯಾಕಾರ ಮಾಡಿ ಅವುಗಳನ್ನು ಉಗೆಯ ಮೇಲೆ ಬೇಯಿಸಿಕೊಳ್ಳುತ್ತಾರೆ. ಅಂಥ ಗೋಟಿಯಂಥಹ ಜೋಳದ ಕಡಬನ್ನು ಹುಳಪಲ್ಲೆದಲ್ಲಿ ಅದ್ದಿ ತಿನ್ನುವರು. ಜೊತೆಗೆ ಹುಗ್ಗಿ, ಜೋಳದನ್ನ, ಅಂಬಲಿ, ಸಪ್ಪನ ಬೇಳೆ, ಬದನೆಕಾಯಿ. ಭೆಂಡೆಕಾಯಿಯ, ಹಸಿ ಟಮಾಟೋ ಭರ್ತಾ(ಚಟ್ನಿ) ಮಾಡುವರು. ಬೀದರ್ ಜಿಲ್ಲೆಯಲ್ಲಿ ಕೆಂಪು ಶಾಲು ಹಾಕಿದ ಕೊಂಪೆ ಹೊಲದಲ್ಲಿ ಲಕ್ಷ್ಮೀ ಪೂಜೆಗಾಗಿ, ಭೂಮಿ ಪೂಜೆಗಾಗಿ ಕಟ್ಟಿದರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಕೊಂಪಿ (ಗುಡಿಸಲು) ಕಟ್ಟದೆ ಮಣೆ ಅಥವಾ ಚೌಕಿಯ ಮೇಲೆ ಪೂಜೆ ಮಾಡುವರು. ಹಾಲುಕ್ಕಿಸುವ ಕಾರ್ಯ ಕೆಲವು ಕಡೆ ಮಾತ್ರ ಈ ಪದ್ಧತಿ ಆಚರಿಸುವರು. ಹಾಲುಕ್ಕಿಸಿ, ಭೂಮಿ ತಾಯಿ ಸಮೃದ್ಧವಾದ ಬೆಳೆ ಕೊಡಲೆಂದು ಪ್ರಾರ್ಥಿಸುವ ಬೀದರ್ ಜಿಲ್ಲೆಯಲ್ಲಿಯೇ ಬೇರೆ ಬೇರೆ ತಾಲೂಕಿನಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳು ಕಂಡುಬರುತ್ತವೆ. ಕೆಲವರು ಹಾಲುಕ್ಕಿಸಿ ಹಾಡು ಹೇಳುತ್ತಾರೆ. ಕೆಲವು ಕಡೆ ಹಾಲುಕ್ಕಿಸುವ ಪದ್ಧತಿಯ ಕುರಿತು ಪರಿಚಯವಿಲ್ಲ. ಬೀದರ್ ಜಿಲ್ಲೆಯಲ್ಲಿ ಸರಗ ಚೆಲ್ಲುವ ಇಬ್ಬರು ಗಂಡು ಮಕ್ಕಳು ಲಕ್ಷ್ಮೀ ಪೂಜೆ ಮಾಡಿದ ಕೊಂಪೆಯ ಎದುರುಗಡೆ ಬೋರಲಾಗಿ ಸಾಸ್ಟಾಂಗ ಎರಗಿದಂತೆ ಮಲಗಿ ಕೈಯಲ್ಲಿ ಕೊಟ್ಟ ಕಾನೋಲಿ ತಿನ್ನುವರು. ಆದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಲಕ್ಷ್ಮೀಯ ಪೂಜೆಯಲ್ಲಿ ಕೊಂಪೆಯಲ್ಲಿ ಪಾಂಡವರೆಂದು ಹಿಟ್ಟಿನಿಂದ ಮಾಡಿದ ಐದು ಮುದ್ದೆಗಳು ಮಾಡಿ ಪಾಂಡವರೆಂದು ಪೂಜಿಸುವರು. ಎದುರು ಎರಡು ಬಿಳಿ ಜೋಳದ ದಂಟಿಗೆ ನೂಲುಸುತ್ತಿ, ಆ ನೂಲಿನ ಎದುರಿನಲ್ಲಿ ಸರಗ ಚೆಲ್ಲಿದ ಇಬ್ಬರೂ ಗಂಡು ಮಕ್ಕಳನ್ನು ಊಟಕ್ಕೆ ನೀಡಿದ ನಂತರವೇ ಉಳಿದೆಲ್ಲರನ್ನೂ ಊಟಕ್ಕೆ ಕೊಡುವರು.

ಕೆಲವು ಕಡೆ ಲಕ್ಷ್ಮಿ ಹಾಗೂ ಭೂದೇವಿಯ ಬಯಕೆಯ ಊಟವೆಂದು ಎಳ್ಳಾಮವಾಸ್ಯೆಗೆ ಮಾಡಿದ ಎಲ್ಲ ಅಡಿಗೆಯನ್ನು ನೈವೇದ್ಯ ತೋರಿ, ಆನಂತರ ಒಂದು ಚಿಕ್ಕ ಬಟ್ಟೆಯ ತುಂಡಿನಲ್ಲಿ ನೈವೇದ್ಯವನ್ನು, ಒಂದು ಮಗಿಯ (ಮಣ್ಣಿನ ಕುಡಿಕೆ) ತುಂಬ ಅಂಬಲಿಯನ್ನು ಭೂಮಿಯಲ್ಲಿ ಅಡಗಿಸಿಡುವರು. ಇನ್ನೂ ಕೆಲವು ಕಡೆ ನೈವೇದ್ಯಯ ಗಂಟನ್ನು ಲಕ್ಷ್ಮೀಯ ಕೊಂಪೆಯಲ್ಲಿ ಮೇಲ್ಭಾಗದಲ್ಲಿ ಕಟ್ಟಿಡುವರು. ಅದನ್ನು ಹೊಲ ಕಾಯುವವನು ತೆಗೆದು ಊಟ ಮಾಡುವ ಪ್ರತೀತಿಯೂ ಇದೆ. ಎಳ್ಳಾಮವಾಸೆಯ ಸಾಯಂಕಾಲ ಸಸಿಬುಟ್ಟಿಯೊಂದಿಗೆ ಶೂನ್ಯಮಾಸ ಪ್ರಾರಂಭವಾಗುವುದು. ಮುಂಬರುವ ಅಮವಾಸ್ಯೆಯವರೆಗೆ ಅಂದರೆ ಒಂದು ತಿಂಗಳು ಶೂನ್ಯಮಾಸವೆಂದು ಗುರುತಿಸಿ ಯಾವ ಶುಭಕಾರ್ಯವೂ ಮಾಡುವುದಿಲ್ಲ. ಹೊಸದಾಗಿ ಮದುವೆಯಾದ ಸೊಸೆಯು ಒಂದು ತಿಂಗಳವರೆಗೆ

ಅತ್ತೆ ಮುಖ ನೋಡಲಾರಳು. ತವರಿಗೆ ಹೋಗುವಳು ಇಲ್ಲವೆ ಬೇರೆ ಯಾರದಾದರೂ ಸಂಬಂಧಿಕರ ಮನೆಯಲ್ಲಿ ಉಳಿದು ಬರುವಳು.

ಈ ರೀತಿಯಾಗಿ ಎಳ್ಳಾಮವಾಸ್ಯೆಯ ಹಬ್ಬವು ಹಸಿರಿನ ಮಡಿಲಲ್ಲಿ ಪತಂಗಗಳ ಹಾರಾಟದಲ್ಲಿ, ಜೋಕಾಲಿಯ ಜೀಕಿನಲ್ಲಿ, ರುಚಿಕರ ಅಡುಗೆ ಸವಿಯುವಲ್ಲಿ, ಲಕ್ಷ್ಮಿ, ಭೂದೇವಿಯರ ಆರಾಧನೆಯಲ್ಲಿ, ಶೃಂಗರಿಸಿದ ಚಕ್ಕಡಿ, ಎತ್ತುಗಳ ಕೊರಳ ಗಂಟೆಯ, ಪಕ್ಷಿ ಕಲರವ ನಾದದಲ್ಲಿ, ಮಕ್ಕಳ ನಗುವಿನ ಕೇಕೆಯಲ್ಲಿ ಸಂಭ್ರಮಿಸಿ ಪೂರ್ಣಗೊಳ್ಳುವುದು. ಈ ಆಚರಣೆಯಲ್ಲಿ ಮಹಿಳೆಯು ತನ್ನದೇ ಆದ ವಿಶೇಷವಾದ ನೆಲೆಯಲ್ಲಿ ಭಾಗಿಯಾಗುತ್ತ ಬಂದಿದ್ದು, ಈ ಆಚರಣೆಗೆ ಪೂರಕವಾದ ವಿವಿಧ ಜಾನಪದ ಹಾಡುಗಳನ್ನು ರಚಿಸಿ ಹಾಡಿ, ಆಮೂಲಕ ಈ ಹಾಡುಗಳನ್ನು ಕಾಪಾಡಿಕೊಂಡು ಬಂದ ಕೀರ್ತಿಯು ನಮ್ಮ ಜಾನಪದ ಮಹಿಳೆಯರಿಗೆ ಸಲ್ಲುತ್ತದೆ. ಬೀದರ್ ಜಿಲ್ಲೆಯಲ್ಲಿ ಇಂತಹ ಸಾಕಷ್ಟು ಮಹಿಳಾ ಜಾನಪದ ಹಾಡುಗಳು ಪ್ರಾದೇಶಿಕತೆಯನ್ನು ಕಟ್ಟಿಕೊಡುವ ನೆಲೆಯಲ್ಲಿ ಕಂಡುಬರುತ್ತವೆ.

ಜನನದಿಂದ ಮರಣದವರೆಗೆ ಪ್ರತಿಯೊಂದು ಕಾರ್ಯಕ್ರಮದಲ್ಲಿ ಆರತಿ ಮಾಡುವ ಪದ್ಧತಿ ಇದೆ. ಮುಖ್ಯವಾಗಿ ಮಗುವಿಗೆ ತೊಟ್ಟಿಲಲ್ಲಿ ಹಾಕುವಾಗ ತಾಯಿ ಮಗುವಿಗೂ, ಮೈನೆರೆದಾಗ, ಕಿರುಗೋಣಿ ಉಡಿಸುವಾಗ, ಶಾಲು ಹೊದಿಸುವಾಗ, ನಿಶ್ಚಯ ಮಾಡುವಾಗ, ಕುಂಕುಮ ಹಚ್ಚುವಾಗ, ಮುತ್ತೈದೆಯರನ್ನು ಪೂಜಿಸುವಾಗ, ಸುರಗಿ ಸುತ್ತಿದಾಗ, ಭಾಸುಣಕಿ, ಮದುವೆಯಲ್ಲಿ, ಮದುಮಕ್ಕಳಿಗೆ ಮನೆಯಲ್ಲಿ ಸ್ವಾಗತಿಸುವಾಗ, ಸೋಬನ, ಸೀಮಂತ (ಕುಪ್ಪಸ ಮಾಡುವಾಗ) ಹೀಗೆ ಸಕಲ ಮಂಗಲ ಕಾರ್ಯಗಳಲ್ಲಿ ಕೊನೆಗೆ ಆರತಿ ಮಾಡಿಯೇ ಈ ಸಮಾರಂಭಗಳು ಮುಗಿಸುವರು. ಮರಣದಲ್ಲಿಯೂ ಶವಸಂಸ್ಕಾರದ ಮೊದಲು ಮನೆಯವರೆಲ್ಲ, ಬಂಧು ಬಳಗದವರೆಲ್ಲ ಆರತಿ ಮಾಡುವ ಸಂಪ್ರದಾಯವಿದೆ.

ಪ್ರತಿಯೊಂದು ಪೂಜೆ ಮಾಡಿದ ನಂತರ ಕೊನೆಯಲ್ಲಿ ಮಂಗಳ ಗೀತೆಯಾದ ನಂತರ ಆರತಿ ಮಾಡಿ ಆರತಿಪದ ಹಾಡುವರು. ದೇವರಿಗೆ ಆರತಿ ಮಾಡಿ ಅಕ್ಷತೆ ಹಾಕಿದಾಗಲೇ ಪೂಜಾ ಕಾರ್ಯ ಪೂರ್ಣವಾದಂತೆ. ಅಕ್ಕ ತಂಗಿಯರು ಅಣ್ಣ ತಮ್ಮಂದಿರಿಗೆ 'ರಾಖಿ' ಕಟ್ಟಿ ಆರತಿ ಮಾಡಿ ಹರಸುವರು. ಅಂದರೆ ಮುಂದೆ ಮಂಗಳವಾಗಲಿ ಎಂಬ ಆಶಯ ಇದರಲ್ಲಿ ಅಡಗಿರುವುದು. ಹೆಚ್ಚಾಗಿ ಆರತಿ ಮಾಡುವುದು ಹೆಂಗಳೆಯರೇ ಅದಕ್ಕಾಗಿಯೇ 'ಆರತಿಗೊಬ್ಬ ಮಗಳು, ಕೀರ್ತಿಗೊಬ್ಬ ಮಗ' ಎಂಬ ನಾಣ್ನುಡಿ ಪ್ರಚಲಿತದಲ್ಲಿದೆ. ಹಿಂದೆ ರಾಜರುಗಳು ದಿಗ್ವಿಜಯ ಸಾಧಿಸಿ ಬಂದರೂ ಆರತಿ ಬೆಳಗಿ ಅವರನ್ನು ಸ್ವಾಗತಿಸುತ್ತಿದ್ದರು. ಆರತಿ ಪದಗಳಲ್ಲಿ ಶಿವನ ಸ್ತೋತ್ರಗಳು, ಶರಣರ ಸ್ತುತಿಗಳೇ ಅಧಿಕ ಇದು ಕಾರ್ಯಕ್ರಮದ ಕೊನೆಯಲ್ಲಿ ರಾಷ್ಟ್ರಗೀತೆ ಇದ್ದಂತೆ, ಈ ಆರತಿ ಪದಗಳು ಹಳ್ಳಿಗರ ಬಾಳಿನಲ್ಲಿ ಹಾಸು ಹೊಕ್ಕಾಗಿವೆ. ಎಲ್ಲ ಕಾರ್ಯಕ್ರಮದ ಕೊನೆಯಲ್ಲಿ ಮಂಗಳಾರತಿ ಇದ್ದೇ ಇರುತ್ತದೆ.

ಆರತಿ ಮಾಡುವುದರ ಮುಖ್ಯ ಉದ್ದೇಶ ಅಮಂಗಳ ಹಾಗೂ ದೋಷವನ್ನು ನಿವಾರಣೆ ಮಾಡುವುದು ಹಾಗೂ ಶುಭವನ್ನು ಕೋರುವುದು. ಕೆಟ್ಟ ಕಣ್ಣಿನ ದೃಷ್ಟಿ ತಾಗಿದರೆ ಅಮಂಗಳ ಉಂಟಾಗುವುದು. ಸುಂದರವಾದ ಕಲ್ಲಿಗೂ ಕೆಟ್ಟ ದೃಷ್ಟಿ ತಾಗಿದರೆ ಅದೂ ಒಡೆದು ಹೋಳಾಗುವುದು. ಹಸಿರು ಫಲನೀಡುತ್ತಿರುವ ಮರವೂ ಒಣಗಿ ನಿಲ್ಲುವದು. ಮಕ್ಕಳಿಗೆ ದೃಷ್ಟಿ ತಾಗಿದರೆ ಅತ್ತು, ರಂಪ ಮಾಡುತ್ತ ಕಿರಿಕಿರಿ ಮಾಡುವವು ಎಂಬ ನಂಬಿಕೆ ಜನಪದರ ಮನಮನದಲ್ಲೂ ಬೇರೂರಿ ನಿಂತಿದೆ. ಅದೇ ರೀತಿ ಮದುವೆ ಮುಂತಾದ ಸಂದರ್ಭಗಳಲ್ಲಿ ವಧು ವರರಿಗೆ ಯಾವ ಕೆಡಕೂ ಆಗದಿರಲೆಂದು,

ಅಮಂಗಳ ನಿವಾರಣೆಯಾಗಿ ಮಂಗಳ ಉಂಟಾಗಲಿ, ದೋಷ ನಿವಾರಣೆಯಾಗಲಿ ಎಂಬ ಉದ್ದೇಶದಿಂದ ಆರತಿ ಮಾಡುವರು. ಅಲ್ಲದೆ ದೀಪ ಬೆಳಗುವುದು ಹಿಂದೂ ಸಂಸ್ಕೃತಿಯಲ್ಲಿ ಶುಭದಾಯಕವೆಂದು ನಂಬಿರುವರು. ಸಾಯಂಕಾಲ ಮನೆಯಲ್ಲಿ ದೀಪ ಬೆಳಗಿಸಿದರೆ ಲಕ್ಷ್ಮೀಯ ಆಹ್ವಾನವಾಗುವುದೆಂದು ಜನಪದರ ನಂಬಿಕೆ. ಯಾವುದೇ ಸಂದರ್ಭದಲ್ಲೂ ಆರತಿಮಾಡುವಾಗ ಆರತಿ ನಂದಬಾರದೆಂಬ ಭಾವನೆ, ಅದರಿಂದ ಅಶುಭವುಂಟಾಗುವುದು ಎಂಬ ಬಲವಾದ ನಂಬಿಕೆ ಜನರಲ್ಲಿ

ಹೋಗುವವು ಎಂದು ಹಿರಿಯರ ಹೇಳಿಕೆಯಾಗಿದೆ. ಮುತ್ತೈದೆಯರ ಪೂಜೆಯ ಸಮಯದಲ್ಲಿ ದಂಪತಿಗಳಿಗೆ ಆರತಿ ಮಾಡುವುದೆಂದರೆ ಸಾಕ್ಷಾತ್ ಶಿವ-ಪಾರ್ವತಿಯರನ್ನೇ ಆರತಿ ಬೆಳಗಿದಂತೆ ಎಂಬ ಮನೋಭಾವ ಒಡಮೂಡಿ ನಿಂತಿರುವುದು. ಪೂಜಾಕಾರ್ಯ ಮುಗಿದ ನಂತರ ಪೂಜೆಗೆ ಹಾಜರಿದ್ದ ಎಲ್ಲರ ಹತ್ತಿರ ಆರತಿ ತಟ್ಟೆ ತೆಗೆದುಕೊಂಡು, ತಲೆಯ ಮೇಲೆ ಕೈಯಾಡಿಸಿಕೊಳ್ಳುವರು. ಆರುತಿ ಮಾಡಿ

ಬಲವಾಗಿ ಬೇರೂರಿ ನಿಂತಿರುವುದು. ಅದಕ್ಕಾಗಿಯೇ ಈ ಎಲ್ಲದಕ್ಕೂ ಪರಿಹಾರವಾಗಿ ಆರತಿ ಬೆಳಗುವರು. ಇದರಿಂದ ಕಷ್ಟವೆಂಬ ಕತ್ತಲೆ ದೂರಾಗಿ ಸುಖ, ಸಂತೋಷವೆಂಬ ಬೆಳಕು ಮೂಡುತ್ತದೆ ಎಂಬುದು ಜನಪದರ ಕಲ್ಪನೆ.

ಶವ ಸಂಸ್ಕಾರದ ಹೊತ್ತಿನಲ್ಲೂ ಆರತಿ ಮಾಡುವರು. ಇದರಿಂದ ಅವರ ಆತ್ಮಕ್ಕೆ ಶಾಂತಿ ದೊರಕುವದು. ಮುಂದಿನ ಮಾರ್ಗ ಸುಗಮವಾಗಿ, ಆತ್ಮಕ್ಕೆ ಮುಕ್ತಿ ದೊರಕುವುದೆಂದು ಆರತಿ ಮಾಡುವ ಪದ್ಧತಿ ಬೆಳೆದು ಬಂದಿದೆ. ಇಲ್ಲವಾದಲ್ಲಿ ಅವರ ಆತ್ಮ ತಮ್ಮವರ ಮಧ್ಯದಲ್ಲಿಯೇ ಸುತ್ತುತ್ತಿರುತ್ತದೆ ಎಂಬ ಅನಿಸಿಕೆ ಇರುವುದು. ಮರಣದಲ್ಲಿಯೂ ಮಂಗಳವನ್ನು ಬಯಸುವುದು ಮಾನವನ ಎತ್ತರವಾದ ವಿಚಾರವಾಗಿದೆ.

ಆರತಿ ಹಾಡುಗಳಲ್ಲಿಯೂ ಎರಡು ವಿಧ. ಒಂದು ಮೊದಲು ಮಾಡುವ ಆರತಿ. ಎರಡು ದೀಪಗಳ ಆರತಿ. ಆ ನಂತರ ಮಹಾಮಂಗಳಾರತಿ, ಕಾಕಡಾರುತಿ, ಅಥವಾ ಕರ್ಪೂರದಾರುತಿ. ಕೆಲವು ಕಡೆ ತುಪ್ಪದ ಆರತಿಯೂ ಮಾಡುವರು. ಮಹಾಮಂಗಳಾರತಿ ಆದ ನಂತರ ಅಕ್ಷತೆ ಹಾಕಿದರೆ ಅಲ್ಲಿಗೆ ಪೂಜಾ ವಿಧಿ ಅಥವಾ ಕಾರ್ಯಕ್ರಮ ಮುಕ್ತಾಯವಾಯಿತೆಂದೇ ಹೇಳಲಾಗುವುದು. ಆರತಿಯಲ್ಲಿ ಒಂದು ಬತ್ತಿ ಹಾಕದೇ ಜೋಡಿ ಬತ್ತಿ ಹಾಕುವರು. ಅದರಲ್ಲಿ ಕೆಲವರು ಎಣ್ಣೆ ಹಾಕುವರು. ಕೆಲವರು ಹರಕೆ ಮಾಡಿದರೆ ತುಪ್ಪಹಾಕಿ ದೀಪ ಬೆಳಗುವರು. ಎಣ್ಣೆ ಆರತಿ, ತುಪ್ಪದಾರತಿ, ಕರ್ಪೂರಾರತಿ ಎಂದು ವೈವಿಧ್ಯತೆಯನ್ನು ಕಾಣುತ್ತೇವೆ. ಆರತಿ ಪದಗಳು ಹೆಚ್ಚಾಗಿ ದೇವರ ಸ್ತುತಿ ಹಾಗೂ ಶರಣರನ್ನು ಕುರಿತಾದವುಗಳೇ ಆಗಿರುತ್ತವೆ. ಅದು ಈ ರೀತಿಯಾಗಿ:

ಸೀತಮ್ಮ ಶ್ರೀರಾಮ ಕುಂತು ಮಾತನಾಡುವಾಗ
ಆವ ಧೂತಾದ ಪಕ್ಷಿ ಸುಳದಾಡಿ ಹೋಯಿತೇ
ಬೆಳಗುವೆನಾರೂತಿ.
ಆವ್ಯಾನೇ ಧೂತಾದ ಪಕ್ಷಿ ಸುಳುದಾಡಿ ಹೋದಮ್ಯಾಲ
ಆವ ನಮುನಾದ ಕುಬಸಾ ತರಬೇಕ್ರಿ ನಮ್ಮಗ
ಬೆಳಗುವೆನಾರತಿ.

ಆಕುಬಸಾ ತರತೆ ನಾನು. ಮಂಡಲ್‌ದೊಳಗಿರೆ ನೀನು
ಮಂಡಲ್‌ಧಾಟಿ ಬರುಬ್ಯಾಡಾ ಶಿಕಾರಿಗಿ ಹೊಯ್ತೆ ನಾನು
ಬೆಳಗುವೆನಾರತಿ.

ಶಿಕಾರಿಗಿ ಹೋದ ಮ್ಯಾಲ ರಾವಣ್ ಬಂದು ಮಂಡಲ್ ಧಾಟ
ಸೀತಮ್ಮಗೊಯ್ದಾರಾ, ಲಂಕಾದೊಳಗಿಟ್ಟಾರಾ
ಬೆಳಗುವೆನಾರತಿ

ಲಂಕಾದೊಳಗಿಟ್ಟಾರಾ । ರಾಮ್ ಬಂದು ಹುಡುಕ್ತಾರಾ
ಮಾರುತಿ ಇಳದಾರ । ಸೀತಮ್ಮನ ತಂದಾರ
ಬೆಳಗುವೆ ನಾರೂತಿ.

ಸೀತಮ್ಮನ ತಂದಾರ । ಛತ್ತಿಸ್ ಕೋಟಿ ದೇವರುನ
ರಾಮ್‌ರಾಜ ಛತ್ತರಗಣನ ಪುನ: ಮಾಡುತಾರ ಲಗ್ನ
ಬೆಳಗುವೆನಾರತಿ [೨೦]

ಈ ಹಾಡಿನಲ್ಲಿ ಸಂಪೂರ್ಣ ರಾಮಾಯಣದ ಕಥೆಯೇ ಅಡಗಿದೆ. ರಾವಣನು ಬಂಗಾರದ ಜಿಂಕೆಯಾಗಿ ಸೀತೆಯ ಕಣ್ಣಿಗೆ ಬೀಳುವಂತೆ ಸುಳಿದಾಡುವುದು. ಸೀತೆ ಅದರ ಮೇಲೆ ಮೋಹಿತಳಾಗುವುದು. ಪತಿಯೆದುರು ಅದರ ಬೇಡಿಕೆ ಇಡುವದು. ಆ ಜಿಂಕೆಯ ಚರ್ಮದಿಂದ ಕುಬ್ಬಸ ಹೊಲಿಸಿಕೊಳ್ಳುವ ಆಸೆ ವ್ಯಕ್ತಪಡಿಸಿದಾಗ, ಅವಳನ್ನು ನಿರಾಶೆಗೊಳಿಸದೆ ರಾಮ, ಲಕ್ಷ್ಮಣರು ಮಾಯಾವಿ ಜಿಂಕೆಯನ್ನು ಹಿಂಬಾಲಿಸಿ ಬಹುದೂರ ನಡೆದಾಗ, ಮಾರುವೇಷದಲ್ಲಿದ್ದ ರಾವಣ ಬಂದು ಸೀತೆಯನ್ನು ಅಪಹರಿಸುವನು. ಕೊನೆಗೆ ಹನುಮಂತನ ನೆರವಿನಿಂದ ಸಮುದ್ರದಾಚೆಯಿರುವ ಸೀತೆಯನ್ನು ತರಲು ಲಂಕೆಗೆ ಹೋಗಿ, ಘನಘೋರ ಯುದ್ಧಮಾಡಿ, ಸೀತೆಯನ್ನು ಬಂಧ ಮುಕ್ತಳನ್ನಾಗಿ ಮಾಡಿ ಅಗ್ನಿ ಪ್ರವೇಶ ಮಾಡಿಸಿ, ಪಾವಿತ್ರ್ಯತೆಯನ್ನು ಪರೀಕ್ಷಿಸುವನು. ಕೊನೆಗೆ ಸೀತೆಯನ್ನು ಅಯೋಧ್ಯ ನಗರಕ್ಕೆ ತಂದು ಮೂವತ್ತಾರು ಕೋಟಿ ದೇವತೆಗಳೆಲ್ಲ ಸೇರಿ ರಾಮ–ಸೀತೆಯರ ಲಗ್ನ ಮತ್ತೆ ನೆರವೇರಿಸಿದರು. ಈ ರೀತಿ ಜನಪದರು ಕಡಿಮೆ ಪದಗಳಲ್ಲಿ ಹೆಚ್ಚಿನ ಅರ್ಥ ಬರುವಂತೆ ಹಾಡುಗಳನ್ನು ರಚಿಸಿದ್ದನ್ನು ಕಂಡಾಗ, ಜನಪದ ಕವಿಯತ್ರಿಯರೂ ಇಂದಿನ ಅಕ್ಷರಸ್ಥ ಪಂಡಿತರಿಗಿಂತಲೂ ಶ್ರೇಷ್ಠ ಸ್ಥಾನದಲ್ಲಿದ್ದರು ಎಂದೆನಿಸಿದರೆ ತಪ್ಪಾಗಲಾರದು. ಅದೇ ರೀತಿ ಶ್ರೀ ಕೃಷ್ಣನನ್ನು ಕುರಿತು ಆರತಿ ಹಾಡು ಅಷ್ಟೇ ಅರ್ಥಗರ್ಭಿತವಾದುದಾಗಿದೆ.

ಆರತಿ ಮಾಡೋಣು ಬಾ ಮೇಗವರಣ ಕೃಷ್ಣಗೆ
ಮೇಗೌರವರಣ ಕೃಷ್ಣಗೆ ಗರುಡ ಹನುಮಂತಗೆ ॥ ಪಲ್ಲವಿ॥
ಹೂವ್ವವನ್ನು ಕಡಿಯೂತ ಮಾಲೆಯು ಮಾಡೂತ
ಮಾಲೆಯು ಮಾಡುತ ಕೃಷ್ಣಗೆ ನಮಿಸುತ ॥ ಆರತಿ ॥
ಆರತಿ ಮಾಡೋಣು ಬಾ ಮೇಗವರವಣ ಕೃಷ್ಣಗೆ [೨೧]

ಇಲ್ಲಿ ಕೃಷ್ಣನ ಬಾಲಲೀಲೆಯನ್ನು ಕುರಿತು ವರ್ಣಿಸುತ್ತ, ಅವನ ತುಂಟತನವನ್ನು ಬಣ್ಣಿಸುತ್ತ, ಬೆಣ್ಣೆಯನ್ನು ಕದಿಯುವ ನವನೀತ ಚೋರನಿಗೆ, ಗೋವನ್ನು ಕಾಯುವ ಗೊಲ್ಲನಿಗೆ, ಗೋಪಿಯರನ್ನು ಕಾಡುವ ಗೌರವ ವರ್ಣದವನಾದ ಕೃಷ್ಣನಿಗೆ ಆರತಿ ಮಾಡುವಾಗ ನಾರಿಯರು ಈ ರೀತಿ ಹಾಡಿರುವರು. ಮೂರು ಲೋಕಗಳನ್ನು ರಕ್ಷಿಸುವವನೆಂದು (ಶ್ರೀ ಕೃಷ್ಣ) ಅವನನ್ನು ಎಲ್ಲರೂ ಭಕ್ತಿ ಭಾವದಿಂದ ಆರಾಧಿಸುತ್ತಾರೆ. ಹಾಗೆಯೇ

ಆರುತಿ ಬೆಳಗೀರಿ ಹೋಗುತ್ತ ಹರದೇರು

ಮುಕ್ಕಣ್ಣ ಶಿವನ ಜಗನಾಥಗೆ

ಗಂಗಿಗಿ ಗೌರಿಗಿ ಸನ್ಮುಕ ಸ್ವಾಮಿಗಿ ರಾಜಾ
ಗೋಪಾಲಾ ರೂಪೀಂದ್ರಗೆ

ಜಯಮಂಗಲವನಿತ್ಯ ಶುಭಮಂಗಲ

ಜಯಮಂಗಲವನಿತ್ಯ ಶುಭಮಂಗಲ [೨೨]

ನಿತ್ಯವೂ ಜಯ, ಶುಭ ಕೋರಿ ನಮ್ಮ ಇಷ್ಟ ದೇವತೆಗಳನ್ನು ನಾವು ಆರುತಿ ಮಾಡುತ್ತೇವೆ. ವಿಶೇಷವಾಗಿ ಜನಪದರು ಜಗತ್ತನ್ನು ರಕ್ಷಿಸುವ ಜಗನ್ನಾಥ, ಭಾಲ್ಕಿಯ ಭಾಲ್ಕೇಶ್ವರ, ಮೂರು ನೇತ್ರವುಳ್ಳವನಾದ ಮುಕ್ಕಣ್ಣ ಅಂದರೆ ಶಿವನ ಪತ್ನಿಯರಾದ ಗಂಗಿ, ಗೌರಿಗೂ ಸದಾ ಮಲ್ಲಿಗೆ ಬನದಲ್ಲಿ ಕುಳಿತು ಧ್ಯಾನ ಮಾಡುತ್ತಿರುವ ಮಲ್ಲಯ್ಯನಿಗೂ, ಬೆಳ್ಳಿ ಬಾಗಿಲು ಹೊಂದಿದ ಬ್ರಹಾಣಪೂರದ ಸಿದ್ದಯ್ಯನಿಗೂ, ಎಡದಲ್ಲಿ ಕಲ್ಲೋಳು, ಬಲದಲ್ಲಿ ಗಾಯ್ಮುಖ, ಬಂಗಾರ ಬಾಗಿಲುಳ್ಳ ಭವಾನಿ ಅಂದರೆ ಶಕ್ತಿದೇವತೆಗೂ, ಶರಣರ ನಾಡಾದ ಬಸವಕಲ್ಯಾಣದ ಬಸವಣ್ಣನಿಗೂ, ನಿತ್ಯವೂ ಪೂಜೆಯಲ್ಲಿ ನಿರತಳಾಗಿರುವ ಪತ್ನಿ ನೀಲಮ್ಮಳಿಗೂ, ಬೀದರ್ ಜಿಲ್ಲೆಯ ಔರಾದ ತಾಲೂಕಿನ ಅಮರೇಶ್ವರನಿಗೂ, ರಾತ್ರಿಯೆಲ್ಲ ಪಾರ್ವತಿಯೊಂದಿಗೆ ಪಗಡೆಯಾಟದಲ್ಲಿ ಮುಳುಗಿರುವಂಥ ಪರಮಾತ್ಮರೆಲ್ಲರಿಗೂ ಆರತಿ ಬೆಳಗುವೆ ಎಂದು ಭಕ್ತಿಪೂರ್ಣವಾದ ಅಪೇಕ್ಷೆ ವ್ಯಕ್ತವಾಗಿದೆ. ಈ ಪದದಲ್ಲಿ ಜನಪದ ಮಹಿಳೆಯರು ದೇವತೆಗಳನ್ನು ಕುರಿತು ಮಾಡಿರುವ ವೈಭವದ ವರ್ಣನೆಯನ್ನು ಕಂಡಾಗ ಆಶ್ಚರ್ಯದ ಜೊತೆಗೆ ಆನಂದವುಂಟಾಗುವುದು. ಅಕ್ಷರಸ್ಥರಿಗೂ ಇಂಥಹ ಅರ್ಥಪೂರ್ಣ ಪದಜೋಡಣೆ ಮಾಡುವುದು ಅದೂ ಹಾಡಿನಲ್ಲಿ ಕಷ್ಟವೇ ಸರಿ. ಆದರೆ ಅವರಲ್ಲಿದ್ದ ಪಾಂಡಿತ್ಯವನ್ನು ಕಂಡಾಗ ಎಂಥಹ ಶ್ರೇಷ್ಠ ಪಂಡಿತರಿಗೂ ಸೋಜಿಗವಾಗದೇ ಇರದು.

ಇಷ್ಟೂರ ತಳದಲ್ಲಿ ಹುಟ್ಟಿ ಜಂಗಮರಲ್ಲಿ

ಕಷ್ಟ ತಗೊಂಡೆ ಬಾಲಿ ಎಷ್ಟಂತ ನೆನಿಯಲಿ

ಶಂಭೋ ಶಂಕರನೇ ss

ಮೂರೇಳಿ ಜಳಕಕ ಕೆರಿ ನೀರು ತರುಲಾರ

ರಂಗ ಮೂರುತಿ ನೀವು ಲಿಂಗ ಸ್ವರೂಪ ಮಾಡಿ

ಶಂಭೋ ಶಂಕರನೇ ss

ಬಂದಾರೋ ವಿಸೋನಾತ ತಂದಾರೋ ಮನ ಸೋತ

ಮನಸಿನೊಳಗಿನ ಮಾತ ತಾಯಿ ತಂದೀನೆ ಮರೆತ

ಶಂಭೋ ಶಂಕರನೇ ss

ಇಷ್ಟೂ ಜಂಗಮರ ಕೂಡಿ ಮನವ ತೊಳದಾರೋ ಸೋಸಿ

ಮನವ ತೊಳದಾರೋ ಸೋಸಿ । ಎನಗ ಇಟ್ಟಿಲ ಆಸಿ

ಶಂಭೋ ಶಂಕರನೇ ss

ಅಮಾಸಿ ದಿನ ಠೀಕ ಇರಬೇಕ್ರಿ ನಮ್ ತಳದಲ್ಲಿ

ಸೋಮಾರ ದಿನದಲ್ಲಿ ಊದಿನ ಧುಂಥ ಕಾರಿ

ಶಂಭೋ ಶಂಕರನೇ ss

ಇಷ್ಟೂರ ತಳದಲ್ಲಿ ಹುಟ್ಟಿ ಜಂಗಮರಲ್ಲಿ

ಕಷ್ಟ ತಗೊಂಡೇ ಬಾಲಿ ಎಷ್ಟಂತ ನೆನೆಯಲಿ

ಶಂಭೋ ಶಂಕರನೇ ss [೨೩]

ಕೆಲವು ಅವತಾರಿ ಪುರುಷರು ಭೂಮಿಯ ಮೇಲೆ ಅವತರಿಸಿದರೂ (ಜನ್ಮತಾಳಿದರೂ) ಅವರು ಸಹಜ ಜೀವಿಗಳಾಗಿ ಬಾಳದೇ, ಸರ್ವಸ್ವವನ್ನೂ ತ್ಯಾಗಮಾಡಿ, ದೇವಮಾನವರಾಗಿ ಮೆರೆಯುತ್ತಾರೆ. ಈ ಮಾರ್ಗ ನೋಡಲು ಸಹಜ ಅನಿಸಿದರೂ ತುಂಬಾ ಕ್ಲಿಷ್ಟಕರವಾದುದು. ಮನಸ್ಸು ಅಧೀನದಲ್ಲಿರಿಸಿಕೊಳ್ಳಲು ಸಾಮಾನ್ಯರಿಂದ ಸಾಧ್ಯವಿಲ್ಲ. ಅಂಥಹ ದೈವೀಗುಣ ಅವರಲ್ಲಿ ಸ್ವಇಚ್ಛೆಯಿಂದ ಉದ್ಭವವಾಗಿರುವಂಥಹದು. ಅವರು ಕಾಣುವ ಪ್ರತಿಯೊಂದು ವಸ್ತುವಿನಲ್ಲಿ ಪರಮಾತ್ಮನ ಸ್ವರೂಪವನ್ನೇ, ಅವರ ಭಕ್ತಿ ಮಾರ್ಗದಲ್ಲಿ ರಕ್ತ ಸಂಬಂಧಗಳೆಲ್ಲ, ಪ್ರಪಂಚದ ಮಾಯೆಗಳೆಲ್ಲ ಗೌಣವಾಗಿ ಕಂಡುಬರುವುದು. ಸದಾ ಅವರ ಮನ ಮಿಡಿಯುವುದು ದೇವರು, ಧೂಪ, ದೀಪಗಳಿಗಾಗಿಯೇ ಹೊರತು ಪ್ರಪಂಚದ ಕ್ಷಣಿಕ ವೈಭವಕ್ಕಲ್ಲ.

ಇದೇ ರೀತಿ ಭಾಲ್ಕಿ ತಾಲೂಕಿನ ಚಳಕಾಪೂರದಲ್ಲಿ ಹುಟ್ಟಿ ಹುಮನಾಬಾದ ತಾಲೂಕಿನ ಹುಡುಗಿ ಗ್ರಾಮದ ಮಠಕ್ಕೆ ಅಧಿಕಾರಿಯಾದವರ ವೃತ್ತಾಂತ ಈ ರೀತಿಯಾಗಿರುವುದು. ಇಲ್ಲಿಯ ಕರಿಬಸಪ್ಪ ಗುರುಮೂರ್ತಿಯಲ್ಲಿಯೂ ಜನರು ಭಕ್ತಿ ಭಾವದಿಂದ ಪೂಜಿಸಿ, ವರ ಪಡೆಯುತ್ತಾರೆ.

ಜಯ ಜಯ ಮಂಗಳಾರ್ತಿ
ಕರಬಸಪ್ಪ ಗುರು ಮೂರ್ತಿ
ಮಾಡುವೆ ನಿಮ್ ಪಾದಕ್ ಸುರುತಿ
ಕೊಡು ಎನ್ನಗ ಮತಿ
ಜಯ ಜಯ ಮಂಗಳಾರ್ತಿ ೨॥

ಬೀದರ್ ಜಿಲ್ಲೆ ಶರಣರ ನಾಡು. ಇಲ್ಲಿ ಆಗಿ ಹೋದ ಎಲ್ಲ ಶರಣರೂ ಈ ನಾಡನ್ನು ಕಲ್ಯಾಣ ಮಾಡಿದ್ದಾರೆ. ಮತಾಂಧತೆಯಿಂದ ನರಳುತ್ತಿದ್ದ ಈ ಕಲ್ಯಾಣ ಪ್ರಾಂತದಲ್ಲಿ ಬಸವಾದಿ ಶರಣರು ಬಂದು ಕಲ್ಯಾಣ ಕ್ರಾಂತಿಯನ್ನೇ ಮಾಡಿದರು. ಮಾನವತಾ ವಾದವನ್ನು ಎತ್ತಿ ಹಿಡಿದರು. ಜಾತಿಯತೆಯನ್ನು ಹೋಗಲಾಡಿಸಿ ಮಾನವರೆಲ್ಲ ಒಂದು ಎಂದು ಸಾರಿದರು. ಅದರ ಕುರುಹಾಗಿ ಹರಳಯ್ಯ, ಮಧುವರಸರ ಮಕ್ಕಳ ವಿವಾಹ ಮಾಡಿಸಿದರು. ಇದೇ ಕಲ್ಯಾಣ ಕ್ರಾಂತಿಗೆ ನಾಂದಿಯಾಯಿತು. ಶರಣರನ್ನು ಗಡಿಪಾರು ಮಾಡಲಾಯಿತು. ರಾಜಕೀಯ, ಕೋಮುವಾದಿಗಳ ಕುಟಿಲತನದಿಂದ ಈ ಶರಣರು ಅನೇಕ ಕಷ್ಟ ನಷ್ಟಗಳನ್ನು ಎದುರಿಸಬೇಕಾಯಿತು. ಆದರೂ ಅಂಥ ಶರಣರಿಗೆ ಜಯವಾಗಲೆಂದು ಬಸವ ಭಕ್ತರು ಕೊಂಡಾಡಿದರು.

ಜಯಕಲ್ಯಾಣಕ್ಕೆ ಜಯಕಲ್ಯಾಣಕ್ಕೆ ಜಯಕಲ್ಯಾಣಕೆ ಜಯಹೋ ऽऽऽ
ಜಯಗೀತೆ ಹಾಡಿ ಜನರೆಲ್ಲ ಕೂಡಿ ಶರಣರ ಹಾಡು ಪಾಡಿऽऽ ಶರಣರ
ಹಾಡು ಪಾಡಿ ऽऽ

ಭಕ್ತಿಯ ಭಂಡಾರಿ ಬಸವಣ್ಣ ನಿದ್ದದ್ದು
ಕನ್ನಡದ ಹೂಗೈವ ನಾಡು । ಕನ್ನಡದ ಹೂ ಗೈವ ನಾಡು.
ವೈರಾಗ್ಯ ನಿಧಿ ಅಕ್ಕ ಅಲ್ಲಮ ಪ್ರಭುದೇವ
ಮೆರೆದಂಥ ಕಲ್ಯಾಣ ನಾಡು । ಮೆರೆದಂಥ
ಕಲ್ಯಾಣ ನಾಡು ॥ ೨ ॥ ಜಯ ಕಲ್ಯಾಣಕೆ ॥

. . . .

ಜಂಗಮ ಗುರು ಲಿಂಗ ಸಂಗಮ ನಂದದಿ
ಪಿಂಗಿತ ಜಂಗಮ ಲಿಂಗ ಮಂಗಲನೇ

ಜಯಾ ಜಯಾ ಗುರು ಮಂಗಲಂ
ಯೋಗಿ ಕುಮಾರನೇ ಮಾರ ಸಂಹರನೆ
ಜಯಾ ಜಯಾ ಗುರು ಮಂಗಲಂ [೨೫]

ಯೋಗಿ ಮಗನಾದವನು ಕ್ರೂರ ರಾಕ್ಷಸನನ್ನು ಕೊಂದು ಹಾಕಿದವನೇ, ಯೋಗವರಿತ ಮಾರ್ಗಗಳು, ಆಗಮ ಶಾಸ್ತ್ರಗಳಾಗಿ ಕುಡಿದವನೇ, ಉತ್ತಮ ಶ್ರೇಷ್ಠವಾದ ಅರಗಿಸಿ ಉಂಡ ಪಂಡಿತನೇ, ಹುಟ್ಟು ಸಾವಿಲ್ಲದೆ ಲಿಂಗದಲ್ಲಿ ಲೀನವಾದನೇ, ಮಾನವ ಜನ್ಮದಾಟಿ ಜಂಗಮವಾಗಿ ಮಂಗಲವಾದವನೇ ನಿನಗೆ ಜಯವಾಗಲಿ ಎಂದು ಪ್ರಸ್ತುತ ಮಂಗಳಗೀತೆಯ ಮೂಲಕ ಪ್ರಾರ್ಥಿಸಲಾಗಿದೆ. ಇಲ್ಲಿ ವೈದಿಕ ಸಂಸ್ಕೃತಿಯನ್ನು ತಮ್ಮದಾಗಿ ಸ್ವೀಕರಿಸಿಕೊಂಡು ವೇದಶಾಸ್ತ್ರ ಪುರಾಣಗಳನ್ನು ಒಳಗೊಂಡದ್ದು ಕಂಡುಬರುತ್ತದೆ.

:

ಕರ್ಪೂರದಾರತಿ ಎತ್ತಿಡಿದು ಬೆಳಗಿರಿ
ಗಜ ಮುಖ ಗಣಪಗೆ ರುದ್ರಗದ್ದುಗೆ

ಹಚ್ಚುವುದೇ ಈಬತ್ತಿ । ಬೆಳಗುವುದೇ ಊದಬತ್ತಿ
ತೋರುವುದೇ ನೈವೇದ್ಯ ರುದ್ರಗದ್ದುಗೆ
ಕರ್ಪೂರದಾರತಿ ಎತ್ತಿಡಿದು ಬೆಳಗಿರಿ
ಗಜಮುಖ ಗಣಪಗೆ ರುದ್ರಗದ್ದುಗೆ. [೨೬]

ಪವಿತ್ರವಾದ ಭಸ್ಮ ಹಣಿಗೆ, ದೇವರ ಎದುರಲ್ಲಿ ಊದಬತ್ತಿಯು, ಶುದ್ಧಮನಸ್ಸಿನ ನೈವೇದ್ಯ ಸದಾ ರುದ್ರನಿಗೆ ಪ್ರೀಯವಾದುದು. ತೊಡೆಯ ಮೇಲೆ ಪಾರ್ವತಿಯು, ಜಡೆಯಲ್ಲಿ ಗಂಗಾವತಿಯು, ಕೊರಳಲ್ಲಿ ಸರ್ಪವು ಅಲಂಕಾರವಾಗಿ ಶೋಭಿಸುವದು. ಯಾತ್ರೆಗಳಲ್ಲಿ ಶ್ರೇಷ್ಠ ಯಾತ್ರೆ ಕಾಶಿಯಾತ್ರೆ, ನೋಡಲು ಬೆಟ್ಟ, ಗುಡ್ಡಗಳಿಂದ ಸುತ್ತುವರಿಯಲ್ಪಟ್ಟ ರಮಣೀಯ ಕ್ಷೇತ್ರವೆಂದರೆ ಹಂಪಿಕ್ಷೇತ್ರ, ಆರಾಧಿಸಲು ದೇವರ ದೇವನಾದ ವಿಶ್ವದ ಒಡೆಯನೆನಿಸಿದ ಜಗದೀಶನು ಜನಪದರ ದೃಷ್ಟಿಯಲ್ಲಿ ಶ್ರೇಷ್ಠರಾದವರು. ತೊಡೆಯಲ್ಲಿ, ಜಡೆಯಲ್ಲಿ ನಾರಿಯರನ್ನು ಧರಿಸಿದ ಶಿವ ಅರ್ಧನಾರೀಶ್ವರನೆನಿಸಿದ. ಇದು ಜನಪದರೂ ಹೆಣ್ಣು ಮಕ್ಕಳಿಗೆ ಸಮಾನ ಸ್ಥಾನಮಾನವನ್ನು ಕಲ್ಪಿಸಿ ಕೊಡುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ.

ಆರತಿ ಬೆಳಗುವೇನೋ ಕರ್ಪೂರದಾರತಿ ಬೆಳಗುವೇನು
ಧೀರ ಗುಣದ ಗಂಭೀರ ಗುರುವಿಗೊಂದಾರತಿ ಬೆಳಗುವೇನು
ಆರಗುಣವ ಅಳಿದು, ಮೇಲೆ ಮೂರ ಗುಣವ ತಿಳಿದು
ಜಾರಿ ಗುಣವ ಜರಿದು ಕರ್ಪೂರದಾರತಿ ಬೆಳಗುವೇನು

ಅಷ್ಟ ಮದಗಳಿದು ದುಷ್ಟ ದುರ್ಬುದ್ಧಿಕಳೆದು
ನಿಷ್ಠೆಯಿಂದ ಶ್ರೇಷ್ಠ ಗುರುವಿಗೊಂದಾರತಿ ಬೆಳಗುವೇನು
ಕಲ್ಯಾಣ ಪ್ರಣವ ಭಾಲ್ಕಿಯ ಭಾಲ್ಕೇಶ್ವರಗೊಂದಾರತಿ ಬೆಳಗುವೇನು
ಮೂಲ ಪ್ರಣವ ಭಾಲ್ಕಿಯ ಭಾಲ್ಕೇಶ್ವರಗೊಂದಾರತಿ ಬೆಳಗುವೇನು

ಧೀರ, ಗಂಭೀರನಾದ, ಕಾಮ, ಕ್ರೋಧ, ಮದ, ಮತ್ಸರ, ಮೋಹ, ಎಲ್ಲಾ ದುರ್ಗುಣಗಳು ಬಿಟ್ಟು ಉತ್ತಮ ಗುಣಗಳನ್ನು ಹೊಂದಿದವನಾದವನಿಗೆ, ಜಾರಿ ಗುಣಗಳನ್ನು ಜರಿದವನಿಗೆ ಅಷ್ಟ ಮದಗಳನ್ನು ಬಿಟ್ಟು, ದುರ್ಬುದ್ಧಿಯನ್ನು ಬಿಟ್ಟವನಿಗೆ ನಾನು ಒಳ್ಳೆಯ ನಿಷ್ಠೆಯಿಂದ ಆರತಿ ಬೆಳಗುವೇನು ಎಂದು ನುಡಿಯಲಾಗಿದೆ. ಇಲ್ಲಿ ಎಲ್ಲ ದುರ್ಗುಣಗಳನ್ನು ಮೆಚ್ಚಿ ಶ್ರೇಷ್ಠತೆಗೆ ಮೆರೆದವನು ಆ ಪರಶಿವನು ಭಾಲ್ಕೇಶ್ವರನ ರೂಪದಲ್ಲಿದ್ದವನಿಗೆ ಕರ್ಪೂರದ ಆರತಿ ಬೆಳಗುವೆ ಎಂಬುದಾಗಿ ತಮ್ಮ ಪ್ರಾದೇಶಿಕತೆಯ ನೆಲೆಯಲ್ಲಿ ಪದಕಟ್ಟಿ ಹಾಡಿರುವುದನ್ನು ಇಲ್ಲಿನ ಮಹಿಳಾ ಜಾನಪದ ಹಾಡುಗಳಲ್ಲಿ ಕಂಡುಬರುತ್ತದೆ.

ಜ್ಞಾನಪೂರ್ಣಂ ಜಾಗಂ ಜ್ಯೋತಿ
ನಿರ್ಮಲವಾದ ಮನವೇ ಕರ್ಪೂರದಾರತಿ

ಅನುದಿನ ಗುರುವಿನ ಅನುರಾಗ ಭಕ್ತೀಲಿ
ಜನನ ಮರಣ ರಹಿತ ಜಂಗಮಗೆ ಬೆಳಗಿರಿ
ಜ್ಞಾನ ಪೂರ್ಣಂ ಜಾಗಂ ಜ್ಯೋತಿ
ನಿರ್ಮಲವಾದ ಮನವೇ ಕರ್ಪೂರದಾರತಿ. [೨೮]

ಜ್ಞಾನವೇ ಜ್ಯೋತಿ, ನಿರ್ಮಲವಾದ ಮನಸ್ಸೆ ಕರ್ಪೂರ, ಅಂಥಹ ನಿರ್ಮಲವಾದ ಮನಸ್ಸಿನಿಂದ, ಪ್ರತಿದಿನವೂ ಜನನ ಮರಣ ರಹಿತನಾದ ಆ ಗುರುವಿಗೆ ಪ್ರೀತಿ ಹಾಗೂ ಅನನ್ಯವಾದ ಭಕ್ತಿಯಿಂದ ಆರತಿ ಮಾಡಬಯಸುತ್ತಾರೆ. ಮನುಷ್ಯ ಜನ್ಮ ದೊರಕುವುದು ಅತ್ಯಂತ ದುರ್ಲಭವಾದದು. ಆದರೂ ನಾವು ಮಾಡಿದ ಪುಣ್ಯದ ಫಲವಾಗಿ ಈ ಮಾನವ ಜನ್ಮ ಸಿಕ್ಕಿದೆ. ಅದಕ್ಕಾಗಿ ಅಷ್ಟಾವರಣ ಆ ಶಿವನಿಗೆ (ಗುರು) ಚಿರಋಣಿಯಾಗಿದ್ದು, ಸದಾ ಅವನ ನಾಮ ಸ್ಮರಣೆಗಾಗಿ ನಮ್ಮ ಮಗುವಿಗೆ 'ಶಿವ' ಎಂದು ಹೆಸರನ್ನಿಟ್ಟು ಸ್ಮರಿಸುತ್ತಿರಬೇಕು. 'ನಾ' ಎಂಬ ಅಹಂ ನರಕಕ್ಕೆ ದಾರಿ ಮಾಡಿಕೊಡುತ್ತದೆ. ಅದಕ್ಕಾಗಿ 'ನಾ'
, ದೇವಾ ನೀನೇ ಶ್ರೇಷ್ಠನು, ನೀನೇ
ನಮಗೆ ಗತಿ, ಮತಿ ಎಂದು ವಿಧೇಯತೆಯ ಭಾವನೆಯಿಂದ ಲಿಂಗದ ಸ್ವರೂಪದಲ್ಲಿರುವ ಆ ಪರಮಾತ್ಮನಿಗೆ ನಿರ್ಮಲಮನವೆಂಬ ಕರ್ಪೂರದಾರತಿ ಬೆಳಗುವೆ ಎಂದು ಜನಪದರು ಮನಶುದ್ಧೀಯ ಕುರಿತು ನುಡಿದಿದ್ದಾರೆ.

'ನಾ' ಎಂಬ ಅಹಂಕಾರವೇ ಎಲ್ಲ ದುರ್ಘಟನೆಗಳಿಗೆ ಕಾರಣ. ಇದು ದು:ಖಕ್ಕೆ ಮೂಲ. ಅದಕ್ಕಾಗಿಯೇ ಹನ್ನೆರಡನೇ ಶತಮಾನದಲ್ಲಿಯೇ ಶರಣರು "ಎನಗಿಂತ ಕಿರಿಯನಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂದಿರುವರು. ಎಲ್ಲರೂ ಈ ಮಾತನ್ನು ಮನನ ಮಾಡಿಕೊಂಡು ನಡೆದುದ್ದೇ ಆದಲ್ಲಿ ಜಗತ್ತಿನಲ್ಲಿ ಸುಖ ಶಾಂತಿ, ನೆಮ್ಮದಿ ನೆಲಸುವುದರಲ್ಲಿ ಸಂಶಯವಿಲ್ಲ. ಆದರೆ ಶರಣರ ವಚನ ನುಡಿದ ಮಾನವರು ವ್ಯತಿರಿಕ್ತವಾಗಿ ನಡೆದುಕೊಂಡುದ್ದರ ಫಲವಾಗಿಯೇ ಇಂದು ಸಮಾಜದಲ್ಲಿ ಸುಖ, ಶಾಂತಿ, ನೆಮ್ಮದಿ, ಆರೋಗ್ಯಕ್ಕೆ ಕೊರತೆಯಾಗಿದೆ. ಅಜ್ಞಾನವೆಂಬ ಕತ್ತಲೆ ಹೊಡೆದೋಡಿಸಿ ಜ್ಞಾನ ಎಂಬ ಬೆಳಕು ಮೂಡಿಸಿದಾಗ ಮಾತ್ರ ಹೀನವಾದ, ದೈನ್ಯತೆಯಿಂದ ಕೂಡಿದ ಬಾಳಿನಿಂದ ಮೇಲೆ ಬರಬಹುದು, ಎಂದು ಸಾಧು, ಸಂತರು, ಮಹಾ ಪುರುಷರುಗಳು, ಜ್ಞಾನಿಗಳು, ಪ್ರವಾದಿಗಳು ಹೇಳುತ್ತಲೇ ಬಂದಿರುವರು.

ವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡಿದಾಗ ಕರ್ಪೂರದ ಆರತಿ ಮಾಡುವದರಿಂದ ಧೂಪ ಹಾಕುವುದರಿಂದ ಕಲುಷಿತ ಹಾಗೂ ದುರ್ಗಂಧ ಭರಿತ ವಾತಾವರಣ ಶುದ್ಧವಾಗುವುದು. ಜನಪದರು ಸಾಯಂಕಾಲವಾಗಲಿ, ಬೆಳಗ್ಗೆಯಾಗಲಿ ಪೂಜೆಯಾದ ನಂತರ ಅಥವಾ ದೀಪ ಹಚ್ಚಿದ ನಂತರ

ಕರ್ಪೂರ, ಊದು, ಧೂಪ ಹಾಕಿ ದಟ್ಟವಾದ ಹೊಗೆ ಎಬ್ಬಿಸುವರು. ಜನಪದರ ದೃಷ್ಟಿಯಲ್ಲಿ ಮನೆಯಲ್ಲಿಯ ದುಷ್ಟಶಕ್ತಿ ಓಡಿಹೋಗುವುದೆಂದು ಆದರೆ ವೈಜ್ಞಾನಿಕವಾಗಿ ನೋಡಿದರೆ ಕಲುಷಿತ ವಾತಾವರಣ ತಿಳಿಯಾಗಿ ಕ್ರಿಮಿಕೀಟಗಳು ನಾಶವಾಗುತ್ತವೆ. ಉದಾ: ಆಸ್ಪತ್ರೆಗಳಲ್ಲಿ ಮುಂಜಾನೆ ಹಾಗೂ ಸಾಯಂಕಾಲ ಬುಟ್ಟಿಯಲ್ಲಿ ಬೆಂಕಿಹಾಕಿ ಊದುಬತ್ತಿ ಧೂಪದ ಹೊಗೆ ಆಸ್ಪತ್ರೆಯ ತುಂಬೆಲ್ಲ ತಿರುಗಿಸುವರು.

ಕರ್ಪೂರ ಉರಿಸುವುದರಿಂದ ವಾತಾವರಣ ಶುದ್ಧವಾಗುವುದು. ಅದು ಕಾರ್ಬೋಲಿಕ್ ಆ್ಯಸಿಡ್ ನಂತಹ ಗುಣ ಹೊಂದಿರುವುದು. ಕರ್ಪೂರ ಘನ ರೂಪದಲ್ಲಿದ್ದು, ಬೆಂಕಿ ತಾಗಿದಾಗ ಮೊದಲು ದ್ರವವಾಗಿ ಆ ನಂತರ ಅನಿಲವಾಗಿ ವಾತಾವರಣದಲ್ಲಿ ಸೇರಿಕೊಳ್ಳುವದು. ಪಶುವೈದ್ಯರು ದನಗಳಿಗೆ ಏನಾದರೂ ಪೆಟ್ಟಾಗಿ ಕಡಿಮೆಯಾಗದಿದ್ದಲ್ಲಿ ಖೊಬ್ಬರಿ ಎಣ್ಣೆಯಲ್ಲಿ ಕರ್ಪೂರ ಕಲೆಸಿ ಹಚ್ಚಲು ಸಲಹೆ ನೀಡುತ್ತಾರೆ. ಏಕೆಂದರೆ ಇದರಲ್ಲಿ ರೋಗನಿರೋಧಕ ಶಕ್ತಿ ಇರುವುದು. ಅದು ಉಗ್ರವಾದ ವಾಸನೆ ಹೊಂದಿದ್ದು, ಔಷಧಿಗಳಲ್ಲೂ ಬಳಸುತ್ತಾರೆ. ಪ್ಲಾಸ್ಟಿಕ್ ತಯಾರಿಕೆಯಲ್ಲಿ ಇದರ ಅವಶ್ಯಕತೆ ಇರುವುದು. ಹಲ್ಲು ನೋವಿಗೂ ರಾಮಬಾಣವಿದ್ದಂತೆ. ಅದಕ್ಕಾಗಿಯೇ ಜನಪದ ವೈದ್ಯರು ಹಲ್ಲು ನೋವುಕಾಣಿಸಿಕೊಂಡಾಗ ಕರ್ಪೂರವನ್ನು ಹತ್ತಿಯಲ್ಲಿ ಸುತ್ತಿ ಹಲ್ಲಿನ ಮಧ್ಯ ಇಡಲು ಸಲಹೆ ಮಾಡುತ್ತಾರೆ. ಒಟ್ಟಿನಲ್ಲಿ ಆರತಿ, ಕರ್ಪೂರದಾರತಿ, ಕಾಕಡದಾರುತಿ, ತುಪ್ಪದಾರತಿ, ಎಲ್ಲವೂ ವೈಜ್ಞಾನಿಕವಾಗಿಯೂ ಒಂದಿಲ್ಲೊಂದು ರೀತಿಯಲ್ಲಿ ಮಂಗಳಕರವೇ ಎಂದು ಹೇಳಬಹುದು. ಈ ಆರತಿ ಪರಂಪರೆಯು ವೈದಿಕತೆಯ ಸಂಕೇತವಾದರೂ ನಮ್ಮ ಜಾನಪದರು ಇದನ್ನು ತಮ್ಮೊಳಗೆ ಒಂದನ್ನಾಗಿ ಸ್ವೀಕರಿಸಿಕೊಂಡು ಇದರ ಅಡಿಯಲ್ಲಿ ಸಾಹಿತ್ಯ ಪರಂಪರೆಯೊಂದನ್ನು ಉಳಿಸಿ, ಬೆಳೆಸಿಕೊಂಡು ಬಂದಿದ್ದಾರೆ.

ಕೊನೆ ಟಿಪ್ಪಣಿ

೧) ಜಾನಪದ ಹಬ್ಬಗಳು ಮತ್ತು ಉತ್ಸವಗಳು – ಹನುಮಂತರಾವ ಬಿ. ದೊಡ್ಡಮನಿ ಪುಟ: ೩೯, ೪೦

೨) ಧರಿನಾಡ ಬಿಂಬ – ಪ್ರತಿಬಿಂಬ ಡಾ. ಜಗನ್ನಾಥ ಹೆಬ್ಬಾಳೆ (ಸಂ) ಪುಟ: ೪೨

೩) ಮಾಹಿತಿ: ಇಂದಿರಾ ಜ್ಯಾಂತೆ – ಭಾತಂಬ್ರಾ (ತಾ॥ ಭಾಲ್ಕಿ) ವಯಸ್ಸು:೬೨

೪) ಶೀಗಿ ಹಾಡುಗಳು – ಡಾ. ರಾಜೇಂದ್ರ ಯರನಾಳೆ – ಪುಟ: ೧೧–೨

೫) ಮಾಹಿತಿ: ಶ್ರೀದೇವಿ ರಾಜಕುಮಾರ ಪಾಟೀಲ – ವರವಟ್ಟಿ(ಬಿ) ವಯಸ್ಸು: ೫೧

೬) ಮಾಹಿತಿ: ಸತ್ಯವತಿ ಬಾಬುರಾವ ಮಾಶಟ್ಟೇ – ಡೊನಗಾಪೂರ – ವಯಸ್ಸು: ೫೪

೭) ಮಾಹಿತಿ: ಕಲಾವತಿ ಸ್ವಾಮಿ – ಸಾಯಗಾಂವ – ವಯಸ್ಸು: ೫೩

೮) ಲಲಿತಾಬಾಯಿ ರಾಜಕುಮಾರ ಬುಕ್ಕಾ-ಧುಪತ್ಮಾಗಾವ್ – (ತಾ.ಔರಾದ) ವಯಸ್ಸು: ೫೪

೯) ಕಾಶಿಬಾಯಿ ಸಂಗಪ್ಪಾ ಟೊಪಾರೆ – ದಾಡಗಿ – ವಯಸ್ಸು: ೫೨

೧೦) ಸರೋಜಾಬಾಯಿ ಸಂಗಪ್ಪಾ – ಬಸವಕಲ್ಯಾಣ – ವಯಸ್ಸು: ೫೩

೧೧) "ಕನ್ನಡ ಜನಪದ ಗೀತೆಗಳು" – ಡಾ. ಬಿ.ಎಸ್. ಗದ್ದಗಿಮಠ – ಪುಟ: ೧೭೫

೧೨) ಮಾಹಿತಿ: ಗೌರಮ್ಮಾ ಮಾಣಿಕರಾವ ಕಲಶೆಟ್ಟಿ – ಬಸವಕಲ್ಯಾಣ – ವಯಸ್ಸು: ೫೯

೧೩) ಮಾಹಿತಿ: ನಾಗಮ್ಮಾ ನೀಲಕಂಠ – ಬೀದರ – ವಯಸ್ಸು: ೫೨

೧೪) ಮೀನಾಬಾಯಿ ಬಸವರಾಜ ಭಾಲ್ಕಿ – ವಯಸ್ಸು: ೫೨

೧೫) ದೀಪಾವತಿ ರಾಜಕುಮಾರ – ಭಾಲ್ಕಿ – ವಯಸ್ಸು: ೩೬

೧೬) ಸರಸ್ವತಿಯ ಹೊದಲೂರೆ – ಬಸವಕಲ್ಯಾಣ – ವಯಸ್ಸು; ೬೨

೧೭) ದೀಪಾವತಿ ರಾಜಕುಮಾರ ಸಿರಸೆ – ಭಾಲ್ಕಿ – ವಯಸ್ಸು: ೩೬

೧೮) ಜ್ಯೋತಿಲಕ್ಷ್ಮೀ ಶಶೀಧರ ಕಲಶೆಟ್ಟಿ – ಕಲವಾಡಿ – ವಯಸ್ಸು: ೩೯

೧೯) ಭಾರತ್‌ಬಾಯಿ ಸತೀಶಕುಮಾರ – ಕಮಲನಗರ (ಔರಾದ) ವಯಸ್ಸು; ೪೨

೨೦) ಮಾಹಿತಿ: ಗಂಗಮ್ಮಾ ರೇವಣಪ್ಪಾ, ಟೊಪಾರೆ – ಹಳೇ ಭಾಲ್ಕಿ – ವಯಸ್ಸು: ೭೩

೨೧) ಸಂಗೀತಾಬಾಯಿ ಮಾಣಿಕ್– ಕಲವಾಡಿ – ವಯಸ್ಸು: ೫೨

೨೨) ದೀಪಾವತಿ, ರಾಜಕುಮಾರ ಸಿರಸೆ – ಭಾಲ್ಕಿ –ವಯಸ್ಸು: ೩೬

೨೩) ನಾಗಮ್ಮಾ ಪ್ರಕಾಶ ಬಾಲಕುಂದಾ (ಬ: ಕಲ್ಯಾಣ) ವಯಸ್ಸು: ೫೬

೨೪) ನಾಗಮ್ಮಾ ಕಂಟೆಪ್ಪಾ ಕಲಶೆಟ್ಟಿ – ದಾಡಾಗಿ – ವಯಸ್ಸು: ೫೨

೨೫) ಸರಸ್ವತಿಬಾಯಿ ಚಂದ್ರಪ್ಪಾ ಹೊದಲೂರೆ – ಬ.ಕಲ್ಯಾಣ – ವಯಸ್ಸು: ೫೮

೨೬) ಇಂದುಮತಿ ಮಾಣಿಕಪ್ಪಾ ದಾನಾ – ಖೇಡ್ (ತಾ.ಔರಾದ) ವಯಸ್ಸು: ೫೧

೨೭) ಮಲ್ಲಮ್ಮಾ ರಾಜಕುಮಾರ – ಡೊಣಗಾಪೂರ – ವಯಸ್ಸು: ೫೨

೨೮) ಶಿವರುದ್ರಯ್ಯಾ ಸ್ವಾಮಿ – ಲಖನ್‌ಗಾವ್ – ವಯಸ್ಸು: ೫೨

ಅಧ್ಯಾಯ: ಐದು

ಕ್ರಿಯಾವರ್ತನ ಮತ್ತು ಇತರೆ ಮಹಿಳಾ ಜಾನಪದ ಹಾಡುಗಳ ವಿಶ್ಲೇಷಣೆ

೫.೧ ಬೀಸುವ ಹಾಡುಗಳು.

೫.೨ ಕುಟ್ಟುವ ಹಾಡುಗಳು.

೫.೩ ಕಳೆಕೀಳುವಾಗಿನ ಹಾಡುಗಳು.

೫.೪ ಒಗಟಿನ ಹಾಡುಗಳು.

೫.೫ ಭಜನೆ, ತತ್ವಪದ ಹಾಡುಗಳು.

೫.೬ ಸಾಮಾಜಿಕ ಹಾಡುಗಳು.

೫.೭ ಪೌರಾಣಿಕ ಹಾಡುಗಳು.

ಅಧ್ಯಾಯ: ಐದು

ಕ್ರಿಯಾವರ್ತನ ಮತ್ತು ಇತರೆ ಮಹಿಳಾ ಜಾನಪದ ಹಾಡುಗಳ ವಿಶ್ಲೇಷಣೆ

ಜನಪದ ಸಾಹಿತ್ಯ ರೂಪಗಳು ಹಣವಿಲ್ಲದೆ ಅನುಭವಿಸುವ ಮನರಂಜನೆಯ ಮಾಧ್ಯಮಗಳಾಗಿವೆ. ಜೊತೆಗೆ ಮಾನಸಿಕ ನೆಮ್ಮದಿ ನೀಡುವಂಥ ಮಾಧ್ಯಮಗಳು. ಜನಪದರು ಕೆಲಸಗಳೊಂದಿಗೆ ಮನರಂಜಿಸಲು ಕಾರಣವೆಂದರೆ ತಾವು ಮಾಡುವ ಕೆಲಸದ ದಣಿವು ತಮಗೆ ಅರಿವಾಗದಂತೆ ಮುಗಿಯಲೆಂಬ ಉದ್ದೇಶ ಪ್ರಧಾನವಾದುದು. ಜನಪದರು ನಸುಕಿನಲ್ಲೆದ್ದು ಕಾಳು ಬೀಸುವ, ಭತ್ತ ಕುಟ್ಟುವ ಪದಗಳನ್ನು ಹಾಡುತ್ತಿದ್ದರು. ಒರಳಲ್ಲಿ ಭತ್ತವನ್ನು ಹಾಕಿ ಒನಕೆಯನ್ನು ಹಿಡಿದು ಕುಟ್ಟುತ್ತಾ ಹಾಡುತ್ತಿರುವುದರಿಂದ ಅವುಗಳಿಗೆ 'ಒನಕೆ ಹಾಡು'ಗಳೆಂದು ಹೆಸರು ಬಂತು. ಈ ಹಾಡುಗಳಿಗೆ ತಮ್ಮದೇ ಆದ ಚರಿತ್ರೆಯಿದೆ. ಕನ್ನಡ ಪ್ರಾಚೀನ ಕಾವ್ಯದಲ್ಲಿ ಈ ಹಾಡುಗಳ ಉಲ್ಲೇಖವಿದೆ. ಹೆಣ್ಣುಮಕ್ಕಳು ಹಾಡುವ ಬಹುತೇಕ ಗೀತೆಗಳು ಬೀಸುವ ಕಲ್ಲಿನ ಪದಗಳಾಗಿವೆ. ಇವು ಸರಳವಾದ ಶೈಲಿಯಲ್ಲಿರುತ್ತವೆ. ಮುಂಜಾನೆಯ ಪ್ರಶಾಂತ ವಾತಾವರಣದಲ್ಲಿ ಕಾಳು ಬೀಸುತ್ತಾ ಜನಪದ ಮಹಿಳೆ ಸಣ್ಣ ಧ್ವನಿಯಲ್ಲಿ ತನ್ನಷ್ಟಕ್ಕೆ ತಾನೇ ಹಾಡಿಕೊಳ್ಳುವ ಈ ಹಾಡುಗಳಲ್ಲಿ ಆಕೆ ತನ್ನ ಕಷ್ಟ-ಸುಖ, ನೋವು ನಲಿವುಗಳನ್ನು ತೋಡಿಕೊಂಡಿದ್ದಾಳೆ. ದೇವರು, ನಿಸರ್ಗ, ಕುಟುಂಬ, ಬದುಕು, ಸಮಾಜ ಕುರಿತಂತೆ ಜನಪದ ಹೆಣ್ಣಿನ ನಿಲುವೇನು ಎಂಬುದನ್ನು ತಿಳಿಯುವುದಕ್ಕೆ ಇವು ಒಳ್ಳೆಯ ಉದಾಹರಣೆಗಳಾಗಿವೆ. ಹಾಡುವುದು ಹೆಣ್ಣಿಗೆ ನಿಸರ್ಗದ ದೇಣಿಗೆ. ಅವಳಿಗೆ ಜೀವನವೇ ಹಾಡಾಗಿ ಪರಿಣಮಿಸಿದೆ. ಅವಳಿಗೆ ತಿಳಿಯದ ವೇದ ಬೇಕಿಲ್ಲ, ಹೊಳೆಯದ ಶಾಸ್ತ್ರ ಸಾಕೆಂದು ಅವೆಲ್ಲವುಗಳ ತಿರುಳು ನಿತ್ಯ ಜೀವನದ ಅನುಭವಗಳಲ್ಲಿ, ತನಗೆ ಗೊತ್ತಾಗದೇ ಹಾಡಿದ್ದಾಳೆ. ಬೀಸುವ ಹಾಡುಗಳು ಕನ್ನಡ ಗರತಿಯರ ಪ್ರಪಂಚ ದರ್ಶನ, ಬಾಳ್ನುಡಿ ಬೆಳಕನ್ನು ಇಲ್ಲಿ ಕಾಣಬಹುದು.

ಜನಪದ ಸಾಹಿತ್ಯವು ಕಾಯಕದೊಂದಿಗೆ ಹೆಚ್ಚಿನ ಸಂಬಂಧವನ್ನು ಹೊಂದಿದೆ. ಹೆಣ್ಣು ಮಕ್ಕಳು ಬೀಸುವಾಗ, ಕುಟ್ಟುವಾಗ ಅವುಗಳ ಲಯಕ್ಕೆ ತಕ್ಕಂತೆ ತಮ್ಮ ಹಾಡಿನ ಧಾಟಿಗಳನ್ನು ಹೊಂದಿಸಿ ಹಾಡುತ್ತಾರೆ. ಒಂದೇ ತ್ರಿಪದಿಯನ್ನು ಅವರು ಹಾಡುವ ಲಯ ಮತ್ತು ಧಾಟಿಗಳನ್ನಾಧರಿಸಿ ಅದು ಬೀಸುವ ಪದ ಅಥವಾ ಕುಟ್ಟುವ ಪದವೆಂದು ಗುರುತಿಸುತ್ತಾರೆ. ಬೀಸುವಾಗ ಅವರ ಹಾಡಿನ ಗತಿ ಮಂದವಾಗಿದ್ದು, ನುಡಿಯ ಕೊನೆಯಲ್ಲಿ ದೀರ್ಘವಾಗಿ ಹೇಳುವರು. ಆದರೆ ಕುಟ್ಟುವಾಗ ಹಾಡಿನ ಗತಿ ವೇಗವಾಗಿದ್ದು ಕುಣಿಯುತ್ತಾ ಸಾಗಿದೆಯೋ ಎನ್ನುವಂತೆ ಅದರ ಲಯವಿರುತ್ತದೆ. ನುಡಿಯ ಕೊನೆಗೆ 'ಸುಯ್' 'ಸುವ್ವಯ್ಯಾ' 'ಸುವ್ವಾಲಿ' 'ತಂಗೆಮ್ಮ' 'ಗೆಳತಿ' ಇಲ್ಲವೆ 'ಹಾಕವ್ವಾಯಾರಿ' ಎಂದೆನ್ನುತ್ತಾರೆ. ಗರತಿಯ ಪಾಲಿಗೆ ಈ ಒಳ್ಳು-ಕಲ್ಲು' ಮತ್ತು 'ಬೀಸುವ ಕಲ್ಲು' ಆರಾಧ್ಯ ದೈವವಾಗಿದೆ. ತವರು, ತಾಯ್ತಂದೆ, ಸರಸ, ಅತ್ತೆ ಮನೆಯ ಕಾಟ ಇತ್ಯಾದಿ ವಿಷಯಗಳನ್ನೊಳಗೊಂಡ ಅಸಂಖ್ಯಾತ ತ್ರಿಪದಿಗಳನ್ನು ಬೀಸುವಾಗ ಮತ್ತು ಕುಟ್ಟುವಾಗ ಹಾಡುತ್ತಾರೆ. ಗರತಿಯು ತನ್ನ ಹೃದಯದ ಭಾವನೆಗಳನ್ನು ಹೃದಯಂಗಮವಾಗಿ ತೋಡಿಕೊಂಡಿದ್ದಾಳೆ. ಅವಳ ಜೀವನದ ಮಣಿದೀಪದಂತೆ ಶೋಭಿಸುವ ಈ ತ್ರಿಪದಿಗಳು ತನ್ನ ಗರ್ಭದಲ್ಲಿ ಜನಿಸಿದ ಜೀವನದ ಮೌಲ್ಯಗಳನ್ನು ತುಂಬಿಕೊಂಡಿದೆ. 'ಬೀಸುವಾಗ' 'ಹೇಮರಡ್ಡಿ ಮಲ್ಲಮ್ಮ'_'ಕಾಳಿಂಗರಾಯ'ರಂಥ 'ಕಥನ ಗೀತೆ'ಗಳನ್ನು ಹಾಡುತ್ತಾರೆ. ಕುಟ್ಟುವಾಗ ಅನೇಕ 'ತತ್ವಪದಗಳು' ಆಧ್ಯಾತ್ಮದ ಹಾಡುಗಳನ್ನು ಹಾಡುತ್ತಾರೆ.

ಪ್ರಸ್ತುತ ಅಧ್ಯಯನದಲ್ಲಿ ಚರ್ಚೆಗೆ ಒಳಪಡುವಂತಹ ಕ್ರಿಯಾವರ್ತನ ಮಹಿಳಾ ಜಾನಪದ ಹಾಡುಗಳನ್ನು ನಾವು ಈ ಮುಂದಿನಂತೆ ಅರ್ಥೈಸಬಹುದಾಗಿದೆ. ಇಲ್ಲಿ 'ಕ್ರಿಯಾವರ್ತನ' ಎಂಬುದು ಕ್ರಿಯೆಯನ್ನು ಸೂಚಿಸುವುದಾಗಿದೆ. ಅಂದರೆ ನಮ್ಮ ಜಾನಪದರು ಹಾಡು ಹಾಗೂ ಕಥೆಗಳನ್ನು ಸೃಷ್ಟಿ ಮಾಡಿಕೊಂಡು ಬಂದಿರುವುದು ಶ್ರಮದ ಹಿನ್ನೆಲೆಯಲ್ಲಿ. ಹೀಗಾಗಿ ತಮ್ಮ ಕೆಲಸ ಕಾರ್ಯಗಳನ್ನು ನೆರವೇರಿಸುವ ಸಂದರ್ಭದಲ್ಲಿ ಯಾವುದೇ ರೀತಿಯ ಆಯಾಸ, ಬೇಸರಿಕೆ ಆಗದಿರಲೆಂದು ಈ ಬಗೆಯ ಸಾಹಿತ್ಯವನ್ನು ಸೃಷ್ಟಿಸಿಕೊಂಡು ಬಂದಿದ್ದಾರೆ. ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಅಧ್ಯಯನದ ಅನುಕೂಲದ ದೃಷ್ಟಿಯಿಂದಾಗಿ ಜಾನಪದ ಸಾಹಿತ್ಯವನ್ನು ವಿವಿಧ ನೆಲೆಯಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಇವುಗಳಲ್ಲಿ ಕ್ರಿಯಾ ಸೂಚಕವಾದ ಮಹಿಳಾ ಹಾಡುಗಳನ್ನು ಕ್ರಿಯಾವರ್ತನ ಮಹಿಳಾ ಜಾನಪದ ಹಾಡುಗಳು ಎಂಬುದಾಗಿ ವರ್ಗೀಕರಿಸಿಕೊಳ್ಳಲಾಗಿದೆ. ಇಂತಹ ಕ್ರಿಯಾವರ್ತನ ಮಹಿಳಾ ಜಾನಪದ ಹಾಡುಗಳನ್ನು ನಾವು ಈ ಮುಂದಿನಂತೆ ವರ್ಗೀಕರಿಸಿಕೊಂಡು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೫.೧ ಬೀಸುವ ಹಾಡುಗಳು:

ಜಾನಪದರ ದೈನಂದಿನ ಬದುಕು ಬೀಸುವ ಕಾಯಕದಿಂದ ಆರಂಭವಾಗುತ್ತದೆ. ಬೀಸುವ ಕಲ್ಲು ಮನೆಯಲ್ಲಿ ನಡೆಯುತ್ತಿದ್ದರೆ ಎಲ್ಲವೂ ಸರಿಯಾಗಿದೆ ಎಂದೇ ಅರ್ಥ. ಪ್ರತಿನಿತ್ಯವೂ ಅಕ್ಕಿ, ರಾಗಿ, ಜೋಳ ಮುಂತಾದ ಧಾನ್ಯಗಳನ್ನು ಬೀಸಿ ಅಣಿಗೊಳಿಸಿಕೊಂಡರೆ ಆಯಾ ದಿನದ ಅಗತ್ಯಗಳು ಪೂರೈಕೆಯಾಗುತ್ತವೆ. ಈ ಬೀಸುವ ಕಾಯಕದಲ್ಲಿ ಏನಾದರೂ ಅಡ್ಡಿ ಆತಂಕಗಳು ಕಾಣಿಸಿಕೊಂಡರೆ ಬದುಕೇ ದುಸ್ತರವಾದಂತೆ. ಅದಕ್ಕಾಗಿಯೇ ಬೀಸುವ ಕಲ್ಲನ್ನು ಕುರಿತು ಜನಪದ ಗರತಿಯರು ಹಾಡುತ್ತಿರುತ್ತಾರೆ. ಈ ಬೀಸುವ ಕಲ್ಲು ಜಾನಪದರಿಗೆ ಕೇವಲ ಒಂದು ವಸ್ತು ಮಾತ್ರವಲ್ಲ. ಅದು ಇವರಿಗೆ ಆರಾಧ್ಯ ದೈವವೂ ಹೌದು. ಹೀಗಾಗಿ ಬೀಸುವ ಕಲ್ಲಿಗೆ ವಿಶೇಷವಾದ ಸ್ಥಾನಮಾನವನ್ನು ಜಾನಪದ ಪರಂಪರೆಯಲ್ಲಿ ಕಲ್ಪಿಸಿಕೊಡಲಾಗಿದೆ.

ಬೀಸುವ ಕಲ್ಲು ಜನಪದರಿಗೆ ಜೀವನಾಧಾರ ವಸ್ತು. ಕಲ್ಲಮ್ಮ ತಾಯಿಯ ಕರುಣೆಯಿಂದಲೇ ಕಲ್ಲು ಹಿಡಿದಾಕೆಗೆ ಮಗ ಸೊಸೆಯರು ಬರುತ್ತಾರೆ. ಸುಖ ಸಂತೋಷ ಲಭಿಸುತ್ತದೆ. ಬದುಕು ಹಸನಾಗುತ್ತದೆ. ಬೀಸುವ ಕಲ್ಲನ್ನು ಗರತಿಯು ತಾಯಿ ಕಲ್ಲಮ್ಮ ಎಂದು ಕರೆದಿದ್ದಾಳೆ. ಕೆಲವು ವರ್ಷಗಳ ಹಿಂದೆ ಮದುವೆ ಸಮಯದಲ್ಲಿ ಹಾಡು ಹೇಳುತ್ತಾ ಸ್ತ್ರೀಯರಿಗೆ ಬೀಸುವ ಕುಟ್ಟುವ ಶಾಸ್ತ್ರ ಮಾಡಿಸುವುದರಲ್ಲಿ ಹಿಂದೆ ಹೆಣ್ಣನ್ನು ಆಯ್ಕೆ ಮಾಡುತ್ತಿದ್ದ ರೀತಿಯೇ ಪರಿಚಯವಾಗುವುದರ ಜೊತೆಗೆ ಈ ಕಾಯಕಗಳ ಬಗೆಗೆ ಹಿಂದಿನವರಿಗೆ ಎಂಥ ಹೆಗ್ಗಳಿಕೆ ಮತ್ತು ಪವಿತ್ರ ಭಾವ ಇತ್ತೆಂದು ಹಿರಿಯರಿಂದ, ಹಾಡುಗಳಿಂದ ತಿಳಿದುಬರುತ್ತದೆ.

ಬೀಸುವಾಗ ಹೇಳುವ ಬಾಂಧವ್ಯಪರ ಗೀತೆಗಳೆಲ್ಲ ಹೆಣ್ಣಿನ ಬದುಕನ್ನು ಚಿತ್ರಿಸುತ್ತವೆ. ಬಾಲ್ಯದಲ್ಲಿ ತಾಯಿ ತಂದೆಯರೊಂದಿಗೆ, ಯೌವ್ವನದಲ್ಲಿ ಪುರುಷನೊಂದಿಗೆ, ಮುಪ್ಪಿನಲ್ಲಿ ಮಕ್ಕಳೊಂದಿಗೆ ಬಾಳುವೆ ನಡೆಸುವ ಹೆಣ್ಣಿನ ಜೀವನದ ವಿವಿಧ ಸ್ತರದ ಶೀಲ ವರ್ತನೆಯ ಚಿತ್ರ ಇಲ್ಲಿದೆ. ಒಟ್ಟಿನಲ್ಲಿ ಬೀಸುವ ಹಾಡುಗಳು ಗರತಿಯ ಬದುಕಿನ ಹಿರಿಮೆಯನ್ನು ಸಾರುವ ಗೀತೆಗಳಾಗಿವೆ. ಬೀಸುವ ಹಾಡುಗಳು ಸ್ತ್ರೀಯರ ಹಾಡುಗಳಲ್ಲಿಯೇ ಬೀಸುವ ಪದಗಳಿಗೆ ಮಹತ್ವದ ಸ್ಥಾನವಿದೆ. ಇಂದು ಹಿಟ್ಟು ಮಾಡುವ ಮತ್ತು ಅಕ್ಕಿ ಮಾಡುವ ಹತ್ತಾರು ಬಗೆಯ ಯಂತ್ರಗಳು ಬಂದು ಪ್ರವೇಶ ಪಡೆದಿರುವುದರಿಂದ ಕುಟ್ಟುವ ಮತ್ತು ಬೀಸುವ ಕೆಲಸಗಳು ಮಾಯವಾಗಿದೆ. ಇಂದಿನ ಹೆಣ್ಣು ಮಕ್ಕಳು ಕೂಡಾ ಆಲಸ್ಯದಿಂದ

ಕೂಡಿದವರಾಗಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಗೆ ಮರುಳಾಗಿದ್ದಾರೆ. ಹೀಗಾಗಿ ಹಾಡುಗಳೆಲ್ಲಾ ಹಳ್ಳಿಗಳಿಂದ ಕಣ್ಮರೆಯಾಗಿವೆ.[7]

ಬೀಸುವ ಹಾಡುಗಳು ನಿತ್ಯ ಹೆಣ್ಣುಮಕ್ಕಳ ನಾಲಿಗೆಯ ಮೇಲೆ ನಲಿಯುವಂಥವು. ತಾಳಕ್ಕೆ ತಕ್ಕ ಹಲವಾರು ಧಾಟಿಗಳಲ್ಲಿ 'ಕಲ್ಲು' 'ಒಳ್ಳು' ಇರುವ ಎಲ್ಲ ಕಡೆಗೂ ಸಿಕ್ಕುತ್ತವೆ. ದೇವರು, ತಾಯಿ, ತವರು, ಗಂಡ, ಮಕ್ಕಳು, ಬಳಗ, ಎತ್ತು, ಎಮ್ಮೆ ಮೊದಲಾಗಿ ತನ್ನ ಪ್ರೀತಿಯ ವ್ಯಕ್ತಿ ವಸ್ತುಗಳನ್ನು ಕುರಿತು ಹಾಡುಗಳನ್ನು ಹೇಳುತ್ತಾರೆ. ತಮ್ಮ ಬಾಳಿನ ಸುಖ, ದು:ಖಗಳನ್ನು ಹಾಡಿನಲ್ಲಿ ತೋಡಿಕೊಂಡು ದುಡಿಮೆಯ ಶ್ರಮ ಕಡಿಮೆ ಮಾಡಿಕೊಳ್ಳುವುದಲ್ಲದೆ. ಹೃದಯದ ಭಾರವನ್ನು ಹಗುರ ಮಾಡಿಕೊಳ್ಳುವರು. 'ಗರತಿಯ ಹಾಡು' "ನವಿಲು ಕುಣಿದಾವ" ಸಂಗ್ರಹಗಳಲ್ಲಿ ಇಂತಹ ತ್ರಿಪದಿಗಳನ್ನು ಕಾಣಬಹುದು.

ಜನಪದ ಸಾಹಿತ್ಯವು ಕಾಯಕದೊಂದಿಗೆ ಹೆಚ್ಚಿನ ಸಂಬಂಧವನ್ನು ಹೊಂದಿದೆ. ಹೆಣ್ಣು ಮಕ್ಕಳು ಬೀಸುವಾಗ, ಕುಟ್ಟುವಾಗ ಅವುಗಳ ಲಯಕ್ಕೆ ತಕ್ಕಂತೆ ತಮ್ಮ ಹಾಡಿನಲ್ಲಿ ಬೀಸುವಾಗ ಹೇಳುವ ಬಾಂಧವ್ಯಪರ ಗೀತೆಗಳೆಲ್ಲ ಹೆಣ್ಣಿನ ಬದುಕನ್ನು ಚಿತ್ರಿಸುತ್ತವೆ. ಬಾಲ್ಯದಲ್ಲಿ ತಾಯಿ ತಂದೆಯರೊಂದಿಗೆ ಯೌವ್ವನದಲ್ಲಿ ಪುರುಷನೊಂದಿಗೆ. ಮುಪ್ಪಿನಲ್ಲಿ ಮಕ್ಕಳೊಂದಿಗೆ ಬಾಳುವೆ ನಡೆಸುವ ಹೆಣ್ಣಿನ ಜೀವನದ ವಿವಿಧ ಸ್ತರದ ಶೀಲ ವರ್ತನೆಯ ಚಿತ್ರ ಇಲ್ಲಿದೆ. ಒಟ್ಟಿನಲ್ಲಿ ಬೀಸುವ ಹಾಡುಗಳು ಗರತಿಯ ಬದುಕಿನ ಹಿರಿಮೆಯನ್ನು ಸಾರುವ ಗೀತೆಗಳಾಗಿವೆ. ಬೀಸುವ ಹಾಡುಗಳು ಸ್ತ್ರೀಯರ ಹಾಡುಗಳಲ್ಲಿಯೇ ಬೀಸುವ ಪದಗಳಿಗೆ ಮಹತ್ವದ ಸ್ಥಾನವಿದೆ. ಇಂದು ಹಿಟ್ಟು ಮಾಡುವ ಮತ್ತು ಅಕ್ಕಿ ಮಾಡುವ ಹತ್ತಾರು ಬಗೆಯ ಯಂತ್ರಗಳು ಬಂದು ಪ್ರವೇಶ ಪಡೆದಿರುವುದರಿಂದ ಕುಟ್ಟುವ ಮತ್ತು ಬೀಸುವ ಕೆಲಸಗಳು ಮಾಯವಾಗಿದೆ. ಇಂದಿನ ಹೆಣ್ಣು ಮಕ್ಕಳು ಕೂಡಾ ಆಲಸ್ಯದಿಂದ ಕೂಡಿದವರಾಗಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಗೆ ಮರುಳಾಗಿದ್ದಾರೆ. ಹೀಗಾಗಿ ಹಾಡುಗಳಲ್ಲಿ ಹಳ್ಳಿಗಳಿಂದ ಕಣ್ಮರೆಯಾಗಿವೆ.

ಬೀಸುವಾಗ: ಪಾಂಡವರಿಗೆ ಸಂಬಂಧಿತ ಪೌರಾಣಿಕ ಹಾಡುಗಳು:

ಪುಣ್ಯವಾನ ಧರ್ಮರಾಜಾ, ಅರಜುನ, ಭೀಮಸೇನ
ಅವರೆಂಥ ವರಪುತ್ರರೇ । ನಕುಲ ಸಹದೇವ ಐದ
ಮಂದಿ ಅಣ್ಣ ತಮ್ಮರೆ ऽऽऽ

ಕುಂತಿ ತನ್ನ ಐದು ಮಂತ್ರಗಳಿಂದ ಪಾಂಡವರನ್ನು ಪಡೆದಿರುತ್ತಾಳೆ. ಕ್ಷತ್ರಿಯರಲ್ಲಿ ಜನಿಸಿದರೂ ಅವರಿಗೆ ಹನ್ನೆರಡು ವರ್ಷವನವಾಸ, ಒಂದು ವರ್ಷ ಅಜ್ಞಾತದಲ್ಲಿರಬೇಕೆಂದು ಬ್ರಹ್ಮನು ಅವರ ಹಣೆಯಲ್ಲಿ ಬರೆದಿದ್ದನೆಂದು ಜನಪದರ ನಂಬಿಕೆ.

ಪಾಂಡವರ ವನವಾಸ ಹನ್ನೆರಡು ವರುಸಂತ
ಹರಿಬ್ರಹ್ಮ ಬರದಿದ್ದುರ । ಮಂದಿರ ಬಿಟ್ಟು ಆರ್ಯಾಣ
ಸೇರಿದ್ದುರ ऽऽऽ

ಅಜ್ಞಾತದಲ್ಲಿದ್ದ ಪಾಂಡವರು ವಿರಾಟ ರಾಜನ ಆಶ್ರಯ ಪಡೆಯುವರು ಒಬ್ಬೊಬ್ಬರು ಒಂದೊಂದು

ಕಂಕಣ ಬಟ್ಟೊಂದು ಕುಲಧರ್ಮ ಹಾರುನ
ಪಂಚಾಂಗ ಓದಂದಾರೆ । ಅರಜುನಗ ಸಾವಕ್ಷ

ನುಡಿಯೆಂದಾರೇ sss

ಕಳಕಾದೇವಿಯ ಗುಡಿ ಒಳಗ ಪೂಜವ ಮಾಡಿ
ಸೆರಗೊಡ್ಡಿ ಬೇಡಿದ್ದಾರ ss । ಧನುಷ್ಯ ಬಾಣ ಗಜ
ಬಿಟ್ಟು ಪೋಗಿದ್ದಾವ sss

ವಿರಾಟ ರಾಜನ ಮನಿ ಧಡಧುಡಿ ಬೇಕಂತ
ಹಿರಿಯಣ್ಣ ಹೇಳಿದ್ದಾರೇss । ಧರ್ಮರಾಜ ತೊತ್ತಾಗಿ
ದುಡಿಯಂದಾರ sss

ಭೀಮ ಪಾಕಶಾಲೆಯಲ್ಲಿ ಕಾಯಕ ಮಾಡಿದರೆ, ನಕುಲ ಸಹದೇವರು ದನ ಕಾಯುವ ಕೆಲಸ ಮಾಡುವರು.

ಧರುಮದ ಧುರುಪತಿ ದಾಸಿಯಿದ್ದೆನಂತ
ದು:ಖಮಾಡಿ ಹೇಳೀದ್ದಾಳss । ಸುಕುಳ ಸಹದೇವ
ದನಕಾಯ್ಲಾಕ್ ನಿಂತಿದ್ದಾರ sss

ಆದರೆ ಅಲ್ಲಿದ್ದ ಕೀಚಕನು ದ್ರೌಪದಿಯ ಮೇಲೆ ಕಾಮದ ಕಣ್ಣಿಡುತ್ತಾನೆ. ಇಂತಹ ಪುಂಡರು ಈಗಿನ ಕಾಲದಲ್ಲಷ್ಟೇ ಅಲ್ಲ ಅಂದಿನ ಕಾಲದಲ್ಲಿಯೂ ಇದ್ದರು ಎಂಬುದಕ್ಕೆ ಈ ಕೀಚಕನ ವಧೆಯೇ ಸಾಕ್ಷಿಯಾಗಿದೆ.

ಧುರಪತಿ ಬಂದಿದ್ದು, ಕೀಚಕ ಕಣ್ಣೇಲಿಕಂಡು
ಗಡುಬಡುಸಿ ಎದ್ದಿದ್ದಾರss । ಕೀಚಕ ತಾನು ಹರುಷಿ
ಮೈಮ್ಯಾಲ್ಪೋಗ್ಯಾರ sss

ಅಡುಗಿ ಮನಿಯಾಗಿನ ಪುರುಷ ಅಂಕುರುಶಿ
ದು:ಖ ಮಾಡಿ । ಶಿರಕೊಳ್ಳೀಗಿ ಬಿದ್ದಿದ್ದಾಳ ss
ಬಲಭೀಮ ಬರತೇನ್ನಂತ್ಹೇಳಂದಾರ ssss

ದ್ರೌಪದಿಯ ದು:ಖ ಯಾರೂ ಕೇಳದೆ ಇರುವಾಗ, ಕೊನೆಗೆ ಅವಳು ಅಡುಗೆ ಮಾಡುವಲ್ಲಿ ಭೀಮಸೇನನ ಹತ್ತಿರ ಹೋಗಿ ಕೀಚಕನ ವೃತ್ತಾಂತ ಹೇಳುವಳು. ಕ್ರೋಧಿತನಾದ ಭೀಮಸೇನ ರಾತ್ರಿ ಹಣಮಂತದೇವರ ಗುಡಿಯ ಹತ್ತಿರ ಕೀಚಕನಿಗೆ ಬರಲು ಹೇಳು ಎಂದು ದ್ರೌಪದಿಗೆ ತಿಳಿಸುತ್ತಾನೆ.

ಧುರಪತಿ ದು:ಖಗೋಳು ಅನಿವಾರ್ಯನಾಗ್ಯಾವ
ಅಡಗಿ ಮನಿಯಲ್ಲಿದ್ದಾರ ss। ಬಲಭೀಮ ಬರತೇನ್ನಂತ್ಹೇಳಂ
ದಾರ ssss

ಬಲಭೀಮ ಸೀರುಟ್ಟು, ಬಳಿಯ ಕುಬ್ಬುಸ ತೊಟ್ಟು
ದೋಣ್ ಪಾರ್ರ್ಯಾಳ್ಯಾಕ ಬಂದಾರೆ ।sss । ಉಕ್ಕಿನ ಮಂಚ
ತಾ ಕುಂತೇ ಮುರುದ್ಹಾಕ್ಯಾರ sss

ಭೀಮಸೇನ ಮಾರುವೇಶದಲ್ಲಿರುವುದರಿಂದ ಸೀರೆಉಟ್ಟು ಗುಡಿಗೆ ಬಂದು ಕೀಚಕನೊಂದಿಗೆ ಯುದ್ಧಮಾಡಿ (ಮಲ್ಲಯುದ್ಧ) ಅವನನ್ನು ಕೊಲ್ಲುತ್ತಾನೆ ಎಂಬುದೇ ಈ ಬೀಸುವ ಹಾಡಿನ ಗೂಡಾರ್ಥವಾಗಿದೆ.

ಮಾರುತಿ ಗುಡಿಮುಂದ । ರಂಗ ಮಂಟಪ ಚಂದ
ದೀವುಗಿ ಶಾಂತಾಯ್ತುಂದಾರೆ । ಬಲಭೀಮ ಕರಕರ
ಹಲ್ಲು ತಿಂದಾರ sss

ಭೀಮುಶ್ಯಾ, ಕೀಚಕ ಇಬ್ಬರೂ ಯೌದ್ಧಾಡಿ
ರಂಗಮಂಟಪ ಮುರದ್ಹಾಕ್ಯಾರೆ । ಹಣಮಂದೇವರ
ಗುಡಿಯೆಲ್ಲ ಖೆಡುವ್ಹಾ್ಯಕ್ಯಾರೆ sss ೨

ಜನಪದರು ಕಲಿಯುಗದ ಕೌತುಕ ನಡದಾವ್ ಬಲ್ಲಂಗ ಎಂದು ತಮ್ಮ ಹಾಡುಗಳಲ್ಲಿ ಇಂತಹ ಕಾಮುಕರ ಕುರಿತು ಉಲ್ಲೇಖಿಸಿದ್ದಾರೆ. ಆದರೆ ಇಂತಹ ಕೀಚಕ, ರಾವಣ, ದುಶ್ಯಾಸನರಂಥವರ ಕುರಿತು ಕೇಳಿದಾಗ ಜನಪದರ ಕಾಲದಲ್ಲಿಯೂ ಕಲಿಯುಗದ ಪುಂಡರನ್ನು ನಾವು ಕಾಣಬಹುದು. ಅಂತಹ ದುಷ್ಟರಿಂದಲೇ ರಾಮಾಯಣ ಮತ್ತು ಮಹಾಭಾರತಗಳ ನಿರ್ಮಾಣವಾಗಿದೆ. ಕಾಲ ಕೆಟ್ಹೋಯ್ತು, ಕಲಿಯುಗ ಎಂದೆಲ್ಲಾ ಈಗಿನ ಪೀಳಿಗೆಯನ್ನು ಹಿರಿಯರು ಎಷ್ಟೋ ಟೀಕೆ, ಟಿಪ್ಪಣಿಗಳು ಮಾಡುವುದು ಕಂಡು ಬಂದಿವೆ. ಆದರೆ ಇಂತಹ ಕೃತ್ಯಗಳು ಜನಪದರಿಂದಲೂ ಇವೆ ಎಂದರೆ ತಪ್ಪಾಗಲಾರದು.

ದ್ರೌಪದಿಯ ಪತಿಯರನ್ನು ಕೌರವರು ಜೂಜಿನಲ್ಲಿ ಸೋಲಿಸಿ ಅವಳನ್ನು ತುಂಬಿದ ಸಭೆಯಲ್ಲಿ ಸೀರೆ ಸೆಳೆದು ವಿವಸ್ತ್ರಳನ್ನಾಗಿ ಮಾಡಲು ಹವಣಿಸುತ್ತಾರೆ. ಇಂತಹ ದುಷ್ಕೃತ್ಯ ಈಗಿನ ಕಲಿಗಾಲದಲ್ಲಿಯೂ ನಾವು ಕಾಣಲಾರೆವು. ಆದರೆ ಆಗಿನ ರಾಜರುಗಳಿಗೆ ಯಾರದೇ (ಪ್ರಜೆಗಳ) ಬಂಧನವಿರಲಿಲ್ಲ. ಅದಕ್ಕಾಗಿ ಅವರು ಮನಬಂದಂತೆ ಧರ್ಮ-ಅಧರ್ಮಗಳು ಗಾಳಿಗೆ ತೂರಿ ವರ್ತಿಸುತ್ತಿದ್ದರು. ಇಂದಿನ ದಿನಮಾನಗಳಲ್ಲಿ ಜೂಜು ಆಡುವಾಗ, (ಮಟಕಾ, ಇಸ್ಪೀಟು, ಹೆಂಡ, ಲಾಟರಿಯಂತಹ) ತಮ್ಮಲ್ಲಿರುವ ಆಸ್ತಿ, ಪಾಸ್ತಿ, ಹಣ, ಬಂಗಾರ, ಬೆಳ್ಳಿಯನ್ನು ಜೂಜಿಗೆ ಹಚ್ಚಿ ಕಳೆದುಕೊಂಡ ಎಷ್ಟೋ ಉದಾಹರಣೆಗಳಿವೆ. ಆದರೆ ಜೂಜಿಗಾಗಿ ಮನೆಯ ಮಡದಿಯನ್ನು ಕಳೆದುಕೊಂಡ ಒಂದು ಉದಾಹರಣೆಗಳು ನಾವು ಕಾಣುವುದಿಲ್ಲ. ಆದರೂ ಹಿರಿಯರು ಏನಾದರೂ ಅಚಾತುರ್ಯ ನಡೆದರೆ ಕಲಿಕಾಲ, ಕಲಿಯುಗವಪ್ಪಾ ಎಂದು ಬಿರುನುಡಿಯುವರು. ಟೀಕೆ ಮಾಡುವರು.

ಕರಿಯ ಪುರ ನಗರದಲ್ಲಿ ಕೌರವರು ಪಾಂಡವರು
ಧರಿಯ ಮ್ಯಾಲೆ ಲಕ್ಷನಿಟ್ಟು ಜೂಜನಾಡ್ಯಾರೆ
ಅಕ್ಕ ಕೇಳೇ ನಿಮ್ಮರಸರು ಕೆಟ್ಟ ಪಂಥ ಪಗಡಿನಾಡಿ
ಕೆಟ್ಟ ಪಂಥ ಪಗಡಿ ಜೊಜೊಂದಾವ ಲ್ದೊದಗೀತ sss
ಅಕ್ಕ ಕೇಳೆ ನಿಮ್ಮರಸರು ಕೆಟ್ಟ ಪಂಥ ಪಗಡಿನಾಡಿ
ಸೋತು ನಮ್ಮವರ ಕೈಲಿ ಸೆರಿಯ ಸಿಕ್ಕಾರೆ sss

ಸೋತಾರಂಬ ಸುದ್ಧಿ ಕೇಳಿ ದುರ್ಯೋಧನ ಸಂತೋಷಗೊಂಡು
ಧೂತಗ್ಹಂಚ್ಚಿ ಪಾಂಡರವರ ಬದಕ ತರು ಸ್ಯಾರೆ sss
ಕಸ್ತೂರಿ ಮೃಗದ ಜಾತದ್ಹೆಣ್ಣ ಕುಂದನದ್ಹಂತ ಮೈಯಬಣ್ಣ

ಪಟ್ಟೆ ಮಂಚಕ್ಕೊಪ್ಪೆ ಬಾಲಿ ಬಾರೆ ಧುರುಪತಿ sss

ಅಲ್ಲದ ಮಾತೊಂದಾಡದಿರು । ಸಲ್ಲ ವೆತ್ತಿ ಮೈಯ ಬಣ್ಣ
ಹಲ್ಲು ಕಿತ್ತ್ಯಾರೈವರು ಬ್ಯಾಡೋ ದುಸ್ವಾಸಾ sss
ಕಸ್ತೂರಿಮೃಗದ ಜಾತದ್ವಣ್ಣ ಕುಂದನದ್ವಂತ ಮೈಯ ಬಣ್ಣ
ಬೇಡಿದಷ್ಟು ವಸ್ತ ಕೊಡುವೆ ಬಾರೆ ದುರುಪತಿ sss
ಅಲ್ಲದ ಮಾತೊಂದಾಡದಿರು ಸಲ್ಲವೆತ್ತಿ ಮೈಯಬಣ್ಣ
ರಟ್ಟೆ ಕಿತ್ತ್ಯಾರೈವರು ಬ್ಯಾಡೋ ದುಸ್ವಾಸಾ sss

ಅಡವಿ ತಿರುಗರೈವರು । ಮಡದಿ ನೀನು ಒಬ್ಬಳೇನೇ
ತೊಡಿಯ ಮ್ಯಾಲ ಕೂಡೆ ಬಾಲಿ ಬಾರೆ ಧುರುಪತಿ.
ಅಲ್ಲದ ಮಾತೊಂದಾಡದಿರು ಸಲ್ಲ ಎತ್ತಲಾರೆ ನೀನು
ಬಿಲ್ಲವೆತ್ತಿದಾವೋ ಭೀಮನ ಗಧಕ ದುಸ್ವಾಸಾ sss [೩]

ಪರಸ್ತ್ರೀಯನ್ನು ತಂಗಿ, ಅಕ್ಕ, ತಾಯಿಯಂತೆ ಕಾಣುವ ಜನಪದರಲ್ಲಿಯೂ ಎಂತಹ ದುಷ್ಟ ಕಾರ್ಯಗಳು ನಡೆಯುತ್ತಿದ್ದವು ಎನ್ನುವುದಕ್ಕೆ ದುಶ್ಯಾಸನನು ದ್ರೌಪದಿಯ ಸೀರೆಸೆಳೆಯುವ, ತುಂಬಿದ ಸಭೆಯಲ್ಲಿ ವಿವಸ್ತ್ರಳನ್ನಾಗಿಸಲು ಪ್ರಯತ್ನಿಸಿದ. ಅವಳ ಗಂಡಂದಿರೆದುರಲ್ಲೆ ಅವಳ ರೂಪ ಲಾವಣ್ಯದ ಕುರಿತು ವರ್ಣನೆ ಮಾಡುವ, ಅವಳಿಗೆ ತಮ್ಮ ತೊಡೆಯ ಮೇಲೆ ಕೂಡಲು ಕರೆಯುವುದೆಲ್ಲ ನೋಡಿದರೆ ಆಗಿನ ಕಾಲದಲ್ಲಿಯೂ ಬೀದಿ ಕಾಮಣ್ಣನಂಥವರು ಇದ್ದರು ಎನ್ನುವುದಕ್ಕೆ ಸಾಕ್ಷಿಯಾಗಿದೆ. ಅಣ್ಣ ತಮ್ಮಂದಿರ ಹೆಂಡತಿ ಅತ್ತಿಗೆಯು ತಾಯಿಗೆ ಸಮಾನಳೆಂದು ಜನಪದರು ಬಗೆಯುವರು. ಆದರೆ ಅತ್ತಿಗೆಯನ್ನೇ ಕಾಮಕ್ಕೆ ಕೇಳುವುದು ಅಮಾನವೀಯತೆಯನ್ನು ಮೆರೆದಂತಿದೆ.

ಜನಪದರು ಬೀಸುವಾಗ ದೇವರನ್ನು ಅದರಲ್ಲಿಯೂ ತನ್ನ ಇಷ್ಟ ದೈವಗಳನ್ನು ನೆನೆಯುತ್ತ ಹಾಡು ಹೇಳುವರು. ಹಾಡಿನ ಮೂಲಕವೇ ಶಿವನಿಗಾಗಿ ಮಂದಿರ, ಮಠ ಕಟ್ಟುವರು. ಅದಕ್ಕೆ ಹೊಂದಿಕೊಂಡಂತೆ ಬಂಗಾರದ ಬಾಗಿಲು, ವಜ್ರ ಜಡಿದ ಮಾಡುಗಳನ್ನು ಕಲ್ಪಿಸಿ ಶಿವ, ಶ್ರೀಕೃಷ್ಣ ಮುಂತಾದ ತಮ್ಮ ಇಷ್ಟದೈವಗಳನ್ನು, ಅವರ ಬಗೆ ಬಗೆಯ, ಕ್ರೀಡೆಗಳನ್ನು, ಪಾರ್ವತಿ–ಪರಶಿವನ ಪಗಡಿಯಾಡುವುದನ್ನು, ಶ್ರೀಕೃಷ್ಣ ಗೋಪಿಯರೊಂದಿಗಿನ ರಂಗಿನಾಟವನ್ನು ಕಲ್ಪಿಸಿಕೊಂಡು ಸಂತೋಷ ಪಡುವರು. ಆ ಒಂದು ನಾದ, ಗಾನ ಲೀಲೆಯಲ್ಲಿ ಮೈಮರೆತು ಬೀಸುವಾಗಿನ ಆಯಾಸ ಮರೆತು ಆನಂದದಲ್ಲಿ ತೇಲುವರು.

ಪಾರ್ವತಿಯನ್ನು ಆದಿಶಕ್ತಿ, ಸರ್ವಶಕ್ತಿ, ದುರ್ಗಾ, ಸೇರಾವಾಲಿ, ಗಿರಿಜಾದೇವಿ ಎಂದು ವಿವಿಧ ಹೆಸರುಗಳಿಂದ ಅವಳನ್ನು ಆರಾಧಿಸುವರು. ಅವಳ ಆರಾಧನೆಗಾಗಿಯೇ ನವರಾತ್ರಿಯಲ್ಲಿ ಒಂಭತ್ತು ದಿನಗಳು ಮೀಸಲಿಡುವರು. ಈ ಒಂಬತ್ತು ದಿನಗಳಲ್ಲಿ ಬೇರೆ ಯಾವ ದೈವವನ್ನೂ ಪೂಜಿಸರು, ಆರಾಧಿಸರು. ಮಹಾರಾಷ್ಟ್ರದ ಉಸ್ಮಾನಾಬಾದ ಜಿಲ್ಲೆಯ ತುಳಜಾಪೂರದಲ್ಲಿ ತುಳಜಾ ಭವಾನಿಯಾದ ಪಾರ್ವತಿಯು ದಿನಾಲೂ ರಾತ್ರಿ ಶಿವನೊಂದಿಗೆ ಪಗಡೆಯಾಡುವ ಉಲ್ಲೇಖವಿದೆ. ಈಗಲೂ ಜನರು ಆ ಸ್ಥಳವನ್ನು ಕಂಡು ಬರುತ್ತಾರೆ. ರಾತ್ರಿಹೊತ್ತು ಪಗಡೆಗಳು ಯಾವ ಸ್ಥಿತಿಯಲ್ಲಿ ಇರುತ್ತವೋ, ಮುಂಜಾನೆ ಅದೇ ಸ್ಥಿತಿಯಲ್ಲಿರದೆ ಪಗಡೆಗಳು ಅಸ್ತವ್ಯಸ್ತ ಆಗಿರುವುದನ್ನು ಕಂಡು ಬರುತ್ತದೆ. ಅಂದರೆ, ರಾತ್ರಿ ಶಿವನು ಪಾರ್ವತಿಯೊಂದಿಗೆ ಪಗಡೆ ಆಟ ಆಡಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿರುವುದು. ಅದನ್ನು ಕಂಡ ಜನಪದರು ಭಕ್ತಿಭಾವದಿಂದ ಬೀಸುವಾಗ ಈ ರೀತಿಯಾಗಿ ಹಾಡಿದ್ದಾರೆ.

ಕರಿಯ ಹರದಿ ಗಿರಿಜಾ ದೇವಿಗಿ ಸಂಭ್ರಮ ದಿನದಲ್ಲಿ
ಕುಸುರದ ಒಪ್ಪುವ ಮಕರದ ಒಳಗೆ ಆಟದಲೆ sss
ಶಿವನು ಪಾರ್ವತಿ ಆಟ ಹೂಡ್ಯಾರ ಪಗಡಿ ಆಟದಲೆ
ಶಿವನು ಹೋಗಿ ತಪವ ಕುಂತಾರ ಗಿರಿಯ ಕೋಪದಲೆ sss
ಶಿವನ ಸೋಲಿಸಿ ಪಾರ್ವತಿ ಗೆದ್ದಾಳ ಪಗಡಿ ಆಟದಲೆ
ಶಿವನು ಹೋಗಿ ತಪವ ಕುಂತಾರ ಗಿರಿಯ ಕೋಪದಲೇ sss
ಶಿವನ ಹುಡುಕುತ ಪಾರ್ವತಿ ಹೊಂಟಾಳ ಬಿಲ್ಹಣ ರೂಪದಲೆ
ಶಿವನು ಹೋಗಿ ತಪವು ಕುಂತಾರ ಕಾಂತರ ವನದೊಳಗೆ sss
ಬಂದು ನಿಂತಾಳ ದೇವಿ ಏಳರಿ ಮಂದನ ಗಿರಿದೇವ
ತಲೆಯಲಿ ಕಿರೀಟ, ಕಾಲಲಿ ಪೈಜಣ ಝುನನನ ಬಾರಿಸುತಲೇ sss
ಅಡಗಿ ಮಾಡಲೆನೆಂದು ಭಾಳ ತಡವು ಮಾಡಲಿ ಬ್ಯಾಡ
ಅಕ್ಕ ಪಾರ್ವತಿದೇವಿ ಕರದು ಬಾ ಅಂದರ ಕೃಷ್ಣದೇವರಾಯ ನಿಮಗ sss [೪]

ಪ್ರತಿಯೊಂದು ಆಟದಲ್ಲಿ ಪಾರ್ವತಿ ಶಿವನನ್ನು ಸೋಲಿಸುತ್ತಿದ್ದಳು. ಆಗ ಕೋಪಗೊಂಡ ಶಿವನು ಅಲ್ಲಿಂದ ಗಿರಿಯ ಮೇಲೆ ತಪ್ಪಸ್ಸಿಗೆ ಕುಳಿತುಕೊಳ್ಳುತ್ತಾರೆ. ಆ ನಂತರ ಪಾರ್ವತಿ ಅಲ್ಲಿಗೆ ಹೋದಾಗ, ಅಲ್ಲಿಂದ ಶಿವನು ಘನಘೋರಾರಣ್ಯದಲ್ಲಿ ಹೋಗಿ ತಪ್ಪಸ್ಸಿಗೆ ಕುಳಿತುಕೊಳ್ಳುವನು. ಸರಸ–ವಿರಸ, ಮುನಿಸು, ದೇವತೆಗಳಲ್ಲಿಯೂ ಇತ್ತು ಎಂಬುದನ್ನು ಜನಪದರ ಹಾಡಿನಲ್ಲಿ ಕಾಣಬಹುದು. ಶಿವನು ಪಾರ್ವತಿಯಿಂದ ಪಗಡೆಯಾಟದಲ್ಲಿ ಸೋತು, ಮುನಿಸಿಕೊಂಡು ಗಿರಿ, ಗವ್ಹರಗಳಲ್ಲಿ ಹೋಗಿ ತಪ್ಪಸ್ಸಿಗೆ ಅಂದರೆ ಕೋಪವನ್ನು ತೋರ್ಪಡಿಸಲು ಬಾರದೆ ಮೌನವಾಗಿ ಕುಳಿತು ಕೊಂಡಾಗ ಅವನನ್ನು ರಮಿಸಲು ಪಾರ್ವತಿಯು ಬಿಲ್ಹಣ ವೇಷದಲ್ಲಿ ಶಿವನಲ್ಲಿಗೆ ಬರುವುದು. ಇವೆಲ್ಲ ಸಾಮಾನ್ಯ ಮನುಜನಂತೆ ಜನಪದರು ಕಲ್ಪಿಸಿಕೊಂಡು ಹಾಡುಗಳನ್ನು ರಚಿಸಿ ಮನರಂಜನೆ ಪಡೆಯುತ್ತಿದ್ದರು.

ಬೆದೆ ನೋಡಿ ಬಿತ್ತಣ್ಣ ಹದ ನೋಡಿ ಹರಗಣ್ಣ
ತುಂಬು ತೆನೆನೋಡಿ ಒಕ್ಕಣ್ಣ। ಸುತ್ತೆಲ್ಲ
ಜನಕ ನೀ ನೀಡೆ ನಲಿಯಣ್ಣ [೫]

ಮಾನವ ಕಾಡು ಸಂಸ್ಕೃತಿ ಮತ್ತು ಪಶುಸಂಗೋಪನಾ ಸಂಸ್ಕೃತಿಗಳ ನಂತರ ಕಂಡುಕೊಂಡ ವಿಶಿಷ್ಟವಾದ ಹಂತವೆಂದರೆ ಕೃಷಿ. ಕೃಷಿ ಬದುಕಿನಲ್ಲಿ ಬಹು ಪ್ರಮುಖವಾದ ಮಹತ್ವವನ್ನು ಪಡೆದಿದೆ. ಇಲ್ಲಿಯೂ ಜನಪದ ಮಹಿಳೆ ವಿಶಿಷ್ಟವಾದ ಪಾತ್ರವಹಿಸಿದ್ದಾಳೆ. ಕೃಷಿಯಲ್ಲಿಯೂ ಜನಪದ ಮಹಿಳೆ ಸಮಸಮವಾಗಿ ದುಡಿದಿದ್ದಾಳೆ. ಮನೆಯ ಕೆಲಸದಲ್ಲಷ್ಟೇ ಅಲ್ಲ, ಗಂಡಿಗೆ ಕೃಷಿಯಲ್ಲಿಯೂ ಸಹಕರಿಸಿ ತನ್ನ ಶ್ರೇಷ್ಠತೆಯನ್ನು ಮೆರೆದಿದ್ದಾಳೆ.

ಕೃಷಿ ಮಹಿಳೆ ದೇಶದ ಬೆನ್ನೆಲುಬು. ಏಕೆಂದರೆ ಕೃಷಿಯ ಪ್ರತಿಯೊಂದು ಕಾರ್ಯದಲ್ಲೂ, ಪ್ರತಿಯೊಂದು ಹಂತದಲ್ಲಿ ಅವಳು ಸಹಾಯ, ಸಹಕಾರ ನೀಡುವುದಲ್ಲದೇ ಆತನ ಕೆಲಸಗಳ ಬಗೆಗೆ ವಿಚಾರಿಸಿ ಸಲಹೆ ಸೂಚನೆಗಳನ್ನು ನೀಡುವ ಕೆಲಸವನ್ನು ಮಹಿಳೆ ದಣಿವಿಲ್ಲದೆ ಮಾಡುತ್ತಾ ಬಂದಿದ್ದಾಳೆ. ಅದೇ ರೀತಿ ಪ್ರೋತ್ಸಾಹಿಸುತ್ತಲೂ ಇರುತ್ತಾಳೆ. ಅಲ್ಲದೆ ಕೃಷಿ ಜನಪದ ಸಾಹಿತ್ಯದಲ್ಲಿ ಮಹಿಳೆಯು ಅಭಿವ್ಯಕ್ತಿಯಂತೆ ಕಂಡುಬರುವ ಸಾಹಿತ್ಯದಲ್ಲಿ ಅವಳು ವ್ಯಕ್ತಪಡಿಸಿರುವ ಬೀಸುವ ಹಾಡುಗಳಲ್ಲಿ ತನ್ನಬಗೆಗೆ ಹೇಳಿಕೊಂಡಿದ್ದು ಅತ್ಯಂತ ಸರಳವಾಗಿದೆ. ಅವಳ ನೆನಪಿಗೆ ಬರುವುದು ನಮ್ಮನ್ನು

ಸಾಕಿಸಲಹುವ ಭೂಮಿತಾಯಿ ಜನಪದ ಮಹಿಳೆ ಭೂಮಿತಾಯಿಯನ್ನು ಕುರಿತು ಬೀಸುತ್ತ ಈ ರೀತಿ ಹಾಡಿ ಹೊಗಳಿದ್ದಾಳೆ.

ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೊಳ । ಭೂಮ್ತಾಯಿ
ಎದ್ದೊಂದು ಘಳಿಗೆ ನೆನೆದೇನೂ sss

ಬಿತ್ತುವ ತಮ್ಮಯ್ಯ ಎತ್ತಿಗೇನಂದಾನ
ಹತ್ತು ಖಂಡುಗ ಬೆಳಿಲೆಂದ । ಭೂಮಿತಾಯಿ
ಮುತ್ತಿನುಡಿಯಕ್ಕಿ ನಿನಗೆಂದ sss

ಭೂದೇವಿ ನಿನ್ನ ಮಗಳೆಲ್ಲಿ ಹೋದಳು
ನೀನರಿಯದ ಸ್ಥಳವಿಲ್ಲ.
ಹೋಗಬಹುದೇ ಜಗಜಗದಾ ಅಗ್ನಿಲಿ sss

ಅಚ್ಚಂಬಲಿ ಅಳಿಯಂಬಲಿ
ಹಿತ್ತಲಾಗಳ ಧಾರಿಹೀರಿಕಾಯಿ
ಒಪ್ಪಿಕೊಳ್ಳ ಭೂಮಿತಾಯಿ ಹೂರಿ ಹೂರಿ sss

ಹೊಡೆದು ಹೊಸ ಎತ್ತು ಹೂಡ್ಯಾನು ಹೊಸಮಗ
ಕೂಗು ಕೇಳಮ್ಮ ಭೂದೇವಿ । ನಿನ ಮಗ
ಸೆರಗು ಕಟ್ಟಿದನೇ ಕುಡಿಯೋಕೆ sss

ಹೊಸ ಬಂಡಿ ಮೇಲೆ ಹಸುವಿನ ಗೊತ್ರತಂದೆ
ಹಸಿದ ಭೂದೇವಿ ಹಾಕ್ತೇನೆ । ನನ್ನ ತಾಯವ್ವ
ಹಸಿದ ಕಂದವ್ನ ಕಾಯವ್ವ sss

ಮಾರುದ್ದ ಪೈರಾಗಲಿ ಮೊಳದುದ್ದ ತೆನೆಯಾಗಲಿ
ಬಡವನ ಮನಿಗೆ ಸಿರಿಬರಲಿ । ಭೂಮಿ ತಾಯಿ
ಕಂದಯ್ನ ಹಸಿವು ಹಿಂಗೋಗ್ಲಿ sss

ಭೂದೇವಿ ನೀಡವ್ವ ಭಾರಿ ಪೈರಾಗ್ಲವ್ವ
ಬಡವಳ ಹರಕೆ ಕೇಳವ್ವ । ಭೂತಾಯಿ
ನಿನ್ಗೆ ಜೋಡ್ಕಾಯಿ ಹಣ್ಣು ಒಡಿಸೇನು sss

ಬೆದೆ ನೋಡಿ ಬಿತ್ತಣ್ಣ ಹದ ನೋಡಿ ಹರಗಣ್ಣ
ತುಂಬುತೆನಿ ನೋಡಿ ಒಕ್ಕಣ್ಣ । ಸುತ್ತೆಲ್ಲ
ಜನಕ ನೀ ನೀಡಿ ನಲಿಯಣ್ಣ. sss

ಮೇಲಿನ ತ್ರಿಪದಿಗಳಲ್ಲಿ ಭೂಮಿಯನ್ನು ಭೂತಾಯಿ, ಭೂದೇವಿ, ತಾಯವ್ವ, ಕಾಯವ್ವ, ಭೂಮಿತಾಯಿ ಎಂದೆಲ್ಲ ಕರೆಯಲಾಗಿದೆ. ಇದರಿಂದ ಜನಪದರು ಸಹ ಭೂಮಿಯನ್ನು ತಾಯಿ ರೂಪದಲ್ಲಿ ಅಂದರೆ, ಹೆಣ್ಣಿನ ರೂಪದಲ್ಲಿ ಕಂಡಿರುವುದು ತಿಳಿದು ಬರುತ್ತದೆ. ಎಳ್ಳು ಜೀರಿಗೆಯನ್ನು ಉಂಡವರು ರೈತನಿಗೆ ಕೃತಜ್ಞತೆ ತೋರುವುದು ಹೀಗೆ–

ಕಲ್ಲಕೊಟ್ಟವ್ವನಿಗೆ ಎಲ್ಲಾ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ । ಆ ಮನೆಗೆ
ಮಲ್ಲಿಗೆ ಮುಡಿಯೋ ಸೊಸೆ ಬರಲಿ

ಜನಪದರು ಭೂಮಿಗೂ–ಗರತಿಗೂ ಹೋಲಿಸಿರುವುದನ್ನು ನೋಡಿದರೆ ಗರತಿಯ ಘನತೆ ಎದ್ದು ನಿಲ್ಲುತ್ತದೆ. ಪ್ರಕೃತಿಯಲ್ಲಿ ಹರಿಯುವ ನದಿಗಳೂ ಹೆಣ್ಣಿನ ಹೆಸರಿನಿಂದಲೇ ಹೆಸರಿಸಲ್ಪಟ್ಟಿವೆ. ರೈತ ಮಹಿಳೆಯು ಬೆವರು ಸುರಿಸಿ ಹೊಲದಲ್ಲಿ ಉತ್ತಿ, ಬಿತ್ತಿ, ಬೆಳೆಯನ್ನು ತನ್ನೆತ್ತರಕ್ಕೆ ಬೆಳೆದಾಗ ಅವಳಿಗೆ ಎಲ್ಲಿಲ್ಲದ ಆನಂದ ಉಂಟಾಗುವುದು. ಸುಗ್ಗಿಯ ಸಂದರ್ಭ ಒಕ್ಕಲಗಿತ್ತಿಗೆ ಇಲ್ಲಿ ಹಬ್ಬಗಳಲ್ಲಿ ಸುಗ್ಗಿಯ ಹಬ್ಬ ದೊಡ್ಡ ಹಬ್ಬವಿದ್ದಂತೆ. ತನ್ನ ಹೊಲದಲ್ಲಿ ಬೆಳೆದ ಬೆಳೆಯಲ್ಲಿ ಮುಷ್ಠಿ ದಾನವನ್ನಾದರೂ ಹಳ್ಳಿಯ ಬಳಗಕ್ಕೆ ಮಾಡುವಳು. ಆಗ ಅವಳು ಬೀಸುತ್ತ ಆನಂದದಿಂದ ಈ ರೀತಿ ಹಾಡು ಹೇಳಿ ದೇವರಿಗೆ ಕೃತಜ್ಞತೆ ಸಲ್ಲಿಸುವಳು.

ನಮ್ಮದೆನ್ನುವ ಬದುಕು ಸೊಮ್ಮು ಶಿವನದು ಕಾಣೋ
ಹುಮ್ಮಸವು ಬೇಡ ರೈತನಿಗೆ । ಕೈಲಾಸ
ಒಮ್ಮನದಿ ನೀಡೆ ಕಣ್ಮುಂದೆ

ಎಂಬ ಹಾಡಿನಲ್ಲಿ ಕಾಯಕ ತತ್ವ ನೀತಿ ಇದೆ. ಕಾಯಕಕ್ಕೆ ದೈವ ಭಕ್ತಿಗೆ ಮತ್ತು ನೈತಿಕ ಜೀವನಕ್ಕೆ ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಜನಪದ ಮಹಿಳೆಯರು ಬದುಕಿದರು. ಇಲ್ಲಿನ ಮಹಿಳಾ ಪ್ರಧಾನ ಹಾಡುಗಳು ಜಾನಪದ ಪರಂಪರೆಯಲ್ಲಿ ಮಹಿಳೆಗಿರುವ ಹಕ್ಕು ಬಾಧ್ಯತೆಗಳು ಹಾಗೂ ಆಕೆಯ ಸ್ವಾತಂತ್ರ್ಯವನ್ನು ಪ್ರತಿನಿಧಿಸುತ್ತವೆ.

೫.೨ ಕುಟ್ಟುವ ಹಾಡುಗಳು:

ಜಾನಪದರ ಬದುಕಿನ ಒಂದು ಭಾಗವಾಗಿರುವ ಕುಟ್ಟುವ ಪ್ರಕ್ರಿಯೆಯನ್ನು ತಮ್ಮ ಜೀವನದ ಅಗತ್ಯಕ್ಕೆ ತಕ್ಕಂತೆ ಪೂರೈಸಿಕೊಂಡು ಬಂದಿದ್ದಾರೆ. ಈ ಪ್ರಕ್ರಿಯೆಯಲ್ಲಿ ಸಂವಾದ ರೂಪದ ಈ ಹಾಡುಗಳು ಪ್ರತಿ ನುಡಿಗೊಮ್ಮೆ ಪುನರಾವರ್ತನೆಯಾದರೂ ಹಾಡುಗಾರಿಕೆಯ ಆಕರ್ಷಕ ಭಿನ್ನ ಧಾಟಿಗಳಿಂದ ಕೇಳುಗರ ಮನಸ್ಸನ್ನು ಹರ್ಷಗೊಳಿಸುತ್ತ, ದಣಿವನ್ನು ಮರೆಸುವಷ್ಟು ಶಕ್ತವಾಗಿರುತ್ತವೆ. ಕುಟ್ಟುವಾಗ ಅವುಗಳ ಲಯಕ್ಕೆ ತಕ್ಕಂತೆ ಹಾಡಿನ ಧಾಟಿ ಹೊಂದಿರುತ್ತದೆ. ನುಡಿಯ ಕೊನೆಗೆ 'ಸುಯ್' 'ಸುವ್ವಯ್ಯಾ' 'ಸುವ್ವಾಲಿ' 'ತಂಗೆಮ್ಮಾ''ಗೆಳದಿ' ಇಲ್ಲವೆ 'ಹಾಕವ್ವಾ ಯಾರಿ' ಎಂದೆನ್ನುತ್ತಾ ಲಯಬದ್ಧವಾಗಿ 'ಹಾರಿ' ಅಥವಾ 'ಒನಕೆ'ಯಿಂದ ಕುಟ್ಟುತ್ತ ಹಾಡು ಹೇಳುತ್ತಾರೆ. ಗರತಿಯರಿಗೆ ಈ ಒಳ್ಳುಕಲ್ಲುಗಳೇ ಆರಾಧ್ಯ ದೈವಗಳು. ತನ್ನ ಮನದ ಇಂಗಿತವನ್ನೆಲ್ಲ ಸುಖ–ದು:ಖಗಳು. ಸರಸ–ವಿರಸಗಳು, ತವರು–ಅತ್ತೆಮನೆಯ ಎಲ್ಲ ವಿಷಯಗಳನ್ನು ಕೂಡ ಕುಟ್ಟುವ ಹಾಡಿನ ಮೂಲಕ ಅಭಿವ್ಯಕ್ತಿಪಡಿಸುತ್ತಾರೆ. ಗರತಿಯು ತನ್ನ ಹೃದಯದ ಭಾವನೆಗಳನ್ನು ಹೃದಯಂಗಮವಾಗಿ ಹಾಡಿ ಹೃದಯದ ಭಾರ ಕಡಿಮೆ ಮಾಡಿಕೊಳ್ಳುತ್ತಾಳೆ. ಈ ಮೂರು ಸಾಲಿನ ತ್ರಿಪದಿಗಳೇ ಅವಳ ಜೀವನದ ಮಣಿದೀಪದಂತೆ ಶೋಭಿಸುತ್ತವೆ. ಅವಳ ಆಂತರ್ಯದಲ್ಲಿ ತುಂಬಿಕೊಂಡ ಭಾವನೆ ಈ ತ್ರಿಪದಿಗಳಲ್ಲಿ ಅಡಗಿದೆ. ಕುಟ್ಟುವಾಗ ಅನೇಕ ತತ್ವಪದಗಳನ್ನು, ಅಧ್ಯಾತ್ಮಿಕ ಪದಗಳನ್ನು ಹಾಡುತ್ತಾರೆ. ಅವಳ ಜೀವನದ ಮಣಿದೀಪದಂತೆ ಶೋಭಿಸುತ್ತವೆ. ಅವಳ ಆಂತರ್ಯದಲ್ಲಿ ತುಂಬಿ ಕೊಂಡ ಭಾವನೆ ಈ ತ್ರಿಪದಿಗಳಲ್ಲಿ ಅಡಗಿದೆ. ಕುಟ್ಟುವಾಗ ಅನೇಕ ತತ್ವಪದಗಳನ್ನು, ಅಧ್ಯಾತ್ಮಿಕ ಪದಗಳನ್ನು ಹಾಡುತ್ತಾರೆ.

ಹುಗ್ಗೀಯ ಕುಟ್ಟಂದ್ರ ಹಿಗ್ಗೀತ ನನಜೀವ
ಹುಗ್ಗಿ ನೀಡ್ಯಾಳೆ ಉಗುರಷ್ಟ । ತಂಗೆಮ್ಮ
ತುಪ್ಪಾ ನೀಡ್ಯಾಳ ಶಿವಬಲ್ಲ [೬]

ಕುಟ್ಟುವ ತ್ರಿಪದಿಗಳನ್ನಲ್ಲದೆ ಕೆಲವು ತತ್ವಪದಗಳನ್ನು ಹೇರಿಹಾಕಿ ಕುಟ್ಟುತ್ತ ಹಾಡುವರು. ಶಾಸನೋಕ್ತ ಒನಕೆಹಾಡುಗಳನ್ನು, ಅಕ್ಕ ನಾಗಮ್ಮನ ಒರಳಕ್ಕಿ ಪದಗಳನ್ನು ಇಲ್ಲಿ ಸ್ಮರಿಸಬಹುದು. ಹೇರಿ ಹಾಕುವಾಗ ಒಂದೇ ಒಳ್ಳಿನಲ್ಲಿ ಇಬ್ಬರು ಕುಟ್ಟುವರು. ಒಬ್ಬರ ಒನಕೆ ಮೇಲೆ ಹೋದಾಗ ಇನ್ನೊಬ್ಬರದು ಒರಳಲ್ಲಿರುತ್ತದೆ.

ಓಂ ಎಂದು ಬೀಸುವೆ ಸೋಮನೆಂದು ಕುಟ್ಟುವೆ
ಓಂ ಸೋಮ ಎರಡೂ ತಿಳಿಬೇಕೆ ನಾರಿ । ಹಾಕವ್ವಾ ಹೇರಿ
ಓಂ ಎಂಬು ಒಳ್ಳಿಗೆ ಸೋಂ ಎಂಬ ಅಕ್ಕಿ ಹಾಕಿ
ಓಂ ಸೋಮ ಎಂದು ಥಳಿಸಬೇಕ ನಾರಿ ಹಾಕವ್ವಾ ಹೇರಿ [೭]

ಜನಪದ ಗರತಿಯು ಯಾವಾಗಲೂ ಕುಟ್ಟುವಾಗ ಮೊದಲು ಬಸವಣ್ಣನನ್ನು ನೆನೆದು ಕುಟ್ಟಲು ಪ್ರಾರಂಭಿಸುವಳು. ಆ ನಂತರ ಒಬ್ಬೊಬ್ಬರನ್ನೇ ಮನದಲ್ಲಿ ನೆನೆಯುತ್ತ ಸಂವಾದ ರೂಪದಲ್ಲಿ ಹಾಡು ಮುಂದುವರೆಸುವಳು. ಅದರಲ್ಲಿ ದೇವ–ದೇವತೆಯರು, ಗುರು–ಹಿರಿಯರು, ಶ್ರೀಮಂತಿಕೆ– ಬಡತನ, ತವರು–ಗಂಡನ ಮನೆ, ಮಕ್ಕಳು– ಬಂಜೆ, ಹೀಗೆ ಎಲ್ಲರ ಕುರಿತು ಹಾರಿ ಹಾಕುತ್ತ ಹಾಡು ಹೇಳುವರು. ಜೀವನದ ಯಾವದೇ ವಿಷಯವನ್ನು ಬಿಡದೇ ಹಾಡಿರುತ್ತಾಳೆ.

ಶ್ಯಾವೆಕ್ಕಿ ಕುಟ್ಟಂದ್ರ ಸೆರಗ್ಹಾಸಿ ಮಲಗ್ಯಾಳ
ಎಬ್ಬುಸುರೆಣ್ಣ ಮಡದೀಗಿ ನಾರಿ
ಹಾಕವ್ವಾ ಯಾರಿ ॥ ೨ ॥

ಮಡದಿಗೆಬ್ಬಿಸಿದರ ಅರನಿದ್ದಿ ಆಗ್ಯಾವೆ
ಎರಡೊಬ್ಬಿ ಮಾಡಿ ತೆಗಿ ತಂಗಿ ನಾರಿ
ಹಾಕವ್ವಾ ಯಾರಿ ॥ ೨ ॥

ಮನಿಮಂದಿಗೆಲ್ಲಾ ಉರಿ ಥಳಿ ಅಣ್ಣಯ್ಯ
ಕೇಳುಸಿ ನೋಡಲ್ಲಿ ನಡದಾರೆ ನಾರಿ
ಹಾಕವ್ವಾ ಯಾರಿ ॥ ೨ ॥ [೮]

ಇಲ್ಲಿ ಮುನಿಸಿಕೊಂಡ ಮನೆಯ ಹೆಣ್ಣು ಮಗಳು ಉಸಿರೆಂದು ಗಂಡನ ಮನೆಗೆ ಹೋಗುವಳು, ಅವಳ ಆತ್ಮ ನೊಂದಾಗ ಅದರ ಬೇಗುದಿಯಲ್ಲಿ ತವರು ಬೆಂದು, ಯಾರಿಗೂ ನೆಮ್ಮದಿ, ಸುಖ, ಶಾಂತಿ ಇಲ್ಲದಂತಾಗುವುದು. ಪಶ್ಚಾತ್ತಾಪಪಟ್ಟ ಅಣ್ಣ ಪ್ರಾಯಶ್ಚಿತ್ತಕ್ಕಾಗಿ ತಂಗಿಯನ್ನು ಕರೆಯಲು ಬರುತ್ತಾನೆ. ಆದರೆ ಆತ್ಮಾಭಿಮಾನಿಯಾದ ತಂಗಿ ವಿವಿಧ ನೆಪಹೇಳಿ ತಿರಸ್ಕರಿಸುತ್ತಾಳೆ. ತುಂಬಿದ ಸಭೆಯಲ್ಲಿ ಸೀರೆ ಉಟ್ಟು ಹರಸು ಎಂದು ಅಣ್ಣ ಕೇಳಿದಾಗ, ತಂಗಿಯಾದವಳು ಕೋಪದಿಂದ ಹರಸುವವಳು ನಾನಲ್ಲ ನಿನ್ನ ಮಡದಿ ಅವಳಿಗೆ ತುಂಬಿದ ಸಭೆಯಲ್ಲಿ ಸೀರೆ ಉಡಿಸು ಎಂದು ಮಾರ್ನುಡಿಯುವಳು.

"ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ" ಎನ್ನುವಂತೆ, ಯಾವತ್ತೂ ತನ್ನ ತವರು ಚೆನ್ನಾಗಿರಲೆಂದು ಹರಸುವಳು. ಎಷ್ಟೇ ಕಷ್ಟ ತನಗಿದ್ದರೂ, ತನ್ನ ತವರ ಬಳ್ಳಿ ಹಬ್ಬಲೆಂದೇ ಅವಳ ಆಶಯವಾಗಿರುತ್ತದೆ. ಗಂಡನ ಮನೆಯಲ್ಲಿ ಸುಖದ ಸುಪ್ಪತ್ತಿಗೆ ಇದ್ದರೂ, ಬಡತನದ ತನ್ನ ತವರಿಗೆ ಅವಳು ಎಂದೂ ಮರೆಯಲಾರಳು. ಗಂಡನ ಮನೆಯಲ್ಲಿ ಉಡಲು ಪೀತಾಂಬರ ದೊರಕಿದರೂ, ತವರಿನ ನೂಲಿಗಾಗಿ ಆಸೆ ಪಡುವಳು. ಮಕ್ಕಳ ಮದುವೆ ಮಾಡಲು ನಿಂತ ಹೆಣ್ಣುಮಗಳು, ಯಾರೇ

ಎಷ್ಟೇ ಪಿತಾಂಬರ ಉಡುಸಿದರೂ, ಉಡಿ ಕುಟ್ಟುವುದಕ್ಕಾಗಿ ತನ್ನ ತವರಿನ ದಾರಿಯನ್ನೇ ನೋಡುವಳು. ಅಂಥದರಲ್ಲಿ ತಂಗಿ ಅಣ್ಣನ ಮಗನ ಮದುವೆಗೆ ಬಂದು, ಮದುವೆಯ ಕೆಲಸದಲ್ಲಿ ಕುಟ್ಟಲು ಮಡದಿಯನ್ನು ಎಬ್ಬಿಸಲು ಹೇಳಿದಾಗ, ಸ್ವಲ್ಪ ಸ್ವಲ್ಪ ಮಾಡಿ ನೀನೆ ಕುಟ್ಟು ಎಂದು ತಂಗಿಗೆ ಆದೇಶಿಸುತ್ತಾನೆ. ಆಗ ಅವಳು ಒಬ್ಬಳಿಗೆ ಕುಟ್ಟುವುದಕ್ಕೆ ಆಗದು ಅತ್ತಿಗೆಗೆ ಎಬ್ಬಿಸು ಎಂದು ಒತ್ತಾಯಿಸಿದಾಗ, ಕುಟ್ಟುವುದಾದರೆ ಕುಟ್ಟು ಇಲ್ಲವಾದಲ್ಲಿ ಗಂಡನ ಮನೆಗೆ ಹಿಂತಿರುಗಿ ಹೋಗು ಎಂದು ಬಿರುನುಡಿಯುವನು. ಇದರಿಂದ ಮನನೊಂದ ತಂಗಿ ಗಂಡನಮನೆಗೆ ಹೊರಟು ಹೋಗುವಳು. ಜನಪದರ ಭಾವನೆಯಂತೆ ಏಳು ಪೀಳಿಗೆಯ ಹಿಂದಿನ ಹೆಣ್ಣುಮಗಳು ಊರ ಸೀಮೆಯ ಮೇಲಿಂದ ಉಸಿರೆಂದು ಹೋಗುತ್ತಿದ್ದಾಗ, ಅವಳ ತವರಲ್ಲಿ ಮದುವೆ ನಡೆಯುತ್ತಿದ್ದಾಗ, ಅವಳ ಉಸಿರಿನಿಂದ ಮದುವೆ ಮನೆಯ ನಡುಗಂಬ ಉರಿಯಲು ಪ್ರಾರಂಬಿಸಿತು. ತೆಗೆಸಿ ನೋಡಿದಾಗ ಊರ ಸೀಮೆಯಲ್ಲಿ ಏಳು ಪೀಳಿಗೆಯ ಹಿಂದಿನ ಹೆಣ್ಣುಮಗಳು ನಡೆದಿದ್ದಾಳೆ. ಇಲ್ಲಿ ನನ್ನ ತವರಿತ್ತು ಎಂದು ಹೇಳಿಕೊಂಡು ದು:ಖ ಪಡುತ್ತಿದ್ದಾಳೆ ಅವಳ ಉಸಿರಿನಿಂದ ಈ ಕಂಬ ಉರಿಯುತ್ತಿದೆ ಎಂದು ಹೇಳಿದರು. ಆಗ ಅವಳನ್ನು ಕರೆ ತಂದು ಸ್ನಾನ, ಊಟ, ಮಾಡಿಸಿ ಸೀರೆ ಉಡಿಸಿದಾಗ ಅವಳು ಸಂತುಷ್ಟಳಾಗಿ ಹರಸಿದಳು "ತನ್ನ ತವರ ಬಳ್ಳಿ ಹಬ್ಬಲಿ ಎಂದು" ಆಗ ಆ ಕಂಬದ ಬೆಂಕಿ ನಂದಿತು ಎಂಬ ದೃಷ್ಟಾಂತ ಹಿರಿಯರು ಹೇಳುವರು. ಅದರಂತೆ ಇಲ್ಲಿಯೂ ಕೋಪಗೊಂಡು ಗಂಡನಮನೆಗೆ ಹೋದಾಗ ತವರಿನಲ್ಲಿದ್ದ ಅಣ್ಣನ ಮನೆಯ ಮಕ್ಕಳಿಂದ ಹಿಡಿದು ಎತ್ತು, ಎಮ್ಮೆಯ ವರೆಗೆ ಯಾರಿಗೂ ಸೌಖ್ಯವಿಲ್ಲವಾಯಿತು. ತೆಗೆಸಿ ನೋಡಿದರೆ ಮನೆಯ ಹೆಣ್ಣುಮಗಳ ಉಸಿರು ತಾಗಿದೆ ಎಂದು ಹೇಳುವರು. ತಕ್ಷಣ ಅಣ್ಣ ತಂಗಿಯನ್ನು ಸಾಂತ್ವನಪಡಿಸಲು ಮದುವೆಗೆ ಕರೆಯಲು ಹೋಗುವನು. ಆದರೆ ತಂಗಿ ನಿರಾಕರಿಸಿ, ನಿನ್ನ ಹೆಂಡತಿಯೇ ನಿನ್ನ ದೃಷ್ಟಿಯಲ್ಲಿ ಶ್ರೇಷ್ಠಳು ಅವಳಿಗೆ ಸೀರೆ ಉಡಿಸು ಎಂದು ಬಿರು ನುಡಿದು ತಿರಸ್ಕರಿಸುವಳು. ಅದಕ್ಕಾಗಿಯೇ ಹೆಣ್ಣು ಮಗಳು ನೊಂದರೆ ತವರಿಗೆ ಸುಖ ಇರುವುದಿಲ್ಲ ಅವಳಮನ ನೋಯಿಸಬಾರದು. ಅವಳನ್ನು ಸದಾ ಸೌಖ್ಯದಿಂದಿರುವಂತೆ ನೋಡಿಕೊಳ್ಳಬೇಕೆಂದು ಈ ಜನಪದರ ಹೇಳಿಕೆಯಾಗಿದೆ.

ಕುಟ್ಟುಕ್ಕಿ ಕುಟ್ಟಲಿಟ್ಟು ಕೊಟಗ್ಯಾನ್ಹೆಂಡಿ ಕಸ ಕೊಟಗ್ಯಾಗಿಟ್ಟು
ಏ ಯವ್ವಾ ಎಲೆ ತಾಯಿ ಮನಿ ಮಡದಿ ಎತ್ತೋ್ವದಳ್ಹೇಳವ್ವಾ
ಕೈಯ್ಯಾಗ ಕುಂಚಿಗಿ ಹಿಡಿಕೊಂಡು ಬಗಲಾಗ ಶಿಶು ಎತಿಕೊಂಡು
ತವರೂರರ್ಹಾದ್ಹಿಡಿದು ನಿನ್ನ ಮಡದಿ ಹೊಂಟ್ಹೋದಳೇಳಪ್ಪಾ

ಲಿಂಬಿಯ ಬನದಾಗ ರಂಬಿ ನೀ ಒಬ್ಬಳೇ ಹ್ಯಾಂಗ್ಹೊಯ್ತೆ
ಸೂಗೂರ ನತ್ತ ಕುಡುತಾ ಬಾಲಿನಮ್ಹೇರಿನ ಹಿಂದ ಬಾರೆ ॥ ೨ ॥
ಸೂಗೂರ ನತ್ತನ್ನೊಯ್ದು ಸುಖದಿಂದ ನಿಮ್ಮ ಮಡದಿಗಿಡರೆಪ್ಪ
ಮನಿ ಪುರುಷರ ಗೂಡಾ ನಾನು ಮನ ಮುರಸಿ ಬಂದೀದಾ sss

ಬಾಳೀಯ ಬನದಾಗಾ ಬಾಲಿ ನೀ ಒಬ್ಬಳೇ ಹ್ಯಾಂಗ್ಹೊಯ್ತೆ
ಸುಗೂರ ಬುಗುಡಿ ಕುಡುತಾ ಬಾಲಿ ನಮ್ಹೇರಿನ ಹಿಂದ ಬಾರೇ sss
ಸೂಗೂರ ಬುಗುಡಿ ಒಯ್ದು ಸುಖದಿಂದ ನಿಮ್ಮ ಮಡದಿಗಿಡರಪ್ಪ
ಮನಿ ಪುರುಷರ ಗೂಡ ನಾನು ಮನ ಮುರಸಿ ಬಂದೀದ sss

ಕೈಯಾಗ ಧೋತರ್ ಹಿಡಿಕೊಂಡು ಜೋಡು ಮೆಟ್ಟು ಎತಿಕೊಂಡು
ಓಡೋಡಿ ಬರುವ ಅವರು ನಮ್ಮ ಕೂಸಿನ ತಂದ್ಹೇರಾ
ಯಾಕೋ ಯಾಕೋ ಎಲೊ ಸಿಂಪಗ್ಯಾ ನಮ್ಹೆಣ್ಣಗಡ್ಡತಿಡ್ಡ
ಮಾತಾಡುತಿ ॥ ೨ ॥

ಇಲ್ಲಿ ಗರತಿಯು ಅತ್ತೆಯೊಂದಿಗೆ ಕೋಪಗೊಂಡು ಅಕ್ಕಿ ಕುಟ್ಟುತ್ತ ಅಲ್ಲಿಯೇ ಇಟ್ಟು, ಮನೆಯ ಯಾವ ಕೆಲಸವು ಮಾಡದೆ, ಕುಂಚಿಗೆ ಮಗುವನ್ನು ಹೊತ್ತುಕೊಂಡು ತವರೂರ ಹಾದಿಯಲ್ಲಿ ಬರುತ್ತಿರುತ್ತಾಳೆ. ಆಗ ದಾರಿಯಲ್ಲಿ ಕಿಡಗೇಡಿಯಾದ ಸಿಂಪಗ್ಯಾ ಅವಳ ಬೆನ್ನು ಹತ್ತುವನು. ಬುಗುಡಿ, ನತ್ತು ಕೊಡುವೆ ನನ್ನ ಹಿಂದೆ ಬಾ ಎಂದು ಅಣಕಿಸುತ್ತಾನೆ. ಅಷ್ಟರಲ್ಲಿ ಅವಳ ಗಂಡ ಅವಳನ್ನು

ಸಿಂಪಗ್ಯಾ ಹೆಣ್ಣೆಂದು ಅಡ್ಡತಿಡ್ಡ ಮಾತಾಡುವೆ ಎಂದು ರೇಗುತ್ತಾನೆ. ಆಗ ಅವನು ಇಲ್ಲ ಭಾವ ಅಕ್ಕ ಮುಣದಿದ್ದಾಳೆ ಅವಳನ್ನು ಸಂತೈಸಿ ತಿಳಿಹೇಳಲು ಬಂದಿರುವೆ ಎಂದು ಸಮಜಾಯಿಸಿ ಹೇಳುವನು. ಅಂದರೆ ಆಗಿನ ಕಾಲದಲ್ಲಿಯೂ ಈಗಿನ ಕಲಿಯುಗದಂಥ ರೌಡಿಗಳಿಗೆ ಕಡಿಮೆ ಇರಲಿಲ್ಲ ಎಂಬುದು ಇಲ್ಲಿ ಕಂಡು ಬರುವುದು. ಒಬ್ಬಳೇ ಹೆಣ್ಣನ್ನು ಕಂಡಾಗ ಎಂಥವರ ಮನಸ್ಸೂ ವಿಚಲಿತ ಆಗದೇ ಇರದು ಎಂಬುದಕ್ಕೆ ಈ ಹಾಡಿನ ಒಳಾರ್ಥವೇ ಸಾಕ್ಷಿಯಾಗಿದೆ.

ಜನಪದರ ಕುಟ್ಟುವ ಹಾಡುಗಳಲ್ಲಿ ಕಾಣಬರುವ ಬಹುಪಾಲು ಭಾವಗಳನ್ನು ಈ ಪದಗಳು ಹೊಂದಿದ್ದರೂ ಮುಖ್ಯವಾಗಿ ಇವುಗಳ ಆಕರ್ಷಣೆ ಇರುವುದು ನೀತಿಯಲ್ಲಿ. ನೀತಿಯನ್ನೇ ತಿರುಳಾಗುಳ್ಳ ಪದಗಳು ಇಲ್ಲಿ ಹೆಚ್ಚು ಪರಿಣಾಮಕಾರಿಯಾದ ಸ್ವರ ಸಂಯೋಜನೆಯಲ್ಲಿ ತೊಡಗಿಕೊಳ್ಳುತ್ತವೆ. ಅತ್ಯಂತ ಯಶಸ್ವಿಯಾಗುತ್ತವೆ. ಉಳಿದವುಗಳಲ್ಲಿ ಅತ್ಯಗತ್ಯ ಗೌಣವಾದ ಲಯವನ್ನು ಮಾತ್ರ ಕಾಪಾಡಿಕೊಳ್ಳುತ್ತವೆ.

ಪಂಡರಿಗೋಗುಬೇಕೆ ಭಾವಿಟ್ಟು ನಡಿಬೇಕು
ಚಂದ್ರಭಾಗದಾಗ ಇಳಿಬೇಕೆ ನಾರಿ
ಹಾಕವ್ವಾ ಯಾರಿ ॥ ೨ ॥

ಚಂದ್ರ ಭಾಗದಾಗ ಇಳಿಬೇಕ ಪಂಢರಿನಾಥ
ಭಜನ್ಯಾರ ನೋಡಿ ಬರಬೇಕ ನಾರಿ
ಹಾಕವ್ವಾ ಯಾರಿ ॥ ೨ ॥

“ಗೌಡನ ಮಗಳಾದ್ರ ಗಂಡಗೇನು” ಅತ್ತೆಯ ಮನೆಯಲ್ಲಿ ತೊತ್ತಾಗಿಯೇ ದುಡಿಬೇಕಾಗುವುದು. ರಾಜನ ಮಗಳಾದರೂ ಗಂಡನ ಮನೆಯಲ್ಲಿ ಎಲ್ಲರಿಗೂ ವಿಧೇಯರಾಗಿಯೇ ನಡೆದುಕೊಳ್ಳುವುದು ಹೆಣ್ಣಿನ ಧರ್ಮ. ಹುಚ್ಚನಿರಲಿ, ಹೇಡಿಯಿರಲಿ ಗಂಡನನ್ನು ಯಾವತ್ತು ಬೈಯಕೂಡದು ಆ ರೀತಿ ಬೈದರೆ ನರಕಕ್ಕೆ ದಾರಿಯಾಗುವುದು. ಪತಿಯೇ ಪರದೈವವೆಂದು, ಹೇಮರಡ್ಡಿ ಮಲ್ಲಮ್ಮನಂತಿದ್ದರೆ ಕೊನೆಗೆ ಶಿವನ ಕರುಣೆಯುಂಟಾಗಿ ಸದ್ಗತಿ ದೊರೆಯುವುದು ಎಂಬುದು ಜನಪದರ ನಂಬಿಕೆಯಾಗಿದೆ. ಕುಂಟನಿರಲಿ, ಕುರುಡನಿರಲಿ, ಮೂರ್ಖನಾಗಿರಲಿ, ಕುರೂಪಿಯಾಗಿದ್ದರೂ ಎಂದೆಂದಿಗೂ ಪತಿಯ ಸೇವೆ ಮಾಡಿಕೊಂಡಿದ್ದರೆ ಸ್ವರ್ಗದಲ್ಲಿ ಸ್ಥಾನ ದೊರಕುವುದು ಎಂದು ಜನಪದ ಗರತಿಯರ ಭಾವನೆಯಾಗಿದೆ.

ಜಾನಪದರು ಪೂಜ್ಯನೀಯ ಭಾವನೆಯಿಂದ ಆರಾಧಿಸಿಕೊಂಡು ಬಂದಿರುವ ಒಳ್ಳಕಲ್ಲಿಗೆ ತನ್ನದೇ ಆದ ವಿಶಿಷ್ಟತೆಯಿದೆ. ಈ ಪ್ರಕ್ರಿಯೆಯು ಪ್ರಕೃತಿ ಪುರುಷ ಸೂಚಕವಾದ ನೆಲೆಯದಾಗಿದೆ. ಆದ್ದರಿಂದ ಮದುವೆಯಂತಹ ಮಂಗಳ ಕಾರ್ಯಗಳಲ್ಲಿ ಮೊದಲ ಪೂಜೆಯನ್ನು ಇವುಗಳಿಗೆ ಸಲ್ಲಿಸಲಾಗುತ್ತದೆ. ಹೀಗಾಗಿ ಜಾನಪದರ ಪ್ರತಿಯೊಂದು ಆಚರಣೆ ಹಾಗೂ ಸಂಪ್ರದಾಯಗಳು ತನ್ನದೇ ಆದ

ಮಹತ್ವವನ್ನು ಒಳಗೊಂಡಿರುತ್ತವೆ. ಇಂತಹ ಸೂಕ್ಷ್ಮ ಅಂಶಗಳನ್ನು ಗುರುತಿಸಬೇಕಾದ ಹೊಣೆಗಾರಿಕೆ ಜಾನಪದ ವಿದ್ವಾಂಸರು ಹಾಗೂ ಸಂಶೋಧಕರ ಮೇಲಿದೆ.

೫.೩ ಕಳೆ ಕೀಳುವಾಗಿನ ಹಾಡುಗಳು:

ಗ್ರಾಮೀಣ ಪ್ರದೇಶದಲ್ಲಿ ಜನಪದ ಮಹಿಳೆಯರು ಕೆಲಸ ಮಾಡುವಾಗ ದಣಿವನ್ನು ನಿವಾರಿಸಿ ಕೊಳ್ಳಲು ತಾವುಗಳೇ ರಚಿಸಿದ ಹಾಡುಗಳು ಇಂದಿಗೂ ಜೀವಂತವಾಗಿವೆ. ಇವರಿಗೆ ಹಾಡಿನ ಜೋಡಿಯಿಲ್ಲದೆ ಶ್ರಮಸಾಧ್ಯವಾದ ಯಾವ ಕೆಲಸಗಳು ಚುರುಕಾಗಿ ಸಾಗುವುದಿಲ್ಲ. ಕೆಲಸ ಏನೇ ಆಗಿರಬಹುದು ಅದನ್ನು ನಿರ್ವಹಿಸುವಾಗ ಒಬ್ಬಂಟಿಯಾಗಿಯೂ, ಸಾಮೂಹಿಕವಾಗಿಯೂ ಹಾಡುವ ಹಾಡುಗಳನ್ನು ಕೆಲಸದ ಹಾಡುಗಳೆಂದು ಕರೆಯಲಾಗುತ್ತದೆ. ಈ ಹಾಡುಗಳು ಬದುಕಿನ ಭಾಗವಾಗಿ ಜನಪದರಲ್ಲಿ ಕಂಡುಬರುತ್ತವೆ. ಕೃಷಿಕರನ್ನು ಅವಲೋಕಿಸಿದಾಗ ಯಾವುದೇ ಜನಾಂಗ ಅಥವಾ ಭಾಷೆ ಭಿನ್ನವಾಗಿದ್ದರೂ ಕೆಲಸಕ್ಕೂ ಹಾಡಿಗೂ ಇರುವ ಸಹಜ ನಂಟಿನಿಂದಾಗಿ ಎಲ್ಲಾ ಭಾಷೆಗಳಲ್ಲೂ ಕೆಲಸದ ಹಾಡುಗಳು ದೊರಕುತ್ತವೆ. ಶ್ರಮದ ದುಡಿಮೆಯ ಜೊತೆಯಲ್ಲೇ ಉಳಿದು ಬಂದಿರುವ ಈ ಹಾಡುಗಳು ಶ್ರಮಜೀವಿಗಳ ಶ್ರಮವನ್ನು ಹೋಗಲಾಡಿಸುವುದರ ಜೊತೆಗೆ ಅವರಿಗೆ ಆತ್ಮತೃಪ್ತಿ ತಂದುಕೊಟ್ಟು ಉಲ್ಲಾಸದಿಂದ ಕೆಲಸ ನಿರ್ವಹಿಸಲು ಸೂಕ್ತ ನೆರವು, ಮನರಂಜನೆ ಒದಗಿಸುತ್ತದೆ. ಆ ಕೆಲಸದ ಸ್ವಭಾವವನ್ನು ಹೇಳುವ ಹಾಡುಗಳಾಗಬಹುದು. ಉತ್ತುವಾಗ, ಬಿತ್ತುವಾಗ, ನಾಟೀ ಹಾಕುವಾಗ, ಕಳೆಕೀಳುವಾಗ, ಕೊಯ್ಯುವಾಗ, ನೇಯುವಾಗ, ನೂಲುವಾಗ, ಕುಟ್ಟುವಾಗ, ಬೀಸುವಾಗ, ಹಚ್ಚೆ ಹೊಯ್ಯುವಾಗ ಇಂತಹ ಹಲವು ಸಂದರ್ಭಗಳಲ್ಲಿ ಹಾಡುಗಳು ಹೊರಹೊಮ್ಮುತ್ತವೆ.

ಕಳೆಕೀಳುವಾಗ ಜನಪದ ಮಹಿಳೆಯರು ನಾನಾ ಬಗೆಯ ಪದಗಳನ್ನು ಹಾಡುತ್ತಾರೆ. ಈ ಹಾಡುವವರು ಕೇಳುವವರಿಗೆ ತಾವು ಶ್ರಮದ ಕೆಲಸ ಮಾಡುವುದು ಅರಿವಾಗುವುದೇ ಇಲ್ಲ. ದೇವರ ಭಕ್ತಿ, ಪ್ರಕೃತಿ, ತವರು, ರಕ್ತ ಸಂಬಂಧ, ಗೆಳೆತನ, ನೋವು, ನಲಿವು, ಪ್ರೇಮ, ದುರಂತದ ಬದುಕು, ಇವೇ ಮೊದಲಾದ ಹಲವು ಹನ್ನೊಂದು ಸಂಗತಿಗಳನ್ನು ಈ ಹಾಡುಗಳು ಒಳಗೊಂಡಿರುತ್ತವೆ. ಇಂಪಾಗಿ ಹಾಡುವ ಕಡೆಯಲ್ಲಿ ಹೆಚ್ಚಿನ ಒತ್ತು ಕೊಡಲಾಗುತ್ತದೆ. ಅಲ್ಲಲ್ಲಿ ಹೇಳಿದ್ದನ್ನೇ ಹೇಳುವ ಸಾಲು ಮತ್ತು ಪದಪುಂಜಗಳು ಕಂಡುಬರುತ್ತವೆ. ಅನೇಕ ವಿಚಾರಗಳಲ್ಲಿ ಸಮಾಜವು ಮೇಲು ನೋಟಕ್ಕೆ ಒಪ್ಪಿಕೊಂಡಿರುವ ಮೌಲ್ಯಗಳನ್ನು ಈ ಹಾಡುಗಳು ಪ್ರತಿಬಿಂಬಿಸಿವೆ. ಸಾಮಾಜಿಕ ಅಹಿತಕರವಾದ ವಿಷಯದಲ್ಲಿ ತೊಡಗಿರುವ ಸಾಮಾಜಿಕ ಬದುಕು ಇದರ ಕಾರಣಕ್ಕಾಗಿ ಆದ ಅಪಾಯದ ಎಳೆಯಾದ ಎಳೆಗಳನ್ನು ಪತ್ತೆ ಹಚ್ಚುವುದು ಕೂಡಾ ಮುಖ್ಯವಾದ ಕರ್ತವ್ಯ. ಈ ದೃಷ್ಟಿಯಿಂದ ಜನತೆಯ ಅದರಲ್ಲೂ ಗಂಡಸಿನ ದಬ್ಬಾಳಿಕೆಯನ್ನು ಒಪ್ಪಿ ಕಾಲನೂಕುತ್ತ ಬಂದ ಹೆಂಗಸರ ಅನುಭವದ ಸಂಪತ್ತು ನಮಗೆ ಹೆಚ್ಚು ಲಾಭದಾಯಕವಾದ ಸರಕು.

ಜನಪದ ಮಹಿಳೆಯರು ಕಳೆಕೀಳುವಾಗ ಸಾಮಾಜಿಕ ಬದುಕಿನ ಅನೇಕ ವಿಷಯಗಳನ್ನು ಹಿಂಜಿ ಹೊರತೆಗೆದು ಹಾಡು ಹೇಳುತ್ತಾ ಜೊತೆಗಿದ್ದವರಿಗೂ ಕೆಲಸದ ಆಯಾಸ ಆಗಲು ಬಿಡದೆ ಮನರಂಜನೆಯನ್ನು ಒದಗಿಸುತ್ತ, ಕೆಲಸದಲ್ಲಿ, ಹಾಡಿನೊಂದಿಗೆ ಏಕಾಗ್ರತೆಯನ್ನುಂಟು ಮಾಡುವರು. ಇಬ್ಬರು ಮುಂದೆ ಮುಂದೆ ಹಾಡು ಹೇಳಿದರೆ ಉಳಿದವರು ಹಿಂದೆ ಹೇಳುವರು. ಜನಪದರು ತಮ್ಮ ಬದುಕಿನಲ್ಲಿನ ಪ್ರತಿಯೊಂದು ಕ್ಷಣವನ್ನು ಸಾಹಿತ್ಯಕವಾಗಿ ಕಟ್ಟುವ ಕಾರ್ಯ ಮಾಡಿದ್ದಾರೆ. ಅವುಗಳು ಹಾಡುಗಳಾಗಿ ಸಂದರ್ಭಾನುಸಾರ ಹೊರಹೊಮ್ಮುತ್ತವೆ. ಇದಕ್ಕೆ ಸಂಬಂಧಿಸಿದಂತೆ ಜನಪದರು ಕೃಷಿಗೆ ಬಹಳ ಹತ್ತಿರವಾಗಿರುವುದರಿಂದ ಅವರ ಮನರಂಜನೆಯ ಮಾಧ್ಯಮಗಳಲ್ಲೊಂದಾದ ಹಾಡುಗಳು ಸಾಮಾನ್ಯವಾಗಿ ಕೃಷಿ ಕಾರ್ಯಗಳೊಂದಿಗೆ ನಡೆಯುತ್ತಿದ್ದವು. ಉದಾ: ಉತ್ತುತ್ತ ಬಿತ್ತುತ್ತ ಹುಲ್ಲು

ಕೇಳುತ್ತ, ಕಳೆ–ಬೆಳೆಗಳನ್ನು ತೆಗೆಯುತ್ತಾ ಮನರಂಜಿಸುತ್ತಿದ್ದರು. ಜನಪದರು ದಿನದ ಹೆಚ್ಚಿನ ಸಮಯ ಕೃಷಿಯಲ್ಲಿಯೇ ಕಳೆಯುತ್ತಿದ್ದರಿಂದ ಹೆಚ್ಚಾಗಿ ಕೃಷಿಯಾಧಾರಿತ ಹಾಡುಗಳು ಮೂಡಿ ಬಂದಿವೆ. ಇಂಥ ಹಾಡುಗಳು ಜಿಲ್ಲೆಯ ಜನ ಜೀವನದ ಸೂಕ್ಷ್ಮ ಪದರುಗಳನ್ನು ಹಿಂಜಿ ಹಿಂಜಿ ಹೊರತಂದಿವೆ.

ಜನಪದರು ಹಾಡುಗಳಿಂದ ತಮ್ಮ ಬೌದ್ಧಿಕ ಬೆಳವಣಿಗೆಯ ಜೊತೆಗೆ ಚೇತನ ಶಕ್ತಿಯನ್ನು ಪಡೆದುಕೊಂಡಿದ್ದರಲ್ಲದೆ ಜೀವನದ ಸಿಹಿ–ಕಹಿ ಅನುಭವಗಳನ್ನು ಹಾಡುಗಳಲ್ಲಿ ಮನಮುಟ್ಟುವಂತೆ ಸೆರೆಹಿಡಿದು ಇಟ್ಟಿದ್ದಾರೆ. ಬೀದರ್ ಜಿಲ್ಲೆಯ ಗರತಿಯ ಹಾಡುಗಳನ್ನು ಇಲ್ಲಿ ನೋಡಬಹುದು,

ಸೆರಗ ತಲೆಗೆ ಸುತ್ತಿಕೊಂಡು
ವೀರಗಚ್ಚಿ ಹಾಕಿಕೊಂಡು
ಹುಲ್ಲು ಹೊರೆಯ ಹೊತ್ತಿಕೊಂಡು
ಉಡಿಯಲೇನೋ ಕಟ್ಟಿಕೊಂಡು
ಮೆಲ್ ಮೆಲ್ನೇ ಬರುತಾಳೆ
ಕೊಟೆಯೆ ಗರತಿ ಓ ಒಕ್ಕಲತಿ ॥ ೨ ॥

ಉತ್ತರಿ ಮಳೆ ಬಂದಾಗ
ಉಲ್ಲಾಸ ಮನದಾಗ
ಹಸಿಯಾಯ್ತು ಹೊಲದಾಗ
ಖುಷಿ ಬಂತು ನನಗೀಗ
ಉತ್ತಾಕ ಓ ಬಿತ್ತಾಕSS
ಉತ್ತಾಕ ಬಿತ್ತಾಕ ಹಿಂದೆ ಬಂದ
ಗರತಿ ಓ ಒಕ್ಕಲತಿ ॥ ೨ ॥

ಜೋಳದ ಬೀಜವ ಬಿತ್ತಿ
ಕಾಳು ಕಳೆ ಕಸ ಕಿತ್ತಿ
ತೆನೆ ಬಂತು ಭಾಳ
ಭರ್ತಿ ಕಾಳ್ ತೆಗೆ ಕೊಯ್ಸುತ್ತಿ
ಚೆಂದಾಗಿSS ಒಂದಾಗಿSS
ಹಿಂದೆ ಬಂದ ಗರತಿ ಓ ಒಕ್ಕಲತಿ

ಜೋಳದ ರಾಶವ ಮಾಡಿ
ಜೋಗಿಗೆ ದಾನವ ನೀಡಿ
ಕಾಳತಗದು ಬಣವಿ ಮಾಡಿ
ಭಂಡಿಗಿ ಭರ್ತೆವ ಮಾಡಿ
ಹೆಂಟ್ಯಾಗSS ಓSS ಕಂಟ್ಯಾಗ
ಹೆಂಟ್ಯಾಗ ಕಂಟ್ಯಾಗ
ನಗುತ ಬಂದ ಗರತಿ
ಓ ಒಕ್ಕಲತಿ.

ಸತಿ ಪತಿಗೊಳು ಜೊತೆಗೂಡಿ
ಹಿತಮತದಿ ನಲಿದಾಡಿ
ಅತಿ ಮುದದಿ ಮೈಗೂಡಿ
ಹಾಯಾಗಿ ಓ ತಾಯಾಗಿ
ಹಾಯಾದ ತಾಯಾದ ಸಮಾಜದ ಗರತಿ ಓ ಒಕ್ಕಲತಿ ॥ ೨ ॥ ೧೧

ಜಾನಪದ ಕೃಷಿ ಮಹಿಳೆ ತನ್ನ ಕಾಯಕಕ್ಕೆ ಅಡಚಣೆ ಆಗದಂತೆ ತಾನು ಹೊದ್ದುಕೊಂಡ ಸೀರೆಯನ್ನು ಬಿಗಿಯಾಗಿ ಕಟ್ಟಿಕೊಂಡು, ವೀರಗಚ್ಚೆ ಹಾಕಿ ಯುದ್ಧಕ್ಕೆ ಹೊರಟ ಯೋಧರ ನೆನಪಾಗಿಸುವಳು. ತಲೆಯ ಮೇಲೆ ಹುಲ್ಲಿನ ಹೊರೆ ಹೊತ್ತುಕೊಂಡು, ತನಗೆ ಬೇಕಾದ ವಸ್ತುವನ್ನು ಉಡಿಯಲ್ಲಿ ಕಟ್ಟಿಕೊಂಡು ವೀರಮಹಿಳೆ ಹೊಲಗದ್ದೆಗಳ ಕಡೆಗೆ ಮನೆಯಲ್ಲಿಯ ಕಾರ್ಯವೆಲ್ಲ ಮುಗಿಸಿಕೊಂಡು, ಬುತ್ತಿ ಕಟ್ಟಿಕೊಂಡು ಹೊರಡುವಳು. ಉತ್ತರೀ ಮಳೆ ಬಂದಾಗ ಹೊಲವೆಲ್ಲ ಹಸಿಯಾದಾಗ, ಕೃಷಿ ಮಹಿಳೆಗೆ ಹಿಡಿಸಲಾರದಷ್ಟು ಸಂತೋಷವಾಗುವುದು. ಉತ್ತುವುದಕ್ಕೆ, ಬಿತ್ತುವುದಕ್ಕೆ ಸಿದ್ಧವಾಗಿ ನಿಲ್ಲುವಳು. ಜೋಳ ಬಿತ್ತಿ, ಕಳೆ ಕೀಳಲು ಮಹಿಳೆ ಸದಾ ಹೊಲದಲ್ಲಿ ಕೆಲಸ ಮಾಡುತ್ತಿರುತ್ತಾಳೆ. ಕಾಳು, ಕಸ,ಕಡ್ಡಿ, ಕಳೆ ಎಲ್ಲವನ್ನೂ ಬೇರ್ಪಡಿಸಿ ಶುದ್ಧ ಮಾಡುವಳು. ಜೋಳದ ರಾಶಿ ಮಾಡಿ ಮೊದಲು ಜೋಗಿಗೆ ದಾನ ಕೊಡುವಳು. ನಂತರ ಭಂಡಿ ತುಂಬುವಳು. ಮುಳ್ಳಿನ ಕಂಟಿ, ಮಣ್ಣಿನ ಹೆಂಟೆ ಎನ್ನದೆ ಒಂದೇ ಸವನೆ ಕೆಲಸ ಮಾಡುವಳು. ಜೊತೆಗೆ ಪತಿಯನ್ನು ಸಹಕರಿಸುವಳು.

ಈ ರೀತಿ ಹೊಲದಲ್ಲಿ ಸದಾ ಕೆಲಸದಲ್ಲಿ ನಿರತಳಾಗಿರುವುದರಿಂದ ಅವಳಿಗೆ ದೈಹಿಕ ವ್ಯಾಯಾಮ ಉಂಟಾಗಿ, ರೋಗ ನಿರೋಧಕ ಶಕ್ತಿ ಹೆಚ್ಚಾಗಿ ಯಾವುದೇ ರೋಗಕ್ಕೆ ಆಸ್ಪದವಿರುವುದಿಲ್ಲ. ಈಗಿನ ಜನರಲ್ಲಿ ದೈಹಿಕ ಕಾರ್ಯ ಕಡಿಮೆಯಾಗಿ ರಕ್ತದೊತ್ತಡ, ಮಧುಮೇಹದಂತಹ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಈಗಿರುವ ಮೋಟಾರು, ಕಾರುಗಳು, ದ್ವಿಚಕ್ರವಾಹನಗಳು, ಮಿಕ್ಸರ್, ಗ್ರೈಂಡರ್‌ಗಳು ಮಾನವನ ದೈಹಿಕ ಕಾರ್ಯ ಸರಳಗೊಳಿಸಿ, ದೇಹಕ್ಕೆ ವ್ಯಾಯಾಮ ದೊರೆಯದಂತಾಗಿದೆ. ಆದುದರಿಂದ ದೇಹ ರೋಗಗಳ ಗುಡಾಣವಾಗಿದೆ. ಆದರೆ ರೈತರು ತನ್ನ ಕೃಷಿಕಾರ್ಯದಿಂದ ಸದಾ ಕಾಯಕದಲ್ಲಿ ಮಗ್ನನಾಗಿರುತ್ತಾರೆ. ಹೊಲದಲ್ಲಿ ಕಳೆ ಕೀಳುವುದರ ಕುರಿತು ಕೃಷಿಕ ಮಹಿಳೆಯರು ಈ ರೀತಿ ಹಾಡು ಹೇಳುತ್ತಾರೆ.

ಹೊಲ ಹೊಡದು ಮಾಡಪ್ಪ ಚಂದ
ವ್ಯರ್ಥ ದಿನಗಳಬ್ಯಾಡ ಅಂದ
ನಟ್ಟ ನಡವ ಕರಕಿಯ ಬೇರ
ಸುತ್ತ ಮುತ್ತ ಹರದದ ಪೂರ
ಘಟ ಒಡದು ಆಗ್ಯಾವ ಚಿಗರ
ಕಿತ್ತಿ ಕಡಿಗಿ ಭೀಟಪ್ಪ ದೂರ
ನಟ್ಟ ನಡವ ಜಿಗಳಿಯ ಥೇಕ
ತೆಗದು ಹೊಲ ಮಾಡಿನಿ ಪಾಕ
ಹಗಲು ಇರುಳು ಮಾಡಿದಿ ಕಷ್ಟ
ಸುಖ ಪಡೋದಿಲ್ಲ ಜಲುಮಕ ಇಷ್ಟ
ಸತ್ವ ಎಂಬ ಬೀಜವ ತರಿಸಿ

ಭೂಮಿಯಲ್ಲಿ ಉಕ್ಕರಿಸಿ
ಕಸಕಡ್ಡಿ ತಗಿಯವ್ವ ಸೂಸಿ
ತಗದು ನೀನು ಮಾಡವ್ವ ರಾಶಿ

ಭೂಮಿ ಪೃಥ್ವಿ ಆಕಾಶ
ಭಕ್ತಿ ಎಂಬ ಬೀಜ ಸಾರ
ಹಾಡುವಾಕಿನ ಕರಪಾ ಪೂರ
ಕಳಿಕಿತ್ತ್ಯಾಳ ಹಸನ ಪೂರ. ೧೨

ಕೃಷಿ ಕಾರ್ಮಿಕ ಮಹಿಳೆಯರಲ್ಲಿ ಸಮಾಜದ ಎಲ್ಲಾ ವರ್ಗದ ಎಲ್ಲಾ ಜಾತಿಯ ಸ್ತ್ರೀಯರನ್ನು ಕಾಣುತ್ತೇವೆ. ಕೃಷಿಯಲ್ಲಿನ ಎಲ್ಲ ಧಾರ್ಮಿಕ ಆಚರಣೆಗಳು ಹೆಣ್ಣಿನಿಂದಲೇ ಪ್ರಾರಂಭವಾಗುತ್ತವೆ. ಅವುಗಳು ಆಚರಣೆಗೆ ತರುವುದು ಸ್ತ್ರೀಯರೆ, ಉತ್ತಿ, ಬಿತ್ತಿ ಕಳೆ ತೆಗೆದು, ರಾಶಿಮಾಡುವಾಗ ಅನೇಕ ವಿಧಿ ಆಚರಣೆಗೆ ತರುತ್ತಾರೆ. ಮುಂಗಾರು ಮಳೆಯ ಆರಂಭದಲ್ಲಿ ಬಿತ್ತನೆಯ ಕಾಲ ಪ್ರಾರಂಭ. ಆಗ ಮನೆಯ ಸ್ತ್ರೀಯರೇ ಬಿತ್ತನೆಯ ಕಾರ್ಯಕ್ರಮದ ಎಲ್ಲಾ ವಿಧಿ ಆಚರಣೆಗಳನ್ನು ನೆರವೇರಿಸುತ್ತಾರೆ. ಸುಗ್ಗಿ ಕಾಲ ಮುಗಿಯುವವರೆಗೂ ಕೃಷಿಯಲ್ಲಿ ನಿರತಳಾಗಿ ದಣಿವಿಲ್ಲದೇ ದುಡಿಯಲು ತನ್ನನ್ನು ತಾನು ಕಾಯಕದಲ್ಲಿ ತೊಡಗಿಸಿಕೊಳ್ಳುತ್ತಾಳೆ. ಆಯಾಸವಾಗದಂತೆ ದೈಹಿಕ ಹಾಗೂ ಮಾನಸಿಕವಾಗಿ ದಣಿವಿನ ಅರಿವು ಆಗದಂತೆ ಕೆಲಸದ ಜೊತೆ ಜೊತೆಗೆ ಮನಸ್ಸು ಮನರಂಜನೆಯ ಕಡೆಗೆ ತಿರುಗಿಸಲು ಕೃಷಿ ಸಂಬಂಧಿತ, ಭೂಮಿ ತಾಯಿಯ ಸಂಬಂಧಿತ, ಇಲ್ಲವೇ ಜೀವನದಲ್ಲಿ ಎದುರಿಸಿದ ಬವಣೆಗಳ ಬಗ್ಗೆ, ಸುಖ ದುಃಖದ ಬಗ್ಗೆ ಹಾಡಿನ ರೂಪದಲ್ಲಿ ಹಾಡು ಕಟ್ಟಿ ಹೇಳುವುದರೊಂದಿಗೆ ಮನಸ್ಸಿನ ಭಾರ ಕಡಿಮೆ ಮಾಡಿಕೊಳ್ಳುವಳು ಹಾಗೆಯೇ ದಣಿವಿನ ಪರಿಣಾಮ ಆಗದಂತೆ ಮನಸ್ಸು ಹಾಡಿನತ್ತ ಕೇಂದ್ರೀಕರಿಸುತ್ತಾಳೆ. ಕೆಲವು ಹಾಡುಗಳು ಉಪದೇಶದಂತೆಯೂ, ಸಂವಾದದಂತೆಯೂ, ಮಾರ್ಗದರ್ಶನದಂತೆಯೂ ವಿವರಿಸುತ್ತಾ ಹಾಡುಗಳನ್ನು ಹೇಳಿ ಆಯಾಸ ಕಳೆದುಕೊಳ್ಳುವಳು.

ಜನಪದ ಮಹಿಳೆಯು "ಕೈ ಕೆಸರಾದರೆ ಬಾಯಿ ಮೊಸರು" ಎನ್ನುವಂತೆ ಹೊಲಗದ್ದೆಗಳಲ್ಲಿ ಕೆಸರು, ಮಣ್ಣು, ಕಲ್ಲು ಎನ್ನದೆ ಸತತವಾಗಿ ದುಡಿಯುತ್ತಾಳೆ. ಮಳೆ, ಚಳಿ, ಬಿಸಿಲೆನ್ನದೆ ಮೈಯೊಡ್ಡಿ ಕೆಲಸ ಮಾಡುತ್ತಾಳೆ. ಅದರ ಪ್ರತಿಫಲವಾಗಿಯೇ ಸಮೃದ್ಧವಾದ ಬೆಳೆ ಬೆಳೆದು ರೈತನ ಬಾಳನ್ನು ಬೆಳಗುತ್ತಾಳೆ. ಕಪ್ಪಾದ ಮಣ್ಣಿನ ಹೊಲಗದ್ದೆಗಳಲ್ಲಿ ರೈತ ನೇಗಿಲು ಹೊಡೆಯುತ್ತಾನೆ. ರೈತಮಹಿಳೆ ಕೈಯೆಲ್ಲಾ ಕೆಸರು ಮಾಡಿಕೊಂಡು ಹೊಲದಲ್ಲಿರುವ ಕಳೆಕೀಳುತ್ತಾಳೆ. ಮೇಲೆ ಆಕಾಶದಲ್ಲಿ ಮೋಡ ಕವಿದು ಮಿಂಚು ಥೈ ಥೈ ಎಂದು ನರ್ತನ ಮಾಡುತ್ತವೆ. ಗುಡುಗು ಢೋಲು ಬಾರಿಸಿದಂತೆ ಒಂದೇ ಸಮನೆ ಶಬ್ದ ಮಾಡುತ್ತಿದೆ. ಸದಾಶಿವನಾದ ರೈತನು ಜೋಡಿ ಎತ್ತುಗಳನ್ನು ಜೋರಾದ ಶಬ್ದದಲ್ಲಿ ಹೂಂಕರಿಸಿ ಮುಂದೆ ಸಾಗುವಂತೆ ಧ್ವನಿ ಎತ್ತಿ ಬೆದರಿಸುತ್ತಿದ್ದಾನೆ. ಜೊತೆಗೆ ಪಾರ್ವತಿ ಹೊಟ್ಟೆಗೆ ಬೀಜದ ಗಂಟನ್ನು ಕಟ್ಟಿಕೊಂಡಿದ್ದಾಳೆ. ಮೇಲಿಂದ ಮೇಲೆ ಮಳೆಯ ಝಡಿ ಬರುತ್ತಲೇಇದೆ. ಮಳೆಯ ಪ್ರವಾಹದಲ್ಲಿ ಎಲ್ಲವೂ ಹರಿದು ಕೊಚ್ಚಿಕೊಂಡು ಹೋಗುತ್ತಿದೆ. ಮಣ್ಣಿನ ವಾಸನೆಯೊಳಗಿಂದ ಕಸ್ತೂರಿಯ ಸುವಾಸನೆ ಸೋಸುತ್ತಿದೆ. ಆ ಸುವಾಸನೆಯಲ್ಲಿ ಮನಸ್ಸು ಎಲ್ಲವನ್ನು ಮರೆತು ಕಾರ್ಯದಲ್ಲಿ ತಲ್ಲೀನವಾಗಿದೆ. ಕಣ್ಣು ರಾಘವನ ಬರವನ್ನೇ ಎದುರು ನೋಡುತ್ತಿದೆ.

ರೈತನು ತನ್ನ ಢವಳ, ಪವಳ ಎಂಬ ಎರಡೆತ್ತಿನ ಜೊತೆಗೆ ಬೆವರು ಸುರಿಸಿ ದುಡಿಯುತ್ತಿದ್ದಾನೆ. ರೈತ ಮಹಿಳೆಯು ಗಂಡನನ್ನು ಅನುಸರಿಸಿಕೊಂಡು ಹೊಲದ ಕೆಸರಿನಲ್ಲಿ ಕೆಲಸ ಮಾಡುತ್ತಿದ್ದಾಳೆ. ಅವಳ ಬೆವರು ಭೂಮಿಯ ಮೇಲೆ ಬಿದ್ದು ಅಭಿಷೇಕವಾಗುವುದು. ಮಣ್ಣಲ್ಲಿ ಬಿದ್ದ ಬೆವರಿನಿಂದ ಜೋಳದ ಬೀಜ ಬಂಗಾರದಂತೆ ಜುಮ್ಮೆಂದು ಸಮೃದ್ಧವಾಗಿ ಬೆಳೆದು ನಿಂತಿತು. ಆ ತಾಯಿ ತಾನು ಕೆಲಸದಲ್ಲಿ ನಿರತಳಾದಾಗ ತನ್ನ ಮಗುವನ್ನು ಗಿಡದ ನೆರಳಲ್ಲಿ ಜೋಳಿಗೆಯನ್ನು ಕಟ್ಟಿ ಮಲಗಿಸಿದ್ದಾಳೆ. ಕಣ್ಣು ಮುಚ್ಚಾಲೆಯಂತೆ ಬಿಸಿಲು ನೆರಳಿನ ಆಟವಾಗಿದೆ. ನೀರು ಬಿದ್ದು ಮಣ್ಣು ಬೆಣ್ಣೆಯಂತೆ

ನುಣುಪಾಗಿದೆ. ಅದರಲ್ಲಿ ಮಹಿಳೆಯು ಕಾಲೂರಿದಾಗ ಕೆಸರಲ್ಲಿರುವ ಮುಳ್ಳು ಅವಳ ಕಾಲಿಗೆ ಚುಚ್ಚಿ ಮುರಿಯಿತು. ಮುಳ್ಳು ಕಾಲಲ್ಲಿ ನಟ್ಟು, ರಕ್ತ ಬಂದರೂ ಮಹಿಳೆ ಕೆಲಸ ಬಿಡದೆ ಹಾಗೇಯೇ ಮಾಡುತ್ತಿದ್ದಾಳೆ. ಇದರಿಂದ ಭೂಮಿಯಲ್ಲಿ ಬೀಜ ಝುಮ್ಮೆಂದು ಸಮೃದ್ಧವಾಗಿ ಬೆಳೆದು ನಿಂತಿತು. ಮಾನವ ತನ್ನ ಎರಡು ಕೈಗಳಿಂದ ಕೆಲಸ ಮಾಡಿ ಇಡೀ ಜೀವ ಜನಾಂಗವನ್ನೇ ಜೀವಂತವಾಗಿಡಲು ಪ್ರಯತ್ನಿಸುವನು. ಈ ಪ್ರಾಂತ್ಯದ ಜಾನಪದ ಹಾಡುಗಳು ಜಾನಪದರ ಸಾಂಸ್ಕೃತಿಕ ಆಯಾಮಗಳನ್ನು ವಿಭಿನ್ನ ನೆಲೆಯಲ್ಲಿ ಅನಾವರಣಗೊಳಿಸುತ್ತವೆ.

೫.೪ ಒಗಟಿನ ಹಾಡುಗಳು:

ಒಗಟು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಸಾಹಿತ್ಯ ಪ್ರಕಾರವಾಗಿದೆ. ಇದು ವಿಶ್ವವ್ಯಾಪಕವಾದದ್ದೂ ಹೌದು. ಜನಪದ ಸಾಹಿತ್ಯ ಹಾಗೂ ಶಿಷ್ಟಸಾಹಿತ್ಯ ಎರಡರಲ್ಲೂ ಒಗಟು ಬಳಕೆಯಲ್ಲಿದೆ. ಗ್ರೀಕ್‌ನ ಸಿಫೋಸಿಯಸ್ ಒಂದು ನೂರು ಒಗಟುಗಳನ್ನು ಹೆಕ್ಸಾಮೀಟರಿನಲ್ಲಿ ಬರೆದಿದ್ದನಂತೆ. ಇದನ್ನು ಒಗಟುಸಾಹಿತ್ಯದ ಪ್ರಾಚೀನ ಉಲ್ಲೇಖ ಎಂದು ಹೇಳಲಾಗಿದೆ. ಪ್ರಾಚೀನ ಸಂಸ್ಕೃತಿಗಳಲ್ಲೆಲ್ಲಾ ಒಗಟಿನ ಉಲ್ಲೇಖಗಳಿವೆ.[೧೩] ಭಾರತದಲ್ಲಿ ಒಗಟಿಗೆ ವೇದಕಾಲದ ಹಿಂದಿನ ಇತಿಹಾಸವಿದೆ. ಭಾರತದ ಒಗಟುಗಳಲ್ಲಿ ವೈವಿಧ್ಯತೆ ಹೆಚ್ಚು. ಸಂಸ್ಕೃತಿಗೆ ಅನುಗುಣವಾಗಿ ಇಲ್ಲಿಯ ಒಗಟುಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಅವುಗಳು ವೈದಿಕ, ಬೌದ್ಧ, ಜೈನ ಹಾಗೂ ಇತರ ಒಗಟುಗಳು. ಇಲ್ಲಿ ಎಲ್ಲ ಒಗಟುಗಳಿಗೆ ವೈದಿಕ ಒಗಟುಗಳು ಮೂಲವಾಗಿವೆ. ಇತರ ಒಗಟುಗಳಲ್ಲಿ ಜನಪದ ಒಗಟುಗಳನ್ನು ವಿಶೇಷವಾಗಿ ಗಮನಿಸಬಹುದು.[೧೪]

ಕನ್ನಡ ಕಾವ್ಯಗಳಲ್ಲಿ, ಶಿವಶರಣರ ವಚನಗಳಲ್ಲಿ ಒಗಟಿನ ಲಕ್ಷಣಗಳು ಇವೆ. ಅಲ್ಲಮಪ್ರಭು, ಅಕ್ಕಮಹಾದೇವಿ, ಸರ್ವಜ್ಞ ಮೊದಲಾದವರ ಬೆಡಗಿನ ವಚನಗಳಲ್ಲಿ ಇಂಥವುಗಳನ್ನು ಕಾಣಬಹುದು. ಇವು ಶುದ್ಧವಾದ ಜನಪದವಲ್ಲದಿದ್ದರೂ ಒಗಟಿನ ಛಾಯೆಯನ್ನು ಹೊಂದಿವೆ. ಹಾಗೆ ನೋಡಿದರೆ ಒಗಟು ಬುದ್ಧಿವಂತಿಕೆಯ ರಚನೆ. ಮನುಷ್ಯ ಸುತ್ತು ಬಳಸಿ ರಹಸ್ಯಾರ್ಥವಿಟ್ಟು ಮಾತಾಡುವುದು ಸಾಮಾನ್ಯ ಒಂದಲ್ಲ ಒಂದು ಸಂದರ್ಭದಲ್ಲಿ, ಮಾತುಕತೆ ಬರವಣಿಗೆಯಲ್ಲಿ ಒಗಟುತನ ಕಂಡು ಬರುತ್ತವೆ.[೧೫] ಒಗಟಿನ ಬಗ್ಗೆ ಅರಿಸ್ಟಾಟಲ್‌ರು ಈ ರೀತಿ ಹೇಳಿದ್ದಾರೆ "ಒಗಟಿಗೂ ರೂಪಕಕ್ಕೂ ನಿಕಟ ಸಂಬಂಧ. ರೂಪಕಗಳ ಸರಣಿಯೇ ಒಗಟು" ಅದನ್ನೇ ಸಿ.ಎಫ್ ಪಾಟರ್ ರವರು ಈ ರೀತಿ ನುಡಿದಿರುವರು. "ಒಗಟು ಬಡತನಕ್ಕೆ ಅಸಮಾಧಾನವನ್ನು, ಶ್ರೀಮಂತಿಕೆಗೆ ವಿರೋಧವನ್ನು ವ್ಯಕ್ತಪಡಿಸುವ ಕ್ಷೇಮಕಾರಿ ವಾಹಕ"[೧೬]

"ಜನಪದ ಸಾಹಿತ್ಯದಲ್ಲಿ ಗಾದೆಗಳಷ್ಟೇ ಮಹತ್ವದ ಮತ್ತೊಂದು ಪ್ರಕಾರ ಒಗಟುಗಳು" ಮಾನವನ ಚತುರ ಬುದ್ಧಿಗೆ ಒಸಗೆ ಹಾಕುವ ಅತಿ ಮುಖ್ಯ ಸಾಧನವೆಂದರೆ ಒಗಟುಗಳೆಂದೇ ಹೇಳಬೇಕು. ಒಡಿಯನ್ನು ಇಡಿಯಾಗಿಸುವ ಗುಣ ಈ ಒಗಟುಗಳಿಗಿವೆ. ಜಾನಪದ ಗದ್ಯ ಸಾಹಿತ್ಯದ ಕಕ್ಷೆಯಲ್ಲಿ ಬರುವ ಪ್ರಕಾರಗಳಲ್ಲಿ 'ಒಗಟು' ಮುಖ್ಯವಾದದ್ದು. ಪ್ರಾಚೀನ ಕಾಲದಲ್ಲಿ ಪ್ರಹೇಳಿಕೆ ಎಂಬ ಹೆಸರಿನಿಂದ ವಿದ್ವಾಂಸರ ಮಂಡಳಿಯಲ್ಲಿ ವ್ಯವಹರಿಸುವ ಈ ಪ್ರಕಾರ ಸಾಮಾನ್ಯರ ಮಟ್ಟದಲಿ 'ಒಗಟು' ಎಂಬ ಹೆಸರಿನಿಂದ ವ್ಯವಹರಿಸಿದೆ. ಒಗಟುಗಳು ರಚನೆಯಲ್ಲಿ ಅತ್ಯಂತ ಚಿಕ್ಕವು. ಆದರೆ ಅವುಗಳ ಸಾಲಂಕೃತ ಅಭಿವ್ಯಕ್ತಿ ತಂತ್ರ ಅವುಗಳನ್ನು ವ್ಯಾಪಕ ವಿಶ್ಲೇಷಣೆಗೆ ಗುರಿಪಡಿಸಿರುವುದುಂಟು. ಮುರಾಂಡ ಪ್ರಕಾರ ರಾಚನಿಕ ವಿಶ್ಲೇಷಣಾ ಕ್ರಮಕ್ಕೆ ಸರಳ ಒಗಟುಗಳು ಹೆಚ್ಚು ಒಗ್ಗುವಂಥವಾಗಿದ್ದು ಅಧ್ಯಯನ ಯೋಗ್ಯವಾಗಿವೆ.

ನಮ್ಮವರು ತಮ್ಮ ಬಾಳಿನ ಅನುಭವದಿಂದ ಒಗಟುಗಳನ್ನು ಸೃಷ್ಟಿಸಿದ್ದಾರೆ. ಕಲ್ಪನಾ, ವಿಲಾಸ, ಬುದ್ಧಿಯ ಲೀಲಾ ವೈವಿಧ್ಯ ಮತ್ತು ಪ್ರತಿಭೆಯ ವಿಶ್ವರೂಪ ವ್ಯಕ್ತವಾಗುವ ಸುಂದರ ಮಾಧ್ಯಮಗಳೇ ಒಗಟುಗಳೆಂದು ಜವರೇಗೌಡರು ಹೇಳಿದ್ದಾರೆ. ಮೊದಲಿನಿಂದಲೂ ನಮ್ಮ ಜನ ಒಗಟುಗಳ

ಪ್ರೀಯರಾಗಿದ್ದಾರೆ. ಜಾನಪದ ಗದ್ಯ ಸಾಹಿತ್ಯದ ಕಕ್ಷೆಯಲ್ಲಿ ಬರುವ ಪ್ರಕಾರಗಳಲ್ಲಿ "ಒಗಟು" ಮುಖ್ಯವಾದದ್ದು. ಇದು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಸಾಹಿತ್ಯ ಪ್ರಕಾರವೂ ಆಗಿದೆ. ಋಗ್ವೇದದ ಮಂಡಲಗಳಲ್ಲಿ ಪ್ರತಿಮಾ ರೀತಿಯ ಹಾಗೂ ಪ್ರಶ್ನೋತ್ತರ ರೀತಿಯ ಒಗಟುಗಳಿವೆ. ವೈದಿಕ ಸಾಹಿತ್ಯದಲ್ಲಿ ಅಧ್ಯಾತ್ಮಿಕ ಪ್ರತಿಮಾ ರೀತಿಯ ಹಾಗೂ ಪ್ರಶ್ನೋತ್ತರ ರೀತಿಯ ಒಗಟುಗಳಿವೆ. ವೈದಿಕ ಸಾಹಿತ್ಯದಲ್ಲಿ ಅಧ್ಯಾತ್ಮಿಕ ಒಗಟಿನ ರಚನೆಯಿದೆ. ಪ್ರಾಚೀನ ಕಾಲದ ಸಂಸ್ಕೃತ, ಪ್ರಾಕೃತ ಸಾಹಿತ್ಯದಲ್ಲಿ ಒಗಟು ಹೇರಳವಾಗಿವೆ. ಒಗಟಿಗೆ ಒಡಪು, ಒಂಟು, ಒಡಗತೆ, ವಡಚುಕಥೆ ಎಂಬ ಪದಗಳಿವೆ.[೧೭]

ಒಗಟುಗಳಲ್ಲಿ ಆರು ಲಕ್ಷಣಗಳು ಕಾಣಬಹುದು. ಪದದಲ್ಲಿ ಕ್ಲಿಷ್ಟತೆಯಿರುವ ಒಗಟುಗಳು, ಗೂಢಾರ್ಥ ದ್ಯೂತಕ, ಚಿತ್ರಶಬ್ದ, ಪದ ಸಮಸ್ಯೆ ನಾಡುನುಡಿ, ಗಣಿತ ಪ್ರಧಾನ ಇವುಗಳಲ್ಲದೆ ಇನ್ನು ಅನೇಕ ಬಗೆಯ ಒಗಟುಗಳಿವೆ. ಬೌದ್ಧಿಕ ಚಾತುರ್ಯತೆ, ಪಾಂಡಿತ್ಯಪೂರ್ಣತೆ, ಒಗಟುಗಳ ವೈಖರಿಯಾಗಿದೆ. ಇವುಗಳು ನಮ್ಮ ಜನಜೀವನದ ಬಾಳಿನ ಅನುಭವದಿಂದ ಹುಟ್ಟಿದಂಥವು. ಇವುಗಳಲ್ಲಿ ಒಡ್ಡುವ ಮತ್ತು ಒಡೆಯುವ ಎರಡು ಕ್ರಿಯೆಗಳು ನಡೆಯುತ್ತವೆ. ಪ್ರಶ್ನೋತ್ತರ, ಸವಾಲು – ಜವಾಬುಗಳ ರೀತಿಯಲ್ಲಿ ವ್ಯವಹರಿಸುತ್ತವೆ. ಬದುಕಿನ ನೋವು–ನಲಿವು, ಆಸರ–ಬೇಸರಗಳಲ್ಲಿ ಹಾಗೂ

ಒಗಟುಗಳು ಬಳಕೆಯಾಗುತ್ತವೆ. ಒಗಟು ಬಿಡಿಸಲಿಕ್ಕೆ ಬರುವವರಿಗೆ ಬಾಳಿನ ಸಮಸ್ಯೆ ಬಿಡಿಸಲಿಕ್ಕೂ ಬರುವುದೆಂಬ ಹಿರಿಯರ ಅನುಭವದ ಮಾತೊಂದಿದೆ. ಬೌದ್ಧಿಕ ಬೆಳವಣಿಗೆಗೆ ಉತ್ತೇಜನಕಾರಿಯಾದ ಜನಪದ. ಒಗಟುಗಳು ಎಲ್ಲಾ ದೇಶ, ಜಾತಿ, ಜನಾಂಗದಲ್ಲಿಯೂ ದೊರೆಯುತ್ತವೆ. ಜೊತೆಗೆ ಅವರವರ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ.

ಉದಾ:

ಆ ನಾಡಿಂದ್ ಈ ನಾಡಿಗ್ ಬಂದೇವಕ್ಕ
ಬಂದು ಬಂದು ಬಾಗಿಲಿಗಿ ಬಿದ್ದೇವಕ್ಕ

ತೇಗಿನ ಮಠದಾಗ್ ಇಳದೇವಕ್ಕಾ
ಚೀನರು ಬಂದು ಧಡಕಿ ಹೊಡ್ದರ
ಮಕ್ಕಳು ಮರಿಗಳು ಸತ್ತೇವಕ್ಕಾ[೧೮] (ಜೇನು)

ಒಗಟುಗಳ ಅಧ್ಯಯನವೆಂದರೆ ಪ್ರಾಚೀನ ಸಂಸ್ಕೃತಿಯ ಅಧ್ಯಯನವೇ ಆಗಿದೆ. ಪುರಾತನ ಜೀವನದ ಮೇಲೆ ಬೆಳಕು ಚೆಲ್ಲುವ ಸಾಕಷ್ಟು ಒಗಟುಗಳು ದೊರೆಯುತ್ತವೆ. ಒಗಟುಗಳನ್ನು ಕೇಳುವ ಮತ್ತು ಹೇಳುವ ಪ್ರಕ್ರಿಯೇ ಸಾಂಸ್ಕೃತಿಕ ಚಟುವಟಿಕೆಯಲ್ಲೊಂದಾಗಿದೆ. ಇಲ್ಲಿ ಒಬ್ಬರಿಗೊಬ್ಬರು ಅನ್ಯೋನ್ಯವಾಗಿ, ಹಿತದಿಂದ, ಆತ್ಮೀಯತೆಯಿಂದ ಬೆರೆಯುವುದರಿಂದ ಬಾಂಧವ್ಯದ ಬೆಳವಣಿಗೆಯ ಜೊತೆಗೆ, ವಿಚಾರಗಳ ಚಿಂತನ ಮಂಥನವು ನಡೆಯುತ್ತದೆ. ಅಷ್ಟೇ ಅಲ್ಲದೆ ಮಕ್ಕಳ ಕುತೂಹಲವನ್ನೂ ಕೆರಳಿಸುವ, ಬುದ್ಧಿಶಕ್ತಿಯನ್ನು ಅರಳಿಸುವ ಸಾಮರ್ಥ್ಯವನ್ನು ಹೊಂದಿರುವ ಒಗಟುಗಳು ಅವರ ವ್ಯಕ್ತಿತ್ವವನ್ನು ಹರಿತಗೊಳಿಸುತ್ತವೆ.

ಒಗಟು ಜನಸಾಮಾನ್ಯರ ಪ್ರತಿಭೆ ಹಾಗೂ ಕಲ್ಪನಾ ಸಾಮರ್ಥ್ಯವನ್ನು ಎತ್ತಿ ತೋರಿಸುವ ಪ್ರಮುಖ ಸಾಹಿತ್ಯ ಪ್ರಕಾರ. ಒಗಟುಗಳಲ್ಲಿ ಸಾಂಕೇತಿಕತೆ, ರೂಪಕ, ಚತುರೋಕ್ತಿ, ಹಾಸ್ಯ, ವಿಡಂಬನೆ, ಪ್ರಾಸ ಮೊದಲಾದ ಲಕ್ಷಣಗಳಿವೆ. ಮಾನವನ ವ್ಯವಸ್ಥಿತ ಆಲೋಚನೆಯ ಫಲವೇ ಈ ಒಗಟುಗಳು. ಮಾತಿನ ಸಂಪ್ರದಾಯದಲ್ಲಿ ಒಗಟುಗಳೇ ಪ್ರಾಚೀನತಮವೆಂದು ಪಂಡಿತರು ಅಭಿಪ್ರಾಯಪಡುತ್ತಾರೆ. ಇಂದು ಈ ಒಗಟುಗಳು ಬುದ್ಧಿ ಪರೀಕ್ಷೆಯ ಒರೆಗಲ್ಲುಗಳಾಗಿ ನಿಂತಿವೆ. ಇವು ಬಾಳಿನ ಕಗ್ಗಂಟನ್ನು ಬಿಡಿಸಲು ಸಹ

ಸಹಕಾರಿಯಾಗಬಲ್ಲವು ಎಂಬ ನಂಬಿಗೆಯೂ ಹಲವರಲ್ಲಿದೆ. ಮಾನವನು ಪ್ರಕೃತಿಯಲ್ಲಿ ತಾನು ಕಂಡ ವಸ್ತುವಿನಂತಹ ಇನ್ನೊಂದು ವಸ್ತು ಇರಬೇಕೆಂದು ಭಾವಿಸಿದ. ವ್ಯಕ್ತರೂಪದ ವಸ್ತುವಿನ ನೆರವಿನಿಂದ ಅವ್ಯಕ್ತ ರೂಪದ ವಸ್ತುವನ್ನು ಹುಡುಕತೊಡಗಿದ. ಆಗ ಮಾಡಿದ ಅಲೋಚನೆಗಳಲ್ಲಿ ಹುಟ್ಟಿ ಬಂದವುಗಳೇ ಒಗಟುಗಳು.

"ವಿನೋದದ ಜೊತೆಗೆ ಬುದ್ಧಿಯನ್ನು ಹರಿತಗೊಳಿಸಿದ ಜನಪದ ಸಾಹಿತ್ಯದ ಒಂದಂಗ ಒಗಟು ಒಡ್ಡಿದ ಪ್ರಶ್ನೆಗೆ, ಸವಾಲಿಗೆ ಉತ್ತರ (ಜವಾಬು) ಹೇಳುವುದೇ ಒಗಟಿನ ಮೂಲಮಂತ್ರ" ಒಗಟು

ಪಾಂಡಿತ್ಯದ ಜಾಲದಲ್ಲಿ ಸಿಲುಕಿಕೊಂಡು ಬುದ್ಧಿಗೆ ಶರಣುಹೊಕ್ಕು ಬರುವಂಥಹದು. ಅಂತೆಯೇ ಬುದ್ಧಿಯ ಕಸರತ್ತಿನ. ಪಾಂಡಿತ್ಯದ ಪ್ರತೀಕವಾಗಿದೆ. ಮಾನವ ಶಾಸ್ತ್ರಕ್ಕೆ ಪುರಾತನ ಜನಾಂಗ ನೀಡುವ ಕಾಣಿಕೆಯೆನಿಸಿದೆ. ಲೋಕ ಪರಿಜ್ಞಾನದ, ವಿದ್ವತ್ತಿನ, ಬೌದ್ಧಿಕ ಬೆಳವಣಿಗೆಯ, ಅಲೋಚನಾ ಶಕ್ತಿಯ, ತರ್ಕಬದ್ಧ ಸರಣಿಯ ಚತುರತನಕ್ಕೆ ಸಂಕೇತವಾಗಿದೆ. ಈ ಒಗಟನ್ನು ಬಿಡಿಸಬಲ್ಲವರು ಬದುಕಿನ ಒಗಟುಗಳನ್ನು ಬಿಡಿಸುತ್ತಾರೆಂಬುದೇ ತಾತ್ವಿಕ ಅರ್ಥವಾಗಿದೆ.

ಪ್ರಯತ್ನಶೀಲರಾದ ಬುದ್ಧಿವಂತರು ಒಗಟು ಒಡ್ಡುವ, ಒಡೆಯುವ ಹವ್ಯಾಸಕ್ಕಿಳಿದು ಹಾಸ್ಯದ ಹೊನಲನ್ನು ಹರಸುತ್ತಾರೆ. ಸಂತೋಷಪಡುತ್ತಾರೆ. ಮಕ್ಕಳಂತೂ ಛಲತೊಟ್ಟು ಹೇಳಿ ಕೇಳಿ ನಲಿನಲಿದಾಡುತ್ತಾರೆ. ಅನೇಕ ಒಗಟುಗಳು ಹಾಡಿನ ರೂಪದಲ್ಲಿಯೂ ರಚಿತವಾಗಿವೆ ಅಂತಹ ಕೆಲವು ಹಾಡುಗಳು ಈ ರೀತಿಯಾಗಿವೆ.

ಕೊಲ್ ಕೊಲ್ ಕೊಲ್ ಕೊಲ್ ಕೋಲು ಕೋಲ
ಒಬ್ಬನ ಕಟ್ಟಿದ್ದೆ ಒಬ್ಬನ ಬಿಟ್ಟಿದ್ದೆ ಒಬ್ಬನ ಕರಕೊಂಡು
ಒಳಗ್ಹೋದೇನೋ ಕೊಲ್ ಕೊಲ

ಯಾವನ ಕಟ್ಟಿದ್ದೆ ಯಾವನ ಬಿಟ್ಟಿದ್ದೆ

ಯಾವನ ಕರಕೊಂಡು ಒಳಗ್ಹೋದೆ

ಕೊಲ್ ಕೊಲ

ಹಸುವನ್ನು ಕಟ್ಟಿದ್ದೆ ಕರುವನ್ನು ಬಿಟ್ಟಿದ್ದೆ

ಹಾಲನ್ನು ಕರಕೊಂಡು ಒಳಗ್ಹೋದೇನೋ

ಕೋಲು ಕೋಲ

. . . .
ಒಬ್ಬನ್ಗೆ ಕಾಲ್ ಕೊಟ್ಟೆ ಒಬ್ಬನ್ಗೆ ಕೈಕೊಟ್ಟೆ
ಒಬ್ಬನ್ನ ಸೀರೆಯ ಬಿಚ್ಚಿಕೊಟ್ಟೆ ಕೊಲ್ ಕೋಲ
ಯಾವನ್ಗೆ ಕಾಲ್ ಕೊಟ್ಟೆ ಯಾವನ್ಗೆ ಕೈಕೊಟ್ಟೆ
ಯಾವನ್ಗೆ ಸೀರೆಯ ಬಿಚ್ಚಿಕೊಟ್ಟೆ ಕೋಲು ಕೋಲ

ಕಂಚಗಾರ್ಗೆ ಕಾಲ್ ಕೊಟ್ಟೆ ಬಳಗಾರ್ಗ ಕೈಕೊಟ್ಟೆ

ಮಡಿವಾಳ್ಗೆ ಸೀರೆಯನ್ನೇ ಬಿಚ್ಚಿಕೊಟ್ಟೆ ಕೋಲುಕೋಲ.[೧೯]

ಈ ರೀತಿ ಒಗಟುಗಳಿಂದ ಪ್ರತಿಭೆ ಗರಿಗೆದರುತ್ತದೆ. ಇದರಿಂದ ಭಾಷಾ ವೈಖರಿ ಹೆಚ್ಚುತ್ತದೆ. ಬುದ್ಧಿ ಭಾವನೆಗಳ ಬೆರಕೆಯಾಗುತ್ತದೆ. ತಿರುಳಿನ ನುಡಿಗಳಿಂದಾಗಿ ತತ್ವದರ್ಶನ ಉಂಟಾಗುತ್ತದೆ. ಕಲ್ಪನೆ, ಭಾವನೆ, ಚಿತ್ರಶಕ್ತಿಗಳಿಗೆ ಚಾಲನೆ ಸಿಕ್ಕುತ್ತದೆ, ನುಡಿಯ ಬೆಡಗಿನಿಂದ ಭಾಷಾ ಅಲಂಕಾರಪೂರ್ಣವಾಗಿ ತಲೆದೋರುತ್ತದೆ. ಮಕ್ಕಳ, ನಿರಕ್ಷರಿ ಜನತೆಯ ಮುಗ್ಧ ಮನಸ್ಸು ಚೇತರಿಸಿಕೊಳ್ಳುತ್ತದೆ. ಸೂಕ್ಷ್ಮ

ನಿರೀಕ್ಷಣಾ ಸಾಮರ್ಥ್ಯಕ್ಕೆ ಒಪ್ಪವಿಟ್ಟಂತಾಗುತ್ತದೆ. ಜಾನಪದ ಕ್ಷೇತ್ರದ ಈ ಒಗಟುಗಳು ಬುದ್ಧಿಶಾಲಿಗಳ ಒರೆಗಲ್ಲಾಗಿವೆ. ಹಾಸ್ಯರಸದ ತವನಿಧಿಯಾಗಿ ಬೆಳೆದು ಬಂದಿವೆ.

೫.೫ ಭಜನೆ, ತತ್ವಪದ ಹಾಡುಗಳು:

ಮನುಷ್ಯನು ಬದುಕಿನಲ್ಲಿ ತನಗಾದ ಅನುಭವಗಳನ್ನು ನಾದ, ಲಯ, ಮತ್ತು ಶಬ್ದದ ಮೂಲಕ ಅಭಿವ್ಯಕ್ತಿಗೊಳಿಸಿದಾಗ ಅದು ಹಾಡಾಯಿತು. ಜನಪದ ಹಾಡುಗಳನ್ನು ವಿಶೇಷವಾಗಿ ಬೀಸುವ ಹಾಡುಗಳನ್ನು ಎರಡು ರೀತಿಯಲ್ಲಿ ಗುರುತಿಸಬಹುದು. ಮೊದಲನೆಯದಾಗಿ ದೈಹಿಕ ಶ್ರಮದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಹಾಡುಗಳು. ಎರಡನೆಯದಾಗಿ ಧಾರ್ಮಿಕ, ದೈವಶ್ರದ್ಧೆ, ಉತ್ಸವ, ಉತ್ಸಾಹಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಹಾಡುಗಳು, ಮೊದಲಿನ ರೀತಿಯ ಹಾಡುಗಳು ವೃತ್ತಿಪರ ನೆಲೆಯಿಂದ ಬಂದಿದ್ದಾದರೆ, ಎರಡನೇ ರೀತಿಯ ಹಾಡುಗಳು ಭಾವನಾತ್ಮಕ ಅಭಿವ್ಯಕ್ತ ರೂಪದ ಆಧ್ಯಾತ್ಮಿಕ ಹಾಡುಗಳಾಗಿವೆ. ಮಹಿಳೆ ಬೌದ್ಧಿಕವಾಗಿ ಮತ್ತು ಮಾನಸಿಕವಾಗಿ ನೆಮ್ಮದಿಯಿಂದ ಬದುಕಲು ಆಧ್ಯಾತ್ಮಿಕ ಮಾರ್ಗವನ್ನು ಬಯಸಿದಳು. ಬೀಸುವಾಗ ಆಧ್ಯಾತ್ಮದ ಹಾಡುಗಳು ಈ ರೀತಿಯಾಗಿ ಹಾಡಿದ್ದಾಳೆ. [೨೦]

ಅನುಭಾವದ ಮಡಕೆವ ತೊಳೆದು, ತನು
ಎಂಬ ಪಾವಡ ಬಿಗಿದು । ಮನ ಎಂಬ
ಮಸರ ಸೋಸಮ್ಮ । ಗುರುವಿಗಿ ನೆನಿಯಮ್ಮ sss

ಆತ್ಮದಲ್ಲಿ ರೇವಿಗಿ ನಿಲಿಸಿ ಗುರು
ಸೂತ್ರದ ಹಗ್ಗವ ಪಿಡಿದು । ಪರಪಂಚದ
ಮಥನವು ಮಾಡಮ್ಮ ಗುರುವಿಗಿ ನೆನಿಯಮ್ಮ sss

ಹರ ಎಂಬ ಬೆಣ್ಣೆವ ತೆಗೆದು ಮನ
ಪಾಕದ ತುಪ್ಪವ ಕಾಸಿ । ಅಂತನಿಲ್ಲದ ದೀವಿಗಿ
ಮೂಡಿಸಮ್ಮ । ಗುರುವಿಗಿ ನೆನಿಯಮ್ಮ sss

ಹಂಕಾರೆಂಬ ಅಕ್ಕೇವ ತೊಳೆದು ಮದುಮಾಚೇವ
ದ್ದರವ ಪಿಡಿದು । ಮನ ಸಂಶದ ಗುರುವಿಗಿ
ನೀಡಮ್ಮಾ । ಗುರುವಿಗಿ ನೆನಿಯಮ್ಮ sss
ನಿಲಚಂಚಲ ಭಜ್ಜರ ಒಡಿದು
ಮನಚಂಚಲ ಹೋಳಿಗಿ ಮಾಡಿ
ಮನಸಂಶದ ಗುರುವಿಗಿ ನೀಡಮ್ಮಾ
ಗುರುವಿಗಿ ನೆನಿಯಮ್ಮಾ sss [೨೧]

ದೈವ ದೇವರ ನಂಬುಗೆಯಿಲ್ಲದೆ ಒಂದು ಕ್ಷಣವೂ ಬದುಕುವುದು ಜನಪದರಿಗೆ ಅಸಾಧ್ಯವಾಯಿತು. ಕೃಷಿ ಪ್ರಧಾನವಾದ ಈ ನಾಡಿನಲ್ಲಿ ಭೂಮಿಪೂಜೆ, ಧಾನ್ಯ ಪೂಜೆ, ಪಶುಗಳ ಪೂಜೆಗೂ ಮಾನ್ಯ ದೊರೆಯಿತು. ತಮ್ಮ ಸುಖ ದು:ಖಗಳನ್ನು, ತಪ್ಪು-ಒಪ್ಪುಗಳನ್ನು ದೇವರಲ್ಲಿ ತೋಡಿಕೊಳ್ಳಲು, ಕಷ್ಟಗಳನ್ನು ನಿವಾರಣೆ ಮಾಡಲು ದೇವರಲ್ಲಿ ಕೇಳಿಕೊಳ್ಳಲು ಹಾಡು ಅಭಿವ್ಯಕ್ತಿ ಮಾಧ್ಯಮವಾಯಿತು. ಸರಳ ಪ್ರಾಮಾಣಿಕ ಮತ್ತು ಅಭಿಮಾನದಿಂದ ಹಿಗ್ಗದೆ ಸಮಾನವಾಗಿ ಅನುಭವಿಸುವ ಮನೋಧರ್ಮವುಳ್ಳವಾರಾಗಿದ್ದರು "ಕಾಯಕವೇ ಕೈಲಾಸ" ಎಂಬ ತತ್ವದಲ್ಲಿ ನಂಬಿಕೆಯುಳ್ಳವರು. ತಮ್ಮ ನಡೆ, ನುಡಿ, ಪವಿತ್ರವಾಗಿದ್ದು ದುಡಿಮೆಯೇ ದೇವರೆಂದು ಭಾವಿಸಿ, ತಾವು ಮಾಡುವ ಕೆಲಸಗಳು ಫಲದಾಯಕವಾಗಲೆಂದು ಎಲ್ಲೆಡೆ ಸಂತೃಪ್ತಿ-ಸಮೃದ್ಧಿ ಉಂಟಾಗಲೆಂದು ದೇವರನ್ನು ಸ್ತುತಿಸಿ ಬೀಸುತ್ತ

ಹಾಡುತ್ತಿದ್ದರು. ಭಾವನಾತ್ಮಕ ಅಭಿವ್ಯಕ್ತ ರೂಪದ ಜನಪದ ಹಾಡುಗಳಲ್ಲಿ ಆಧ್ಯಾತ್ಮದ ತಿರುಳನ್ನು ಗುರುತಿಸಬಹುದು. ಕ್ರಿಯಾತ್ಮಕ ರೂಪದ ಜನಪದ ಹಾಡುಗಳನ್ನು ಮಾತ್ರ ಇಲ್ಲಿ ಗಮನಿಸಬಹುದಾಗಿದೆ.

'ಆಧ್ಯಾತ್ಮ' ಮತ್ತು 'ಅನುಭಾವ' ಇವೆರಡರಲ್ಲಿ ವ್ಯತ್ಯಾಸ ಕಾಣಬಹುದು. ಅಧ್ಯಾತ್ಮ ಎಂಬುದು ಆತ್ಮ-ಪರಮಾತ್ಮನ ಸಂಬಂಧವನ್ನು ಕುರಿತು ಹೇಳಿದರೆ, ಅನುಭಾವ ಎಂಬುದು ಬದುಕಿನ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದನ್ನು ತಿಳಿಸುತ್ತದೆ. ಭಕ್ತಿಭಾವ, ಸಮರ್ಪಣಾಭಾವ ಆತ್ಮನಿವೇದನೆಯಂತಹ ಒತ್ತಡದ ತೀವ್ರತೆಯನ್ನು ಅಭಿವ್ಯಕ್ತಿಸುವ ಮಾಧ್ಯಮವೇ ಆಧ್ಯಾತ್ಮ. ಇದು ಧಾರ್ಮಿಕ ನೆಲೆಯಲ್ಲಿ ಅಲೌಕಿಕ ಬದುಕಿನ ಅನುಭವಗಳನ್ನು ಕಟ್ಟಿಕೊಡುತ್ತದೆ. ೨೨

ಪ್ರಕೃತಿ ಪ್ರಕೋಪದ ಮಡಿಲಿನಲ್ಲಿ ಬದುಕುವ ಮನುಷ್ಯನಿಗೆ, ಗುಡುಗು, ಸಿಡಿಲು, ಮಿಂಚು, ಗಾಳಿ, ಮಳೆ, ಬಿಸಿಲು, ಕಾಡುಮೃಗಗಳಿಂದ ಸಂರಕ್ಷಣೆ ಬೇಕಾಗಿತ್ತು. ಇವುಗಳ ತೊಂದರೆಯಿಂದ ಪಾರಾಗಲು ಸ್ವಾಭಾವಿಕವಾಗಿ ಮನುಷ್ಯ ದೇವರನ್ನು ಕಲ್ಪಿಸಿಕೊಂಡು ಆರಾಧಿಸಲು ಪ್ರಾರಂಭಿಸಿದನು. ಭಜನೆ ಜನಪದದ ಜೀವನಾಡಿ. ಭಜನೆಯ ಮೇಳಗಳು ಊರೂರಿನ ಓಣಿಓಣಿಗೂ ಇರುತ್ತವೆ. ಬೀದರ್ ಜಿಲ್ಲೆಯಲ್ಲಿ ಪ್ರತಿಯೊಂದು ಗ್ರಾಮಗಳಲ್ಲಿ ಮಹಿಳೆಯರ ಭಜನೆಯ ಗುಂಪುಗಳಿರುವುದು ಒಂದು ವೈಶಿಷ್ಟ್ಯವೆಂದು ಹೇಳಬಹುದು. ಭಕ್ತಿ, ತತ್ವ, ಈ ಭಜನೆಗಳ ಸತ್ವ. ದಮಡಿ, ತಾಳ, ಏಕ್‌ತಾರಿಗಳನ್ನು ಕರ್ನಾಟಕದ ಗಡಿಭಾಗದಲ್ಲಿ ಬಳಸಿದರೆ, ದಮಡಿಗೆ ಬದಲಾಗಿ ಡೋಲ ಬಳಸುವ ರೂಢಿ ಮುಸಲ್ಮಾನರ ಪ್ರಭಾವದಿಂದಾಗಿ ನಮ್ಮ ಬೀದರ್ ಜಿಲ್ಲೆಯಲ್ಲಿದೆ. ಜಾತ್ರೆ ಹಬ್ಬಗಳಲ್ಲಷ್ಟೇ ಅಲ್ಲದೆ ಸತ್ತಾಗಲೂ ಭಜನೆ ಮಾಡುತ್ತಾರೆ.

ದೇವರನ್ನು ಸ್ತುತಿ ಮಾಡುವುದೆಲ್ಲ ಭಜನೆ ಎಂದರ್ಥವಾಗುತ್ತದೆ. ಭಜನೆ ದೈವೀ ಉಪಾಸನೆಯ ಮಹತ್ವದ ಸಾಧನಗಳಲ್ಲಿ ಒಂದು. ದೈವತ್ವವನ್ನು ನಂಬಿದ ಎಲ್ಲ ಮತೀಯರೂ ಭಜನೆಯನ್ನು ರೂಢಿಸಿಕೊಂಡಿದ್ದಾರೆ. ಇವರಲ್ಲಿ ಶಿವೋಪಾಸಕರು ಶ್ರಾವಣ, ಶಿವರಾತ್ರಿ ಸಮಯದಲ್ಲಿ ಭರಾಟೆಯಿಂದ ಭಜನೆ ಮಾಡುವರು. ಪ್ರತಿ ಶನಿವಾರ ಹನುಮನ ಮಂದಿರದಲ್ಲಿ, ಪ್ರತಿಸೋಮವಾರ ಶಿವಾಲಯಗಳಲ್ಲಿ, ಮಠ, ಮಾನ್ಯ, ಪವಿತ್ರ ಕ್ಷೇತ್ರಗಳಲ್ಲಿ ಭಜನೆ ಮಾಡುವರು. ಶಿವರಾತ್ರಿಯಂದು ಹಾಗೂ ಶ್ರಾವಣ ಮಾಸದಲ್ಲಿ ಒಂದು ತಿಂಗಳ ಪರ್ಯಂತ ಭಜನೆ ನಡೆಯುತ್ತದೆ.

ಭಜನೆ ಮೇಳದಲ್ಲಿ ಸಾಮಾನ್ಯವಾಗಿ ಹಾಡುಗಾರರು ನಾಲ್ಕೈದು ಜನರು ದೇವರ ಕುರಿತ ಹಾಡುಗಳು, ಅನುಭವ ಹಾಡುಗಳು, ಶರಣರ ವಚನ, ದಾಸರ ಕೀರ್ತನೆಗಳು, ಚುಟುಕು ಪದಗಳು ತ್ರಿಪದಿ ಹಾಡುಗಳನ್ನು ಹಾಡುತ್ತಾರೆ. ಭಜನೆ ಸಮಯದಲ್ಲಿ ಉಪಸ್ಥಿತರಿದ್ದವರೆಲ್ಲರೂ ಸಂತಸದ ಚಿಂತನೆಯಲ್ಲಿ ಕುಳಿತಿರುತ್ತಾರೆ. ಹಾಡುಗಳ ಮಧ್ಯ ಮಧ್ಯದಲ್ಲಿ "ಓಂ ನಮ: ಶಿವಾಯ ಹರಾ ನಮ: ಓಂ" ಎಂಬ ಮಂತ್ರಗಳು ಪ್ರತಿ ಧ್ವನಿಸುತ್ತವೆ. ತಾಳ, ಲಯ ಬದ್ಧವಾಗಿ ಹೊರಹೊಮ್ಮುವ ಹಾಡುಗಳ ಧ್ವನಿ ಕತ್ತಲೆಯನ್ನು ಭೇದಿಸಿ, ಅಧ್ಯಾತ್ಮದ ಪರಿವೇಷ ಕಟ್ಟುತ್ತದೆ. ಹೀಗೆ ಹಲವು ಗಂಟೆಗಟ್ಟಲೆ ಇಲ್ಲವೆ ಬೆಳಗಿನ ತನಕ ನಡೆಸುವ ಭಜನೆಯನ್ನು ಹೊತ್ತಾದ ನಂತರ ಅಥವಾ ಬೆಳಗಿನ ಜಾವದಲ್ಲಿ ಮುಗಿಸುತ್ತಾರೆ.

ಶ್ರಾವಣದಲ್ಲಿ ಜಡಿಮಳೆ ಇರುವುದು. ಜನಪದರ ಮುಖ್ಯ ಉದ್ಯೋಗ ಬೇಸಾಯ, ಜಡಿಮಳೆಯಿಂದಾಗಿ ಹೊಲಗದ್ದೆಗಳಲ್ಲಿ ಕೆಲಸ ಮಾಡಲು ಆಗುವುದಿಲ್ಲ. ಅದಕ್ಕಾಗಿ ಕೃಷಿಕರಾದ ಜನಪದರಿಗೆ ಶ್ರಾವಣದಲ್ಲಿ ಸಂಪೂರ್ಣ ಕೆಲಸದಿಂದ ಬಿಡುವು ದೊರೆಯುತ್ತದೆ. ಆದುದರಿಂದ ಶ್ರಾವಣ ಪೂರ್ಣ ಭಜನೆಯಲ್ಲಿ ಕಾಲ ಕಳೆಯುತ್ತಾರೆ. ಆರತಿ ಹಾಡಿನೊಂದಿಗೆ ಭಜನೆಯನ್ನು ಮುಕ್ತಾಯಗೊಳಿಸುವರು. ಬೀದರ ಜಿಲ್ಲೆಯಲ್ಲಿ ಮಕ್ಕಳಿಂದ ಮುದುಕರವರೆಗೆ ಎಲ್ಲರೂ ಭಜನೆಯಲ್ಲಿ ಪಾಲ್ಗೊಳ್ಳುತ್ತಾರೆ. ತಮ್ಮ ಧರ್ಮದ ದೇವರಿಗೆ ಸಂಬಂಧಿಸಿದ ವಾರಗಳಲ್ಲಿ ನಿಗದಿಯಾದ ವೇಳೆಯಲ್ಲಿ

ಅರ್ಧ ಚಂದ್ರಾಕೃತಿಯಲ್ಲಿ ಕುಳಿತು ತಾಳ, ದಮಡಿ, ತಬಲ ಏಕತಾರಿ, ಹಾರ್ಮೋನಿಯಂ ವಾದ್ಯಗಳ ಹಿನ್ನೆಲೆಯಲ್ಲಿ ತತ್ವಗೀತೆ, ವಚನ, ಮೊದಲಾದವನ್ನು ಹಾಡುತ್ತಾರೆ.

ಬೀದರ್ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಭಜನೆ ಸೋಮವಾರ, ಗುರುವಾರ, ಶುಕ್ರವಾರ ಶ್ರಾವಣ ಮಾಸ ಪರ್ಯಂತ, ಹುಣ್ಣಿಮೆ, ಅಮವಾಸ್ಯೆ, ಗುರು-ಹಿರಿಯರ ಪುಣ್ಯಸ್ಮರಣೆಯಂದು ಮತ್ತು ಮಹಾನವಮಿ ಗಣೇಶೋತ್ಸವಗಳಲ್ಲಿ ಭಜನೆ ಮಾಡುತ್ತಾರೆ. ಬೀದರ ಜಿಲ್ಲೆಯ ಪ್ರತಿಯೊಂದು ಹಳ್ಳಿ ಹಳ್ಳಿಗಳಲ್ಲಿ ಭಜನಾ ಮಂಡಳಿಗಳನ್ನು ನೋಡಬಹುದು. ಭಜನೆಯ ಹಾಡುಗಳೂ ಜನಪದ ಸಾಹಿತ್ಯವಾಗಬಲ್ಲುದೆ? ಎನ್ನುವ ಪ್ರಶ್ನೆ ಕೆಲ ಪಂಡಿತರನ್ನು ಕಾಡಿದ ಸಮಸ್ಯೆ. ಆದರೆ. ಡಾ. ಚಂದ್ರಶೇಖರ ಕಂಬಾರ, ಹಾಗೂ ಡಾ. ಎಂ.ಎಂ. ಕಲಬುರ್ಗಿ ಅವರು ಭಜನೆ ಹಾಡುಗಳನ್ನು 'ಜನಪ್ರೀಯ' ಹಾಗೂ 'ಜಾನಪದ' ಸಾಹಿತ್ಯವೆಂದು ಹೆಸರಿಸಿ ಸೇರಿಸಿದ್ದಾರೆ. ಆದರೆ ವಿಭಾಗೀಕರಣ ಅಷ್ಟು ಪರಿಪೂರ್ಣವೆನಿಸವು ಎನ್ನುವರು ಶ್ರೀ ಶಾಂತರಸು "ಜನ ಜೀವನದ ನೇರ ಸಂಪರ್ಕ ಇದ್ದ ಅವರು ಶಿಷ್ಟ ಸಂಪ್ರದಾಯದ ಕೃತ್ರಿಮತೆಯಿಂದ ದೂರಿದ್ದು ಸಹಜವಾಗಿ ಅನುಭವ ಹಾಡಿಕೊಂಡಾಗ ಅದು ಜನಪದ ಸಾಹಿತ್ಯ ಏಕಾಗುವುದಿಲ್ಲ ಎಂದು ಭಜನೆಯ ಹಾಡುಗಳು ಜನಪದ ಸಾಹಿತ್ಯವೆಂದು ಸಮರ್ಥಿಸಿದ್ದಾರೆ. ನಮ್ಮ ಭಜನೆಯ ಹಾಡುಗಳನ್ನು ಹಾಡಿದವರು ಅನುಭಾವದ ಹಾಡುಗಳನ್ನು ಹಾಡಿದವರು ಇಂಥವರೇ, ಅವರು ಜನಪ್ರಿಯ ಸಾಹಿತಿಗಳಲ್ಲ ಜನಪದ ಸಾಹಿತಿಗಳು ಎಂದು ಸ್ಪಷ್ಟಪಡಿಸಿದ್ದಾರೆ.

ಈ ಭಜನೆ ನಾಗರಿಕ ಜೀವನದಲ್ಲಿ ಭಕ್ತರ ಮಧ್ಯ ಪ್ರವೇಶಿಸದೆ ಜನಪದದಲ್ಲೆ: ಜನರಿಂದಲೇ, ಜನಪದರಿಗಾಗಿಯೇ ಹುಟ್ಟಿ ಬೆಳೆದು ಪ್ರಖ್ಯಾತಿಯನ್ನು ಪಡೆಯಿತು. ಭಜನೆ ಹಾಡುಗಳ ಭಾವ, ಭಾಷೆ, ವಸ್ತು ಹಾಗೂ ಪ್ರಚಾರ ಪ್ರಿಯತೆಯನ್ನು ಗಮನಿಸಿ ಇವುಗಳನ್ನು ಜನಪದ ಸಾಹಿತ್ಯದ ಒಂದಂಗವೆಂದೇ ಹೇಳಬೇಕಾಗುತ್ತದೆ. ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ನಾಗಭೂಷಣ ಶಿವಯೋಗಿ, ಬಾಲಲೀಲಾ ಮಹಾಂತ ಶಿವಯೋಗಿ, ಘನಮಠ ಶೀವಯೋಗಿ ಮುಂತಾದ ಜನಪದ ಕವಿಗಳು ವೀರಶೈವ ತತ್ವದ ತಿರುಳನ್ನು ತಮ್ಮ ಹಾಡುಗಳ ಮೂಲಕ ಧಾರೆಯೆರೆದಿದ್ದಾರೆ. ಭಜನೆಯ ಹಾಡುಗಳು ಜನಪದ ಸಾಹಿತ್ಯದ ದೊಡ್ಡ ನಿಧಿಯಾಗಿದೆ. ಜನಪದರ ಅನುಭಾವದ ಐಸಿರಿ, ಪರಮಾನುಭವ ಬೋಧೆ, ಧಾರ್ಮಿಕ ಶ್ರೀಮಂತಿಕೆಯೆಲ್ಲಾ ಬೆಳೆದದ್ದು ಈ ಭಕ್ತಿಯ ಹಾಡುಗಳ ಮಾಧ್ಯಮದಿಂದಲೇ ಇವು ಭಕ್ತಿಯ ಹೊನಲಾಗಿವೆ. ಅನುಭವದ ಕೆನೆಯಾಗಿದೆ. ಅಂತೆಯೇ ಇವುಗಳಿಗೆ ಭಕ್ತಿಗೀತೆ, ತತ್ವಪದ, ಅನುಭವ ಪದವೆಂದೆಲ್ಲಾ ಕರೆಯುವರು. ಅಲ್ಲದೆ ಸ್ವರವಚನ ಎಂತಲೂ ಕರೆಯುವರು. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಇವುಗಳಿಗೆ ಭಜನೆಯ ಹಾಡುಗಳೆಂದೇ ಕರೆಯುವ ವಾಡಿಕೆಯಿದೆ. ಈ ಹಾಡುಗಳನ್ನು ಪ್ರಾರ್ಥನೆ, ದೈವಭಕ್ತಿ, ಮಹತಿ ಶೀಲ, ತತ್ವ, ತಾಯಿ, ವಿಡಂಬನೆ, ಮಂಗಲ, ದೇವಾಲಯ, ಅಭಂಗ, ಭಾವಗೀತೆಗಳೆಂದು ಕರೆಯುವುದುಂಟು.

ಭಜನೆಯ ಹಾಡುಗಳು ಧ್ಯಾನ, ದೇವರು, ಜಪ, ತಪಗಳೆಂದು ಜನಪದರನ್ನು ಗುಡ್ಡಗಾಡು ಸೇರಲು ಹಚ್ಚಲಿಲ್ಲ. ಭವವನ್ನು ಬಿಟ್ಟು ಹೋಗುವ ಜನರನ್ನು ಖಂಡಿಸಿ ಪ್ರಪಂಚದಲ್ಲಿದ್ದೇ ಪಾರಮಾರ್ಥಗಳಿಸು ಎನ್ನುವ ತತ್ವಗಳನ್ನು ತಿಳಿಸುವ ಗುರಿ ಇವುಗಳದಾಗಿದೆ. ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಸಾಮೂಹಿಕವಾದ ಹಾಡುಗಳೆಂದರೆ ಭಜನೆ ಹಾಡುಗಳು. ಈ ಹಾಡುಗಳು ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿವೆ. ಜನಸಾಮಾನ್ಯರ ಬದುಕಿನ ಗಣಿಯಿಂದ ಅವರ ಭಾಷೆಯಲ್ಲಿಯೇ ಮೂಡಿ ಬಂದಿರುವ ಜನಪದ ಕವಿಗಳ ಸುಂದರ ನುಡಿಗಳಾಗಿವೆ. ಭಜನೆಯ ಹಾಡುಗಳಲ್ಲಿ ಕೆಲವು ಅನುಭಾವ ಸಿದ್ಧಾಂತ ನಿರೂಪಿತವಾಗಿರುತ್ತವೆ ಎಂದೇ ಇವು ಸರ್ವವ್ಯಾಪಿ ಖ್ಯಾತಿ ಪಡೆದು ಜನಪದ ಸಮಾಜದಿಂದ ನಾಗರಿಕ ಸಮಾಜದಲ್ಲಿಯೂ ತನ್ನ ಸ್ಥಾನ ಗಳಿಸಿ ಉಳಿಸಿಕೊಂಡಿವೆ.

ಅಂತರಂಗದಲ್ಲಿ ಒಂದು ಬಹಿರಂಗದಲ್ಲಿ ಇನ್ನೊಂದು ಇಟ್ಟುಕೊಂಡು ಡಂಭಾಚಾರದ ಭಕ್ತಿ ಆಚರಿಸುವ ಜನರ ನಡತೆಯನ್ನು ಹೇಳುತ್ತ ಹಾಡುವ ಈ ಹಾಡು ನೇರವಾಗಿ ಅವರ ನಡತೆಯ ಬಗ್ಗೆ ಕಟುವಾಗಿ ಹೇಳಲಾಗಿದೆ. ಅದರ ಒಂದೆರಡು ನುಡಿಗಳು ಈ ರೀತಿಯಾಗಿವೆ.

ಜಂಬೂ ದ್ವೀಪದಲಿ ನಂಬುಗೆ ನಂಬುದು
ತುಂಬಿ ತುಳುಕುತಿತ್ತೊ । ಶಿವ ಶಿವಾ
ತುಂಬಿ ತುಳುಕುತಿತ್ತೊ ಽಽ

ಆಡಂಬರ ದಲ್ಲಿ ಮುಸುಕಿನ ಮರೆಯಲಿ
ಪೂಜೆ ಮಾಡುತಾರೋ । ಶಿವ ಶಿವಾ
ಜಪವ ಮಾಡುತಾರೋ ಽಽ
ಕೈಯಲ್ಲಿ ಜಪಮಣಿ । ಬಾಯಲಿ ಮಂತ್ರ
ಪರಸತಿ ನೆನಿತಾರೋ । ಶಿವಶಿವಾ
ಪರಧನ ಬಯಸ್ತಾರೋ
ಜಂಬು ದ್ವೀಪದಲಿ ನಂಬುಗೆ ನಂಬುದು
ತುಂಬಿ ತುಳುಕುತಿತ್ತೊ । ಶಿವ ಶಿವಾ
ತುಂಬಿ ತುಳುಕುತಿತ್ತೋ ಽಽ

ಶಿವಪೂಜೆ ಮಾಡುವಾಗ ಸಿಂದೀಯ ನೆನಪಾಗಿ
ಹೊಂಟಾರಪ್ಪ ಲಿಂಗಮರತೋ । ಶಿವ ಶಿವಾ
ಹೊಂಟಾರಪ್ಪ ಲಿಂಗಮರತೋ
ಇಂಥ ಪಾಪಿಷ್ಠರು ಊರೊಳಗ ಇದ್ದರ
ಮಳಿ ಹ್ಯಾಂಗ ಬಿದ್ದತೋ । ಶಿವ ಶಿವಾ
ಬೆಳಿ ಹ್ಯಾಂಗ ಬೆಳದತ್ತೋ ಽಽ

ಜಂಬು ದ್ವೀಪದಲಿ ನಂಬುಗೆ ನಂಬುದು
ತುಂಬಿ ತುಳುಕುತಿತ್ತೋ । ಶಿವ ಶಿವಾ
ತುಂಬಿ ತುಳುಕುತಿತ್ತೋ ಽಽ

ದೇಶಮುಖ ದೇಶಪಾಂಡೆ ಮೊದಲ ಪಠಾಣರು
ಪುಠಾಣಿ ಹುರಿಯದು ಬಂತೋ । ಶಿವಾ ಶಿವಾ
ಪುಠಣಿ ಹುರಿಯದು ಬಂತು
ಕುಲಜ ಕುಲಕರ್ಣಿಗಳು ವಂಚನೆ ಮಾಡ್ತಾರ
ನ್ಯಾಯ ಎಲ್ಲಿ ಉಳಿತೋ । ಶಿವ ಶಿವಾ
ಧರ್ಮ ಎಲ್ಲಿ ಹೋಯ್ತೋ

ಜಂಬು ದ್ವೀಪದಲಿ ನಂಬುಗೆ ನಂಬುದು
ತುಂಬಿ ತುಳುಕುತಿತ್ತೋ । ಶಿವಾ ಶಿವಾ
ತುಂಬಿ ತುಳುಕುತಿತ್ತೋ [೨೩]

ಈ ರೀತಿ ಭಜನೆ ಹಾಡುಗಳಲ್ಲಿ ಕೆಲವು ಅನುಭಾವ ಸಿದ್ಧಾಂತ ನಿರೂಪಿತವಾಗಿರುತ್ತವೆ ಎಂದೇ ಇವು ಸರ್ವವ್ಯಾಪಿ ಖ್ಯಾತಿ ಪಡೆದು ಜನಪದ ಸಮಾಜದಿಂದ ನಾಗರಿಕ ಸಮಾಜದಲ್ಲಿಯೂ ತನ್ನ ಸ್ಥಾನಗಳಿಸಿ ಉಳಿಸಿಕೊಂಡಿವೆ. ತಪ್ಪುತ್ತಿರುವ ಸಮಾಜವನ್ನು ನಿಷ್ಠೂರವಾಗಿ ತಿದ್ದಿ ಸರಿಪಡಿಸುವಲ್ಲಿ ಈ ಪದಗಳು ಹೆಣಗಾಡುತ್ತವೆ.

ಭಕ್ತಿ ಜನಪದರ ಅಂತರಂಗದಿಂದ ಚಿಮ್ಮಿ ಬಂದ ಸಚೇತನ ಶಕ್ತಿ. ಇದರಿಂದಾಗಿ ತತ್ವಜ್ಞಾನ, ಭಕ್ತಿ, ಅವರ ನಡೆಯಲ್ಲಿ, ನುಡಿಯಲ್ಲಿ, ಹಾವ-ಭಾವದಲ್ಲಿ ಅವಿತುಕೊಂಡಿದೆ. ಅವರ ಬದುಕು ಭಕ್ತಿ ಹಾಗೂ ದೈವನಿಷ್ಠೆಯ ಭದ್ರ ತಳಹದಿಯ ಮೇಲೆ ಅಲುಗದೆ ಅಚಲವಾಗಿ ನಿಂತಿದೆ. ಸಂಸಾರದ ಗೊಡವೆ ಬೇಡವೆಂದು ಇಲ್ಲಿ ಜನಪದರು ಭಕ್ತಿಯಲ್ಲಿ ಮುಕ್ತಿಯ ಕಾಣಲು ಹವಣಿಸಿದ್ದಾರೆ. ಶರಣಸತಿ ಲಿಂಗಪತಿ ಭಾವವನ್ನು ಸಂಕೇತಿಸುವ ಹಾಡುಗಳಲ್ಲಿ ಜೀವಾತ್ಮ ಪರಮಾತ್ಮವನ್ನು ಸೇರುವ ಭಾವವನ್ನು ಕಾಣುತ್ತೇವೆ. ಲೌಕಿಕ ಮದುವೆಯ ಹಂಗು ಹರಿದು ಅಧ್ಯಾತ್ಮಿಕ ಪತಿಗೆ ಮಾರುಹೋಗುವ ರತಿಭಾವ ಇಲ್ಲಿಯದು,

ಒಲ್ಲೆನಮ್ಮ ನಾನು ಗಂಡನ । ಏ ಹಡದ ತಾಯಿ
ಒಲ್ಲೆನಮ್ಮ ನಾನು ಗಂಡನ । ಗಂಡನಂದ್ರ ಎನ್ನಯ
ಜೀವ ಕೆಂಡದಂಗೆ ಕಾಣತೈತಿ
ಉಂಡು ಉಟ್ಟು ಓಣಿ ಒಳಗೆ । ಒಳ್ಳೆ ಗುರುವಿನ ಕಂಡೆನಮ್ಮ
ಒಲ್ಲೆನಮ್ಮ ನಾನು ಗಂಡನ.

ಆರು ಮೂರು ಮಂದಿ ಕೂಡಿದರು
ಒಂಬತ್ತು ಮಂದಿ ಎನ್ನ ಹಿಡದು
ನಿಶ್ಚಯ ಮಾಡಿದರು.
ನಾರಿಯ ಕೈಗೆ ಕಂಕಣ ಕಟ್ಟಿ
ಹಣೆಗೆ ಕುಂಕುಮ ದಂಡಿಯ ಧರಿಸಿ
ಆ ದಂಡಿ ಹೋದ ಮ್ಯಾಲ ನಾ.........
ಆದೇ ನಮ್ಮ ಒಲ್ಲೆನಮ್ಮ ನಾನು ಗಂಡನ್ನ.

ಎಂಟೂ ಹತ್ತು ಮಂದಿಯ ಕೂಡಿದರು
ಹದಿನೆಂಟ ಮಂದಿ ಎನ್ನಹಿಡದು ಲಗ್ನ ಮಾಡಿದರು.
ಒಬ್ಬ ಗಂಡಗ ಭಾಷವ ಕೊಟ್ಟು
ಒಬ್ಬ ಗಂಡಗ ಸುರಳೀತನಾಗಿ
ಆರೇವ ಗಂಡನ ಮುರೇವ ನುಂಗಿ
ಸರಗದ ಹಾದಿ ಹಿಡದೇನಮ್ಮ
ಒಲ್ಲೆನಮ್ಮ ನಾನು ಗಂಡನ

ಮೂರ ಮಂದಿ ಮಕ್ಕಳ ಹಡದೇನು
ಮಣ್ಣ ಒಳಗಯಿಟ್ಟು ನಿಶ್ಚಯಲಿಂದ ಸಂಸಾರ ಮಾಡಿದೇನು
ಚಿಕ್ಕ ಪ್ರಾಯದ ಹೆಣ್ಣು ನಾನು
ಸುಟ್ಟೀ ಸುಣ್ಣ ಸುರಳಿತನಾಗಿ
ಚಿತ್ತಗೇಡಿ ಚಿದಾನಂದನ ಪಾದಕ್
ಹೋಗಿ ಬಿದ್ದೇನಮ್ಮ
ಒಲ್ಲೆನಮ್ಮ ನಾನು ಗಂಡನ

ಸಂಸಾರದ ಜಂಜಡದಿಂದ ದೂರ ಹೋಗಲು ಪ್ರಯತ್ನಿಸಿದರೂ, ಸಮಾಜ ಅದಕ್ಕೆ ಆಸ್ಪದಕೊಡದು. ನೂರಾರು ಅರ್ಥಗಳನ್ನು ಕಲ್ಪಿಸಿ–ಜನ್ಮ ಸಾರ್ಥಕವಾಗಬೇಕಾದರೆ ಮಾನವನು ಭೂಮಿಯ ಮೇಲೆ ನಿರ್ವಹಿಸಬೇಕಾದ ಎಲ್ಲ ಕರ್ತವ್ಯಗಳನ್ನು ಪೂರ್ಣ ಮಾಡಲೇಬೇಕು. ಸಂಸಾರದಲ್ಲಿದ್ದು ಪ್ರಪಂಚ ಗೆಲ್ಲಬೇಕೆಂಬ ಭಾವನೆ ಜನಪದರದು. ಜನಪದರು ಬಿಡುವಿನ ಸಮಯದಲ್ಲಿ ಭಕ್ತಿಗೀತೆ, ತತ್ವಪದಗಳು, ಹೇಳುತ್ತ ಭಜನೆಯನ್ನು ಮಾಡಿ ತಮ್ಮ ಭಕ್ತಿ ಪ್ರಕಟಿಸುತ್ತಿದ್ದರು. ಅದರಲ್ಲಿಯೇ ಆನಂದ ಪಡೆಯುತ್ತಿದ್ದರು. ಶಿವಾಲಯ, ದೇವಾಲಯಗಳಲ್ಲಿ ಭಕ್ತಿಭಾವದಿಂದ ಪ್ರವೇಶ ಮಾಡುತ್ತಿದ್ದರು. ಗುಡಿಗಳಲ್ಲಿರುವ ಸ್ಥಾವರಲಿಂಗಗಳನ್ನು ಹಬ್ಬ ಹರಿದಿನಗಳಲ್ಲಿ ವಿಶೇಷವಾಗಿ ಪೂಜಿಸುತ್ತಿದ್ದರು. ಅಂಥ ಸ್ಥಾವರಲಿಂಗಗಳ ಕುರಿತು ಇಲ್ಲಿ ಜನಪದರು ಈ ರೀತಿಯಾಗಿ ಹಾಡಿದ್ದಾರೆ.

ಏ ss ಕಾಶಿಲಿಂಗ ಎಲ್ಲಿ ಹುಟ್ಟಿ ಎಲ್ಲಿ ಚಾಚ್ಯಾದೋ
ಏss ಮೈಲಾರಲಿಂಗ ಎಲ್ಲಿ ಹುಟ್ಟಿ ಎಲ್ಲಿ ಚಾಚಾದೋ

ಸಮುದ್ರದ ಮೇಲೆ ಸಿಂಪಿ ತೇಲ್ಯಾದೋ
ಆ ಸಿಂಪಿಯೊಳಗ ಹನಿ ಹುಕ್ಕಿ ಮುತ್ತನಾಗ್ಯಾದೋ
ಆ ಮುತ್ತಿನಾಗ ಆರು ಬಣ್ಣ ಜಂಪ ಇಟ್ಟಾರೋ
ಏ ಸಿದ್ಧಲಿಂಗ ಬೀಜ ಮಾತು ನಿನಗ ತಿಳದಾದೋ
ಏ ಕಾಶಿಲಿಂಗ ಎಲ್ಲಿ ಹುಟ್ಟಿ ಎಲ್ಲಿ ಚಾಚಾದೋ

ಗಿರಿಯ ಮ್ಯಾಲ ಮರವು ಹುಟ್ಟ್ಯಾದೋ
ಆ ಮರದ ಮ್ಯಾಲ ಹಕ್ಕಿ ಒಂದು ಗೂಡು ಕಟ್ಟ್ಯಾದೋ
ಆ ಗೂಡಿನಾಗ ಆರು ಬಣ್ಣ ಜಂಪಲಿಟ್ಟಾದೋ
ಮಹಾಕೋಟಿ ಲಿಂಗ ಒಗಟು ಅರ್ಥ ನಿನಗ ತಿಳದಾದೋ
ಏ ss ಕಾಶಿಲಿಂಗ ಎಲ್ಲಿ ಹುಟ್ಟಿ ಎಲ್ಲಿ ಚಾಚಾದೋ

ಮೈಲ ಮ್ಯಾಲ ಬೈಲ ನಿಟ್ಟಾದೋ ಆ ಬೈಲ ತುಂಬಾ
ಮೌನದಾತಮ್ಮ ತಂಬೂರಿ ತುಂಬ್ಯಾದೋ
ಆ ತಂಬೂರಿ ನುಂಗಿ ಹಂಸ ಒಂದು ಹಾರಿ ಹೋಗ್ಯಾದೋ
ಏss ಹಂಪಿ ಲಿಂಗ ಎಲ್ಲಿ ಹುಟ್ಟಿ ಎಲ್ಲಿ ಚಾಚಾದೋ
ಏ ಕಾಶಿಲಿಂಗ ಎಲ್ಲಿ ಹುಟ್ಟಿ ಎಲ್ಲಿ ಚಾಚಾದೋ

ರಾಟಿ ಮ್ಯಾಲೆ ಹಾಂವ ಸುತ್ತ್ಯಾದೋ ಹಾವ ನುಂಗಿ
ಪುಂಗಿನಾದ ಮಾಟ ಮಾಡ್ಯಾದೋ ಆ ಹಾವದೊಳಗ
ಆರು ಲೋಕ ಸೇರಿ ಹೋಗ್ಯಾದೋ

ಏ ಹಂಸಲಿಂಗ ಎಲ್ಲಿ ಹುಟ್ಟಿ ಎಲ್ಲಿ ಚಾಚಾದೋ
ಏ ಕಾಶಿಲಿಂಗ ಎಲ್ಲಿ ಹುಟ್ಟಿ ಎಲ್ಲಿ ಚಾಚಾದೋ [೨೫]

ಜನಪದರು ತಂದೆ–ತಾಯಿಯರನ್ನು ದೇವರ ಸ್ಥಾನದಲ್ಲಿಟ್ಟಿದ್ದಾರೆ. ಯಾವುದೇ ವಿಶೇಷ ಕಾರ್ಯಕ್ಕೆ ಹೋಗುತ್ತಿರುವಾಗ ತಂದೆ–ತಾಯಿಯರ ಪಾದಗಳಿಗೆ ನಮಸ್ಕರಿಸುವರು. ದಿನಾಲೂ ಮುಂಜಾನೆ–ಸಾಯಂಕಾಲ ತಂದೆ ತಾಯಿಯರನ್ನು ನಮಸ್ಕರಿಸಿದರೆ ಅವರಿಗೆ ಯಾವ ಕಷ್ಟಗಳು ಬರುವುದಿಲ್ಲ. ಅವರ ಆಶೀರ್ವಾದದಿಂದ ಬಂದ ದುರಿತಗಳೆಲ್ಲ ದೂರಾಗುವವು ಎಂದು ಅವರ ನಂಬಿಕೆಯಾಗಿದೆ. ಜನಪದರ ಬದುಕು ಶೀಲಗುಣ ಸಂಪತ್ತಿನಿಂದ ಕಂಗೊಳಿಸುವಲ್ಲಿ ಭಜನೆಯ

ಹಾಡುಗಳು ಸಾಕಷ್ಟು ಸಹಕರಿಸಿವೆ. ಹೆಣ್ಣಿನ ಹೃದಯವನ್ನು ಸಂಸ್ಕರಿಸುವ, ಲೋಕಾನುಭವ ಬೀರುವ, ನೈತಿಕ ಗುಣಮಟ್ಟವನ್ನು ಎತ್ತರಿಸುವ, ಸಾಮಾಜಿಕ ಗೌರವ ಕಾಪಾಡುವ ಜವಾಬ್ದಾರಿ ಹೆಣ್ಣಿನ ಮೇಲಿರುತ್ತದೆ. ಹೆಣ್ಣು ಗಂಡನ ಮನೆಗೂ ತವರಿಗೂ ಹೆಸರು, ಕೀರ್ತಿ ತರುತ್ತಾಳೆ. ಉತ್ತಮರ ಮಗಳೆಂದರೆ ತವರಿಗೆ ಭೂಷಣ. ಉತ್ತಮರ ಸೊಸೆ ಎಂದರೆ ಗಂಡನ ಮನೆಗೆ ಭೂಷಣ ಸ್ತ್ರೀಗೆ ನಿಜವಾದ ಆಭರಣಗಳು ಯಾವವು ಎಂಬುದನ್ನು ಇಲ್ಲಿ ಹೇಳಲಾಗಿದೆ.

ಹಣೆಗದು ಕುಂಕುಮ ಹೆಣ್ಣಿಗದು ಭೂಷಣ
ತಿಳಿಲಾರದ ಹೆಣ್ಣಿನ ಹಾಳಾಯಿತು ಜೀವನಾ

ತವರೂರ ತಾವರೆ ಹೆಣ್ಣು । ಪತಿ ಮನೆಯ ಬೆಳಗುವ ಕಣ್ಣು
ಜಾರಿದರೆ ಭಾಳ ಮಣ್ಣು । ಹುಳಿ ನೀ ಚರಂತನಾ
ಹಣೆಯಲ್ಲಿ ಕುಂಕುಮ ಹೆಣ್ಣಿಗದು ಭೂಷಣ

ಬಂಗಾರ ಏತಕೆ ಬೇಕು । ಮಾಂಗಲ್ಯ ಭಾಗ್ಯವೇ ಸಾಕು
ಮೂಗಲ್ಲಿ ಮೂಗುತಿ ಹಾಕು । ಬಳೆ ಮುಡುಸು ಚಂಚಣಾ
ಹಣೆಯಲ್ಲಿ ಕುಂಕುಮ ಹೆಣ್ಣಿಗದು ಭೂಷಣ

ಮಡಿಲಲ್ಲಿ ಮಗುವಿರಬೇಕು । ಸೊಗಸಾದ ಹೆಸರಿಡಬೇಕು
ಪತಿಯಾಸೆ ಪಾಲಿಸ ಬೇಕು । ಅವನೇ ನಿನ್ನ ಸರ್ವಜೀವನ
ಹಣೆಯಲ್ಲಿ ಕುಂಕುಮ ಹೆಣ್ಣಿಗೆ ಭೂಷಣ

ಅತ್ತೆ ಮಾವರ ಮುದ್ದು ಸೊಸೆಯಾಗಿರಬೇಕು
ಎಂದೆಂದೂ ಈ ಮನೆಗೆ ನೀ ಬೆಳಕಾಗಬೇಕು
ಹಣೆಯಲ್ಲಿ ಕುಂಕುಮ ಹೆಣ್ಣಿಗದು ಭೂಷಣ

ಹಡೆದ ತಾಯಿ ಅಮ್ಮನ ಮನೆಗೆ । ಕರೆದಾ ತಮ್ಮನ
ಮನೆಗೆ । ಹೂವು ತರಬೇಕ ಮಗಳೆ । ಹುಲ್ಲು ತರಬೇಡ
ಹಣೆಯಲ್ಲಿ ಕುಂಕುಮ ಹೆಣ್ಣಿಗದು ಭೂಷಣ [೨೬]

ಶೀಲವತಿಯಾದ ಹೆಣ್ಣಿಗೆ ಆಭರಣದ ಅವಶ್ಯಕತೆಯಿರುವುದಿಲ್ಲ. ಅವಳ ಬಾಹ್ಯ ಶೃಂಗಾರಕ್ಕಿಂತ ಆಂತರಿಕ ಶೃಂಗಾರ ಉತ್ತಮವಾಗಿದ್ದರೆ ಸಾಕು. ಎಲ್ಲ ಆಭರಣಗಳಲ್ಲಿ ಶ್ರೇಷ್ಠವಾದ ಆಭರಣಗಳೆಂದರೆ ಮುತ್ತೈದೆತನ. ಸದಾ ಹಣೆಯಲ್ಲಿ ಕುಂಕುಮ ರಾರಾಜಿಸುತ್ತಿರಬೇಕು. ಕೊರಳಲ್ಲಿ ಮಂಗಳ ಸೂತ್ರ, ಮೂಗಲ್ಲಿ ಮೂಗುತಿ, ಕೈಯಲ್ಲಿ ಬಳೆಗಳು, ಮಡಿಲಲ್ಲಿ ಮಗುವಿನಂಥ ಆಭರಣ ಹೊಂದಿದ್ದು, ಪತಿಯ ಆಸೆಯಂತೆ ನಡೆದು, ತವರಿಗೆ ಹೂವ ತರಬೇಕೆ ಹೊರತು ಹುಲ್ಲು ತರಬಾರದೆಂದು ಜನಪದರು ಸ್ತ್ರೀಯರ ನೀತಿಯ ಕುರಿತು ಹೇಳಿದ್ದಾರೆ. ಜನಪದ ಗರತಿಯು ಆದರ್ಶಸ್ತ್ರೀಯಾಗಿ ಯಾರಿಗೂ ಅಪಚಾರವನ್ನೆಸಗದೆ ಕೆಟ್ಟದ್ದನ್ನು ಬಯಸದೆ, ಪಾಲಿಗೆ ಬಂದದ್ದು ಪಂಚಾಮೃತ ಎಂಬಂತೆ, ಬಂದ ಕಷ್ಟಗಳನ್ನೆಲ್ಲಾ ಸಹಿಸಿ, ನೈತಿಕ ಜೀವನವನ್ನು ಸಾಗಿಸಿಕೊಂಡು ಬಂದಿದ್ದಾಳೆ, ಆದರ್ಶ ಕುಟುಂಬದ ರಚನೆಗೆ ಹಾಗೂ ಅದರ ಬೆಳವಣಿಗೆಗೆ ಕಾರಣೀಭೂತಳಾಗುವಳು. ಜೀವನದಲ್ಲಿ ಬಂದ ಎಲ್ಲ ಸಮಸ್ಯೆಗಳನ್ನು ಎದುರಿಸಿ ತಾಳ್ಮೆಯಿಂದ ಆದರ್ಶನಾರಿಯಾಗಿ ಬಾಳಿದ್ದಾಳೆ. ಹೆಣ್ಣು ತನ್ನ ಸಂಸಾರದ ನೊಗಕ್ಕೆ ಹೆಗಲು ಕೊಟ್ಟು ಜೀವನದ ಬಂಡಿಯನ್ನು ಸಾಗಿಸಿಕೊಂಡು ಹೋಗಿದ್ದಾಳೆಂಬುದು ಇಲ್ಲಿ ಸಾರಿದ್ದಾಳೆ.

ಬಂದು ನೋಡು ತಾಯಿ ನಮ್ಮ ಬಡವರ ಮಗಳನ್ನು
ಅಳ್ತಾ ಕುಂತಾಳವಳು ಮನಿಯೊಳಗ ಬಂದು ನೋಡು ತಾಯಿ

ಒಪ್ಪತ್ತೂಟವು ಹಾಸಲು ಹರಕಲು ಚಾಪೆಯು
ಒಪ್ಪಂತ ಮನೆಗೆ ಕೊಡಲಿಲ್ಲ ಬಂದು ನೋಡು ತಾಯಿ

ರಾತ್ರಿಯೆಲ್ಲಾ ನಿದ್ರೆಯು ಇಲ್ಲದೆ ಜೋಳವು ಬೀಸ್ಯಾಳೆ
ರೊಟ್ಟಿ ಕಾಣದೆ ನೋಡು ಬಂದು ಉಪವಾಸ ಮನಗ್ಯಾಳೆ

ದಿನವೆಲ್ಲ ದುಡಿದರೂ ತಪ್ಪದು ಯನ್ನಯ ವನವಾಸ
ಉಪವಾಸ ಬಿದ್ದಾವ ಮನೆಮಕ್ಕಳೆಲ್ಲಾ ಬಂದು ನೋಡು ತಾಯಿ

ಭಂಡ ಗಂಡನ ಕೂಡಿಕೊಂಡು ಕೂಲಿಯ ಮಾಡ್ಯಾಳ
ಕೂಳು ಕಾಣದೆ ಮಲಗ್ಯಾಳೆ ಬಂದು ನೋಡು ತಾಯಿ

ಹೆಣ್ಣಿನ ಜೀವನ ಹಣ್ಣಿನ ಹೋಳ್ಹಂಗ ಮಣ್ಣ ಆಯಿತಲ್ಲಾ
ಧರೆಯೊಳ ಬಂದು ನೋಡು ತಾಯಿ ಕಷ್ಟದ ಕೈಲಾಸ

ಇಷ್ಟೆಲ್ಲ ತಿಳಿದರೂ ಕಡುಕಷ್ಟವ ಪಡುತಿಯ ಗಟ್ಟಿಯಾಗಿ ನೀನು
ಮೆಟ್ಟನಿಲ್ಲಲು ಮುಂದೆ ಮುಂದೆ ಬಾರೆ ತಾಯಿಯೇ ೨೭

ಇಷ್ಟೆಲ್ಲಾ ಕಷ್ಟಪಟ್ಟರೂ, ಒಪ್ಪತ್ತಿನ ಊಟಕ್ಕೂ ಬರವೇ. ಭಂಡ ಗಂಡನ ಆಧಾರವಿಲ್ಲದೆ, ಮಕ್ಕಳಿಗಾಗಿ ಒಬ್ಬಳೇ ದುಡಿಯುತ್ತಾಳೆ. ಸುಖದಲ್ಲಿ ಎಲ್ಲರೂ ಸಾಥಿಯಾಗುವರು, ಕಷ್ಟದಲ್ಲಿ ಯಾರೂ ಕೇಳುವುದಿಲ್ಲ. ಮಕ್ಕಳೊಂದಿಗೆ ಉಪವಾಸಬಿದ್ದರೂ ಯಾರೂ ಕೇಳರು. ಏಕೆಂದರೆ ಕೇಳಿದರೆ ಎಲ್ಲಿ ತನಗೆ ಅಂಟಿಕೊಳ್ಳುವರೋ ಎಂಬ ಭಾವನೆಯಿಂದ, ಆದರೆ ಭಾರತದ ಆದರ್ಶ ಗರತಿ ಇದಾವುದಕ್ಕೂ ಹೆದರದೆ, ಭಯಪಡದೆ ಗಟ್ಟಿಯಾಗಿ ನೆಲೆ ನಿಂತು ತಾನು ಉಪವಾಸವಿದ್ದರೂ ತನ್ನಕರುಳಿನ ಕುಡಿಗಳಿಗೆ ಒಪ್ಪತ್ತಿನ ಊಟಕ್ಕಾದರೂ ವ್ಯವಸ್ಥೆ ಮಾಡುವಳು. ಇದೇ ಜನಪದ ಗರತಿಯ ವೈಶಿಷ್ಟ್ಯ.

ಜನಪದ ಗರತಿಯ ಮನದ ಮೇಲೆ ಪೌರಾಣಿಕ ಪ್ರಭಾವದಷ್ಟೇ ಕಲ್ಯಾಣದ ಶಿವಶರಣರ ಪ್ರಭಾವವೂ ಸಾಕಷ್ಟಾಗಿದೆ. ಅವರು ಮಾಡಿದ ಕ್ರಾಂತಿ, ಬೀರಿದ ತತ್ವಗಳನ್ನೆಲ್ಲಾ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಸುಸಂಸ್ಕೃತ ಜೀವನವನ್ನು ಸಾಗಿಸಿಕೊಂಡು ಬಂದಿದ್ದಾರೆ. ಅವರ ಜೀವನಾದರ್ಶಗಳನ್ನು ಅರಿತು, ಅನುಭವಿಸಿ ತಮ್ಮ ಹಾಡುಗಳಲ್ಲಿ ಎರಕ ಹೊಯ್ದಿದ್ದಾರೆ. ಗ್ರಾಮೀಣ ಸ್ತ್ರೀಯ ಮನವನ್ನು ಹೆಚ್ಚಾಗಿ ಆಕರ್ಷಿಸಿದ ಶಿವಶರಣರಲ್ಲಿ ಪ್ರಮುಖಳಾದವಳು ಅಕ್ಕಮಹಾದೇವಿ ಮತ್ತು ಅಕ್ಕನಾಗಮ್ಮ. ಇವರನ್ನು ಕುರಿತು ರಚನೆಯಾದ ಭಜನೆ ಹಾಡುಗಳು ವಿಪುಲವಾಗಿ ಕಂಡುಬರುತ್ತವೆ.

ಸತ್ಯ ಶರಣೆ ಮಹಾದೇವಿಯಕ್ಕ
ದೇಹಪವಿತ್ರ ಮಾಡ್ಯಾಳೋ ನಿಕ್ಕ
ಕೌಶಿಕನ ಮುರದಾಳೋ ಸೊಕ್ಕಾ
ಶರಣರ ಪಾದಕ.

ಉಡತಡಿ ಗ್ರಾಮದಲ್ಲಿ ಉದ್ಭವಿಸಿ ಬಂದಾಳಲ್ಲಿ
ಭಕ್ತಿಭಾವ ನೀತಿಯಲ್ಲಿ ಬಾಳು ಬೆಳಗಿದಾಳಲ್ಲಿ
ಕೌಶಿಕನ ಮುರದಾಳ ಸೊಕ್ಕ ಶರಣರ ಪಾದಕ

ಭವದೊಳು ಹೆಣ್ಣಾಗಿ ಹುಟ್ಟೀ
ವೈರಾಗ್ಯ ಅವತಾರ ತೊಟ್ಟಿ
ಮಾಯ ಮೋಹ ಮೊದಲಿಗೆ ಸುಟ್ಟೀ
ಕೈಯಲ್ಲಿ ರುದ್ರಾಕ್ಷಿ ಕಟ್ಟಿ । ಕೌಶಿಕನ
ಮುರದಾಳ ಸೊಕ್ಕ ಶರಣರ ಪಾದಕ

ಅನುಭವದ ತತ್ವವ ತಿಳಿದು । ಸೀರಿ ಕುಪ್ಪಸ ಎಲ್ಲವೂ
ಕಳೆದು । ಕಲ್ಲು ಮುಳ್ಳುಗಳೆಲ್ಲಾ ತುಳಿದು । ಕಲ್ಯಾಣಕೆ
ಬಂದಾಳ ಸುಳಿದು । ಕೌಶಿಕನ ಮುರದಾಳ ಸೊಕ್ಕ ಶರಣರ ಪಾದಕ

ಶರಣರ ತತ್ವವ ನೋಡಿ । ಪ್ರಭುದೇವರ ದರುಶನ ಮಾಡಿ
ಮುಕ್ತಿ ಮಾರ್ಗ ವರವು ಬೇಡಿ । ಕೇಶರಾಶಿ ಬಿಟ್ಟಾಳ ಜಡಿ
ಕೌಶಿಕನ ಮುರದಾಳ ಸೊಕ್ಕ ಶರಣರ ಪಾದಕ

ಮಹಾದೇವಿ ಅಕ್ಕನ ಮಹಿಮಾ ಕೇಳಿರೆ ನೀವು
ತಾಯಮ್ಮ । ಕದಳಿ ವನ ಸೇರ್ಯಾಳಮ್ಮ । ಅಮರ
ಕೀರ್ತಿ ಪಡದಾಳಮ್ಮ । ಕೌಶಿಕನ ಮುರದಾಳ ಸೊಕ್ಕ
ಶರಣರ ಪಾದಕ.

ಅಕ್ಕ ತಂಗಿ ನಡಿರವ್ವ ನೀತಿ ಪ್ರಾಯ
ಬಲು ಪಾಮರ ಜಾತಿ ತವರು ಮನೆಗೆ
ಅಪಕೀರ್ತಿ ತರುಬ್ಯಾಡರಿ ಪತಿವರತಿ
ಕೌಶಿಕನ ಮುರದಾಳ ಸೊಕ್ಕ ಶರಣರ ಪಾದಕ

ದೇಶದೊಳೂ ಭಾಲ್ಕಿ ಊರ ಚನ್ನಬಸವನ
ದಯೆ ಪೂರ ಬಸವಲಿಂಗನ ಗುರು
ಅವರ ದೈವ ಕೇಳಿರಿ ದೈವ ಅಮೃತಸಾರ
ಕೌಶಿಕನ ಮುರದಾಳ ಸೊಕ್ಕ ಶರಣರ ಪಾದಕ. ೨೮

ಎನ್ನುವ ಈ ಹಾಡು ಶಿವಶರಣೆ ಅಕ್ಕ ಮಹಾದೇವಿಯ ಜೀವನ ವೃತ್ತಾಂತವನ್ನು ತಿಳಿಸುತ್ತದೆ "ವೇದ ಶಾಸ್ತ್ರಗಳಲ್ಲಿ ತತ್ವ ಸಿದ್ಧಾಂತ ಅಡಕವಾಗಿದ್ದರೆ ಭಜನೆಯ ಹಾಡುಗಳಲ್ಲಿ ಅನುಭಾವ ಸಿದ್ಧಾಂತ ನಿರೂಪಿತವಾಗಿರುತ್ತದೆ" ಎಂದೇ ಇವು ಸರ್ವವ್ಯಾಪಿ ಖ್ಯಾತಿ ಪಡೆದು ಜನಪದ ಸಮಾಜದಿಂದ ನಾಗರಿಕ ಸಮಾಜದಲ್ಲಿಯೂ ಮಹತ್ವಿಕೆ ಗಳಿಸಿಕೊಂಡಿದೆ. ತಪ್ಪುತ್ತಿರುವ ಸಮಾಜವನ್ನು ಆಗಾಗ ಎಚ್ಚರಿಸುತ್ತ ವಿವಿಧ ರೀತಿಯಲ್ಲಿ ದಾರಿಗೆ ತರಲು ಪ್ರಯತ್ನಿಸುತ್ತಿವೆ.

ಜೀವನದಲ್ಲಿ ಎಲ್ಲ ಸುಖ, ದು:ಖಗಳನ್ನು ಅನುಭವಿಸಿ ಕೊನೆಗೆ ಈ ದೇಹವನ್ನು ತ್ಯಾಗ ಮಾಡಲೇಬೇಕು. ಆಗ ಯಾರಿಗೂ ಯಾರೂ ಆಗಲಾರರು. ಬರುವಾಗ ಒಂಟಿ, ಹೋಗುವಾಗಲೂ ಒಬ್ಬೊಂಟಿಯೇ. ಯಾರ ಆಧಾರವೂ ಬೇಕಿಲ್ಲ. ಅದನ್ನು ಗಮನಿಸಿದ. ಅನುಭಾವಿಗಳಾದ ಜಯದೇವಿ ತಾಯಿ ಲಿಗಾಡೆಯವರು ತಾರಕ ತಂಬೂರಿಯಲ್ಲಿ ಈ ರೀತಿ ತತ್ವದ ಮಾತನ್ನು ಹಾಡಿನ ಮೂಲಕ ಹೇಳಿದ್ದಾರೆ.

ಯಾರ ಆಧಾರ ನಮಗಿನ್ಯಾರ ಆಧಾರ
ಮಾರಹರನೆ ನಾ ಮರಗುತ ರಿದ್ದೇನು ಯಾರ ಆಧಾರ

ಮೂರು ಮಂದಿ ನನ್ನ ದಾರಿ ಬಿಡಿಸ್ಯಾರ
ಆರು ಮಂದಿ ನನಗೆ ಹೊರಲಕ ಬಂದಾರ

ಏಳು ಮಂದಿ ನನಗ್ಹಾಳ ಮಾಡ್ಯಾರ
ಕಾಳ ಬಂದರೆ ಕೈಯಲಿ ಕೊಡತಾರ

ಎಂಟು ಮಂದಿ ಕಾಲ ಕುಂಟ ಮಾಡ್ಯಾರ
ನೆಂಟರಂಗ ನನ ಮನಿಯ ಹೊಕ್ಕಾರ

ಹತ್ತು ಮಂದಿ ನನ ತೊತ್ತ ಮಾಡ್ಯಾರ
ಹೊತ್ತ ನೋಡಿ ಎನ್ ಹೊತ್ತು ಒಯ್ಯತಾರ

ಕೇರಿ ಕೇರಿ ಜೀವ ತಿರುಗುತ ಬಂದಿದೆ
ಹರ ಜಯಸಿದ್ಧಗೆ ಅರಪಿಸ ತಂದಿದೆ.

ಅನುಭವ ಎಂಬುದು ಸಾಧು ಸಂತರ ಅಧ್ಯಾತ್ಮಿಕ ಜೀವಿಗಳ ಚರಿತ್ರೆಗಳನ್ನು ಹಾಗೂ ಅವರು ಅತೀಂದ್ರಿಯ ಅನುಭವ ಎಂದು ನಮ್ಮ ಗಮನಕ್ಕೆ ಬರುತ್ತದೆ. ಕನ್ನಡದ ಶ್ರೇಷ್ಠ ಅಧ್ಯಾತ್ಮಿಕ ಸಾಹಿತ್ಯ ಎನಿಸಿದ ವಚನ ಸಾಹಿತ್ಯದಲ್ಲಿ ಅದು ಹೇರಳವಾಗಿ ಬಳಕೆಯಾಗಿದೆ. ಈ ರೀತಿ ನೀತಿಬೋಧೆ ತತ್ವಪದಗಳ ಪ್ರಧಾನ ಉದ್ದೇಶ. ವಿವಿಧ ವೇಷಗಳಲ್ಲಿ ಈ ಬೋಧೆ ಕಾಣಿಸಿಕೊಳ್ಳುತ್ತವೆ. ಪೌರಾಣಿಕ ಅಂಶಗಳ ಉದಾಹರಣೆಗಳೂ ದಿನನಿತ್ಯದ ಬಳಕೆಯ ವಸ್ತುಗಳ ಸಮಯೋಚಿತ ಹೋಲಿಕೆಗಳೂ ಹೇರಳವಾಗಿ ಇಲ್ಲಿ ಬಳಕೆಯಾಗುತ್ತವೆ. ವಚನ ಸಾಹಿತ್ಯದ ಪ್ರಭಾವ ಸಾಕಷ್ಟು ಆಗಿರುವುದರ ಸುಳಿವು ಇಲ್ಲಿನ ಹಾಡುಗಳಲ್ಲಿ ಸಿಕ್ಕುತ್ತವೆ. ಈ ಹಾಡುಗಳಲ್ಲಿ ಹಾಡುಗಾರರು ತಮ್ಮದೇ ಆದ ಅರ್ಥವಿವರಣೆಯನ್ನು ನೀಡಬಲ್ಲರು. ಈ ಬೀದರ ಜಿಲ್ಲೆಯಲ್ಲಿ ಹೆಚ್ಚು ವೈಶಿಷ್ಟ್ಯಗಳಿಂದ ಕೂಡಿದ ತತ್ವದ ಪದಗಳು ಇಲ್ಲಿಯ ಗೋರಟಾ ಎಂಬಲ್ಲಿ ಹೆಚ್ಚಾಗಿ ದೊರೆಯುತ್ತವೆ. ಆದರೂ ಈ ಜಿಲ್ಲೆಯ ಪ್ರತಿ ಹಳ್ಳಿಗಳಲ್ಲೂ ತತ್ವಪದಕಾರರನ್ನು ನಾವು ಕಾಣುತ್ತೇವೆ. ಯಾವ ಗ್ರಾಮಗಳಲ್ಲಿ ಮಠಗಳು, ದೇವಾಲಯಗಳು ಹೆಚ್ಚಾಗಿ ಕಂಡುಬರುತ್ತವೋ ಅಲ್ಲಿ ಹೆಚ್ಚಿನ ತತ್ವಪದಕಾರರನ್ನು ಗುರುತಿಸಬಹುದಾಗಿದೆ.

ಭಗವಂತನು ಬೇರೆ ಎಲ್ಲಿಯೂ ಇರನು, ಅವನು ಮಾನವನ ಆತ್ಮದಲ್ಲಿಯೇ ವಾಸವಾಗಿದ್ದಾನೆ. ಯಾವ ರೀತಿ ಕಬ್ಬಿನಲ್ಲಿ ಸಿಹಿ ಅಡಗಿದೆಯೋ, ಹಾಲಿನಲ್ಲಿ ಬೆಣ್ಣೆ, ತುಪ್ಪ, ಬೆರೆತಿದೆಯೋ ಹಾಗೆಯೇ ಈಶ್ವರನು ಮಾನವನ ಆತ್ಮದಲ್ಲಿ ಲೀನವಾಗಿದ್ದಾನೆ ಈ ದೇಹ ದೇವರ ಮಂದಿರದಂತಿದೆ. ಅದರಲ್ಲಿರುವ ಆತ್ಮವೇ ಪರಮೇಶ್ವರನು. ಚಕ್ರಧರನೂ ದೇಹದಲ್ಲಿ ವಾಸವಾಗಿದ್ದಾರೆ. ನಮ್ಮಲ್ಲಿಯೇ ದೇವರು ವಾಸವಾಗಿರುವಾಗ, ದೇವರನ್ನು ಹುಡುಕುತ್ತ ನಾವು ಮಂದಿರ, ಮಸೀದಿ, ಗುರುದ್ವಾರಗಳಿಗೆ ಹೋಗುತ್ತೇವೆ. ತುಕಾರಾಮನಲ್ಲಿ ಜನಪದ ಮಹಿಳೆಯು ಪ್ರಾರ್ಥಿಸುತ್ತಿದ್ದಾಳೆ ಈ ಮೂಢ ಜನರಿಗೆ ದೇವರು ದೇಹದಲ್ಲಿಯೇ ಇದ್ದಾನೆ ಹೊರಗೆ ಹುಡುಕುವುದು ಮೂರ್ಖತನವೆಂದು. ಮರಾಠಿಯಲ್ಲಿಯೂ ತತ್ವದ ಕುರಿತು ಈ ರೀತಿ ಹಾಡಿದ್ದಾರೆ.

ದೇಹ ದೇವಾಚೆ ಮಂದಿರ
ಆತ್ಮ ಆತ್ಮಾ ಪರಮೇಶ್ವರ
ಜಸಿ ಊಸಾತೋ ಸಾಖರ
ತಸಾ ದೇಹಾತ ಹೋ ಈಶ್ವರ
ಜಸೆ ಧುಧಾಮಧೆ ಲೋಣೆ
ತಸಾ ದೇಹಿ ಚಕ್ರಪಾಣಿ

ದೇವ ದೇಹಾತ ದೇಹಾತ
ಕಾಹೋ ಜಾತಾ ದೇವಳಾತ
ತುಕಾ ಸಾಂಗೆ ಮೂಢ ಜಣಾ
ದೇಹಿ ದೇವಾಚಾ ಪಾಹಣಾ [೩೦]

ಜನಪದ ಮಹಿಳೆಯು ಗುರುವನ್ನೇ ದೇವರೆಂದು ಪೂಜಿಸುತ್ತಿದ್ದಳು ಗುರು ಇಲ್ಲದೆ ಮುಕ್ತಿಯಿಲ್ಲ–ಎನ್ನುವ ಮಾತು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಗುರುವಿನಿಂದ ದೀಕ್ಷೆ ಪಡೆದರೆ ಮೋಕ್ಷ ದೊರಕುವುದು ಎಂಬ ಕಲ್ಪನೆಯಿಂದ ಕೂಡಿದವರಾಗಿದ್ದರು.

ಪಾಯ ತುಮಚಿ ಗುರುರಾಯಾ ಮಾಜಿ
ದೇವ ಪೂಜಾ ಶಿವ ಪೂಜಾ
ಗುರು ಚರಣಾಚಿ ಧ್ಯಾನ ಹೆಚ್
ಮಾಝಿ ಅನುಷ್ಠಾನ

ಗುರು ಗಂಗಾ ಗುರು ಕಾಶಿ
ಹೇಚ್ ಮಾಝೇ ಭಾಗೀರಥಿ
ಪಾಯ ತುಮಚಿ ಗುರುರಾಯಾ ಮಾಜಿ
ದೇವ ಪೂಜಾ ಶಿವಪೂಜಾ.

ಗುರು ಚರಣಾಚಿ ರಜಧೂಳ್
ಸರ್ವ ತೀರ್ಥಾಚಿ ಅಂಗುಳ ಮಾಝೀ
ದೇವ ಪೂಜಾ ಶಿವಪೂಜಾ
ಪಾಯ ತುಮಚಿ ಗುರುರಾಯಾ ಮಾಜಿ
ದೇವ ಪೂಜಾ ಶಿವಪೂಜಾ

ಗುರು ಚರಣಾಚಿ ಮಂತ್ರ ಸೌಂದಾಚಿ
ಲಾಗಲಿ ನಿದ್ರಾ ಮಾಝಿ
ದೇವ ಪೂಜಾ ಶಿವ ಪೂಜಾ

ಪಾಯ ತುಮಚಿ ಗುರರಾಯಾ ಮಾಜಿ
ದೇವ ಪೂಜಾ ಶಿವ ಪೂಜಾ

ಗುರುಚರಣಾಚಿ ಬಿಂದು ಹೆಚ್
ಮಾಝು ಖೀರ ಸಿಂಧು ಮಾಝಿ
ದೇವಪೂಜಾ ಶಿವಪೂಜಾ

ಪಾಯ ತುಮಚಿ ಗುರುರಾಯಾ ಮಾಝಿ
ದೇವ ಪೂಜಾ ಶಿವಪೂಜಾ [೩೧]

ಗುರುವಿನ ಭಕ್ತಿಯನ್ನು ಸ್ಮರಿಸುತ್ತಾ ಕೈಯಲ್ಲಿ ಏಕತಾರಿಯನ್ನು ಹಿಡಿದು ಒಂದು ಹೆಜ್ಜೆ ಓಂದಕ್ಕೂ, ಒಂದು ಹೆಜ್ಜೆ ಮುಂದಕ್ಕೂ ಇಡುತ್ತಾ, ಇನ್ನೊಂದು ಸುತ್ತಿಗೆ ಒಂದು ಹೆಜ್ಜೆ ಆಚೆಗೂ ಒಂದು ಹೆಜ್ಜೆ ಈಚೆಗೂ ಇಡುತ್ತಾ ಕುಣಿದಂತೆ ಹಾಡು ಹೇಳುವರು. ಇಬ್ಬರು ಮುಂದೇ ಹಾಡಿದರೆ ಉಳಿದ ಕುಳಿತ ಹೆಂಗಳೆಯರೆಲ್ಲ ಕೈಯಲ್ಲಿರುವ ಹಿತ್ತಾಳೆ ಚಳ್ಳಂಗಳನ್ನು ಒಂದಕ್ಕೊಂದು ಬಡಿದು ಜೋರಾದ ನಾದ ಹೊರಡಿಸುತ್ತ ಹಿಂದಿನಿಂದ ಹಾಡುವರು. ಯಾವ ಸಾಧನವೂ ಇರದ ಹೆಂಗಳೆಯರು ಎರಡೂ ಕೈಯಿಂದ ಚಪ್ಪಾಳೆ ತಟ್ಟುತ್ತಾ ಹಾಡುವರು. ಹಾಡಿನ ಕೊನೆಯಲ್ಲಿ ಎಲ್ಲರೂ ಒಂದೇ ಸ್ವರದಲ್ಲಿ ಪಲ್ಲವಿ ನುಡಿದು ಹಾಡು ಮುಗಿಸುವರು. ಗುರುವಿನ ಧ್ಯಾನವೇ ನನ್ನ ದೇವರ ಬಗ್ಗೆ ಅನುಷ್ಠಾನ. ಗುರುವಿನ

ಪಾದಪೂಜೆಯಲ್ಲಿಯೇ ಗಂಗಾ, ಕಾಶಿ, ಭಾಗೀರಥಿಯರನ್ನು ಕಾಣುತ್ತೇವೆ (ಕಾಶಿ ಎಂದರೆ ತಾಯಿ ಎಂದೂ ಕೆಲವರು ಸ್ಮರಿಸುವರು) ಅವರ ಪಾದದ ಕಸವೇ, ಎಲ್ಲ ತೀರ್ಥಗಳಲ್ಲಿ ಸ್ನಾನ ಮಾಡಿದಂತೆ, ಅವನ ಜಪದಲ್ಲಿ ಲೀನವಾಗುವುದೇ ನನ್ನ ನಿದ್ರೆ ಅವನ ಪ್ರಸಾದವೇ ನನಗೆ ಪಾಯಸ ತಿಂದಷ್ಟು ಸವಿ ಎಂದು ಜನಪದ ಮಹಿಳೆಯರು ಗುರುವಿನ ಬಗ್ಗೆ ಇದ್ದ ಅನನ್ಯ ಭಕ್ತಿಯ ಕುರಿತು ನುಡಿದಿದ್ದಾರೆ. ಈ ಪ್ರಕಾರವನ್ನು ಪುರುಷರು ಹೆಚ್ಚಾಗಿ ಬೆಳೆಸಿಕೊಂಡು ಬಂದರೂ ಮಹಿಳೆಯರು ಕೂಡ ಈ ಪ್ರಕಾರದಿಂದ ಹಿಂದೆ ಉಳಿದಿರುವುದಿಲ್ಲ.

೫.೬ ಸಾಮಾಜಿಕ ಹಾಡುಗಳು:

ಜಾನಪದ ಹಾಡುಗಳು ಬದಲಾಗುತ್ತಿರುವ ಸಮಾಜದಲ್ಲಿ ಹಿಂದಿನ ಸಂಸ್ಕೃತಿಯನ್ನು ಪ್ರತಿನಿಧಿಸಿ ಸಂಶೋಧನೆಗೆ ಆಕರವನ್ನು ಒದಗಿಸುತ್ತವೆ. ಆ ಕಾರಣಕ್ಕಾಗಿಯೇ ಅವುಗಳನ್ನು ಸಂಗ್ರಹಿಸದೇ ಬಿಡುವುದು ಸರಿಯಲ್ಲ. ಹಾಡು ಹೇಗಿದ್ದರೇನು, ಆ ಹಾಡಿನ ಒಳ ಹೊರವು ನಮಗೆ ಮುಖ್ಯವಾಗಿರುತ್ತದೆ. ಆದ್ದರಿಂದ ಅವುಗಳನ್ನು ನಿರ್ಲಕ್ಷಿಸಿ ಕೈಬಿಡುವುದು ಉಚಿತವಲ್ಲ. ಅದಕ್ಕಾಗಿಯೇ ಇಲ್ಲಿ ಕೆಲವು ಬೀದರ್ ಜಿಲ್ಲೆಯ ಸಾಮಾಜಿಕ ಹಾಡುಗಳನ್ನು ಸಂಗ್ರಹಿಸಲಾಗಿದೆ.

ಜಾನಪದರು ತಮ್ಮ ಸುತ್ತಮುತ್ತಲಿನ ಬದುಕಿನಲ್ಲಿ ನಡೆಯುವಂತಹ ಎಲ್ಲಾ ವಿದ್ಯಮಾನಗಳನ್ನು ಕುರಿತು ತಮ್ಮ ಪದಗಳಲ್ಲಿ ಸ್ಮರಿಸುತ್ತ ಬಂದಿರುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಕರ್ನಾಟಕದ ಹಿಂದುಳಿದ ಪ್ರಾಂತ್ಯವಾದ ಉತ್ತರ ಕರ್ನಾಟಕದ ಸಾಮಾಜಿಕ ಪರಿಸ್ಥಿತಿಯನ್ನು ಸುಧಾರಿಸಲು ಮುಂದಾದ ಹಲವಾರು ಸಾಮಾಜಿಕ ಸುಧಾರಣಾವಾದಿ ಚಳವಳಿಗಳ ಪ್ರಗತಿಪರವಾರ ನಿಲುವು ಹಾಗೂ ಅವುಗಳ ಸೇವೆಯನ್ನು ಸ್ಮರಿಸುತ್ತಾ ಬಂದಿರುವ ಕೆಲವು ಮಹಿಳಾ ಹಾಡುಗಳನ್ನು ಬೀದರ್ ಪ್ರಾಂತ್ಯದಲ್ಲಿ ಗುರುತಿಸಬಹುದಾಗಿದೆ. ಅವುಗಳು ಈ ಮುಂದಿನಂತಿವೆ.

ಆರ್ಯ ಸಮಾಜದ ಕೊಡುಗೆ:

ದಯಾನಂದ ಸರಸ್ವತಿಯವರು ೧೮೭೫ ರಲ್ಲಿ ಮುಂಬೈಯಲ್ಲಿ ಆರ್ಯ ಸಮಾಜ ಸ್ಥಾಪನೆ ಮಾಡಿದರು. ಹೈದ್ರಾಬಾದ ಸಂಸ್ಥಾನದ ಬೀದರ ಜಿಲ್ಲೆಯ ಧಾರಾದಲ್ಲಿ ಪ್ರಥಮ ಶಾಖೆ ಆರಂಭವಾಯಿತು. ನಿಜಾಮನ ಮತಾಂಧತೆಯನ್ನು ವಿರೋಧಿಸುವುದೇ ಇವರ ಮುಖ್ಯಗುರಿಯಾಗಿತ್ತು. ಆರ್ಯ ಸಮಾಜ ವಿಮೋಚನೆಗೆ ಕೊಟ್ಟ ಕಾಣಿಕೆ ಅವಿಸ್ಮರಣೀಯ. ಮೋರಗಿ ಗ್ರಾಮದಲ್ಲಿ ಪರಮಪೂಜ್ಯ ಚನ್ನಬಸವ ಪಟ್ಟದ್ದೇವರು ಕನ್ನಡ ಪಾಠಶಾಲೆ ತೆರೆಯುವ ಮೂಲಕ ವಿದ್ಯಾಪ್ರಸಾರ ಕೈಗೊಂಡರು. ಹಿಂದೂಗಳ ರಕ್ಷಣೆ ಆರ್ಯಸಮಾಜದ ಮುಖ್ಯಕೆಲಸ. ಸಮಾಜ ಪ್ರತಿನಿಧಿ ಸಭಾದ ಆದೇಶದಂತೆ ಪಂ. ಕೇಶವರಾವ್ ಕೊರಟ್‌ಕರ್, ವಿನಾಯಕ್‌ರಾವ ವಿದ್ಯಾಲಂಕಾರ್, ಪಂಡಿತ್ ನರೇಂದ್ರಜೀ ಪಂ. ಕೇಶವರಾವ ಮುಂತಾದವರು ಹೈದ್ರಾಬಾದ ಕರ್ನಾಟಕದ ಪ್ರತಿ ಹಳ್ಳಿಗೆ ಭೇಟಿ ನೀಡಿ ಹೋರಾಟಕ್ಕೆ ಸ್ಫೂರ್ತಿ ತುಂಬಿದರು. ಬೀದರ ಜಿಲ್ಲೆಯ ಹುಮನಾಬಾದ, ಭಾಲ್ಕಿ, ಹಳ್ಳಿಖೇಡ್, ಚಿಟಗುಪ್ಪಾ, ಉದಗೀರ್ ಮುಂತಾದ ಕಡೆ ಕಾಳ್ಗಿಚ್ಚಿನಂತೆ ಆರ್ಯ ಸಮಾಜದ ಪ್ರಕ್ರಿಯೆ ಆರಂಭವಾಯಿತು.

ಆರ್ಯ ಸಮಾಜದ ಶಾಲೆಗಳನ್ನು ತೆರೆಯಲಾಯಿತು. ಇದೇ ಸಮಯದಲ್ಲಿ ಮುಸ್ಲಿಂರು ಒತ್ತಾಯವಾಗಿ ಹಿಂದುಗಳನ್ನು ಮತಾಂತರಗೊಳಿಸುತ್ತಿದ್ದರು. ಮತಾಂತರಗೊಂಡ ಹಿಂದುಗಳನ್ನು ಆರ್ಯಸಮಾಜದಲ್ಲಿ ಸೇರಿಸುವ ಕೆಲಸ ಇವರು ಮಾಡಿದರು. ನಾಗರಿಕ ಮತ್ತು ಧಾರ್ಮಿಕ ಹಕ್ಕುಗಳ ಪುನರ್‌ಸ್ಥಾಪನೆಗಾಗಿ ಹಿಂದೂಗಳಿಗೆ ವಕೀಲರು ಉಚಿತ ಸೇವೆ ನೀಡಿದರು. ಹಿಂದೂ ಧರ್ಮ ಮೌಲ್ಯ ಎತ್ತಿ ಹಿಡಿಯಲು ಬ್ರಾಹ್ಮಣ, ಲಿಂಗಾಯತ, ದಲಿತರ ನಡುವೆ ಅಂತರ್‌ಜಾತಿ ವಿವಾಹಗಳನ್ನು ಏರ್ಪಡಿಸಿದ್ದು ಬೀದರ್ ಉದಗೀರ್ ಹಾಗೂ ಚಿಟಗುಪ್ಪಗಳಲ್ಲಿ ಹೊಸ ಬೆಳವಣಿಗೆಯಾಯಿತು.

೧೯೩೮ ರಲ್ಲಿ ಸೊಲ್ಲಾಪುರದಲ್ಲಿ ಜರುಗಿದ ಅಖಿಲ ಭಾರತ ಆರ್ಯಸಮಾಜ ಸಮ್ಮೇಳನ ನಡೆಯಿತು. ಆರ್ಯಸಮಾಜದ ಮುಖಂಡರು ನಿಜಾಮ ಪೋಲಿಸರ ಪ್ರತಿ ಏಟಿಗೂ 'ವಂದೆ ಮಾತರಂ' ಎನ್ನುತ್ತಿದ್ದರು ೧೯-೦೬-೧೯೩೮ ರಂದು ಆರ್ಯಸಮಾಜ ಮುಖಂಡರಾದ ಶಾಮಲಾಲರಿಗೆ ಬೀದರ ಜೈಲಿನಲ್ಲಿ ವಿಶಪ್ರಾಶನ ನೀಡಲಾಯಿತು. ಚಿಟಗುಪ್ಪಾದಲ್ಲಿದ್ದ ಭವಾನಿ ಮೆರವಣಿಗೆಯಲ್ಲಿ ನಿಜಾಮ ಸೈನಿಕರನ್ನು ಆರ್ಯಸಮಾಜದವರು ಸದೆ ಬಡೆದರು. ಡಿಸೆಂಬರ್ ೧೯೩೯ ರಲ್ಲಿ ಬಸವಕಲ್ಯಾಣದ ಪ್ರಖ್ಯಾತ ಹೋರಾಟಗಾರ ಧರ್ಮಪ್ರಕಾಶರ ಕೊಲೆ ಮಾಡಲಾಯಿತು. ಉಸ್ಮಾನ್‌ಗಂಜಿನ ರಂಗ ಮಂದಿರದ ಎದುರಿನ ತಮ್ಮ ಮನೆಗೆ ಹೋಗುತ್ತಿರುವಾಗ ಬಸ್ವಂತರಾವ್ ಶೆಟಕಾರರನ್ನು ಬಂಧಿಸಿ ರಜಾಕಾರರು ಕೊಂದು ಹಾಕಿದರು. ೧೯೪೭ ರಲ್ಲಿ ಆರ್.ವಿ. ಬಿಡಪ್ಪನವರ ತಂದೆ ವೀರಭದ್ರಪ್ಪನವರ ಮೇಲೆ ಹಲ್ಲೆ ಮಾಡಿದರು. ೧೯೪೭ ರಲ್ಲಿಯೇ ಬೀದರ್ ಭಾಲ್ಕಿಯ ನಡುವೆ ಇದ್ದ ರೇಲ್ವೆ ತಂತಿಗಳನ್ನು ಕತ್ತರಿಸಿ ಹಾಕಿದರು. ಈ ರೀತಿ 'ಆರ್ಯಸಮಾಜದ' ಕಟ್ಟ ವೈರಿಗಳಂತೆ ಅದರಲ್ಲಿ ಕಾರ್ಯ ಮಾಡುತ್ತಿರುವವರನ್ನು ಕೊಲೆಗೈಯುತ್ತಲೇ ಹೋದರು. ಅದರ ಕುರಿತು ಮಹಿಳೆಯರು ಬುಲಾಯಿ ಹಾಡಿನಲ್ಲಿ ಮನ ಮಿಡಿಯುವಂತೆ ಹಾಡಿದ್ದಾರೆ.

ಸರಸ್ವತಿ ದಯಾನಂದ ಮರಿಯಲಾರೆ ನಿಮ್ಮ ಪಾದ
ಆರ್ಯ ಧರ್ಮ ನಮ್ಮದಾದ ॥ ಕೋಲೆಣ್ಣಾ ಕೋಲೆ ॥
ಆರ್ಯ ಸಮಾಜ ಎಂಬ ಮಾತು ತುರಕರಿಗೆ
ಬದಿ ಬಂತು ಯಾವ ದಿನ ಮಾಡರಿ ಘಾತು ॥ ಕೋಲೆಣ್ಣಾ ಕೋಲೆ ॥

ಕಲ್ಯಾಣೆಂಬುದು ಪ್ಯಾಟಿ ಅಲ್ಲಿ ಕಲಿಯುವದು ಲಾಠಿ
ಹುಡುಗರಿರುವದು ಏಕ್ ಜತ್ತಿ ॥ ಕೋಲೆಣ್ಣಾ ಕೋಲೆ ॥
ನೂರೆಂಟು ಮಂದಿ ಜತ್ತ ಮಾತಾಡ್ಯಾರ ಏಕಂತ
ಯಾವ ದಿನ ಮಾಡರಿ ಘಾತ ॥ ಕೋಲೆಣ್ಣಾ ಕೋಲೆ ॥

ಇಸ್ಮಾಯಿಲ ವಕೀಲಗ ಕೇಳುತಾರೋ ಎಲ್ಲರ ಕುಂತ
ಸಮಾಜಾಯ್ತು ಮಾಡರಿ ಹ್ಯಾಂಗ ॥ ಕೋಲೆಣ್ಣಾ ಕೋಲೆ ॥
ಮಿತಿ ಚೈತ್ರ ಅಮಾಸಿದಿನ ಕತ್ತಲ ಕಾಳವನ
ಖಳವೂತೆ ಹೊಂಟಾರಿವನ ॥ ಕೋಲೆಣ್ಣಾ ಕೋಲೆ ॥

ಖಳವೂತೆ ಹೊಂಟಾರಿವನ ಬಸವಣ್ಣನ ಗುಡಿತನ
ಹೋಗುತ್ತೇವ್ರಿ ನಮಸ್ತೆಇನ್ನ ॥ ಕೋಲೆಣ್ಣಾ ಕೋಲೆ ॥
ಧರ್ಮಪ್ರಕಾಶೆಂಬ ವೀರ ಅವಾ ಇದ್ದ ಬಹಾದ್ದೂರ
ಲಾಠಿ ಕಲ್ಸ ಮಾಸ್ತರ ॥ ಕೋಲೆಣ್ಣಾ ಕೋಲೆ ॥

ನೂರೆಂಟು ಮಂದಿ ಜತ್ತ ಮಾತಾಡ್ತಾರೇಕಾಂತ
ಧರ್ಮ ವೀರಗ್ ಹಾಕ್ಯಾರ್ ಸುತ್ತ ॥ ಕೋಲೆಣ್ಣಾ ಕೋಲೆ ॥
ಲಾಠಿ ಕಲಸ ಮಾಸ್ತರ ತಿರುವುತಾನ ಲಾಠಿ ಆಗ
ದೌಡ್ ಮಾಡಿ ಮಾದರಗಲ್ಲಿ ॥ ಕೋಲೆಣ್ಣಾ ಕೋಲೆ ॥

ದೌಡ್ ಮಾಡಿ ಮಾದರಗಲ್ಲಿ ಬರಲಿಲ್ಲ ಒಬ್ಬರ ಹೊರಗ
ಸೋತು ಬಿದ್ದಾರೋ ನೆಲಕ ॥ ಕೋಲೆಣ್ಣಾ ಕೋಲೆ ॥
ಸೋತು ಬಿದ್ದಾರೋ ನೆಲಕ, ಆಗೋ ನೀ ತುರಕರ ಮುಲ್ಲಾ

ಆರ್ಯ ಸಮಾಜ ಬಿಡೋ ನೀನು ॥ ಕೋಲೆಣ್ಣಾ ಕೋಲೆ ॥

ಜೀವ ಹೋದರ ಪರವಾ ಇಲ್ಲ ಆಗಣೆಲ್ಲ ತುರಕರ ಮುಲ್ಲಾ
ಆರ್ಯಧರ್ಮ ಬಿಡೋದಿಲ್ಲ ॥ ಕೋಲೆಣ್ಣಾ ಕೋಲೆ ॥
ಆರ್ಯಧರ್ಮ ಬಿಡೋದಿಲ್ಲ । ಲಾಠಿ ಬಿತ್ತು ಬೆನ್ನೀಗಿ
ಓಂನಂತೆ ಅನುಬ್ಯಾಡ ನೀನು ॥ ಕೋಲೆಣ್ಣಾ ಕೋಲೆ ॥

ಓಂನಂತೆ ಅನುಬ್ಯಾಡ ನೀನು ಆರ್ಯಧರ್ಮ ಬಿಡೋ ನೀನು
ಪಸತ್ತೀಸ್ ಪೆಟ್ಟ ಹಾಕ್ಯಾರ್ ಕೈಗಿ ॥ ಕೋಲೆಣ್ಣಾ ಕೋಲೆ ॥
ಅಯ್ಯೋಶಿವಾ ಭಗವಂತ ಯ್ಯಾಳ್ಯಾ ಹೆಂತದು ಬಂತೋ
ಬರ್ಚಿ ಪೆಟ್ಟು ಬೆನ್ನಾಗ ಬಿತ್ತು ॥ ಕೋಲೆಣ್ಣಾ ಕೋಲೆ ॥

ನೀರು ನೀರು ಅಂದಾರ ಆಗ ಓಡಿ ಹೋಗ್ಯಾರೋ ಬೇಗ
ಹೊಂಟು ಹೊಯ್ತು ಮುಲಾಸ್ ಇನ್ನು ॥ ಕೋಲೆಣ್ಣಾ ಕೋಲೆ ॥
ಧರ್ಮ ಪ್ರಕಾಶ್ ಸತ್ತಿದ ಸುದ್ದಿ ಠಾಣಾಕ ಹೋಯಿತು
ತಾರ್ ಮಾಡಿ ನೂರಾ ಎಂಟು ॥ ಕೋಲೆಣ್ಣಾ ಕೋಲೆ ॥

ಧರ್ಮಪ್ರಕಾಶಗ ಕಡದಿದ ಸುದ್ದಿ ಮೌನ್‌ಸಿಂಗ್
ಬೆಂಕಿಕೆಂಡ ಮೌನ್‌ಸಿಂಗ್ ಓಡ್ಯಾರ್ ಭೇಗ ॥ ಕೋಲೆಣ್ಣಾ ಕೋಲೆ ॥
ಶ್ಯಾರ ಬೀದರ ಕೋಟಿ ಬಗಲಿಗ್ಹಾಕ್ಯಾರೋ ಲಾಠಿ
ಓಡಿ ಬಂದಾರೋ ಮಣ್ಣಿಗಿ ಘಟ್ಟ ॥ ಕೋಲೆಣ್ಣಾ ಕೋಲೆ ॥

ನಿಟ್ಟೂರೂ, ನೀಲಂಗಿ, ನಿಗ್ಗುಡಗಿ, ಸಸ್ತಾಪೂರ
ಓಡಿ ಬಂದಾರೋ ಮಣ್ಣೇಗಿ ಘಟ್ಟ ॥ ಕೋಲೆಣ್ಣಾ ಕೋಲೆ ॥
ಓಡಿ ಬಂದಾರೋ ಮಣ್ಣೇಗಿ ಘಟ್ಟ ನೋಡ್ಯಾರೋ ಕಡದಿದ ಪಿಂಡ
ಧರ್ಮಕ್ಕಾಗಿ ಜೀವಕೊಟ್ಟಾರೋ ॥ ಕೋಲೆಣ್ಣಾ ಕೋಲೆ ॥
ವೀರನ ಮಡದೀಗಿ ಕರಸಿಕೊಂಡಾರೋ ಭೇಗ
ಏನು ಹೇಳತಿ ಹೇಳ ತಂಗಿ ॥ ಕೋಲೆಣ್ಣಾ ಕೋಲೆ ॥
ತಿಂಗಳಿಗಿ ಪಗಾರ ಬಾರಾ ರೂಪಾಯಿ ಕೊಡ್ತಿವಿ
ಉಂಡಿರೇ ತಂಗಿ ಬಿನ್ ಫೀಕೀರಿ ॥ ಕೋಲೆಣ್ಣಾ ಕೋಲೆ ॥

ಗುಲಾಬ್ಹುವ್ವಾ, ಮಲ್ಲಿಗ್ಹುವ್ವಾ ಒಂದು ಲಾರಿ ತಂದಾರೋ ಆಗ
ಇತರೆಣ್ಣೆ ತಂದಾರೋ ಬೇಗ ॥ ಕೋಲೆಣ್ಣಾ ಕೋಲೆ ॥
ಆರ್ಯ ಸಮಾಜೆಂಬ ಮಾತು ತುರುಕರಿಗಿ ಬದಿ ಬಂತು
ಹಿಂದೂಗಳಿಗೆ ಮಾಡ್ಯಾರ ಘಾತು ॥ ಕೋಲೆಣ್ಣಾ ಕೋಲೆ ॥ [೩೨]

ಬೀದರ ಜಿಲ್ಲೆಯ ಗಡಿನಾಡಿನಲ್ಲಿರುವ ಎಲ್ಲ ಮರಾಠಿಗರು ಮರಾಠಿಯಲ್ಲಿ ರಜಾಕಾರರ ಘಟನೆಯ ಕುರಿತು ಹಾಡುತ್ತಿದ್ದರು. ಜೊತೆಗೆ ಕನ್ನಡಿಗರೂ ಧ್ವನಿ ಸೇರಿಸುತ್ತಿದ್ದರು.

ಮಾಜಕೀಗ ದಾರಾವೂನ ರಜಾಕಾರಾಚೇ ಮೇಳ ಗೇಲಾ
ರಜಾಕಾರಾಚೆ ಮೇಳ ಗೇಲಾ । ರಣಗಾಡ್ಯಾಲಾ ಬೋಲವೀಲಾ

ಆಲಾ ಆಲಾ ರಣಗಾಡಿ । ರಣಗಾಡ್ಯಾಲಾ ಅಕಯೇರಿ

ರಜಾಕಾರಾಚಾ ತುಕಡಿಯೇ । ರಾಜಾಸಾ ಬಂಧುವಿನೋ

ರಜಾಕಾರಾಚಾ ತುಕಡಿಯೇ

ಮಾಜಾಕೀಗ ದಾರಾವೂನ ಮಿಟ್ರಚ ಮೇಳ ಗೇಲ
ರಣಗಾಡ್ಯಾಲಾ ಬೋಲವೀಲ

ಆಲಾ ಆಲಾ ರಣಗಾಡಿ । ರಣಗಾಡ್ಯಾಲಾ ಆಲಾ ಹೌಸ

ಆಲಾ ಹಿಂದೂಚ ಮುಲಕ । ರಾಜಾಸ ಬಂಧುವಾನಾ
ಆಲಾ ಹಿಂದೂಚ ಮುಲುಕ

ಪಾಟ್ಯಾಚಿ ಪಾಯರಿ ಮದಿ

ತಾಂಬ್ಯಾ ಕಸ್ಯಾನ ವಲ್ಲಝಾಲಾ

ಸುಭಾಸ ದುಧ ಪೀಲಾ । ಸುಭಾಸ ಬಾಳ ಮಾಝಾ

ಪೈಲ್ವಾನ ದೂಧ ಪೀಲಾ । ರಾಜಾಸ ಬಂಧುವಾನೋ

ಪೈಲ್ವಾನ ದೂಧ ಪೀಲಾ

ಮಾಜಕೀಗ ದಾರಾವೂನ ಮಿಟ್ರೇಚ ಮೇಳಗೇಲಾ

ರಣಗಾಡ್ಯಾಲಾ ಬೋಲವೀಲಾ । ಮಿಟ್ರೇಚ ಮೇಳಗೇಲ

ರಣಗಾಡ್ಯಾಲಾ ಆಲಾ ಹೌಸ । ಪಡಲಾ ರಕ್ತಾಚಾ ಪಾವೂಸ

ರಾಜಾಸ ಬಂಧುವಾನೋ । ಪಡಲಾ ರಕ್ತಾಚಾ ಪಾವೂಸ

ಪಾಟ್ಯಾಚಿ ಪೈರಿ ಮದಿ ನೆಹರು ಬಸತಿ

ದುವಯೇರಿ । ನಿಜಾಮ ಉತರಲಿ ಪೈರಿ ಖಾಲಿ

ರಾಜಾಸ ಬಂಧುವೋನ । ನಿಜಾಮ ಉತರಲ ಪೈರಿ ಖಾಲಿ [೩೩]

ರಜಾಕಾರರ ಹಾವಳಿ ಹೈದ್ರಾಬಾದ ಕರ್ನಾಟಕದ ತುಂಬೆಲ್ಲ ಹಾಗೂ ಬೀದರ್ ಜಿಲ್ಲೆಯಲ್ಲಿ ಹಾಹಾಕಾರ ಹೆಚ್ಚಾದಾಗ, ಸರ್ದಾರ ವಲ್ಲಭಾಯಿ ಪಟೇಲರ ಚಾಣಾಕ್ಷತನದಲ್ಲಿ ಮಿಲಿಟ್ರಿಯ ತುಕಡಿ ಬೀದರ ಜಿಲ್ಲೆಗೆ ಬಂದಿತು. ಕಂಡಲ್ಲಿ ಗುಂಡು ಎನ್ನುವಂತೆ, ಇದುವರೆಗೆ ಮುಸ್ಲೀಮರು ಹಿಂದೂಗಳ ರುಂಡ ಚೆಂಡಾಡಿದರು ಆದರೆ ಮಿಲಟ್ರಿ ಬಂದಾಗ ಇಲಿ ಬಿಲ ಸೇರುವಂತೆ ಅಡಗಿ ಕುಳಿತುಕೊಳ್ಳಲು ಹವಣಿಸಿದರು. ಆದರೆ ಮಿಲಿಟ್ರಿ ಅವರನ್ನು ರಣಗಾಡಿಗೆ ಬಲಿಕೊಟ್ಟೂ ರಕ್ತದ ಹೊಳೆ ಹರಿಸಿದರು. ರಜಾಕಾರರು ಗದ್ದುಗೆಯಿಂದ ಕೆಳಗಿಳಿದು ಶರಣಾಗತರಾದರು ಭಾರತದ ಒಕ್ಕೂಟದಲ್ಲಿ ಒಂದಾಗಲು ಸಿದ್ದರಾದರು. ಆಗ ವೀರ ಸುಭಾಸ್, ಭಗತ್ ಸಿಂಗ, ಪಟೇಲ, ನೆಹರೂರವರನ್ನು ಸ್ಮರಿಸದೇ ಇರಲು ಸಾಧ್ಯವಿಲ್ಲ. ಈ ರೀತಿಯಾಗಿ ಹೈದ್ರಾಬಾದ ರಾಜ್ಯದಲ್ಲಿದ್ದ ಬೀದರ್ ಜಿಲ್ಲೆಯ ಭಾಷಾವಾರು ಪ್ರಾಂತ ರಚನೆಯಾಗಿ ಕರ್ನಾಟಕ ರಾಜ್ಯಕ್ಕೆ ಸೇರಿದೆ. ಅಂದು ನಿಜಾಮ ಆಳ್ವಿಕೆಯಲ್ಲಿ ಉರ್ದುವಿನ ಪ್ರಭಾವ ಕನ್ನಡಿಗರ ಮೇಲಾಗಿದ್ದರೆ ಇಂದು ಮರಾಠಿಯ ಪ್ರಭಾವವಾಗುತ್ತಿರುವುದು ಕಂಡುಬರುತ್ತದೆ.

ಜನಪದರಿಗೆ ಪುರಾಣಗಳಲ್ಲಿ ಹೆಚ್ಚಿನ ನಂಬಿಕೆಯಿದೆ. ಅವು ನಿಜಕ್ಕೂ ಆಗಿ ಹೋದ ಘಟನೆಗಳೇ ಎಂಬ ಬಲವಾದ ನಂಬಿಕೆ ಅವರಲ್ಲಿದೆ. ಹೀಗಾಗಿ ಪುರಾಣಗಳು ಅವರ ಬದುಕಿನಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿವೆ. ಈ ಪುರಾಣಗಳಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಹಾಡುಗಳಿಗೆ, ಕಥೆಗಳಿಗೆ ವಸ್ತುವಾಗಿ ಜನಪದರು ಉಸಿರನ್ನು ನೀಡಿದ್ದಾರೆ. ಬುಲಾಯಿ ಹಾಡುಗಳು ಇದಕ್ಕೆ ಹೊರತಾಗಿ ಉಳಿದಿಲ್ಲ. ಪಾಂಡುರಾಜ ಮಾಡ್ಯಾರ ಖರ್ಮಾ, ಹರಿಶ್ಚಂದ್ರನ ಕಥೆ, ಜನಕರಾಜನ ಹೊಟ್ಟೇಲಿ ಹುಟ್ಟ್ಯಾಳೆ ಸೀತಾದೇವಿ, ಶ್ರವಣಕುಮಾರನ ಹಾಡು, ಆದಿಶಕ್ತಿ ಪಾರು, ಇಂದ್ರಪ್ರಸ್ತಾನದೊಳು ಇರುವರು ಪಾಂಡೋರು, ಗಂಗೆ–ಗೌರಿ, ದುರಪತಿಯ ಹಾಡು ಮುಂತಾದವುಗಳು ಇವುಗಳಲ್ಲಿ ಪ್ರಮುಖವಾಗಿ ಕಂಡು ಬರುತ್ತವೆ. ಉದಾಹರಣೆಗೆ ಕೆಲವೊಂದು ಇಲ್ಲಿ ಪರಿಭಾವಿಸಬಹುದು.

"ಸೀತಾಪಹರಣ ಹಾಡು" ರಾವಣನು ಮೋಸದಿಂದ ಬಂಗಾರದ ಜಿಂಕೆಯಾಗಿ ಬಂದು ಸೀತೆಯನ್ನು ಅಪಹರಿಸಿದ ದೃಶ್ಯವು ಪ್ರಸ್ತುತ ಹಾಡಿನಲ್ಲಿದೆ.

ಜನಕ್ ರಾಜಾನ್ ಹೊಟ್ಟಿಲಿಂದ ಸೀತಾದೇವಿ ಹುಟ್ಟ್ಯಾಳಂತ
ಸೂರ್ಯ ಚಂದಿರನ ಬೆಳಕೀಲಿ ಕೋಲ ॥ ೨ ॥
ಮುತ್ತಲ ಎಲಿಮ್ಯಾಲ ಪತ್ತರ ಬರದಾರ
ಸುತ್ತ ರಾಜರಿಗಿ ಖಳವ್ಯಾರೆ ಕೋಲ ॥ ೨ ॥

ಸುತ್ತಿನ ರಾಜರು ಪತ್ತರ ಓದ್ಯಾರೆ
ಬಂದು ಸಭೆದಾಗ ನಿಂತಾರೆ ಕೋಲ ॥ ೨ ॥
ಲಂಕಾದ ರಾವಣ ಸಭೆದಾಗ ಬಂದಾರೆ
ಬಂದು ಸಭೆದಾಗ ನಿಂತಾರೆ ಕೋಲ ॥ ೨ ॥

ರಾಮ ಲಕ್ಷ್ಮಣರು ಸಭೆದಾಗ ಬಂದಾರ
ಬಂದು ಸಭೆದಾಗ ನಿಂತಾರೆ ಕೋಲ ॥ ೨ ॥
ಲಂಕಾದ ರಾವಣ ಬಾಣರೆ ಎತ್ತ್ಯಾರೆ
ಎದಿಮ್ಯಾಲ ಹಾಯ್‌ಕೊಂಡು ಬಿದ್ದಾರೆ ಕೋಲ ॥ ೨ ॥

ಆವಾಗ ರಾಮರು ಸಭೆದಾಗ ಹೋಗ್ಯಾರೆ
ಕಿರಿಬಳ್ಳಿಲಿ ಬಾಣ ಎತ್ತ್ಯಾರೆ ಕೋಲ ॥ ೨ ॥
ಸೀಟ್ಟೇಲಿ ರಾವಣ ಸಭೆದಾಗ ನಿಂತಾರ
ಐದೀನರೆ ಸೀತಾಗ ಆಳುತೀನಿ ಕೋಲ ॥ ೨ ॥

ಹಾದಿಗಿ ಹಂದರ ಹಾಕಿ ಬೀದಿಗೆ ಛಳಿ ಕೊಟ್ಟು
ಸೀತಾ ರಾಮುಂದೇ ಲಗ್ಗುಣ ಕೋಲ ॥ ೨ ॥
ಅಲ್ಲಿಂದು ಜನಕರಾಜಾ ಕುದುರಿಯ ಖೊಲ್ಲ್ಯಾಗ್ಹೊವ್ಗಿ
ಬಿಟ್ಟ ಕೈಲಿ ಕುಡುತಾರೆ ಕೋಲ ॥ ೨ ॥

ಕುದುರಿನೆ ಬಿಟ್ಟು ಕೈಲಿ ಕುಡುತ್ತಾರೆ ಜನಕ್‌ರಾಜಾ
ಸೀತಾ ರಾಮಂದೇ ಅಂದಣ ಕೋಲ ॥ ೨ ॥
ರಾಮ, ಲಕ್ಷ್ಮಣ, ಸೀತಾನ ಕರಕೊಂಡು
ಐರಾಣದ ಹಾದಿ ಹಿಡಿದಾರ ಕೋಲ ॥ ೨ ॥

ಅಟ್ಟ ಅರಣದಾಗ ಗುಂಪಾರೆ ಕಟ್ಯ್ಯಾರೆ
ಗುಂಪಾದಾಗ ಸೀತಾಗ ಇಟ್ಟಾರೆ ॥ ೨ ॥
ಲಂಕಾದ ರಾವಳ ಬಂಗಾರದ ಎಳ್ಳಿನಾಗಿ
ಗುಂಪಾದ ಮುಂದ ಹರದಾಡಿ ಕೋಲ ॥ ೨ ॥

ಆವಾಗ ಸೀತಾದೇವಿ ರಾಮಗ ಹೇಳುತಾಳ
ಆ ನಮುನದ ಕುಬುಸ ತರಬೇಕ್ರಿ ಕೋಲ ॥ ೨ ॥
ಅಲ್ಲಲ್ಲೆ ಸೀತಾದೇವಿ ಆ ಕುಬಸಾ ಉಡಬ್ಯಾಡೆ
ಪ್ರಾಣೀಯ ಕುಬಸ ಉಡಬಾರದೇ ಕೋಲ ॥ ೨ ॥

ಎಷ್ಟುನೇ ಹೇಳಿದರ ಕೇಳಳ್ಳೆ ಸೀತಾದೇವಿ
ಹಟ ಮಾಡಿ ಆಕಿ ಬೇಡುತಾಳೆ ಕೋಲ ॥ ೨ ॥
ಆವಾಗ ರಾಮಚಂದ್ರ ಲಕ್ಷ್ಮಣಗ ಹೇಳ್ಯಾರೆ
ಬಾಣರೆ ಬಗಲೀಗಿ ಹಾಯ್‌ಕೊಂಡು ಕೋಲ ॥ ೨ ॥

ಬಾಣರೆ ಬಗಲೀಗಿ ಹಾಯ್‌ಕೊಂಡು ಅನುತಾರೆ
ಮನಿಕಡಿ ಜ್ವಾಕಿ ಲಕ್ಷ್ಮಣ ಕೋಲ ॥ ೨ ॥
ಬಂಗಾರ ಎಳ್ಳಿಗಿ ಬೆನ್ನಾರೆ ಹತ್ತಾರೆ
ಆ ಎಳ್ಳಿ ಅವರೀಗಿ ಸಿಗ ವಲ್ದು ಕೋಲ ॥ ೨ ॥

ರಾಮಚಂದ್ರ ದನಿ ಎತ್ತಿ ಕರಿತಾರೆ
ತಮ್ಮ ಲಕ್ಷ್ಮಣ ಬರಬೇಕು ಕೋಲ ॥ ೨ ॥
ಆವಾಗ ಸೀತಾದೇವಿ ಲಕ್ಷ್ಮಣಗ ಹೇಳುತಾಳೆ
ನಿಮ್ಮಣ್ಣಗ ಯಾರೋ ಹೊಡದಾರೋ ಕೋಲ ॥ ೨ ॥

ಇಲ್ಲಲ್ಲ ಅತ್ತಿಗೆಮ್ಮ ನಮ್ಮಣ್ಣಗ ಹೊಡಿಯೋರು
ಈ ಜಗದಾಗ ಇನ್ನೂ ಯಾರಿಲ್ಲ ಕೋಲ ॥ ೨ ॥
ನಿಮ್ಮಣ್ಣ ಹೋಗಬೇಕು, ನೀವು ಇರಬೇಕಂತ
ಉಸುರೀನ ಹರಕಿ ಮಾಡೀರಿ ಕೋಲ ॥ ೨ ॥

ಆವಾಗ ಲಕ್ಷ್ಮಣ ಮಂಡಲ ಬರದಾರೆ
ಮಂಡಲ ಹೊರಗ ಹೋಗುಬ್ಯಾಡೇ ಕೋಲ ॥ ೨ ॥
ಅಣ್ಣನೇ ರಾಮಚಂದ್ರನ ಹುಡುಕುತೆ ಲಕ್ಷ್ಮಣ
ಆರ್ಯಾಣಗುಂಟ ನಡದಾರೆ ಕೋಲ ॥ ೨ ॥

ಲಂಕಾದ ರಾವಳ ಗೋಸಾಯಿ ಆಗ್ಯಾನೆ
ಗುಂಪದ ಮುಂದ ಬಂದಾರೆ ಕೋಲ ॥ ೨ ॥
ಗುಂಪದ ಎಲೆ ಮುಂದು ಬಂದುನೇ ಅನುತಾನೆ
ದಾನ ನೀಡಮ್ಮ ನನ್ನಗ ಕೋಲೆ ॥ ೨ ॥

ನಮ್ಮನೆ ಗುಂಪಾದಾಗ ದಾನವಿಲ್ಲ ಧರ್ಮ ಇಲ್ಲ

ಮಂಡಲ ಽ ಧಾಟಿ ಽಽ ಬರುದಿಲ್ಲ ಕೋಲ ॥ ೨ ॥
ಲಂಕಾದ ರಾವಳ ಏನಂತ ಅನುತಾನೆ
ನೀರರ ನೀನು ಕೊಡಬೇಕೆ ಕೋಲ ॥ ೨ ॥

ರಾಮ ಲಕ್ಷ್ಮಣರು ಮಂಡಲ ಬರದಾರ
ಮಂಡಲ್ ದಾಟಿ ಬರದಿಲ್ಲ ಕೋಲ ॥ ೨ ॥
ಆಚ್ಯಾಕ ಒಂದ ಝಾಪ ಈಚಕ ಒಂದ ಝಾಪ
ಒಂದು ಥಮಗಿ ನೀರು ಹೊಯ್ಯ ನೀನು ಕೋಲ ॥ ೨ ॥

ಎಡಗೈಲಿ ಸೀರಿ ಹಿಡ್ದು ಬಲಗೈಲಿ ಥಮ್ಗಿ ಹಿಡ್ದು
ಝಾಪ್ವಾಕಿ ನೀರ ಹೊಯ ದಾಳೆ ಕೋಲ ॥ ೨ ॥
ಝಾಪ ಹಾಕಿ ನೀರು ಹೊಯ್ವಂಥ ಯಾಳ್ಯಾದಲ್ಲಿ
ಹೆಗಲ್‌ಮ್ಯಾಲ ಕೂಡ್ಸಿಕೊಂಡು ಓಡ್ಹೋದ ಕೋಲ ॥ ೨ ॥

ರಾಮಾನೇ ಲಕ್ಷ್ಮಣ ಮನಿಗರಾ ಬಂದಾರೆ
ಮನಿದಾಗ ಸೀತಾ ಇಲ್ಲಲ್ಲೆ ಕೋಲ ॥ ೨ ॥
ನೀರಡಕಿ ಆಗ್ಯಾದೇನೋ ಬಾವಿಗಾದರ ಹೋಗ್ಯಾಳೆನೋ
ಬಾವಿ ಬಾವಿ ಎಲ್ಲ ಹುಡುಕ್ಯಾರ ಕೋಲ ॥ ೨ ॥

ಹಸ್ವಿನರಾ ಆಗ್ಯಾದೇನೋ ಬನಕಾದರ ಹೋಗ್ಯಾಳೇನೋ
ಬನ ಬನವೆಲ್ಲ ಹುಡುಕ್ಯಾರೆ ಕೋಲ ॥ ೨ ॥ [೩೪]

ಈ ರೀತಿ ರಾವಣನು ಬಂಗಾರದ ಜಿಂಕೆಯಾಗಿ ಸೀತೆಯನ್ನು ಅಪಹರಿಸಿದ ದೃಷ್ಯವು ಈ ಹಾಡಿನಲ್ಲಿ ಕಣ್ಣಿಗೆ ಕಟ್ಟಿದಂತಿದೆ. ರಾಮನ ಧ್ವನಿಯನ್ನು ಕೇಳಿದ ಸೀತೆಯು ಅವನನ್ನು ಅಪಾಯದಿಂದ ಪಾರುಮಾಡುವಂತೆ ಲಕ್ಷ್ಮಣನನ್ನು ಕೇಳಿಕೊಳ್ಳುತ್ತಾಳೆ. ರಾಮನಿಗೆ ಯಾರಿಂದಲೂ ಅಪಾಯ ಸಾಧ್ಯವಿಲ್ಲೆಂದು ಅವನು ನುಡಿದಾಗಲೂ ಸೀತೆಯು ಲಕ್ಷ್ಮಣನನ್ನು ಸಂಶಯದಿಂದ ನೋಡಿ– "ಅಣ್ಣ ಸಾಯಬೇಕೆಂಬ ಉಸುರಿನ ಹರಕೆ" ಹೊತ್ತಿರುವಂತೆ ತೋರುತ್ತದೆಂದು ಬಿರುನುಡಿಯುತ್ತಾಳೆ ಲಕ್ಷ್ಮಣನು ಸೀತೆಯ ಈ ಬಗೆಯ ಸಂಶಯದ ಮಾತನ್ನು ಕೇಳಿ ತಾಳಿಕೊಳ್ಳದೆ ರಾಮನನ್ನು ಕರೆತರಲು ಹೊರಡುತ್ತಾನೆ. ಪ್ರಸ್ತುತ ವಿಷಯವು ಇಲ್ಲಿ ಸಹಜವಾಗಿ ಮೂಡಿ ಬಂದಿದ್ದು ಶಿಷ್ಟ ಸಂಪ್ರದಾಯದಲ್ಲೆಲ್ಲೂ ಈ ಬಗೆಯ ನಿರೂಪಣೆ ಕಂಡು ಬಂದಿಲ್ಲ. ಹೆಣ್ಣಿನ ಸ್ವಭಾವಕ್ಕೆ ಇದು ಕನ್ನಡಿ ಹಿಡಿಯುತ್ತದೆ.

'ಪಾಂಡವರು' ಪಗಡೆಯಾಟದ ಮೋಸದ ಜಾಲದಲ್ಲಿ ಕೌರವರಿಗೆ ಸೋತು ರಾಜ್ಯವನ್ನೆಲ್ಲ ಕಳೆದು ಕೊಂಡು ಹನ್ನೆರಡು ವರ್ಷ ವನವಾಸ ಒಂದು ವರ್ಷ ಅಜ್ಞಾತ ವಾಸ ಕಳೆದು ತಮ್ಮ ರಾಜ್ಯ ತಿರುಗಿ ಪಡೆಯಲು ಯುದ್ಧಕ್ಕೆ ಸನ್ನದ್ಧರಾಗುತ್ತಾರೆ. ಕುಂತಿ ಮದುವೆಗೂ ಮುನ್ನ ಕರ್ಣನನ್ನು ಹೆತ್ತು ಜನಾಪವಾದಕ್ಕೆ ಹೆದರಿ ಮಗುವನ್ನು ಗಂಗೆಯ ಪಾಲು ಮಾಡುವಳು. ಅವನು ಅಂಬಿಗರಲ್ಲಿ ಬೆಳೆದು ಧನುರ್ವಿದ್ಯಾ ಪ್ರವೀಣನಾಗಿ ಕುಂತಿಯ ಪುತ್ರನಾದ ಅರ್ಜುನನಿಂದ ಮಹಾಭಾರತದ ಯುದ್ಧದಲ್ಲಿ ಹತನಾಗುತ್ತಾನೆ. ಅದನ್ನೇ ಜನಪದರು ಸುಂದರವಾಗಿ ಹಾಡಿನ ರೂಪದಲ್ಲಿ ಹಾಡಿದ್ದಾರೆ.

ಪಾಂಡುರಾಜಾ ಮಾಡಿದ ಕರ್ಮ ಭವ ಎಳ್ಳೀನ ಕೊಲ್ಲ್ಯಾನ ಪ್ರಾಣ
ಸಖಿಯೇ ಕ್ಷಣದಾಗ ಹುಟ್ಯಾನ ಕರಣ ಕೋಲ ॥ ೨ ॥
ಐದ ಮಂತ್ರ ಕಲತಾಳ ಜಾಣ, ಹೊಳಿ ನೀರ ಮಾಡ್ಯಾಳೆ ನೆವನ
ಸಖಿಯೇ ಕ್ಷಣದಾಗ ಹುಟ್ಯಾನ ಕರಣ ಕೋಲ ॥ ೨ ॥

ಹಾದಿಗ್ಹಡದಾಳಂತಾರ ಜನ ಉಳಿವಲ್ಲ ಎನ್ನ ಮಾನಾ
ಸಖಿಯೇ ಗಂಗಿ ಪಾಲಾ ಮಾಡ್ಯಾಳ ಮಗನ ಕೋಲ ॥ ೨ ॥
ಕಂಡ ಭುಯೇರ ಗಂಗಮನ ಉಳಿಸಿ ಕೊಂಡಾರ ಕೂಸಿನ
ದವದೇವ ಲೋಕದವನ ಸಖಿಯೇ ಕೌರವರ ಮುಂದಿರತಾನ ಕೋಲ ॥ ೨ ॥

ಕೌರವರ ಮುಂದಿರತಾನ ಒಯ್ದುಕೊಟ್ಟಾನ ಕೂಸಿನ
ಮಾಡ್ಯಾರ ಸಂರಕ್ಷಣ ಸಖಿಯೇ ಮಾಡ್ಯಾರ ಸಂರಕ್ಷಣ ಕೋಲ ॥ ೨ ॥
ಕೌರವರು ಪಾಂಡವರು ಕೂಡಿ ಮನಸೂಪಿ ಮಾಡ್ಯಾರೇನ
ಏನೇನ ಎಲ್ಲರ ಕೂಡಿ ಸಖಿಯೇ ಪತ್ತರ ಕೊಡ್ಬೇಕು ಪಾಂಡೋರಿಗಿ ಕೋಲ ॥ ೨ ॥

ಪತ್ತರ ನೋಡ್ಯಾನ ಅರಜುನ । ಚಿಂತಿದಾಗೆ ಕುಂತಾನ ಧರುಮ
ತಯ್ಯಾರಾಗ್ಯಾರ ಬಲಭೀಮ ಸಕಿಯೇ ಸಾಕೀರಾಗ್ಯಾರೆ ಶ್ರೀಕೃಷ್ಣ ಕೋಲ ॥ ೨ ॥
ಪತ್ತರದಾಗ ಏನೇನು ಬರದಾರ । ಇವತ್ತೀಗಿ ಮೂರ ದಿನದಲ್ಲಿ
ಲಡೈಗಿ ಬರಬೇಕು ಸಕೀಯೇ ಲಡೈಗಿ ಬರಬೇಕು । ಕೋಲ ॥ ೨ ॥

ಇವತ್ತೀಗಿ ಮೂರ ದಿನದಲ್ಲಿ ಲಡೈಗಿ ಬರಲ್ದಿದ್ರ ಬಟ್ಟೆ ಬರತದ
ಪಾಂಡೋರಿಗಿ ಸಕಿಯೇ ಬರದು ಖಳವ್ಯಾರ ದುರ್ಯೋಧನ ಕೋಲ ॥ ೨ ॥
ನೂರನೊಂದು ಕೌರವರು ರಥ ಏರ‍್ಯಾರ ಧರುಮ ಕೊಟ್ಟಾರೋ
ಲಡೈ ಹುಕುಮ ಸಕಿಯೇ ಉಪಾಯ ಮಾಡಲೇನೂ?

ಕೌರವರ ಪಾಂಡವರ ವರುಮ । ಕಳಿಖೋರ ಸುಗಣಿ ಮಾಮಾ
ಬೆಳಸಿಟ್ಟಾರೆ ಜಗಡದ ಕದನ ಸಕಿಯೇ ಉಪಾಯ ಮಾಡಲೇನ ಕೋಲ ॥ ೨ ॥
ಲಡೈಗಿ ಹೋಯ್ತರಿ ನೀವು । ಹಿಂದಕ ಸರೀಯ ಬ್ಯಾಡರಿ
ಕೌರವರ ಸಂಗುಅಟ ಸಕಿಯೇ ಮಕಾಬಲಿ ಮಾಡಿ ಬರ‍್ರಿ ಕೋಲ ॥ ೨ ॥
ಐದಮಂದಿ ಪಾಂಡರನ । ಕುಂತಿ ಕೊಟ್ಟಾಳೋ ಖೂನಾ ಲಡೈಗಿ ಹೊಯ್ತಿರಿ ನೀವು
ಹಿಂದಕ ಸರಿಯ ಬ್ಯಾಡರಿ ಸಕಿಯೇ ಹಿಂದಕ ಸರಿಯ ಬ್ಯಾಡರಿ ಕೋಲ ॥ ೨ ॥

ಐದಮಂದಿ ಪಾಂಡವರು ರಥ ಏರ‍್ಯಾರ ಅರಜುನ
ಕೊಟ್ಟಾರೋ ಲಡೈಹುಕುಮ । ಕನ್ನಡಿ ನೌಬತ ನಡಸ್ಯಾರೆ
ಸಕಿಯೇ ಕನ್ನಡಿ ನೌಬತ ನಡಸ್ಯಾರೆ ಕೋಲ ॥ ೨ ॥

ನೂರನೊಂದು ಕೌರವರು । ಮಾಪುಂಡ ಬಲ ಕರಣ ಬಿಡಬ್ಯಾಡಂದರಂದ
ಬಲಭೀಮ ಸಕೀಯೇ ಉಪಾಯ ಮಾಡಲೇನ ಕೋಲ ॥ ೨ ॥
ಬಿಡಬ್ಯಾಡಂದರ ಅರಜುನ ಮಾಪುಂಡ ಬಲ ಕರಣ
ಎದಿದಾಗ ಹೊಡದಾನೊ ಬಾಣ ಸಕಿಯೇ ಎದಿದಾಗ ಹೊಡದಾನ ಬಾಣ
ಸಕಿಯೇ ರಾಮಂದೇ ಬಿಟ್ಟಾನೋ ಪ್ರಾಣ ಕೋಲ ॥ ೨ ॥

ಕರುಣುನ ಸತಿ ಬಸುರೆಣ್ಣ ಸುದ್ದಿ ಕೇಳಿ ಆಗ್ಯಾಳೆ ಗಮನ
ಅತ್ತೆವ್ವ ಕೇಳರಿ ವೈನ ಸಕಿಯೇ ಸಣ್ಣ ಮೈದುನ ಅರಜೂನ
ಹಿರಿಯಣ್ಣನ ಕೊಲ್ಲ್ಯಾನ ಪ್ರಾಣ । ಹೊಟ್ಟೀ ಹರದು ಕೊಟ್ಟಾಳೋ ಮಗನ
ಸಕಿಯೇ ಲಗು ಮಾಡ್ಯಾಳ ಪುರುಷನತನ ಕೋಲ ॥ ೨ ॥

ಸತಿಪತಿಯ ಅಗ್ನಿಯ ಹೋಮ ಕಿಚ್ಚ ಕೊಟ್ಟಾರೋ

ಪಾಂಡವರ ಧರುಮ । ಐದುಮಂದಿ ಅಣತಮ್ಮಂದಿರು
ಸಕಿಯೇ ರಣಗೆದ್ದು ಬಂದಾರೋ ಮನಿಗ. ಕೋಲ ॥ ೨ ॥

ಅವರು ಬಂದಾರ ಮುಂದಿರಲು ತಾಯೀಗಿ ಮಾಡ್ಯಾರ ಶರಣು
ಯಾರವ್ವ ಯಾಕನುಮಾನ । ಸಕಿಯೇ ಎರತಾನಾಯ್ತು ನಮ್ಮ ಪ್ರಾಣ ಕೋಲ ॥೨ ॥
ಸಂತಿ ಶಂಬೆಳ್ಳಿ ಸಣ್ಣ ಗ್ರಾಮ ಮಾದೇವ ಸಂತ ಕರಣ
ಮಾಡಿದ್ದಾರ ಬಲ ಭೀಮ ಸಕಿಯೇ ಹಾಲೇರಿಯೇ ನಾಗೀಂದ್ರನ ಕೋಲ ॥ ೨ ॥

ಈ ರೀತಿಯಾಗಿ ಪಾಂಡವರ ಮೊದಲಿಗನಾದ ಕರ್ಣನು ಕುಂತಿಯ ಸಣ್ಣ ತಪ್ಪಿನಿಂದಾಗಿ ಜೀವನದ ಕೊನೆಯುಸಿರಿನವರೆಗೂ ಕಷ್ಟ, ಸೂತಪುತ್ರನೆಂಬ ಅಪಮಾನ ಎದುರಿಸಬೇಕಾಯಿತು. ಎಲ್ಲವನ್ನೂ ಅರಿತ ಕುಂತಿ ತನ್ನೆದುರಿಗೆ ಕರ್ಣನ ಅಪಮಾನ, ಅವಸಾನ ಉಂಟಾದರೂ ಅಸಹಾಯಕಳಾಗಿ ಎಲ್ಲವನ್ನೂ ಸೈರಿಸಿಕೊಂಡು ಅರಿಯದಂತೆ ಮೂಕಪ್ರಾಣಿಯಂತೆ ಸಹಿಸಿಕೊಳ್ಳಬೇಕಾಯಿತು. ಇಂತಹ ಅನೇಕಘಟನೆಗಳು ಇಂದಿಗೂ ನಡೆಯುತ್ತಲೇ ಇವೆ. ತಂದೆ ತಾಯಿಯರು ಮಾಡಿದ ಕರ್ಮದ ಫಲ ಮಕ್ಕಳು ಅನುಭವಿಸಬೇಕಾಗುತ್ತದೆ.

ಹೆಣ್ಣು ಸಮಾಜದ ನಿಂದನೆಗೆ, ಅಪಮಾನಕ್ಕೆ ಹೆದರಿ ತಮ್ಮ ರಕ್ತವನ್ನು ಹಂಚಿಕೊಂಡು, ಉಸಿರಲ್ಲಿ ಜನಿಸಿದ ಮಗುವನ್ನು ಅಭೇದ್ಯ ಅಂಗದಂತಿದ್ದರೂ ಸಮಾಜದ ನೀತಿ-ನಿಯಮಗಳಿಗೆ ತಲೆಬಾಗಿ, ಕುಂತಿಯು ಕರ್ಣನನ್ನು ತ್ಯಾಗ ಮಾಡಿದಂತೆ ಇಂದೂ ಕೂಡಾ ಹಾದಿ ಬೀದಿಯಲ್ಲಿ, ಕಸದ ತೊಟ್ಟಿಯಲ್ಲಿ, ಅನಾಥಾಶ್ರಮದಲ್ಲಿ ಬಿಡುವುದನ್ನು ಕಾಣುತ್ತಿದ್ದೇವೆ. ಇದರಿಂದ ಮಗು ಪ್ರಾಣವನ್ನಾದರೂ ಕಳೆದುಕೊಳ್ಳುವುದು ಇಲ್ಲವಾದರೆ ಅನಾಥವಾಗಿ ಬೆಳೆಯುವುದು. ಸಮಾಜದ ಅಸಡ್ಡೆಗೆ, ಅಪಮಾನಕ್ಕೆ ಗುರಿಯಾಗುವುದು.

ಧರ್ಮ ಭಾರತೀಯ ಸಮಾಜದ ಕೇಂದ್ರ ಬಿಂದು. ಅವರ ಬದುಕಿನ ಚಟುವಟಿಕೆಗಳು ಅದರ ಸುತ್ತಲೂ ಸುತ್ತುತ್ತವೆ. ಜನಪದರು ತಮ್ಮ ಬದುಕಿಗೆ ಧರ್ಮಕಾರಣ, ಪ್ರೇರಕ ಹಾಗೂ ಪೋಷಕ ಶಕ್ತಿ ಎಂದು ಭಾವಿಸಿದ್ದಾರೆ. ಧರ್ಮ ದೇವರಿಲ್ಲದೇ ಯಾವುದೂ ಸಾಧ್ಯವಿಲ್ಲ. ಅದನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ಸರ್ವಥಾ ರಕ್ಷಿಸುತ್ತದೆಂದು ನಂಬಿದ್ದಾರೆ. ಈ ಧರ್ಮದೇವರುಗಳು ಅವರ ಬದುಕಿಗೆ ಆಸರೆಯನ್ನು ಒದಗಿಸುವಂತೆ ಅವರ ಬದುಕನ್ನು ಹಿಂಡಿ ಹಿಪ್ಪೆಯನ್ನಾಗಿ ಮಾಡಿದೆ, ಮಾಡುತ್ತಿವೆ. ಇದಕ್ಕೆ ಅವರಲ್ಲಿರುವ ಮೂಢನಂಬಿಕೆ ಹಾಗೂ ಅಜ್ಞಾನಗಳು ಕಾರಣವಾಗಿವೆ. ಧರ್ಮ-ದೇವರನ್ನು ಕುರಿತಾದ ಜನಪದರ ನಂಬಿಕೆ, ಆಚಾರ-ವಿಚಾರಗಳು ಅನೇಕ ಹಾಡುಗಳಿಗೆ ವಸ್ತುವಾಗಿವೆ. ಬುಲಾಯಿ ಹಾಡುಗಳಲ್ಲಿಯೂ ಈ ಅಂಶವನ್ನು ಕಾಣಬಹುದು.

ಧಾರ್ಮಿಕ ಹಿನ್ನೆಲೆಯಲ್ಲಿ ಮೂಡಿ ಬಂದಿರುವ ಬುಲಾಯಿ ಹಾಡುಗಳಲ್ಲಿ ಪುರಾತನ ಹಾಗೂ ನೂತನ ಶಿವಶರಣರನ್ನು, ಭಕ್ತರನ್ನು ಕುರಿತಾದ ಹಾಡುಗಳು ವಿಶಿಷ್ಟವಾಗಿವೆ. ಅವುಗಳಲ್ಲಿ ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನ ಡೋಣಗಾಂವ (ಎಂ) ಗ್ರಾಮ ರಂಡ್ಯಾಳ ಭಕ್ತ ಮುಡಿ ಹಾಗೂ ಡೋಣಗಾಂವ ಈ ಮೂರು ಸ್ಥಳಗಳು ಒಂದನ್ನೊಂದು ಅಂತರದಲ್ಲಿವೆ. ಇಲ್ಲಿ ಶಿವನ ಸತ್-ಚಿತ್-ಆನಂದ ಸ್ವರೂಪದ ವಿಭೂತಿ ಪುರುಷರಾದ ಚನ್ನಮಲ್ಲಪ್ಪಾ, ಮಾಳಪ್ಪಾ ಹಾಗೂ ಹಾವಗಿಸ್ವಾಮಿ ಈ ತ್ರಿಮೂರ್ತಿಗಳು ತಪಗೈದ ಲೀಲೆ ತೋರಿದ ಭಕ್ತಿಯ ತಾಣವೇ ಭಕ್ತಮುಡಿ. ರಂಡ್ಯಾಳ ಗ್ರಾಮದಲ್ಲಿ ಚೆನ್ನಮಲ್ಲಪ್ಪಾ ಇವರು ಇರುವಾಗ ನಡೆದ ಒಂದು ಸತ್ಯ ಘಟನೆಯ ಕುರಿತಾದ ಬುಲಾಯಿ ಪದ ಈಗಲೂ ಅಲ್ಲಿಯ ಜನ ಈ ಹಾಡು ಹಾಡುತ್ತಾರೆ.

ಬೀದರ ಪ್ರಾಂತ್ಯದ ಮಹಿಳಾ ಜಾನಪದ ಹಾಡುಗಳು ವಿವಿಧ ನೆಲೆಯಲ್ಲಿ ಬೆಳೆದುಬಂದಿರುವುದನ್ನು ಗಮನಿಸಬಹುದಾಗಿದೆ. ಇಲ್ಲಿನ ಜಾನಪದ ಮಹಿಳೆಯರು ಕೇವಲ ಅಡುಗೆ ಮನೆಗೆ ಮಾತ್ರ ಸೀಮಿತವಾದವರಲ್ಲ. ಪುರುಷನಂತೆ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಪರಿಣಿತಿಯನ್ನು ಗಳಿಸಿದವಳಾಗಿದ್ದಾಳೆ. ಸಮಾಜದ ಆಗುಹೋಗುಗಳನ್ನು ಗ್ರಹಿಸುವ ಮೂಲಕ ಅವುಗಳನ್ನು ತನ್ನ ಸಾಹಿತ್ಯದ ಚೌಕಟ್ಟಿಗೊಳಪಡಿಸುವ ಮೂಲಕ ಪದಕಟ್ಟಿ ಹಾಡಿರುವುದನ್ನು ಈ ಮೇಲಿನ ವಿವಿಧ ಬಗೆಯ ಹಾಡುಗಳಲ್ಲಿ ಗುರುತಿಸಬಹುದಾಗಿದೆ.

ಕೊನೆ ಟಿಪ್ಪಣಿ

೧) ಧರಿನಾಡ ಬಿಂಬ- ಪ್ರತಿಬಿಂಬ, ಜಗನ್ನಾಥ ಹೆಬ್ಬಾಳೆ (ಸಂ) ಪು-೫೫, ೫೬

೨) ಸಿದ್ದಮ್ಮಾ, ರಂಗರಾವ, ಮೇತ್ರೆ – ಚಿಟಗುಪ್ಪಾ (ಹುಮನಾಬಾದ) ವಯಸ್ಸು: ೭೩

೩) ಶಕುಂತಲಾಬಾಯಿ ಬಸವರಾಜ ಹಾಳ್‌ಗೋರ್ಟಾ (ಬ.ಕಲ್ಯಾಣ) ವಯಸ್ಸು: ೫೫

೪) ಕಸ್ತೂರಿಬಾಯಿ ಶರಣಪ್ಪಾ ರಂಜೇರೆ (ಬೀದರ) ವಯಸ್ಸು-೬೧

೫) ಬೀದರ ಜಿಲ್ಲೆಯ ಜನಪದ ಸಾಹಿತ್ಯದಲ್ಲಿ ಕೃಷಿ-ಧನಲಕ್ಷ್ಮೀ ವಿಶ್ವನಾಥ (ಲೇ) ಪುಟ: ೦೯

೬) ಗಂಗಮ್ಮಾ ರೇವಣಪ್ಪಾ ಟೊಪಾರೆ ಭಾಲ್ಕಿ – ವಯಸ್ಸು: ೭೩

೭) ಸರೋಜಾ ಓಂಕಾರ ಮೇತ್ರೆ – ಭಾಲ್ಕಿ – ವಯಸ್ಸು: ೪೨

೮) ಸರೋಜಾಬಾಯಿ ಸಂಗಪ್ಪಾ ಟೊಪಾರೆ – ಭಾಲ್ಕಿ – ವಯಸ್ಸು: ೪೯

೯) ನಾಗೂಬಾಯಿ ಶ್ರೀಪತಿ ಮೇತ್ರೆ – ಭಾಲ್ಕಿ – ವಯಸ್ಸು: ೪೮

೧೦) ವಿಜಯಲಕ್ಷ್ಮೀ ಅಮೃತರಾವ ರಂಜೇರೆ- ಧನ್ನೂರ (ಬೀದರ) ವಯಸ್ಸು: ೫೯

೧೧) ಶಾರದಾಬಾಯಿ ರಾಜಕುಮಾರ ಪಾಟೀಲ – ವರವಟ್ಟಿ – ವಯಸ್ಸು: ೫೫

೧೨) ತಾರಾಬಾಯಿ ಸನ್ಮುಕಪ್ಪಾ ಕೊಳ್ಳಾ – ಭಾಲ್ಕಿ- ವಯಸ್ಸು: ೫೫

೧೩) ಜಾನಪದ ಸ್ವರೂಪ ಮತ್ತು ಸಾಹಿತ್ಯ – ಪ್ರೊ.ಡಿ. ಲಿಂಗಯ್ಯಾ (ಸಂ) ಪುಟ: ೬೪-೬೬

೧೪) ಅದೇ ಕೃತಿ-ಪುಟ: ೬೬

೧೫) ಅದೇ ಕೃತಿ-ಪುಟ: ೬೭-೬೮

೧೬) ಅದೇ ಕೃತಿ-ಪುಟ: ೬೭-೬೮

೧೭) ಜನಪದ ಸಾಹಿತ್ಯ ಭಾಷೆ – ಎಸ್.ಎಸ್. ಅಂಗಡಿ ಪುಟ; ೨೭೭

೧೮) ಸಾರಿಕಾ ವಿಶ್ವನಾಥ ಗೊಂದಳಿ – ಮೇಹೆಕರ – ವ: ೪೨

೧೯) ಸಾವಿತ್ರಿಬಾಯಿ ಆರ್. ಮರೂರಕರ್- ಮರೂರ, ವಯಸ್ಸು- ೫೮

೨೦) ಜಾನಪದ ಮತ್ತು ಮಹಿಳೆ – ಡಾ. ವಿಜಯಶ್ರೀ ಸಬರದ – ಪು: ೩೩

೨೧) ಗೌರಮ್ಮಾ ಮಾಣಿಕ – ಕಲವಾಡಿ – ವ: ೫೨

೨೨) ಜಾನಪದ ಮತ್ತು ಮಹಿಳೆ – ಡಾ. ವಿಜಯಶ್ರೀ ಸಬರದ – ಪು: ೬೦

೨೩) ಸುನಿತಾ ಶಿವಶರಣಪ್ಪಾ ಕಲಶೆಟ್ಟಿ – ಹುಮನಾಬಾದ – ವ: ೫೩

೨೪) ತಾರಾಬಾಯಿ ಸನ್ಮುಕಪ್ಪಾ ಕೊಳ್ಳಾ (ಭಾಲ್ಕಿ) ದಾಡಗಿ – ವ: ೫೬

೨೫) ಪ್ರೇಮಲಾಬಾಯಿ, ಶಿವರುದ್ರಯ್ಯಾ ಸ್ವಾಮಿ – ಲಖನ್‌ಗಾವ್ – (ಭಾಲ್ಕಿ) ವ: ೪೮

೨೬) ಲಕ್ಷ್ಮೀಬಾಯಿ ರಾಜಪ್ಪ ಮರಕಲೆ – ಜವಳಗಾ (ಭಾಲ್ಕಿ) ವ: ೪೯

೨೭) ತಾರಾಬಾಯಿ ಸನ್ಮುಕಪ್ಪಾ ಕೊಳ್ಳಾ – ತಳವಾಡ (ಕೆ) ಭಾಲ್ಕಿ – ವ: ೫೨

೨೮) ಸುಶೀಲಾಬಾಯಿ ನವನಾಥ ರಾಜಭವನ್ – ಕಲವಾಡಿ- ವಯಸ್ಸು; ೫೬

೨೯) "ತಾರಕ ತಂಬೂರಿ" – ಅನುಭವ ಪದಗಳು – ಜಯದೇವಿ ತಾಯಿ ಲಿಗಾಡೆ – ಪು: ೫

೩೦) ಮಾಹಿತಿ: ಸುಜಾತಾಬಾಯಿ ಲಕ್ಷ್ಮಣರಾವ ಮಾನೆ – ಖ್ಮದಂಪೂರ (ಭಾಲ್ಕಿ) ವಯಸ್ಸು: ೪೯

೩೧) ಸಿಕಿಂದ್ರಾಬಾಯಿ ರಾಜೇಂದ್ರ – ಲಾಧಾ (ಭಾಲ್ಕಿ) ವಯಸ್ಸು: ೫೩

೩೨) ಗಂಗಮ್ಮಾ ರೇವಣಪ್ಪಾ ಟೊಪಾರೆ – ಭಾಲ್ಕಿ – ವಯಸ್ಸು: ೭೩

೩೩) ಶಿವಮಾಲಾ ಶಿವದಾಸ ಹರನಾಳೆ – ಹರನಾಳ (ಭಾಲ್ಕಿ) ವ: ೫೧

೩೪) ಕಸ್ತೂರಿಬಾಯಿ ಶ್ರೀಪತಿ ಮೇತ್ರೆ – ಗೋಕುಳ – ಬ.ಕಲ್ಯಾಣ – ವಯಸ್ಸು: ೫೬

೩೫) ಕಸ್ತೂರಿಬಾಯಿ ಶ್ರೀಪತಿ ಮೇತ್ರೆ – ಗೋಕುಳ – ಬ.ಕಲ್ಯಾಣ ವ: ೫೬

ಅಧ್ಯಾಯ: ಆರು

ಮಹಿಳಾ ಹಾಡುಗಳಲ್ಲಿ ಮೌಲ್ಯಗಳು

೬.೧ ಮಹಿಳೆ ಮತ್ತು ಸಾಮಾಜಿಕ ಅಸಮಾನತೆ

೬.೨ ಜಾನಪದ ಸಾಹಿತ್ಯ ಮತ್ತು ಸ್ತ್ರೀ ಸಂಘರ್ಷ

೬.೩ ನೀತಿ ಮತ್ತು ಪಾತಿವ್ರತ್ಯದ ನೆಲೆಗಳು.

೬.೪ ಮಹಿಳಾ ಜಾನಪದ ಸಾಹಿತ್ಯ ಮತ್ತು ಪ್ರತಿರೋಧ.

೬.೫ ಜಾನಪದ ಮಹಿಳೆ ಮತ್ತು ಸಂಸ್ಕೃತಿ

೬.೬ ಪಶು–ಪಕ್ಷಿ ಪ್ರಾಣಿಗಳ ಜೀವ ಪ್ರೀತಿ.

೬.೭ ಜಾನಪದ ಸಾಹಿತ್ಯ ಮತ್ತು ದೈವತ್ವದ ನೆಲೆಗಳು

ಅಧ್ಯಾಯ: ಆರು

ಮಹಿಳಾ ಹಾಡುಗಳಲ್ಲಿ ಮೌಲ್ಯಗಳು

ಬೀದರ್ ಜಿಲ್ಲೆಯು ಕರ್ನಾಟಕದ ಆಯಕಟ್ಟಿನ ಪ್ರಾಂತ್ಯವಾಗಿದೆ. ಇಲ್ಲಿನ ಪ್ರಾದೇಶಿಕತೆಯ ಮೇಲೆ ಹಲವಾರು ಭಾಷೆ, ಧರ್ಮ, ಪ್ರದೇಶಗಳ ಪ್ರಭಾವವಿರುವುದು ಕಂಡುಬರುತ್ತದೆ. ಈ ಎಲ್ಲಾ ಭಿನ್ನತೆಗಳನ್ನು ತನ್ನಲ್ಲಿ ಗರ್ಭಿಕರಿಸಿಕೊಳ್ಳುವ ಮೂಲಕವಾಗಿ ತನ್ನತನವನ್ನು ಕಾಪಾಡಿಕೊಂಡಿರುವ ಬಗೆಯನ್ನು ಈ ಭಾಗದಲ್ಲಿ ಕಾಣಬಹುದಾಗಿದೆ. ಆದ್ದರಿಂದಾಗಿ ಬೀದರ್ ಜಿಲ್ಲೆಯ ಮಹಿಳಾ ಜಾನಪದ ಹಾಡುಗಳಲ್ಲಿ ಅಂತರ್ಗತವಾಗಿರುವ ಸಾಮಾಜಿಕ ಮೌಲ್ಯಗಳನ್ನು ಈ ಮುಂದಿನಂತೆ ಅಧ್ಯಯನಕ್ಕೆ ಒಳಪಡಿಸಲಾಗುವುದು.

ಸಮಾಜದ ಕಟ್ಟು ನಿಟ್ಟುಗಳನ್ನು ಜನಪದರು ಪಾಲಿಸುತ್ತ ಬಂದಿದ್ದಾರೆ. ಪ್ರಣಯವು ಹರೆಯದ ಜೀವಿಗೆ ಸ್ವಾಭಾವಿಕ. ರಸನಿಮಿಷಗಳ ರಸಿಕರೂ, ರಸಾವೇಶಗಳ ಬಂಟರೂ ಆದ ನಮ್ಮ ಹಳ್ಳಿಗರಲ್ಲಿ ಪ್ರಣಯವು ಒಂದು ರಸೋನ್ಮತ್ತವಾದ ಲೋಕವಾಗಿದೆ. ಹಗಲಿರುಳು ಬಿಸಿಲು, ಗಾಳಿ, ಚಳಿಯೆನ್ನದೆ ದುಡಿವ ದೇಹಾರೋಗ್ಯವನ್ನು ಬೆಳೆಸಿದ ಅವರು ಪ್ರಣಯಿಗಳು ಹೌದು. ಹಳ್ಳಿಯ ತರುಣ ಉತ್ಸಾಹಿಗಳು ನಿತ್ಯ ಜೀವನದಲ್ಲಿ ಒಬ್ಬರಿಗೊಬ್ಬರು ಕೂಡಿಯೆ ದುಡಿಯಬೇಕಾಗುವುದು. ಕಸ ತೆಗೆಯುವುದು, ಬಿತ್ತುವುದು, ಕಸಕಳೆ ಕೀಳುವುದು, ಕೊಯ್ಯುವುದು, ಕುಟ್ಟುವುದು, ಒಕ್ಕುವುದು ಮೊದಲಾದ ಒಕ್ಕಲುತನದ ಹೊರೆಗಳಲ್ಲಿ ಗಂಡು, ಹೆಣ್ಣು, ಕೂಡಿಯೇ ದುಡಿಯುವರು. ಯೌವ್ವನದ ಭರದಲ್ಲಿ ಈ ತರುಣರಿಗೆ ತಿಳಿಯದೆ ಪ್ರೇಮಾಂಕುರುಸಿ ಪ್ರಣಯಕ್ಕೆ ನಿಲ್ಲುವುದು. ಸಮಾಜದ ಕಟ್ಟಳೆಯಂತೆ ಮದುವೆಯೊಡನೆ ಪೂರ್ತಿಗೊಂಡು ದಾಂಪತ್ಯ ಜೀವನಕ್ಕೆ ಇಳಿಯುವುದು. ಇದನ್ನು ಬಿಡಿಸಿ ಅಗಲಿಸುವುದೇ ಅಸಾಧ್ಯ. ಆದುದರಿಂದ ಹಳ್ಳಿಗರ ಹಾಡುಗಳಲ್ಲಿ ಇದನ್ನು ಕುರಿತು ಅನೇಕ ಉಸುರುಗಳು ಉದ್ಗಾರಗಳು ಬಂದಿವೆ.

ಕುಂತ ಮಂದಿ ಮುಂದ ನಿಂತ ಹೇಳತೀನಿ
ನನಗಂಡ ಭಾಳ ಸರದಾರ
ನಾಕ ಮಂದ್ಯಾಗ ಭಾದ್ದುರ
ಉಳ್ಳಾಕ ಉಡೂಲಾಕ ಕಡಿಮೇನು ಇಟ್ಟೀಲ್ಲ
ನಡಸ್ಯಾನೆ ಸೊಗಸೀನ ಸಂಸಾರ
ಹಿಂದೊಮ್ಮೆ ಕಂಡಿಲ್ಲ ಮುಂದೇನೂ ನೋಡಿಲ್ಲ
ಅಂತರ ಗಾಡ್ಯಾಗ ಕೂಡಿಸಿ ತೋರಸ್ಯಾನ ಮೈಸೂರ ಬೆಂಗಳೂರ
ಎತ್ತ ಮರೆಯಲೆವ್ವ ಗಂಡನುಪಕಾರ [೧]

ಎಂದು ತಾನು ಸುಖವಾಗಿ ಉಣ್ಣಲು, ಉಡಲು ಕಡಿಮೇನೂ ಇಲ್ಲವೆಂದು ಹೇಳಿಕೊಂಡಿದ್ದಾಳೆ. ಗಂಡನ ಪ್ರೀತಿ ಅವ್ಯಕ್ತವಾಗಿಯೂ ಹಲವು ರೀತಿಯಲ್ಲಿ ವ್ಯಕ್ತವಾಗಬಹುದು. ಹೀಗೆ ಹೆಣ್ಣು ವಿವಿಧ ನೆಲೆಯಲ್ಲಿ ತನ್ನ ತಳಮಳಗಳನ್ನು ಜಾನಪದ ಹಾಡಿನ ಮೂಲಕ ವ್ಯಕ್ತಪಡಿಸುವುದು ಕಂಡುಬರುತ್ತದೆ.

೬.೧ ಮಹಿಳೆ ಮತ್ತು ಸಾಮಾಜಿಕ ಅಸಮಾನತೆ

ಜನಪದ ವೈವಿಧ್ಯಮಯ ಬದುಕಿನ ಪ್ರತಿಬಿಂಬವೇ ಜನಪದಸಾಹಿತ್ಯ. ಅವರು ತಮ್ಮ ಬದುಕಿನ ಸಂದರ್ಭದಲ್ಲಿದ್ದಂತಹ ಸಾಮಾಜಿಕ ಮೌಲ್ಯಗಳನ್ನು ನಂಬಿ ಬದುಕಿದವರು. ಆದರೂ ಕೆಲವೊಮ್ಮೆ ಅವರಿಗೆ ಸಾಮಾಜಿಕ ಮೌಲ್ಯಗಳಿಗಿಂತಲೂ ಜೀವನ ಪ್ರೀತಿ ಮುಖ್ಯವಾಗಿತ್ತು ಈ ವಿಚಾರ ಜನಪದ

ಸಾಹಿತ್ಯದಲ್ಲಿ ಪುರುಷ ಜೀವನಾನುಭವದ ಅಭಿವ್ಯಕ್ತಿಗಿಂತಲೂ ಸ್ತ್ರೀ ಸಂವೇದನೆಗಳಲ್ಲಿ ಹೆಚ್ಚಾಗಿ ಗುರುತಿಸಬಹುದು. ಮಾನವ ಸುಖ, ಶಾಂತಿ, ನೆಮ್ಮದಿಯಿಂದ ಬದುಕ ಬೇಕಾದರೆ ಶೀಲ, ಪಾತಿವ್ರತ್ಯ, ನೀತಿಯಂತಹ ಸಾಮಾಜಿಕ ಮೌಲ್ಯಗಳ ಜೊತೆಯಾಗಿ ಪ್ರೀತಿ, ತ್ಯಾಗ, ಸಹನೆಯಂತಹ ಮಾನವೀಯ ಮೌಲ್ಯಗಳನ್ನು ಸ್ವೀಕರಿಸಬೇಕಾಯಿತು. ಈ ಮೌಲ್ಯಗಳು ಸ್ತ್ರೀಪುರುಷರಿಗೆ ಸಮಾನವಾಗಿ ಅನ್ವಯಿಸದೆ ಏಕ ಪಕ್ಷೀಯವಾಗಿವೆ. ಇಂತಹ ಪಕ್ಷಪಾತಕ್ಕೆ ಬಲಿಯಾದ ಮಹಿಳೆಯ ನೋವಿನ ಎಳೆಗಳು ಜನಪದ ಸಾಹಿತ್ಯದಲ್ಲಿ ಹೆಣೆಯಲ್ಪಟ್ಟಿವೆ. ಗಂಡನಿಗೆ ಹೆಂಡತಿ, ಮಕ್ಕಳಿಗೆ ತಾಯಿ, ಸೊಸೆಗೆ ಅತ್ತೆ ಮತ್ತು ಅತ್ತೆಗೆ ಸೊಸೆಯಾಗಿ ಬದುಕುವ ಅವಳಿಗೆ ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳು ಪ್ರಶ್ನಾತೀತವಾಗಿವೆ.

ಗಂಡು-ಹೆಣ್ಣಿನ ಲೈಂಗಿಕ ಸ್ವೇಚ್ಛಾಚಾರಕ್ಕೆ ಕಡಿವಾಣ ಹಾಕಲು ಸಮಾಜ 'ಮದುವೆ' ಪದ್ಧತಿ ಜಾರಿಯಲ್ಲಿ ತಂದಿತು. ಹೆಣ್ಣು ವಧುಪರೀಕ್ಷೆಯಲ್ಲಿ ಪ್ರದರ್ಶನದ ವಸ್ತುವಾಗಿ ಕಂಡಳು. ಮದುವೆ ಮಾಡಿಕೊಳ್ಳುವವನು ಕುಡುಕನಿರಲಿ, ಮುದುಕನಿರಲಿ, ಕುರೂಪಿ ಯಾದರೂ ತುಟಿ ಪಿಟಕ್ಕೆನ್ನದೆ ಮದುವೆಯಾಗಬೇಕು. ಈ ತರಹದ ಅಸಮ ಜೋಡಿಯ ಬಗ್ಗೆ ಜನಪದ ಮಹಿಳೆ ನೊಂದು ನುಡಿದಿದ್ದಾಳೆ.

"ಹೆಸರ್ ಬ್ಯಾಳಿ ಒಯ್ದು ಕೆಸರ ಕಲಸಿದ್ಹಂಗ
ಹಸುಮಗಳನೊಯ್ದು ಮುದುಕಾಗ
ಕೊಟ್ಟರ ದುಸ್ಮಾನದವರು ತವರವರು"
ಮಲ್ಲಿಗೆ ಯಂಥ ಮಗಳೀಗೆ
ಎಲ್ಲಿತ್ತೋ ಒಗೆತನ
ಹುಲ್ಲಾಗ ಬೆಂಕಿ ಒಗೆದಾಂಗ
ಗುಡ್ಡದ ಕಲ್ಲೀಗೆ ಧಾರಿ ಎರೆದಂಗ ೨

ಜನಪದರಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ ದ್ವಿಮುಖವಾದದ್ದು. ಒಂದು ಕಡೆ ಮಾನಸಿಕ ಯಾತನೆ ಅಸಮಾನತೆಯ ನೋವು, ಇನ್ನೊಂದು ಕಡೆ ಹೊಂದಾಣಿಕೆಯ ಮಾನವೀಯ ಕಾಳಜಿ, ತಾಳ್ಮೆ ತ್ಯಾಗದಂತಹ ಮಾನವೀಯ ಮೌಲ್ಯಗಳ ಬುನಾದಿಯ ಮೇಲೆ ಕುಟುಂಬದ ಸೌಧವನ್ನು ಕಟ್ಟುವ ಅದನ್ನು ಉಳಿಸುವ ಕಲೆ ಅವಳಲ್ಲಿದೆ, ಬದುಕಿನ ಪ್ರತಿ ಹಂತಗಳಲ್ಲೂ ನೋವು ಸಂಕಟ, ಅವಮಾನಗಳನ್ನು ಅನುಭವಿಸಿದ ಹೆಣ್ಣು ಗುಲಾಮಳಂತೆ ಬಾಳಿದ ಹೆಣ್ಣು, ಕೊನೆಗೆ ಹತಾಶಳಾಗಿ ಹೆಣ್ಣು ಆಗುವುದಕ್ಕಿಂತ ಮಣ್ಣು ಆಗುವುದು ಲೇಸು. ಮಣ್ಣಿನ ಮೇಲೊಂದು ಮರವಾಗಿ ಬೆಳೆದರೆ ಪುಣ್ಯವಂತರಿಗೆ ನೆರಳಾಗಿ ಎನ್ನುವಲ್ಲಿ ಜನಪದ ಮಹಿಳೆ ಪರರ ಸುಖವೇ ತನ್ನ ಸುಖವೆಂದು ತಿಳಿದು ಬದುಕಿರುವುದು ಕಂಡುಬರುತ್ತದೆ.

ಬೆಳಕಿನಿಂದ ಕತ್ತಲೆಯ ಹಾದಿಯಲ್ಲಿ ನಡೆದು ಪುನ: ಬೆಳಕಿನತ್ತ ನಡೆಯಬೇಕೆಂಬ ಹಂಬಲದಿಂದ ಅನಾದಿ ಕಾಲದಿಂದ ಹೆಜ್ಜೆ ಹೆಜ್ಜೆಗೂ ಎದುರಾಗುತ್ತಿರುವ ಸವಾಲುಗಳಿಗೆ ಸೆಡ್ಡು ಹೊಡೆದು, ಆತ್ಮ ವಿಶ್ವಾಸ ಧೈರ್ಯ, ನೈತಿಕ ಬಲಗಳಿಂದ ತನ್ನನ್ನು, ತನ್ನತನವನ್ನು ಉಳಿಸಿಕೊಂಡು ಬೆಳೆಸಿಕೊಂಡು ಮುನ್ನಡೆಯುತ್ತಿರುವ ಮಹಿಳೆಯ ಬದುಕಿಗೆ ಅವರದೇ ಆದ ಒಂದು ಪ್ರತ್ಯೇಕ ಘೋರ ಅಮಾನುಷ ಕ್ರೂರ ಚಿತ್ರಣ ಇದೆ. ಶತ ಶತಮಾನಗಳಿಂದ ಪುರೋಹಿತ ಶಾಹಿಯ ಕಪಿಮುಷ್ಠಿಯಲ್ಲಿ ತೊಳಲುತ್ತಿರುವ ಮಹಿಳೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಜೀವಂತ, ಶವವಾಗಿದ್ದಾಳೆ. ಈ ನಿಷ್ಕ್ರೀಯ ಜಗತ್ತು ಹೆಣ್ಣಿನ ವೇದನೆಯನ್ನು ಬರೆದಿದೆ. ಶತಮಾನಗಳಿಂದ ನಡೆದು ಬಂದ ಇನ್ನೊಂದು ಪುರುಷ ನಿರ್ಮಿತ ಪದ್ಧತಿ ಸತಿಸಹಗಮನ. ರಾಜಾರಾಮ ಮೋಹನ್‌ರಾಯರ ಅವಿರತ ಪ್ರಯತ್ನದ ಫಲವಾಗಿ ಸಹಗಮನ ಪದ್ಧತಿ

ನಿರಾಕೃತಗೊಂಡಿತು. ಈ ಕ್ರೂರ ಪದ್ಧತಿಯ ಭಯಾನಕತೆ ನೋಡಿ ತಿಳಿದಿದ್ದರಿಂದಲೇ ಜನಪದರ ಗರತಿ ದೇವರಲ್ಲಿ ಈ ರೀತಿ ಕೇಳಿಕೊಂಡಿರಬೇಕು.

ಅಂಗಯ್ಯ ಒಳಗಿನ ಲಿಂಗ ಮೂರುತಿ ಸ್ವಾಮಿ
ಮಂಗಳಾರತಿ ನಾ ಬೆಳಗಿ ಬೇಡುವನು
ಮಾರಾಯರ ಮುಂದ ಮರಣವ ಕೊಡು ಎಂದು [೩]

ಹೆಣ್ಣು ಗಂಡಿನ ಭೋಗದ ವಸ್ತು ಎನ್ನುವ ಸಮಾಜದಲ್ಲಿ ಹೆಣ್ಣನ್ನು ತನ್ನ ಸಮಾನ ಎಂದು ಭಾವಿಸುವುದರ ಜೊತೆಗೆ ಅವಳ ವ್ಯಕ್ತಿತ್ವದಲ್ಲಿ ಹುದುಗಿರುವ ಒಂದೊಂದು ಅಂಶಕ್ಕೂ ಬೆಲೆಕೊಟ್ಟು, ಅವಳ ವ್ಯಕ್ತಿತ್ವದ ಹಿರಿಮೆಯನ್ನು ಗುರುತಿಸಬಹುದು. ಕವಿ ಕುವೆಂಪುರವರ ದೃಷ್ಟಿಯಲ್ಲಿ ಹೆಣ್ಣು ಗೃಹ ತಪಸ್ವಿನಿಯಾಗಿದ್ದಾಳೆ. ಹೆಣ್ಣು ಯಾವುದರಲ್ಲೂ ಕಡೆಮೆ ಇಲ್ಲ. ದೇಶದ ಮಹಾನ್ ಪುರುಷರಿಗೆಲ್ಲ ಹೆತ್ತವಳೇ ಇವಳು. ಆದರೂ ಪುರಾಣ ಕಾಲದಿಂದಲೂ ನಮ್ಮ ಸ್ತ್ರೀಯರು ಪುರುಷನ ದೌರ್ಜನ್ಯಕ್ಕೊಳಗಾಗುತ್ತಿರುವುದು, ತಾನು ಮಾಡದ ತಪ್ಪಿಗಾಗಿ ಮತ್ತೆ ಅದೇ ಅಪರಾಧಿ ಪುರುಷನ ಅಗ್ನಿ ಪರೀಕ್ಷೆಯೆಂಬ ಶಿಕ್ಷೆಗೆ ಒಳಗಾಗುತ್ತಿರುವುದು ಸರ್ವವಿಧಿತ. ಅಂದರೆ ಹೆಣ್ಣಿನ ಶೀಲ ಮತ್ತು ಪಾವಿತ್ರ್ಯತೆಯೆಂಬುದು ಪ್ರಾಣಕ್ಕಿಂತಲೂ ಮಿಗಿಲಾದುದು ಎನ್ನುವ ನಮ್ಮ ಹಿಂದು ವಕ್ತಾರರ ಸ್ವನಿರ್ಮಿತ ಕಾನೂನಿನ ಅಡಿಯಲ್ಲಿ ಅನೇಕ ಮಹಿಳೆಯರು ಅಂದು–ಇಂದು ದಹಿಸಿ ಹೋಗುತ್ತಿದ್ದಾರೆ. ವಿವಾಹಿತಳೋರ್ವಳು ಅತ್ಯಾಚಾರಕ್ಕೆ ಗುರಿಯಾದರೆ ಪತಿಯ ಮನೆಯಿಂದ ಹೊರದೂಡಲ್ಪಡುತ್ತಾಳೆ. ಆ ಮಹಿಳೆ ಸಮಾಜದ ದೃಷ್ಟಿಯಲ್ಲಿ ನಾಯಿ ಮುಟ್ಟಿದ ಮಡಿಕೆಯಾಗುತ್ತಾಳೆ. ಆದರೆ ಅತ್ಯಾಚಾರವೆಸಗಿದ ಪುರುಷನಿಗೆ ಯಾವ ಕಳಂಕವೂ ತಟ್ಟುವುದಿಲ್ಲ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷ ನಿರ್ಮಿಸಿದ ನೀತಿ, ನಿಯಮಗಳನ್ನು ಅವನ ಯಜಮಾನಿಕೆಯನ್ನು ತನಗೆ ಗೊತ್ತಿರಲಾರದಂತೆ ಅವಳು ತಾನಾಗಿ ಒಪ್ಪಿಕೊಳ್ಳುವಂತೆ ಮಾಡುವ ಆಷಾಢಭೂತಿ ಸಮಾಜದ ಹುನ್ನಾರಗಳಿಗೆ ಮಹಿಳೆ ಬಲಿಯಾಗುತ್ತಿದ್ದಾಳೆ ಎಂಬುದನ್ನು ಕುವೆಂಪು ಸಾಹಿತ್ಯದ ಸ್ತ್ರೀ ಸಂವೇದನೆಯಲ್ಲಿ ಕಾಣುತ್ತೇವೆ.

ಸಂಸಾರವೇದವು ಸತ್ವಯುತವಾಗುವುದಕ್ಕೂ, ಅಜರಾಮರವಾಗುದಕ್ಕೂ, ಗರತಿಯ ಜೀವನದ ದಿವ್ಯತೆಯೇ ಕಾರಣ. ಗರತಿ ಅಬಲೆ ಎನಿಸಿಕೊಳ್ಳುವ ವ್ಯಕ್ತಿ. ಈ ವ್ಯಕ್ತಿಯೇ ಇನ್ನೊಂದು ವ್ಯಕ್ತಿಗೆ ಜೀವದಾನ ಮಾಡುವಳು. ಇದೇನು ಸಣ್ಣ ವಿಷಯವೇನಲ್ಲ. ಬಯಕೆ, ಬಸುರು, ಪ್ರಸವ ವೇದನೆ, ಮಗುವಿಗೆ ಹೊಟ್ಟೆಕಡಿದರೆ ತಾಯಾಗಿ ಅಜೀವಾನ ತಿನ್ನುವುದು, ಬಾಯಿ ತುತ್ತು ಮಗುವಿನ ಬಾಯಿಗೆ ಇಡುವುದು, ಇದು ತಾಯಿಯ ಹರಕೆ. ಒಂದು ವೇಳೆ ಬಾಲೆಗೆ ಬಾಲಕರಿಲ್ಲದಿದ್ದಾಗ ಅವಳ ಜೀವನ ವ್ಯರ್ಥವೆಂದು ತೋರುವುದು. ಯಾರಿಗಾಗಿ ದುಡಿಯಬೇಕು, ಬದುಕಬೇಕು ಎಂಬ ಚಿಂತೆ ಅವಳ ಮನ ಸದಾ ಮಿಡಿಯುತ್ತಿರುತ್ತದೆ.

ಬಾಲಕರಿಲ್ಲದ ಬಾಲಿದ್ಯಾತಕ ಜನ್ಮ
ಬಾಡಿಗಿ ಎತ್ತು ದುಡಿದ್ಹಂಗ । ಬಾಳೆಲೆಯ
ಹಾಸುಂಡು ಬೀಸಿ ಒಗದ್ಹಂಗ sss

ಊಟವಾದ ನಂತರ ನಿರಪಯುಕ್ತ ವಸ್ತುವೆಂದು ಬಾಳೆಲೆ ಹೇಗೆ ಎಸೆಯುವರೋ ಆ ರೀತಿಯ ಜೀವನ ನನ್ನದು, ಆ ಊಟವೂ ಬಂಜೆಗೆ ಹಂಗಿನದಾಗಿ ತೋರುವುದು. ಸಮಾಜದ ಬಂಜೆ ಎಂಬ

ಕೊಂಕು ನುಡಿ ಅವಳ ಹೃದಯವನ್ನೇ ಭೇದಿಸುತ್ತದೆ. ಆಗ "ಹಂಗೀನ ಬಾನ ಉಣಲಾರೆ" ಎನ್ನುವಳು. ಬಂಜೆ ಅನ್ನಿಸಿಕೊಳ್ಳುವುದಕ್ಕಿಂತ, ಹೆಣ್ಣಿನ ಬದಲಾಗಿ ಮಣ್ಣಾಗಿದ್ದರೆ ನನ್ನ ಜನ್ಮ ಸಾರ್ಥಕವಾಗುತ್ತಿತ್ತೇನೋ ಎಂದು ಹೇಳುವ ಮಹಿಳಾ ಜಾನಪದ ಹಾಡೊಂದು ಹೀಗಿದೆ,

ಹೆಣ್ಣಾಗಿ ಹುಟ್ಟೋದಕ್ಕಿಂತ ಮಣ್ಣಾಗಿ ಹುಟ್ಟುವದು ಲೇಸು
ಮಣ್ಣೇನ ಮ್ಯಾಲ ಮರವಾಗಿ । ಹುಟ್ಟಿದರ
ಹೋಗಿ ಬರುವವರಿಗೆ ನೆರಳಾಗಿ sss [೪]

ಬಂಜೆ ಎಂಬ ಶಬ್ದ ನಾನು ಹೊರಲಾರೆ ಶಿವನೆ ಅದಕ್ಕಾಗಿ – ಎಂದು ಆ ಶಿವನಲ್ಲಿ ಮೊರೆ ಇಡುವಳು ಕಂದನ ಕುಡು ಶಿವನೆ ಬಂಧನ ಪಡಲಾರೆ ಎಂದು, ವಿಠ್ಠಲನ ಗುಡಿಯಲ್ಲಿ ಎಷ್ಟೋ ಹೊತ್ತು ನಿಂತು ಕಾದು ಇಟ್ಟ ಕುಂಕುಮವೆ
ಅಂಗಲಾಚುವಳು. ಬಂಜೆಯ ಮನೆಯ ಮುಂದಿರುವ ಅಂಜೂರಿ ಗಿಡದ ಟೊಂಗೆ ಟೊಂಗೆಗೂ ಗಿಳಿಗಳು ಕುಳಿತು ಈ ರೀತಿ ಮಾತಾಡುವುದನ್ನು ಅವಳು ಲಕ್ಷ್ಯವಿಟ್ಟು ಕೇಳುವಳು. ಅದರಿಂದ ಅವಳ ದು:ಖ ಇಮ್ಮಡಿಸುವುದು. ಆ ಗಿಳಿಗಳ ಮಾತಿನ ಗೂಡಾರ್ಥ ಆ ಗರತಿಗಲ್ಲದೆ ಬೇರಾರಿಗೂ ಆಗದು. ಏನೆಂದರೆ "ಬಂಜಿ ನಿನ್ನ ಬದುಕು ಹೆರವರಿಗೆ" ಈ ಮಾತು ಬೀಸುವಾಗ ಹಿಟ್ಟಿನೊಂದಿಗೆ ಹಾಡಾಗಿ ಹರಿಯಿತು. "ಬಂಜೆಯು ಬೇನೆ ಅರಿಯಳು" ಎಂಬ ಕಲಂಕದ ಕಿರೀಟ ಧರಿಸಿದ ಇವಳು ಮತ್ತೊಬ್ಬರ ಮಕ್ಕಳನ್ನು ಆಸೆಪಟ್ಟು ಆಲಿಂಗಿಸುವಂತಿಲ್ಲ. ಬಂಜಿಯ ನೆರಳು ತಮ್ಮ ಮಕ್ಕಳ ಮೇಲೆ ಬಿದ್ದರೆ ಆಶುಭ ಎಂದು ಭಾವಿಸುವರು. ಯಾವ ಶುಭಕಾರ್ಯದಲ್ಲೂ ಬಂಜೆಗೆ ಪ್ರವೇಶವಿಲ್ಲ. ಪಾಪಮಾಡಿದವರಂತೆ ಅನುಭವಿಸಬೇಕಾವ ಶಿಕ್ಷೆ ಯಾತನೆ ಈಕೆಯ ಪಾಲಿಗಿರುವುದು. ಇಂತಹ ದಾರುಣ ಚಿತ್ರಣವನ್ನು ಜನಪದ ಗರತಿ ತನ್ನ ತ್ರಿಪದಿಯಲ್ಲಿ ಪ್ರತಿಬಿಂಬಿಸಿದ್ದಾಳೆ.

ಬಂಜಿ ಬಾಗಿಲ ಮುಂದ ಅಂಜೂರಿ ಗಿಡ ಹುಟ್ಟಿ
ಟೊಂಗಿ ಟೊಂಗಿಗೆಲ್ಲ ಗಿಳಿ ಕೂತು । ಹೇಳ್ಯಾವೆ ।
ಬಂಜಿ ನಿನ ಬದುಕು ಹೆರವರಿಗೆ ॥ [೫]

ಗರತಿ ಜೀವನಕ್ಕೆ ಜೀವಾಳವಾಗಿ ಇಡೀ ಜೀವಮಾನವನ್ನೆಲ್ಲ ಕೃತಜ್ಞತೆಯು ಹರಹಿರುತ್ತದೆ. ಅವಳು ತವರನ್ನು, ತಾಯಿ ತಂದೆಯರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾಳೆ.

ತಂದೀಯ ನೆನೆದರ ತಂಗಳ ಬಿಸಿಯಾಯ್ತು
ಗಂಗಾದೇವಿ ನನ್ನ ಹಡದೌವ್ವ । ನೆನೆದರೆ
ಮಾಸೀದ ತಲೆಯು ಮಡಿಯಾಯ್ತು [೬]

ಎಂದು ತಂದೆ-ತಾಯಿಗಳಿಬ್ಬರಿಗೂ ಕೃತಜ್ಞತೆ ಸಲ್ಲಿಸಿದ್ದಾಳೆ. ಹೆಣ್ಣಿಗೆ ತವರಲ್ಲಿ ಎಷ್ಟೇ ಬಳಗವಿದ್ದರೂ, ವೈಭವವಿದ್ದರೂ ಕೊನೆಗೊಮ್ಮೆ ಗಂಡನ ಮನೆ ಸೇರಿದರೆ ಎಲ್ಲವೂ ಮರೆಯಾಗುವುದು. ಏನಿದ್ದರೂ ಗಂಡನ ಮನೆಯಲ್ಲಿಯೇ ನೆಮ್ಮದಿಯ ಜೀವನ ನಡೆಸಬೇಕಾಗುತ್ತದೆ. ನನ್ನದು ಎನ್ನುವ ಅಧಿಕಾರ, ಸ್ವಾತಂತ್ರ್ಯ ಅವಳಿಗೆ ಗಂಡನ ಮನೆಯಲ್ಲಿಯೇ ದೊರಕುತ್ತದೆ.

ಆಸತ್ತರ ನನ್ನ ಮನಿಯೇ ಬ್ಯಾಸತ್ತರ ನನ್ನ ಮನಿಯೇ
ಕೂಸ ಕಾಡಿದರ ನನ್ನ ಮನಿಯೇ । ಅಣ್ಣನ ಮನಿ
ಏಸ ದಿನವಿದ್ದರೂ ನೆರ ಮನಿಯೇ ॥ [೭]

ತಾಯಿಯ ಮನೆಯಲ್ಲಿ ತಾಯಿಯಿದ್ದರೆ ಮಾತ್ರ ಅದು ತವರಾಗಿ ಕಾಣುವುದು. ಇಲ್ಲವಾದಲ್ಲಿ ಅಣ್ಣ ಅತ್ತಿಗೆಯರು ಇರುವ ಮನೆ ಅದು ತವರಾಗಿ ಕಾಣದೆ ನೆರೆಮನೆಯಂತೆಯೆ ಕಾಣುವುದು ಎಂದು ಮನ ಮಿಡಿಯುವಂತೆ ಗರತಿ ನೊಂದು ನುಡಿದಿದ್ದಾಳೆ. ಇದುವರೆಗೆ ತನಗೆ ಅಲ್ಲಿದ್ದ ಅಧಿಕಾರ, ಸ್ವಾತಂತ್ರ್ಯವೆಲ್ಲ ಈಗ ಅಣ್ಣನ ಹೆಂಡತಿಯ ಕೈಸೇರಿದೆ. ಅದರಲ್ಲೂ ತವರಲ್ಲಿ ತಾಯಿ ಇರದಿದ್ದರಂತೂ ಹೆಣ್ಣಿನ ಗೋಳು ಇನ್ನೂ ಹೀನಾಯಮಾನವಾಗಿರುತ್ತದೆ. ತವರಿನ ಹಂಬಲ ಹೆಚ್ಚಾದಾಗ ಅಣ್ಣನನ್ನು ಕಾಣಲು ತವರಿಗೆ ಬಂದ ಹೆಣ್ಣು, ಅಣ್ಣ ಅತ್ತಿಗೆಯರ ಅನಾದರಕ್ಕೆ ಗುರಿಯಾಗುವಳು. ಆಗ ಅವಳಿಗೆ ತಾಯಿಯ ನೆನಪು ಅತೀವ ದು:ಖಕ್ಕೆ ಗುರಿ ಮಾಡುತ್ತದೆ. ಅಣ್ಣ ಅತ್ತಿಗೆಯರ ವರ್ತನೆಯಿಂದ ಅವಳ ಮನನೊಂದು ಈ ರೀತಿ ತಲ್ಲಣಿಸುವುದು.

ತವರೂರ ಮನಿ ನೋಡ ಬಂದೆ, ತಾಯಿ
ನೆನಪಾಗಿ ಕಣ್ಣೀರ ತಂದೆ ॥ ಪ ॥

ಹತ್ತು ಹದಿನಾರು ವರುಷಗಳಲ್ಲಿ
ಹೆತ್ತ ತಾಯಿ ತಂದೆಗಳ ಪ್ರೀತಿಯಲ್ಲಿ
ಮುತ್ತಿನಂತೆ ಜೋಪಾನಾಗಿ ಬೆಳೆದೆ
ಎತ್ತೋ ಅದು ತಾನೇ ಕನಸಾಗಿ ಹೋಗಿದೆ.

ಬಾಗಿಲದ ಮುಂದೆ ರಂಗೋಲಿ
ಬಾಗಿ ಹಾಕ್ತಿದ್ದೆ ನಾನಾ ತರದಲಿ
ಹೇಗೆ ಮರೆಯಲಿ ಈ ಮನಸ್ಸಿನಲ್ಲಿ
ಮಾಸಿ ಹೋಗದು ಅದು ಬಾಳಿನಲ್ಲಿ [೮]

ತಾಯಿಯಿಲ್ಲದ ತವರ ಮನೆಗೆ ಎಂದೆಂದಿಗೂ ಹೆಣ್ಣು ಹೋಗಬಾರದು ಎನ್ನುವ ಸಾರ್ವತ್ರಿಕ ನೀತಿಯನ್ನು ಇದು ಸಾರುತ್ತದೆ. ತಾಯಿಯಿಲ್ಲದ ಮನೆಯು ದೇವರಿಲ್ಲದ ಗುಡಿಯಂತೆ, ನೀರಿಲ್ಲದಬಾವಿಯಂತೆ ಕಾಣುವುದು. ತಾಯಿಯಿದ್ದರೆ ಹಂಬಲಿಸಿ ಕರೆದು ಕೈತುತ್ತು ಉಣಿಸುವಳು. ಸುಖ. ದು:ಖವನ್ನು ವಿಚಾರಿಸುವಳು. ಸಾಂತ್ವನದ ನುಡಿಗಳನ್ನಾಡುವಳು. ಬಾಳಿಗೆ ಧೈರ್ಯತುಂಬುವಳು. ಮಗಳ ಮಾನ ಕಾಪಾಡುವಳು. ಬಂದ ಕಷ್ಟ ಪರಿಹರಿಸುವಳು. ತಾಯಿ ಸತ್ತು ತಂದೆ ಇದ್ದರೆ ಅವನೂ ಚಿಕ್ಕಪ್ಪನಂತಾಗುವನು. ಅದಕ್ಕಾಗಿ ತವರಿಗೆ ಎಂದೆಂದಿಗೂ ತಾಯಿಯೇ ಜೀವಾಳ. ತಾಯಿಯಿಲ್ಲದ ತವರನ್ನು ನೆನೆಯುವುದಕ್ಕೂ ಮನಸ್ಸು ಹಿಂಜರಿಯುವುದು. ತಾಯಿಇರುವ ವರೆಗೆಯೇ ತವರುಮನೆ ನಂತರ ಅದು ಪರಕೀಯವಾಗಿ ಕಂಡುಬರುತ್ತದೆ. ಅದಕ್ಕಾಗೀಯೆ ತಾಯಿಯಿಲ್ಲದ ತವರಿಗೆ ಹೋಗಬಾರದು ಎಂದು ಜನಪದರು ತಾಯಿಯ ಪ್ರಾಮುಖ್ಯತೆ ಕುರಿತು ಮನ ಮಿಡಿಯುವಂತೆ ಈ ರೀತಿ ಹೇಳಿದ್ದಾರೆ.

ತಾಯಿ ಸತ್ತ ಮ್ಯಾಲ ತವರಿಗಿ ಎಂದೂ
ಹೋಗಬಾರದಮ್ಮ । ನಾಯಿಗಿಂತ ಕಡೆಯಾಗಿ

ಹೋಯಿತು ನನ್ನ ಬಾಳ ಜೀವ

ಭಾಳ ಮಕ್ಕಳು ಬಡತನ ಸಂಸಾರ ನನ್ನ ನಸೀಬದಾಗ
ಬರದು ಕಳುಸ್ಯಾನ ಏನ ಮಾಡಲಿ ಕರುಣೆ ಇಲ್ಲ ಶಿವಗ
ಸಿರಿಯ ತವರಿಗೆ ತುತ್ತು ಕವಳಿಯನ್ನು ಹೊಗೀರಲ್ಲ
ಕರುಳು ತಡೆಯದೆ ಅಣ್ಣನ ಮನೆಗೆ ಹೋರಟು ಬಂದೆನಲ್ಲ

ಬಗಲಾಗ ಒಂದು ಕೈಯಾಗ ಒಂದು
ಕೂಸಿನ ಕಟಕೊಂಡು ಹರಿದಾರಿ ಹತ್ತು
ಉಸಿರು ಹಾಕುತ ಬಂದೇನು ನಡಕೊಂಡು
ತವರಿನ ಹೋಸ್ತಿಲು ತುಳಿಯುದರೊಳಗ
ಅಣ್ಣನ ಹೆಂಡತಿ ಕಂಡರೂ ಕಾಣದಾಗಿ ಒಳಗೆ
ಹೋದಳು ಕರೆಯದ್ದಂಗ ೯

ಹೆಂಡತಿಯ ಕೈಗೊಂಬೆಯಾದ ಅಣ್ಣ ತನ್ನ ತಂಗಿಯನ್ನು ಲಕ್ಷ್ಯವಹಿಸದೆ ಹೋಗಿದ್ದಾನೆ. ಆದರೂ ಅವಳು ಆ ಮನೆಯ ಉಪಕಾರವನ್ನು ಸ್ಮರಿಸಿ ಕೃತಜ್ಞತಾ ಭಾವದಿಂದ ತವರಿಗೆ ಹರಕೆ ನೀಡಿದ್ದಾಳೆ. ಉಕ್ಕಿ ಬರುವ ದು:ಖವನ್ನು ಯಾರ ಮುಂದೆ ಹೇಳಿ ಮನಸ್ಸು ಹಗುರ ಮಾಡಿಕೊಳ್ಳಬೇಕು. ಆಗ ಗೆಳತಿಯನ್ನು ಕಂಡಾಗ.

ಕಂಡಂತ ಗೆಳೆತೆವ್ವ ಉಂಡೆಂತ ಕೇಳಿದರ
ಉಂಡೆ ಬಾ ಗೆಳತಿ ಸುಖವಿಲ್ಲ । ಬಾಳೀಯ
ದಿಂಡ ನೀರಾಗ ಕೊಳೆತ್ಹಂಗ ॥ ೧೦

ಪರಿಪರಿಯಾಗಿ ತನ್ನ ಸಮಾಚಾರವನ್ನು ಬಿಚ್ಚಿ ಅಳುತ್ತಾಳೆ. ಪರಿಚಯದ ನೆರೆಹೊರೆಯರನ್ನು ಕಂಡರೆ 'ತಾಯಿ ನನ್ನ ಜೀವ ಸೊಗಸಿಲ್ಲ' "ಬಾಳೀಯ ಹಣಗ್ಯಾಗ ಹೆಣ್ಣು ಕಳಿತ್ಹಾಂಗ" ಎಂದು ತನ್ನ ಸ್ಥಿತಿಯನ್ನು ಹೇಳಿ,

ತಾಯಿ ಕಾಣದೆ ಜೀವ, ತಾವೂರಿ, ಬಾವೂರ್ರಿ
ಭಾಳ ಬಿಸಲಾಗ ಅವರೀಯ । ಹುವ್ವಿನ್ಹಾಂಗ
ಬಾಡತೀನಿ ತಾಯ ಕರದೋಯ್ಯ ೧೧

ಎಂದು ತನ್ನನ್ನು ಕರೆದೊಯ್ಯುವಂತೆ ತಾಯಿಗೆ ಹೇಳಿ ಕಳಿಸುವಳು

ಹೆಣ್ಣು ಪ್ರಪಂಚದಲ್ಲಿ ಬಿದ್ದ ಕೂಡಲೇ ನಿತ್ಯದ ಜೀವನದ ಅನೇಕ ಪ್ರಸಂಗಗಳಲ್ಲಿ ಅವಳ ಕೋಮಲವಾದ ಮನಸ್ಸು ನೊಂದು ಬಳಲುವುದು. ಹೆಣ್ಣು ಹೆತ್ತವರ ಪಾಡು ನೋಡಲು ಆಗದು. ತಂದೆ ತಾಯಿಯರು ಅಸಾಹಯಕರು. ಹೆಣ್ಣಿನಿಂದಾಗಿ ಕಷ್ಟಪಡುವರು ಸಾಲ ಮಾಡಿ ಮದುವೇ ಮಾಡಲು ಪ್ರಯತ್ನಿಸುವರು. ಆಗ ತಂದೆ ತಾಯಿಯರು ಕೈಚೆಲ್ಲಿ ದೇವರನ್ನು ನಿಂದಿಸುವರು. ಆದರೂ ಧೈರ್ಯ ಹೇಳಿದ ಜನ ಅವರಿಗೆ ಸಹಾಯಕರಾಗುವರು.

ಬಡತನದ ಮನಿಯೊಳಗ ಹೆಣ್ಣು ಹುಟ್ಟಬಾರದು
ಹಡೆದ ತಪ್ಪಿಗಾಗಿ ತಂದೆ-ತಾಯಿಯರು

ಕಣ್ಣೀರು ಸುರಿಸಬಾರದು

ಬಡವನ ಮಗಳಾದರೂ ಕಪ್ಪಾಗಿರಬಾರದು.
ಹೆಣ್ಣು ಹಡೆದ ತಾಯಿಗೆ ಎಂದೂ ಬೈಯಬಾರದು
ಹಣದಾಸೆ, ಗುಣವಿಲ್ಲದವನ ಹೆಂಡತಿಯಾಗಬಾರದು

ಕರುಣೆಯಿಲ್ಲದ ಅತ್ತಿ ಮನೆಯ ಸೊಸೆಯಾಗಬಾರದು
ಅಪ್ಪಿಕೊಂಡು ನಡೆಯುವ ಅತ್ತೇರು ಸೇವೆ ಮರೆಯಬಾರದು
ಕುರುಡನಿರಲಿ ಕುಂಟನಿರಲಿ ಗಂಟುಮೋತಿ ಗಂಡನಿರಲಿ
ಅಸಹ್ಯ ಪಡಬಾರದು

ಶ್ರೀಮಂತರ ಮಾತಿಗೆ ಮೋಸ ಹೋಗಬಾರದು
ಮೂರು ದಿನದ ಪ್ರೀತಿಗೆ ಮನಸೋಲಬಾರದು
ಹಡೆದ ತಾಯಿ, ತಂದೆಗೆ ಮಾತು ತರಬಾರದು

ಹೆಣ್ಣು ಹೊನ್ನು ಮಣ್ಣು ಒಂದೇ ಎಂದು
ಜಗವ ಕೂಗುವುದು. ಈ ಲೋಕದಲ್ಲಿ ನಮಗೆ
ಭಾಗ್ಯ ಎಂದೂ ದೊರೆಯುವುದು । ಸಾಕು ಈ ಲೋಕದ
ಸಂಗ ಮರಳಿ ಹುಟ್ಟ ಬಾರದು [೧೨]

ಬಡತನದ ಬವಣೆಯಲ್ಲಿ ನೊಂದು, ಬೆಂದು ತಾಯಿ ತಂದೆಯರು ಮಗಳ ಮದುವೆಮಾಡಲು ಕಷ್ಟ ಪಡುವರು. ಅದರಲ್ಲಿ ಕಪ್ಪಾದ ಹೆಣ್ಣಿದ್ದರಂತೂ ಮುಗಿದೇ ಹೋಯಿತು. ನೋಡಲು ಕೂಡಾ ಯಾರೂ ಸಿದ್ದರಿರುವುದಿಲ್ಲ. ಆಗ ತಂದೆ ತಾಯಿಯರ ಪಾಡು ತುಂಬಾ ದುಸ್ತರವಾಗುವುದು. ಆಗ ಅವರು ಕಣ್ಣೀರು ಸುರಿಸುತ್ತಾ ಬಡವರ ಮನೆಯಲ್ಲಿ ಹೆಣ್ಣು ಹುಟ್ಟಬಾರದೆಂದು ದು:ಖಿಸುವರು. ಇಷ್ಟೊಂದು ಅವಮಾನಕ್ಕೆ ಗುರಿಯಾಗುವುದಕ್ಕಿಂತ ಈ ಲೋಕದಿಂದ ಹೊರಟು ಹೋಗಬೇಕೆಂದು ಮತ್ತೆ ಮರಳಿ ಹುಟ್ಟಬಾರದೆಂದು ಹೆಣ್ಣು ಶೋಕಪಡುವಳು.

ಇದೊಂದು ಸಾಮಾಜಿಕ ಜ್ವಲಂತ ಪಿಡುಗು. ಎಲ್ಲರೂ ಉಪದೇಶ ಮಾಡುವವರೆ ಆದರೇ ಕಾರ್ಯರೂಪಕ್ಕೆ ತರುವವರು ಒಬ್ಬರೂ ಇಲ್ಲ. ವರದಕ್ಷಿಣೆ ತೆಗೆದುಕೊಳ್ಳಬಾರದು, ಹುಡುಗಿಯ ಅಂತರ್ಯ ಮುಖ್ಯ, ಕಪ್ಪಾದರೂ ಸ್ವಭಾವ ನೋಡುವುದು ಮುಖ್ಯ, ಎಂದೆಲ್ಲಾ ಉಪದೇಶ ಮಾಡಿ ಕೊನೆಗೆ ತಮ್ಮ ಸರದಿ ಬಂದಾಗ ಅವರು ಮಾಡಿದ ಉಪದೇಶವೆಲ್ಲಾ ಗಾಳಿಗೆ ತೂರುವರು. ಹುಡುಗಿ ನೋಡಲು ಸುಂದರವಾಗಿರಬೇಕು, ಕೈತುಂಬಾ ವರದಕ್ಷಿಣೆ ಕೊಡಬೇಕು, ಮೈತುಂಬಾ ಒಡವೆ ಹಾಕಬೇಕು, ಜನಮೆಚ್ಚುವಂತೆ ಮದುವೆ ಮಾಡಿಕೊಡಬೇಕೆಂದೆಲ್ಲಾ ಹೇಳಿ ಹೆಣ್ಣು ಹೆತ್ತವರು ಬೆಚ್ಚಿ ಬೀಳುವಂತೆ ಮಾಡುವರು. ವರದಕ್ಷಿಣೆ ಕೊಡುವುದು, ತೆಗೆದು ಕೊಳ್ಳುವುದು ಕಾನೂನು ಬಾಹಿರವಾದದ್ದು ಎಂದು ಅರಿತವರೆ ಈ ರೀತಿ ವರ್ತಿಸುವುದು ಹೆಚ್ಚಾಗಿ ಕಂಡುಬರುತ್ತದೆ.

ಮದುವೆಯಾಗಿ ವೈಧವ್ಯವುಂಟಾದಲ್ಲಿ ಹಿಂದೂ ಸಮಾಜದಲ್ಲಿ ವಿಧವೆಯರ ಅದರಲ್ಲೂ ಬಾಲ್ಯದಲ್ಲೇ ಗಂಡನನ್ನು ಕಳೆದು ಕೊಂಡವರ ದು:ಖವನ್ನು ಹೇಳಿ ಮುಗಿಸುವಂತಿಲ್ಲ, ಅಳೆದು ತೀರುವಂತಿಲ್ಲ. ಬಾಳಿನ ಹೊಸಲಿನಲ್ಲಿ ಕಾಲಿಡುತ್ತಿರುವಾಗಲೇ ಸಂಸಾರದ ಸುಖದ ಸವಿಯನ್ನು ಅನುಭವಿಸುವ ಅವಕಾಶವನ್ನು ಕಳೆದುಕೊಂಡ ಹೆಣ್ಣು ಮಕ್ಕಳ ಸಂಕಟವನ್ನು ಏನೆಂದು ವರ್ಣಿಸುವುದು. ಗಂಡನ ಸುಖದಿಂದ ವಂಚಿತಳಾಗಿ, ಜನರ ಬಾಯಿಗೆ ಬಿದ್ದು, ವಿಧವೆಯಾದವಳು. ತನ್ನ ವ್ಯಕ್ತಿತ್ವವನ್ನು

ಕಳೆದುಕೊಂಡು ಉಳಿದ ತನ್ನ ದೀರ್ಘವಾದ ಬಾಳನ್ನೆಲ್ಲ "ಸಾಯದೆಯೇ ಸತ್ತಂತೆ" ನೂಕಬೇಕಾದ ಚಿತ್ರ ಬಲು ಘೋರವಾದುದು. ಅವಳ ಸ್ಥಿತಿ ತುಂಬಾ ಕರುಣಾಜನಕವಾಗಿದೆ. ಅವಳ ದು:ಖ ಈ ರೀತಿ ತೋಡಿಕೊಂಡಿದ್ದಾಳೆ.

ಗಂಡ ಸತ್ತರಿನ್ನು ಗಂಧ ಕುಂಕುಮವ್ಯಾಕ
ಬಂಗಾರವ್ಯಾಕ ಬಳಿಯಾಕ । ಕೊರಳೀಗ
ಸಿಂಗಾರ ಶಿವನೇ ಕಸಗೊಂಡ ॥
ಕಂದಾನೆತ್ತಲಿಲ್ಲ ಕೈ ಬೀಸಿ ನಡೆಲಿಲ್ಲ
ಗಂಡನ ಪುಣ್ಯ ಉಣಲಿಲ್ಲ । ಶಿವರಾಯ
ರಂಡೆತನಕ್ಹಿಂಗ ಗುರಿಯಾಗಿ

ಗಂಡ ಇರಲಿ, ಇಲ್ಲದೇ ಇರಲಿ ಹೆಣ್ಣಿಗೆ ಗಂಡನ ಮನೆಯೇ ಲೇಸೆಂದು ಬಲ್ಲವರು ನುಡಿದರೂ, ಹೆಂಗಸರಿಗೆ ತೌರೂರೆಂದರೆ ಬಲು ಅಕ್ಕರೆ, ತಂದೆ ತಾಯಿಗಳ ಅಕ್ಕರೆಯ ಮಡಿಲಿನಲ್ಲಿ ಬೆಳೆದು, ಅಣ್ಣ–ತಮ್ಮಂದಿರು, ಅಕ್ಕ ತಂಗಿಯರೊಡನೆ ದಿನಗಳನ್ನು ಕಳೆದು, ಗೆಳತಿಯರೊಡನೆ ಆಟವಾಡಿದ ತೌರೂರು ಹೆಣ್ಣು ಮಕ್ಕಳಿಗೆ ನೆನಪಿನ ಭಂಡಾರ, ಗಂಡನ ಮನೆಯಲ್ಲಿ ಸುಖವಾಗಿದ್ದರೂ ಅವರ ಮನಸ್ಸು ಮೊದಲು ತಾಯಿಯನ್ನು ನೆನೆಯುತ್ತದೆ. ಹಾಗೇ ನೆನೆದಾಗ ಹೆಣ್ಣುಮಕ್ಕಳ ಮನಸ್ಸು ಹಗುರವಾಗುವುದು. ತೌರಿನಲ್ಲಿ ತಾಯಿಯ ಕೊರತೆಯನ್ನು ಯಾರಿಂದಲೂ ನೀಗಿಸಲು ಸಾಧ್ಯವಿಲ್ಲ ಎಂಬ ಮಾತು ನುಡಿಯುವಳು.

ಈ ಹಾಡು ಜನಪದ ಸಮಾಜದ ಹೃದಯ ವಿದ್ರಾವಕ ಸಂದರ್ಭವೊಂದನ್ನು ನಿರೂಪಿಸಿದೆ. ನಮ್ಮ ಜನಪದ ಸಮಾಜ ಶೀಲ ಮತ್ತು ಪಾತಿವ್ರತ್ಯಕ್ಕೆ ಹೆಚ್ಚಿನ ಮನ್ನಣೆಯನ್ನೂ ನೀಡಿದೆ. ಅವು ಜನಪದರ ಮೌಲ್ಯಗಳೇ ಆಗಿವೆ. ನೈತಿಕ ಹಿರಿಮೆಯನ್ನು ಪ್ರತಿಪಾದಿಸುವ ಈ ಮೌಲ್ಯಗಳು ಕೌಟುಂಬಿಕ ಜೀವನದಲ್ಲಿ ಬಹುಮುಖ್ಯ ಹಾಗೂ ಅನುಕರಣೀಯವಾಗಿದೆ. ಹೆಣ್ಣಿನ ಬದುಕಿನಲ್ಲಿ ಪ್ರಾಣಕ್ಕಿಂತ ಮಾನ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಇಂಥ ಒಂದು ಶೀಲ ನಿಷ್ಠೆ ಪಾತಿವ್ರತ್ಯಕ್ಕಾಗಿ ಬಲಿದಾನವಾಗಿದ್ದಾಳೆ ತಂಗಿ ನೀಲಗಂಗಾ ಅವಳನ್ನು ಕಂಡು ಅಕ್ಕ ತಂಗಿಯನ್ನು ನೆನೆದು ಬೋರಾಡಿ ಅಳುತ್ತಾಳೆ. ಕಲಿಗಾಲ ಎಂದು ಜನ ಈಗ ಆಡಿಕೊಳ್ಳುವರು. ಆದರೆ ಜನಪದರ ಕಾಲದಲ್ಲಿಯೂ ಇಂಥಹದೇ ನೀತಿ ಭ್ರಷ್ಟರಾದ ಜನರು ಇದ್ದರು ಎಂಬುದಕ್ಕೆ ಈ ನೀಲಗಂಗಾ, ರಾಮಾಯಣದ ಸೀತೆ, ಮಹಾಭಾರತದ ದ್ರೌಪದಿಯರೇ ಜ್ವಲಂತ ಸಾಕ್ಷಿಯಾಗಿದ್ದಾರೆ.

ಪಿ. ಕೆ. ಖಂಡೋಬಾರವರ ಜನಪದ ಕಥನ ಗೀತೆಗಳಲ್ಲಿ ಬರುವ 'ಕೆರೆಗೆ ಹಾರ' ಕವನದಲ್ಲಿ (ಕಥನ) ಬರುವ ಚಿಕ್ಕಸೊಸೆಯ ಗೋಳು ಹೇಳತೀರದು. ಇದು ಸಹಗಮನ ಪದ್ಧತಿಗೆ ಹೋಲುತ್ತದೆ. ಸ್ವಇಚ್ಛೆ ಅಲ್ಲದಿದ್ದರೂ ಒತ್ತಾಯದಿಂದಲಾದರೂ ಅವಳ ಆಹುತಿ ಕೊಡುವರು. ಸಾಮಾನ್ಯವಾಗಿ ಹೆಣ್ಣು ತನ್ನ ಗಂಡನ ಪ್ರೀತಿಯನ್ನು ಇನ್ನೊಬ್ಬರಲ್ಲಿ ಹಂಚಿಕೊಳ್ಳಲು ಬಯಸುವುದಿಲ್ಲ. ಗಂಡನ ವ್ಯಭಿಚಾರವನ್ನು ಸಹಿಸಿಕೊಂಡು ಮನಸ್ಸಿನಲ್ಲಿ ಅನ್ಯಾಯ ಅವಮಾನದಂತಹ ಜ್ವಾಲೆಗಳು ಏಳುತ್ತಿದ್ದರೂ ಸ್ಫೋಟಗೊಳ್ಳದೆ ಸಹನೆಯಿಂದ; ಉದಾರತೆಯಿಂದ ವರ್ತಿಸುವ ಹೆಣ್ಣಿನ ನೋವನ್ನು ಅರ್ಥ ಮಾಡಿಕೊಳ್ಳದೇ ಅವಳನ್ನು ದೇವತೆಯೆಂದು ಈ ವ್ಯವಸ್ಥೆಕೊಂಡಾಡುವುದು. ಈ ಹೊಗಳಿಕೆಯಲ್ಲಿ ಪುರುಷನ ಸ್ವಾರ್ಥ ಅಡಗಿರುವುದನ್ನು ಜನಪದ ಮಹಿಳೆ ಮನಗಂಡು ಸಮಾಜದ ಆರೋಗ್ಯ ದೃಷ್ಟಿಯಿಂದ ಚಿಂತಿಸುವಳು. ತನ್ನ ಗಂಡನ ಅನೈತಿಕ ಸಂಬಂಧ ಗೊತ್ತಾದರೂ ವಿಚಲಿತಳಾಗದೆ ಆತನಿಗೆ ನಯವಾಗಿ ತಿದ್ದಿ

ಹೇಳುವಲ್ಲಿ ದಾಂಪತ್ಯದ ಭದ್ರತೆಯನ್ನು ಕಾಪಾಡುವ ಕಾಳಜಿ ಇದೆ. ಆದರೆ ಈ ವ್ಯವಸ್ಥೆಯು ಗಂಡು-ಹೆಣ್ಣಿನಿಂದ ಸ್ವೇಚ್ಛಾಚಾರ ಬಯಸುವುದಿಲ್ಲ. ಪುರುಷ ಮಾತ್ರ ತಾನು ಅರ್ಹ ಎನ್ನುವನು. ಲೈಂಗಿಕ ಸ್ವೇಚ್ಛಾಚಾರವೇ ಪುರುಷತ್ವದ ಲಕ್ಷಣ, ಸಮಾಜದಲ್ಲಿ ಘನತೆ, ಸಾಮರ್ಥ್ಯ ಎಂದು ತಿಳಿದುಕೊಂಡಿದ್ದಾನೆ. ಗೂಳಿಯಂತೆ ಮೆರೆದಾಡುವವನಿಗೆ ಮೂಗುದಾರ ಹಾಕುವ ಪ್ರಯತ್ನವನ್ನು ಮೊಟ್ಟಮೊದಲು ಜನಪದ ಮಹಿಳೆ ಮಾಡಿದ್ದಾಳೆ. ಈ ದೇಶದ ಪಿತೃಪ್ರಧಾನ ಸಂಸ್ಕೃತಿಯಲ್ಲಿ ಹೆಣ್ಣಿಗೆ ಒಂದು ನೀತಿ ಗಂಡಿಗೆ ಒಂದು ನೀತಿ.

೬.೨ ಜಾನಪದ ಸಾಹಿತ್ಯ ಮತ್ತು ಸ್ತ್ರೀ ಸಂಘರ್ಷ

ಇತಿಹಾಸದ ಪುಟ ತಿರುವಿ ನೋಡಿದಾಗ ಎಲ್ಲ ಕಡೆಯೂ ಹೆಣ್ಣಿನ ಮೇಲೆಯೆ ಶೋಷಣೆ ನಡೆದಿರುವುದು ಕಂಡು ಬರುತ್ತದೆ. ಕೋಟೆ, ಕೊತ್ತಲಗಳು, ಕೆರೆ, ಬಾವಿಗಳು, ಕಟ್ಟಿಸುವಾಗ ಅವುಗಳು ಸ್ಥಿರವಾಗಿ ನಿಲ್ಲುವುದಕ್ಕಾಗಲಿ, ಅದರ ಸಮಸ್ಯೆಗಳ ಪರಿಹಾರಕ್ಕಾಗಲಿ ಆಹುತಿಗಳನ್ನು ಕೊಡುವುದು ಕೇವಲ ಮಹಿಳೆಯರನ್ನೇ. ಪುರುಷರ ಬಲಿ ಕೊಟ್ಟಿದ್ದು ಎಲ್ಲಿಯೂ ಕಂಡು ಬರುವುದಿಲ್ಲ. 'ಕೆರೆಗೆ ಹಾರ' ದಲ್ಲಿ ಭಾಗೀರಥಿಯನ್ನು, ಕ್ಯಾತನಹಳ್ಳಿ ರಾಮಣ್ಣನವರು ಸಂಗ್ರಹಿಸಿದ "ಬೀದರ ಜೆಲ್ಲೆಯ ಜನಪದ ಗೀತೆಗಳಲ್ಲಿ" ಕೋಟೆ ಕಿಲ್ಲೆದ ಕಥಿ ಎಂಬ ಹಾಡಿನಲ್ಲಿಯೂ ಬೀದರ ಕೋಟೆ ನಿಲ್ಲದಾದಾಗ ಗೌಡರ ಸೊಸೆ ಸಂಗಮ್ಮನನ್ನು ಬಲಿ ಕೊಡುವರು. ಗಂಡನ್ನು ಬಲಿಕೊಟ್ಟ ಒಂದು ಉದಾಹರಣೆಯೂ ಜನಪದರಲ್ಲಿ ಕಾಣದು.

ಪಿ. ಕೆ. ಖಂಡೋಬಾ ರವರು ಸಂಗ್ರಹಿಸಿದ "ಕೊಂತಮ್ಮ" ಸಂಗವ ಮಾಡ್ಯಾಳ ನಿಮತಂಗಿ 'ಈರೋಬಿ' ಕಥನ ಕಾವ್ಯವು ಪ್ರಸ್ತುತ ಕಥನ ಗೀತೆಯನ್ನು ಜೀ. ಶಂ. ಪ. ಅವರ ಜನಪದ ಖಂಡಕಾವ್ಯಗಳು ಸಂಗ್ರಹದಿಂದ ಆಯ್ದುಕೊಳ್ಳಲಾಗಿದೆ. ಈರೋಬಿಯ ಬದುಕಿನ ವಾಸ್ತವಿಕ ಘಟನೆಯನ್ನು ನಿರೂಪಿಸಿದ ಈ ಖಂಡ ಕಾವ್ಯ ಸುಮಾರು ೨೦೦ ವರ್ಷ ಹಿಂದಿನವುಗಳು. ಹಿಂದಿನ ಸತಿಸಹಗಮನ ಪದ್ಧತಿಯನ್ನು ಎತ್ತಿಹೇಳುತ್ತದೆ. ತನ್ನ ಗಂಡ ಸತ್ತ ಬಳಿಕ ಈರೋಬಿ ಕೊಂಡು ಹೋಗುವ ಘಟನೆಯನ್ನು ಜನಪದಕವಿ ನಿರೂಪಿಸುವ ಕ್ರಮ ತುಂಬಾ ಹೃದಯ ವಿದ್ರಾವಕವಾಗಿದೆ. ಮಹಾ ಪತಿವ್ರತೆ ಸತಿಸಹಗಮನ ನಿಷ್ಠೆಯೇ ಈ ಕಥನಕದ ಒಟ್ಟು ಆಶಯವಾಗಿದೆ. [೧೩]

ಡಿ. ಬಿ. ನಾಯಕ್ ರವರ "ಭುಲಾಯಿ ಹಾಡುಗಳ" ಸಂಗ್ರಹದಲ್ಲಿ ಬರುವ ಶಂಕರ ಸಾಹುಕಾರನ ಹಾಡಿನಲ್ಲಿ ಸವತಿಯ ಮಾತ್ಸರ್ಯವು ಯಾವ ಸ್ವರೂಪವನ್ನು ಪಡೆಯಬಲ್ಲುದು? ಸವತಿ ಒಂದು ಹೆಣ್ಣಾದರೂ ನಿರ್ದಾಕ್ಷಿಣ್ಯವಾಗಿ ಸವತಿಯಾದ ಚಂಪಾವತಿಯ ಮಗುವನ್ನು ಕೊಂದು ತನ್ನ ಮಾತ್ಸರ್ಯವನ್ನು ವ್ಯಕ್ತಪಡಿಸಿದ್ದಾಳೆ. ಅದೇ ತಾಯಿಯಾದವಳು ಸತ್ತ ಮಗುವನ್ನು ಕಂಡು ಹೊಟ್ಟೆಯಲ್ಲಿ ಬೆಂಕಿ ಬಿದ್ದಂತಾಗಿ ರೋದಿಸುವಳು. [೧೪]

ಕ್ಯಾತನಹಳ್ಳಿ ರಾಮಣ್ಣನವರು ಸಂಗ್ರಹಿಸಿದ "ಬೀದರ ಜೆಲ್ಲೆಯ ಜನಪದ ಗೀತೆಗಳಲ್ಲಿ"- "ದಿಗಿಲಾಗಿ ನಿಂತಾಳ" ಎಂಬ ಕಥನ ಕವನದಲ್ಲಿ ದುಷ್ಟನಾದ ದೊರೆಮಗ ಚಂದ್ರಾಣಿಯ ಮೇಲೆ ಮನಸ್ಸಿಟ್ಟು ಅವಳ ಕಣ್ಣೆದುರಲ್ಲೆ ಅವಳ ಗಂಡನನ್ನು ದುಷ್ಟರನ್ನು ಕಂಡು ದೂರವಿರು ಎನ್ನುವಂತೆ ಚಂದ್ರಾಣಿ ದುಷ್ಟರಿಂದ ದೂರ ಇದ್ದರೂ, ದುಷ್ಟತನ ಬೆನ್ನುಬಿಡದೆ ಭೂತವಾಗಿ ಕಾಡಿತು. ಇಲ್ಲಿ ಮುಗ್ಧ ಚಂದ್ರಾಣಿಯ ಆಕ್ರಂದನ ಕಾಡಿನ ರೋದನವಾಯಿತು. "ಹರಿಚಂದುರಾಯನ" ಹಾಡಿನಲ್ಲಿ ರಾಜ ತನ್ನ ಹೆಂಡತಿ ಮಗನನ್ನು ಮಾರಾಟ ಮಾಡಿದಾಗ, ಅವರು ಪಟ್ಟ ಪಾಡು ಹೇಳಲಸದಳವಾದುದು.

ಇಂಥಹ ಅನೇಕ ಸಂದರ್ಭಗಳಲ್ಲಿ ಸ್ತ್ರೀಸಂವೇದನೆಯನ್ನು ಕಾಣಬಹುದಾಗಿವೆ. ಮದುವೆಯಾದ ಮಹಿಳೆಯರಷ್ಟೇ ಅಲ್ಲ ಮದುವೆಯಾಗದ ಹೆಣ್ಣುಮಕ್ಕಳು ಕೂಡಾ ಕೆಲವು ಸಲ ಕಷ್ಟಕ್ಕೆ ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕು, ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಾರೆ. ಹಿರಿಯರ ನಿರ್ಧಾರಕ್ಕೆ ಸೋತು ಸಾವಿಗೆ ಶರಣಾದ ಅನೇಕ ದೃಷ್ಟಾಂತಗಳನ್ನು ಸ್ತ್ರೀ ಸಂವೇದನೆಯಲ್ಲಿ ಕಾಣಬಹುದು. ಮತ್ತೊಂದು ಕಡೆ ಸಿರಿಗೌರಿ ಏನೂ ಅರಿಯದ ಮುಗ್ಧೆ. ಎಲ್ಲರಂತೆ ತಾನೂ ನಾಗರಪಂಚಮಿ ಹಬ್ಬದಲ್ಲಿ ಶೇಷನಾಗನಿಗೆ ಹಾಲೆರೆಯಲು ಹೋಗುತ್ತಾಳೆ. ಆದರೆ ನಾಗದೇವತೆ ಪುರುಷವೇಷದಲ್ಲಿ ಅವಳನ್ನು ತಡೆದು ನಿಲ್ಲಿಸಿಕೊಂಡು ತನ್ನವಳನ್ನಾಗಿಸಿಕೊಳ್ಳುತ್ತಾನೆ.
ಕಂಡು ಬಂದುದರಿಂದ ತಾಯಿ ಹೊಡೆದುಬಡಿದು ಕಾಡಿಗಟ್ಟುತ್ತಾಳೆ. ಆದರೆ ಅಲ್ಲಿರುವ ಹಕ್ಕಿಪಕ್ಕಿಗಳು ಅವಳನ್ನು ಸಂರಕ್ಷಿಸುತ್ತವೆ. ಮುಂದೊಂದು ದಿನ ಗಂಡು ಮಗುವಿನ ತಾಯಾದಾಗ ಪಶುಪಕ್ಷಿಗಳೇ ಮುತ್ತು ಹವಳದ ಘುಗ್ಗರಿ ಹಾಕಿ ಎಲ್ಲ ಕೇರಿಯ ಮುತ್ತೈದೆಯರಿಗೆ ಬಾಗಿಣಕ್ಕಾಗಿ ಕರೆದು ನೀರಲ್ಲಿ ಹುಟ್ಟಿನೀರಲ್ಲಿ ಬೆಳದ ಮಗು ಅಂದರೆ ನೀರಿನಷ್ಟು (ಗಂಗೆಯಷ್ಟು) ಪವಿತ್ರವಾದ ಆ ಮಗುವಿಗೆ ನೀಲಕಂಠನೆಂದು ನಾಮಕರಣ ಮಾಡುತ್ತಾರೆ. ಇಂತಹ ಸಮಯದಲ್ಲಿ ತಾಯಾದವಳು, ತಾಯಿ ಆಗುವವಳ ಹತ್ತಿರ ಇದ್ದು ಆರೈಕೆ ಮಾಡದೆ ಪಶು ಪಕ್ಷಿಗಳಿಂದ ಆರೈಕೆ ಮಾಡಿಸಿಕೊಂಡಾಗ ಅವಳಿಗಾದ ದು:ಖ ವರ್ಣಿಸಲಾಸಾಧ್ಯ. ಅದು ಈ ರೀತಿಯಾಗಿ,

ಪತಿವರತಿ ಗವರಿ
ಪುರದುಂಡ ಪುರದೋಳು ಬ್ರಹ್ಮಚಾರಿಯ ಮಗಳು
ಶೇಷನ ಸತಿಯನಾಗಿದಳು ಕೇಳ

ಸಣ್ಣವರು ದೊಡ್ಡವರು ಎಲ್ಲರೂ ಸೇರಿಹರು
ನಾಗಣ್ಣಗ್ಹಾಲ ಎರಿಯುವರು ಕೋಲ

ನಾಗರ ಪಂಚಮಿ ನಾಡಿಗಿ ಧೊಡ್ಡದು
ನಾಗಣ್ಣಗ್ಹಾಲ ಎರಿಯುವರು ಕೋಲ
ಚಿನ್ನ ಬಾಜರ್ದಾಗ ಹೊಂಟಾಳೇ ಗಲಿಬಿಲಿ
ಕೈಯ್ಯಾಗಿನಳ್ಳ ಉದರುಸ್ತ ಕೋಲ

ಕೈಯ್ಯಾಗಿನಳ್ಳ ಉದುರುಸ್ತ ಸಿರಿಗೌರಿ
ಬಂದು ನಿಂತಾಳೆ ಗುಡಿಹೊರಗ ಕೋಲ

ಬಾ ನನ್ನ ಸಿರಿಗೌರಿ ಕೈಯಲ್ಲಿ ಖೊಬ್ಬರಿ
ನಾಗಣ್ಣಾಗ್ಹಾಲ ಎರಿಯುವರು ಕೋಲ

ನಾಗುಅಣ್ಣನ ಮಕ ಹಾಲಿಲಿ ತೊಳದಾಳೆ
ಪೂಜಿ ಮಾಡ್ಯಾಳೇ ಕುಂಕುಮದಿಂದೆ ಕೋಲ

ಪೂಜಿನೆ ಮಾಡ್ಯಾಳೆ ಕುಂಕುಮದಿಂದ
ಸಿರಿಗೌರಿ ಕೊರಳಲ್ಹಾಕ್ಯಾಳೆ ಹಂಗನೂಲ ಕೋಲ

ಬರುಲಾಕೆ ಬಂದಿದಿ ನಾ ಹ್ಯಾಂಗ ಬಿಡತೀನಿ
ಬಂದೆನ್ನ ಗವರಿ ಎದುರಿಗಿ ಕೋಲ

ಹಾದರ ಮಾಡಿಲ್ಲಂತಿ ಗರಭಿನ ಚಿನ್ನಂತಿ
ಪತಿಗ್ಹೇಳಿ ಕಿತ್ತಿಸೇ ನಿನ್ನ ಹಲ್ಲ ಕೋಲ

ಹುಗ್ಗಿಯ ಹುಮಚಾರಿ ತುಪ್ಪದ ಭೀಮಚಾರಿ
ಬಿಟ್ಟಬರ್‍ರಿ ಗವರಿಗೆ ಅರೇಣದಲ್ಲಿ ಕೋಲ

ಹಕ್ಕಿ ಪಕ್ಷಿಗೋಳು ಏನಂತ ಮಾತಾಡತಾವ
ಪತಿವರತಿ ಸುಂದರಿ ಗವರಿಗಿ ಸಲವಬೇಕು ಕೋಲ

ಒಂಬತ್ತ ತಿಂಗಳು ಘುಂಬ್ಯಾವೆ ರಂಬಿದಿನ
ಗವರಿ ಹಡದಾಳೆ ಗಣಸ್ ಮಗ ಕೋಲ

ಮೂರದಿನಕ ಮೂರದೇಶಿ ಐದಿನಕ ಐದೇಶಿ
ಬಾರಂಬ ದಿನಕ ತೋಟ್ಟೀಲು ಕೋಲ

ಸಣ್ಣವರು ಕೊಡ್ಡವರು ಜೋಗುಳ ಪದಹಾಡಿ
ಬಾಲನ ಹೆಸರು ಏನಿಡಬೇಕೆ ಕೋಲ

ನೀರಲ್ಹುಟ್ಟಿದ ಕೂಸು ನೀರಲ್ಲಿ ಬೆಳದಿದ ಕೂಸು
ನೀಲಕಂಠನಂತ ಹೆಸರಿಡಿರಿ ಕೋಲ [೧೫]

ಈ ರೀತಿ ಹೆಣ್ಣು ಪ್ರಪಂಚದಲ್ಲಿ ಬಿದ್ದ ಕೂಡಲೇ ನಿತ್ಯ ಜೀವನದ ಅನೇಕ ಪ್ರಸಂಗಗಳಲ್ಲಿ ಅವಳ ಕೋಮಲವಾದ ಮನಸ್ಸು ನೊಂದು ಬಳಲುವುದು. ಬಾಲ್ಯದಲ್ಲಿ ತಾಯಿ ತಂದೆಯರ ಕೈಯಲ್ಲಿಯೂ ಯೌವ್ವನದಲ್ಲಿ ಗಂಡನ ಕೈಯಲ್ಲಿಯೂ, ಮುಪ್ಪಿನಲ್ಲಿ ಮಕ್ಕಳ ಕೈಯಲ್ಲಿಯೂ, ಆಗದವರ ವ್ಯವಹಾರದಲ್ಲಿಯೂ ಸಂಪರ್ಕದಲ್ಲಿಯೂ ಹೆಣ್ಣಿನ ಮನಸ್ತಾಪವಾಗುವುದುಂಟು. ಅತ್ತೆಯಾಗಿ, ಸೊಸೆಯಾಗಿ, ಅತ್ತಿಗೆಯಾಗಿ, ನಾದುಣಿಯಾಗಿ, ಅಜ್ಜಿಯಾಗಿ ವಿವಿಧ ಪಾತ್ರಗಳಲ್ಲಿ ಅನೇಕ ಸಿಹಿಕಹಿ ಅನುಭವಗಳನ್ನು ಪಡೆಯುವವಳು. ಮನ ಬಿಚ್ಚಿ ಆಡಿದರೆ ಒಂದು, ಆಡದಿದ್ದರೆ ಇನ್ನೊಂದು ಹೀಗಾಗಿ ಹೆಣ್ಣು ಆಡಿದ್ದನ್ನು, ಆಡಿಸಿಕೊಂಡು ಮನಸ್ಸಿನಲ್ಲಿಯೇ ಕೊರಗಿ ಸುಮ್ಮನಾಗುವಳು. ಇದುವೇ ಸ್ತ್ರೀ ಸಂವೇದನೆ. ಅಷ್ಟಾದರೂ ಹೆಣ್ಣು ತನ್ನೆಲ್ಲ ನೋವು, ದು:ಖಗಳನ್ನೆಲ್ಲ ಮರೆತು ತನ್ನ ತವರನ್ನು ಹರಸುವಳು. ಮತ್ತೆ ಮತ್ತೆ ತಾಯಿ-ತಂದೆ, ಅಣ್ಣ- ಅತ್ತಿಗೆಯರನ್ನು ನೆನೆಯುತ್ತಲೇ ಇರುವುದು. ನೆನಪು ಬಂದಾಗಲೆಲ್ಲ ಅವಳ ಮನಸ್ಸು ನುಡಿದದ್ದು ಹೀಗೆ,

ಹಾಲುಂಡ ತವರಿಗಿ ಏನೆಂದು ಹಾಡಲಿ
ಹೊಳಿ ದಂಡೀಲಿರುವ ಕರಕಿಯ । ಕುಡಿಹಂಗ
ಹಬ್ಬಲಿ ಅವರ ರಸಬಳ್ಳಿ ॥
ತಾಯಮ್ಮ ಎಂಬುವವಳು ದೇವಲೋಕದ ಮನಸಿ
ಕಾಲು ಸೋಕಿದರ ಕರ್ಮವು । ತಾಯಮ್ಮ
ಕಾಶಿಗ್ಹೋದಾರೂ ಕಳೆಯದು. ॥ [೧೬]

ಹೆಣ್ಣಿಗೆ ಅತ್ತಿಗೆ-ಅಣ್ಣ ಎಷ್ಟೇ ಅನಾದರದಿಂದ ಕಂಡರೂ ಅವಳು ಯಾವತ್ತೂ ತನ್ನ ತವರನ್ನು ಶಪಿಸುವುದಿಲ್ಲ. ತನ್ನೆಲ್ಲ ಅವಮಾನ ಸಹಿಸಿ, ನೋವು ನುಂಗಿ, ತನ್ನ ತವರ ಬಳ್ಳಿ ಹಬ್ಬಲೆಂದೇ ಹರಸುವಳು. ಅಷ್ಟೇ ಅಲ್ಲದೇ ಗರತಿ ಜೀವನದ ಕೊನೆಯ ಉಸಿರಿನವರೆಗೂ ತನ್ನ ತವರನ್ನು ನೆನೆದು ಹಲಬುವಳು.

೬.೩ ನೀತಿ ಮತ್ತು ಪಾತಿವ್ರತ್ಯದ ನೆಲೆಗಳು

ಭಾರತೀಯ ಸಮಾಜದಲ್ಲಿ ಮೊದಲಿನಿಂದಲೂ ನೈತಿಕ ಬಿಗಿ-ಬಂಧನವಿದ್ದುದು ಸ್ಪಷ್ಟವಿದೆ. ಸ್ತ್ರೀಯರು ಪರಪುರುಷರನ್ನು ಕಣ್ಣೆತ್ತಿ ನೋಡಬಾರದು, ಪರಪುರುಷರನ್ನು ತಪ್ಪಿಯೂ ಬಯಸಬಾರದು. ಹಾಗೆ ಮಾಡಿದಂತೆಯಾದರೆ ಅಂಥವರಿಗೆ ನರಕ ಪ್ರಾಪ್ತಿಯಾಗುತ್ತದೆ. ಇಂತಹ ಪಾಪ-ಪುಣ್ಯ, ಸ್ವರ್ಗ-ನರಕ. ತಪ್ಪು ಒಪ್ಪುಗಳನ್ನು ಬಹಳೇ ಕಟ್ಟುನಿಟ್ಟಾಗಿ ಮೊದಲಿನಿಂದಲೂ ಸ್ತ್ರೀಯರು ಪಾಲಿಸುತ್ತಾ ಬಂದಿರುವುದು ಕಂಡುಬರುತ್ತದೆ. ಶೀಲವು ಸಾಮಾಜಿಕ ಸಮಸ್ಯೆಯಾಗಿರುವುದು ಮಾತ್ರವಲ್ಲದೆ, ವೈಯಕ್ತಿಕವೂ ಆಗಿದೆ. ಇಂದು ಮಹಿಳೆಯರ ಸ್ಥಾನಮಾನಗಳನ್ನು ಮನೆಯ ಅಂಗಳವನ್ನು ದಾಟಿಸಿ ಹೊರಗಿನ ಕ್ಷೇತ್ರಕ್ಕೆ ಕಾಲಿರಿಸಿ ವಿಸ್ತರಿಸಿದರೂ 'ಶೀಲ'ದ, ನೈತಿಕತೆಯ ವಿಚಾರದಲ್ಲಿ ಮಾತ್ರ ಯಾವ ಬದಲಾವಣೆಯೂ ಆಗಿರುವುದು ಕಂಡುಬರುವುದಿಲ್ಲ. ಹಿಂದೂ ಸಮಾಜದಲ್ಲಿ ಹೆಣ್ಣು ಒಮ್ಮೆ ಒಬ್ಬನನ್ನು ಮದುವೆಯಾದರೆ ಆ ದಾಂಪತ್ಯ ಜೀವನ ಸಹ್ಯವಾಗಿರಲಿ, ಅಸಹ್ಯವಾಗಿರಲಿ ಹೊಂದಿಕೊಂಡು ಹೋಗಬೇಕಷ್ಟೇ. ಅದೊಂದು ಸಾಮಾಜಿಕ ವ್ಯವಸ್ಥೆ. ಈ ನಿಯಮ ಸ್ತ್ರೀಗೆ ಅನ್ವಯಸಿದ್ದಷ್ಟು ಪುರುಷನಿಗೆ ಅನ್ವಯಿಸುವುದಿಲ್ಲ.

ಭಾರತೀಯ ಸಂಸ್ಕೃತಿಯಲ್ಲಿಯೇ ಈ ರೀತಿಯ ವ್ಯವಸ್ಥೆ ಇದೆ. ಹೆಣ್ಣಿನ ಶೀಲಕ್ಕೆ ಹೆಚ್ಚಿನ ಒತ್ತು ಕೊಟ್ಟಿರುವುದನ್ನು ಕಾಣುತ್ತೇವೆ. ಜನಪದ ಜೀವನವೂ ಇದಕ್ಕೆ ಹೊರತಾಗಿಲ್ಲ. ಸಾಮಾಜಿಕ ರೀತಿ ನೀತಿಗಳು ಬೆಳೆದಂತೆ ಸ್ವಚ್ಛಂದ ಜೀವನದಿಂದ ಕೌಟುಂಬಿಕ ಜೀವನಕ್ಕೆ ಅನಾಗರಿಕತೆಯಿಂದ ನಾಗರಿಕತೆಯತ್ತ, ಜನರ ಜೀವನ ಕ್ರಮ ಬೆಳೆದಂತೆ ನೀತಿ ನಿರ್ಬಂಧಗಳು ಹೆಚ್ಚಾಗಿರುವ ದೈಹಿಕ ಸಂಬಂಧ ಮಾತ್ರವಲ್ಲ, ಒಬ್ಬ ಸ್ತ್ರೀಯು ದೈಹಿಕವಾಗಿ ಅಷ್ಟೆ ಅಲ್ಲ ಮಾನಸಿಕವಾಗಿಯೂ ತನ್ನ ಗಂಡನಿಗೆ ಮೀಸಲಾಗಿರಬೇಕು. ಅನ್ಯರ ಪಾಲಾದರೆ ಅದು ಶೀಲಹರಣ ಚಾರಿತ್ರ್ಯದ ಪತನವಾದಂತೆ. ಹೆಣ್ಣಿನ ಶೀಲ ವ್ಯಾಪಕವಾಗಿ ಗ್ರಹಿಸಲ್ಪಟ್ಟು ಒಂದು ಮೌಲ್ಯವಾಗಿ ಪರಿಗಣಿಸಲಾಗುತ್ತದೆ. ಹುಟ್ಟಿದ ಮನೆಗೂ ಕೊಟ್ಟ ಮನೆಗೂ ಕೀರ್ತಿ ತರುವಂತೆ ಬದುಕು ನಡೆಸಬೇಕು. 'ಗೃಹಿಣಿ'ಯಲ್ಲಿ 'ಗರತಿ' ಅನ್ನಿಸಿಕೊಳ್ಳಬೇಕು. ಪತಿವ್ರತೆಯಾದ ಸೀತೆಯ ಚಾರಿತ್ರ್ಯದ ಬಗ್ಗೆ ಅಲ್ಪ ಅಗಸನೊಬ್ಬ ಕೀಳು ಮಾತನಾಡಿದಾಗ ರಾಮ ಗರ್ಭಿಣಿಯಾದ ಸೀತೆಯನ್ನೆ ಕಾಡಿಗಟ್ಟಿದ ಕಥೆ ಎಲ್ಲರಿಗೂ ತಿಳಿದ ವಿಷಯವೇ. ಇಂಥ ಕಥೆಗಳಿಂದ ಶೀಲದ ಪಾವಿತ್ರ್ಯದ ಬಗ್ಗೆ ಅತಿಯಾದ ಗೌರವ ಬೆಳೆಸಿಕೊಂಡು ನೀತಿಗೆಟ್ಟ ಹೆಣ್ಣು ಸಮಾಜದಲ್ಲಿ ಅಗೌರವಕ್ಕೆ ಗುರಿಯಾಗಿ 'ನಾಯಿ ಮುಟ್ಟಿದ ಗಡಿಗೆ' 'ಶೀಲ ಕಳೆದುಕೊಂಡವಳು' ಎಂದು ಅವಳು ಎಲ್ಲರಿಂದಲೂ ತಿರಸ್ಕರಿಸಲ್ಪಡುತ್ತಾಳೆ. ಬದುಕಿದ್ದೂ ಸತ್ತಂತಾಗುತ್ತಾಳೆ. ಹಾಗಾಗದಂತೆ ಹೆಣ್ಣು ಬಹು ಎಚ್ಚರಿಕೆಯಿಂದ ಇರಬೇಕೆಂದು ನೈತಿಕ ಶಿಕ್ಷಣವನ್ನು ನಡೆನುಡಿಗಳಿಂದ, ಹಾಡು, ಕಥೆಗಳಿಂದ ಕೊಡಲಾಗುತ್ತದೆ. ಅದು ಈ ರೀತಿಯಾಗಿದೆ,

ಊರ ಮುಂದಿನ ಬಾವಿ ಯಾರು ತೋಡಿದರೇನು
ಕಾಲು ಜಾರಿದರೆ ಕೈಲಾಸ । ಕಾಲು ಜಾರಿದರೆ ಕೈಲಾಸ
ಎಲೆ ನಾರಿ ಮನವ ಜಾರಿದರೆ ವನವಾಸ ऽऽऽ

ಕರಿಸೀರಿ ಉಡುಬ್ಯಾಡ । ಕಡಿವಾಣ ಬಿಡಬ್ಯಾಡ
ತಲಿಮ್ಯಾಲಿನ ಸೆರಗ ತೆಗಿಬ್ಯಾಡ । ತಲಿಮ್ಯಾಲಿನ ಸೆರಗ
ತೆಗಿಬ್ಯಾಡ ಎಲೆ ಬಾಲಿ ಬೀದಿಯಲಿ ನಿಂತು ನಗಬೇಡ ऽऽऽ

ಅತ್ತೆಯ ಮನೆಯಲ್ಲಿ ತೊತ್ತಾಗಿ ದುಡಿಬೇಕು
ಹೊತ್ತಾಗಿ ನೀಡಿದರೂ ಉಣಬೇಕು । ಹೊತ್ತಾಗಿ ನೀಡಿದರೂ

ಉಣಬೇಕೆ ಎಲೆ ನಾರಿ ಹೆತ್ತೋರ್ಗೆ ಕೀರ್ತಿ ತರಬೇಕು sss

ಬಂಗಾರ ಬಳೆನಿಟ್ಟೂ ಬಡವರಿಗಿ ಬಯ್ಯಬೇಡ
ಬಂಗಾರ ನಿನಗೆ ಸ್ಥಿರವಲ್ಲ । ಬಂಗಾರ ನಿನಗೆ ಸ್ಥಿರವಲ್ಲ
ಎಲೆ ಬಾಲಿ ಮಧ್ಯಾನ್ಹದ ಬಿಸಲು ನೆರಳಲ್ಲ sss

ಆದೇವ ಈದೇವ ಮಾದೇವ ಎನಬೇಡ
ಪತಿರಾಯ (ಗಂಡನೇ) ನಿನಗೆ ದೇವರು । ಗಂಡನೇ ನಿನಗೆ ದೇವರು
ಎಲೆ ನಾರಿ ಗಂಡನೇ ದೇವರೆಂದು ಪೂಜಿಸು sss

ಕನ್ನಡಿ ಕೈ ತಪ್ಪಿ ಹನ್ನೆರಡು ಹೋಳಾಗಿ
ಹೆಣ್ಣಿನ ಮನಸು ಎರಡಾಗಿ । ಹೆಣ್ಣಿನ ಮನಸು
ಎರಡಾಗಿ ದಾಳಿಂಬ್ರೆ ಹಣ್ಣಾದರೇನು ಸುಖವಿಲ್ಲ

ನೆರೆಮನೆಯ ಸಿರಿದೇವಿ ನೀನಾಗಿ ಬಾಳವ್ವ
ಮನಿಯೊಳಗ ಭೇದ ಬಗಿಬ್ಯಾಡ । ಮನಿಯೊಳಗ ಭೇದ
ಬಗಿಬ್ಯಾಡ ಎಲೆ ಬಾಲಿ ತುಂಬಿದ ಮನೆಯ ಒಡಿಬ್ಯಾಡ
ಚಾಡಿ ಹೇಳುವ ಮಂದಿ ಜಗದೋಳು ಬಲು ತುಂಬಿ
ಚಾಡಿ ಮಾತನು ನೀಕೇಳುಬ್ಯಾಡ । ಚಾಡಿ ಮಾತನು ನೀ ಕೇಳುಬ್ಯಾಡೆ
ಎಲೆ ನಾರಿ ತವರಿಗೆ ಮಾತು ತರುಬ್ಯಾಡ ॥ ೨ ॥
ತನ್ನಂಗ ನೋಡಿದರ ಭಿನ್ನಿಲ್ಲ – ಭೇದಿಲ್ಲ
ತನ್ನಂಗ ತನ್ನ ಮಗಳಂಗ
ತನ್ನಂಗ ತನ್ನ ಮಗಳಂಗ ನೋಡಿದರ
ಕಣ್ಣ ಮುಂದಾದ ಕೈಲಾಸ [೧೭]

ಹೆಣ್ಣು ಒಂದು ಸಲ ಜಾರಿದರೆ 'ಜಾರಿಣಿ' ಎನಿಸುತ್ತಾಳೆ. ಅವಳ ಜೀವನ ಕಷ್ಟಗಳಿಂದ ಕೂಡಿದ ಕಟ್ಟಿಟ್ಟ ಬುತ್ತಿ. ಅತ್ತೆಯ ಮನೆಯಲ್ಲಿ ಸದಾ ತೊತ್ತಿನಂತೆ ದುಡಿಯುತ್ತ, ಹೊತ್ತಾದರೂ ಬೇಸರಿಸದೆ ಊಟ ಮಾಡಬೇಕು. ಶ್ರೀಮಂತಿಕೆ ಬಂದಾಗ ಮೆರೆಯದೆ ತಲೆಯ ಮೇಲಿರುವ ಸೆರಗ ತೆಗೆದು, ಅಲ್ಲಿ ಇಲ್ಲಿ, ಬೀದಿಯಲ್ಲಿ ನಿಂತು ನಕ್ಕರೆ ತವರಿಗೆ ಕೆಟ್ಟ ಮಾತು ಬರುವುದು. ಪತಿಯೇ ಪರದೈವ ಎಂದು ಪೂಜಿಸು, ನೂರಾರು ದೇವರನ್ನು ಪೂಜಿಸುವ ನೆಪದಲ್ಲಿ ಪತಿಯನ್ನು ಕಡೆಗಣಿಸಬೇಡ, ಒಂದು ವೇಳೆ ಹೆಣ್ಣಿನ ಮನಸ್ಸು ಪರಪುರುಷನ ಕಡೆ ತಿರುಗಿದರೆ ಅವಳು ಸೌಂದರ್ಯವತಿಯಾದರೂ ಅವಳು ಎಂದೂ ಸುಖಪಡುವುದಿಲ್ಲ. ಈ ರೀತಿ ಮಾಡಿದಾಗ ಹೆತ್ತವರಿಗೆ ಅಪಕೀರ್ತಿವುಂಟಾಗುವುದು.

ಚಾಡಿ ಹೇಳುವಂಥ ಜನ ಜಗತ್ತಿನಲ್ಲಿ ತುಂಬಿದ್ದಾರೆ. ಹೆಜ್ಜೆ ಹೆಜ್ಜೆಗೂ ದಾರಿ ತಪ್ಪಿಸುವಂಥವರಿದ್ದಾರೆ. ಮನ ಕೆಡಿಸುವುದರ ಜೊತೆಗೆ ಮನೆಯನ್ನೂ ಕೆಡಿಸುವರು. ಅದಕ್ಕಾಗಿ ಅಂಥವರ ಮಾತಿಗೆ ಕಿವಿಗೊಟ್ಟು ಮನೆಯಲ್ಲಿ ಭೇದವೆಣಿಸಿ ಮನೆಮುರಿಯುವ ಕಾರ್ಯ ಮಾಡಬೇಡ ಇದರಿಂದ ತವರಿಗೆ ಕಳಂಕ ಬರುವುದು ಎಂದು ಜನಪದರು ಹಾಡುಗಳ ಮೂಲಕ ನಾರಿಯರಿಗೆ ನೈತಿಕತೆಯ ಬೋಧನೆ ಮಾಡಿರುವರು. ಈ ಮಾತು ಈಗಿನ ಜನಾಂಗಕ್ಕೂ ನೀತಿ ಪಾಠವೇ ಆಗಿರುವುದು. ನೈತಿಕತೆ ಕೇವಲ ಜನಪದರಿಗಷ್ಟೇ ಸೀಮಿತವಲ್ಲ ಈಗಲೂ ಇಂಥ ನೀತಿಯು ಹಾಡುಗಳ

ಅವಶ್ಯಕತೆ ಇರುವುದು. ಅದರ ಮೂಲಕ ಜನರಲ್ಲಿ ನೈತಿಕತೆಯ ಕುರಿತು ಜಾಗೃತಿ ಮೂಡಿಸಬಹುದು. ಅಕಸ್ಮಾತ್ತಾಗಿ, ಅನೀರಿಕ್ಷಿತವಾಗಿ ಶೀಲಕ್ಕೆ ಭಂಗಬರುವ ಪ್ರಸಂಗ ಬಂದರೆ ತನ್ನ ಪ್ರಾಣವನ್ನಾದರೂ ಕೊಟ್ಟು ಅವಳು ಶೀಲ ರಕ್ಷಿಸಿಕೊಳ್ಳಬೇಕು ಅಂಥ ಹೆಣ್ಣುಗಳ ಕಥೆ, ಹಾಡುಗಳು ಇನ್ನಷ್ಟು ವೈಭವೀಕರಿಸಿ ಹೇಳುತ್ತಾರೆ. ಸಂಪ್ರದಾಯದ ಹಾಡುಗಳಲ್ಲಿ ಶೀಲ ಕಾಪಾಡಿಕೊಂಡ ಇಲ್ಲವೆ ಶೀಲರಕ್ಷಣೆಗಾಗಿ ಪ್ರಾಣ ತೆತ್ತವರ ಕಥೆ ಹಾಡುಗಳ ರೂಪದಲ್ಲಿವೆ.

ಇದು ಒಮ್ಮೆ ಎನಗೆ ಅಂಬಿಗರಣ್ಣ
ಹೊಳಿಯರ ಧಾಟಿಸೋ ऽऽऽ
ಅಕ್ಕ ತಂಗೇರು ಆರ ಮಂದಿ ನನಗೂಡ ಏಳ ಮಂದಿ
ಹೊಳಿಯರ ಧಾಟಿಸೋ । ಇದು ಒಮ್ಮೆ ಎನಗೆ
ಅಂಬಿಗರಣ್ಣಾ ಹೊಳಿಯರ ದಾಟಿಸೋ ऽऽऽ

ಹೊಳಿಯರ ಧಾಟಿಸೂಲಾಕ ನನ್ನಿಚ್ಛಾ ನಿನ್ನಿಚ್ಛಾ
ತಾಯಿ ಗಂಗಮ್ಮನ ಮನದಿಚ್ಛಾ । ಅತಿರಂಬಿ
ಹೆಣ್ಣ ನಿನಗಾಗಿ ಹರಿಗೋಲ ನಿಂತಾವ ಹೇಳಮ್ಮಾ

ತಾಯಿಯು ಕೊಟ್ಟಿದ್ದು ತಾಳಿಯ ಸಾಮಾನು
ಇದು ತೆಗೆದು ನಿನ ಕೈಲಿ ಕೊಡುವೇನು । ಇದು ಒಮ್ಮೆ
ಎನಗೆ ಅಂಬಿಗರಣ್ಣ ಹೊಳಿಯರ ಧಾಟಿಸೋ ऽऽऽ

ಹೊಳಿಯರ ಧಾಟಿಸುಲಾಕ ನಿನ್ನಿಚ್ಛಾ, ನನ್ನಿಚ್ಛಾ
ತಾಯಿ ಗಂಗಮ್ಮನ ಮನದಿಚ್ಛಾ । ಅತಿರಂಬಿ
ಹೆಣ್ಣ ನಿನಗಾಗಿ ಹರಿಗೋಲ ನಿಂತಾವ ಹೇಳಮ್ಮಾ ऽऽऽ

ಅತ್ತೆವ್ವ ಇಟ್ಟಿದ್ದು ಸರಗಿ ಸರಗುಂಡ
ಇದ ಉಚ್ಚಿ ನಿನಗ ಕೊಡುವುವೇನು । ಇದು ಒಮ್ಮೆ
ಎನಗೆ ಅಂಬಿಗರಣ್ಣಾ ಹೊಳಿಯರ ಧಾಟಿಸೋ ऽऽऽ

ಹೊಳಿಯರ ಧಾಟಿಸೂಲಾಕ ನನ್ನಿಚ್ಛಾ ನಿನ್ನಿಚ್ಛಾ
ತಾಯಿ ಗಂಗಮ್ಮನ ಮನದಿಚ್ಛಾ । ಅತಿರಂಬಿ
ಹೆಣ್ಣ ನಿನಗಾಗಿ ಹರಿಗೋಲ ನಿಂತಾವ ಹೇಳಮ್ಮಾ ऽऽऽ

ಸಿಟ್ಟ ತಲಿಗೇರಿ ಅಂಬಿಗರಣ್ಣ ನಾರಿಯ
ಸೆರಗ ಹಿಡದಾನ । ನಾರಿ ಹಾರಿ ಹೊಳಿದಾಗ ಮುಣಗ್ಯಾಳ
ಅಂಬಿಗರಣ್ಣ ನಾರಿಗಿ ಕೈಯ ಸವರ್‍ಯಾನ

ನಾರೀಗಿ ಕೈಯ ಸವರ್‍ಯಾನ ಅಂಬಿಗರಣ್ಣ
ನಾರಿ ಕೈಗಿ ಸಿಗಣೆಲ್ಲ ।ನಾರಿ ಮುಣಗಿದಲ್ಲಿ
ನಾಲ್ವತ್ತು ಮಂದಿ ಮುಣಗ್ಯಾರ । ನಾರಿ ಕೈಗೆ ದೊರಿಲಿಲ್ಲ. [೧೮]

ಈ ರೀತಿ ಪತಿವ್ರತೆ ನಾರಿಯರು ಶೀಲ ಕಾಪಾಡಿಕೊಳ್ಳುವುದಕ್ಕಾಗಿ ತನ್ನ ಪ್ರಾಣವನ್ನೇ ಬಲಿಕೊಟ್ಟು ನೈತಿಕತೆಗೆ ಮಾದರಿಯಾಗಿ ಮೆರೆದಿದ್ದಾರೆ. ಅವರು ಸಾಂಸಾರಿಕ ಜೀವನದಿಂದ ಕಣ್ಮರೆಯಾದರೂ ಎಂದೆಂದಿಗೂ ಜನರ ನಾಲಿಗೆಯ ಮೇಲೆ ಅಜರಾಮರರಾಗಿಯೇ ಇರುವರು. ಹೆಣ್ಣು ಪರಿಪರಿಯಾಗಿ ಪ್ರಾರ್ಥಿಸಿಕೊಂಡರೂ ಕಾಮಾಂಧರ ಕಣ್ಣು, ಬುದ್ಧಿ ಎರಡೂ ಶೂನ್ಯವಾಗಿರುತ್ತವೆ. ಅವರಿಗೆ ಹೆಣ್ಣಿನ ಮೇಲಿನ ಮೋಹದಿಂದ ಸರ್ವಸ್ವವು ಗಾಳಿಗೆ ತೂರಿ ವರ್ತಿಸುತ್ತಾರೆ. ಈಗಿನ ಕಲಿಯುಗ ಕಾಲ ಕೆಟ್ಟಿದೆ ಎನ್ನುವದನ್ನು ನಾವು ಕಾಣುತ್ತೇವೆ. ಆದರೆ ಜನಪದರಿಂದಲೂ ಇಂಥಹ ಹೆಣ್ಣಿನ ಮೇಲೆ ಶೋಷಣೆ, ದೌರ್ಜನ್ಯ ನಡೆಯುತ್ತಲೇ ಇರುವುದಕ್ಕೆ ಇಂಥಹ ಕಥೆಗಳು, ಹಾಡುಗಳು ಸಾಕ್ಷಿಯಾಗಿ ನಿಂತಿವೆ. ರಾಮಾಯಣದಲ್ಲಿ ಸೀತೆಯೂ ರಾವಣನ ಶೋಷಣೆಗೆ, ಮಹಾಭಾರತದಲ್ಲಿ ದ್ರೌಪತಿಯು ಕೌರವರ ಶೋಷಣೆಗೆ ಒಳಗಾಗಿರುವುದು ಎಲ್ಲರಿಗೂ ತಿಳಿದ ವಿಷಯವೇ.

ಇಂದು ಅಂಬಿಗನಂಥವರು, ರಾವಣ, ಕೌರವರಂಥ ಬೀದಿ ಕಾಮಣ್ಣರು ಹೆಜ್ಜೆ ಹೆಜ್ಜೆಗೂ ಎದುರಾಗುತ್ತಾರೆ. ದೆಹಲಿಯಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿಯ ಮೇಲಿನ ದೌರ್ಜನ್ಯವೇ ಜ್ವಲಂತ ಉದಾಹರಣೆಯಾಗಿದೆ. ಇಂಥಹ ಘಟನೆಗಳು ದಿನನಿತ್ಯ ನಡೆಯುತ್ತಲೇ ಇರುತ್ತವೆ. ಆದರೆ ಮರ್ಯಾದೆಗೆ ಹೆದರಿ ಅವುಗಳನ್ನು ಮರೆಮಾಚುವರು. ತಪ್ಪುಗಂಡಿನದಾದರೂ ಅನುಭವಿಸುವವಳು ಹೆಣ್ಣೆ. ಒಮ್ಮೊಮ್ಮೆ ಹೆಣ್ಣೂ ಕೂಡಾ ತಿಳಿಯದೇ ಹರೆಯದ ಮಬ್ಬಿನಲ್ಲಿ ಜಾರಿ ತನ್ನ ಜೀವನವನ್ನೇ ಹಾಳು ಮಾಡಿಕೊಳ್ಳುವುದು ಉಂಟು.

ಬೇಲಿ ಮ್ಯಾಲಿನ ಹೂವ, ಬೆಳ್ಳಗಿದ್ದರೇನ
ಮಲ್ಲಿಗಿಯಂಥ ಮದಿಗಂಡ್ನ । ಬಿಟಕೊಟ್ಟು
ಹುಲ್ಲ ಕೊಯ್ಯವ್ನ ಹುಡುಕ್ಯಾಳೋ

ಹಾಡೀಗಿ ಹಾಡಿಲ್ಲ ಏಡೀಗಿ ತಲೆಯಿಲ್ಲ
ಮೋಡ ಬಂದಲ್ಲಿ ಬಿಸಿಲಿಲ್ಲ । ಹೆಣ್ಣೀಗಿ
ಓಡೀಹೋದಲ್ಲಿ ಸುಖವಿಲ್ಲ

ಮಾತ್ಗಂಟಿ ಮಗಳಲ್ಲ, ತಾಟ್ಗಿತ್ತಿಸೊಸೆನಲ್ಲ
ತೂಪರದ ಚಿಕ್ಕಿ ಒಲಿಗಲ್ಲ । ತವರಿಗೆ
ಮಾತು ತಂದವಳು ಮಗಳಲ್ಲ. [೧೯]

ಎಂದು ತವರವರು ಅವಳ ಮುಖವನ್ನೂ ನೋಡಲು ಇಷ್ಟ ಪಡುವುದಿಲ್ಲ. ಆಗ ಅವಳು ಸಮಾಜದಿಂದ ಬಹಿಷ್ಕರಿಸಲ್ಪಡುವಳು. ಯೌವ್ವನದಲ್ಲಿ ಹಿತವೆನಿಸಿದರೂ ನಂತರ ಪಶ್ಚಾತ್ತಾಪ ಪಡುವಳು. ಕೆಲವು ಸಲ ನೂರಾರು ಸುಳ್ಳು ಹೇಳಿ ತನ್ನ ಜಾರತನಕ್ಕೆ ದಾರಿ ಮಾಡಿಕೊಳ್ಳುತ್ತಾಳೆ. ಅದಕ್ಕೆ ದೃಷ್ಟಾಂತವಾಗಿ

ಊರ ಮುಂದಿನ್ಹೊಲ ಮಾಡೋ ಗೋಸಾಯಿ ಬಾವಾ
ಊರ ಮುಂದಿನ್ಹೊಲ ಮಾಡೋ

ಊರ ಮುಂದಿನ್ಹೊಲ ಮಾಡಿದುರ ಬಂಗಾಲಿಹೆಣ್ಣ
ದನ ಕರ ಬರತಾವಲ್ಲ ॥ ೨ ॥

ದನಕರ ಬಂದಿದುರ ಗೋಸಾಯಿ ಬಾವಾ
ಬೇಲಿನಾದುರ್ ಬಡಿಬೇಕೋ । ಊರ ಮುಂದಿನ್ಹೊಲ
ಮಾಡೋ । ಗೋಸಾಯಿ ಬಾವಾ ಊರ ಮುಂದಿನ್ಹೊಲ ಮಾಡೋ ऽऽऽ

ನತ್ತು ಮಾರಿ ಕೊಟ್ಟದುರ । ಬಂಗಾಲಿ ಹೆಣ್ಣ
ಗಂಡ ಮಕ್ಕಳು ಕೇಳ್ಯಾರಲ್ಲ ॥ ೨ ॥

ಗಂಡ ಮಕ್ಕಳು ಕೇಳಿದುರ । ಗೋಸಾಯಿ ಬಾವಾ
ಭಾಯ್ದಾಗಾದುರ ಬಿದ್ದದೆಂದೇನು । ಗೋಸಾಯಿ ಬಾವಾ
ಊರ ಮುಂದಿನ್ಹೊಲ ಮಾಡೋ ऽऽऽ

ಭಾಯ್ದಾಗಾದುರ್ ಬಿದ್ದಿದುರ ಬಂಗಾಲಿ ಹೆಣ್ಣ
ಜೋಡ್ ಮಟ್ಟ ಕಟ್ಟಸ್ಯಾರಲ್ಲಮ್ಮ ॥ ೨ ॥

ಜೋಡ್ ಮಟ್ಟ ಕಟ್ಟದುರ । ಗೋಸಾಯಿ ಬಾವಾ
ಮೀನ, ಮೊಸಳಿ ನುಂಗೇದಂದೇನು । ಗೋಸಾಯಿ ಬಾವಾ
ಊರ ಮುಂದಿನ್ಹೊಲ ಮಾಡೋ ऽऽऽ [೨೦]

ಈ ರೀತಿ ತನ್ನ ಕಾಮ ತೃಷೆಗಾಗಿ ಪರಿ ಪರಿಯಾಗಿ ಕಾಡುವಳು. ಅವಳು ಎಲ್ಲದ್ದಕ್ಕೂ ಸಿದ್ಧ ಎನ್ನುವ ಭಾವ ಇಲ್ಲಿ ವ್ಯಕ್ತವಾಗಿದೆ. ಅದಕ್ಕಾಗಿಯೇ "ಹೆಣ್ಣಿಗೆ ಗುಣವೇ ಶೃಂಗಾರ" ಎನ್ನುವ ಮಾತಿಗೆ ಬೆಲೆ ಕೊಟ್ಟವರು ನಮ್ಮ ಜನಪದರು. ಅವರ ದೃಷ್ಟಿಯಲ್ಲಿ ಗುಣವಿಲ್ಲದ ಜೀವನ ಸುಂದರವಾದ ಬದುಕಾಗಲಾರದು. ಅವರನ್ನು ಸುಸಂಸ್ಕೃತ ಮಟ್ಟಕ್ಕೆ ಏರಿಸಿದ. ಹಿರಿತನವೆಂದರೆ ಅಪಾರ ಗುಣ ಸಂಪತ್ತು ಹೆಣ್ಣು ಕುಂಟುಂಬದ ಕಣ್ಣಾಗಿ, ಆದರ್ಶ ಜೀವನದ ರಚನಾಕಾರಳಾಗಬೇಕಾದರೆ ಅವಳು ಸದ್ಗುಣಗಳ ಗಣಿಯಾದಾಗ ಮಾತ್ರ ಸಾಧ್ಯ. ಹೆಣ್ಣು ಕೇವಲ ಚೆಲುವಿದ್ದರಷ್ಟೇ ಸಾಲದು ತಕ್ಕ ಸದ್ಗುಣಿಯೂ ಅವಳಾಗಿರಬೇಕು ಎಂದು ನೀತಿಯ ಕುರಿತು ಹೇಳಿರುವರು.

ಚೆಲವು ಚೆಲುವಂತ ಆಸೆಗೆ ಬೀಳಲಿಬ್ಯಾಡ
ಚೆಲುವಿದ್ದರಿರಲಿ ಗುಣವಿಲ್ಲ । ಗುಂಡದ ನೀರ
ತಿಳಿಯಿದ್ದರಿರಲಿ ಹುಳ ಭಾಳ [೨೧]

ಗುಣವಿಲ್ಲದ ಚೆಲವಿದ್ದ ಹೆಣ್ಣಿಗೆ ಗುಂಡದ ನಿಂತ ನೀರಿಗೆ ಹೋಲಿಸಿದ್ದಾರೆ. ಗುಂಡದ ನೀರು ಹೆಣ್ಣಿನ ಚೆಲುವಿನಂತೆ ಸ್ವಚ್ಛವಾಗಿ ಕಂಡರೂ ಅದರಲ್ಲಿ ಹುಳು ಭಾಳ ಎಂದಿರುವರು. ಅತ್ತಿಯ ಹಣ್ಣು ನೋಡಲು ಸುಂದರವಾದ ಕೆಂಪು ಆಕರ್ಷಕ ಬಣ್ಣ ಹೊಂದಿದ್ದರೂ ಒಡೆದು ನೋಡಿದಾಗ ಕಾಣುವುದೆಲ್ಲ ಬರಿ ಹುಳುಗಳೇ, ಅದೇ ರೀತಿ ನೇರಿಳೆ ಹಣ್ಣು ಕಡುಕಪ್ಪಾಗಿದ್ದರೂ ತಿನ್ನಲುತುಂಬಾ ರುಚಿ ಹಾಗೆಯೇ ಕಪ್ಪು ಹೆಂಡತಿಯಾಗಿದ್ದರೂ ಗುಣವತಿಯಾಗಿದ್ದರೆ ಮನೆಗೆ ಶೋಭೆಯನ್ನು ತರುತ್ತಾಳೆ. ಮನೆ, ಮನ ಬೆಳಗುತ್ತಾಳೆ. ಆದುದರಿಂದಲೇ ನಾರಿಗೆ ಗುಣವೇ ಶೃಂಗಾರ ಎಂದು ಹೇಳುವರು. ಪತಿವ್ರತೆಯು ನೀತಿವಂತಳು ಯಾವಾಗಲೂ ದುಷ್ಟರನ್ನು ಕಂಡು ತಾನೇ ಮೊದಲು ದೂರವಿರುತ್ತಾಳೆ. ತಾನೆ ಅವರಿಗೆ ದಾರಿ ಬಿಡುವುದು ಲೇಸು ಎನ್ನುತ್ತಾಳೆ.

ಮದಿಸಿದ ಆನೆಯ ಮಲಗಿದ್ದ ಹಾವನ್ನು
ಮದಿರೆಯ ಕುಡಿದು ಬರವೋನ ಕಂಡರೆ
ಹರಿದಾರಿ ಬಿಟ್ಟು ಹರಿದೋಡು

ಎಂದು ದುಷ್ಟರಿಂದ ದೂರವಿರಲು ಜನಪದರು ಮಾರ್ಗದರ್ಶಿಸಿದ್ದಾರೆ. ಜೂಜು ಕೆಟ್ಟದ್ದು ಅದು ರಾಜಾಧಿರಾಜರನ್ನು ಕಷ್ಟಕ್ಕೆ ಗುರಿ ಮಾಡಿತು ಎಂದು ಜೂಜಿನ ಬಗ್ಗೆ ಜನಪದರು ನೀತಿಯ ಮಾತು ಹೇಳುತ್ತಾರೆ.

ಜೂಜಾಡಿ ಪಾಂಡವರು ರಾಜ್ಯವ ಸೋತರು
ಜೂಜಾಡಿ ನಳನು ಬಳಲಿದ ಕಂದಯ್ಯ
ಜೂಜಿಗೆ ಮನವ ಬಿಡದೀರು

ಗಂಡಿನಲ್ಲಾಗಲಿ, ಹೆಣ್ಣಿನಲ್ಲಾಗಲಿ ಗುಣ ಮುಖ್ಯ ಅವರ ಬಣ್ಣವಲ್ಲ. ಅಂಥವರನ್ನು ಕುರಿತು

ಕಪ್ಪೆಂದು ಜನರನ್ನು ಎತ್ತಾಡದಿರು ಕಂಡ್ಯ
ಕಪ್ಪಾದ ಹಸುವು ಕರೆದರೆ ಆ ಹಾಲು
ಒಪ್ಪೋದು ಹರ ಪೂಜೆಗೆ
ಒಪ್ಪೋದು ಹರ ಪೂಜೆಗೆ

ಸಿರಿತನ ಬಂದಾಗ ಅನ್ಯರನ್ನು ಅವಮಾನಿಸಬೇಡ. ಸಿರಿತನ ಶಾಶ್ವತವಲ್ಲ. ಗೋಡೆಯ ಮೇಲಿನ ಸುಣ್ಣದಂತೆ ಯಾವಾಗ ಹೊರಟು ಹೋಗುವುದೋ

ಬಂಗಾರ ಬಳೆಯುಟ್ಟು ಬೈಬ್ಯಾಡ ಬಡವರಿಗೆ
ಬಂಗಾರ ನಿನಗೆ ಸ್ಥಿರವಲ್ಲ । ಮಧ್ಯಾನದ
ಬಿಸಿಲು ಹೊಳ್ಳೊದು ತಡವಲ್ಲ.

ಮಕ್ಕಳಲ್ಲಿ ಪ್ರೇಮ ತೋರದವರಿಗೆ ಪರಮೇಶ್ವರನ ಅನುಗ್ರಹ ಹೇಗೆ ತಾನೇ ಆದೀತು ಎಂಬಂತಹ ನೀತಿ ತತ್ವವನ್ನು ಸಾರುವ ಜಾನಪದ ಹಾಡೊಂದು ಹೀಗಿದೆ,

ಅತ್ತ ಮಕ್ಕಳ ಕೈಗೆ ತುತ್ತೊಟ್ಟ ಕೊಡಲಿಲ್ಲ
ಮಕ್ಕಳ ಬೇಡಿ ಪರ್ವತಕ್ಕೆ ಹೋದರ
ಮುಕ್ಕಣ್ಣ ಶಿವನು ನಗನೇನ

ಹೆಣ್ಣು ತಾನು ನಡೆದಂತೆ ತನ್ನ ಮಗಳಿಗೂ ಬೋಧಿಸುವಳು.

ಅತ್ತೆ ಮಾವರಿಗಂಜಿ ಸುತ್ತೇಳು ನೆರೆಗಂಜಿ
ಮತ್ತೆ ಆಳುವ ದೊರೆಗಂಜಿ : ನನ ಮಗಳೆ
ಅತ್ತಿ ಮನಿಯೊಳಗ ಬಾಳವ್ವ

ಅವಳಿಗೆ ವೈಯಕ್ತಿಕ ಸುಖಕ್ಕಿಂತಲೂ ಕುಟುಂಬದ ಸು:ಖ, ಶಾಂತಿ ಮುಖ್ಯವಾಗಿರುತ್ತದೆ. ಗಂಡನ ಮನೆಯಲ್ಲಿ ಎಷ್ಟೇ ತೊಂದರೆಗಳು ಎದುರಾದರೂ ತಗ್ಗಿ ಬಗ್ಗಿ ನಡೆಯಬೇಕೆಂದು ತಾಯಿಯು ಬೋಧಿಸುವಳು. ಕುಟುಂಬದ ನೆಮ್ಮದಿಗೆ ಭಂಗತರದೆ, ಸಹಿಸಿಕೊಂಡು ಮೌನವಾಗಿ ಬದುಕಬೇಕೆಂಬುದು ತಾಯಿಯ ನೀತಿಯ ಬೋಧೆ. ಜನಪದ ಗರತಿ ಆದರ್ಶ ಸ್ತ್ರೀಯಾಗಿ ಯಾರಿಗೂ ಅಪಚಾರವೆಸಗದೆ, ಕೆಟ್ಟದ್ದನ್ನು ಬಯಸದೆ ನೈತಿಕ ಜೀವನವನ್ನು ಸಾಗಿಸಿಕೊಂಡು ಬಂದಿದ್ದಾಳೆ. ಜನಪದ ಗರತಿ ಹೆಣ್ಣು ಹೇಗಿರಬೇಕೆಂಬ ನೀತಿಯನ್ನು ಸಾರಿದ್ದಾಳೆ. ಸನ್ಮಾರ್ಗದ ಮರ್ಮವನ್ನು ಕುರಿತು ಗರತಿ ಗಂಡನೊಂದಿಗೆ ಹೊಂದಿಕೊಂಡಿರಬೇಕು. ಮನಸ್ಸು ಚಂಚಲಗೊಳ್ಳಲು ಬಿಡಬಾರದು ಎಂದಿರುವಳು.

ಅತ್ತ ಇತ್ತ ತಿರಗುವುದ್ಯಾಕ ಮುತ್ತಿನ್ಹಂಥ ಮನಸಿರಬೇಕ
ಸತ್ಯ ತನದಿ ಗಂಡನ ಗೂಡ ನಿತ್ಯ ಬಾಳ್ವೆ ಮಾಡಬೇಕ
ಅತ್ತ ಇತ್ತ ತಿರುಗುವುದ್ಯಾಕ ऽऽ
ಕುಂಟನಿರಲಿ ಕುರುಡನಿರಲಿ ಗಂಟು ಮೋರೆಯಾಗಿರಲಿ

ಒಂಟಿತನದಿ ಬಾಳ್ವೆ ಮಾಡಿ ಒಳ್ಳೆ ಗರತಿಯಾಗಬೇಕ
ಅತ್ತ ಇತ್ತ ತಿರುಗುವುದ್ಯಾಕ ss

ಬಡವನಿರಲಿ ಬಲ್ಲಿದನಿರಲಿ ಭೇದಭಾವ ಮಾಡುವದ್ಯಾಕ
ಒಡೆಯನೆಂದು ಸೇವೆ ಮಾಡಿ ಭಾಗ್ಯವಂತಿ ಆಗಬೇಕ
ಅತ್ತ ಇತ್ತ ತಿರುಗುವುದ್ಯಾಕ ss

ಜಾಣನಿರಲಿ, ಕೋಣನಿರಲಿ ಹೀನರೂಪಿಯಾಗಿರಲಿ
ಮಾನವಂತನೆಂದು ತಿಳಿದು ಮಾನವತಿಯಾಗಬೇಕ
ಅತ್ತ ಇತ್ತ ತಿರುಗುವುದ್ಯಾಕ ss

ಹಳ್ಳಿ ಊರ ಗಂಡನೆಂದು ಮಳ್ಳತನ ಮಾಡುವುದ್ಯಾಕ
ಒಳ್ಳೆ ಮನಸ್ಸಿನಿಂದ ಬಾಳಿ ಒಳ್ಳೆ ಗರತಿಯಾಗಬೇಕ
ಅತ್ತ ಇತ್ತ ತಿರುಗುವುದ್ಯಾಕ ss

ಹೆಣ್ಣು ಜಗದ ಕಣ್ಣು ಎಂದು ಮಾನ್ಯತೆಯ ಪಡೆಯಬೇಕ
ಚಿನ್ನದ್ಹಂತ ಬಾಳ್ವೆ ಮಾಡಿ ದೇವರನ್ನು ಮೆಚ್ಚಿಸಬೇಕ
ಅತ್ತ ಇತ್ತ ತಿರುಗುವುದ್ಯಾಕ ss [೨೨]

ಮನಸ್ಸು ಆಧೀನದಲ್ಲಿರಬೇಕು. ಅತ್ತ ಇತ್ತ ಹರಿಯದಂತೆ ಅಂಕೆಯಲ್ಲಿ ಇಟ್ಟುಕೊಂಡಿರಬೇಕು. ಗಂಡನು ಹೇಗೆ ಇರಲಿ ಕುಂಟ ಕುರುಡ, ಗಂಟು ಮುಖದವ, ಬಡವ, ಶ್ರೀಮಂತ, ಜಾಣನಿರಲಿ, ಮೂರ್ಖನೇ ಆಗಿರಲಿ, ಹಳ್ಳಿಯ ಹೈದ, ಗಮಾರನೇ ಆಗಿರಲಿ, ಅವನೇ ಒಡೆಯನೆಂದು ಸೇವೆಮಾಡುತ್ತ ಪತಿಯೇ ಪರದೈವವೆಂದು ತಿಳಿದು ಮಾನವತಿಯಾದ ಉತ್ತಮ ಗರತಿಯಾಗಿ ಬಾಳುವೆ ಮಾಡಬೇಕು. ಹೆಣ್ಣು ಜಗದ, ಸಂಸಾರದ ಕಣ್ಣು ಎಂದು ಮಾನ್ಯತೆ ಪಡೆದು, ದೇವರು ಮೆಚ್ಚುವಂತೆ ಬಾಳಬೇಕೆಂದು ಹದಿಬದೆಯರು ನೀತಿಯ ಮಾತನ್ನಾಡಿದ್ದಾರೆ.

೬.೪ ಮಹಿಳಾ ಜಾನಪದ ಸಾಹಿತ್ಯ ಮತ್ತು ಪ್ರತಿರೋಧ

ಅನೇಕ ಜನಪದ ಮಹಿಳೆಯರು ತನ್ನ ಶೀಲ ಕಾಪಾಡಿಕೊಳ್ಳುವಲ್ಲಿ ತನ್ನ ಪ್ರಾಣವನ್ನೇ ಬಲಿಕೊಟ್ಟಿದ್ದಾರೆ. ಪ್ರಾಣ ಹೋದರೂ ಚರಿತ್ರೆಗೆ ಧಕ್ಕೆ ಬರದಂತೆ ನೋಡಿಕೊಂಡಿದ್ದಾರೆ. ಇನ್ನು ಕೆಲವರು ಶೀಲ ಸಂರಕ್ಷಣೆಗಾಗಿ ತನ್ನ ಸಂತಾನವನ್ನೇ ಬಲಿಕೊಟ್ಟಿರುವುದನ್ನು "ಕಾಶಿಬಾಯಿ" ಹಾಡಿನಲ್ಲಿ ನೋಡಬಹುದು. ಡಾ. ಪಿ.ಕೆ. ಖಂಡೋಬಾರವರ "ಜನಪದ ಕಥನಗೀತೆಗಳಲ್ಲಿ" ಕಾಶಿಬಾಯಿ ಸ್ಟೇಷನ್ ಮಾಸ್ತರನಿಂದ ಶೀಲರಕ್ಷಣೆ ಮಾಡಿಕೊಳ್ಳಲು ಮಗುವನ್ನು ಅವನ ಕೈಗೆ ಒಪ್ಪಿಸಿ ತಾನು ಅಲ್ಲಿಂದ ಹೊರಬರುವಳು. ನಮ್ಮ ಸ್ವೀಕೃತಮೌಲ್ಯಗಳ ರಕ್ಷಣೆಯ ಹಿನ್ನೆಲೆಯಲ್ಲಿ ಪಾತಿವ್ರತ್ಯಕ್ಕೆ ಹೆಚ್ಚು ಮನ್ನಣೆಯನ್ನು ಕೊಟ್ಟಿದ್ದರಿಂದಲೇ ಈ ಕಥಾನಕ ಇಷ್ಟೂ ವ್ಯಾಪಕವಾಗಿ ಪ್ರಚುರತೆಯನ್ನು ಪಡಿಯಿತೆನ್ನಬೇಕು. ಶೀಲರಕ್ಷಣೆ ಸಾಮಾಜಿಕ ಮೌಲ್ಯವಾಗಿರುವಂತೆಯೇ ಹೆಣ್ಣಿಗೆ ಅದು ವೈಯಕ್ತಿಕ ಮೌಲ್ಯವೂ ಆಗಿದೆ. ಜನಪದ ಆಶಯ ಮತ್ತು ಧೋರಣೆಯ ದೃಷ್ಟಿಯಿಂದ ಇದು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಅಮಾಯಕ ಹೆಣ್ಣು ಕಾಶೀಬಾಯಿ ತನ್ನ ಕಣ್ಣೆದುರಿನಲ್ಲೇ ಕಾಮುಕ ಸ್ಟೇಶನ್ ಮಾಸ್ತರ್ ನಿರ್ದಯಿಯಾಗಿ ತನ್ನ ಕರುಳಿನ ಕುಡಿಯನ್ನು ಕತ್ತರಿಸಿದರೂ ಪಾತಿವ್ರತ್ಯ ಕಾಪಾಡಿಕೊಂಡ ಈ ಕಥನಕಾವ್ಯ ಪ್ರಸಿದ್ಧಿಯನ್ನು ಪಡೆದಿತ್ತು. ಅದೇ ರೀತಿ "ನೀಲಗಂಗಾನ ಹಾಡಿನಲ್ಲಿಯೂ ನಮ್ಮ ಜನಪದ ಸಮಾಜ ಶೀಲ ಮತ್ತು ಪಾತಿವ್ರತ್ಯಕ್ಕೆ ಹೆಚ್ಚಿನ ಮನ್ನಣೆಯನ್ನು ನೀಡಿ, ಪ್ರಾಣಕ್ಕಿಂತ ಮಾನ ಹೆಚ್ಚು ಪ್ರಾಧಾನ್ಯತೆಯನ್ನು ಪಡೆದುಕೊಂಡಿದೆ"[೨೩]

ಕನ್ನಡ ಜನಪದ ಕಥನ ಗೀತೆಗಳಲ್ಲಿ 'ಉತ್ತರಾದೇವಿ'ಯಷ್ಟು ಜನಪ್ರೀಯವಾದುದು ಇನ್ನೊಂದಿಲ್ಲ. ಪರಿಸ್ಥಿತಿಯ ಕ್ರೂರ ಕಪಿಮುಷ್ಠಿಗೆ ಸಿಕ್ಕ ಸೊಸೆಯೊಬ್ಬಳ ದುರಂತದ ಘಟನೆಯೇ ಉತ್ತರಾದೇವಿಯ ಕಥನಗೀತೆ. ಈ ಕಥನದುದ್ದಕ್ಕೂ ಉತ್ತರದೇವಿಯ ಗೋಳು ಹಾಗೂ ಬದುಕಿನ ಬವಣೆ ನಿರೂಪಿತವಾಗಿದೆ. ಅತ್ತೆ ಮನೆ ಸೊಸೆಯ ದಾರುಣ ಚಿತ್ರಣ ಪಿ. ಕೆ. ಖಂಡೋಬಾ ಅವರ ಜನಪದ ಕಥನ ಗೀತೆಗಳಲ್ಲಿ ನೋಡಬಹುದು.

ಜೀ. ಶಂ. ಪ. ಅವರ ಜನಪದ ಖಂಡಕಾವ್ಯದ ಸಂಗ್ರಹದಿಂದ "ಈರೋಬಿಯ" ಕಥನ ಕಾವ್ಯವು ೨೦೦ ವರ್ಷಗಳ ಹಿಂದಿನ ಸತಿಸಹಗಮ ಪದ್ಧತಿಯನ್ನು ಎತ್ತಿಹೇಳುತ್ತದೆ. ಈರೋಬಿಯ ಬಾಳಿನ ದುರಂತವನ್ನು ಮನಮಿಡಿಯುವಂತೆ ಚಿತ್ರಿಸಲಾಗಿದೆ. ಮಹಾಪತಿವ್ರತೆ ಸತಿಸಹಗಮನ ನಿಷ್ಠೆಯೇ ಈ ಕಥಾನಕದ ಒಟ್ಟು ಆಶಯವಾಗಿದೆ. "ಸಂಗವ ಮಾಡ್ಯಾಳ ನಿಮ ತಂಗಿ" – ಪಿ.ಕೆ. ಖಂಡೋಬಾರವರ ಕಥನಗೀತೆಗಳಲ್ಲಿ ಹೆಣ್ಣಿನ ಶೀಲ ಹಾಗೂ ಚಾರಿತ್ರ್ಯಕ್ಕೆ ಹೆಚ್ಚಿನ ಮನ್ನಣೆಯನ್ನು ನೀಡಿ, ತಂಗಿಯ ಶೀಲದ ಬಗ್ಗೆ ಸಂದೇಹದ ಮಾತನ್ನು ಹೆಂಡತಿಯಿಂದ ತಿಳಿದು ತಂಗಿಯನ್ನು ಗಂಡನ ಮನೆಗೆ ಕಳಿಸುವ ನೆಪದಲ್ಲಿ ಅಡವಿಗೆ ಕರೆದುಕೊಂಡು ಬಂದು ಅವಳನ್ನು ಕಡಿದುಹಾಕಿ ಬಾವಿಗೆ ತಳ್ಳುವುದನ್ನು ಪ್ರಸ್ತುತ ಕಥನಗೀತೆ ನಿರೂಪಿಸುತ್ತದೆ.[೨೪]

"ಮಜ್ಜಿಗೆಯಲ್ಲಿದ್ದ ಬೆಣ್ಣೆ ಕೆಡುವುದಿಲ್ಲ, ಅಂಕೆಯಲ್ಲಿದ್ದ ಹೆಣ್ಣು ಕೆಡುವುದಿಲ್ಲ" ಎನ್ನುವಲ್ಲಿ ಆದಷ್ಟು ಹೆಣ್ಣನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡು ಬದುಕನ್ನು ಭೋಗಿಸಬೇಕೆಂಬ ವಿಚಾರ ಹಾಗೂ ಕೌಟುಂಬಿಕ ಸೌಖ್ಯದ ಬಗ್ಗೆ ಹೆಣ್ಣಿನ ಜವಾಬ್ದಾರಿ ಹೆಚ್ಚು ಎಂಬುದೇ ಈ ಸಮಾಜದ ವ್ಯವಸ್ಥೆಯಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಯಾವದೇ ಗಂಡ ಹೆಂಡತಿ ಪರಪುರುಷ ಅಥವಾ ಪರಸ್ತ್ರೀಯ ಸಂಬಂಧವನ್ನು ಮನಸಾರೆ ಸ್ವೀಕರಿಸುವುದಿಲ್ಲ. ಆದರೂ ಜನಪದರಲ್ಲಿ ಹೆಣ್ಣು ತನ್ನ ಗಂಡ ಪರಸ್ತ್ರೀಯ ಸ್ನೇಹ ಮಾಡಿರುವ ವಿಷಯ ಪರರಿಂದ ಗೊತ್ತಾದರೂ ಉದಾರತೆ ಹಾಗೂ ಮಾನವೀಯತೆಯಿಂದ ಉತ್ತರಿಸುವಳು. ಈ ರೀತಿಯ ಉದಾಹರಣೆಗಳು ಪುರುಷರಲ್ಲಿ ಕಂಡುಬರುವುದಿಲ್ಲ.

"ಚಿಂತಾಕು ಇಟ್ಕೊಂಡು ಚಿಪ್ಪಾಟೆ ಬಳಿವಾಕಿ
ಚಿಂತಿಲ್ಲವೇನು ನಿನಗಿಷ್ಟು ನಿನಗಂಡ
ಅಲ್ಲೊಬ್ಬಳ ಕೂಡ ನಗುತಿದ್ದ"
"ನಕ್ಕರೆ ನಗಲೇಳು ನಗುಮುಖದ ಕ್ಯಾದಗಿ
ನಾಮುಟ್ಟಿ ಮುಡಿದ ಪರಿಮಳದ ಹೂವ
ಅವಳೊಂದು ಗಳಿಗಿ ಮುಡಿಯಲಿ" [೨೫]

ಎನ್ನುವಲ್ಲಿ ಅಸಮಾನತೆಯ ಬಗ್ಗೆ ಪ್ರಶ್ನಿಸದೆ ಉದಾರತೆಯನ್ನು ತೋರಿಸುವ ಆದರ್ಶವಿದೆ. ಇಲ್ಲಿ ಅವಳು ಯಾವದೇ ರೀತಿಯ ರಂಪ ಮಾಡದೆ ಸಹನೆಯಿಂದ ಉತ್ತರಿಸಿದ್ದಾಳೆ. "ನಕ್ಕರೆ ನಗಲೇಳು ನಗೆಮೊಗದ ಕ್ಯಾದಿಗೆ" ಎನ್ನುವಲ್ಲಿ ಅವಳ ಜೀವನ, ಪ್ರೀತಿ ವ್ಯಕ್ತವಾಗಿದೆ. ಗಂಡನ ಸುಖದಲ್ಲಿಯೇ ತನ್ನ ಸುಖವನ್ನು ಕಂಡುಕೊಂಡಿದ್ದಾಳೆ ಈ ರೀತಿಯ ಬದುಕಿನಲ್ಲಿ ಸರ್ವತ್ಯಾಗ, ಸಹನೆ, ಮಾನವೀಯತೆ ಎದ್ದು ಕಾಣುವುದು. ಅವಳಲ್ಲಿದ್ದ ಮಾನವೀಯತೆ ಮತ್ತು ಜೀವನ ಪ್ರೀತಿಯಂತಹ ವಿಚಾರಗಳು ಪುರುಷನಲ್ಲಿ ಕಾಣಲಾಗದು. ಸ್ವಾರ್ಥವೇ ಅವರಲ್ಲಿ ಕಂಡು ಬರುವುದು. ಅವರಂತೆ ಹೆಣ್ಣು ಸ್ವಾತಂತ್ರ್ಯ ಬಯಸಿದಾಗ ಅದು ಕ್ಷಮಿಸಲಾರದಂತಹ ಮಹಾಪರಾಧವೆನಿಸುವುದು. ಪತಿಭಕ್ತಿಯೇ ಒಂದು

ಮೌಲ್ಯವೆಂದರಿತು, ಬಾಳಬೇಕು. ಪತಿಯ ಸ್ವೇಚ್ಛಾಚಾರ, ಅಮಾನವೀಯ ನಡುವಳಿಕೆಗಳು ಎಂದೂ ಅವಳು ಎತ್ತಿ ಹೇಳಲಾರಳು. ಅನೈತಿಕತೆಯ ಬಗ್ಗೆ ಪ್ರಶ್ನಿಸುವಂತೆಯೂ ಇಲ್ಲ. ಶೀಲ ಪಾತಿವ್ರತ್ಯದಂತಹ ಸಾಮಾಜಿಕ ಮೌಲ್ಯಗಳು ಗಂಡು ಹೆಣ್ಣಿನ ಸಂಬಂಧಗಳನ್ನು ಗಟ್ಟಿಗೊಳಿಸುವಲ್ಲಿ ಪೂರಕವಾಗಿವೆ. ಕುಟುಂಬ ಹಾಗೂ ಸಮಾಜದ ಆರೋಗ್ಯದ ದೃಷ್ಟಿಯಿಂದ ನೈತಿಕ ಸಂಬಂಧಗಳನ್ನು ಹೆಚ್ಚಿಸಿಕೊಳ್ಳುವ ವಿಚಾರ ಮೌಲಿಕವಾದದ್ದು. ಶೀಲ ಪಾತಿವ್ರತ್ಯದಂತಹ ಮೌಲ್ಯಗಳು ಪುರುಷಪ್ರಧಾನ ವ್ಯವಸ್ಥೆಯಲ್ಲಿ ಏಕಪಕ್ಷೀಯವಾಗಿವೆ. ಈ ಮೌಲ್ಯಗಳಲ್ಲಿರುವ ಅಸಮಾನತೆಯನ್ನು ಜನಪದ ಮಹಿಳೆ ನಯವಾಗಿ ಪ್ರತಿಭಟಿಸುವುದರ ಮೂಲಕ ಆತ್ಮೀಯವಾಗಿ ಕಾಣುವಂತೆ ಉಪದೇಶ ಮಾಡಿದ್ದಾಳೆ. ಪತಿಯೇ ಸಾಕ್ಷಾತ್ ದೇವರೆಂದು ನಂಬಿ ನಡೆಯಲು ಹೇಳಿದ ಈ ವ್ಯವಸ್ಥೆಯ ಅಸಮಾನತೆ ಕುರಿತು ಮೊಟ್ಟ ಮೊದಲು ಜನಪದ ಮಹಿಳೆ ಪ್ರಶ್ನಿಸಿದ್ದು ಗಮನಾರ್ಹವಾಗಿದೆ. ಪತಿಯ ಸ್ವೇಚ್ಛಾಚಾರ, ಅಮಾನವೀಯ ನಡುವಳಿಕೆಗಳನ್ನು ಎತ್ತಿ ಹೇಳಿದ್ದಾರೆ. ಅನೈತಿಕ ಸಂಬಂಧಗಳ ಬಗ್ಗೆ ಎಚ್ಚರಿಸಿದ್ದಾರೆ.

೬.೫ ಜಾನಪದ ಮಹಿಳೆ ಮತ್ತು ಸಂಸ್ಕೃತಿ

ಜನಪದ ಗರತಿ ನೈತಿಕ ಗುಣಮಟ್ಟವನ್ನು ಕಾಪಾಡಿಕೊಂಡಂತೆ ತಾತ್ವಿಕ ಮನೋಭಾವನೆಯನ್ನು ಹೊಂದಿದವಳಾಗಿದ್ದಾಳೆ. ಅವಳ ನಿಷ್ಕಲ್ಮಶ ಮನದಿಂದ ಅರಳಿ ಬಂದ ಅನರ್ಘ್ಯ ರತ್ನಗಳಾಗಿ ಇವು ಕಂಗೊಳಿಸುತ್ತಿವೆ. ಇಂದು ಕೂಡಾ ನೈತಿಕತೆಯ ಕುರಿತು ಎಲ್ಲರೂ ಅನೇಕ ರೂಪದಲ್ಲಿ ವಿವರಿಸಿ ಹೇಳುತ್ತಿದ್ದಾರೆ. ಅದರಿಂದುಂಟಾಗುವ ಅನಾಹುತ, ಮಹಾಮಾರಿ ರೋಗಗಳು, ಜನರ ಜೀವನವನ್ನೇ ಬಲಿ ತೆಗೆದುಕೊಳ್ಳುತ್ತವೆ. ಅನೈತಿಕತೆಯ ಅಧಃಪತನದಿಂದ, ಗುಪ್ತರೋಗಗಳು, ಏಡ್ಸಗಳಂತಹ ರೋಗಗಳಿಗೆ ಜನರು ಬಲಿಯಾಗುತ್ತಿದ್ದಾರೆ. ಈ ನೀತಿ, ಶೀಲ, ಕಾಪಾಡುವುದರ ಮುಖ್ಯ ಉದ್ದೇಶ ಇಂತಹ ದುಷ್ಟ ರೋಗಗಳಿಗೆ ಆಹುತಿಯಾಗಬಾರದು ಎಂದು ಸರಕಾರ ಎಷ್ಟೋ ಯೋಜನೆಗಳನ್ನು ಹಮ್ಮಿಕೊಂಡು, ಅನೈತಿಕತೆಯಿಂದ ರೋಗಗಳು ಒಬ್ಬರಿಂದೊಬ್ಬರಿಗೆ ಹೇಗೆ ಹರಡುವವು. ಹಿಂದಿನ ಕಾಲದಲ್ಲಿ ಪ್ಲೇಗ್ ರೋಗದಿಂದ ಇಡೀ ಊರೇ ನಾಶವಾದಂತೆ, ಇಂದು ಏಡ್ಸಗಳಂಥಹ ರೋಗಗಳಿಂದ ಸಂಪೂರ್ಣ ಕುಟುಂಬಗಳೇ ಬಲಿಯಾಗುತ್ತಿವೆ. ಇಂದಿನ ಪರಿಸ್ಥಿತಿಯನ್ನು ಕುರಿತು ಅಂದು ಜನಪದರು ಚಿಂತಿಸಿ ಶೀಲಕ್ಕೆ, ಚಾರಿತ್ರ್ಯಕ್ಕೆ, ನೈತಿಕತೆಗೆ ಹೆಚ್ಚಿನ ಒತ್ತನ್ನು ಕೊಟ್ಟು, ಸಮಾಜದಲ್ಲಿಯ ಕಟ್ಟು ನಿಟ್ಟಿನ ಕಾನೂನಾಗಿ ನಿರ್ಮಿಸಿ ಜನ ಜಾಗೃತಿ ಮಾಡಿದರು.

೬.೬ ಪಶು-ಪಕ್ಷಿ ಪ್ರಾಣಿಗಳ ಜೀವ ಪ್ರೀತಿ:

"ದನ ದ್ರವ್ಯ ಅಲ್ಲ" ಎಂಬುದು ರೈತರು ಚೆನ್ನಾಗಿ ಬಲ್ಲರು. ಆದ್ದರಿಂದಾಗಿ ದನಗಳೊಡನೆ ಜನಪದರ ಅವಿನಾಭಾವ ಸಂಬಂಧವನ್ನು ಕಾಣುತ್ತೇವೆ. ಆದಿಮಾನವ ಪ್ರಾಣಿಗಳೊಡನೆ ಪ್ರಾಣಿಗಳಂತೆಯೇ ಬದುಕಿದ್ದರೆಂಬುದು ನಮಗೆ ಗೊತ್ತಿರುವ ಸಂಗತಿ. ವಿಶ್ವದ ಪ್ರಾಣಿ ಜನಪದ ಕಥೆಗಳನ್ನು ಗಮನಿಸಿದರೆ ಬಹುಪಾಲು ಪ್ರಾಣಿಗಳು ಮನುಷ್ಯರ ಜೊತೆಗೆ ಮನುಷ್ಯರಂತೆ ಬದುಕ್ಕಿದ್ದ ನಿದರ್ಶನಗಳು ದೊರೆಯುತ್ತವೆ. ಸ್ನೇಹಿತನಾಗಿ, ಸೇವಕನಾಗಿ, ಸ್ವಾಮಿಭಕ್ತನಾಗಿ, ಭವಿಷ್ಯ ಸೂಚಕನಾಗಿ, ಸಮಯ ಸೂಚಕನಾಗಿ, ದುಡಿಮೆಗಾರನಾಗಿ, ಆಹಾರವಾಗಿ ಅನೇಕ ಪ್ರಾಣಿಗಳು ಮಾನವನ ಬದುಕಿನಲ್ಲಿ ಬೆಸೆದುಕೊಂಡಿವೆ. ಇವುಗಳಲ್ಲಿ ಹಿಂಸ್ರ ಪಶುಗಳಿಂದ ರೈತ ದೂರವಾಗಿದ್ದು, ಸಾಕು ಪ್ರಾಣಿಗಳ ಜೊತೆ ತನ್ನ ಸಂಬಂಧವನ್ನು ವೃದ್ಧಿಸಿಕೊಂಡಿದ್ದಾನೆ. "ಅನುಕರಣವಾದವನ್ನು ಪ್ರತಿಪಾದಿಸುವ ಮತ್ತು ಆ

ವಾದವನ್ನು ಒಪ್ಪುವ ಭಾಷಾ ವಿಜ್ಞಾನಿಗಳು ಜಗತ್ತಿನ ಎಲ್ಲಾ ಪ್ರಾಣಿಗಳ ಭಾಷೆ ಮೂಲ ಪ್ರಾಣಿಭಾಷೆಯೆಂದು ಅಭಿಪ್ರಾಯಪಟ್ಟಿದ್ದಾರೆ."[೨೬]

ಪಶುಗಳಿಗೆ ಮನುಷ್ಯನ ಮಾತು ಅರ್ಥವಾಗುತ್ತೆ ಎಂಬುದಕ್ಕೆ ಮಾತಿಗೆ ಪ್ರತಿಕ್ರಿಯೆ ತೋರುತ್ತವೆ. ಬಾ ಬಾ ಎಂದು ಆಕಳನ್ನು ಕರೆದಾಗ ಅದು ಮುಂದೆಹೋಗುವುದನ್ನು ಬಿಟ್ಟು ಕರೆದವರ ಕಡೆಗೆ ತಿರುಗಿ ನಿಲ್ಲುವುದು. ಅಥವಾ ತಿರುಗಿ ಬರುವುದನ್ನು ಕಾಣುತ್ತೇವೆ. ನಾಯಿಗಳಿಗೆ ಕೂsss ಎಂದು ಕರೆದಾಗ ಬಾಲ ಅಲ್ಲಾಡಿಸುತ್ತಾ ಕರೆದವರ ಕಡೆಗೆ ಓಡಿಬರುತ್ತವೆ. ಕೋತಿ, ಕರಡಿ ಆಡಿಸುವವರನ್ನು ಕಂಡಾಗ ಒಡೆಯ ಹೇಳಿದಂತೆ ಅವುಗಳು ಕುಣಿಯುತ್ತವೆ ಎಂಬುದಕ್ಕೆ ಪ್ರಾಣಿಗಳಿಗೆ ಮನುಷ್ಯನ ಮಾತು ಅರ್ಥವಾಗುತ್ತದೆ ಎನ್ನುವುದರ ಸಾಕ್ಷಿಯಾಗಿದೆ. ಪಕ್ಷಿಗಳಲ್ಲಿ ಗಿಳಿ ಮನುಷ್ಯ ಕಲಿಸಿದಂತೆ ಮಾತಾಡುತ್ತವೆ. "ಬನ್ನಿ ನಮಸ್ಕಾರ ಕುಳಿತು ಕೊಳ್ಳಿ" ಎಂಬುದನ್ನು ಕೇಳಿ ತಾನೂ ಯಾರಾದರೂ ಮನೆಗೆ ಬಂದರೆ ಬನ್ನಿ ನಮಸ್ಕಾರ ಕುಳಿತುಕೊಳ್ಳಿ ಎಂಬ ಧ್ವನಿ ಮಾಡುವುದು. ಈ ರೀತಿ ಅನುಕರಣೆ ಬುದ್ಧಿ ಪಶು ಪಕ್ಷಿಗಳಲ್ಲಿದೆ ಎಂಬುದನ್ನು ಇದರಿಂದ ಪತ್ತೆಯಾಗುವುದು. ಸರ್ಕಸ್‌ನಲ್ಲಿ ನೋಡಿದಾಗ ಕ್ರೂರ ಹಾಗೂ ಬಲಿಷ್ಠ ಪ್ರಾಣಿಗಳು ಮನುಷ್ಯನ ಅಪ್ಪಣೆಯಂತೆ ನಡೆದುಕೊಳ್ಳುತ್ತವೆ. ಆಕಳು ತನ್ನ ಕರು ಮನೆಗೆ ಬಾರದೇ ಇದ್ದಾಗ ಹೊರಗೆ ಬಂದು 'ಅಂಬಾ' ಎಂಬ ಶಬ್ದ ಮಾಡಿ ತನ್ನ ಕರುವನ್ನು ಕರೆಯುವುದು. ಹಾವಾಡಿಗ ಹೇಗೆ ತನ್ನ ಪುಂಗಿ ಬಾರಿಸುವನೋ ಅದೇ ರೀತಿ ಹಾವು ಹೆಡೆಯಾಡಿಸುವುದು ಕಾಗೆ ಒಂದು ಅಗುಳು ಕಂಡರೂ ತನ್ನ ಎಲ್ಲ ಕಾಗೆಯ ಬಳಗವನ್ನೇ ಕಾ ಕಾ ಎಂದು ಕರೆಯುವುದು. ಈ ಮಾತು ನಾವು ವಚನದಲ್ಲಿಯೂ ಕಾಣುತ್ತೇವೆ. 'ಕಾಗೆ ಒಂದಗುಳು ಕಂಡರೆ ಕರೆಯುವುದು ತನ್ನ ಬಳಗವನ್ನೆಲ್ಲ' ಕೋಳಿ ಒಂದು ಕುಟುಕು ಕಂಡರೆ ಕೂಗಿ ಕರೆಯುವುದು ತನ್ನ ಕುಲವನ್ನೆಲ್ಲ ಎಂದು ಇದರಿಂದ ಪ್ರಾಣಿಗಳಲ್ಲಿಯೂ ಸ್ನೇಹ ಸಂಬಂಧ ಇದೆ ಎಂದು ಜನಪದರ ನಂಬಿಕೆ. ಒಂದು ಕುರಿ ಒಂದು ಕಡೆ ನಡೆದರೆ ಎಲ್ಲ ಕುರಿಗಳು ಅನುಸರಿಸುವವು. ಒಂದು ನಾಯಿ 'ಬೌ' ಎಂದರೆ ಉಳಿದೆಲ್ಲವೂಗಳೂ ತಮ್ಮ ಸಮ್ಮತಿಯನ್ನು ಸೂಚಿಸುವವು. ಈ ರೀತಿ ಅನೇಕ ಪ್ರಾಣಿಗಳು ಅಂದರೆ ಬೆಕ್ಕು, ನಾಯಿ, ಕುರಿ, ಕೋಳಿ, ಕುದುರೆ, ಆಕಳು, ಎತ್ತು, ಎಮ್ಮೆ, ಮುಂತಾದವುಗಳು ಮಾನವನ ಸಹವಾಸದಲ್ಲಿದ್ದು, ಅವನ ಮಾತನ್ನು ಅರ್ಥಮಾಡಿಕೊಂಡು ಅವನ ಆಜ್ಞೆಯನ್ನು ಪಾಲಿಸುತ್ತವೆ. ಆದರೆ ಮಾತು ಮಾತ್ರ ಬರದು. ಮಾನವನಿಗಿಂತಲೂ ಹೆಚ್ಚು ಬುದ್ಧಿಜೀವಿಗಳಾಗಿರುತ್ತವೆ.

೬.೭ ಜಾನಪದ ಸಾಹಿತ್ಯ ಮತ್ತು ದೈವತ್ವದ ನೆಲೆಗಳು

ಈ ಪ್ರಾಣಿಗಳಲ್ಲಿ ಆಕಳು, ನಾಯಿ, ಎತ್ತು, ಹಾವು, ಆಮೆ, ನವಿಲು, ಆನೆ, ಗರುಡಗಳನ್ನು ಜನಪದರು ದೇವತೆಗಳೆಂದು ಪೂಜಿಸುತ್ತಿರುತ್ತಾರೆ. ಹಿಂದುಗಳಿಗೆ ಆಕಳು ಪವಿತ್ರ ದೇವತೆ. ಆಕಳು ಸ್ತ್ರೀ ದೇವತೆ ಅವಳಲ್ಲಿ ಮೂವತ್ತಾರು ಕೋಟಿ ದೇವತೆಗಳು ವಾಸಿಸುತ್ತಾರೆ, ಆಕಳ ಬಾಲದಲ್ಲಿ ಲಕ್ಷ್ಮೀ ವಾಸವಾಗಿದ್ದಾಳೆಂದು ಜನಪದರು ಹಣೆಗೆ ಪೂಜಿಸಿದರೂ ಬಾಲಕ್ಕೆ ನಮಸ್ಕರಿಸುತ್ತಾರೆ, ದಿನಾಲೂ ಆಕಳಿಗೆ ನೈವೇದ್ಯ ಕೊಟ್ಟರೆ ಪಾಪ ಪರಿಹಾರವಾಗುತ್ತದೆ ಎಂಬ ನಂಬಿಕೆ ಜನಪದರದು. ಹೊಸ ಮನೆಯ ವಾಸ್ತುಪೂಜೆ ಮಾಡುವಾಗ ಮೊದಲು ಮನೆಯಲ್ಲಿ ಆಕಳನ್ನು ಪ್ರವೇಸಿಸುವಂತೆ ಮಾಡುತ್ತಾರೆ. ಅಂದರೆ ಮೂವತ್ತಾರು ಕೋಟಿ ದೇವತೆಗಳ ಪ್ರವೇಶ ಹೊಸದಾದ ಮನೆಯಲ್ಲಿ ಆಗಿರುತ್ತದೆ. ಮುಂದೆ ಯಾವ ವಿಘ್ನವೂ ಬಾರದೇ ಲಕ್ಷ್ಮೀ ವಾಸವಾಗಿ ಸುಖ, ಶಾಂತಿ, ನೆಮ್ಮದಿ, ಅಭಿವೃದ್ಧಿ ದೊರಕುವುದೆಂಬ ಪ್ರಬಲವಾದ ವಿಶ್ವಾಸ ಜನಪದರದು. ಆಕಳ ಹಾಲಿನಿಂದ ತಯಾರಿಸಿದ

ಪದಾರ್ಥಗಳು ಅಂದರೆ ಹಾಲು, ಮೊಸರು, ತುಪ್ಪ, ಗೆಂಜಲು, ಸಗಣಿಗಳೆಲ್ಲ ಪೂಜೆಗೆ ಬೇಕಾದಂತೆ ಹೇರಳವಾಗಿ ಬಳಸುತ್ತಿದ್ದರು.

ಆಕಳ ಗೆಂಜಲು ಮನೆಯಲ್ಲಿ ಸಿಂಪಡಿಸಿದರೆ ಮನೆ ಪವಿತ್ರವಾಗುವುದು ಎಂದು ಜನಪದರ ಹೇಳಿಕೆ ಆದರೆ ವೈಜ್ಞಾನಿಕ ದೃಷ್ಟಿಯಿಂದ ನೋಡಿದಾಗಲೂ ಆಕಳ ಗೆಂಜಲಿನಲ್ಲಿ ಕ್ರಿಮಿನಾಶಕ ಶಕ್ತಿ ಅಡಗಿದೆ. ಅಲ್ಲಿರುವ ಕ್ರಿಮಿಕೀಟಗಳೆಲ್ಲ ನಾಶವಾಗುತ್ತವೆ ಎಂಬುದು ವೈಜ್ಞಾನಿಕ ಸತ್ಯ. ಕೆಲವು ರೋಗಿಗಳಿಗೆ ಆಕಳ ಗೆಂಜಲು ಸೇವನೆ ಮಾಡಲು ಹೇಳುತ್ತಾರೆ. ಅದರ ಸಗಣಿಯಿಂದ ಬೆರಣೆ ತಟ್ಟಿ, ಸುಟ್ಟು ಭಸ್ಮಮಾಡಿ ಹಣೆಗೆ ವಿಭೂತಿ ಎಂದು ಧರಿಸುವರು. ಭಸ್ಮ ಧರಿಸುವುದರಿಂದ ಪಾಪವೆಲ್ಲ ಪರಿಹಾರವಾಗುವುದೆಂಬ ನಂಬಿಕೆ ಜನಪದರದು, ಎಲ್ಲಾ ಪ್ರಾಣಿಗಳಲ್ಲಿ ಆಕಳಿಗೆ ಅತ್ಯಂತ ಶ್ರೇಷ್ಠ ಸ್ಥಾನ ಕೊಡಲಾಗಿದೆ. ಆಕಳನ್ನು ಲಕ್ಷ್ಮಿಯ ಪ್ರತಿರೂಪವೆಂದೂ ಕರೆಯುವರು ಯಾವುದಾದರೂ ಪೂಜೆಗಳನ್ನು ನೆರವೇರಿಸಿದರೆ ಪೂಜೆಗೆ ಬೇಕಾದ ಪಂಚಾಮೃತದಲ್ಲಿ ಆಕಳ ಹಾಲು, ತುಪ್ಪ, ಮೊಸರು, ಜೇನುತುಪ್ಪ, ಸಕ್ಕರೆಯನ್ನು ಸೇರಿಸಿ ತಯಾರಿಸುವರು. ಹಾಲು, ಮೊಸರು, ಬೆಣ್ಣೆ, ಗೆಂಜಲು ಸೆಗಣಿಯನ್ನು 'ಪಂಚಗವ್ಯ' ಎಂದು ದೇವತಾ, ಕಾರ್ಯಗಳಲ್ಲಿ ಹಾಗೂ ಔಷಧಿಯಾಗಿಯೂ ಬಳಸುತ್ತಾರೆ. ಎತ್ತನ್ನು 'ಬಸವ' ಎಂದು ಪೂಜಿಸುವರು. ಕೃಷಿ ಕಾರ್ಯದಲ್ಲಿ ಎತ್ತುಗಳು ತುಂಬಾ ನೆರವಾಗುವದರಿಂದ ಬಸವಣ್ಣ ಎಂದು ಹೋಳಾಹಬ್ಬ, ಕಾರಹುಣ್ಣಿಮೆಯ ಹಬ್ಬಗಳಲ್ಲಿ ಅವುಗಳ ಪೂಜೆ ಮಾಡುವರು. ಮರಾಠಿ ಜನರು ನಾವು ಕಾರಹುಣ್ಣಿಮೆಯೆಂದು ಮಾಡುವಂತೆ ಎತ್ತುಗಳ ಪೂಜೆ ಅವರು 'ಹೋಳಾ' ಎನ್ನುವ ಹಬ್ಬದಂದು ಮಾಡುವರು. ಎತ್ತುಗಳುಗೆ ಬಾಸಿಂಗ ಕಟ್ಟಿ ಬಣ್ಣ ಬಣ್ಣದಿಂದ ಎತ್ತುಗಳ ಮೇಲೆ ಚಿತ್ರಬರೆಯುವರು ನಂತರ ಪೂಜೆ ಮಾಡಿ ನೈವೇದ್ಯ ಕೊಟ್ಟು ಊರಲ್ಲಿ ಮೆರವಣಿಗೆ ಮಾಡುವರು. ಎತ್ತುಗಳಿಗೆ ನಂದಿ ಎಂದೂ ಕರೆಯುವರು. ಪ್ರತಿಯೊಂದು ಶಿವಾಲಯದಲ್ಲಿ ಶಿವನ ಲಿಂಗದೆದುರು ಬಸವನ ಸ್ಥಾಪನೆ ಮಾಡಿ ಪೂಜಿಸುವರು. ನಂದಿ ಶಿವನ ವಾಹನ ಶಿವನು ಶಿವಾಲಯದಲ್ಲಿ ಪ್ರವೇಶ ಮಾಡಿದರೆ ಅವನ ವಾಹನವಾದ ನಂದಿ ಶಿವಾಲಯದ ಎದುರು ಕುಳಿತಿರುತ್ತದೆ ಅದಕ್ಕಾಗಿ ಭಕ್ತರು ಶಿವಾಲಯದಲ್ಲಿ ಪ್ರವೇಶ ಮಾಡುವಾಗ ನಂದಿಯನ್ನು ಪೂಜಿಸಿ ಗರ್ಭಗುಡಿಯಲ್ಲಿ ಪ್ರವೇಶ ಮಾಡುವರು.

ಮಂಗನನ್ನು ಹನುಮಂತನೆಂದು ಪೂಜಿಸುವರು. ಪ್ರತಿ ಊರ ಹೊರಗೊಂದು ಹನುಮನ ದೇವಾಲಯವಿದ್ದೇ ಇರುತ್ತದೆ. ಬೀದರ ಜಿಲ್ಲೆಯಲ್ಲಿ ಭಾಲ್ಕಿತಾಲೂಕಿನ ಚಳಕಾಪೂರ ಗ್ರಾಮದ ಹನುಮಂತನ ದೇವಾಲಯ ತುಂಬಾ ಪ್ರಸಿದ್ಧವಾಗಿದೆ. ರಜಾಕಾರರ ಸಮಯದಲ್ಲಿ ರಜಾಕಾರರ ಒಬ್ಬ ಮುಸ್ಲಿಂ ನನ್ನೂ ಊರೊಳಗೆ ಬರುವುದಕ್ಕೆ ಈ ಮಂಗಗಳು ಬಿಡಲಿಲ್ಲ. ಬಂದಂಥ ರಜಾಕಾರರನ್ನು

ರಜಾಕಾರರು ಯಾರು ಎಂದು ಗುರುತಿಸುವ ಶಕ್ತಿ ಇತ್ತು ಎಂದು ಇದರಿಂದ ಗೊತ್ತಾಗುವುದು. ಊರಲ್ಲಿ ಯಾವುದಾದರೂ ಮಂಗ ಸತ್ತರೆ ಅದಕ್ಕೆ ಹಾಗೆಯೇ ಬಿಸಾಕದೇ ಜನರೆಲ್ಲ ಸೇರಿ ಮನುಷ್ಯರು ಸತ್ತರೆ ಕೂಡ್ರಿಸುವಂತೆ ಅದಕ್ಕೂ ಸ್ನಾನ ಮಾಡಿಸಿ, ಪೂಜೆ ಮಾಡಿ, ಬಟ್ಟೆ ಹಾಕಿ ಬಾಜಾಬಜಂತ್ರಿ ಹಚ್ಚಿ ಶವಸಂಸ್ಕಾರ ಮಾಡುವರು. ಮಂಗಗಳಿಗೆ ಮನುಷ್ಯರು ಹೇಳಿದ್ದೆಲ್ಲ ಅರ್ಥವಾಗುತ್ತೆ ಎನ್ನುವುದಕ್ಕೆ ಒಂದು ಉದಾ: ನಮ್ಮೂರಲ್ಲಿ ಒಂದು ಮಗುವನ್ನು ಎತ್ತಿಕೊಂಡು ತಾಯಿ ನಿಂತಿದ್ದಳು, ಎಲ್ಲಿಂದಲೋ ಮಂಗವೊಂದು ಬಂದು ಅವಳ ಕೈಯಿಂದ ಮಗುವನ್ನು ಕಿತ್ತಿಕೊಂಡು ಮರದ ಮೇಲೆ ಹಾರಿತು. ಜನರೆಲ್ಲ ಗಾಭರಿಯಾದರು. ಒಂದೇ ಸಮನೆ ಚೀರಿಕೊಳ್ಳತೊಡಗಿದರು. ಮಂಗ ಮಾತ್ರ ಏನೂ

ಮಾಡದೆ ಮಗುವನ್ನೊಮ್ಮೆ ಜನರನ್ನೊಮ್ಮೆ ನೋಡತೊಡಗಿತು. ಅದರಲ್ಲಿ ಹಿರಿಯರೊಬ್ಬರು ಮಂಗನನ್ನು ಕುರಿತು ಹನುಮಪ್ಪ ಮಗುವನ್ನು ಕೊಡಪ್ಪ ನಿನಗೆ ಕಾಯಿ ಕರ್ಪೂರಮಾಡುವೆ ಎಂದು ಪ್ರಾರ್ಥಿಸಿಕೊಂಡಾಗ ತಕ್ಷಣ ಮಂಗ ಕೆಳಗಿಳಿದು ಮಗುವನ್ನು ನೆಲದ ಮೇಲೆ ಮಲಗಿಸಿ ಓಡಿಹೋಯಿತು. ಇದಕ್ಕೆ ಸಾಕ್ಷಿ ಪ್ರಾಣಿಗಳು ಮಾನವರ ಮಾತುಗಳನ್ನು ಅರ್ಥಮಾಡಿಕೊಳ್ಳುತ್ತವೆ. ಪ್ರತಿಯಾಗಿ ಆಡಲು ಬರುವುದಿಲ್ಲ ಎಂದು ತಿಳಿದುಬರುತ್ತದೆ.

ಹಾವುಗಳು ಜನಪದ ಮಹಿಳೆಯರಿಗೆ ನೆರವು ಮಾಡಿದ್ದು ನಾಗರಪಂಚಮಿ ಹಬ್ಬದ ಕಥೆಯಲ್ಲಿ ಕಾಣುತ್ತೇವೆ. ಅದು ವಿಷಜಂತು ನಿಜ ಆದರೆ ಕೆಲವು ಸಂದರ್ಭದಲ್ಲಿ ದುಷ್ಟರನ್ನು ಸಂಹರಿಸಿ ಶಿಷ್ಟರನ್ನು ಕಾಪಾಡಿದ ಅನೇಕ ದೃಷ್ಟಾಂತಗಳನ್ನು ನಾವು ಕಾಣಬಹುದು. ಸಿಂಹ ದುರ್ಗಾಮಾತೆಯ ವಾಹನ, ನವಿಲು ಸರಸ್ವತಿಯ ವಾಹನ, ಗರುಡ ವಿಷ್ಣುವಿನ ವಾಹನ. ವಿಜ್ಞಾನಿಗಳು ಭೂಮಿಯ ಸಮತೋಲತೆಯನ್ನು ಕಾಪಾಡಿಕೊಂಡು ಹೋಗಬೇಕಾದರೆ ಮಾನವನಿಂದ ಮಾತ್ರ ಸಾಧ್ಯವಿಲ್ಲ ಜೊತೆ ಜೊತೆಗೆ ಕಾಡುಪ್ರಾಣಿಗಳು, ವಿಷ ಜಂತುಗಳು, ಸರಿಸೃಪಗಳು ಎಲ್ಲವೂಗಳ ನೆರವು ಬೇಕು ಎಂದಿದ್ದಾರೆ. ನಾಯಿಗಳು ಸಾಕು ಪ್ರಾಣಿಗಳು, ಮಾನವನ ಗೆಳೆಯ, ಅವುಗಳು ಹನುಮನಂತೆ ಸ್ವಾಮಿಭಕ್ತಿ ಪ್ರಕಟಿಸುತ್ತವೆ. ತನ್ನನ್ನು ಸಾಕಿ ಸಲುಹಿದ ಯಜಮಾನನ ಮನೆ ಸದಾ ಕಾಯುತ್ತಿರುತ್ತದೆ. ದೂರದಲ್ಲಿಯೂ ಶಬ್ದವಾದರೆ ಅದು ತನ್ನ ಕಿವಿ ನಿಮಿರಿಸುವುದು. ಅನುಮಾನ ಬಂದರೆ ಬೊಗಳಿ ಯಜಮಾನನನ್ನೂ ಎಚ್ಚರಿಸುವುದು. ನಾಯಿಯನ್ನು 'ಖಂಡೋಬಾ' ಎಂದು ಪೂಜಿಸುವ ಜನರೂ ಇದ್ದಾರೆ. ಶಿರಡಿಯ ಸಾಯಿಬಾಬಾರವರ ಸುತ್ತಲೂ ಯಾವಾಗಲೂ ನಾಯಿಗಳು ಮನುಷ್ಯರಂತೆ ಕುಳಿತಿರುವುದನ್ನು ನಾವು ಕಾಣುತ್ತೇವೆ.

ಈ ರೀತಿ ಪ್ರಾಣಿ, ಪಶು, ಪಕ್ಷಿಗಳಿಗೂ ಮಾನವನಿಗೂ (ಜನಪದರಿಗೂ) ನಿಕಟವಾದ ಸಂಬಂಧ ಇದೆ ಎಂಬುದನ್ನು ಕಾಣುತ್ತೇವೆ. ಅಂದಾಗಲೆ ಜನಪದರು ಪಶುಪಕ್ಷಿ ಪ್ರಾಣಿಗಳ ಕುರಿತು ಹಾಡುಗಳನ್ನು ಹೇಳಿದ್ದಾರೆ. ಮಾನವ ಕೆಲವೊಂದು ಸಲ ಮೋಸಮಾಡಬಹುದು ಆದರೆ ಪ್ರಾಣಿಗಳು ಕಪಟ ಅರಿಯದವುಗಳು ಅವುಗಳು ಮೋಸಕ್ಕೆ ಆಸ್ಪದ ಕೊಡುವುದಿಲ್ಲ. ಅಂಥ ಪ್ರಾಣಿಗಳ ಕುರಿತು ಕೆಲವು ಹಾಡುಗಳು ಈ ರೀತಿಯಾಗಿ ಜನಪದರು ಹಾಡಿದ್ದಾರೆ.

ಪರಮ ಸುಖದ ಗೋಪೆವ್ವ ಕೊಡುತಾಳ ಹಾಲ
ಕಂದನ ಪರವೆನಿಲ್ಲ ಬಿಟ್ಟು ನಿಂತಾಳ ಝುಲ್ಲ
ಗೋಪಿಯ ನಂದಿಯ ತೊಗಲು
ಜಂತಗಿ ಬರಕೋಲ । ಮೆಟ್ಟು ಮಚ್ಚಿ
ಮಾಡಿ ತೊಳಿತೀರಿ । ಉರೀತಾವಂಗಾಲ
ಅದರ ಎಲುಬು ಬಾಯಾಗ ಹಚಕೋತೀರಿ ಹಲ್ಲೀಗಿ
ಪರಮ ಸುಖದ —
ಗೋಪೀಯ ಮೀಸಲು ಹಾಲು
ಹೋಗ್ಯಾವೆ ಮಾರುದಕ ಮಕ್ಕಳ
ಪರವೇನಿಲ್ಲ ರೊಕ್ಕಿನ ಮ್ಯಾಲ ಖ್ಯಾಲ
ಮುಪ್ಪಾಗಿದ ಆಕಳ ಹೊಯ್ತು

ಖಟುಕರ ಪಾಲಕ । ಪರಮ ಸುಖದ ಗೋಪೆವ್ವ ____
ನಮ್ಮ ಪಾಪ ನಮಗೆ ಸುತ್ತಿ
ಬಂದಿತ್ರಿ ಅಳಗಾಲ । ಒಳ್ಳೆ ನಡತಿ
ಹಿಡಿದು ನಡೆದರ ಕೆಡುಕು ಎಂದೂ ಬರೋದಿಲ್ಲ
ಮುಚಳಂಬ ಕವಿ ಬರದಾನ ಭಕ್ತಿಯೇ ಉಳಿದಿಲ್ಲ । ಪರಮ ಸುಖದ ೨೭

ಇಲ್ಲಿ ಉಪಕಾರ ಮಾಡಿದ ಪ್ರಾಣಿಗೆ, ಮನುಜ ಅಪಕಾರವೆಸಗುವನು. ಸಾಧ್ಯವಾದಷ್ಟು ದಿನಗಳ ವರೆಗೆ ಆಕಳು ಮಾನವನಿಗೆ ಹಾಲು ಕೊಟ್ಟು ಸಾಕಿ ಸಲುಹಿದಂಥ ಪ್ರಾಣಿಗೆ ಕೊನೆಗೊಂದು ದಿನ ಮಾನವ ನಿರಪಯುಕ್ತ ಪ್ರಾಣಿಯೆಂದು ಕಟುಕನಿಗೆ ಕೊಡುತ್ತಾನೆ. ಪ್ರಾಣಿಗಳಲ್ಲಿರುವ ಪರೋಪಕಾರ ಬುದ್ಧಿ ಮಾನವನಲ್ಲಿಲ್ಲ ಎಂಬುದು ಈ ಹಾಡು ಸಾರುತ್ತದೆ. ಮಾನವ ಯಾಕೆ ಹೀಗೆ ಮಾಡಿದ ಎಂಬುದಕ್ಕೆ ಕಾರಣ ಮಾನವನಲ್ಲಿದ್ದ ಅತಿಯಾದ ಸ್ವಾರ್ಥಹಾಗೂ ಹಣದ ಮೇಲಿರುವ ವ್ಯಾಮೋಹ ಇದರಿಂದ ಅವನು ಮಾನವೀಯತೆಯನ್ನೇ ಮರೆತ್ತಿದ್ದಾನೆ. ಕೆಲವರು ಮಾತ್ರ ಎತ್ತು, ಆಕಳುಗಳು ಸತ್ತರೆ ತಮ್ಮ ಹೊಲಗಳಲ್ಲಿ ಹುಗಿಯುತ್ತಾರೆ. ಆಕಳ ಹಾಲು, ಬೆಣ್ಣೆ, ತುಪ್ಪ, ಮೊಸರು ಎಲ್ಲವನ್ನೂ ಬಳಸಿಕೊಂಡು, ಆಕಳು ಕೊಟ್ಟ ಕರುಗಳನ್ನು ಮಾರಿಕೊಂಡು ತಾಯಿಯನ್ನು ಅಗಲಿಸುತ್ತಾನೆ. ಇಲ್ಲವಾದರೆ ತನ್ನ ಕೃಷಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವನು. ಇಷ್ಟಾದರೂ ಅವನಿಗೆ ಆ ಪ್ರಾಣಿಯ ಮೇಲೆ ಕರುಣೆಯೆಂಬುದಿಲ್ಲ. ದೇವತೆ ಎಂದು ಒಂದು ಕಡೆ ಪೂಜಿಸಿದರೂ ಇನ್ನೊಂದೆಡೆ ತನ್ನ ಸ್ವಾರ್ಥಕ್ಕಾಗಿ ಪಾಪಕಾರ್ಯಕ್ಕೆ ಕೈ ಹಾಕುತ್ತಾನೆ. ಅದೇ ರೀತಿ ಎತ್ತಿನ ಹಾಡು ನೋಡಬಹುದು.

ಮಾಗಿ ಹೂಡಿದಾಗ । ನನ್ನ ಕೈಲಿ ಮಾಯದಿಂದ
ಮಾಡಿಸಿ ಕೊಂಡಿ । ನಾ ಹೋಗಿ ಒಂದು ತೆನಿ ಧಂಟು
ತಿಂದರ । ಕಲ್ಲುಕಲ್ಲೀಲೇ ಹೊಡದಿ । ನಮ ಜೀವ
ಹೋದಾವ ಕೈಲಾಸಕ
ನಾ ಒಂದು ಬಿತ್ತಿ । ನಾ ಒಂದು ಬೆಳದು
ನಾ ಹೋಗಿ ಬಂದು ಹೊಡೆಧಂಟ ತಿಂದರ
ಬಡಗೀಲಿ ಹೊಡದಿ । ನಮ ಜೀವ ಹೋದಾವ ಕೈಲಾಸಕ
ಹತ್ತಿಕಾಳ ಕುಡು ಅಂದ್ರ । ನಿನ್ನ ಮಡದಿ ಅತ್ತ ಮಾರಿ
ತಿರುವ್ಯಾಳ । ಹೊತ್ತಿನೊಳಗ ತಿನ್ನಂದ್ರ ಖಂಡುಗ ತಿನ್ನುವ
ತುಂಡೀನ ತಂದ್ಹೊಡೋ ನಮ ಜೀವ ಹೋದಾವೋ ಕೈಲಾಸಕ
ಹಿಂಡಿಯ ಕುಡು ಅಂದ್ರ ನಿನ ಮಡದಿ
ಮೂಗನೇ ತಿರವ್ಯಾಳ । ಇಖ್ಖಂಡ್ಗತಿನ್ನಂಥ
ತುಂಡೀನ ತಂದ್ಹೊಡೋ । ನಮ ಜೀವ ಹೋಗ್ಯಾವ ಕೈಲಾಸಕ
ಇಕ್ಕಿದರ ಹೆಂಡಿನಾದೆನsl ಹಚ್ಚಿದರ ಕುಳ್ಳನಾದೀನ
ದೇವರ ಮುಂದಿನ ಪರಸಾದ ಆದೆ । ಮತ್ತ್ಯಾಕ
ಕಾದೇನ । ನಮ ಜೀವ ಹೋದಾವ ಕೈಲಾಸಕ
ಸತ್ತರ ತೊಗಲಾದೇನ । ಮೆಟ್ಟಿದರ ಕೆರವಾದೇನ
ಹೆಗೆಲ ಮ್ಯಾಲಾಡಂಥ ಬಾರಕೋಲ ಆದೆ
ಮತ್ತ್ಯಾಕ ಕಾದೇನ । ನಮ ಜೀವ ಹೋದಾವ ಕೈಲಾಸಕ ೨೮

ಎತ್ತುಗಳು ರೈತನ ಪರಮಾಪ್ತ ಗೆಳೆಯರು. ಅವನಿಗೆ ಸದಾ ಹೆಗಲಿಗೆ ಹೆಗಲು ಕೊಟ್ಟು ದುಡಿಯುವ ಪರೋಪಕಾರಿ ಪ್ರಾಣಿಗಳಿವು. ಅವುಗಳು ದುಡಿದ ಕೊನೆಗೆ ಪ್ರಾಣ ತೆತ್ತಾಗ ರೈತನು ಕೃತಜ್ಞತಾಭಾವದಿಂದ ತನ್ನ ಹೊಲದಲ್ಲಿ ಹುಗಿದು ಮೇಲೆ ನೆರಳು ಮಾಡಲು ಗಿಡಗಳನ್ನು ಹಚ್ಚಿ ಹಬ್ಬ ಹರಿದಿನಗಳಲ್ಲಿ ಪೂಜೆ ಮಾಡುವನು. ಎತ್ತುಗಳನ್ನು ಬಸವಣ್ಣ ಎಂದೇ ನಂಬುವರು. ಆದರೆ ಕೆಲವರು ಎತ್ತುಗಳು ಮುಪ್ಪಾದಾಗ ಅವುಗಳನ್ನು ಕಟುಕರಿಗೆ ಮಾರುವುದುಂಟು. ಉಳಿಮೆ ಕಾರ್ಯದಲ್ಲಿ ಎತ್ತುಗಳು ವಿಳಂಬ ಮಾಡಿದಾಗ, ಇಲ್ಲವೆ ಹಸಿವೆಯಿಂದ ಹೊಲದಲ್ಲಿ ನುಗ್ಗಿದಾಗ ಮನಬಂದಂತೆ ಬಡಿಯುವರು. ಕಾಲಕಾಲಕ್ಕೆ ತಿನ್ನಲು ಏನೂ ಕೊಡದೆ ಇದ್ದಾಗ ಅಂಥವರನ್ನು ಕಂಡು ಮೂಕ ಪ್ರಾಣಿಗಳು ಈ ರೀತಿ ಅಂದು ಕೊಳ್ಳುತ್ತವೆ ಎಂದು ಎತ್ತುಗಳ ಮನಸ್ಥಿತಿಯ ಕುರಿತು ಜನಪದರು ನಂಬಿಕೆಯಿಂದ ಈ ಹಾಡುಗಳು ಹೇಳಿದ್ದಾರೆ. ಎಲ್ಲರೂ ಇದೇ ರೀತಿ ಮಾಡುವರೆಂದಲ್ಲ ಅವರವರ ನಂಬಿಕೆಯ ಮೇಲೆ ಅವಲಂಬಿತವಾಗಿದೆ. ಹಿಂದುಗಳು ಆಕಳು, ಎತ್ತುಗಳನ್ನು ಪವಿತ್ರ ಭಾವನೆಯಿಂದ ಕಂಡು ಅವುಗಳನ್ನು ಪೂಜಿಸುವರು, ಹತ್ಯೆ ಕಾರ್ಯಕ್ಕೆ ವಿರೋಧಿಸುವರು. ಅದೇ ಕಸಾಯಿಯಾದ ಕಟುಕ ಪಾಪಪ್ರಜ್ಞೆ ಅವನಲ್ಲಿರದ ಕಾರಣ ಅದನ್ನು ನಿರ್ದಾಕ್ಷಿಣ್ಯವಾಗಿ ಹತ್ಯೆ ಮಾಡುವನು. ಈ ರೀತಿ ಕೃತಘ್ನತೆಯನ್ನು ನೆನೆದು ಈ ಹಾಡು ಹೇಳಲಾಗಿದೆ.

ಹಳ್ಳಿಗಳಲ್ಲಿ ಬೇಸಾಯದೊಡನೆ ಜೀವನೋಪಾಯಕ್ಕಾಗಿ ಪಶುಪಾಲನೆಯನ್ನು, ಕೋಳಿ, ಕುರಿ, ಸಾಕಾಣಿಕೆಯನ್ನು ಮಾಡುತ್ತಾರೆ. ಪಶುಗಳನ್ನು ಕೊಳ್ಳುವುದು, ಮಾರುವುದು ಸರ್ವಸಾಮಾನ್ಯ. ದನಗಳನ್ನು ಖರೀದಿಸುವಾಗ ಬಹು ಸೂಕ್ಷ್ಮತೆಯಿಂದ ಪರೀಕ್ಷಿಸುವರು. ಅದಕ್ಕಾಗಿಯೇ "ತಳಿನೋಡಿ ಹೆಣ್ಣು ತರಬೇಕು, ಸುಳಿ ನೋಡಿ ದನ ತರಬೇಕು" ಎಂಬ ಗಾದೆ ರೂಢಿಯಲ್ಲಿದೆ. ಅದೇ ರೀತಿ ದನಗಳ ಮಹತ್ವ ಕುರಿತು ಹೇಳುತ್ತಾ ಜನಪದರು "ಹೆಂಡತಿ ಇಲ್ಲದವನಿಗೆ ಮನೆ ಇಲ್ಲ, ದನ ಇಲ್ಲದವನಿಗೆ ಕೆಲಸ ಇಲ್ಲ" ಎಂಬ ಮಾತು ಹೇಳುತ್ತಿದ್ದರು. ಆಕಳ ಪ್ರಾಮಾಣಿಕತೆಯ ಹಾಡನ್ನು ಜನಪದರು ಈ ರೀತಿ ಹೇಳಿದ್ದಾರೆ.

ಪಟ್ಟೋಳಿ ಗುಡಿ ತಂದು ಕಟ್ಟ್ಯಾರ ನಡುಮನಿ
ಸುತ್ತ ಸಾರುವ ಹೋಳಿಯುವ । ಗುಡಿಗೋಳು
ಕಟ್ಟ್ಯಾರ ಬವಲಿ ನಡುಮನೆಯ
ತಟ್ಟಾನೆ ಈ ಕಾಲ ತಪ್ಪಾನೆ ತೊಯ್ದಾವ
ಮುತ್ತ ಸುರದ್ಹಂಗ ಬೆವತಾಳ । ಬವಲಿ ತಾ
ಪುತ್ರನ ಈಗ ಹಡದಾಳ
ಉಚ್ಚಾಯ ದಿನದಲ್ಲಿ ದಟ್ಟೀಯ ಉಡುಗೂಸಿ
ಉಪ್ಪ, ಅಂಬಲಿ, ಕರೀಬೇವ ತರುಸಿ
ಕೆಚ್ಚಲ ಮ್ಯಾಲ ಇಳಸ್ಯಾರ
ಮುತ್ತೀನ ಆರತಿ ಮುನಿಯ ತಂದೆತ್ತೀದಾ
ಲಕ್ಷಣವಂತಿ, ಗುಣವಂತಿ । ಬವಲಿ ತಾ
ಹೋಗೊಮ್ಮೆ ಬಾರ ಹೊಲಗೋಳ
ಮುಂದ ಹಿಂಡ್ಹಾಕಿ ಹಿಂದ ತಾ ನಡದಾಳ
ಹಿಂಗೆಚ್ಚಲವ್ವ ಬಳಲ್ದೇವಿ । ಬಲವಲಿ ತಾ

ಹೋಗ್ಯಾಳೆ ಬಾವಂಜಿ ಬನದಾಗ
ಬಳಿಯ ಬಳಿಯಕ ಹೋಗಿ ಹೊಡಿ ಹುಲ್ಲ ಮೆಯ್ದಾಳ
ಕೊಡ ನೀರು ತಿಳಿ ನೀರು ಕುಡುದಾಳೆ
ಕೆಚ್ಚಲ ತುಂಬಿ ಬಿಗದಾವೆऽऽ
ಮುಂದ ಹಿಂಡನ್ಹಾಕಿ ಹಿಂದ ತಾ ನಡದಾಳೆ
ಮಡ್ಡಿ ಏರಿ ಇಳಿದು ಬರುವಾಗ
ನಾರಿ ಕಂಡಾಳೆ ಹುಲಿಯೊಂದ
ಎಲ್ಲಿಂದ ಹುಲ್ಲಿದು ಎಲ್ಲಿಂದ ನೀರಿದು
ಎತ್ತಿಂದು ಇದಿಯು ಎಳ ತಂದಿತು
ಕಂದನ ಇಂದು ಅಗಲೀದ
ಕಂದನ ಮಲಿಕೊಟ್ಟು ಬಂದೇನು ನಾ ನೀಗ
ಬಾಳಿಯ ಬನದೊಳಗಾಡಂಥ
ಕಂದಯ್ಯನಾಣೆ ಹುಸಿನಿಲ್ಲ
ತಾಯಿ ಮಕ್ಕಳು ನೀವು ಛಾಯದಲಿ ಬರುವುದ ಕಂಡು
ನನ್ನ ಕುಮರಾ ಅರಬಕ್ಷಿ ಪರಬಕ್ಷಿ
ಒಬ್ಬರೊಂದಿನ ಮಲಿಕೊಳ್ಳಿ
ಬೇಲಿ ಮ್ಯಾಲಿನ್ಹುಲ್ಲ ಛಾಯದಲ್ಲಿದ್ದಾವೆಂದು
ಹೋಗಿ ಮೆಲಿ ಬ್ಯಾಡ ಕಂದಯ್ಯ । ನಿನ್ನ
ನಾಲೀಗಿ ಮುಳ್ಳ ಮುರದಾವऽऽ
ಇಷ್ಟು ಎಲ್ಲಾ ಹೇಳಿ ಎಲ್ಲಿಗ್ಹೋಗುತಿ ತಾಯಿ
ನೀ ಹೋದರ ನಾನು ಬರವೆ
ನೀ ಹೋದಲ್ಲಿ ನಾ ಬರುವೇನು ಅಂದರ
ದಾವೂಣಿ ಕುಣಿಕಿ ಸಡಿಲಾಗಿ
ಮುಂದ ಹಿಂಡನ್ಹಾಕಿ ಹಿಂದ ತಾನಾಗ್ಯಾಳ
ಹಿಂಗೆಚ್ಚಲವ್ವ ಬನದೇವಿ । ಬವಲಿ ತಾ
ಹೋಗ್ಯಾಳ ಬಾವಂಜಿ ಬನದಾಗ
ಮಲಗಿದ್ದ ಹುಲಿರಾಯನ ತೊಡಿ ಬಡದು ಎಬ್ಬಿಸಿ
ಅನ್ಯವನಾಡದೆ ಕರತಿನ್ನೋ
ನನ್ನವ್ವ ನನ ತಾಯಿ ನಾ ನಿನ್ನ ತಿನಲಾರ
ಇನ್ನಾರು ತಿಂಗಳು ಉಪವಾಸ
ಹುಲಿರಾಯ ವನದೇವಿ ಏಕಾಂತ ಮಾತಾಡಾಗ
ಊದುವ ಶಂಖ ಹರಿ ಕಾಳಿ ಬಂದಾವ
ಖ್ಯಾತರಾದವರು ಎದುರಾಗಿ [೨೯]

ಸಾಮಾಜಿಕ ಮೌಲ್ಯವನ್ನು ಎತ್ತಿ ತೋರಿಸುವ ಪ್ರಸ್ತುತ ಹಾಡು ಒಂದು ಆಕಳ ಸತ್ಯ ಪರಿಪಾಲನೆಯನ್ನು, ಇನ್ನೊಂದೆಡೆ ಹುಲಿರಾಯನ ತ್ಯಾಗವನ್ನು ಪ್ರತಿಬಿಂಬಿಸುತ್ತದೆ. ತನ್ನ ಮೊಲೆಯುಣ್ಣುವ ಕರುವಿನ ಸಂಬಂಧವನ್ನು ಲೆಕ್ಕಿಸದೆ ಗೋವು ಸತ್ಯಕ್ಕಾಗಿ ತನ್ನ ಪ್ರಾಣವನ್ನು ಕೊಡಲು

ಮುಂದಾಗುವ ಈ ಸಂದರ್ಭ ಅತ್ಯಂತ ಕ್ರೂರಿಯಾದ ಹುಲಿರಾಯನ ಮನಕರಗಿಸಿ ಅವನ ಪ್ರೀತಿ, ವಿಶ್ವಾಸಕ್ಕೆ ಪಾತ್ರವಾಗುತ್ತದೆ. ಸತ್ಯ ಇಲ್ಲಿ ಹೇಗೆ ಆದರ್ಶವಾಗಿದೆ ಎಂಬುದನ್ನು ಈ ಕಥಾನಕ ನಿರೂಪಿಸುತ್ತದೆ. ಇಲ್ಲಿ ಗಾಂಧಿ, ಹಾಗೂ ಯೇಸುವಿನ ಮಾತುಗಳು ಸತ್ಯವೆನಿಸುವವು. ಗಾಂಧೀಜಿ ಸತ್ಯದಿಂದ ಎಲ್ಲವನ್ನೂ ಗೆಲ್ಲಬಹುದು ಎಂದರೆ ಯೇಸು ಪ್ರೀತಿಯಿಂದ ಜಗತ್ತನ್ನೇ ಗೆಲ್ಲಬಹುದು ಎಂದನು, ಇಲ್ಲಿ ಆ ಮಾತು ಸಮಂಜಸವೆನಿಸಿದೆ.

ಈ ಹಾಡು ಪಿ. ಕೆ. ಖಂಡೋಬಾ ರವರ 'ಜನಪದ ಕಥನಗೀತೆ'ಗಳಲ್ಲಿಯ 'ಗೋವಿನ ಹಾಡ'ನ್ನು ಹೋಲುತ್ತದೆ. ಇಲ್ಲಿ ಆಕಳು ಎಂದು ಸಂಭೋಧಿಸಿದರೆ ಅಲ್ಲಿ ಗೋವು ಎಂದು ಸಂಭೋಧಿಸಿದೆ ಅಷ್ಟೇ. "ಗೋವಿನ ಹಾಡಿನಲ್ಲಿ" ಜನಪದ ಮತ್ತು ಶಿಷ್ಟ ಸಾಹಿತ್ಯದ ನಡುವಿನ ಸಂಬಂಧವನ್ನು ಬೆಸೆಯುವಲ್ಲಿ ಸಹಕಾರಿಯಾಗಿದೆ. ಇಲ್ಲಿ ಸಂಪೂರ್ಣ ಜನಪದ ಭಾಷೆಯನ್ನೇ ಅಳವಡಿಸಲಾಗಿದೆ. ಅರ್ಥ, ತಿರುಳು, ಸಾರ ಒಂದೇ ಆಗಿರುವುದು. ಅದೇ ರೀತಿ ಮಂಗನನ್ನು ನಾವು ಹನುಮಂತನೆಂದು ಪೂಜಿಸುತ್ತೇವೆ. ಆದರೆ ಕೆಲವೊಂದು ಸಲ ಅದು ಮನುಷ್ಯರನ್ನು ತುಂಬಾ ಗೋಳು ಹೊಯ್ದುಕೊಳ್ಳುವುದು. ಮಾಳಿಗೆಯ ಮೇಲೆ ಏನನ್ನಾದರೂ ಕಾಳು ಕಡ್ಡಿ ಒಣಗಲು ಹಾಕಿದರೆ, ಹಪ್ಪಳ, ಸಂಡಿಗೆ ಇಟ್ಟರೆ, ಅದನ್ನೆಲ್ಲ ಚೆಲ್ಲಾಪಿಲ್ಲಿ ಮಾಡಿ ಅರ್ಧ ತಿಂದು ಅರ್ಧ ಹಾಳು ಮಾಡಿದರೆ ಮಂಗನಿಗೆ ಬಲು ಹರ್ಷವುಂಟಾಗುತ್ತದೆ. ಒಂದೊಂದು ಸಲ ಮನೆಯಲ್ಲಿಯ ರೊಟ್ಟಿ ಬುಟ್ಟಿಯನ್ನೆ ಎತ್ತಿಕೊಂಡು ಹೋಗಿ ಗಿಡದ ಮೇಲೆ ಕುಳಿತು ಕೊಳ್ಳುವುದು. ಹೆಣ್ಣು ಮಕ್ಕಳನ್ನು ಕಂಡಾಗ ಹೆದರಿಸಲು ಬರುವುದು ಒಂದೊಂದು ಸಲ ಕಪಾಳಿಗೆ ಹೊಡೆದುದ್ದು ಇದೆ. ಮಂಗಗಳಲ್ಲಿ ಗಂಡು ಮಂಗ ತುಂಬಾ ಬಲಿಷ್ಠ ಯಾರಿಗೂ ಹೆದರುವುದಿಲ್ಲ, ಅಂಥಹ ಕೆಲವು ನುಡಿಗಳನ್ನು ಇಲ್ಲಿ ನೋಡಬಹುದು.

ಕ್ವಾಟಿಯ ಪ್ಯಾಟಿಯೋಳು ಮಂಗ್ಯಾ ಬಾಜಾರ್‌ದೋಳು
ಮಾಡಿದ್ದ ಆಟದ ಸಾರವನೋಡಿರೇನ
ಅಂಜಿ ಅಡ್ರಾಸಿ ಮುಂದಕ್ಕ ಹೋಗಿದ್ದೇನು
ಹಂತ್ಯಾಕ್ಕಿದ್ದ ಮಂದಿನೆಲ್ಲ ದೂರಕ್ಕ ತಳ್ಳಿದ್ದೇನ
ಛಪ್ಪರದಾನ ಸಪ್ಪಳ ಕೇಳಿ ಭರ್ರನೇ ಓಡಿ ಬಂದು
ಚರ್ರನೇ ಹರ ದಿತ್ತ ಛಂದಗೇಡಿ ಮಂಗ್ಯಾ
ಸಣ್ಣ ಮಕ್ಕಳ ಕೈಲಿ ಚಿಣ್ಣೆ ರೊಟ್ಟಿಯ ಕೊಟ್ಟು
ಅಪ್ಪಾ ಅಣ್ಣಾನಂದು ಖಳವಿದ್ರೇವ
ರಾವಣಗ ಮೀಸಲ ಹಿಡಿದಿದ್ದೇವೆ
ಬೆಣ್ಣಿ ರೊಟ್ಟಿ ಕಣ್ಣಲ್ಲ ಕಂಡು ಕಸಕೊಂಡು ಓಡಿಹೋಗಿ
ಮರನೇರಿ ನಿಂತಾವ ಮಾನಗೇಡಿ ಮಂಗ್ಯಾ
ನೆರಮನಿ ಸುಬ್ಬವ್ವಗ ನೋಡಂತ ಹೇಳಿದ್ದೇನು
ಒಳಗ ತುಪ್ಪವ ಕಾಸಾಕ್ ಹೋಗಿದ್ದೇನು
ಸಪ್ಪಳಿಲ್ದೆ ಮಂಗ್ಯಾ ಬಂದು ಹಪ್ಪಳ ತಿಂದ್ಹೊಯ್ತು
ಛಪ್ಪರ ಖೇಡಿವಿಹೊಯ್ತು ಚಂಡಾಳಿ ಮಂಗ್ಯಾ
ಹಬ್ಬ ಬಂದದಂತ ಹಿಗ್ಗೀಲಿ ಬ್ಯಾಳಿಹಾಕಿ
ಉಬ್ಬಲಿ ಹೂರಣಗಡಬ ಮಾಡಿದ್ದೇನು

ಕಂಡ ಮಂದಿಗೆಲ್ಲಾ ನೋಡಲ್ಹೊಗಿದ್ದೇನೆ
ಹಿಂಡಿದು ಮಂಗ್ಯಾ ಕೂಡೀಕೊಂಡು ಹಿತ್ತಲ ಹಾದೀಲಿ
ಇದ್ದ ಹೂರಣಗಡಬ ಎತ್ತ್ಯೊದಾವ
ಊರಾಗ ಗೌಡರ ಮದವೀನ ಇದ್ದಾರ
ಬಾಜಾ ಶನಾಯಿ ಸಂಬಳ ತರಸಿದ್ದಾರ
ಕೆಳಗಿಟ್ಟು ಎಲಿ ಅಡಕಿ ಮೇಲಿಯೊದರೊಳಗ
ಬಡಿವಂ ಹರದಿ ಹನುಮವ್ವ [೩೦]

ಮಂಗ್ಯಾಗಳಿರುವ ಊರಲ್ಲಿ ನಡೆಯುವ ವಿಚಿತ್ರವು ಈ ಹಾಡಿನಲ್ಲಿ ವರ್ಣಿಸಲಾಗಿದೆ.

ಮಂಗಗಳು ಕಿತಾಪತಿ ಮಾಡಿದರೂ ಕೆಲವೊಮ್ಮೆ ಮನುಷ್ಯನಿಗೆ ತುಂಬಾ ಉಪಕಾರವನ್ನು ಮಾಡುತ್ತವೆ. ಅದಕ್ಕಾಗಿಯೇ ಮಂಗನ ಪ್ರತೀಕವಾದ ಹನುಮಂತನನ್ನು ಎಲ್ಲರೂ ಶ್ರದ್ಧೆಯಿಂದ ಪೂಜಿಸುವರು. ರಾಮಾಯಣದ ನಾಯಕನೇ ಹನುಮ, ಹನುಮ ರಾಮಭಕ್ತ, ಸದಾ ರಾಮನ ಪಾದಗಳ ಹತ್ತಿರವೆ ಇರುತ್ತಾನೆ. ಜನಪದರು ಶನಿ ಕಾಟವಿದ್ದರೆ ಹನುಮಂತನ ಸೇವೆ ಮಾಡು ಎಂದು ಹೇಳುವರು. ಮಕ್ಕಳಾಗದಿದ್ದರೆ ಹನುಮಂತನ ಗುಡಿಯಲ್ಲಿ ದಿನಾಲೂ ದೀಪ ಹಚ್ಚು ಎಂದೆಲ್ಲಾ ಹೇಳುವರು. ಜನಪದರು ಅಷ್ಟೊಂದು ಶ್ರದ್ಧೆ, ಭಕ್ತಿ, ನಂಬಿಕೆ ಅವನ ಮೇಲಿಟ್ಟಿದ್ದರು. ಹನುಮನಂತೆ (ಮಂಗನಂತೆ) ನಾಯಿಯೂ ಸಾಕು ಪ್ರಾಣಿ. ಇದೂ ಸ್ವಾಮಿ ಭಕ್ತ, ವಿಶ್ವಾಸಕ್ಕೆ ಪಾತ್ರವಾದುದು. ಒಡೆಯನ ಋಣ ತೀರಿಸಲು, ತುತ್ತು ರೊಟ್ಟಿ ತಿಂದು ಅವನ ಮನೆಯನ್ನು ಕಾಯುವುದು. ಅವುಗಳಲ್ಲಿ ವಿವಿಧ ರೀತಿಯ ನಾಯಿಗಳು ಅವುಗಳಿಗೆ ಹೇಗೆ ಮಾರ್ಗದರ್ಶನ ದೊರಕುವುದೋ ಆ ರೀತಿ ವರ್ತಿಸುತ್ತವೆ. ಅಂಥ ನಾಯಿಗಳ ಕುರಿತು ಒಂದು ಹಾಡು ಈ ರೀತಿಯಾಗಿದೆ.

ನಾಯಿಗಿ ನಂಬಬ್ಯಾಡ । ಶನಿಗಿ ಬರಗುಡಬ್ಯಾಡ
ಹುಚ್ಚ ಆಗಿ ತಿರುಗ್ಯಾದ ಹೂಗಾರ ನಾಯಿ
ಕಚಲಾಕ ಬರತದ ಕಂಚಗಾರ ನಾಯಿ
ಸನ್ಯಾಕ ಬರಲ್ಲ ಸಮಗಾರ ನಾಯಿ
ಮನೀಗಿ ಬರದಿಲ್ಲ ಮಾದರ ನಾಯಿ
ಜಗಡಕ ಬರತದ ಜಾಡರ ನಾಯಿ
ಹಿಡದರ ಬಿಡೊದಿಲ್ಲ ಒಡ್ಡರ ನಾಯಿ
ಕಡೆದ ಒಂದು ಚಟ್ಟೇರ ನಾಯಿ
ಕ್ಯಾತುರಸಿ ಹೊಡದ ಬಂದು ಖಟುಕರ ನಾಯಿ
ಕುಂತಲಿ ಕೂಡಾಲ ಕುರುಬರ ನಾಯಿ
ಹಾದೀಗಿ ತಿರಗೋದು ಹಜಾಮರ ನಾಯಿ
ಹೋಳಿಗಿ ಹೋಡದರ ಐಗೋಳನಾಯಿ
ಸುಳ್ಳೆ ಬಗಳುವುದು ಬಳಗಾರ ನಾಯಿ
ಅಗಸಿಗಿ ಬರತದೆ ಅಗಸರ ನಾಯಿ
ಓಡಿ ಹೋಗುವುದು ಒಂದು ಪುಜಾರ ನಾಯಿ
ಗಡಿಬಿಡಿ ಮಾಡ್ತದೆ ಗೌಡರ ನಾಯಿ
ಖುನಾ ಹಿಡಿಯುವುದು ಒಂದು ಕುಲಕರ್ಣಿನಾಯಿ [೩೧]

ನಾಯಿ ಬಲು ನಂಬಿಗಸ್ಥ ಪ್ರಾಣಿ ಆದರೂ ಒಂದೊಂದು ಸಲ ಸಿಟ್ಟಿನಿಂದ ಕಚ್ಚಿದರೆ ತುಂಬಾ ಅಪಾಯ. ಅದಕ್ಕಾಗಿ ಯಾವಾಗಲೂ ಅಷ್ಟೇ ಅಂತರವನ್ನು ಕಾಪಾಡಿಕೊಂಡು ಹೋಗುವರು ರಾತ್ರಿ ಹೊತ್ತು ಬಹು ಜಾಗೃತವಾಗಿದ್ದು, ಒಡೆಯನ ಮನೆಯನ್ನು ಕಾವಲು ಕಾಯುತ್ತಿರುತ್ತದೆ. ಸ್ವಲ್ಪ ಶಬ್ದವಾದರೂ ಸಾಕು ಕಿವಿ ನಿಮಿರಿಸಿ ಶಬ್ದಬಂದ ಕಡೆ ಗಮನ ಕೊಟ್ಟು, ಕೇಳುವುದು. ಶಬ್ದದ ಜಾಡನ್ನು ಹಿಡಿದು ಓಡುವುದು. ರೈತರು ಎತ್ತುಗಳ ಮೇಲೆ ಪ್ರಾಣವನ್ನೇ ಇಟ್ಟುಕೊಂಡಿರುತ್ತಾರೆ. ಏಕೆಂದರೆ ಅವರ ಜೀವನಕ್ಕೆ ಮಾರ್ಗ ತೋರಿ, ಕೃಷಿ ಕಾರ್ಯದಲ್ಲಿ ಮಾನವನಿಗಿಂತಲೂ ಹೆಚ್ಚಿನ ಪಾಲು ನೆರವು ನೀಡುತ್ತವೆ. ಮಕ್ಕಳಂತೆ ಸದಾ ಅವುಗಳ ಹಸಿವು, ನೀರಡಿಕೆಯ ಕಡೆಗೆ ಗಮನ ಕೊಡುತ್ತಿರುತ್ತಾರೆ. ಯಾವಾಗಲೂ ಅವನ ಕಣ್ಣೆದುರೇ ಎತ್ತುಗಳು ಇರಬೇಕು. ಒಂದಿಷ್ಟೂ ಕಣ್ಮರೆಯಾದರೂ ದುಗುಡದಿಂದ ಹುಡುಕುತ್ತಾರೆ. ಒಂದೊಂದು ಸಲ ಮೇಯಲು ಬಿಟ್ಟಾಗ ಎತ್ತು, ಎಮ್ಮೆ, ಆಕಳುಗಳು ಕಣ್ಮರೆಯಾಗಿ ತಪ್ಪಿಸಿಕೊಳ್ಳುವವು ಆಗ ಹಗಲು, ರಾತ್ರಿಯೆನ್ನದೆ ಒಂದೇ ಸಮನೆ ಸಿಗುವವರೆಗೂ ಹುಡುಕುತ್ತಾರೆ. ಎದುರಿಗೆ ಬಂದವರೆಲ್ಲರನ್ನೂ ಗುರುತು ಹೇಳಿ ಕೇಳುತ್ತಾರೆ.

ಎತ್ತು ಕಾಯುವ ಅಣ್ಣಾ ನಮ್ಮೆತ್ತು ಕಂಡ್ಯೇನೋ
ಮುತ್ತೀನ ಚಿತ್ತರಗಿ ನೆಳ್ಳೀಗಿ। ಬಸವಣ್ಣ
ಮುಖ್ಯಸ್ತ ಆಗ್ಯಾನೋ ಭೂಮ್ಯಾಗೋ
ಕೊಡ ಕೋಡೀನ ಬಸವ ಹೂಡಿದರ ಬಲು ಛಾಯ
ನಾಡಾ ಮೇಲಾಡಿ ಬರತಾನ। ನಮ್ಮ ಬಸವ
ಕೋಡಿನ ಗುರುತು ಹಿಡಿದೇನೋ।
ಬಾದ್ದೂರ ನನ್ನೆತ್ತು ಬಾರಿನ ಕಿಂತಾ ತಿಳಿ ತಿಳಿವೋ
ದಾರಿ ನಡೆಯಲ್ಲಿ ದಣಿವಿಲ್ಲ। ನನ್ನೆತ್ತು
ಸಾರಿಗಿ ಹೋಗುವಾದು ಶನಿವಾರೋ
ಏರಲಾರದ ಗುಡ್ಡ ಏರ್ಯಾನ ನಮ್ಮ ಬಸವ
ಏರಿ ಮೆಯ್ದಾನ ಎಳಿ ಹುಲ್ಲ। ಬಸವಣ್ಣ
ಬೋರುಗಿ ಪಕ್ಕ ಸಜ್ಜುಗೋ
ಹೊಳೆಸಾಲ ಎತ್ತಿಗಿ ಕಳಿಸ್ಯಾರೆ ಪತ್ರವ
ಎಳಿಸೇನಂತಿ ಎದಿಗಲ್ಲ। ನಮ್ಮ ಬಸವ
ಈಸೇನಂತಾನ ಹೋಳಿಯಾಗೋ
ಕಂಡಿರೇ ನಮ್ಮ ಬಸವನ ಪುಂಡ ದನಗಳಲ್ಲಿ
ಹೆಂಡಿಯ ಒಡೆದು ಬರತಾನ। ಬಸವಣ್ಣ
ಕೊಂಬಿನ ಮ್ಯಾಲ ಕಯಲಾಸೋ
ಬೆಳ್ಳಾನೆ ಬಸವಣ್ಣ ಎಲ್ಲಿಗೆ ಹೋಗಿದ್ದಿ
ಎಲ್ಲರ ನದರ ನಿನ ಮ್ಯಾಲ। ಬಸವಣ್ಣ
ನಲ್ಲಕ್ಕಿ ದೃಷ್ಟಿ ತೆಗದೇವೋ
ಬಂಗಾರ ಹಣೆಕಟ್ಟು ಬೆಳ್ಳಿಯ ಹಿಡಿಹಗ್ಗ
ಹಳ್ಳದ ಹೊಲ್ದಾಗ ಮೇಯಾವ। ನಂಬಸವ
ಒಳ್ಳೆಯವನೆಂದು ಶರಣೆಂಬೆ ೩೭

ಪಶುಗಳು ಉಪಕಾರವನ್ನೇ ಮಾಡುತ್ತವೆ. ಆದರೆ ಅದರ ಕಡೆಯಿಂದ ಬೇಕು ಬೇಕಾದಷ್ಟು ಕೆಲಸ ಮಾಡಿಸಿಕೊಂಡು ಅದರ ಸುಖದ ಕಡೆಗೆ ಅಲಕ್ಷ್ಯ ಮಾಡುತ್ತೇವೆ. ಅದರೊಂದಿಗೆ ಅಮಾನವೀಯವಾಗಿ ವರ್ತಿಸುತ್ತೇವೆ. ಅದನ್ನೂ ಖಂಡಿಸಿ ಈ ಹಾಡು ಹೇಳಲಾಗಿದೆ.

ಒಕ್ಕಲಿಗೆರೆಲ್ಲರೂ ಲೆಕ್ಕದಲಿ ನಡಿಬೇಕು
ಸೊಕ್ಕಿನ ಮಾತ ಬಿಡಬೇಕೋ
ಒಪ್ಪಂಥ ರೀತೀಲಿ ನಡಿಬೇಕು
ಹರಿಯದಲಿ ಎದ್ದು ಕಸಕಡ್ಡಿ ಬಳಿದು
ಹಿಂಡಿ ನೆನಿಗಡಲಿ ಇಡಬೇಕು । ಬಸವಗ
ಹತ್ತಿಯ ಕಾಳು ಕೋಡಬೇಕು.
ಒಪ್ಪದಲಿ ಹೊಡದಾವೋ ನೇಗಿಲು ಕುಂಟ
ಹೊಸ ನೀರು ಬಂದಾಗ ಕುಡಿತಾಳ । ಭೂಮ್ತಾಯಿ
ಬೀಜಕ್ಕ ಬಾಯಿ ಬಿಡುತಾಳೋ
ಕರಿಯೆತ್ತು, ಬಿಳಿಯೆತ್ತು ಕಾಳಿಂಗ ಮಾನಿಂಗ
ಮಾನಿಂಗನ ಕಟ್ಟೆ ಮೊದಲಲ್ಲಿ । ಬಿತ್ತೂದಕ
ಬಿಡೋ ಹಿರಿಮಗನ ಮೊದಲೀಗ
ಬಂಗಾರ ಎರಡೆತ್ತು ಬೆಳ್ಳಿಯ ಬಾರಕೋಲ
ಬೆಳ್ಳನ ಎಳೆಸೆದ್ದಿ ಬಲಗೈಲಿ । ಹಿಡಕೊಂಡು
ಹೊನ್ನು ಬಿತ್ತ್ಯಾರ ಹೊಳಿಸಾಲೋ
ಬಿತ್ತುವ ಕೂರಗಿಯ ಮುಂದ ಹತ್ತ್ಯಾವೋ ಮಳೆದೇವ
ಜತ್ತಿಗಿ ತೊಯ್ದು ಮಿಣಿತೊಯ್ದು । ಬಸವನ
ಬಾಸಿಂಗ ತೊಯ್ದು ತೊಪ್ಪಿಯಾಗಿ [೩೩]

ಈ ರೀತಿ ಎತ್ತುಗಳು ತಮ್ಮ ಜೀವನದುದ್ದಕ್ಕೂ ರೈತನ ನೆರಳಾಗಿ ಕೃಷಿ ಕಾರ್ಯದಲ್ಲಿ ಮಳೆ, ಚಳಿ, ಬಿಸಿಲೆನ್ನದೆ ವಿಧೇಯವಾಗಿ ಕಾರ್ಯನಿರ್ವಹಿಸಿ ಜೀವನ ಸವೆಸುತ್ತವೆ. ಎತ್ತುಗಳು ರೈತನ ಸಂಪತ್ತು ಎತ್ತಿಲ್ಲದವನಿಗೆ ಎದೆಯಿಲ್ಲ ಎನ್ನುವ ಮಾತು ಅರ್ಥ ಪೂರ್ಣವಾಗಿದೆ. ರೈತನ ದೃಷ್ಟಿಯಲ್ಲಿ ಎತ್ತುಗಳು ಪಶುವಲ್ಲ ದೇವತೆ (ಬಸವಣ್ಣ) ರೈತ ಬಸವಣ್ಣನ ಮೇಲೆ ಎಷ್ಟು ಅಭಿಮಾನ ಪಟ್ಟಿದ್ದಾನೆಂದರೆ "ಬಸವಣ್ಣನ ನೆನೆದರ ನಾಡಂಗ ರಾಶಿ ನಡುಮನೆಗೂ" ಅಂತ, ಹಾಗೆ ಬಸವಣ್ಣನ ಹಲ್ಲಿನಿಂದ ನವರತ್ನವಾಗಿ, ಜೊಲ್ಲಿನಿಂದ ಹವಳದ ಧಾನ್ಯದ ಸುರಿಮಳೆಗೈದು ಭೂಮಿಗೆ ಉಪಕರಿಸಿದ್ದಾನೆಂದು ಹರ್ಷಪಟ್ಟಿದ್ದಾನೆ. ಬಸವಣ್ಣನನ್ನು ಪೂಜ್ಯನೀಯ ದೃಷ್ಟಿಯಿಂದ ಕಾಣುವ ಜನಪದರು ತಮ್ಮ ಪ್ರಾಣಕ್ಕಿಂತ ಮಿಗಿಲಾಗಿ ಪ್ರೀತಿಸಿ, ಅವುಗಳಿಗೆ ಶಕ್ತಿಯುತ ಪೌಷ್ಠಿಕ ಆಹಾರ ಕೊಟ್ಟು ಗಟ್ಟಿಗೊಳಿಸಿದ್ದಾರೆ. ದಿನ ನಿತ್ಯ ದುಡಿಯುವ ಎತ್ತುಗಳು ಆಯಾಸಗೊಳ್ಳುತ್ತವೆಯೆಂದು ತಿಂಗಳಿಗೆರಡು ಸಾರಿ ಅಂದರೆ ಹುಣ್ಣಿಮೆ, ಅಮವಾಸ್ಯೆಯಂದು ವಿಶ್ರಾಂತಿ ಕೊಡುವರು.

ಈ ರೀತಿ ಜನಪದರಿಗೂ ಪಶು ಪಕ್ಷಿ ಪ್ರಾಣಿಗಳಿಗೂ ಅವಿನಾಭಾವ ಸಂಬಂಧ ಇದೆ ಎಂಬುದನ್ನು ಜನಪದರ ಹಾಡುಗಳ ಮೂಲಕ ಸ್ಪಷ್ಟವಾಗುವುದು. ಮೋಡವಿಲ್ಲದೆ ವಜ್ರದಂತೆ ಹೊಳೆಯುವ ಶುಕ್ರನನ್ನು ಒಳಗೊಂಡ ಬೆಳಗಿನ ಜಾವವನ್ನು ಕುರಿತು ಜನಪದರು ಈ ರೀತಿ

ಹಾಡಿದ್ದಾರೆ. ಇಲ್ಲಿ ಕಂಡುಬರುವ ನೀತಿ ಸೂಚಕವಾದ ಹಾಡುಗಳ ಕರ್ತೃಗಳು ಮಹಿಳೆಯರೇ ಆಗಿದ್ದು, ಮಾತೃವಾತ್ಸಲ್ಯದ ನೆಲೆಯಲ್ಲಿ ಈ ಹಾಡುಗಳನ್ನು ಬೆಳೆಸಿಕೊಂಡು ಬಂದಿರುವ ಕೀರ್ತಿ ನಮ್ಮ ಜಾನಪದ ಮಹಿಳೆಯರಿಗೆ ಸಲ್ಲುತ್ತದೆ.

ಕೊನೆ ಟಿಪ್ಪಣಿ

೧) ಕನ್ನಡ ಜಾನಪದ ಗೀತೆಗಳು – ಡಾ: ಬಿ.ಎಸ್. ಗದ್ದಗಿ ಮಠ – ಪುಟ: ೧೨೧

೨) ಗಂಗೂಬಾಯಿ ಶರಣಪ್ಪಾ ಬಿರಾದಾರ – ಡೊಣಗಾಪೂರ – ವ. ೫೦

೩) 'ಸಾಹಿತ್ಯ ಸಿಂಚನ' – ಡಾ: ಪ್ರೇಮಾ ಶಿರ್ಸೆ – ಪು. ೧೩

೪) ಸಾಹಿತ್ಯ ಸಮಲೋಕನ – ಡಾ: ಪ್ರೇಮಾ ಶಿರ್ಸೆ – ಪು. ೧೧

೫) ಗರತಿಯ ಹಾಡು – ಸಿಂಪಿ ಲಿಂಗಣ್ಣಾ – ಪು. ೯

೬) ಜನಪದ ಮುಕ್ತಕಗಳು – ಎಚ್.ಎಂ. ಶಂಕರನಾರಾಯಣರಾವ – ಪು. ೨೬

೭) ಜನಪದ ಕಾವ್ಯ ಪ್ರಥಮ ವಿಮರ್ಶೆ – ಡಾ: ವೀರಣ್ಣಾ ದಂಡೆ – ಪು. ೨೭

೮) ಹೈ.ಕ. ಜ. ಸಾಹಿತ್ಯ – ಡಾ: ಬಸವರಾಜ ಪೋ. ಪಾಟೀಲ. ಪು. ೨೫೫

೯) ಸುಶೀಲಾಬಾಯಿ ಶಿವಾನಂದ ಕೊಳ್ಳಾ – ವರವಟ್ಟಿ (ಬಿ) ವ. ೫೫

೧೦) ಕನ್ನಡ ಜಾನಪದ ಗೀತೆಗಳು ಡಾ: ಬಿ.ಎಸ್. ಗದಗಿಮಠ – ಪು. ೧೧೬

೧೧) ಕನ್ನಡ ಜಾನಪದ ಗೀತೆಗಳು – ಡಾ: ಬಿ.ಎಸ್. ಗದ್ದಗಿಮಠ – ಪು. ೧೧೭

೧೨) ಜ್ಯೋತಿ ಲಕ್ಷ್ಮೀ ಕಲಶೆಟ್ಟಿ – ಭಾಲ್ಕಿ – ವ. ೩೪

೧೩) ಜಾನಪದ ಕಥನ ಗೀತೆಗಳು – ಡಾ: ಪಿ.ಕೆ. ಖಂಡೋಬಾ – ಪು. ೬೯

೧೪) ಬುಲಾಯಿ ಹಾಡುಗಳು – ಡಾ: ಡಿ.ಬಿ. ನಾಯಕ – ಪು. ೩೭

೧೫) ನಾಗಿಣಿ ಧನರಾಜ ಬಿರಾದಾರ – ಡೋಣಗಾಪುರ – ವ. ೭೦

೧೬) ಬೀದರ ಜಿಲ್ಲೆಯ ಜಾನಪದ ಸಾಹಿತ್ಯದಲ್ಲಿ ಕೃಷಿ – ಧನಲಕ್ಷ್ಮೀ ವಿಶ್ವನಾಥ – ಪು. ೪೨

೧೭) ದೀಪಾವತಿ ರಾಜಕಮಾರ ಶಿರ್ಸೆ – ವ. ೩೫

೧೮) ಗಂಗಮ್ಮಾ ರೇವಣಪ್ಪಾ ಟೋಪಾರೆ – ಬಾಗವಾನ ಗಲ್ಲಿ ಭಾಲ್ಕಿ – ವ. ೭೩

೧೯) ಕನ್ನಡ ಜಾನಪದ ಗೀತೆಗಳು – ಡಾ: ಬಿ.ಎಸ್. ಗದ್ದಗಿ ಮಠ – ಪು. ೧೩೨

೨೦) ಸರುಬಾಯಿ ಮಾಣಿಕಪ್ಪಾ ಸಜ್ಜನ – ಹಳೇ ಭಾಲ್ಕಿ – ವ. ೪೫

೨೧) ಹೈ. ಕ. ಜ. ಸಾಹಿತ್ಯ – ಡಾ: ಬಸವರಾಜ ಪೋ. ಪಾಟೀಲ – ಪು. ೨೧೧

೨೨) ಸುಶಿಲಾಬಾಯಿ ನವನಾಥ ಬುಕ್ಕಾ – ವ. ೫೮

೨೩) ಜಾನಪದ ಕಥನ ಗೀತೆಗಳು – ಡಾ: ಪಿ.ಕೆ. ಖಂಡೋಬಾ (ಸಂ) – ಪು. ೧೪

೨೪) ಜಾನಪದ ಕಥನ ಗೀತೆಗಳು – ಡಾ: ಬಿ.ಕೆ. ಖಂಡೋಬಾ (ಸಂ) – ಪು. ೧೩, ೧೪

೨೫) ಜಾನಪದ ಮತ್ತು ಮಹಿಳೆ– ವಿಜಯಶ್ರೀ ಸಬರದ– ಪು. ೫

೨೬) ಬೀದರ ಜಿಲ್ಲೆಯ ಜಾನಪದ ಸಾಹಿತ್ಯ ಕೃಷಿ – ಧನಲಕ್ಷ್ಮೀ ವಿಶ್ವನಾಥ ಪು. ೯೨

೨೭) ಜ್ಯೋತಿಬಾಯಿ ವಿಜಯಕೂಮಾರ ಮುಚಳಂಬ – ವ. ೪೫

೨೮) ಬೀದರ ಜಿಲ್ಲೆಯ ಜಾನಪದ ಸಾಹಿತ್ಯದಲ್ಲಿ ಕೃಷಿ – ಧನಲಕ್ಷ್ಮೀ ವಿಶ್ವನಾಥ – ಪು. ೯೪ ಹಾಗು ಮಲ್ಲಿಗೆ ದಂಡೆ

೨೯) ಮಲ್ಲಿಗೆ ದಂಡೆ – ಕಾಪಸೆ ರೇವಪ್ಪ – ಹಲಸಂಗಿ – (ಸಂ) ಪು. ೫೦

೩೦) ಮಲ್ಲಿಗೆ ದಂಡೆ – ಕಾಪಸೆ ರೇವಪ್ಪ – ಹಲಸಂಗಿ – (ಸಂ) ಪು. ೧೧೫

೩೧) ಗಡಿ ಜಾನಪದ ಗೀತೆಗಳು – ಎಂ. ಎಸ್. ಬಿರಾದಾರ – (ಪ್ರ. ಸಂ.) ಪು. ೧೩೧

೩೨) ಮಲ್ಲಿಗೆ ದಂಡೆಕಾಪಸೆ ರೇವಪ್ಪಾ – (ಸಂ) – ಪು. ೩೯

೩೩) ನಾಗಿಣಿ ಬಾಯಿ ಶಂಕರೆಪ್ಪಾ ಗೊಂಡಾ – ಭಾತಂಬ್ರಾ – ವ. ೪೯

ಅಧ್ಯಾಯ: ಏಳು

ಮಹಿಳಾ ಹಾಡುಗಳಲ್ಲಿ ಅಭಿವ್ಯಕ್ತಿ ಸಾಹಿತ್ಯ

೭.೧ ಭಾಷೆ ಮತ್ತು ಶೈಲಿ.

೭.೨ ಛಂದಸ್ಸು, ಅಲಂಕಾರ.

೭.೩ ಇತರ ಭಾಷೆಗಳ ಪ್ರಭಾವ.

ಅಧ್ಯಾಯ: ಏಳು

ಮಹಿಳಾ ಹಾಡುಗಳ ಅಭಿವ್ಯಕ್ತಿ ಸಾಹಿತ್ಯ

೭.೧ ಭಾಷೆ ಮತ್ತು ಶೈಲಿ.

ಪ್ರತಿಯೊಂದು ಪ್ರದೇಶ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದಿರುತ್ತದೆ. ಭೌಗೋಳಿಕ ವೈಶಿಷ್ಟ್ಯ, ಜನಾಂಗಿಕ ವೈಶಿಷ್ಟ್ಯ, ಬುಡಕಟ್ಟಿನ ವೈಶಿಷ್ಟ್ಯ, ಸಂಸ್ಕೃತಿಯ ವೈಶಿಷ್ಟ್ಯ ಹೀಗೆ ಹಲವಾರು ರೀತಿಯ ವೈಶಿಷ್ಟ್ಯಗಳಿಂದ ಕೂಡಿರುತ್ತದೆ. ಇದರಂತೆ ಕರ್ನಾಟಕದ ಗಡಿಭಾಗದಲ್ಲಿರುವ ಬೀದರ್ ಜಿಲ್ಲೆಯಲ್ಲಿ ಭೌತಿಕ ಉಡಿಗೆ-ತೊಡಿಗೆ ಮೊದಲಾದ ಕೆಲವನ್ನು ಬಿಟ್ಟರೆ ಉಳಿದ ಎಲ್ಲದರಲ್ಲಿಯೂ ಪ್ರತ್ಯೇಕತೆಯನ್ನು ಕಾಣುತ್ತೇವೆ. ಭಾಷೆಯಂತು ಇದು ಬೇರೆಯೇ ಎಂಬಂತೆ ಇದ್ದು, ಉರ್ದು, ಮರಾಠಿ, ಹಿಂದಿ ಭಾಷೆಗಳು ಮಿಶ್ರವಾಗಿ ತನ್ನದೇ ಆದ ಒಂದು ವಿಶಿಷ್ಟ ಭಾಷೆಯಾಗಿದೆ. ಉದಾಹರಣೆಗಾಗಿ, ಹೊಯಿಂದು=ಹೌದು, ಇದನ್ನು ಮರಾಠಿಯ 'ಹೊಯ್' ಕನ್ನಡದ 'ಹೌದು' ಸೇರಿ "ಹೊಯಿಂದು" ಆಗಿದೆ.

ಮರಾಠಿಯ : ಹೊಯ್ = ಬೀದರ ಭಾಷೆಯಲ್ಲಿ ಹೊಯ್+ಹೌದು=ಹೊಯಿಂದು ಎಂದಾಗಿದೆ.

ಕನ್ನಡದ : ಹೌದು

ಮರಾಠಿಯ 'ಹೊ' ಮತ್ತು 'ಯ್' (ಯ್>ಯಿ) ಧ್ವನಿ ಸಂಕೇತಗಳು ಮತ್ತು ಕನ್ನಡದ 'ಹೌದು' ಪದದ ಎರಡು ಧ್ವನಿ ಸಂಕೇತಗಳಲ್ಲಿ ಮೊದಲನೆಯ ಅಕ್ಷರ 'ಹೌ' ಹಾರಿ 'ದು' ಅಕ್ಷರ ಮರಾಠಿಯ 'ಹೊಯ್' ಗೆ ಕೂಡಿಕೊಂಡಿದೆ. ಜೊತೆಗೆ ಪ್ರಾದೇಶಿಕವಾಗಿ ಮಧ್ಯದಲ್ಲಿ ಒಂದು ಬಿಂದು ಸೇರಿಕೊಂಡು 'ಹೊಯಿಂದು' ಆಗಿದೆ.

ಇದೇ ರೀತಿ ಖರೆಬಿ=ನಿಜವಾಗಿಯೂ, ಪದ ಮರಾಠಿಯ 'ಖರ' ಉರ್ದು ಭಾಷೆಯ 'ಬಿ' ಪ್ರತ್ಯಯ ಸೇರಿಕೊಂಡು ಖರ+ಬಿ=ಖರೇಬಿ (ನಿಜವಾಗಿಯೂ) ಆದದ್ದು ಕಾಣುತ್ತೇವೆ. ಉರ್ದು ಭಾಷೆಯಲ್ಲಿ 'ಹಮ್'=ನಾವು ಪದಕ್ಕೆ 'ಬಿ' ಪ್ರತ್ಯಯ ಸೇರಿಸಿ ಹಮ್+ಬಿ=ಹಮಬಿ (ನಾವುಸಹ) ತುಮ್+ಬಿ= ತುಮ್‌ಬಿ (ನೀವುಕೂಡ) ಹೀಗೆ ಕಲ್+ಬಿ=ಕಲ್‌ಬಿ, (ನಾಳೆಸಹ) ಆಜ್+ಬಿ=ಆಜಬಿ (ಇಂದುಸಹ) ಮುಂತಾದ ಪದಗಳನ್ನು ಬಳಸುವದನ್ನು ಕಾಣುತ್ತೇವೆ. ಹೀಗೆ ಉರ್ದು ಭಾಷೆಯ ಪ್ರಭಾವದಿಂದ 'ಬಿ' ಪ್ರತ್ಯಯ ಹಚ್ಚಿ 'ನಾಬಿ' ಅಥವಾ ನಾನ್‌ಬಿ>ನಾನುಬಿ ಅಂದರೆ ನಾನುಸಹ ಎಂದು ಮುಂತಾಗಿ ಬಳಕೆಯಲ್ಲಿರುವುದನ್ನು ಕಾಣುತ್ತೇವೆ.

ಹೀಗೆ ಅನ್ಯ ಭಾಷೆಗಳಿಂದ ಬೀದರ್ ಜಿಲ್ಲೆಯ ಆಡುನುಡಿಗಳಲ್ಲಿ ಸೇರಿಕೊಂಡ ಪದಗಳು ಅನೇಕ. ಉದಾ: ಭಾರಿ, ಮಾಜಾ, ಮಜಬೂರ್, ಕಮಜೋರ್ ತಾಕತ್, ಗರೀಬ, ಖಬರ್ದಾರ, ಜಬರದಸ್ತ, ಖತರ್‌ನಾಕ್, ಖತಂ, ಖತಲ್ ಮುಂತಾದ ಅನೇಕ ಪದಗಳು ಉರ್ದುಭಾಷೆಯಿಂದ ಸೇರಿಕೊಂಡಿವೆ. ಮರಾಠಿಯಿಂದ, ವೈನಿ, ಪರಂತು, ಠಿಕಾಣಾ, ಖಿಚಡಿ, ಗೋಲ್ ಗೋಲ್, ಬಾಬಾ, ಮಾಮಾ, ಮಾಮಿ, ಕಾಕಾ, ಕಾಕಿ, ಚಪರಾಕಿ, ಆಲೂಭಾತ್, ಖಾಟ್ ಮುಂತಾದ ಪದಗಳು ಸೇರಿಕೊಂಡಿವೆ.

ಉರ್ದು ಭಾಷೆಯಿಂದ 'ಬಿ' ಪ್ರತ್ಯಯ ಬಳಸಿಕೊಂಡು ಮಾತಾಡುವಂತೆ ಮರಾಠಿಯ 'ಹಿರವ' (ಹಸಿರು) ಇದನ್ನು 'ಹಿರವಗಾರ್' ಎನ್ನುತ್ತಾರೆ. ಈ ಪ್ರಭಾವದಿಂದ ಬೀದರ ಕನ್ನಡದಲ್ಲಿ 'ಹಚ್ಚ ಹಸಿರು' ಎನ್ನದೆ ಗಾರ್ ಪ್ರತ್ಯಯ ಬಳಸಿಕೊಂಡು 'ಹಚ್ಚಾಗ್‌ಗಾರ' ಅಥವಾ 'ಹಚ್ಚುಗ್‌ಗಾರ್' ಎಂದು

ಬಳಸುವುದಾಗಿದೆ. ಇದರಂತೆ 'ಪಾಂಡ್ರಸಿಪ್ಪಟ್', 'ಕಾಳಭೋರ' (ಅಚ್ಚಬಿಳಿ, ಅಚ್ಚುಕರಿ) ಎಂದು ಹೇಳುವುದುಂಟು. ಕೆಲವರು ನೇರವಾಗಿ ಪಿವಳ ರೊಟ್ಟಿ (ಹಳದಿ ರೊಟ್ಟಿ) ಕೆಂಪುಗ್‌ಬುಂದ್ (ಅಚ್ಚುಕೆಂಪು) ನೀರು ಬಂದಿದೆ ಎಂದೆಲ್ಲಾ ಬಳಸುವರು.

ಬೇರೆ ಬೇರೆ ಭಾಷಾ ಪ್ರಭಾವದಿಂದ ಇಲ್ಲಿನ ಅನೇಕ ಶಬ್ದಗಳಲ್ಲಿ ಅಲ್ಪಪ್ರಾಣ ಬದಲಾಗಿ ಮಹಾಪ್ರಾಣ ಬಳಸುವುದು ರೂಢಿಯಲ್ಲಿದೆ. ಉದಾ: ಕಂಬ>ಖಂಬ. ಕಬ್ಬು>ಖಬ್ಬು, ಕರ್ರಗೆ>ಖರ್ರಗೆ, ಕೆಂಪಗೆ>ಖೆಂಪಗೆ, ಗಡಿ>ಘಡಿ, ಗಂಟೆ>ಘಂಟೆ, ಗಾಲಿ>ಘಾಲಿ, ಜಗಳ>ಝಗಳ, ಜಾಡಿಸಿ>ಝಾಡಿಸಿ, ತಂಬಿಗೆ>ಥಂಬಿಗೆ, ತೇರು>ಥೇರು, ಪಟಾಕೆ>ಫಟಾಕಿ, ಪಟಪಟ>ಫಟಫಟ, ಬೆಳ್ಳಗೆ>ಭೆಳ್ಳಗೆ ಮುಂತಾದವುಗಳು.

ಇನ್ನು ಮೇಲ್ನೋಟಕ್ಕೆ ಎದ್ದು ಕಾಣುವ ಎರಡು ಅಂಶಗಳೆಂದರೆ; ಹಾನ, ಹಾಳ, ಹಾರ ಎಂಬ ಪೂರ್ಣ ಕ್ರಿಯಾ ರೂಪಗಳು ಹಾಗೂ ಕಲ್ಲಿ, ಕಿಲ್ಲಿ, ಕವ/ಕಿವ, ಕದು/ಕಿದು ಇಂತಹ ದರ್ಶಕ ನಾಮ ರೂಪಗಳ ಬಳಕೆಯ ವ್ಯಾಪಕತೆ ಹಾನ, ಹಾಳ, ಹಾರ ರೂಪಗಳು ಹನ, ಹರ, ಹಳ ಎಂಬುದಾಗಿ ಹೃಸ್ವಸ್ವರಾಂಭದಿಂದಲೂ ಬಳಕೆಯಾಗುತ್ತವೆ.

ಅಪ್ಪನ್, ಅಪ್ಪಳ್, ಅಪ್ಪರ್ ಎಂಬ ಕನ್ನಡ ಪ್ರಾಚೀನ ರೂಪಗಳೇ ವರ್ಣಪಲ್ಲಟ ಕ್ರಿಯೆಯಿಂದ ಈ ರೂಪಗಳು ಪಡೆದಿವೆ. ಅವುಗಳ ಬೆಳವಣಿಗೆಯನ್ನು ಈ ಕೆಳಗಿನಂತೆ ನೋಡಬಹುದು.

* ಅಪ್ಪನ್>ಅಹನ್>ಹ್+ಅ+ಅ+ನ್>ಹ್+ಆ+ನ್>ಹಾನ್>ಹಾನ>ಹನ (ಇದ್ದಾನೆ)
* ಅಪ್ಪಳ್>ಅಹಳ್>ಹ್+ಅ+ಅ+ಳ್>ಹ್+ಆ+ಳ್>ಹಾಳ್>ಹಳ (ಇದ್ದಾಳೆ)
* ಅಪ್ಪರ್>ಅಹರ್>ಹ್+ಆ+ಅ+ರ್>ಹ್+ಆ+ರ್>ಹಾರ್>ಹಾರ>ಹರ (ಇದ್ದಾರೆ)

ಕನ್ನಡದಲ್ಲಿ ಅಪ್ಪುದು>ಅಹುದು>ಹೌದು ಆದಂತೆ ಈ ಮೇಲಿನ ರೂಪಗಳು ವರ್ಣಪಲ್ಲಟಕ್ಕೆ ಒಳಗಾಗಿ ರೂಪ ವ್ಯತ್ಯಾಸ ಹೊಂದಿವೆ. ಹಿಂದು ಮುಸ್ಲಿಂ ಆಳ್ವಿಕೆಯಿಂದ ಹಾಗೂ ಹಲವಾರು ಒತ್ತಡದ ಭಾಷಾ ಮಿಶ್ರತೆಯಿಂದ ಬೀದರ ಜಿಲ್ಲೆಯ ಪ್ರಾದೇಶಿಕ ಭಾಷಾ ವೈಶಿಷ್ಟ್ಯತೆಯ ಸತ್ವ, ಗತ್ತು-ಗಮ್ಮತ್ತು ಮುಂತಾಗಿ ತಿಳಿಯಬೇಕಾದರೆ ಕನ್ನಡದ ಜೊತೆ ಹಿಂದಿ, ಉರ್ದು, ಮರಾಠಿ, ಸ್ವಲ್ಪ ಮಟ್ಟಿಗೆ ತೆಲಗು ಮೊದಲಾದ ಭಾಷೆಗಳ ಪರಿಚಯವಿರಬೇಕು. ಜೊತೆಗೆ ಪ್ರಾದೇಶಿಕ ಭಾಷೆಯ ಭಾವನೆ ಅರಿತುಕೊಳ್ಳಲು ಸಹೃದಯರಾಗಿರಬೇಕು. ಮಾತನಾಡುವ ಯಾವುದೇ ಭಾಷೆಯಲ್ಲಿ ಪ್ರಾದೇಶಿಕತೆಗೊಂದು ಶಕ್ತಿ ಇದೆ. ಅರ್ಥವ್ಯಾಪ್ತಿ ಇರುತ್ತದೆ. ಇವುಗಳಿಂದ ಕೂಡಿದ ವೈವಿಧ್ಯತೆ ಭಾಷಾ ಶ್ರೀಮಂತಿಕೆಯ ಸಂಕೇತವಾಗಿದೆ. ಉದಾ: ಬಹಳ ಎನ್ನುವ ಪದಕ್ಕೆ ಬೀದರ ಜಿಲ್ಲೆಯ ಪ್ರದೇಶದಲ್ಲಿ ಬಕ್ಕುಳ್, ತೋಲ್, ಅನಗಾಡ, ಢಿಗಾರಿ, ಮಸಾರ್, ದುನೇದ್, ಕಂಡಾಬಟ್ಟಿ, ಭಾಳ್, ಖೂಬ್, ಭಾರಿ, ಮುಂತಾದ ಅನೇಕ ಪ್ರಕಾರಗಳಲ್ಲಿರುವ ಪದಗಳನ್ನು ಸಂದರ್ಭಾನುಸಾರ ಬಳಸಿಕೊಳ್ಳುತ್ತಾರೆ.

ಇದರಂತೆ ಹೊಗ್ಗ, ಬಾಗ ಎಂದು ಕರೆಯುವಲ್ಲಿ ಇಲ್ಲಿಯ ಪ್ರಾದೇಶಿಕ ಪರಿಚಯವಿಲ್ಲದವರಿಗೆ ವರಟುತನ ಎನ್ನಿಸಬಹುದು. ಆದರೆ ಈ ಗ್ಗ.ಗ ಎನ್ನುವ ಪ್ರತ್ಯಯಗಳು ಸಹ ಮರಾಠಿಯ ಪ್ರಭಾವದಿಂದಲೇ ಸೇರಿಕೊಂಡವುಗಳಾಗಿವೆ. ಈ ರೀತಿ ಮಾತಾಡುವಲ್ಲಿ ಒಂದು ಆತ್ಮೀಯತೆ ಇದೆ. ಇದು ಸಮೀಪದ ಸಂಬಂಧ, ಸಲಿಗೆ, ಗೆಳೆತನವನ್ನು ಎತ್ತಿ ತೋರುತ್ತದೆ. ಲಂಗೋಟಿ ಗೆಳೆಯರಾದವರು,

ಹೆಚ್ಚಿನ ಸಲಿಗೆಯುಳ್ಳವರು ಹಾಗೂ ಹತ್ತಿರದವರು ಮಾತ್ರ ಈ ರೀತಿ ಆತ್ಮೀಯತೆಯಿಂದ ಮಾತಾಡುತ್ತಾರೆ. ಆತ್ಮೀಯತೆಯ ಸಲಿಗೆ ಇರದೆ ಸಹಜ ಪರಿಚಯವಿದ್ದು ಮಾತನಾಡುವಾಗ ಹೋಗ್ರಿ, ಬರ್ರಿ, ಏನ್ರಿ, ಯಾಕ್ರಿ, ಎಲ್ಲಿರಿ ಮುಂತಾದ ದೂರದ ನಯ ನಾಜೂಕಿನಿಂದಲೇ ಮಾತನಾಡುತ್ತಾರೆ.

ಈ ಎಲ್ಲ ದೃಷ್ಟಿಯಿಂದ ನೋಡಿದಾಗ ಬೀದರ ಜಿಲ್ಲೆಯ ಪ್ರಾದೇಶಿಕ ಆಡುನುಡಿಯಲ್ಲಿ ಕೇವಲ ಮಿಶ್ರಪದ ಇವೆಯೆಂದಲ್ಲ. ಅಚ್ಚಗನ್ನಡ ಪದಗಳೂ ಇಲ್ಲಿಯ ಜನಪದರು ಬಳಸುವುದನ್ನು ಕಾಣಬಹುದಾಗಿದೆ. ಉದಾ: ಹೊತ್ರೆಳಿ (ಹೊತ್ತು+ಅರಳಿ=ಹೊತ್ತರಳೀ>ಹೊತ್ತೇಳಿ=ಮುಂಜಾನೆ) ನ್ಯಾರಿ>ನ್ಯಾಯರಿ (ಮುಂಜಾನೆ ಊಟ) ಸುಖ, ದು:ಖ, ಅತ್ತಿಗೆ, ಅವ್ವ, ಅಪ್ಪ, ಮುಂತಾದ ಅನೇಕ ಪದಗಳು ಹೆಸರಿಸಬಹುದು.

ಈ ನಿಟ್ಟಿನಲ್ಲಿ ಬೀದರ ಪ್ರದೇಶದವರು ಸಾವಿರಪಟ್ಟು ಉತ್ತಮ. ಏಕೆಂದರೆ ಹತ್ತಾರು ಸಾವಿರ ಮೈಲುಗಳ ಆಂಗ್ಲ ಭಾಷೆಯ ವ್ಯಾಮೋಹಕ್ಕೊಳಗಾಗದೆ ಸಹೋದರ ಭಾವನೆಯಿಂದ ಸಹಕರಿಸುತ್ತ ಬದುಕಿ-ಬಾಳುವ ಅಕ್ಕ-ಪಕ್ಕದ ನೆರೆಭಾಷೆಗಳ ಪದಗಳು ಸಹಜ ಸಂಪರ್ಕದಿಂದ ಇಲ್ಲಿಯ ಆಡು ಮಾತುಗಳಲ್ಲಿ ಮಿಶ್ರವಾಗಿ ಪ್ರಾದೇಶಿಕ ಭಾಷಾ ಸಂಪತ್ತು ಹೆಚ್ಚಾಗಿರುವುದು ಕಾಣಬಹುದಾಗಿದೆ.

ಶೈಲಿ:

ಶೈಲಿ ಎಂದರೆ ಕ್ರಮ, ರೀತಿ, ಧಾಟಿ ಮುಂತಾಗಿ ಸಾಮಾನ್ಯವಾಗಿ ಹೇಳುವುದಾಗಿದೆ. ಆದರೆ ಸಾಹಿತ್ಯದಲ್ಲಿ ರೀತಿ ಹಾಗೂ ಧಾಟಿಗಳಿಗೆ ಪ್ರತ್ಯೇಕ ಸ್ಥಾನಗಳಿವೆ. ಹಾಗೆಂದು ಇವು ಶೈಲಿಗೆ ಸಂಬಂಧವಿಲ್ಲವೆನ್ನುವಂತಿಲ್ಲ. ಶೈಲಿಯಲ್ಲಿ ಧ್ವನಿ, ವ್ಯಂಗ್ಯ ವಕ್ರೋಕ್ತಿ ಮುಂತಾದವುಗಳೆಲ್ಲ ಸಮಾವೇಶಗೊಂಡಿವೆ. ಅಧ್ಯಾತ್ಮದಲ್ಲಿ ದೇವರು ಹೇಗಿದ್ದಾನೆಂದರೆ: ಹಾಲಿನೊಳಗಣ ತುಪ್ಪ ಎಂಬಂತೆ: ಶರೀರದೊಳಗಣ ಪ್ರಾಣ ಎಂಬಂತೆ: ಸಾಹಿತ್ಯದೊಳಗಣ ಜೀವ ಎನ್ನಬೇಕಾಗುತ್ತದೆ. ಆದರೆ ಅದು ಒಡೆದು ಕಾಣುವ ಕೆಲಸ ಕಠಿಣವಾಗಿದೆ. ಸಿಹಿ ತಿಂದರೆ ಗೊತ್ತಾಗುವುದು, ಹೇಗಿದೆ ಎಂದರೆ ತೋರಿಸುವುದು ಕಷ್ಟ, ಹಾಗೆಯೇ ಸಾಮಾನ್ಯರಿಂದ ಸಾಮಾನ್ಯರೂ ಸಹ ದಿನನಿತ್ಯ ಶೈಲಿಯ ಬಗ್ಗೆ ಮಾತನಾಡುತ್ತಾರೆ. ಕೇಳುತ್ತಾರೆ, ಅನುಭವಿಸುತ್ತಾರೆ. ಆದರೆ ತಾವಾಡುವ ಮಾತು ಯಾವ ಶೈಲಿಯ ಕುರಿತೆಂಬುದು ಗೊತ್ತಾಗುವುದಿಲ್ಲ. ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರುಗಳ ಕುರಿತು ಅವರ ಶೈಲಿ ಚೆನ್ನಾಗಿದೆ, ಇವರ ಶೈಲಿ ಅರ್ಥವಾಗದು ಎಂದೆಲ್ಲಾ ಹೇಳುವರು ಅದರಿಂದ ಇದೊಂದು (ಶೈಲಿ) ರೀತಿ ಕ್ರಮ ಆಗಿದೆ ಎನ್ನಬಹುದು.

ವಿಷಯಗಳ ಆಯ್ಕೆ, ಭಾಷೆ, ಕಥಾಸರಣೆ, ಮೊದಲಾದವುಗಳನ್ನೊಳಗೊಂಡಿದೆ ಶೈಲಿ, ಕವಿಯ ಹೇಳುವ ಶಕ್ತಿಯೇ ಪ್ರತಿಭೆ ಆ ಪ್ರತಿಭೆಗೆ ಜೋಡಾಗಿ ಕಾವ್ಯದಲ್ಲಿ ಹೊರಹೊಮ್ಮಿ ಮೂಡಿದ್ದೇ ಅವನ ಶೈಲಿ. ಆಯಾ ಕವಿಗಳ ಶೈಲಿಯು ಅವರನ್ನು ಕೂಡಿಕೊಂಡಿದೆ. ವ್ಯಕ್ತಿತ್ವವೇ ಶೈಲಿಯಾಗಿ ನಿಲ್ಲುವದು ಪ್ರತಿಭೆಯಿಂದೊಡಮೂಡಿದ ಕಾವ್ಯವಿದ್ದರೆ ಅದು ಜಾನಪದ ಕಾವ್ಯವಾದರೂ ಸರಿಯೇ, ಮಹಾಕಾವ್ಯವಾದರು ಸರಿಯೇ, ಅದಕ್ಕೆ ಮಹತಿ ಉಂಟಾಗುತ್ತದೆ. ಪ್ರತಿಭೆಯು ಕಾವ್ಯದ ಒಳ ಉಸಿರಾಗಿದ್ದರೆ, ಶೈಲಿಯು ಕಾವ್ಯಕ್ಕೆ ಹೊರಗೆ ಮಂಗಲ ತಿಲಕವಿದ್ದಂತೆ.

ಜಾನಪದರು ಶೈಲಿಯನ್ನು ಅನುಕರಣೆ ಮಾಡುತ್ತಾರೆ. ಅನುಕರಣೆ ಮಾಡುವಲ್ಲಿ ತನ್ನತನ ಅಡಗಿರುತ್ತದೆ. ಅದೇ ಶೈಲಿ. ಇಲ್ಲವಾದಲ್ಲಿ ಕೇವಲ ಅನುಕರಣೆ ಮಾತ್ರ ಎನಿಸುತ್ತದೆ. ಉದಾ: ಬೇಂದ್ರೆ

ಕಾವ್ಯದಲ್ಲಿ ಜಾನಪದ ಸೊಗಡಿದೆ. ಹಾಗಾಗಿ ಅದು ಜಾನಪದ ಶೈಲಿ ಎನ್ನಬಹುದು. ಆದರೆ ಜಾನಪದವಾಗಲಾರದು. ಹಾಗಾದರೆ ಜಾನಪದದಲ್ಲಿರುವುದು ಯಾವ ಶೈಲಿ ಎಂದು ನೋಡುವುದಾದರೆ ಅದು ಸರಳ ಶೈಲಿ, ಜನಸಾಮಾನ್ಯರಿಗೂ ತಿಳಿಯುವ ಶೈಲಿ, ಮನಮುಟ್ಟುವ ಶೈಲಿ ಎಂದು ಹೇಳಬಹುದು.

ನಮ್ಮ ಜಾನಪದ ಸಾಹಿತ್ಯವನ್ನು ಪರಿಶೀಲನೆ ಮಾಡಿನೋಡಿದಾಗ ನಿಜವಾಗಿಯೂ ಮಹಾಕಾವ್ಯಗಳೆಂದು ಹೇಳಬಹುದಾದ ಕೆಲವೊಂದು ಭಾಗಗಳು ನಮ್ಮ ಕಣ್ಣಿಗೆ ಬೀಳುತ್ತವೆ. ಗ್ರಂಥಸ್ಥ ಸಾಹಿತ್ಯಕ್ಕಿಂತ ಭಿನ್ನವಾದ ಕೆಲವು ವಿಶಿಷ್ಟ ಲಕ್ಷಣಗಳು ಎದ್ದು ತೋರುವವು. ಸಾಮಾನ್ಯ ಜನತೆಗಾಗಿ ರಚಿತವಾದ ಈ ಸಾಹಿತ್ಯವು ಜನತೆಯ ಜೀವನದಿಂದ ಬೆಳೆದು ಬಂದುದರಿಂದ ಜನಜೀವನಕ್ಕೂ ಈ ಸಾಹಿತ್ಯಕ್ಕೂ ನಿಕಟ ಸಂಬಂಧವಿದೆ. ಜನಜೀವನದ ವಿವಿಧ ಮುಖಗಳ ಪ್ರತಿಬಿಂಬವು ಇದರಲ್ಲಿ ಮೂಡಿರಲಿಕ್ಕೆ ಸಾಕು.

ಕೆ.ವಿ. ತಿರುಮಲೇಶ ಅವರು ಶೈಲಿ ನಾಲ್ಕು ರೀತಿಯಲ್ಲಿ ವರ್ಗೀಕರಿಸಿ ಹೇಳುತ್ತಾರೆ. ಒಂದುಃ ಶೈಲಿ ಎಂದರೆ ಉತ್ತಮವಾದ ಬರವಣಿಗೆ, ಎರಡುಃ ಶೈಲಿಯೆಂದರೆ ಸಾಹಿತ್ಯ ಭಾಷೆಗೆ ಹೊದೆಸಿದ ಅಲಂಕಾರ, ಮೂರುಃ ಶೈಲಿ ಎಂದರೆ ಒಂದು ಸಾಹಿತ್ಯ ಸಂಪ್ರದಾಯದಲ್ಲಿ ಅಥವಾ ಲೇಖನದಲ್ಲಿ ಗುರುತಿಸಬಹುದಾದ ಪ್ರತ್ಯೇಕತೆ, ನಾಲ್ಕು: ಶೈಲಿ ಎಂದರೆ ವಸ್ತು ವಿಷಯ ಸಂದರ್ಭಗಳಿಗೆ ಸಮಂಜಸವಾಗುವಂತೆ ಭಾಷೆಯನ್ನು ಬಳಸುವ ರೀತಿ ಎಂದು (ಮಾಹಿತಿ: ದಶವಾರ್ಷಿಕ ವಿಮರ್ಶೆಗಳು ೭೪-೮೩ (ಪ್ರ) ಕ.ಸಾ ಅಕಾಡೆಮೆ ಬೆಂಗಳೂರು(೧೯೮೬))

ಶೈಲಿಯಲ್ಲಿ ಪ್ರತಿಭೆ ಇದೆ ಅಲಂಕಾರ, ಛಂದಸ್ಸಿದೆ. ಜಾಯಮಾನದ ತಿಳುವಳಿಕೆ ಇದೆ, ಪ್ರತ್ಯೇಕತೆ ಇದೆ, ಭಾಷಾ ಪ್ರೌಢಿಮೆ ಅಂದರೆ ಬಳಸುವ ರೀತಿಯ ಚಾಕಚಕ್ಯತೆಇದೆ; ಇಷ್ಟೆಲ್ಲ ಕೂಡಿದ್ದು ಅದು ಅಭಿವ್ಯಕ್ತ ಪಡಿಸುವ ರೀತಿ ಅರ್ಥ ಕೆಡದಂತೆ ಸಹೃದಯರ ಹೃದಯ ಸ್ಪಂದಿಸುವುದೇ ಶೈಲಿ. ಎನ್ನಬಹುದು. ಜನಪದ ಮಹಿಳೆಯರ ಹಾಡುಗಳ ಶೈಲಿ ಇಲ್ಲಿ ಗಮನಿಸಬಹುದು.

ಮದುವೆಯಾದ ನಂತರ ಹೆಣ್ಣನ್ನು ಗಂಡಿನವರಿಗೆ ಒಪ್ಪಿಸಿಕೊಟ್ಟ ಮೇಲೆ ಈ ಅಗಲಿಕೆಯ ದೃಶ್ಯದಿಂದ ಕುದಿಗೊಂಡ ತಾಯಿಗೆ ಬಾಳಿನಲ್ಲಿ ಈ ಸನ್ನಿವೇಶವೇ ಒದಗಬಾರದೆಂದೆನಿಸುತ್ತದೆ.

ಹೆಣ್ಣು ಹಡಿಯಲಿ ಬ್ಯಾಡ ಹೆರವರಿಗೆ ಕೊಡುಬ್ಯಾಡ
ಹೆಣ್ಣು ಹೋಗಾಗ ಅಳಬ್ಯಾಡ । ಹೆಣ್ಣು ಹೋಗಾಗ ಅಳುಬ್ಯಾಡೆ
ಹಡದವ್ವ ಸಿಟ್ಟಾಗಿ ಶಿವಗ ಬೈಬ್ಯಾಡ.

ತಾಯಿಯ ಹೃದಯ ದು:ಖದಿಂದಕರಗಿ ನೀರಾಗಿ ತನ್ನ ವೇದನೆಯನ್ನು ಮಾತಿನ ಮೂಲಕ ತೋಡಿಕೊಂಡರೆ, ತಂದೆ ನೆರೆದ ಜನರೆದುರಿಗೆ ತನ್ನ ದು:ಖವನ್ನು ವ್ಯಕ್ತಪಡಿಸಲಾರನು. ಆತನು ಅನುಭವಿಸುವುದು ಮೂಕ ವೇದನೆ, ಯಾತನೆ, ಅವನ ದು:ಖ ತಾಯಿಯ ದು:ಖಕ್ಕಿಂತ ಕಡಿಮೆಯಾದುದಿಲ್ಲ. ಹೃದಯವನ್ನು ಗಟ್ಟಿಮಾಡಿಕೊಂಡು ತಂದೆ ಮೌನವಾಗಿ ತನ್ನ ದು:ಖದ ಆಳವನ್ನು ಸೂಚಿಸುತ್ತಾನೆ. ಅದು ಈ ರೀತಿಯಾಗಿದೆ,

ಹೆಣ್ಣು ಮಕ್ಕಳ ಕಳುಹಿ ಕಣ್ಣೀಗಿ ನೀರತಂದು
ಸಣ್ಣ ಸೆಲ್ಲೆದಲೇ ಮುಸುಗ್ಹಾಕಿ । ಸಣ್ಣ ಸೆಲ್ಲೆದಲೇ
ಮುಸುಗ್ಹಾಕಿ ಹಡೆದಪ್ಪ ಹೆಣ್ಣೂ ಸಾಕೆಂದ ಜನುಮಕ

ಇಲ್ಲಿ ತಂದೆ-ತಾಯಿಯರ ಮಾತಿನ ವಾಚ್ಯಾರ್ಥ ಉದ್ಗಾರವೇ ಆದರೆ ಅದರ ಮೂಲಕ ಈ ಸಂದರ್ಭದಲ್ಲಿ ಗೋಚರವಾಗುವ ವಿಯೋಗವೇದನೆಯನ್ನು ಗಮನಿಸಿ – "ಅವರು ನುಡಿದ ಮಾತಿನಿಂದ ಮಿಡಿದ ಕಣ್ಣೀರಿನಿಂದ ಅವರ ಸಂಕಟ ಎಷ್ಟು ಗಾಢವಾಗಿನಮ್ಮ ಅನುಭವಕ್ಕೆ ಬರುತ್ತದೆ ! ಇದನ್ನು ನಮಗೆ ಮನಮುಟ್ಟಿಸುವುದರಲ್ಲೇ ಇಲ್ಲಿಯ ಎಲ್ಲ ಮಾತುಗಳ ಸಾರ್ಥಕತೆ, ಆದರೆ 'ದು:ಖ', 'ಸಂಕಟ,' ಎಂಬ ಪದಗಳು ಮಾತ್ರ ಇಲ್ಲಿ ತಲೆಹಾಕಿಲ್ಲ. ತಂದೆ-ತಾಯಿಯರು ಸುಮ್ಮನೆ ದು:ಖ, ದು:ಖ ಎಂದು ಎಷ್ಟು ಸಲ ಬಾಯಿಬಿಟ್ಟು ಕೂಗಿದ್ದರೂ ನಮಗೆ ಈ ಅನುಭವ ಬರುತ್ತಿರಲಿಲ್ಲ" ಹೀಗೆ ಧ್ವನಿಪೂರ್ಣವಾಗಿ ಹೇಳುವುದು ಜನಪದರ ಶೈಲಿ.

ತ್ರಿಪದಿಯೇ ಜನಪದ ಸಾಹಿತ್ಯದ ಜೀವನಾಡಿ. ಈ ಛಂದೋಬಂಧ ಚಿಕ್ಕದಾಗಿದ್ದು, ಹೇಳಬೇಕೆಂದಿರುವ ವಿಷಯ ನೇರವಾಗಿ, ಖಚಿತವಾಗಿ ಹೇಳಲು ಬೇಗಮುಗಿಸಲು ತ್ರಿಪದಿಯು ಅನುಕೂಲಕರವಾದ ಛಂದೋಬಂಧವಾಗಿದೆ. ಹಾಡಿನ ಲಯಕ್ಕನುಸರಿಸಿ ಸ್ವರಗಳು ಹಿಗ್ಗುವುದುಂಟು, ಕುಗ್ಗುವುದುಂಟು. ತ್ರಿಪದಿಗಳೆ ಬೀಸುವಾಗ ಒಂದು ಧಾಟಿಯಲ್ಲಿ ಹೇಳಿದರೆ ಮಗುವಿಗೆ ಮಲಗಿಸುವಾಗ ಇನ್ನೊಂದು ಧಾಟಿಯಲ್ಲಿ, ಬಳಸಿ ಕಾಡುವುದುಂಟು.

ಬೀಸ ಕಲ್ಲಿನ ಬಲ್ಲಿ ದೇಸಾಯಿ ಮಲಗ್ಯಾನೆ
ವಾಸ್ಯಾಡು ಬ್ಯಾಡ ನೆಗೆಯಣ್ಣೆ । ವಾಸು ಆಡುಬ್ಯಾಡ
ನೆಗೆಯಣ್ಣೆ ಮನಿಕೆಲಸ ತಾಸ್ಹೊತ್ತಿನಾಗ ತಿರವೀದ

ಎಂದು "ಕಿರಿದರೊಳ್ ಪಿರಿದರ್ಥಮಂ ಪೇಳು" ಎಂಬಂತೆ ಕುಮಾರವ್ಯಾಸ ಹೇಳಿದಮಾತು ಮೀರಿ ಕಿರಿದರಲ್ಲಿ ಹಿರಿದು ಅರ್ಥದ ಜೊತೆಗೆ ಸರಳ ಶೈಲಿಯ ಜನಪದ ಸಿರಿ, 'ತ್ರಿಪದಿ' ಜನಮನ ಪಡೆದಂತೆ ಪಂಡಿತರ ಮನವೂ ಗೆದ್ದಿತು. ಜಾನಪದ ಪ್ರೌಢಪದ, ಜಾಣೆನಿಂ ಬೆರೆಸಿ ಸಾಮಾನ್ಯರಿಗೂ, ಪ್ರೌಢರಿಗೂ ತಿಳಿಯುವಂತೆ ತ್ರಿಪದಿ ವೀಣೆ ನುಡಿಸಿಹಳು ಜಾನಪದ ಮಹಿಳೆ ಎನ್ನುವಂಥಹ ಶೈಲಿ ಕರುಳಿನಿಂದ ಹೊರಹೊಮ್ಮುವ ವಿಶೇಷ ಶೈಲಿ ಆಗಿದೆ. ಹೀಗೆ ಅನುಭವದ ರಸಸಾರ ತನಿನುಡಿಗಳಲ್ಲಿ ಮೂಡಿ ಮನಸೆಳೆವ ಶೈಲಿಯೊಡಗೂಡಿ ಬಂದಿದೆ ಮಹಿಳಾ ಜಾನಪದ ಹಾಡುಗಳ ಶೈಲಿ.

ಪ್ರಾಣಿಗಳಿಗಿಂತಲೂ ಮಾನವ ವಿಶಿಷ್ಟವಾಗಿ ಬೆಳೆದಿರುವುದು ಭಾಷೆಯಿಂದಲೇ ಒಬ್ಬರ ಅನಿಸಿಕೆಯನ್ನು ಇತರರಿಗೆ ಅರ್ಥವತ್ತಾಗಿ ತಿಳಿಸುವ ಮಾಧ್ಯಮ ಭಾಷೆಯಾಗಿದೆ. ಮನುಷ್ಯರ ವ್ಯವಹಾರದಲ್ಲಿ ಹುಟ್ಟಿ ಬೆಳೆಯುವ ಭಾಷೆ ಬೆಳೆದಂತೆ ಪರಿವರ್ತನೆಯಾಗುತ್ತಾ ಹೋಗುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯನ್ನು ನೋಡಿದಾಗ ಈಗ ಕನ್ನಡ ಭಾಷೆಯು ಗ್ರಾಂಥಿಕವಾಗಿ ಒಂದೇ ರೀತಿಯಾಗಿದ್ದರೂ ಆಡುನುಡಿಯಲ್ಲಿ ವ್ಯತ್ಯಾಸಗಳಿವೆ. ಭೌಗೋಳಿಕ ಸಾಮಾಜಿಕ, ರಾಜಕೀಯ, ವಿಷಯಗಳು ಪ್ರಾಂತಭೇದಗಳಾಗಲು ಕಾರಣವಾಗಿರುವುದರಿಂದ ವಿಸ್ತಾರವಾದ ಪ್ರದೇಶದಲ್ಲಿ ಸಂಪರ್ಕ ಕಡಿಮೆಯಾದಂತೆ ವ್ಯತ್ಯಾಸ ಅಧಿಕವಾಗಿ ಕಂಡು ಬರುತ್ತದೆ.

ವ್ಯಕ್ತಿಯಿಂದ ವ್ಯಕ್ತಿಗೆ ಮಾತನಾಡುವ ರೀತಿ, ಸಾಮಾಜಿಕ ಅಂತಸ್ತು, ಮತ್ತು ಜಾತಿ ಪರಿಸರಗಳು ಮಾತನಾಡುವವರ ಶೈಲಿಯ ಮೇಲೆ ಪರಿಣಾಮ ಬೀರುತ್ತವೆ. ಇದರಿಂದ ಜನರು ಮಾತನಾಡುವ ರೀತಿಯಲ್ಲಿಯೂ ಕೂಡ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆ ಕಂಡುಬರುತ್ತದೆ. ಬೀದರ್ ಜಿಲ್ಲೆಯ

ಭಾಷೆಯು ಹೈದ್ರಾಬಾದ್ ಕರ್ನಾಟಕದ ಗುಲ್ಬರ್ಗಾ, ರಾಯಚೂರುಗಳಿಗಿಂತಲೂ ಸ್ವಲ್ಪ ಭಿನ್ನವಾಗಿದೆ. ರಾಯಚೂರು ಕನ್ನಡ ಭಾಷೆಯಲ್ಲಿ ತೆಲಗು ಪ್ರಭಾವ ಗಾಢವಾಗಿ ಕಂಡು ಬಂದರೆ ಬೀದರ ಕನ್ನಡದಲ್ಲಿ ಮರಾಠಿ ಪ್ರಭಾವ ಮತ್ತು ಪದಾಂತ್ಯದಲ್ಲಿ ದೀರ್ಘಿಕರಣಗೊಳಿಸುವುದು ಸಾಮಾನ್ಯವಾಗಿದೆ. ಗುಲ್ಬರ್ಗಾ ಭಾಷೆಯಲ್ಲಿ ಉರ್ದು ಪ್ರಭಾವ ಹೆಚ್ಚಾಗಿ ಕಂಡು ಬರುತ್ತದೆ. ಈ ಜಿಲ್ಲೆಗಳಲ್ಲೆಲ್ಲಾ ಕನ್ನಡ ಮಾತಾಡುತ್ತಿದ್ದರೂ ಭಾಷೆ ಒಂದೇ ತೆರನಾಗಿಲ್ಲ. ಇದರಲ್ಲಿಯೇ ಕೆಲವು ಒಳಪ್ರಭೇದಗಳನ್ನು ಕಾಣಬಹುದು. ಪ್ರಭೇದಗಳು ಗೆರೆ ಎಳೆದಂತೆ ಹೇಳಲಾಗದಿದ್ದರೂ, ತೆಲುಗು, ಮರಾಠಿ ರಾಜ್ಯಗಳ ಗಡಿ ಭಾಗದಲ್ಲಿ ಕನ್ನಡ ಮಾತನಾಡುವ ಜನರಿದ್ದರೂ ಭಾಷಾವ್ಯತ್ಯಾಸ ಆಡುನುಡಿಯಲ್ಲಿ ಕಂಡು ಬರುತ್ತದೆ. ಆಡುನುಡಿಗೂ ಗ್ರಾಂಥಿಕ ಭಾಷೆಗೂ ಅನೇಕ ಧ್ವನಿಮಾ ವ್ಯತ್ಯಾಸಗಳಿರುವುದು ಸಾಮಾನ್ಯವಾಗಿರುತ್ತದೆ. "ಎ>ಇ" ಯನ್ನಾಗಿ ಉಚ್ಚರಿಸುವುದು ಧಾರವಾಡದಿಂದ ಬೀದರವರೆಗೆ ಸಾಮಾನ್ಯವಾಗಿದೆ.

ಉದಾ: ಎ>ಇ: ಆನೆ>ಆನಿ, ಒಂಟೆ>ಒಂಟಿ, ಕುದುರೆ>ಕುದುರಿ, ಎಣ್ಣೆ>ಎಣ್ಣಿ, ತಲೆ>ತಲಿ, ಅತ್ತೆ>ಅತ್ತಿ, ಮನೆ>ಮನಿ, ಇತ್ಯಾದಿ ಹಾಡಿನಲ್ಲಿ ಬಂದಿರುವ ಇಂಥ ಪ್ರಯೋಗಗಳು ಉದಾಹರಣೆಗಳಿಂದ ನೋಡಬಹುದಾಗಿದೆ.

ಆನಿ : ಆನಿ ಅಂಬಾರಿ ಕಳುವಿದ ನನ್ನ ಹಡದ ತಂದೀನ ಕರಿಯ ಖಳುವಿದ, ನನ್ನ ಹಂದರದಾಗ ಛಂದ ಮಾಡೋರಿಲ್ಲ ಹಡದಪ್ಪ ಬಾ ನನ್ನ ಸರ್ವಲಗ್ನಕ್ಕ ಸುವ್ವಾಲೋ

ಕುದರಿ : ಕುದರಿ ಕೋಗಿಲ ಖಳುವಿದ ನನ್ನ ಹಿರಿಯ ಅಣ್ಣನ ಕರಿಯ ಖಳುವಿದ

ಒಂಟಿ : ಎಂಟ ಸಾವಿರ ಹೊನ್ನ ಒಂಟಿ ಮ್ಯಾಲ ಹೇರಿಕೊಂಡು ಎಂಟೋರಸ ನಿನ್ನ ಹುಡಕೀದ ಸೋಬಾನವೇ.

ಎಣ್ಣಿ : (ಎಣ್ಣಿ ಹಚ್ಚಿರಿ ನಮ್ಮ ಚಂದ್ರನ ಚಲುವಿಗಿ) ಕಂಚಿನ ಬಟ್ಲಾಗ ಮಿಂಚೆಣ್ಣಿ ತಗೊಂಡು ಕೆಂಚೆರೊಂದ್ಯೆವರೇ,

ಕೆಂಚೆರೊಂದ್ಯೆವರು ನೆರೆದ ಮುತ್ತೈದೇರು ಎಣ್ಣಿ ಹಚ್ಚ ಬನ್ನಿರೇ

ಬಾಲಿ : ಬಾಲಿ ನಿನ್ನ ಮಗನ ಝುಳಕಕ್ಕ ಹರ ಹರ ನಮಶಿವಗೆ ನೈಯ್ಯಣ್ಣಿ.

ಕರಿ : ಹಡದ ತಾಯಿನ ಕರಿಯ ಖಳವೀದ.

ಬ್ಯಾನಿ : ವಾರಿ ಮೂಗುತಿ ವಾರಣಗಿತ್ತಿ ಧೀರೀಲಿ ಬ್ಯಾನಿ ತಿಂದಿದುಳ

ಮೇಲೆ>ಮ್ಯಾಲ : ಹತ್ತ ಸಾವಿರ ಹೊನ್ನ ಎತ್ತಿನ ಮ್ಯಾಲ ಹೇರಿಕೊಂಡು ಹತ್ತೋರಸ ನಿನ್ನ ಹುಡಕೀದ ಸೋಬಾನವೇ.

* ಒ ಓ–ವ/ವಾ

ಜೋಕೆ>ಜ್ವಾಕಿ: ಹಾದಿಗೊಂಟ ಭಾಳ್ ಜ್ವಾಕಿಸತಿಯೊಳ ಪುತ್ರನ ಕೋಲೆಣ್ಣಾ ಕೋಲೆ ಬಾಣನೆ ಬಗಲೀಗಿ ಹಾಯ್ ಕೊಂಡು ರಾಮಚಂದ್ರ, ಮನಿಕಡಿ ಜ್ವಾಕಿ ಲಕ್ಷ್ಮಣ ಕೋಲ.

ಜೋಳ>ಜ್ವಾಳ : ಕಂಚಗಾರ ಮನಿಯಾಗ ಕಂಚಿನ ಭಾಸಿಂಗ ಹೋಗಿ ರಾಜಕುಮಾರ ತೆಗತಂದ ಬೆಳಿಯೋ ಜ್ವಾಳವೇ.

ತಾಲವ್ಯೀಕರಣ:

ಸ>ಚ ಸಂಜಿ>ಚೆಂಜಿ.

ಚೆಂಜಿಲಿ ಅಣ್ಣನ ಮಾರಿ ಸಂದೀಲಿ ಕಂಡ.

* **ಪದಾದಿ 'ವ' ಕಾರಲೋಪ:**

ವಿರಾಟರಾಜ : ಇರಾಟರಾಜನ ಮನಿಯಾಗ ಧಡಧುಡಿ ಬೇಕಂತ ಹಿರಿಯಣ್ಣ ಹೇಳಿದ್ದುರ

ವಿಷ>ಇಸ : ಇಸ ಏರಿ ಧುಂಧ ಬಂದು ಬಿದ್ ಭೂಮಿ ಮ್ಯಾಗ ಕೋಲೆಣ್ಣಾ ಕೋಲೆ.

ಇಷ್ಟು>ಇಟು : ಇಟು ಎಲ್ಲಾ ಆಯ್ತು ಅಳಿಯಾಗೇನ ಕೊಟ್ಟಿ

 ಣ>ಳ : ಲಂಕಾದ ರಾವಳ ಸಭೆದಾಗ ಬಂದಾರೆ, ಬಂದು ಸಭೆದಾಗ ನಿಂತಾರೆ ಕೋಲ.

 ಮಹಾ ಪ್ರಾಣಕ್ಕೆ ಅಲ್ಪಪ್ರಾಣ: ಕ>ಖ = ಸಖಿಯೇ> ಸಕಿಯೇ ಉಪಾಯ ಮಾಡಲೇನ

 ವಿಧ್ಯರ್ಥವನ್ನು ಸೂಚಿಸುವ ಉತ್ತಮ ಪುರುಷ ಬಹುವಚನ ಸರ್ವನಾಮದಲ್ಲಿ, ಅಮ/ಅಮು ಎಂಬ ಪ್ರತ್ಯಯಗಳು ಹತ್ತುತ್ತವೆ.

ಉದಾ: ಮಾಡೋಣ ಮಾಡಾಮು

ಆರುತಿ ಮಾಡೋಣ ಬಾ ಮೇಗವರವ ಕೃಷ್ಣಗೆ, ಆರುತಿ ಬೆಳಗಿರಿ ಹೋಗುತ್ತ ಹರದೇರು ಮುಕ್ಕಣ್ಣ ಶಿವನ ಜಗನ್ನಾಥಗೆ, ಆರುತಿ ಮಾಡಾಮು ಬನ್ನಿರೇ

 ಪುಲ್ಲಿಂಗ ಸ್ತ್ರೀಲಿಂಗ, ನಪುಂಸಕ ಲಿಂಗಗಳಿಗೆ ದೇರು। ದೆರು, ಗೊಳು । ಗೋಳು ಬಹುವಚನ ಪ್ರತ್ಯಯಗಳು ಬಳಕೆಯಾಗುತ್ತವೆ.

ಸ್ತ್ರೀಲಿಂಗ : ಅಕ್ಕ ತಂಗೇರು ನಾವು ಹುತ್ತೀಗಿ ಹೋದೇವು ಸಿರಿಗಂಧದ ಸಿಂಪಿ ಮರತೇವೆ ಸೋ ss

ಪುಲ್ಲಿಂಗ : ನನ್ನಕ್ಕಿಂತ ಚಿಕ್ಕ ನನ್ನಕ್ಕಿಂತ ಸಣ್ಣ ತಮ್ಮ ಬಾರೋ ನನ್ನ ಸರ್ವಲಗ್ಗಣಕ ಸುವ್ವಾಲೋ

ನಪುಂಸಕ : ಗಡಿಬಿಡಿ ಮಾಡ್ತದೆ ಗೌಡರ ನಾಯಿ, ಖುನಾ ಹಿಡಿಯುವುದು ಒಂದು ಕುಲಕರ್ಣಿ ನಾಯಿ.

ಸರ್ವನಾಮಗಳು:

ನಾನು>ನಾ : ಆಸತ್ತರ ನನ್ನ ಮನಿಯೇ ಬ್ಯಾಸತ್ತರ ನನ್ನ ಮನಿಯೇ

ನಾವು>ನಾವು: ನಾವು ನೀವು ಕೂಡಿ ಬಂದೇವು ಬಿಟ್ಟು ಹೋಗಲಿ ಹ್ಯಾಂಗೆ, ಬಿಟ್ಟು ಹೋಗಲಿ ಹ್ಯಾಂಗೇ ಽಽ

ನೀನು>ನಿ : ಅಳಬೇಡ ತಂಗಿನೀ ಅಳಬೇಡ ನಿನ್ನ ಖಳುಹ ಬಂದವರಿಲ್ಲಿ ಉಳುಹಿ ಕೊಂಬವರಿಲ್ಲ ಅಳಬೇಡ ತಂಗಿ ಅಳಬೇಡ

ನೀವು>ನಿವು : ನಾವು ನೀವು ಕೂಡಿ ಬಂದೇವು ಬಿಟ್ಟು ಹೋಗಲಿ ಹ್ಯಾಂಗೇ.

೭.೬ ಪರಿಮಾಣವಾಚಕ:

ಅಷ್ಟು, ಇಷ್ಟು: ಇಷ್ಟು ಎಲ್ಲಾ ಆಯ್ತು ಮಗಳಿಗೇನಕೊಟ್ಟಿ, ಕೂಸ ಕುಡಿಯಲಿ ಮಿಳ್ಳಿ, ಹಾಸ ಹಾಸಲಿ ಮಂಚ, ಗಿಲ್ಲೆಂಬ ಕಾಲುಪಿಲ್ಲ್ಯಾ, ಮನಿ ಪುರುಷರುಂಬ ಕರಎಮ್ಮೀ ಸೋಬಾನವೇ ಽಽ

ವಿಭಕ್ತಿಪ್ರತ್ಯಯ:

ಪ್ರಥಮ: ಊರಿಗೂರು ಗೌಡರ ಮದವಿ ಇದ್ದರ, ಬಾಜಾ ಶನಾಯಿ ಶಂಬೇಳ ಜಂಬೂದ್ವೀಪದಲಿ ನಂಬುಗೆಯೆಂಬುದು ತುಂಬಿತುಳುಕತಿತ್ತು ಶಿವಶಿವ ತುಂಬಿ ತುಳಕತಿತ್ತೊ

ದ್ವಿತೀಯಾ : ವಾದವನ್ನು ಮಾಡಬೇಡ ಕಂಡ್ಯಾ, ವಾದಕ್ವಾದ ಬೆಳೆದು ನಿನ್ನ ಹಾದಿ ತಪ್ಪಿಸುವರು ಮನುಜಾ.

ತೃತೀಯಾ : ಹಸುವನ್ನು ಕಟ್ಟಿದ್ದೇ, ಕರುವನ್ನು ಬಿಟ್ಟಿದ್ದೆ, ಹಾಲನ್ನು ಕರಕೊಂಡು ಒಳಗ್ಹೋದೆ ಮನದಿಂದ ಹಡದಪ್ಪನ ಮನಿಮ್ಯಾಗೆ, ನಾರಿ, ಹಾಕವ್ವಾ ಯಾರಿ.

ಚತುರ್ಥಿ ; ಇಂದ್ರಗೇ ದೇಸಾಯಿ ಹಡದಪ್ಪ ಕೇಳಿದರ, ಘಳಗ್ಯಾಗ ತೊತ್ತ ಖಳವ್ಯಾರೆ ನಾರಿ ಹಾಕವ್ವಾ ಯಾರಿ

ಪಂಚಮಿ: ಲಂಕಾದಿಂದ ರಾವಣ ಸಭೆದಾಗ ಬಂದಾರೆ ಬಂದು ಸಭೆದಾಗ ನಿಂತಾರೆ ಕೋಲ

ಷಷ್ಠಿ : ಹುಗ್ಗೀಯ ಕುಟ್ಟಂದ್ರ ಹಿಗ್ಗೀತ ನನ ಜೀವ, ಹುಗ್ಗಿ ನೀಡ್ಯಾಳೆ ಉಗುರಷ್ಟ

ಸಪ್ತಮಿ : ಮನಿಯೊಳಗ ಭೇದ ಬಗಿಬ್ಯಾಡ.

□□ಸಹಜ ಅಲ್ಪಪ್ರಾಣಗಳನ್ನು ಮಹಾಪ್ರಾಣಗಳನ್ನಾಗಿ ಬಳಸುವುದುಂಟು.

ಉದಾ: ಬ್ಯಾಡ>ಭ್ಯಾಡ, ಚಪ್ಪರ>ಛಪ್ಪರ, ಬಹಳ>ಭಾಳ, ಬೆಳ್ಳಗ>ಭೆಳ್ಳಗ, ಬಾಸಿಂಗ>ಭಾಸಿಂಗ, ಬೀಗರು>ಭೀಗರು, ಬಾವಿ>ಭಾವಿ, ದಾಟು>ಧಾಟು, ಜಗಳ>ಝುಗಳ, ಬಂಗಾರ>ಭಂಗಾರ, ಬೋಗಳು>ಭೋಗಳು, ಕಸ>ಖಸ, ಅಹನ, ಅಹಳ ಎಂಬ ಶಬ್ದಗಳು ಸಂಕ್ಷಿಪ್ತಗೊಂಡು ಹಾನ, ಹಾಳ ಎಂದು ಮಾತಿನಲ್ಲಿ, ಹಾಡಿನಲ್ಲಿ ಸಹಜವಾಗಿ ಬಂದಿದೆ.

ಅಹನ್>ಅ+ಹ್+ಅ+ನ್+ಎ

ಹ್+ಅ+ನ್+ಅ

ಹ್+ಆ+ನ್

ಹಾನ್>ಹಾನ

ಅದೇ ರೀತಿ ಅಹಳ್ ಎಂಬುದು ಕೂಡ ರೂಪಾಂತರ ಹೊಂದಿದೆ.

ಅಹಳ್>ಅ+ಹ್+ಅ+ಳ್+ಅ

ಹ್+ಅ+ಅ+ಳ್

ಹ್+ಅ+ಳ್

ಹಾಳ್>ಹಳ=ಇತ್ಯಾ.

ಅಹುದು ಎಂಬುದು ಆಡುನುಡಿಯಲ್ಲಿ ಹೆಚ್ಚಾಗಿ ಹೊಯಿಂದು ಎಂದು ಬಳಕೆಯಲ್ಲಿದೆ. ಅದೇ ಭಾಷಾ ಪ್ರಭಾವವೂ ಹಾಡುಗಳಲ್ಲಿ ಬಂದಿರುವುದು ಕಾಣುತ್ತೇವೆ. ಹೀಗೆ ಬೀದರ ಜಿಲ್ಲೆಯಲ್ಲಿ ಹಲವು ಭಾಷಾ ಪ್ರಭೇದಗಳು, ಧ್ವನಿಮಾ ವ್ಯತ್ಯಾಸಗಳು ಕಂಡು ಬರುತ್ತವೆ.

ಛಂದಸ್ಸು ಪದ ರಚನಾಗಣ ಪರಿಮಿತಿಯನ್ನು ಹೇಳುವ ರೀತಿ, ಯಾವುದೇ ಪದ್ಯವಾಗಲಿ ಅದು ಛಂದವಿಲ್ಲದೆ ಇರಲಾರದು. ವ್ಯಾಕರಣ ಸೂತ್ರಗಳಿಂದ ಬದ್ಧವಾದ ಗದ್ಯವನ್ನು ಪದ್ಯವಾಗಿ ಮಾಡುವ ಶಕ್ತಿಯು ಛಂದದಲ್ಲಿದೆ. ಷಟ್ಪದಿ, ಅಕ್ಕರ, ತ್ರಿಪದಿ ಮುಂತಾದ ಛಂದಸ್ಸುಗಳನ್ನು ಜಾನಪದ ಸಾಹಿತ್ಯದಲ್ಲಿ ಉಪಯೋಗಿಸ ಹತ್ತಿದ್ದರಿಂದ ನಾಗವರ್ಮನು ತನ್ನ ಕಾಲದಲ್ಲಿ ಅವುಗಳಿಗೆ ಮೆಚ್ಚಿ ಅವುಗಳನ್ನು ತನ್ನ ಛದೋಂಬುಧಿಯಲ್ಲಿ ಸೇರಿಸಿ ಕೊಂಡಿದ್ದಾನೆ.

ಅಂಶಗಣ ಬಂಧಗಳೇ ಅಚ್ಚಗನ್ನಡ ಛಂದ. ಇವು ಅಕ್ಷರ ಹಾಗೂ ಮಾತ್ರಾಗಣ ಬಂಧಗಳಿಂದ ತೀರ ಭಿನ್ನವಾಗಿವೆ. ಈ ಕ್ರಮವು ದ್ರಾವಿಡ ಭಾಷೆಗಳಿಗೆ ವಿಶಿಷ್ಟವಾದ ಛಂದ. ಇಲ್ಲಿ ಅಕ್ಷರಗಳ ಎಣಿಕೆಗಾಗಲಿ, ಮಾತ್ರೆಗಳ ಎಣಿಕೆಗಾಗಲಿ, ಪ್ರಾಧಾನ್ಯವಿಲ್ಲ.

ತಾಳಲಯದೊಡನೆ ಹಿಗ್ಗಿಸಿಯೂ, ಕುಗ್ಗಿಸಿಯೂ ಹಾಡುವ ರೀತಿಯೇ ಇಲ್ಲಿ ಸ್ಪಷ್ಟವಾಗಿ ಕಾಣುತ್ತದೆ, 'ಗುರು' ಒಮ್ಮೆ ಕುಗ್ಗಬಹುದು 'ಲಘು' ಒಮ್ಮೆ ಹಿಗ್ಗಬಹುದು. ಹಿಗ್ಗಿದಾಗ ಅದರ ಮಾತ್ರೆಗಳು ಇಷ್ಟೇ ಎಂದು ನಿರ್ಧರಿಸಲಾಗದು. ಅದು, ಅದನ್ನು ಕೊಂಬೆತ್ತಿ ಹಾಡುವುದನ್ನು ಪೂರ್ಣ ಅವಲಂಬಿಸಿದೆ. ಹೀಗೆ ಹೆಚ್ಚು ಕಡಿಮೆ ಮಾತ್ರೆಗಳು ಸೇರುವುದರಿಂದ ಈ ಬಂಧಗಳನ್ನು ಪರಿಗಣಿಸಲು ಲಾಕ್ಷಣಿಕರು ಬೇರೆ ಯೋಜನೆಯನ್ನು ಕೈಗೊಂಡಿದ್ದಾರೆ. ಅದಕ್ಕಾಗಿಯೇ ಬ್ರಹ್ಮ, ವಿಷ್ಣು, ರುದ್ರಗಣಗಳ ಕಲ್ಪನೆಗೆ ಅವಕಾಶವಾಯಿತು.

ಭಾವದಂತೆ ಹಾಡಿರಿ ಎಂಬುದೇ ಅಂಶಗಣ ಛಂದಸ್ಸು, ಛಂದಸ್ಸು 'ಸ್ವಚ್ಛಂದವೃತ್ತಿ' ಎಂಬರ್ಥವನ್ನೇ ಸೂಚಿಸುವುದು. ಛಂದಸ್ಸಿನ ಡೌಲು ಹಾಡುವುದರಲ್ಲಿ ಅಂಶಗಣ ಛಂದದಲ್ಲಿ ಮಾತ್ರೆಗಳನ್ನು ಹಿಗ್ಗಿಸುವ, ಕುಗ್ಗಿಸುವ ಯೋಜನೆಯಿಂದ ಲಘು, ಗುರುವಿನ ಪ್ರಶ್ನೆಯು ಹೋಗಬಹುದು. ಇಲ್ಲಿ ಮಹತ್ವವಾಗಿ ಬಂದದ್ದು ಲಯದೊಂದಿಗೆ ತಾಳ ಸೇರಿಕೊಂಡಿದೆ.

ಎಲ್ಲ ಜಾನಪದ ಹಾಡುಗಳು ಅಂಶಗಣ ಬಂಧಗಳಲ್ಲಿವೆ. ಅವುಗಳ ಪ್ರಸ್ತಾರವನ್ನು ತಾಳದೊಂದಿಗೆ ಪರೀಕ್ಷಿಸಿ ಹಾಕಬೇಕಾಗುವುದು. ಈ ಹಾಡುಗಳನ್ನು ಕಟ್ಟಿ (ರಚಿಸಿ) ಹಾಡುವ ಹಳ್ಳಿಗನಿಗೆ ಛಂದದ ಯಾವ ಅರಿವೂ ಇರುವುದಿಲ್ಲ. ಅವನಿಗೆ ಸಂಗೀತದ ಜ್ಞಾನವೂ ಇರುವುದಿಲ್ಲ. 'ಲಟಕಿ'ಯೊಡನೆ 'ಹುಸಿ ಪೆಟ್ಟು' ಗಳ ಗತ್ತು ಹಾಗೂ ತಾಳಗಳು ಮಾತ್ರ ಅವನಿಗೆ ತನ್ನತನದಲ್ಲಿ ಗೊತ್ತಿರುವುದು. ಈ ಹುಸಿ ಪೆಟ್ಟುಗಳೇ ಲಾಕ್ಷಣಿಕರು ಅಂಶಗಣಗಳೆಂದು ಕರೆದಿದ್ದಾರೆ. ಹಳ್ಳಿಗರು ಹಾಡುಗಳು ಹುಸಿ ಬಿದ್ದಲ್ಲಿ ತಾಳವಿಲ್ಲ. ಪೆಟ್ಟು ಬಿದ್ದಲ್ಲಿ ತಾಳ ಬಿದ್ದೇತಿರುವುದು. ಆ ತಾಳ ಬಿದ್ದಲ್ಲಿಯೇ ಒಂದು ಅಂಶಗಣ ವಾಗುವುದು.

ವಿ ವಿ ವಿ ವಿ
ಓಂ ಎಂದು । ಕುಟ್ಟೋಣ । ಸೋಂ ಎಂದು । ಬೀಸೋಣ
ವಿ ವಿ ರು ಬ್ರ ವಿ ಬ್ರ
ಓಂ ಸೋಮ । ಎರಡು । ತಿಳಿಯಬೇಕ । ನಾರಿ । ಹಾಕವ್ವಾ । ಯಾರಿ ।
ಬ್ರ ಬ್ರ ವಿ ವಿ
ಓಂ ಸೋಮ । ಎರಡು । ಅಕ್ಷರ । ತಿಳಿದರ ।
ಬ್ರ ಬ್ರ ವಿ ಬ್ರ
ಗುರುಮನೆ । ಕೀಲಿ । ದೊರಕಿತ । ನಾರಿ

ಇಲ್ಲಿ ಹಾಡುವಾಗ ತಾಳಬಿದ್ದಲ್ಲಿ ಪ್ರಸ್ತಾರ ಹಾಕಿ ಅಂಶಗಣಗಳನ್ನು ತೋರಿಸಲಾಗಿದೆ. ಪ್ರತಿಯೊಬ್ಬ ಜಾನಪದ ಸಾಹಿತಿಯು ಅಂಶಗಣಗಳನ್ನರಿತುಕೊಳ್ಳುವುದು ಅತ್ಯಗತ್ಯ.

ಈ ಜಾನಪದ ಹಾಡಿನ ತ್ರಿಪದಿಯಲ್ಲಿ ಎರಡು ಲಘುಗಳು (∪∪) ಬ್ರಹ್ಮಗಣದ ಬದಲಾಗಿ ಬಂದಿವೆ. ನಿಯಮ+ಬದ್ಧ ತ್ರಿಪದಿಗಳಲ್ಲಿ ಸಾಮಾನ್ಯವಾಗಿ ಇಂತಹ ಎರಡು ಲಘುವಿನ ಗಣಗಳು ಕಡಿಮೆ.

ವಿ ವಿ ವಿ ವಿ
ಬಾಲಿಮ್ಯೆ । ನೆರೆದಾಳ । ಬಾಲಿಗೇ । ನೊಯ್ಯಲೆ
ವಿ ಬ್ರ ವಿ
ಬಾಗೀಣ । ತುಂಬ । ಉಡಿಮುತ್ತ ॥ ಸೊ ॥
ಗು ವಿ
ಸೋ । ಅನ್ನಿರೆ ॥ ಪ ॥

ತ್ರಿಪದಿಯಲ್ಲಿ ಎರಡು ಪಾದಗಳನ್ನು ಹಾಡಿದ ಮೇಲೆ 'ಸೋ ಅನ್ನಿರೆ' ಎಂದು ದನಿಗೂಡಿಸುವ ಸೊಲ್ಲನ್ನು ಕೊನೆಯಲ್ಲಿ ಹೇಳುವ ರೂಢಿಯಿದೆ. ಈ ಪದ್ಯಗಳು ತ್ರಿಪದಿಗಳಾದರೂ, ತಾಳಕ್ಕೆ ಸರಿಯಾಗಿ ಹಾಡಲಿಕ್ಕೆ ಬಂದರೂ, ತಾಳ ಬಿಟ್ಟು ಎಳೆದೆಳೆದು ಒಂದು ವಿಶೇಷ ಲಯ ಕ್ಕೆ ಅನುಸಾರವಾಗಿ ಹಾಡುವ ರೂಢಿಯಿದೆ.

ಸಾಂಗತ್ಯ:

ಸಾಂಗತ್ಯವು ಒಂದು ಅಂಶಗಣ ಬಂಧ. ತ್ರಿಪದಿಯಂತೆ ಇದಾದರೂ ಜಾನಪದ ಹಾಡುಗಳಲ್ಲಿ ಸಾಕಷ್ಟು ಬಳಸಲ್ಪಟ್ಟಿರುವುದು. ಅವರ ಹಾಡುಗಳು ಸಾಂಗತ್ಯದಲ್ಲಿ ಬರೆಯಲ್ಪಟ್ಟಿದ್ದರೂ ಅಲ್ಲಿ ವಿವಿಧ ಪ್ರಯೋಗಗಳು ಕಂಡುಬರುತ್ತವೆ.

ವಿ ವಿ ವಿ ಬ್ರ
ಏಳೇಳ । ಬೀಗೂತಿ । ನಿಂದೆಷ್ಟು । ನಿದ್ರೆ । ॥ ಪ ॥
ವಿ ರು ರು ವಿ
ಗುರುಲಿಂಗ । ಜಂಗಮದ । ಹೊರತುಪರ । ದೈವವ ।

ವಿ ವಿ ವಿ ಗು
ಅರಿಯನು । ಸದ್ಭಕ್ತ । ಗುಣವಂತ । ನು
ವಿ ವಿ ವಿ ವಿ
ಸರಿಯಾದ । ಹೆಂಡತಿ । ಅಲ್ಲನ । ಮ್ಮಣ್ಣಗ ।
ವಿ ವಿ ವಿ ಗು
ಸಿರಿಗೇಡಿ । ನೀನೆಲ್ಲಿ । ಕುಳಿತಿದ್ದೇ । ಳ

ಇಲ್ಲಿ ರುದ್ರಗಣವೂ ಬಂದಿದೆ. ಹಾಡುವುದೇ ಹಳ್ಳಿಗರ ಮೂಲ ಉದ್ದೇಶವಾದುದರಿಂದ ಅವರು ಮಾತ್ರೆಗಳನ್ನು ಗಣನೆ ಮಾಡದೆ ತಾಳಲಯಾಲಾಪಗಳ ಸರಾಗ ಧಾಟಿಯೊಡನೆ ಹೆಚ್ಚು ಕಡಿಮೆ ಮಾಡಿ ಹಾಡಿ ತಣಿಸಿದ್ದಾರೆ.

ಬ್ರ ವಿ ಬ್ರ
ಒಂದು । ಸುತ್ತಿನ । ಕ್ವಾಟಿ ।
ವಿ ಬ್ರ ವಿ ಬ್ರ
ಅದರೊಳು । ಹೊಂದಿ । ಕುಂತಾನ । ಬಸವ ।
ವಿ ರು
ಬಸವಗ । ಬಸವೆನ್ನಿರೆ ।
ವಿ ವಿ ರು
ಬಸವನ । ಪಾದಕ । ಶರಣೆನ್ನಿರೆ ।

ಚತುರ್ರಸ ಜಾತಿ ಏಕತಾಳದಲ್ಲಿದೆ ಈ ಹಾಡು

ಬ್ರ ವಿ ವಿ ವಿ ಬ್ರ ವಿ ವಿ
ಗಂಡ । ಹೆಂಡೀರ । ಮನವೆರ । ಡಾದರೆ । ದಂಡಾ । ಕೊಡಿಸುವೆ । ಮಲ್ಲಯ್ಯ ।
ಬ್ರ ವಿ ಬ್ರ ವಿ ಬ್ರ ಬ್ರ ವಿ
ಗಂಡ । ಹೆಂಡರ । ಮನವೊಂ । ದಾದರೆ । ನಂದಾ । ದೀಪೋ । ಮಲ್ಲಯ್ಯ ।

ಈ ಹಾಡು ಏಕ ತಾಳದಲ್ಲಿದ್ದು 'ಯಮಕ' ವನ್ನೊಳಗೊಂಡಿದೆ. ಪರಿಪೂರ್ಣ ಜ್ಞಾನವುಳ್ಳ ಹಳ್ಳಿಗರು ತಮ್ಮ ಹಾಡುಗಳಲ್ಲಿ ಮತ್ತು ತಾಳದಲ್ಲಿಯೂ ವೈವಿಧ್ಯತೆಯನ್ನು ತೋರಿಸಿದ್ದಾರೆ ಈ ವೈವಿಧ್ಯತೆಯ ಅರಿಕೆಯಲ್ಲಿಯೇ ಸಂಗೀತ ಕಲಾ ಕೋವಿದನ ಕಲೆಯು ಬೆಳೆದು ಬಿಡುವುದು.

ತ್ರಿಪದಿ:

ತ್ರಿಪದಿಯೇ ಜನಪದ ಸಾಹಿತ್ಯದ ಜೀವನಾಡಿ. ಈ ಛಂದೋಬಂಧ ಚಿಕ್ಕದಾಗಿದ್ದು, ಹೇಳಬೇಕೆಂದಿರುವ ವಿಷಯ ನೇರವಾಗಿ ಖಚಿತವಾಗಿ ಹೇಳಲಿ ಬೇಗಮುಗಿಸಲು ತ್ರಿಪದಿಯು ಒಳ್ಳೆಯ ಅನುಕೂಲಕರವಾದ ಛಂದೋಬಂಧವಾಗಿದೆ. ಶಾಸನಗಳಲ್ಲಿ, ಜನಪದ ಗೀತೆಗಳಲ್ಲಿ ಎಲ್ಲೆಲ್ಲೂ ಬಳಕೆಯಾಗಿವೆ. ಮೊದಮೊದಲು ಅಂಶಗಣಾವಲಂಬಿಯಾದ ತ್ರಿಪದಿಯನ್ನು ಮಾರ್ಗಕ್ಕೆ ತಿರುಗಿಸಿ ಮಾತ್ರಾಗಣವನ್ನಾಗಿಯೂ ಮಾಡಿದ್ದಾರೆ. ಆದರೆ ಅಂಶಗಣದ ತ್ರಿಪದಿಯೇ ಹೆಚ್ಚು. ಮೊದಲ ಪಾದದಲ್ಲಿ ನಾಲ್ಕು ವಿಷ್ಣುಗಣ, ಎರಡನೇ ಪಾದದಲ್ಲಿ ವಿ: ಬ್ರ, ವಿ, ವಿ: ಗಳು ಮೂರನೆಯ ಸಾಲಿನಲ್ಲಿ ವಿ: ಬ್ರ: ವಿ ಗಣಗಳು ಬರುತ್ತವೆ.

ವಿ ವಿ ವಿ ವಿ
ಊರಿಗಿ । ಹೋಗುತ । ಯಾರೀಗಿ । ಶರಣಂದ ।
ವಿ ಬ್ರ ವಿ ವಿ
ಕಟ್ಟಿಮ್ಯಾ । ಲಿರುವ । ಬಸವಣ್ಣ । ನಿನಕಂಡೆ ।
ವಿ ಬ್ರ ವಿ
ಹಾದ್ಯಾಗ । ಕೈಯ । ಮುಗದೇನೆ ।

ಅಲಂಕಾರ :

ಕವಿ ದರ್ಶನವೇ ಕಾವ್ಯ, ಕವಿ ಅನುಭವಿಸಿದ ಆನಂದವನ್ನು ಸೌಂದರ್ಯವನ್ನು ಅಲಂಕಾರಿಕವಾಗಿ ವರ್ಣಿಸಿದಾಗ ಅದು ಕಾವ್ಯವಾಗುತ್ತದೆ. ಸಹಜವಾದುದನ್ನು ಒಪ್ಪ ಓರಣದಿಂದ ಮೆರಗುಗೊಳಿಸಿ ಹೇಳುವುದೇ ವರ್ಣನೆಯಾಗುತ್ತದೆ. ಸಾಹಿತ್ಯ, ಶಿಲ್ಪ, ನೃತ್ಯಗೀತ ಮುಂತಾದ ಕಲೆಗಳು ಅಲಂಕಾರಿಕವಾಗಿ ಪ್ರಸ್ತುತ ಪಡಿಸಿದಾಗ ಇನ್ನಷ್ಟು ಶೋಭೆಬರುವುದು.

ಹೆಣ್ಣಿನ ಸೌಂದರ್ಯವನ್ನು ವರ್ಣಿಸದ ಕವಿಯೇ ಇಲ್ಲ. ಹೆಣ್ಣಿಗೆ ತಾನೇ ಚಲುವೆ ಎಂಬ ಭಾವನೆ ಇರುತ್ತದೆ. ಇನ್ನೊಬ್ಬಳ ಸೌಂದರ್ಯ ವರ್ಣಿಸುವುದು ಅಪರೂಪವೇ. ಆದರೂ ಸರಳ ಸಹಜ ಸೌಂದರ್ಯ ನೋಡಿ ಮನದುಂಬಿ ಹಾಡಿದವರುಂಟು.

ನಿಂಬೆಯ ಹಣ್ಣಿಂಗೆ ತುಂಬಿದಾ ಮೈಯೊಳೆ
ಧ್ಯಾನ ಬಿತ್ತಲ್ಲೆ ನಿನಮ್ಯಾಲ । ಮನಸು ಬಿತ್ತಲ್ಲೆ ನಿನಮ್ಯಾಲ
ಮನಸು ಬಿತ್ತಲ್ಲೆ ನಿನ ಮ್ಯಾಲ । ಕನಸು ಬಿತ್ತಲ್ಲೆ ನಿನ ಮ್ಯಾಲ.

ಈ ಹಾಡಿನಲ್ಲಿ ಶಿಷ್ಟ ಸಾಹಿತ್ಯದ ಪ್ರಭಾವ ಎದ್ದು ಕಾಣುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಹೆಣ್ಣಿನ ಬಾಹ್ಯ ಸೌಂದರ್ಯಕ್ಕಿಂತ ಅಂತರಂಗದ ಸೌಂದರ್ಯಕ್ಕೆ ಹೆಚ್ಚು ಒತ್ತು ಕೊಡಲಾಗಿದೆ.

ಚೆಲುವು ಚೆಲುವಂತ ಆಸೆಗೆ ಬೀಳಲಿ ಬ್ಯಾಡ
ಚೆಲುವಿದ್ದರಿರಲಿ ಗುಣವಿಲ್ಲ । ಗುಂಡದ ನೀರ
ತಿಳಿಯಿದ್ದರಿರಲಿ ಹುಳ ಭಾಳ

ಉಪಮಾ:

ಸಂಗಾತಿ ಈ ಹೆಣ್ಣು ಜೆಂಬುನೇರಳೆ ಹಣ್ಣು
ಮುಂಗೈಯ ಹಿಡದು ನಡೆಸುವಳು । ಮುಖಭಾವ
ಮುಂಗಾರು ಮಿಂಚು ಹೊಳೆದಂಗೆ.

ಬಾಳೆಯ ಸುಳಿಯಂಗೆ ಬಿಳಕೋಳೆ ಎನ ಚಲುವೆ
ಧ್ಯಾನ ಬಿತ್ತಲ್ಲೆ ನಿನಮ್ಯಾಲೆ । ಮನಸು ಬಿತ್ತಲ್ಲೆ ನಿನಮ್ಯಾಲೆ
ಕನಸು ಬಿತ್ತಲ್ಲೆ ನಿನ ಮ್ಯಾಲೆ.

ರೂಪಕಗಳು:

ಕಾಮಕಸ್ತೂರಿ ನಿನ್ನ ಕಾಣದಲೆ ಇರಲಾರೆ
ಮಲ್ಲೀಗಿ ಮಾಯ ಬಿಡಲಾರೆ । ಸಮುದುರದ
ಮುತ್ತ ನಿನ್ನಗಲಿ ಇರಲಾರೆ.

ಕಮಲದ ಹೂ ನಿನ್ನ ಕಾಣದೆ. ಇರಲಾರೆ
ಮಲ್ಲೀಗಿ ಮಾಯೆ ಬಿಡಲಾರೆ । ಕೆದಿಗಿ
ಗರಿ ನಿನ್ನ ಅಗಲಿ ಇರಲಾರೆ.

ಈ ಅಲಂಕಾರಗಳಲ್ಲಿ ಬರುವ ವರ್ಣನೆಗಳು ಹೋಲಿಕೆಗಳು ನಿತ್ಯಗಟ್ಟಲೆಯ ವ್ಯವಹಾರದಲ್ಲಿ ಬರುವ ವಸ್ತುಗಳಿಗೆ ಹೋಲಿಸಿರುವುದು ಕಂಡುಬರುತ್ತದೆ. ಈ ಅಲಂಕಾರಗಳಲ್ಲದೆ ಕಾವ್ಯದಲ್ಲಿ ಬಂದಿರುವ ಹಲವು ಪದಪುಂಜಗಳು ಹಾಡುಗಳಿಗೆ ಶೋಭೆ ತಂದಿವೆ. ಕವಿ ಸಮಯವಾಗಲಿ, ಮಹೋನ್ನತ ಪ್ರತಿಮೆಗಳಾಗಲಿ ಇಲ್ಲಿ ಕಂಡುಬರುವುದಿಲ್ಲ. ಪರಿಮಿತವಾದ ವರ್ಣನೆಗಳೇ ತತ್‌ಕ್ಷಣದಲ್ಲಿ ಪ್ರಭಾವಿಯಾಗಿ ಕಾವ್ಯ ಸೌಂದರ್ಯದ ಆನಂದಾನುಭೂತಿ ಕೊಡುವಂತಿದೆ.

೭.೩ ಇತರ ಭಾಷೆಗಳ ಪ್ರಭಾವ:

ಹೈದ್ರಾಬಾದ ಕರ್ನಾಟಕ ವಿಭಾಗದ ಬೀದರ್ ಜಿಲ್ಲೆಯ ಮೇಲೆ ಎಲ್ಲಾ ಭಾಷೆಗಳ ಪ್ರಭಾವ ಬೇರೆ ಜಿಲ್ಲೆಗಳಿಗಿಂತಲೂ ಹೆಚ್ಚಾಗಿ ಕಂಡುಬರುತ್ತದೆ. ಐದನೇ ಶತಮಾನದಿಂದೀಚೆಗೆ. ಅನೇಕ ಅರಸು ಮನೆತನಗಳು ವಿಶೇಷವಾಗಿ ದೆಹಲಿಯ ಸುಲ್ತಾನರು, ಬಹಮನಿ ಸುಲ್ತಾನರು, ಬರೀದಶಾಹಿ ಸುಲ್ತಾನರು ಮೊಘಲರು, ನಿಜಾಮರು ಈ ಭಾಗದ ಮೇಲೆ ಆಳಿ ಹೋಗಿದ್ದಾರೆ. ಕೆಲ ಕಾಲ ಶಿವಾಜಿ, ಯಾದವರಂಥವರ ವಶದಲ್ಲಿ ಈ ಭಾಗ ಇತ್ತೆಂದು ತಿಳಿದುಬರುತ್ತದೆ. ಅಲ್ಲದೆ ಆಂಧ್ರ ಮತ್ತು ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಈ ಜಿಲ್ಲೆಗಳ ಜನರ ಭಾಷೆಯಲ್ಲಿ ಅನ್ಯ ರಾಜ್ಯಗಳ ಭಾಷೆಗಳು ಕೂಡಿಕೊಂಡಿವೆ. ಹೀಗೆ ಈ ಭಾಗದ ಮೇಲೆ ವಿಶೇಷವಾಗಿ ಮರಾಠಿ, ಹಿಂದಿ, ಭಾಷೆಗಳು ತೀವ್ರವಾದ ಪ್ರಭಾವ ಬೀರಿರುವುದನ್ನು ನಾವು ನೋಡಬಹುದು. ಇದಕ್ಕೆ ಹಲವಾರು ಸಾಕ್ಷ್ಯಾಧಾರಗಳಿವೆ.

ಗಡಿಯಾಚೆಗಿನ ಮಹಾರಾಷ್ಟ್ರದಲ್ಲಿರುವ ಕನ್ನಡ ಭಾಷಿಕರು ಅಲ್ಲಿಯ ರಾಜ್ಯಭಾಷೆ ಮರಾಠಿಯನ್ನು ಕಲಿತು ಮುಖ್ಯವಾಹಿನಿಯಲ್ಲಿ ಬೆರೆತಿದ್ದಾರೆ. ಅದರಂತೆಯೇ ನಮ್ಮ ಕರ್ನಾಟಕದ ಗಡಿಯಲ್ಲಿರುವ ಮರಾಠಿಗರು ಕನ್ನಡವನ್ನು ಕಲಿತು ಪರಸ್ಪರ ಸಹಯೋಗದಿಂದ ಬಾಳುತ್ತಿದ್ದಾರೆ. ಇಲ್ಲಿಯ ಜನಪದರು ಭಾಷಾ ಭೇದವನ್ನು ಮರೆತು ಭಾವೈಕ್ಯತೆಯಿಂದ ಬಾಳು ನಡೆಸುತ್ತಿದ್ದಾರೆ.

ಈ ಮರಾಠಿ ಜಾನಪದ ಹಾಡುಗಳಲ್ಲಿ ಮರಾಠಿ ಸಂಸ್ಕೃತಿಯ ದರ್ಶನವಾಗಿದೆ. ಈ ಜಾನಪದ ಗೀತೆ ಪೂರ್ತಿ ಓದಿದಾಗ ಒಂದು ರೀತಿಯ ಧನ್ಯತೆ ಕಂಡುಬರುವುದು. ಕರ್ನಾಟಕ ಗಡಿ ಬೀದರ್ ಜಿಲ್ಲೆಯಲ್ಲಿ ದೊರಕುವ ಹೆಣ್ಣುಮಕ್ಕಳ ಮರಾಠಿ ಜಾನಪದ ಹಾಡುಗಳಲ್ಲಿ ಕೌಟುಂಬಿಕ, ಸಾಮಾಜಿಕ, ಪರಿಸರ, ಪಶುಪಕ್ಷಿಗಳ ಕುರಿತು ಹಾಡುಗಳನ್ನು ನೋಡಬಹುದಾಗಿದೆ. ಉದಾಹರಣೆಗೆ ಲಗ್ನದ ಹಾಡುಗಳಲ್ಲಿ ಹೆಣ್ಣೊಪ್ಪಿಸುವ, ಜೋಗುಳ, ಭಜನೆಯ ಹಾಡುಗಳು ಕಾಣುತ್ತೇವೆ. ಸಾಮಾಜಿಕ ಹಾಡುಗಳಲ್ಲಿ ರಜಾಕಾರರ ಹಾಡು ಕಂಡು ಬರುತ್ತವೆ. ಕಳೆಕೀಳುವಾಗಿನ ಹಾಡು ಬಹು ಸುಂದರವಾಗಿ ಮೂಡಿಬಂದಿವೆ. ಒಂದೊಂದು ಹಾಡುಗಳು ಒಂದೊಂದು ಜೀವನ ಮೌಲ್ಯಗಳನ್ನು ಬಿತ್ತರಿಸುತ್ತವೆ. ಈ ಹಾಡುಗಳಲ್ಲಿ ಮುಖ್ಯವಾಗಿ ಗಡಿ ಭಾಷೆಯ ಪ್ರಭಾವವಿದೆ. ಬೀದರ ಜಿಲ್ಲೆಯ ಸುತ್ತಲಿರುವ ಮರಾಠವಾಡದ ಭಾಷೆಗೆ ಹೋಲುತ್ತದೆ. ಗಡಿಭಾಗದಲ್ಲಿರುವ ಮರಾಠಿ ಜಾನಪದ ಹಾಡುಗಳ ಸಂಗ್ರಹಕಾರ್ಯ, ಅಧ್ಯಯನ ಇಂದು ಅತ್ಯಾವಶ್ಯಕವಾಗಿದೆ. ಕನ್ನಡ ಭಾಷೆಯಷ್ಟೆ ಅಲ್ಲ ಮರಾಠಿ ಜಾನಪದ ಹಾಡುಗಳು ದಿನನಿತ್ಯ ಕನ್ನಡಿಗರ ಜೀವನದಲ್ಲಿ ಹಾಸುಹೊಕ್ಕಾಗಿವೆ. ಕನ್ನಡ ಜಾನಪದದಷ್ಟೆ ಮರಾಠಿ ಜಾನಪದ ಹಾಡುಗಳು ಶ್ರೀಮಂತವಾಗಿವೆ. ಇವುಗಳನ್ನು ಸಂಗ್ರಹಿಸದೇ ಇದ್ದಲ್ಲಿ ಆಯಾ ರಾಜ್ಯ ಭಾಷೆಗಳ ಪ್ರಭಾವದಿಂದ ಜಾನಪದ ಸಾಹಿತ್ಯ ಅಳಿದು ಹೋಗಬಹುದು. ಆದರೆ ಇಂದಿನ ವೈಜ್ಞಾನಿಕ ಸಾಧನೆಗಳಿಂದಾಗಿ ಮರಾಠಿ ಜಾನಪದದ ಧ್ವನಿ ಟಿ.ವೀ. ರೇಡಿಯೋ ಇತ್ಯಾದಿಗಳನ್ನು ಕುರಿತು ಮಿಡಿಯಬಹುದು. ಕರ್ನಾಟಕದ ಗಡಿಯ ಜಾನಪದ ಸಂಗ್ರಹ ಅತ್ಯಾವಶ್ಯಕವಾಗಿದೆ.

ವಿಶೇಷವಾಗಿ ಈ ಹಾಡುಗಳು ಬೀದರ್ ಜಿಲ್ಲೆಯ ಗಡಿಪ್ರದೇಶವಾದ ಭಾಲ್ಕಿ, ಕಮಲನಗರ, ಬಸವಕಲ್ಯಾಣ, ಔರಾದ, ಹುಲಸೂರುಗಳಲ್ಲಿ ಕಂಡುಬರುತ್ತವೆ. ಕನ್ನಡ ಜಾನಪದ ಹಾಡುಗಳಿಗಿಂತಲೂ ಮರಾಠಿ ಭಾಷೆಯ ಜಾನಪದ ಹಾಡುಗಳು ಇಲ್ಲಿ ಕಂಡುಬರುತ್ತವೆ ಎಂದರೆ ತಪ್ಪಾಗಲಾರದು. ಮನೆಯಿಂದ ಹೊರಗೆ ಬಂದರೆ ಸಾಕು ಮರಾಠಿ ಭಾಷೆಯೇ ಹೆಚ್ಚು ಬಳಕೆಯಲ್ಲಿ ಕಂಡುಬರುತ್ತವೆ. ಹೀಗೆ ಹಲವಾರು ಭಾಷೆಗಳ ಸಂಗಮವನ್ನು ಮಹಿಳಾ ಹಾಡುಗಳ ಮುಖಾಂತರವಾಗಿ ಗುರುತಿಸಬಹುದಾಗಿದೆ.

ಅಧ್ಯಾಯ: ಎಂಟು

ಸಮಾರೋಪ

೮.೧ ಅಧ್ಯಾಯದ ಫಲಿತಗಳು

೮.೨ ಅನುಬಂಧ

೮.೩ ಪರಾಮರ್ಶನ ಗ್ರಂಥಗಳು

೮.೩.೧ ವಕ್ತೃ ವಿವರ

೮.೩.೨ ಪ್ರಾದೇಶಿಕ ಪದಗಳ ಅರ್ಥ

೮.೩.೩ ಮರಾಠಿ ಪದಗಳ ಅರ್ಥ

೮.೩.೪ ಬೀದರ್ ಜಿಲ್ಲೆಯ ನಕ್ಷೆ

೮.೩.೫ ಛಾಯಚಿತ್ರಗಳು

ಅಧ್ಯಾಯ: ಎಂಟು

ಸಮಾರೋಪ

ಅನಾದಿಕಾಲದಿಂದಲೂ ಮಾನವನ ಬದುಕಿನ ಒಂದು ಭಾಗವಾಗಿ ಬೆಳೆದು ಬಂದಿರುವ ಜಾನಪದ ಸಾಹಿತ್ಯವು ತನ್ನದೇ ಆದ ಮಹತ್ವವನ್ನು ಒಳಗೊಂಡಿದೆ. ಭಾರತವು ಮೂಲತಃ ಮಾತೃ ಪ್ರಧಾನ ನೆಲೆಯ ಸಂಸ್ಕೃತಿಯನ್ನು ಒಳಗೊಂಡಿದ್ದು, ಇಲ್ಲಿ ಮಹಿಳೆಯು ಪುರುಷನಷ್ಟೇ ಸರಿ ಸಮಾನವಾದ ಅಧಿಕಾರವನ್ನು ಹೊಂದಿದವಳಾಗಿದ್ದಾಳೆ. ಆದರೆ ಆಕ್ರಮಣ ಸಂಸ್ಕೃತಿಯ ವೈದಿಕತೆಯು ಇಲ್ಲಿಗೆ ಪ್ರವೇಶ ಮಾಡಿದ ತರುವಾಯದಲ್ಲಿ ಇಲ್ಲಿನ ಮೂಲ ಸಂಸ್ಕೃತಿಯ ಮಹಿಳೆಯ ಎಲ್ಲಾ ಅಧಿಕಾರಗಳನ್ನು ಕಿತ್ತು, ಮಹಿಳೆಯನ್ನು ನಾಲ್ಕು ಗೋಡೆಗಳ ಮಧ್ಯೆ ಬಂಧಿಸಲಾಗಿದೆ. ಈ ಆಕ್ರಮಣ ಮಹಿಳೆಯರ ವಿಚಾರದಲ್ಲಿ ಇಷ್ಟಕ್ಕೆ ನಿಲ್ಲದೆ, ಮಹಿಳೆಯು ಯಾವುದೇ ಸ್ವತಂತ್ರ್ಯ ಕಾರ್ಯವನ್ನು ಮಾಡುವುದಕ್ಕೆ ಯೋಗ್ಯಳಲ್ಲ ಎಂಬುದಾಗಿ ಬಿಂಬಿಸಿಕೊಂಡು ಬಂದಿದೆ. ಈ ನಿಲುವುಗಳನ್ನು ಧರ್ಮಶಾಸ್ತ್ರಗಳ ಅಡಿಯಲ್ಲಿ ಜಾರಿಗೆ ತಂದು ಮಹಿಳೆಯರ ಎಲ್ಲಾ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ.

ವೈದಿಕತೆಯು ಎಷ್ಟೆಲ್ಲ ಕುತಂತ್ರಗಳನ್ನು ಪ್ರದರ್ಶಿಸಿ ತನ್ನ ಕ್ರೌರ್ಯವನ್ನು ಮೆರೆದರೂ ಸಹ, ನಮ್ಮ ಗ್ರಾಮೀಣ ಭಾಗದ ಮಹಿಳೆಯರು ಮಾತ್ರ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಅಭಿವ್ಯಕ್ತಿಗೊಳಿಸುವ ನೆಲೆಯಲ್ಲಿ ಮೌಖಿಕ ಸಾಹಿತ್ಯ ಪರಂಪರೆಯೊಂದನ್ನು ರೂಪಿಸಿಕೊಂಡು ಬಂದಿದ್ದಾರೆ. ಈ ಸಾಹಿತ್ಯಕ್ಕೆ ಯಾವುದೇ ತರಹದ ಬರವಣಿಗೆಯ ಆಸರೆಯು ಇಲ್ಲದೆಯೂ ಅದನ್ನು ಮೌಖಿಕವಾಗಿ ಪಾಲಿಸಿಕೊಂಡು, ಪೋಷಿಸಿಕೊಂಡು ಬಂದ ಕೀರ್ತಿಯು ನಮ್ಮ ಜಾನಪದ ಮಹಿಳೆಯರಿಗೆ ಸಲ್ಲುತ್ತದೆ. ಇಂತಹ ಜಾನಪದವು ತನ್ನದೇ ಆದ ವಿಶಿಷ್ಟತೆಯನ್ನು ಒಳಗೊಂಡಿದ್ದು, ಪ್ರಾದೇಶಿಕವಾರು ವಿಭಿನ್ನ ನೆಲೆಯಲ್ಲಿ ಬೆಳೆದುಬಂದಿದೆ.

ಪ್ರಸ್ತುತ ಅಧ್ಯಯನದಲ್ಲಿ ಬೀದರ್ ಜಿಲ್ಲಾ ಮಹಿಳಾ ಜಾನಪದ ಹಾಡುಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದು, ಇವುಗಳಲ್ಲಿ ಅಡಗಿರಬಹುದಾದ ವಿಭಿನ್ನ ಆಯಾಮಗಳನ್ನು ಸಂಶೋಧನೆಗೆ ತೊಡಗಿಸಿಕೊಳ್ಳಲಾಗಿದೆ. ಬೀದರ್ ಜಿಲ್ಲೆಯು ಕರ್ನಾಟಕದ ಇತರ ಪ್ರಾಂತ್ಯಗಳಿಗಿಂತ ಭಿನ್ನವಾಗಿರುವುದು ಕಂಡುಬರುತ್ತದೆ. ಆದ್ದರಿಂದ ಈ ಭಾಗದ ಜಾನಪದ ಸಾಹಿತ್ಯದ ಮೂಲಕವಾಗಿ ಇದುವರೆಗೆ ಶಿಷ್ಟ ಸಾಹಿತ್ಯದ ದಾಳಿಯಿಂದ ನಿರ್ಲಕ್ಷ್ಯಕ್ಕೆ ಗುರಿಯಾಗಿರುವಂತಹ ಜಾನಪದ ಮೌಖಿಕ ಸಾಹಿತ್ಯದ ಮೂಲಕವಾಗಿ ಹೊಸದೊಂದು ಚರಿತ್ರೆಯನ್ನು ಹುಡುಕುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದ ಅಡಿಯಲ್ಲಿ ಕೈಗೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಅಧ್ಯಯನದ ನಿರ್ದಿಷ್ಟ ವ್ಯಾಪ್ತಿಯ ದೃಷ್ಟಿಯಿಂದಾಗಿ ಬೀದರ್ ಜಿಲ್ಲೆಯ ಮಹಿಳಾ ಜಾನಪದ ಹಾಡುಗಳನ್ನು ಸಂಶೋಧನೆಯ ಪ್ರಮುಖ ಕೇಂದ್ರವಾಗಿ ಗುರುತಿಸಿಕೊಳ್ಳಲಾಗಿದೆ. ಈ ಭಾಗದಲ್ಲಿನ ಮಹಿಳಾ ಜಾನಪದ ಹಾಡುಗಳು ಇಲ್ಲಿನ ಪ್ರಾದೇಶಿಕತೆಯನ್ನು ಅರಿಯುವುದಕ್ಕೆ ಅತ್ಯಂತ ಮಹತ್ವದ ದಾಖಲೆಯನ್ನು ಒದಗಿಸುವ ಪ್ರಮುಖ ಆಕರಗಳಾಗಿ ಕಂಡುಬರುತ್ತವೆ. ಆದ್ದರಿಂದಾಗಿ ಈ ಭಾಗದ ಮಹಿಳಾ ಜಾನಪದ ಹಾಡುಗಳನ್ನು ವಿವಿಧ ನೆಲೆಯಲ್ಲಿ ವರ್ಗೀಕರಿಸಿಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ವರ್ಗೀಕರಣದಲ್ಲಿ ಕಂಡುಬರುವ ಪ್ರಮುಖವಾದ ಅಂಶಗಳೆಂದರೆ, ೧. ಜೀವನಾವರ್ತನ ಮಹಿಳಾ ಜಾನಪದ ಹಾಡುಗಳು, ೨. ವಾರ್ಷಿಕಾವರ್ತನ ಮಹಿಳಾ ಜಾನಪದ ಹಾಡುಗಳು, ೩. ಕ್ರಿಯಾವರ್ತನ ಮಹಿಳಾ ಜಾನಪದ ಹಾಡುಗಳು ಎಂಬುದಾಗಿ ಗುರುತಿಸಿಕೊಳ್ಳಲಾಗಿದೆ. ಈ ವಿಭಾಗೀಕರಣದ ಅಡಿಯಲ್ಲಿ ಬೀದರ್ ಜಿಲ್ಲೆಯ

ಜನಮಾನಸದಲ್ಲಿ ನೆಲೆಯೂರಿರುವ ಮತ್ತು ಆಧುನಿಕ ಭರಾಟೆಯಲ್ಲಿ ಅಳಿವಿನ ಅಂಚಿನಲ್ಲಿರುವ ಮಹಿಳಾ ಜಾನಪದ ಹಾಡುಗಳನ್ನು ಅಧ್ಯಯನಕ್ಕೆ ಗುರಿಪಡಿಸಲಾಗಿದೆ.

ಬೀದರ್ ಜಿಲ್ಲೆಯು ಕರ್ನಾಟಕದ ಆಯಕಟ್ಟಿನ ಪ್ರದೇಶವಾಗಿದ್ದು, ಇಲ್ಲಿ ವಿವಿಧ ಧರ್ಮ, ಭಾಷೆ, ಜನಾಂಗ ಹಾಗೂ ಸಂಸ್ಕೃತಿಯ ಸಮ್ಮಿಳಿತವನ್ನು ಗುರುತಿಸಬಹುದಾಗಿದೆ. ಈ ಎಲ್ಲದರ ಪ್ರಭಾವದ ನಡುವೆ ತನ್ನತನವನ್ನು ಕಾಪಾಡಿಕೊಂಡು ಬೆಳೆದು ಬಂದಿರುವ ಮಹಿಳಾ ಜಾನಪದ ಹಾಡುಗಳ ಮಹತ್ವವನ್ನು ತಿಳಿಯುವ ಮತ್ತು ಈ ಮಹಿಳಾ ಹಾಡುಗಳಲ್ಲಿ ಅಡಗಿರಬಹುದಾದ ತಾತ್ವಿಕ ಧೋರಣೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸುವ ಪ್ರಯತ್ನವನ್ನು ಕೈಗೊಳ್ಳಲಾಗಿದೆ. ಬೀದರ್ ಪ್ರಾಂತ್ಯದಲ್ಲಿ ಕಂಡುಬರುವ ಮಹಿಳಾ ಜಾನಪದ ಹಾಡುಗಳ ಮೂಲಕವಾಗಿ ಇಲ್ಲಿನ ಪ್ರಾದೇಶಿಕತೆಯಲ್ಲಿ ಜೀವಂತವಾಗಿರುವ ಸಾಂಸ್ಕೃತಿಕ ಆಯಾಮಗಳನ್ನು ಗುರುತಿಸಲಾಗಿದೆ.

ಹೈದ್ರಾಬಾದ್ ಕರ್ನಾಟಕ ಭಾಗದ ಬೀದರ್ ಜಿಲ್ಲೆಯ ಮೇಲೆ ಎಲ್ಲಾ ಭಾಷೆಗಳ ಪ್ರಭಾವ ಬೇರೆ ಜಿಲ್ಲೆಗಳಿಗಿಂತಲೂ ಹೆಚ್ಚಾಗಿ ಕಂಡುಬರುತ್ತದೆ. ಐದನೇ ಶತಮಾನದಿಂದೀಚೆಗೆ ಅನೇಕ ಅರಸು ಮನೆತನಗಳು ವಿಶೇಷವಾಗಿ ದೆಹಲಿಯ ಸುಲ್ತಾನರು, ಬಹಮನಿ ಸುಲ್ತಾನರು, ಬರೀದ್‌ಶಾಹಿ ಸುಲ್ತಾನರು, ಮೊಘಲರು, ನಿಜಾಮರು, ಕೆಲಕಾಲ ಶಿವಾಜಿ, ಯಾದವರಂಥವರ ವಶದಲ್ಲಿ ಈ ಭಾಗವಿತ್ತೆಂದು ತಿಳಿದು ಬರುತ್ತದೆ. ಇದರಿಂದಾಗಿ ಈ ಭಾಗದ ಮೇಲೆ ವಿಶೇಷವಾಗಿ ಮರಾಠಿ, ಹಿಂದಿ, ಉರ್ದು ಭಾಷೆಗಳು ತೀವ್ರವಾದ ಪ್ರಭಾವ ಬೀರಿರುವುದನ್ನು ನಾವು ನೋಡಬಹುದು. ಇಷ್ಟಾದರೂ ಹಲವು ಭಾಷೆ, ಹಲವು ಜಾತಿ, ಮತ, ಪಂಥಗಳು ಕಂಡುಬಂದರೂ ಯಾವುದೇ ರೀತಿಯ ಭೇದಭಾವಕ್ಕೆ ಎಡೆಮಾಡಿಕೊಡದೆ ನಾವೆಲ್ಲರೂ ಒಂದು ಎಂಬ ಭಾವೈಕ್ಯದ ಭಾವನೆ ಎಲ್ಲರಲ್ಲೂ ಮನೆಮಾಡಿರುವುದನ್ನು ನಾವಿಲ್ಲಿ ಕಾಣುತ್ತೇವೆ.

ಈ ಭಾಗದ ಜನಪದ ಹಾಡುಗಳಲ್ಲಿ ಹೆಣ್ಣು ತನ್ನ ಕಷ್ಟ-ಸುಖ, ನೋವು-ನಲಿವುಗಳನ್ನು ತೋಡಿಕೊಂಡಿದ್ದಾಳೆ. ದೇವರು, ನಿಸರ್ಗ, ಕುಟುಂಬ, ಬದುಕು, ಸಮಾಜ ಕುರಿತಂತೆ ಜನಪದ ಹೆಣ್ಣಿನ ನಿಲುವೇನು ಎಂಬುದನ್ನು ತಿಳಿಯುವುದಕ್ಕೆ ಈ ಹಾಡುಗಳು ಉತ್ತಮ ನಿದರ್ಶನಗಳಾಗಿವೆ. ಇವುಗಳು ಬೀದರ್ ಪ್ರಾಂತ್ಯದ ಸಂಸ್ಕೃತಿಯನ್ನೂ ಸಾರುತ್ತವೆ. ಈ ಹಾಡುಗಳನ್ನು ಕೇಂದ್ರವಾಗಿಟ್ಟುಕೊಂಡು ಪ್ರಸ್ತುತ ಅಧ್ಯಯನವನ್ನು ಮುಂದುವರೆಸಲಾಗಿದ್ದು, ಮಹಿಳೆಯರ ಸಾಮಾಜಿಕ ಗ್ರಹಿಕೆಯ ನೆಲೆಗಳನ್ನು ಇಲ್ಲಿ ಗುರುತಿಸಲಾಗಿದೆ. ಆ ಮೂಲಕವಾಗಿ ಒಂದು ಸಮಾಜ ಮತ್ತು ಸಾಮಾಜಿಕ ಜೀವನ ಕ್ರಮವನ್ನು ಮಹಿಳೆಯು ಪುರುಷನಿಗಿಂತ ಭಿನ್ನ ನೆಲೆಯಲ್ಲಿ ಹೇಗೆ ಗ್ರಹಿಸಿದ್ದಾಳೆ ಎಂಬುದನ್ನು ಮಹಿಳಾ ಜಾನಪದ ಹಾಡುಗಳ ಮುಖಾಂತರವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹೀಗೆ ವಿವಿಧ ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಬೀದರ್ ಪ್ರಾಂತ್ಯದ ವಿಶಿಷ್ಟತೆಯನ್ನು ಗ್ರಹಿಸುವ ನೆಲೆಯಲ್ಲಿ ಮುಂದುವರೆದಿದೆ. ಪ್ರಸ್ತುತ ಅಧ್ಯಯನದ ಶೀರ್ಷಿಕೆಯು ಬೀದರ್ ಜಿಲ್ಲೆಯ ಮಹಿಳಾ ಹಾಡುಗಳಾದರೂ ಸಾಂದರ್ಭಿಕವಾಗಿ ಪುರುಷ ನಿರ್ಮಿತ ಜಾನಪದ ಸಾಹಿತ್ಯವನ್ನೂ ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೮.೧ ಅಧ್ಯಯನದ ಫಲಿತಗಳು:

ಮಹಿಳಾ ಜಾನಪದ ಹಾಡುಗಳು : ಒಂದು ಅಧ್ಯಯನ (ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ವಿಷಯದ ಕುರಿತಾಗಿ ಸಂಶೋಧನೆಯನ್ನು ಕೈಗೊಂಡಿದ್ದು, ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡಿರುವ ಒಟ್ಟಾರೆ ಫಲಿತಗಳನ್ನು ಈ ಮುಂದಿನಂತೆ ಗುರುತಿಸಲಾಗಿದೆ.

೧. ಕರ್ನಾಟಕದ ಆಯಕಟ್ಟಿನ ಗಡಿ ಭಾಗವಾಗಿರುವ ಬೀದರ್ ಜಿಲ್ಲೆಯು ತನ್ನದೇ ಆದ ವಿಶಿಷ್ಟತೆಯಿಂದ ಗುರುತಿಸಿಕೊಂಡಿದೆ. ಇಲ್ಲಿನ ಸಂಸ್ಕೃತಿಯ ಮೇಲೆ ಹಲವಾರು ಧರ್ಮ, ರಾಜ್ಯ, ಭಾಷೆಗಳ ಪ್ರಭಾವವಿದ್ದು, ಈ ಎಲ್ಲ ವಿಭಿನ್ನತೆಯನ್ನು ಒಳಗೊಂಡಿರುವ ವಿಶಿಷ್ಟವಾದ ಸಾಂಸ್ಕೃತಿಕ ವಾತಾವರಣವನ್ನು ಹಾಗೂ ಭಾಷಾ ಶೈಲಿಯನ್ನು ಈ ಭಾಗದ ಮಹಿಳಾ ಜಾನಪದ ಹಾಡುಗಳಲ್ಲಿ ಗುರುತಿಸಬಹುದಾಗಿದೆ.

೨. ಬೀದರ್ ಪ್ರಾಂತ್ಯದಲ್ಲಿ ಹಲವಾರು ರಾಜಮನೆತನಗಳು ಆಳ್ವಿಕೆ ನಡೆಸಿವೆ. ಇದರ ಪರಿಣಾಮವಾಗಿ ಇಲ್ಲಿ ಉರ್ದು, ಹಿಂದಿ, ಮರಾಠಿ ಹಾಗೂ ತೆಲುಗಿನ ಪ್ರಭಾವವು ಈ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ಎಲ್ಲದರ ಪ್ರಭಾವದ ನಡುವೆಯೂ ಬೀದರ್ ಜಿಲ್ಲೆಯು ಕನ್ನಡ ಹಾಗೂ ಕರ್ನಾಟಕತನವನ್ನು ಕಾಯ್ದುಕೊಂಡು ಬಂದಿದೆ. ಇಂತಹ ಸೂಕ್ಷ್ಮ ಅಂಶಗಳನ್ನು ತಿಳಿಯುವುದಕ್ಕೆ ಬೀದರ್ ಪ್ರಾಂತ್ಯದ ಮಹಿಳಾ ಜಾನಪದ ಹಾಡುಗಳು ಮಹತ್ವದ ಪಾತ್ರವಹಿಸುತ್ತವೆ.

೩. ಬೀದರ್ ಜಿಲ್ಲೆಯಲ್ಲಿ ಕಂಡುಬರುವ ಮಹಿಳಾ ಜಾನಪದ ಹಾಡುಗಳು ಕೇವಲ ಮನರಂಜನೆಯನ್ನು ಮಾತ್ರವಲ್ಲದೆ, ಸಾಮಾಜಿಕ ಚಳುವಳಿಯ ಒಂದು ಭಾಗವಾಗಿ ಬೆಳೆದುಬಂದಿವೆ. ಆ ಮೂಲಕವಾಗಿ ಸಾಮಾಜಿಕ ಅಸಮಾನತೆಯ ವಿರುದ್ಧವಾಗಿ ದನಿ ಎತ್ತಿರುವುದು ಕಂಡುಬರುತ್ತದೆ. ಇದರಿಂದಾಗಿ ಈ ಹಾಡುಗಳು ಯುವ ಜನತೆಯನ್ನು ಇಲ್ಲಿನ ರಜಾಕಾರರು ಹಾಗೂ ಜಮಿನ್ದಾರಿ ವ್ಯವಸ್ಥೆಯ ಶೋಷಣೆಯ ವಿರುದ್ಧ ಹೋರಾಡುವಂತೆ ಈ ಭಾಗದ ಮಹಿಳಾ ಹಾಡುಗಳು ಆಸರೆಯಾಗಿ ಬೆಳೆದು ಬಂದಿರುವುದನ್ನು ನಾವು ಗುರುತಿಸಬಹುದಾಗಿದೆ.

೪. ಜಾನಪದ ಸಾಹಿತ್ಯವು ಬಹುಪಾಲು ಮಹಿಳೆಯರೇ ಸೃಷ್ಟಿಸಿಕೊಂಡು ಬಂದ ಪ್ರಕಾರವಾಗಿದೆ. ಇಲ್ಲಿನ ಹಾಡುಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು ಯಥೇಚ್ಛವಾಗಿ ಕಂಡುಬರುತ್ತವೆ. ಇಂತಹ ಸ್ತ್ರೀ ಸಂವೇದನೆಯ ನೆಲೆಗಳು ಜಾನಪದ ಸಾಹಿತ್ಯದಲ್ಲಿ ವ್ಯಕ್ತವಾಗುವ ಬಗೆಯನ್ನು ಬೀದರ್ ಜಿಲ್ಲೆಯಲ್ಲಿ ಕಂಡುಬರುವ ಮಹಿಳಾ ಸಾಹಿತ್ಯದಲ್ಲಿ ಗುರುತಿಸಲಾಗಿದೆ. ಇಲ್ಲಿನ ಮಹಿಳಾ ಸಾಹಿತ್ಯವು ಪುರುಷ ನಿರ್ಮಿತ ಚೌಕಟ್ಟನ್ನು ಮೀರುವ ಮೂಲಕ ಮಹಿಳೆಯರ ಅಸ್ಮಿತೆಯನ್ನು ಎತ್ತಿಹಿಡಿಯುವ ಮಾದರಿಯಲ್ಲಿ ಬೆಳೆದು ಬಂದಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

೫. ಬೀದರ್ ಪ್ರಾಂತ್ಯದಲ್ಲಿನ ಜನಪದ ಜೀವನದಲ್ಲಿ ಬೆರೆತುಕೊಂಡು ಬಂದಿರುವ ಮಹಿಳಾ ಜಾನಪದ ಹಾಡುಗಳು ಪುರುಷ ಪ್ರಧಾನ ಮೌಲ್ಯಗಳನ್ನು ಬಿತ್ತರಿಸುತ್ತ ಬಂದಿರುವ ಶಿಷ್ಟ ಸಾಹಿತ್ಯಕ್ಕೆ ಪ್ರಬಲವಾದ ಪ್ರತಿರೋಧ ವ್ಯಕ್ತಪಡಿಸುವ ನೆಲೆಯಲ್ಲಿ ಜಾನಪದ ಮೌಖಿಕ ಸಾಹಿತ್ಯವು ಬೆಳೆದು ಬಂದಿರುವುದು ಕಂಡುಬರುತ್ತದೆ. ಮೌಖಿಕ ಸಾಹಿತ್ಯಕ್ಕೆ ಯಾವುದೇ ರೀತಿಯ ಉಳಿಸಿ ಬೆಳೆಸಲು ಬೇಕಾದ ಸಹಕಾರ ಇಲ್ಲದರ ನಡುವೆಯೂ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡು ಬಂದಿರುವ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಅವಲೋಕಿಸಿದಾಗ, ಈ ಮಹಿಳಾ ಸಾಹಿತ್ಯದಲ್ಲಿ ಅಂತರ್ಗತವಾಗಿರುವ ಮೌಲ್ಯಗಳ ತಾತ್ವಿಕತೆಯು ತಿಳಿದುಬರುತ್ತದೆ. ಹೀಗಾಗಿ ಈ ಮೌಖಿಕ ಮಹಿಳಾ ಸಾಹಿತ್ಯ ಪ್ರಕಾರವು ಶಿಷ್ಟ ಸಾಹಿತ್ಯಕ್ಕಿಂತ ಸತ್ವಯುತವಾಗಿರುವುದು ತಿಳಿದುಬರುತ್ತದೆ.

೬. ಬೀದರ ಜಿಲ್ಲೆಯ ಜನಪದ ಹಾಡುಗಳಲ್ಲಿ ಅಂದಿನ ಕಾಲದ ಸಂಸ್ಕೃತಿಯನ್ನು ಕಾಣುವುದಲ್ಲದೆ, ಈ ಹಾಡುಗಳು ಮಾನವ ಜೀವನದ ವಿವಿಧ ನೆಲೆಗಳನ್ನು ಅಧ್ಯಯನ ಮಾಡುವುದಕ್ಕೆ ಹಾಗೂ ಜನಪದ

ಜಗತ್ತಿನ ಸಾಂಸ್ಕೃತಿಯ ಹಿರಿಮೆಯನ್ನು ತಿಳಿಯುವುದಕ್ಕೆ ಸಹಕಾರಿಯಾಗಿವೆ. ಈ ಹಾಡುಗಳನ್ನು ಇಂದಿನ ಆಧುನಿಕ ಸಂದರ್ಭದ ಜಾಗತೀಕರಣದಂತಹ ಸಂದಿಗ್ಧ ವಾತಾವರಣದಲ್ಲಿ ಮರು ವಿಶ್ಲೇಷಣೆಗೆ ಒಳಪಡಿಸುವುದರಿಂದ ನಮ್ಮ ಸಾಂಸ್ಕೃತಿಕ ಬದುಕಿನ ಹಿರಿಮೆ ಗರಿಮೆಗಳನ್ನು ಅರಿಯುವುದಕ್ಕೆ ಸಹಕಾರಿಯಾಗುತ್ತವೆ.

೭. ಜಾನಪದ ಸಾಹಿತ್ಯಕ್ಕೆ ಅಂತರ್‌ರಾಷ್ಟ್ರೀಯ ಸ್ವರೂಪದ ಆಯಾಮವು ಲಭಿಸಿರುವುದು ನಮಗೆಲ್ಲ ತಿಳಿದ ವಿಚಾರವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಬೀದರ್ ಪ್ರಾಂತ್ಯದ ಜಾನಪದ ಹಾಡುಗಳ ಅಧ್ಯಯನದಿಂದ ಜಾನಪದ ಬದುಕಿನಲ್ಲಿ ನಮ್ಮ ಪೂರ್ವಿಕರು ತಮ್ಮ ದಾರ್ಶನಿಕ ನೆಲೆಯಲ್ಲಿ ರೂಢಿಸಿಕೊಂಡು ಬಂದಿರುವ ಜನಪರವಾದ ಅಂಶಗಳು ವಿವಿಧ ಜನಾಂಗಗಳ ನಡುವೆ ಇರಬಹುದಾದ ಸಾಮರಸ್ಯ ಹಾಗೂ ಸೌಹಾರ್ದತೆ ತಿಳಿಯಲು ಸಹಕಾರಿಯಾಗುತ್ತವೆ. ಇದರಿಂದ ಬೀದರ್ ಜಿಲ್ಲೆಯಂತಹ ಬಹು ಸಂಸ್ಕೃತಿಯ ನಾಡಿನಲ್ಲಿ ಅಡಗಿರುವ ಸಾಮರಸ್ಯದ ನೆಲೆಗಳು ಹಾಗೂ ಇಲ್ಲಿನ ಜಾನಪದ ಸಾಹಿತ್ಯದಲ್ಲಿ ಅಡಗಿರುವ ಸಾರ್ವತ್ರಿಕ ಮೌಲ್ಯಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಶಾಂತಿ, ಸಹಕಾರ, ಸಹಬಾಳ್ವೆಯಂತಹ ಜೀವಪರವಾದ ಆಶಯಗಳನ್ನು ಪ್ರತಿನಿಧಿಸುವ ಸಾಮರ್ಥ್ಯವನ್ನು ಹೊಂದಿರುವುದು ಕಂಡುಬರುತ್ತದೆ.

೮. ಚರಿತ್ರೆಯ ಪುನರ್ ಸೃಷ್ಟಿಯಲ್ಲಿ ಜಾನಪದ ಕೊಡುಗೆಯೂ ಅಪಾರವಾದುದಾಗಿದೆ. ನಮ್ಮ ಸಾಮಾಜಿಕ ಪರಂಪರೆಯನ್ನು ಅರಿಯುವುದಕ್ಕೆ ಹಾಗೂ ಸಂಸ್ಕೃತಿಯ ವೈಶಿಷ್ಟ್ಯತೆಯನ್ನು ತಿಳಿಯುವುದಕ್ಕೆ ಜಾನಪದವು ಪ್ರತಿಬಿಂಬವಾಗಿ ಕಂಡುಬರುತ್ತದೆ. ಇದರ ವೈಶಿಷ್ಟ್ಯ, ವಿನೂತನತೆ ಹಾಗೂ ವ್ಯಾಪಕತೆ ಎಲ್ಲ ವರ್ಗದ ಜನರನ್ನು ಸೆಳೆಯುತ್ತ ಬಂದಿದೆ. ಆದ್ದರಿಂದಾಗಿ ಪ್ರಸ್ತುತ ಅಧ್ಯಯನದಲ್ಲಿ ಬೀದರ್ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯನ್ನು ಇಲ್ಲಿನ ಮಹಿಳಾ ಜಾನಪದ ಹಾಡುಗಳ ಮುಖಾಂತರವಾಗಿ ಗುರುತಿಸಲಾಗಿದೆ.

೯. ಬೀದರ್ ಜಿಲ್ಲೆಯ ಭಾಷೆಗಳು ತಮ್ಮದೇ ಆದ ವೈಶಿಷ್ಟ್ಯತೆಗಳಿಂದ ಕೂಡಿದ್ದರೂ ಭಾರತೀಯ ಸಾಂಸ್ಕೃತಿಕ ಕ್ಷೇತ್ರಕ್ಕೆ ಅತ್ಯಮೂಲ್ಯ ಕೊಡುಗೆಯನ್ನು ನೀಡಿರುವುದು ಕಂಡುಬರುತ್ತದೆ. ಆದ್ದರಿಂದಾಗಿ ಅಕ್ಷರ ಪರಂಪರೆಯಿಂದ ದೂರ ಉಳಿದ ಶ್ರಮಿಕ ವರ್ಗವು, ಅದರಲ್ಲೂ ನಾಲ್ಕು ಗೋಡೆಗಳ ಮಧ್ಯದಲ್ಲಿ ಬಂಧಿಸಲ್ಪಟ್ಟಂತಹ ಮಹಿಳೆಯು ತನ್ನ ಹಾಡುಗಳಲ್ಲಿ ವಿವಿಧ ಭಾಷೆಗಳನ್ನು ಸಮ್ಮಿಶ್ರಣಗೊಳಿಸಿಕೊಂಡು ಮೌಖಿಕ ಸಾಹಿತ್ಯ ಪ್ರಕಾರವೊಂದನ್ನು ಉಳಿಸಿ, ಬೆಳೆಸಿಕೊಂಡು ಬಂದ ಬಗೆಯನ್ನು ಈ ಭಾಗದ ಮಹಿಳಾ ಜಾನಪದ ಹಾಡುಗಳಲ್ಲಿ ಗುರುತಿಸಲಾಗಿದೆ. ಹೀಗೆ ಅನ್ಯ ಭಾಷೆ ಹಾಗೂ ಸಂಸ್ಕೃತಿಗಳೊಂದಿಗೆ ಬೆರೆತ ನಮ್ಮ ಕನ್ನಡ ಜನಪದ ಸಾಹಿತ್ಯಲೋಕವು ತನ್ನ ಅಸ್ಮಿತೆಯನ್ನು ಕಾಯ್ದುಕೊಂಡು ಭಾರತೀಯ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿರುವ ವಿಶಿಷ್ಟ ಬಗೆಯನ್ನು ಪ್ರಸ್ತುತ ಅಧ್ಯಯನದ ಮಹಿಳಾ ಹಾಡುಗಳಲ್ಲಿ ಕಾಣಬಹುದಾಗಿದೆ.

೧೦. ಜಾನಪದ ಮಹಿಳಾ ಹಾಡುಗಳು ಶರಣಾಗತಿಯ ಭಾವವನ್ನು ಮೇಲ್ನೋಟಕ್ಕೆ ವ್ಯಕ್ತಪಡಿಸಿದರೂ ಆಳದಲ್ಲಿ ಪ್ರಬಲವಾಗಿ ಪ್ರತಿರೋಧದ ನೆಲೆಗಳನ್ನು ತನ್ನಲ್ಲಿ ಒಳಗೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆಯ ವ್ಯಾಪ್ತಿಯೊಳಗೆ ಕಂಡುಬರುವ ಮಹಿಳಾ ಜಾನಪದ ಹಾಡುಗಳನ್ನು ಗಮನಿಸುವುದಾದರೆ, ಇವುಗಳು ಪುರುಷ ನಿರ್ಮಿತವಾದ ಕೆಲವು ಕಾನೂನು ಕಟ್ಟಳೆಗಳನ್ನು ಮೀರುವ ಪ್ರಕ್ರಿಯೆಗೆ ಮುಂದಾಗಿರುವುದು ತಿಳಿದುಬರುತ್ತದೆ. ಇದಕ್ಕೆ ನಿದರ್ಶನಗಳು ಬೀದರ್ ಪ್ರಾಂತ್ಯದಲ್ಲಿ ಕಂಡುಬರುವ ಬುಲಾಯಿ ಹಾಡುಗಳು, ಬೀಸುವ ಹಾಡುಗಳು, ಕುಟ್ಟುವ ಹಾಡುಗಳು ಹಾಗೂ ಗೌರಿ ಹಾಡುಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತವೆ.

೧೧. ಮಹಿಳಾ ಜಾನಪದ ಹಾಡುಗಳಲ್ಲಿ ಶ್ರಮ ಸಂಸ್ಕೃತಿಯ ಮೂಲ ನೆಲೆಗಳು ಅಂತರ್ಗತವಾಗಿರುವುದು ಕಂಡುಬರುತ್ತದೆ. ಬಸವಣ್ಣನ ಕಾಯಕದ ಪರಿಕಲ್ಪನೆಗೂ ಮೀರಿದ ಕಾಯಕ ನಿಷ್ಠೆಯನ್ನು ನಾವು ಮಹಿಳಾ ಜಾನಪದ ಹಾಡುಗಳಲ್ಲಿ ಗುರುತಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಶರಣ ಚಳವಳಿಗೆ ಈ ಸಾಮಾನ್ಯರ ಬದುಕಿನ ಕ್ರಮವೇ ಮೂಲ ಪ್ರೇರಣೆಯಾಗಿರುವ ಸಾಧ್ಯತೆಯೂ ಇದೆ.

೧೨. ಬೀದರ್ ಪ್ರಾಂತ್ಯದಲ್ಲಿ ಕಂಡುಬರುವ ಮಹಿಳಾ ಜಾನಪದ ಹಾಡುಗಳಿಗೂ ಇತರೆ ಭಾಗಗಳಲ್ಲಿ ಕಂಡುಬರುವ ಜಾನಪದ ಹಾಡುಗಳಿಗೂ ಸೂಕ್ಷ್ಮ ವ್ಯತ್ಯಾಸಗಳು ಕಂಡುಬರುತ್ತವೆ. ಬೀದರ್ ಜಿಲ್ಲೆಯಲ್ಲಿನ ಮಹಿಳಾ ಹಾಡುಗಳು ಇಲ್ಲಿನ ಪ್ರಾದೇಶಿಕ ಬದುಕಿನ ಕ್ರಮ, ಸಂಸ್ಕೃತಿ ಹಾಗೂ ಭಾಷೆಯ ನೆಲೆಗಟ್ಟುಗಳನ್ನು ತನ್ನದಾಗಿಸಿಕೊಂಡು, ಇತರೆ ಭಾಗದ ಹಾಡುಗಳಿಗಿಂತ ಭಿನ್ನವಾದ ಧಾಟಿಯೊಂದನ್ನು ರೂಢಿಸಿಕೊಂಡು ಬಂದಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಾಣಬಹುದಾಗಿದೆ.

೧೩. ಬೀದರ್ ಪ್ರಾಂತ್ಯದಲ್ಲಿ ಕಂಡುಬರುವ ಜಾನಪದ ಹಾಡುಗಳು ಹೆಚ್ಚಾಗಿ ನೀತಿ ಪ್ರಧಾನವಾಗಿರುವುದು ತಿಳಿದುಬರುತ್ತದೆ. ಈ ನೀತಿ ಪ್ರಧಾನ ನೆಲೆಗಟ್ಟಿಗೆ ಪ್ರಮುಖವಾದ ಕಾರಣವೇನು ಎಂಬುದಾಗಿ ಅವಲೋಕಿಸಿದಾಗ, ಇಲ್ಲಿ ಆಳ್ವಿಕೆ ನಡೆಸಿದ ವಿದೇಶಿ ಆಕ್ರಮಣ ರಾಜ ನೀತಿಯ ಮನಸ್ಥಿತಿಗಳಿಂದ ಈ ಭಾಗದ ಮೂಲ ನಿವಾಸಿಗಳು ಸಾಕಷ್ಟು ಸಾವು ನೋವು, ಅವಮಾನಗಳನ್ನು ಅನುಭವಿಸಿರುವ ನಿದರ್ಶನಗಳು ನಮಗೆ ತಿಳಿದುಬರುತ್ತವೆ. ಈ ನೋವಿನ ಪ್ರತಿರೋಧದ ನೆಲೆಯಲ್ಲಿ ಈ ಭಾಗದ ಜಾನಪದರು ಇಂತಹ ನೀತಿ ಪ್ರಧಾನವಾದ ಜಾನಪದ ಹಾಡುಗಳು ಹಾಗೂ ಇತರೆ ಸಾಹಿತ್ಯ ಪ್ರಕಾರವನ್ನು ಬೆಳೆಸಿಕೊಂಡು ಬಂದಿರುವ ಸಾಧ್ಯತೆಯನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

೧೪. ಬೀದರ್ ಪ್ರಾಂತ್ಯದ ಜನಮಾನಸದಲ್ಲಿ ಬೆರೆತು ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿರುವ ಬುಲಾಯಿ ಹಾಡುಗಳಂತಹ ಕೆಲವು ಪ್ರಕಾರಗಳು ನೆರೆಯ ರಾಜ್ಯವಾಗಿರುವ ಮಹರಾಷ್ಟ್ರದಲ್ಲಿಯೂ ತನ್ನ ವಿಸ್ತಾರತೆಯನ್ನು ಮುಂದುವರೆಸಿರುವುದು ಕರ್ನಾಟಕ ಜಾನಪದದ ಶ್ರೀಮಂತಿಕೆಯ ಪ್ರತೀಕವಾಗಿ ಕಂಡುಬರುತ್ತದೆ. ಈ ಕಾರಣದಿಂದಾಗಿ ಜೀದರ್ ಪ್ರಾಂತ್ಯದ ಜಾನಪದ ಸಾಹಿತ್ಯದ ಬೆಳವಣಿಗೆಯಲ್ಲಿ ನಮ್ಮ ಜಾನಪದ ಮಹಿಳೆಯರ ಪಾತ್ರವು ಅನನ್ಯವಾದುದಾಗಿದೆ.

೧೫. ಜಾನಪದ ಸಾಹಿತ್ಯವು ನಿಸರ್ಗ ಸತ್ಯವನ್ನು ಪ್ರತಿಪಾದಿಸುವ ಪ್ರಮುಖ ಆಕರವಾಗಿ ಕಂಡುಬರುತ್ತದೆ. ಇಲ್ಲಿ ಯಾವುದೇ ಆಡಂಬರವಾಗಲಿ, ಮೋಸ ವಂಚನೆಗಳಾಗಲಿ ಕಂಡುಬರುವುದಿಲ್ಲ. ನಿಸರ್ಗ ಧರ್ಮ ಹಾಗೂ ನಿಸರ್ಗ ಸತ್ಯವನ್ನು ಜಾನಪದರು ತಮ್ಮ ತಾತ್ವಿಕ ದರ್ಶನದ ಮುಖಾಂತರವಾಗಿ ಪದಕಟ್ಟಿ ಹಾಡುತ್ತ ಬಂದಿದ್ದಾರೆ. ಈ ಪ್ರಕ್ರಿಯೆಯಲ್ಲಿ ಬೀದರ್ ಪ್ರಾಂತ್ಯದ ಮಹಿಳೆಯರ ಪಾತ್ರವು ಮಹತ್ವಪೂರ್ಣವಾದುದಾಗಿದೆ.

ಅನುಬಂಧಗಳು

–ಪರಾಮರ್ಶನ ಗ್ರಂಥಗಳು

–ನಕ್ಷೆ

–ಛಾಯಚಿತ್ರಗಳು

ಪರಾಮರ್ಶನ ಗ್ರಂಥಗಳು

೧. ಅನುಪಮಾ ನಿರಂಜನ, ೧೯೮೦, ಆರೋಗ್ಯ ಭಾಗ್ಯಕ್ಕೆ ವ್ಯಾಯಾಮ, ಡಿ. ವಿ. ಕೆ. ಮೂರ್ತಿ ಪ್ರಕಾಶನ, ಮೈಸೂರು (ಲೇ)

೨. ಅರುಣಾ ಸುಲ್ತಾನ್‌ಪುರೆ, ೨೦೦೯, ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡವಿಶ್ವವಿದ್ಯಾಲಯ, ಹಂಪಿ (ಲೇ)

೩. ಅರುಣಾ ಸುಲ್ತಾನಪುರೆ, ೨೦೧೨, ಬುಲಾಯಿ ಹಾಡುಗಳು, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ (ಲೇ)

೪. ಅಂಬಳಿಕೆ ಹಿರಿಯಣ್ಣ, ೨೦೦೦, ಜಾನಪದ ಪ್ರಕ್ರಿಯೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ (ಲೇ)

೫. ಕಾಪಸೆ ರೇವಪ್ಪ (ಸಂ), ೨೦೦೦, ಮಲ್ಲಿಗೆ ದಂಡೆ, ಸಮಾಜ ಪುಸ್ತಕಾಲಯ, ಧಾರವಾಡ

೬. ಕಾಳೇಗೌಡ ನಾಗವಾರ, ೨೦೧೦, ಜಾನಪದ ಸಾಹಿತ್ಯ, ಸ್ವಪ್ನ ಬುಕ್‌ಹೌಸ್, ಬೆಂಗಳೂರು

೭. ಕೇಶವಭಟ್ಟ ಟಿ, ೧೯೯೬, ದಕ್ಷಿಣ ಕನ್ನಡ ಜಿಲ್ಲೆಯ ಜಾನಪದ ಹಾಡುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು (ಸಂ)

೮. ಕ್ಯಾತನಹಳ್ಳಿ ರಾಮಣ್ಣ (ಸಂ), ೧೯೭೬, ಬೀದರ ಜಿಲ್ಲೆಯ ಜನಪದ ಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ

೯. ಖಂಡೋಬಾ ಪಿ.ಕೆ. (ಸಂ), ೧೯೯೬, ಜನಪದ ಕಥನ ಗೀತೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೦. ಗದ್ದಗಿಮಠ ಬಿ.ಎಸ್, ೧೯೬೩, ಕನ್ನಡ ಜಾನಪದ ಗೀತೆಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ (ಲೇ)

೧೧. ಗವಿಸಿದ್ದಪ್ಪ ಎಚ್.ಪಾಟೀಲ (ಸಂ), ೨೦೦೫, ಬೀದರ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲ್ಬರ್ಗಾ, ವಿಶ್ವವಿದ್ಯಾಲಯ, ಗುಲ್ಬರ್ಗಾ

೧೨. ಗುರುಲಿಂಗಪ್ಪಾ ಧಬಾಲೆ, ೨೦೦೬, ಬೀದರ ಜಿಲ್ಲೆಯ ಅನುಭಾವಿ ಕವಿಗಳು, ವಿಶ್ವಗುರು ಬಸವಧರ್ಮ ಪ್ರಚಾರ ಕೇಂದ್ರ, ಹುಲಸೂರು (ಲೇ)

೧೩. ಗುರುಲಿಂಗಪ್ಪಾ ದುಬಾಲೆ (ಸಂ), ೨೦೧೪, ಕಲ್ಯಾಣ ದೀಪ್ತಿ ಭಾಲ್ಕಿ, ಪೂ.ಡಾ. ಬಸವಲಿಂಗ ಪಟ್ಟದೇವರ ಅಭಿನಂದನಾ ಸಮಿತಿ, ಹಿರೇಮಠ ಸಂಸ್ಥಾನ ಭಾಲ್ಕಿ

೧೪. ಚನ್ನಬಸಪ್ಪ ಗೊ.ರು. (ಸಂ), ೨೦೧೦, ಜಾನಪದ ಗಂಗೋತ್ರಿ, ಸಂ ೮, ಕರ್ನಾಟಕ ಜಾನಪದ ಅಕಾಡಮಿ, ಬೆಂಗಳೂರು

೧೫. ಚನ್ನಬಸಪ್ಪ ಗೊ.ರು. (ಸಂ), ೨೦೧೦, ಜಾನಪದ ಗಂಗೋತ್ರಿ, ಸಂ. ೯, ಕರ್ನಾಟಕ ಜಾನಪದ ಅಕಾಡಮಿ, ಬೆಂಗಳೂರು

೧೬. ಚೆನ್ನಣ್ಣ ವಾಲೀಕಾರ, ೧೯೯೧, ಒಂದು ಗ್ರಾಮದ ಜಾನಪದೀಯ ಅಧ್ಯಯನ, ಅಕ್ಷರ ಪ್ರಕಾಶನ, ಹೆಗ್ಗೋಡು (ಲೇ)

೧೭. ಚೆನ್ನಣ್ಣ ವಾಲೀಕಾರ, ೧೯೮೬, ಜನಪದ ವೃತ್ತಿಗಾಯಕರು, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ (ಲೇ)

೧೮. ಛಾಯಾದೇವಿ ವಿ, ೧೯೭೬, ಜನಪದ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು (ಲೇ)

೧೯. ಜಗನ್ನಾಥ ಹೆಬ್ಬಾಳೆ (ಸಂ), ೧೯೯೪, ಸತ್ತವರ ಹಾಡುಗಳು, ಜನದನಿ ಪ್ರಕಾಶನ, ಬೀದರ

೨೦. ಜಗನ್ನಾಥ ಹೆಬ್ಬಾಳೆ, ೨೦೧೩, ಧರಿನಾಡ ಬಿಂಬ ಪ್ರತಿಬಿಂಬ, ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘ (ರಿ), ಬೀದರ (ಲೇ)

೨೧. ಜಯದೇವಿ ತಾಯಿ ಲಿಗಾಡೆ, ೧೯೬೮, ತಾರಕ ತಂಬೂರಿ, ಕನ್ನಡ ಕೋಟೆ ಪ್ರಕಾಶನ, ಸೊಲ್ಲಾಪುರ (ಮಹಾರಾಷ್ಟ್ರ) (ಲೇ)

೨೨. ಧನಲಕ್ಷ್ಮೀ ವಿಶ್ವನಾಥ, ೨೦೧೧, ಬೀದರ ಜಿಲ್ಲೆಯ ಜಾನಪದ ಸಾಹಿತ್ಯದಲ್ಲಿ ಕೃಷಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ (ಲೇ)

೨೩. ನಾಯಕ ಡಿ.ಬಿ., ೨೦೦೦, ಲಂಬಾಣಿ ಜನಪದ ಸಾಹಿತ್ಯ, ಬಂಜಾರಾ ಪ್ರಕಾಶನ, ಗುಲ್ಬರ್ಗಾ (ಲೇ)

೨೪. ನಾಯಕ್ ಡಿ.ಬಿ. (ಸಂ), ೨೦೦೧, ಬುಲಾಯಿ ಹಾಡುಗಳು, ಬಂಜಾರ ಪ್ರಕಾಶನ, ಗುಲ್ಬರ್ಗಾ (ಸಂ)

೨೫. ನಾಯಕ ಹಾ.ಮಾ., ೧೯೮೨, ಜಾನಪದ ಸ್ವರೂಪ, ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು (ಲೇ)

೨೬. ಪರಮಶಿವಯ್ಯ ಜೀ.ಶಂ (ಸಂ), ೧೯೮೧, ಆರಂಭದೆತ್ತು ಐನೂರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
೨೭. ಪರಮಶಿವಯ್ಯ ಜೀ. ಶಂ., ೨೦೧೨, ದಕ್ಷಿಣ ಕರ್ನಾಟಕ ಜಾನಪದ ಕಾವ್ಯ ಪ್ರಕಾರಗಳು, ಸಾಗರ್ ಪ್ರಕಾಶನ, ಮೈಸೂರು,
೨೮. ಪುರುಷೋತ್ತಮ ಬಿಳಿಮಲೆ, ೨೦೦೮, ಜನ ಸಂಸ್ಕೃತಿ, ಕ್ರೈಸ್ಟ್ ಸಂಘ, ಬೆಂಗಳೂರು
೨೯. ಪ್ರೇಮಾ ಸಿರ್ಸೆ, ೨೦೦೯, ಸಾಹಿತ್ಯ ಸಿಂಚನ, ಆನಂದ ಪ್ರಕಾಶನ, ಬೀದರ
೩೦. ಪ್ರಮಿಳಾ ಶರಣಪ್ಪ ಹೊನ್ನಾಳೆ, ೨೦೧೩, ಸೀಗಿ-ಗೌರಿ ಹಾಡುಗಳು: ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೩೧. ಬಸವರಾಜ ಪಿ., ೨೦೦೯, ವಿವೇಚನೆ, ಧರಿನಾಡು ಕನ್ನಡ ಸಂಘ (ರಿ), ಬೀದರ
೩೨. ಬಸವರಾಜ ಪೋಲಿಸ್ ಪಾಟೀಲ, ೨೦೦೧, ಹೈದ್ರಾಬಾದ ಕರ್ನಾಟಕ ಜಾನಪದ ಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ, ಅಮರ ಪ್ರಕಾಶನ, ಗುಲ್ಬರ್ಗಾ
೩೩. ಬಸವರಾಜ ಸಬರದ (ಸಂ), ೨೦೦೫, ಬೀದರ್ ಜಿಲ್ಲಾ ದರ್ಶನ, ಬೆಳ್ಳಿಬೆಳಕು ಮಾಲೆ, ಜಿಲ್ಲಾ ದರ್ಶನ ಸಂಪುಟ, ಬೀದರ್
೩೪. ಬಸವರಾಜ ಸಬರದ (ಸಂ), ೨೦೧೦, ಜಾನಪದ ಆಯಾಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೩೫. ಬಿರಾದಾರ. ಎಂ.ಜಿ (ಸಂ), ೧೯೮೧, ಜಾನಪದ ಸಮಾಲೋಕನ, ಚಿತ್ಕಳಾ ಪ್ರಕಾಶನ, ಕಲ್ಬುರ್ಗಿ
೩೬. ಬಿರಾದಾರ ಎಂ.ಎಸ್. (ಸಂ), ೧೯೮೯, ಮಹಾರಾಷ್ಟ್ರದ ಗಡಿಯ ಜಾನಪದಗೀತೆಗಳು, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಂಶೋಧನ ಕೇಂದ್ರ, ಉದಗೀರ (ಮಹಾರಾಷ್ಟ್ರ)
೩೭. ಮಲ್ಲಿಕಾರ್ಜುನ್ ಶಿ. ಲಠ್ಠೆ, ೧೯೮೨, ಜಾನಪದ ದೀಪ್ತಿ, ಮೆ. ಬಿ.ಸಿ. ಹಿಡಮಗ್ಗಿ ಬ್ರದರ್ಸ, ಬೆಳಗಾವಿ
೩೮. ಯಮನೂರಪ್ಪ ಅಣ್ಣೀಗೇರಿ, ೨೦೧೦, ಮಹಿಳೆ ಮತ್ತು ಸಮೃದ್ಧಿ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ
೩೯. ಮಂಜುನಾಥ ಬೇವಿನಕಟ್ಟಿ, ೨೦೦೩, ಜನ ಜಾನಪದ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೪೦. ಯಶೋದಮ್ಮಾ ಸಿದ್‌ಬಟ್ಟೆ, ೧೯೯೪, ಚೆಂಬಳಕು ನೆನಪಿನ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೪೧. ಯಶೋಧರಾ ಶಾಸ್ತ್ರಿ, ೧೯೯೯, ಗುಲ್ಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು, ಜ್ಯೋತಿರ್ಮಯಿ ಪ್ರಕಾಶನ, ಗುಲ್ಬರ್ಗಾ
೪೨. ರಾಜೇಂದ್ರ ಡಿ.ಕೆ (ಸಂ), ೧೯೮೨, ಜಾನಪದ ಸಂಪದ, ತಳಗವಾದಿ ಪ್ರಕಾಶನ ಮೈಸೂರು
೪೩. ರಾಜೇಂದ್ರ ಯರನಾಳೆ (ಸಂ), ೧೯೯೪, ಶೀಗಿ ಹಾಡುಗಳು, ಪೂಜ್ಯ ಶ್ರೀ ಮ. ನಿ. ಪ್ರ. ಸಿದ್ದಲಿಂಗ ಮಹಾಸ್ವಾಮಿಗಳು ಶ್ರೀ ಸಿದ್ಧಲಿಂಗೇಶ್ವರ ಸಾಹಿತ್ಯ ಭಂಡಾರ, ಬೀದರ
೪೪. ರಾಜೇಂದ್ರ ಯರನಾಳೆ, ೨೦೦೦, ಬೀದರ ಜಿಲ್ಲೆಯ ಪ್ರಾದೇಶಿಕ ಭಾಷಾ ವೈಶಿಷ್ಟ್ಯ, ರವಿತೇಜ ಪ್ರಕಾಶನ, ಬೀದರ
೪೫. ರಂಗಸ್ವಾಮಿ ಬಿ. ಅರ್ಚಕ, ೨೦೦೧, ಹುಟ್ಟಿದ ಹಳ್ಳಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
೪೬. ರಂಗಾರೆಡ್ಡಿ ಕೋಡಿರಾಮಪುರ (ಸಂ), ೧೯೯೫ , ಜಾನಪದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
೪೭. ರಾಗೌ, ೨೦೧೩, ಜಾನಪದ ಸಂಶೋಧನೆ, ತನುನು ಪ್ರಕಾಶನ, ಮೈಸೂರು
೪೮. ರಾಮಚಂದ್ರೇಗೌಡ ಹಿ. ಶಿ (ಸಂ), ೨೦೦೪, ಜಾನಪದ ಗ್ರಹಿಕೆ; ಪರಿಕಲ್ಪನೆ, ಕರ್ನಾಟಕ ಜಾನಪದ ಅಕಾಡೆಮಿ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
೪೯. ಲಠ್ಠೆ ಎಂ.ಎಸ್.(ಸಂ), ೧೯೭೪, ಉತ್ತರ ಕರ್ನಾಟಕದ ಒಗಟುಗಳು, ರವೀಂದ್ರ ಪ್ರಕಾಶನ, ಕಲಬುರ್ಗಿ
೫೦. ಲಿಂಗಯ್ಯ ಡಿ., ೨೦೦೬, ಜಾನಪದ ಸ್ವರೂಪ ಮತ್ತು ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೫೧. ವಂದನಾ, ೧೯೯೫, ಯೋಗದಿಂದ ಆರೋಗ್ಯ, ವಾಸನ್ ಪಬ್ಲಿಕೇಷನ್ಸ, ಬೆಂಗಳೂರು
೫೨. ವಾಲಿ ಎಂ.ಎಸ್ (ಸಂ), ೧೯೮೬, ಜಾನಪದ ಒಗಟುಗಳು, ಭುವನೇಶ್ವರಿ ಪ್ರಕಾಶನ, ವಿಜಾಪುರ
೫೩. ವಿಜಯಶ್ರೀ ಸಬರದ (ಸಂ), ೨೦೦೫, ಮಹಿಳೆ: ಶೋಷಣೆ ಸವಾಲುಗಳು, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ
೫೪. ವಿಜಯಶ್ರೀ ಸಬರದ, ೨೦೦೬, ಜಾನಪದ ಮತ್ತು ಮಹಿಳೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೫೫. ವೀರಣ್ಣ ದಂಡೆ (ಸಂ), ೧೯೯೩, ಜನಪದ ಕಾವ್ಯ ಪ್ರಥಮ ವಿಮರ್ಶೆ, ಪ್ರಗತಿ ಪ್ರಕಾಶನ, ಕಲಬುರ್ಗಿ
೫೬. ವೀರಣ್ಣ ಸಿ, ೨೦೧೧, ಕನ್ನಡ ಕಾವ್ಯ ಕಂಡ ಹೆಣ್ಣು, ಕಾವ್ಯ ಕಲಾ ಪ್ರಕಾಶನ, ಬೆಂಗಳೂರು
೫೭. ವೀರಣ್ಣ ದಂಡೆ, ೧೯೮೨, ಜನಪದ ಕಾವ್ಯಮೀಮಾಂಸೆ, ಮೂಡಲ ಪ್ರಕಾಶನ, ಗುಲ್ಬರ್ಗಾ

೫೮. ವೀರಶೆಟ್ಟಿ ಬಾವುಗೆ (ಸಂ), ೨೦೧೦, ಸಾಹಿತ್ಯ ಜ್ಯೋತಿ , ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಭಾಲ್ಕಿ
೫೯. ವೀರಶೆಟ್ಟೀ ಬಾವುಗೆ (ಪ್ರ.ಸಂ), ೨೦೧೧, ಭಾಲ್ಕಿ ವೈಭವ ಸ್ಮರಣ ಸಂಚಿಕೆ, ಸ್ವಾಗತ ಸಮಿತಿ ಹಾಗೂ ತಾಲೂಕು ಕನ್ನಡ ಸಾಹಿತ್ಯ ಸಮೇಳನ, ಭಾಲ್ಕಿ
೬೦. ವೈಜಿನಾಥ ಭಂಡೆ, ಬೀದರ ಜಿಲ್ಲೆಯ ಸ್ಥಳನಾಮಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ(ಅ)
೬೧. ಶಕುಂತಲಾ ದುರ್ಗಿ, ೧೯೮೮, ಮಹಿಳಾ ಸಾಹಿತ್ಯ ಮತ್ತು ಸಮಸ್ಯೆಗಳು, ಉಜ್ವಲಾ ಪ್ರಕಾಶನ, ಗುಲ್ಬರ್ಗಾ(ಅ)
೬೨. ಶಶಿಕಲಾ ಮೋಳ್ದಿ (ಸಂ), ೧೯೮೮, ವಂದನೆ, ಡಾ. ಬಿ. ಬಿ. ಹೆಂಡಿ ಅಭಿನಂದನಾ ಸಂಸ್ಥೆ, ಗುಲ್ಬರ್ಗಾ
೬೩. ಶಂಕರ್ ನಾರಾಯಣರಾವ್ ಎಚ್.ಎಂ, ೧೯೫೮, ಜನಪದ ಮುಕ್ತಕಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು (ಅ)
೬೪. ಶಿವಶಂಕರ್ ಚಕ್ಕೆರೆ, ೨೦೦೭, ಜಾನಪದ ಪ್ರವೇಶ, ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು(ಅ)
೬೫. ಶಂಕರ ನಾರಾಯಣ ತೀ. ನಂ (ಸಂ), ೧೯೯೮, ಕನ್ನಡ ಜಾನಪದ ಮಹಾಕಾವ್ಯಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
೬೬. ಶೇಖರ್ ಎಂ. ಎಸ್, ೨೦೦೮, ಕನ್ನಡ ಕಾವ್ಯ ಪರಂಪರೆಯಲ್ಲಿ ಜಾನಪದ ಪ್ರಜ್ಞೆ, ಕರ್ನಾಟಕ ಸಾಹಿತ್ಯ ಅಕಾಡೆಮಿ (ಸಂ)
೬೭. ಸನದಿ ಬಿ. ಎ, ೨೦೧೨, ಜನಕಾವ್ಯದೃಷ್ಟಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು (ಸಂ)
೬೮. ಸದಾಶೀವಪ್ಪ ಕುಂ. ಬಾ., ಜಾನಪದ ಸಾಹಿತ್ಯ ಸಂಸ್ಕೃತಿ, ಮಮತಾ ಪ್ರಕಾಶನ, ಬೆಂಗಳೂರು(ಅ)
೬೯. ಸಿಂಪಿ. ಲಿಂಗಣ್ಣ, ೧೯೫೪, ಗರತಿಯ ಬಾಳು, ವ್ಹಿ. ಎಸ್. ಸಿಂಪಿ ಶ್ರೀ ಅರವಿಂದ ಗ್ರಂಥಾಲಯ, ಚಡಚಣ(ಅ)
೭೦. ಸುಭಾಸ್ ಹುಲಸೂರೇ (ಪ್ರ.ಸಂ), ೨೦೧೪ ಭಾಲ್ಕಿ ಸಾಹಿತ್ಯ ಸಂಭ್ರಮ ಸ್ಮರಣ ಸಂಚಿಕೆ, ಸ್ವಾಗತ ಸಮಿತಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತು, ಭಾಲ್ಕಿ
೭೧. ಸುನೀತಾ ಎಂ. ಶೆಟ್ಟಿ, ೨೦೦೬, ತುಳು ಜಾನಪದ ಒಂದು ತೌಲನಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳುರು, ೨೦೦೬ (ಅ)
೭೨. ಹನುಮಂತರಾವ. ಬಿ. ದೊಡ್ಡಮನಿ, ೨೦೦೪, ಜಾನಪದ ಹಬ್ಬಗಳು ಮತ್ತು ಉತ್ಸವಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು (ಅ)
೭೩. ಹಲಸಂಗಿ ಗೆಳೆಯರು (ಸಂ), ೨೦೦೦, ಹಲಸಂಗಿ ಹಾಡುಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೭೪. ಹಿರೇಮಠ ಆರ್.ಸಿ. (ಸಂ), ೧೯೭೪, ಜಾನಪದ ಸಾಹಿತ್ಯ ದರ್ಶನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೭೫. ಹಿರೇಮಠ ಎಸ್. ಎಂ, ೨೦೧೩, ಜಾನಪದ ಕಾವ್ಯಮಿಮಾಂಸೆ, ವಿದ್ಯಾನಿಧಿ ಪ್ರಕಾಶನ, ಗದಗ (ಅ)

ನಿಯತಕಾಲಿಕೆಗಳು/ಪತ್ರಿಕೆಗಳು

೦೧) ಕನ್ನಡಪ್ರಭ ದಿನಪತ್ರಿಕೆ, ದಿನಾಂಕ ೦೨-೦೧-೨೦೧೪.
೦೨) ಜನಪದ, ವಾರ್ಷಿಕ ನಿಯತಕಾಲಿಕೆ, (ಪ್ರ ಸಂ) ಎನ್.ಆರ್. ವಿಶುಕುಮಾರ, ನಿರ್ದೇಶಕರು, ವಾರ್ತಾ ಇಲಾಖೆ, ಬೆಂಗಳೂರು.
೦೩) ಪ್ರಜಾವಾಣಿ ದಿನಪತ್ರಿಕೆ : ದಿನಾಂಕ ೦೨-೦೧-೨೦೧೪.
೦೪) ಬೆಳಕಿಂಡಿ, ರಾಷ್ಟ್ರಿಯ ಸಂಶೋಧನಾ ತ್ರೈಮಾಸಿಕ ನಿಯತಕಾಲಿಕೆ, ಅಕ್ಟೋಬರ್- ಡಿಸೆಂಬರ್, ೨೦೧೧ (ಸಂ) ಡಾ. ಜಗನ್ನಾಥ ಹೆಬ್ಬಾಳೆ.
೦೫) ವಿಜಯ ಕರ್ನಾಟಕ ದಿನಪತ್ರಿಕೆ, ದಿನಾಂಕ ೦೨-೦೧-೨೦೧೪.
೦೬) ಸಂಯುಕ್ತ ಕರ್ನಾಟಕ ದಿನಪತ್ರಿಕೆ, ದಿನಾಂಕ ೦೨-೦೧-೨೦೧೪.

ವಕ್ತೃಗಳ ವಿವರ

ಕ್ರಸಂ ಹೆಸರು	ಊರು	ವಯಸ್ಸು	ಶಿಕ್ಷಣ	ಉದ್ಯೋಗ
೦೧. ಅನುಸಯಾಬಾಯಿ ಮೇತ್ರೆ	ಜವಳಗಾ	೪೬	ಇಲ್ಲ	ಕೂಲಿ
೦೨. ಇಂದುಮತಿ ಮಾಣಿಕಪ್ಪಾ	ಖೇಡ್	೪೯	೧೦ನೇ	ಗೃಹಿಣಿ
೦೩. ಉಜ್ವಲಾಬಾಯಿ ಬಿರಾದಾರ	ಲಾಧಾ	೪೮	ಇಲ್ಲ	ಕೃಷಿ
೦೪. ಉಜಾಲಾಬಾಯಿ ಅನಂತರಾವ ಭಾಲ್ಕೆ	ಅಳವಾಯಿ	೩೪	೭ನೇ	ಗೃಹಿಣಿ
೦೫. ಉಮಾದೇವಿ. ಶಿವಪುತ್ರಪ್ಪಾ	ಡಿಗ್ಗಿ	೫೫	೧೦ನೇ	ಗೃಹಿಣಿ
೦೬. ಕಲಾವತಿ ಪ್ರಶಾಂತ	ಹುಮನಾಬಾದ	೪೮	ಇಲ್ಲ	ಗೃಹಿಣಿ
೦೭. ಕಲಾವತಿ ರಾವ್‌ಸಾಬ್	ತೇಲಗಾಂವ	೫೧	ಇಲ್ಲ	ಗೃಹಿಣಿ
೦೮. ಕಸ್ತೂರಿಬಾಯಿ ಶರಣಾಪ್ಪಾ	ಧನ್ನೂರ (ಕೆ)	೬೮	ಇಲ್ಲ	ಕೃಷಿ
೦೯. ಕಾವೇರಬಾಯಿ. ಕರಕಾಳೆ	ಧನ್ನೂರ (ಬಿ)	೫೩	೩ನೇ	ಗೃಹಿಣಿ
೧೦. ಗಂಗಮ್ಮಾ ಆರ್. ಟೋಪಾರೆ	ಹಳೆ ಭಾಲ್ಕಿ	೭೧	ಇಲ್ಲ	ಗೃಹಿಣಿ
೧೧. ಗೌರಮ್ಮಾ. ಮಾಣಿಕ್	ಸಿದ್ದೇಶ್ವರ್	೬೨	ಇಲ್ಲ	ಕೃಷಿ
೧೨. ಜ್ಯೋತಿಬಾಯಿ ವಿಜಯಕುಮಾರ	ಮುಚಳಂಬ	೪೮	ಹತ್ತನೆ	ಕೃಷಿ
೧೩. ತಾರಾಬಾಯಿ ಎಸ್. ಕೊಳ್ಳಾ	ಭಾಲ್ಕಿ	೪೮	೭ನೇತರಗತಿ	ಗೃಹಿಣಿ
೧೪. ನಾಗಮ್ಮ ಕಂಟೆಪ್ಪಾ	ದಾಡಗಿ	೫೮	ಇಲ್ಲ	ಗೃಹಿಣಿ
೧೫. ನಿರ್ಮಲಾ ಶೆಟಗಾರ	ಕುಸನೂರ	೫೩	ಇಲ್ಲ	ಹೈನಗಾರಿಕೆ
೧೬. ಭಾರತ್ ಬಾಯಿ ಬಾಬುರಾವ ಪಾಟೀಲ	ಬಳತ್ (ಕೆ)	೬೦	ಇಲ್ಲ	ಗೃಹಿಣಿ
೧೭. ಮಂಗಲಾಬಾಯಿ ಕಾರಾಮುಂಗೆ	ಭಾಲ್ಕಿ	೫೩	೨ ನೇ	ಹೈನುಗಾರಿಕೆ
೧೮. ಮಹೇಶ್ವರಿ ಸುನಿಲ್ ಮಾನಕಾರ	ಖೇಡ್	೩೫	೪ನೇ	ಗೃಹಿಣಿ
೧೯. ಮೀನಾಕ್ಷಿ ಬಸವರಾಜ	ಭಾಲ್ಕಿ	೪೬	ಪಿ.ಯು.ಸಿ	ಗೃಹಿಣಿ
೨೦. ರತ್ನಮ್ಮಾ, ಮೇತ್ರೆ	ಸಾಯಗಾಂವ	೪೩	ಇಲ್ಲ	ಹೈನಾಗಾರಿಕೆ
೨೧. ರೇಣುಕಾಬಾಯಿ. ಶಿವಕುಮಾರ	ಹರನಾಳ	೩೮	ಇಲ್ಲ	ಗೃಹಿಣಿ
೨೨. ಲಕ್ಷ್ಮೀಬಾಯಿ ತುಳಸಿರಾಮ (ಹುಣಜಿ)	ಹುಣಜಿ	೫೧	ಇಲ್ಲ	ಕೃಷಿ
೨೩. ಲಕ್ಷ್ಮೀಬಾಯಿ ಶೇಷರಾವ ಜಾಧವ್	ಭಾಲ್ಕಿ	೭೦	ಇಲ್ಲ	ಗೃಹಿಣಿ
೨೪. ಲಲಿತಾಬಾಯಿ ರಾಮರಾವ ಪಾಟೀಲ	ವಳಸಂಗ	೪೨	ಇಲ್ಲ	ಗೃಹಿಣಿ
೨೫. ವಿಜಯಲಕ್ಷ್ಮೀ ಪಾಟೀಲ	ಕಮಲನಗರ	೫೮	ಇಲ್ಲ	ಕೃಷಿ
೨೬. ವಿಜಯಲಕ್ಷ್ಮೀ ರಂಜೇರೆ	ಧನ್ನೂರ (ಬಿ)	೫೧	೭ನೇ	ಗೃಹಿಣಿ
೨೭. ವಿಜಯಲಕ್ಷ್ಮೀ ಸಂತೋಷಕುಮಾರ	ಕೊಳಾರ್	೩೯	ಇಲ್ಲ	ಗೃಹಿಣಿ
೨೮. ಶಶಿಕಲಾ ಸೋಮನಾಥ ಬಿರಾದಾರ	ರಂಡ್ಯಾಳ (ಔರಾದ)	೪೯	ಇಲ್ಲ	ಗೃಹಿಣಿ
೨೯. ಶಿವಮಾಲಾ ಶಿವದಾಸ ಹರನಾಳೆ	ಉದಗೀರ್	೫೩	ಇಲ್ಲ	ಗೃಹಿಣಿ
೩೦. ಶ್ರೀದೇವಿ ರಾಜಕುಮಾರ	ವರವಟ್ಟಿ	೫೨	ಇಲ್ಲ	ಕೃಷಿ

೩೧. ಸರಸ್ವತಿ ಹೊದಲೂರೆ	ಬ. ಕಲ್ಯಾಣ	೬೮	ಇಲ್ಲ	ಒಕ್ಕಲುತನ
೩೨. ಸರೋಜಾಬಾಯಿ. ಸಂಗಪ್ಪಾ	ಹಳೇಭಾಲ್ಕಿ	೪೩	ಇಲ್ಲ	ಗೃಹಿಣಿ
೩೩. ಸಾವಿತ್ರಿಬಾಯಿ ಮರೂರಕರ್	ಮರೂರ್	೫೫	ಎಂ.ಎ	ಉಪನ್ಯಾಸಕರು
೩೪. ಸಿಕಿಂದ್ರಾಬಾಯಿ ಪಾಟೀಲ	ಲಾದಾ	೪೯	ಇಲ್ಲ	ಗೃಹಿಣಿ
೩೫. ಸುಜಾತಾಬಾಯಿ ಲಕ್ಷ್ಮಣರಾವ ಮಾನೆ	ಖುದಾವಂದಪೂರ	೩೮	ಇಲ್ಲ	ಕೃಷಿ
೩೬. ಸುನಿತಾ ಶಿವಶರಣಪ್ಪ. ಕೆ.	ಶ್ರೀಸರಡಗಿ	೪೯	೧೦ ನೇ	ಗೃಹಿಣಿ
೩೭. ಸುಮಿತ್ರಾಬಾಯಿ, ಮೇತ್ರೆ	ಜವಳಗಾ	೪೬	ಇಲ್ಲ	ಒಕ್ಕಲುತನ
೩೮. ಸುಶೀಲಾಬಾಯಿ ನವನಾಥ	ಕಲವಾಡಿ	೫೦	ಇಲ್ಲ	ಗೃಹಿಣಿ
೩೯. ಸುಶಿಲಾಬಾಯಿ ಶಿವಾನಂದ	ಬೀದರ	೫೩	ಇಲ್ಲ	ಗೃಹಿಣಿ
೪೦. ಸೋಜಲ್ ಬಾಯಿ ವಿಠ್ಠಲ್ ರಾವ	ಭಾಡಸಾಂಗವಿ	೫೩	ಇಲ್ಲ	ಗೃಹಿಣಿ
೪೧. ಸೋನಾಲಿಬಾಯಿ ಬಿರಾದಾರ	ಹುಮನಾಬಾದ	೩೫	೫ನೇ	ಗೃಹಿಣಿ

ಪ್ರಾದೇಶಿಕ ಪದಗಳ ಅರ್ಥ

೦೧) **ಅಸ** : ವಿಷ

೦೨) **ಈಟೆಲ್ಲ** : ಇಷ್ಟೆಲ್ಲಾ.

೦೩) **ಉಣಿಸು** : ಊಟ ಮಾಡಿಸುವ

೦೪) **ಎಳ್ಳಾಮವಾಸ್ಯೆ** : ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ. ಅಂದು ವಿಶೇಷವಾದ ಅಡಿಗೆ ಮಾಡಿಕೊಂಡು ಹೊಲಕ್ಕೆ ಹೋಗುವರು. ಸಮೃದ್ಧವಾದ ಬೆಳೆ ಬೆಳೆಯಲೆಂದು ಲಕ್ಷ್ಮೀ ಪೂಜೆ ಮಾಡುವರು.

೦೫) **ಒಮ್ಮನ** : ನಾಲ್ಕು ಸೇರು ಕಾಳು

೦೬) **ಒಳ್ಳಗ್ಗೆ** : ಅಡುಗೆಗೆ ಬಳಸುವ ಕುಡಿಕೆಯ ಅಥವಾ ಸಿಂಗಾರದ ಸಣ್ಣ ಪಾತ್ರೆ

೦೭) **ಕರಿಯಪೂರ** : ಹಸ್ತಿನಾವತಿ

೦೮) **ಕಾಯಿಪಲ್ಲೆ** : ತರಕಾರಿ

೦೯) **ಕೂಕಂ** : ಕುಂಕುಮ

೧೦) **ಕೊರವಂಜಿ** : ಕುಂಚೇಕೊರವರ ಹೆಂಗಸು, ಕಣಿ ಹೇಳುವವಳು

೧೧) **ಖನ್ನಿ** : ಕನ್ಯೆ

೧೨) **ಖಳವು** : ಕಳಿಸು, ಕಳುಹಿಸು

೧೩) **ಛಜ್ಜಿ** : ಸಜ್ಜೆಯ ಧಾನ್ಯ

೧೪) **ಛಂದ** : ಚಂದ, ಸುಂದರ

೧೫) **ಜಗಲಿ** : ದೇವರ ಮೂರ್ತಿಗಳನ್ನು ಇಟ್ಟು ಪೂಜಿಸುವ ಕಟ್ಟೆ

೧೬) **ಜ್ವಾಕಿ** : ಜೋಕೆ, ಜೋಪಾನ

೧೭) **ತುರುಕರು** : ಮುಸ್ಲಿಮರು

೧೮) **ದಂಡಿ** : ಶುಭಕಾರ್ಯದಲ್ಲಿ ಮುತ್ತೈದೆ ಹೆಣ್ಣುಮಕ್ಕಳ ತಲೆಗೆ ಕಟ್ಟುವ ಹೂ ಮಾಲೆ, ಮೀನ ಜಾಲಿಯಂತೆ ತಲೆತುಂಬುವಂತೆ ಹೆಣೆಯುತ್ತಾರೆ.

೧೯) **ಧೋರಿಗೊಳು** : ದೊರೆಗಳು, ಶ್ರೀಮಂತರು

೨೦) **ಪಟ್ಟೋಳಿ ಸೀರಿ** : ದೊಡ್ಡಂಚಿನ ರೇಷ್ಮೆ ಸೀರೆ

೨೧) **ಪಾಂಡವರ ಪೂಜೆ** : ಎಳ್ಳಅಮಾವಾಸ್ಯೆಯ ಹಬ್ಬದಂದು, ದಸರೆ ಹಬ್ಬದಂದು ಹೊಲದಲ್ಲಿ ಬನ್ನಿಮರದ ಕೆಳಗೆ ಐದು ಕಲ್ಲುಗಳನ್ನು ಇಟ್ಟು ಅವುಗಳಿಗೆ ಸುಣ್ಣ–ಕಾವಿಯಿಂದ ಲೇಪನ ಮಾಡಿ ಪಾಂಡವರೆಂದು ಪೂಜೆ ಮಾಡುತ್ತಾರೆ. ಹೊಲದಲ್ಲಿ ಬರುವ ಮುಂಗಾರು, ಹಿಂಗಾರು ಬೆಳೆಗಳನ್ನು ರಾಶಿ ಮಾಡಿ ಮೊದಲು ಐದು ಮುಷ್ಠಿ ಆ ಪಾಂಡವರ ಕಲ್ಲುಗಳ ಮುಂದೆ ಇಡುವರು. ಹಬ್ಬ ಹರಿದಿನಗಳಲ್ಲಿ ನೈವೇದ್ಯತೋರಿ, ಟೆಂಗಿನ ಕಾಯಿ ಒಡೆಯುವರು.

೨೨) **ಪಿಲ್ಲೆ** : ಮುತ್ತೈದೆಯರು ಕಾಲಿನ ಮೂರನೇ ಬೆರಳಿಗೆ ಹಾಕುವ ಬೆಳ್ಳಿಉಂಗುರ

೨೩) **ಬಾಜಾ** : ವಾಲಗ, ಮಂಗಳವಾದ್ಯ

೨೪) **ಬಾಜಾರ** : ಮಾರುಕಟ್ಟೆ, ಅಂಗಡಿಗಳ ಸಾಲು

೨೫) **ಬಾನಾ** : ಕಳವಿಯ ಅನ್ನ

೨೬) **ಬಿಂದೂಲಿ** : ಮುಂಗೈಯ ಆಭರಣ (ಚಿಕ್ಕ ಹೆಣ್ಣು ಮಕ್ಕಳಿಗೆ ಕೈಗೆ ಹಾಕುವ ಬಳೆ)

೨೭) **ಬ್ಯಾನಿ** : ಹೆರಿಗೆನೋವು, ಸಂಕಟ

೨೮) **ಬುಕ್ಕಿಟ್ಟೂ** : ಅರಿಶಿಣ, ಕುಂಕುಮದಂತಿರುವ ಹಳದಿ ಪುಡೀ. ಇದನ್ನು ಪೂಜಿಸುವ ಸಮಯದಲ್ಲಿ ಬಳಸುತ್ತಾರೆ.

೨೯) **ಭಾಸಿಂಗ** : ಬಿದಿರ ಕಡ್ಡಿ, ಕಾಗದ, ಹೂಗಳಿಂದ ಮಾಡಿದ ಶುಭಸೂಚಕದ ವಸ್ತು ಇದನ್ನು ಕಾರಹುಣ್ಣಿಮೆಯಂದು ದನಗಳು. ಎತ್ತುಗಳ ಹಣೆಗೂ ಕಟ್ಟುತ್ತಾರೆ. ಮುತ್ತಿನಿಂದ ಮಾಡಿದ ಭಾಸಿಂಗ ಮದುವೆಯಲ್ಲಿ ವಧುವರರ ಹಣೆಗೆ ಶುಭಸೂಚವಾಗಿ ಕಟ್ಟುವರು. ಮದುವೆ ಮುಗಿದ ನಂತರ ಕುಲದೇವರ ಹತ್ತಿರ ಬಿಟ್ಟು ಬರುತ್ತಾರೆ.

೩೦) **ಮಗಿ** : ಚಿಕ್ಕ ಮಣ್ಣಿನ ಗಡಿಗೆ

೩೧) **ಮಂಗ್ಯಾ** : ಕೋತಿ

೩೨) **ರಾತೂರಿ** : ರಾತ್ರಿ

೩೩) **ವಳ್ಳು** : ಒರಳು

೩೪) **ಶಾರ** : ಪಟ್ಟಣ

ಮರಾಠಿ ಪದಗಳ ಅರ್ಥ

ಅಂಗಾಯಿ : ಲಾಲಿಹಾಡು
ಅಂಗುಳ : ಸ್ನಾನ
ಅಪಲಿ : ತಮ್ಮವಳು
ಆತ : ಒಳಗೆ,
ಆಯಿ : ತಾಯಿ
ಈಜ, ವೀಜ : ಸಿಡಿಲು
ಉಠೂನಿ : ಎದ್ದು ನಿಲ್ಲು
ಕಹಾನಿ : ಕಥೆ
ಕಾಟಾ : ಮುಳ್ಳು
ಕಾಟಾ ಪಾಯಾತ ಖುತತೋ : ಕಾಲಲ್ಲಿ ಮುಳ್ಳು ಚುಚ್ಚು
ಕಾಂಡಿತಾ : ಕುಟ್ಟುತ್ತ
ಕಾಳಾ ಮಾತೀತ : ಕಪ್ಪು ಮಣ್ಣಲ್ಲಿ
ಕುತ್ರಾ : ನಾಯಿ
ಖಾರ್ : ಇಣಚಿ
ಖೇಳ : ಆಟ
ಗಾಯ್ : ಆಕಳು
ಗಾವಾಚಿ : ಊರಿನ
ಗೋಢ ಆಠವಾನಿ : ಸಿಹಿ ನೆನಪು
ಗೋರಿ ಕಾಯಾ : ಬಿಳುಪಾದ ಸುಂದರ ದೇಹ
ಘರಚಿ : ಮನೆಯ
ಘೋಡಾ : ಕುದುರೆ
ಚಾಂದಿ : ಬೆಳ್ಳಿ
ಜಗಾವರಿ : ಭೂಮಿಯ ಮೇಲೆ
ಜವಳ : ಹತ್ತಿರ
ಝೋಪ : ನಿದ್ರೆ
ಡೋಳ : ಕಣ್ಣು
ತಿಫಣ : ನೇಗಿಲು
ದಳಿತಾ : ಬೀಸುತ್ತ
ದಾದಾ : ಅಣ್ಣ
ಧೀರದಿಲಾ : ಧೈರ್ಯಹೇಳು
ನಕೋಸ ಬೋಲು : ಮಾತಾಡಬೇಡ
ನಜರ : ದೃಷ್ಟಿ
ನಂದ : ನಾದುನಿ
ನಿರಖಿಲಾ : ಕಾಣಿಸಿದ
ನೌರಾ : ಗಂಡ
ಪದರಪಸರತೆ : ಸೆರಗೊಡ್ಡು
ಪರಸಾತ : ಅಂಗಳ
ಪಾಡಸಾ : ಮಗು
ಪಾನಿ : ನೀರು
ಪಾಯ : ಕಾಲು, ಪಾದಗಳು

ಪಾಯರಿ : ಮೆಟ್ಟಿಲು
ಪಾವುಸ್ : ಮಳೆ
ಪಾಹತಿ : ನೋಡಿದಳು
ಪಾಳನಾ : ತೊಟ್ಟಿಲು
ಪೀಕ : ಬೆಳೆ
ಪೋಪಟ್ : ಗಿಳಿ
ಫಿರತಿ : ತಿರುಗುವ
ಫೂಲ : ಹೂ
ಬಾಲಪನ : ಬಾಲ್ಯತನ
ಬಾಳ : ಮಗು
ಬೈಲ : ಎತ್ತು
ಭರಲಾ : ತುಂಬಿತು
ಮಾಕಡ್ : ಕೋತಿ
ಮಾಂಜರ : ಬೆಕ್ಕು
ಮಾಟೀ : ಮಣ್ಣು
ಮಾಯಬಾಪ : ತಾಯಿ ತಂದೆ
ಮಾಸಾ : ಮೀನು
ಮಾಹೇರ : ತವರು
ಮುಲಿ : ಮಗಳು
ಮೈತ್ರಿಣೆ : ಗೆಳತಿ
ಮೋರ್ : ನವಿಲು
ಯಾಪುಢೆ : ಈ ಮುಂದೆ, ಮುಂದೆ ಬನ್ನಿ
ರಡತೆ : ಅಳುವುದು
ವಡೀಲ ಗುರೂಂಚಿ : ಗುರುಹಿರಿಯರ
ವಾಘವಾ : ನಡೆಸಿಕೋ
ವಾಟ : ಹಂಚು, ನೀಡು
ವಿನಿನೋ : ಬೀಗುತಿ
ವಿಸಂಬೆ : ಮರೆಯಲಾರೆ
ವೇಡಾ : ಹುಚ್ಚ
ವೋಟೀತ : ಉಡಿಯಲ್ಲಿ
ಶಾಲೂ : ರೇಷ್ಮೆಸೀರೆ
ಶೇಪೂಟ : ಬಾಲ
ಸಜವಾ : ಶೃಂಗರಿಸು
ಸಾಸರಿ : ಅತ್ತೆಮನೆ
ಸೂನ : ಸೊಸೆ
ಸೋನ : ಬಂಗಾರ
ಹತ್ತಿ : ಆನೆ.
ಹಸತೆ : ನಗುವುದು
ಹಾತಾಥ : ಕೈಯಲ್ಲಿ
ಹಿರವೆ : ಹಸಿರು

ಬೀದರ್ ಜಿಲ್ಲೆಯ ನಕ್ಷೆ


ಉದ್ಗೀರ್
ಕಮಲಾನಗರ
ಔರಾದ
ಚಿಂತಾಕಿ
ಕುಸ್ನೂರು
ಸಂತಪುರ
ಮಂಜ್ರಾ
ವಡಗಾಂವ
ಬಾಲ್ಕಿ
ಜನವಾಡ
ಬೇಲೂರು
ಬೀದರ್
ಬಸವಕಲ್ಯಾಣ
ಹುಮನಾಬಾದ್
ಬಗದಾಳ್
25
52
20
30
22
9

ಛಾಯಚಿತ್ರಗಳು



ತೊಟ್ಟಿಲಿಡುವ ಕಾರ್ಯಕ್ರಮ



ಮರಾಠಿ ಭಜನೆಯ



ಎಣ್ಣೆ ಹಚ್ಚುವ



ಕಲ್ಲೊಳ್ಳ ಭೂಪೆಯಲ್ಲಿ ಕುಟ್ಟುವ



ಕಲ್ಲೊಳ್ಳು ಪೂಜೆಯಲ್ಲಿ ಬೀಸುವ



ಕೂಸೊಪ್ಪಿಸುವ



ಧಾರೆಯೆರೆಯುವ



ಐರಾಣಿ ತರುವದು



ಎಳ್ಳಾಮಾವಾಸೆಯ ಹಬ್ಬ



ಎಳ್ಳಾಮಾವಾಸ್ಯೆಯಂದು ಕೊಂಪೆ ಪೂಜೆ